MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI

SWADESHA BHIMANI

1931

SUPPLIMENTARY ISSUE

SILVER JUBLEE ISSUE)

ಸ್ವದೇಶಾಭಿಮಾನಿ

ರತ್ನೈರ್ಮಹಾರ್ಹೈಸ್ತುತಪುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ನಿಶ್ಚಯ ಸುಡುತ ಬರುತಿರುವ ।
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರ್ಕೆ। ತೆರಳ ಬಲ್ಲರೆ। ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ilver Jubilee Issue ರಜತೋತ್ಸವ ಸಂಚಿಕೆ 23rd October 1931.

Sun Life Assurance Co., of Canada.

ಸನ್ ಲೈಫ್ ಅಷ್ಯೂರೆನ್ಸ್ ಕಂಪೆನಿ ಆಫ್ ಕೆನಡಾ.

ರಜತೋತ್ಸವ ವರುಷ

ಅರು ದಶ ವರುಷಗಳು

ಚಲಾವಣೆಯಲ್ಲಿರುವ ಅಷ್ಯೂರೆನ್ಸುಗಳು.

1880 ರೂಪಾಯಿ 1,08,53,163
1890 ರೂಪಾಯಿ 4,65,53,763
1900 ರೂಪಾಯಿ 16,10,57,316
1910 ರೂಪಾಯಿ 39,87,47,988
1920 ರೂಪಾಯಿ 135,17,81,208
1930 ರೂಪಾಯಿ 795,47,26,609



ಹೆಡ್ ಆಫೀಸು ಕಟ್ಟಡ:—ಮಾಂಟ್ರೀಲ್.

1871-1931.

ಅರು ದಶ ವರುಷಗಳು

ನಿಧಿ.

1880 ರೂಪಾಯಿ 13,15,644
1890 ರೂಪಾಯಿ 68,70,872
1900 ರೂಪಾಯಿ 2,91,80,252
1910 ರೂಪಾಯಿ 10,60,13,805
1920 ರೂಪಾಯಿ 31,89,98,455
1930 ರೂಪಾಯಿ 163,53,71,199

ಅರುವತ್ತು ವರುಷಗಳ ಬೆಳವಣಿಗೆ, 1930ರ ಸ್ಟೇಟ್‌ಮೆಂಟು.

ಕೊಟ್ಟ ಹೊಸ ಅಷ್ಯೂರೆನ್ಸ್ (ನೆಟ್)	... ರೂ. 196,02,18,876	ಒಟ್ಟು ಹೊರಗೆ ಕೊಟ್ಟುದು (ಕೊಡಲ್ಪಟ್ಟ ಭಂಡವಾಳ ನಿಧಿ ಕೂಡಿ)	ರೂ. 153,38,91,547
ಚಲಾವಣೆಯಲ್ಲಿರುವ ಅಷ್ಯೂರೆನ್ಸ್ (ನೆಟ್)	... ,, 795,47,26,609		
ಒಟ್ಟು ಆದಾಯ (ನೆಟ್)	... ... ,, 52,68,87,853	ಆಪತ್ಕಾಯ, ಇತರೆಸ್ಕ ಪ್ರಸಂಗಗಳಿಗೆಂದು ಪ್ರತ್ಯೇಕವಿಟ್ಟಿದ್ದು	10,14,79,652
1930ರಲ್ಲಿ ಪಾಲಿಸಿದಾರರಿಗೂ ಹಕ್ಕುದಾರರಿಗೂ ಕೊಟ್ಟದ್ದು	23,02,79,282	1930ನೇ ಡಿಸೆಂಬರ್ 31ಕ್ಕೆ ನಿಧಿ	... ... ರೂ. 163,53,71,199
ಸ್ಥಾಪನೆಯ ಮೊದಲುಗೊಂಡು ಪಾಲಿಸಿದಾರರಿಗೆ ಕೊಟ್ಟುದು	142,32,84,717	1930ನೇ ಡಿಸೆಂಬರ್ 31ಕ್ಕೆ ಫಂಡುಗಳು	... ,, 156,63,82,276

ಡೈರೆಕ್ಟರರ ರಿಪೋರ್ಟಿನಿಂದ ಕೆಲವು ಮಾತುಗಳು.

ಒಂದು ವರುಷದಲ್ಲಿ ಉದ ಎಲ್ಲಾ ವ್ಯಾಪಾರ ವ್ಯವಹಾರಗಳ ಸಂಸ್ಥೆಗಳು ಅನನ್ಯ ಕಷ್ಟ ಪರಂಪರೆಗಳನ್ನನುಭವಿಸಿದರೂ, ಈ ಕಂಪೆನಿಯು ಮಾತ್ರ ಅತ್ಯುತ್ತಮವಾಗಿ ಪ್ರಗತಿಗೊಂಡಿದೆ. ಹೊಸ ಪಾಲಿಸಿಗಳನ್ನು ಕೊಟ್ಟುದನ್ನು ನೋಡಿದರೆ 14,22,99,034 ರೂಪಾಯಿಗಳು ಹೆಚ್ಚಿಗಾಗಿ ಎಲ್ಲಾ ವಿಧದಿಂದಲೂ ಲಾಭ ದೊರೆತ ಸಂಗತಿಯು ತಿಳುಬರುವುದು. ಚಲಾವಣೆಯಲ್ಲಿ ಅಷ್ಯೂರೆನ್ಸುಗಳಿಂದಾಗಿ ಒಟ್ಟು 128,46,23,72 ರೂಪಾಯಿಗಳು ಹೆಚ್ಚಿನಂತೆ ಕಾಣುತ್ತದೆ. ಹಣದುಬ್ಬಾವಿದಿರಿದುವಾಗಲೂ, ಜನರು ನಮ್ಮ ಕಂಪೆನಿಯಲ್ಲಿಟ್ಟಿರುವ ಭರವಸೆ ಗೌರವಗಳು ಸ್ಥಿರಂಪ್ರಸ್ಫುವಾಗಿರುತ್ತವೆ. ವರುಷದಲ್ಲಿ ಪಾಲಿಸಿಗಳೂ, ಅಷ್ಯೂರೆನ್ಸು ಸರ್ಟಿಫಿಕೇಟುಗಳೂ ಮೆಲಿಯುತ್ತಿಂತೆ ಹೆಚ್ಚಾಗಿರುತ್ತದೆ. ಒಟ್ಟು ಆದಾಯವು 3,62,27,865 ರೂಪಾಯಿಗಳು ಹೆಚ್ಚಿದುದನ್ನು ತೋರಿಸುತ್ತದೆ. ಸ್ಥಾಪನಾ ಕೊಪ್ಪು ಪಾಲಿಸಿದಾರರಿಗೂ, ಹಕ್ಕುದಾರರಿಗೂ ಕೊಟ್ಟ ಒಟ್ಟು ಹಣವು 142,32,84,717 ರೂಪಾಯಿಗಳಾಗಿರುತ್ತದೆ. ಸ್ಥಾಪನೆಯ ಮೊದಲು ಪಾಲಿಸಿದಾರರಿಗೂ ಕೊಟ್ಟ ಲಾಭವು 7,12,95,641 ರೂಪಾಯಿಗಳಾಗಿರುತ್ತದೆ. ಪ್ರಮಾಣವು ಎಲ್ಲಿ ಸ್ಥಿರವಾಗಿ, ನಮ್ಮ ಕಂಪೆನಿಯು ಬೆಳವಣಿಗೆಯು ಸಂಯಮಗಿ ಕಾಣುತ್ತದೆ. ಕಂಪೆನಿಯು ಸಾಧಾರಣವಾದ ಭಂಡವಾಳದ ಮೇಲೆ ಸಿಸ್ಟೆದ ಕೇಶ್ ಬಿಡಿಡೆಂಡುಗಳ ರೂ. 26,91,955 ಆಗಿತ್ತು. ಮಾರ್ಚ್ 1930ರಲ್ಲಿ ಪಾಲುಗಳ ಮೇಲೆ ಕೊಡಲ್ಪಟ್ಟ ಡಿವಿಡೆಂಡುಗಳಿಗಿಂತ ಅಧಿಕವಾಗಿದೆ. ದುರ್ಭಾಗವು ವರುಷಾಂತ್ಯದಲ್ಲಿ ಎಲ್ಲೆಲ್ಲಿದ್ದರೂ, ನಮ್ಮ ಸಾಧಾರಣ ಸಿರಿಯು ಆಧಿಕ್ಯವನ್ನಿಯನ್ನು ತೋರಿಸುತ್ತದೆ. ಇನ್ನು ನಮ್ಮಲ್ಲಾವ ಸಾಮಾನ್ಯರಿಗೂ ಈಗಿನಂತೆಯೇ ಲಾಭವನ್ನು ಕೊಡಲಿದ್ದೇವೆ. ಈಗಿನ ವರುಷದಂತೆಯೇ ಇನ್ನು ಪ್ರಶಸ್ತವಾದ ಮೆಚ್ಚುಗೆಯ ರಿಪೋರ್ಟನ್ನು ತೊಡಲಾಗುವುದು.

MADRAS BRANCH
KHALEEL MANSIONS, Post Box 363 MOUNT ROAD MADRAS.
DT. MANAGER MR. R. J. BAKER.
AGENCY ASST. MR. K. K. IYENGAR.

REPUBLIC



63 Horse power Six Cylinder Lycoming Engine.

Four forward speeds Fuller Gear Box.

Timken Front & Rear Axles.

Lockheed Hydraulic Brakes.

Massive Steel Wheels.

Full floating type Rear Axles.

Any Desired length of wheel base.

Low Petrol Consumption, Low Oil Consumption.

Reliable & Durable.

A REMARKABLE TRUCK AT AN AMAZING PRICE.

DISTRIBUTORS:-

The Canara Public Conveyance Co., Ltd., Mangalore.

A BATTERY

For Every Purse

AND

For Every Purpose

Unexcelled in quality

AVAILABLE

Always Ready for use from Stock.



Take out battery insurance—

The one way to get battery insurance is to buy the right battery—the battery that gives longest service and needs the fewest repairs.

Since the day of the first electrically-started car, Exide has been proving itself the long-lived *economical* battery. Exide was standard equipment on that car.

To-day there are more Exides in service than any other make.

SOLE AGENTS

The Canara Public Conveyance Company, Ltd., Mangalore.

ಕಷ್ಟಕಾಲಕ್ಕಂದು ಸ್ವಲ್ಪ ಸ್ವಲ್ಪ ಹಣವನ್ನು ನಮ್ಮ

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್‌ನಲ್ಲಿ

– ಉಳಿಸಿಡಿರಿ –

ಸ್ಥಾಪಿಸಲ್ಪಟ್ಟದ್ದು:– 1906ರಲ್ಲಿ

ಹೆಡ್ ಆಫೀಸು:– ಉಡುಪಿ, ದ. ಕ. ಶಾಖೆಗಳು:– ಕುಂದಾಪುರ-ಮಂಗಳೂರು.

ಅಧೀಕೃತ ಭಂಡವಾಳ (Authorised Capital)	....	ರೂ. 3,50,000
ತೆರಲ್ಪಟ್ಟ ಭಂಡವಾಳ (Paid up Capital)	...	... ರೂ. 2,25,000
ಕ್ಷೇಮ ನಿಧಿ ಮತ್ತು ಇನ್ನಿತರ ನಿಧಿಗಳು (Reserve & other Funds)		... ರೂ 2,04,400

ಕೊರ್ಪೊರೇಶನ್ ಕಟ್ಟೋಣ, ಉಡುಪಿ.

ಭದ್ರತೆ ಮತ್ತು ಸೇವೆಯೇ ನಮ್ಮ ಧ್ಯೇಯ

ಕೊರ್ಪೊರೇಶನ್ ಕಟ್ಟೋಣ, ಮಂಗಳೂರು.

1931ನೇ ಇಸವಿ ಮೇ ತಿಂಗಳಲ್ಲಿ ತನ್ನ ರಜತೋತ್ಸವವನ್ನು ನೆರವೇರಿಸಿತು.

ಜನಪ್ರೀತವಾದುದು ! ಪ್ರವರ್ಧಿಸುತ್ತಿರುವಂತಹದು ! ಲಾಭಕರವಾದುದು !

ಜಿಲ್ಲೆಯಲ್ಲಿನ ಪ್ರಮುಖ ಅಂತರ್ಜಾತೀಯ ಬೇಂಕು

ನಿರಂತರವೂ ನಿಮ್ಮ ಸೇವೆಯಲ್ಲಿರುವುದು.

ವ್ಯಾಪಾರಕ್ಕಾಗಿ: ಪ್ರೊಮಿಸರಿ ನೋಟುಗಳ, ಬಿಲ್ಲುಗಳ, ಆಭರಣಗಳ, ಸ್ಟಾಕ್ಸುಗಳ ಇನ್ನಿತರ ಭದ್ರತೆಗಳ ಮೇಲೆ ಸಾಲವನ್ನು ಕೊಡುವುದು. ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳನ್ನು ನಡಿಸುವುದು

ಧನ ಸಂಚಯಕ್ಕಾಗಿ: – **ನಿಮ್ಮ ದಿನವಹಿ ಆವಶ್ಯಕತೆಗಳಿಗೆ**–ಜನವರಿಯಿಂದ ಜೂನ್ ವರೆಗೆ ಶೇಕಡಾ ೫ರಂತೆಯೂ, ಜುಲ್ಯಾಯಿಂದ ದಶಂಬರ ವರೆಗೆ ಶೇಕಡಾ ೩ರಂತೆಯೂ ಬಡ್ಡಿ ಬರುವ ಕರೆಂಟ್ ಎಕೌಂಟನ್ನು ಉಪಯೋಗಿಸಿಕೊಳ್ಳಬಹುದು.

ನಿಮ್ಮ ಮನೆವಾರ್ತೆಯ ಖರ್ಚಿಗೆ–ಶೇಕಡಾ ೪½ರಂತೆ ದಿನ ನಿತ್ಯವೂ ಬಡ್ಡಿ ಹೊಂದುವ ನಿಮ್ಮ **ಸೇವಿಂಗ್ಸ್ ಬೇಂಕ್** ಲೆಖ್ಖವನ್ನು ಉಪಯೋಗಿಸಿಕೊಳ್ಳಬಹುದು.

ನಿಮ್ಮ ಆಗಾಗಿನ ಆವಶ್ಯಕತೆಗಳಿಗೆ–ಶೇಕಡಾ ೫ರಿಂದ ೬½ ವರೆಗೆ ಬಡ್ಡಿ ಕೂಡುವ ಕಾಯಂ **ಠೇವಣಾತಿ**ಯನ್ನು ಉಪಯೋಗಿಸಿಕೊಳ್ಳಬಹುದು

ನಿಮ್ಮ ಗಂಡು ಮತ್ತು ಹೆಣ್ಣು ಮಕ್ಕಳ ಅಭಿವೃದ್ಧಿ ಬಗ್ಗೆ–ಸಣ್ಣ ಸಣ್ಣ ಸಣ್ಣ ಮಾಸಿಕ ಕಂತುಗಳಿಂದ ಒಂದೇ ಸಲ ದೊಡ್ಡ ಗಂಟಿನಲ್ಲಿ ಸಿಗುವ **ಸಂಚಯ ಠೇವಣಾತಿ** (Cumulative Deposit)ಯನ್ನು ಉಪಯೋಗಿಸಿಕೊಳ್ಳಬಹುದು.

— ಅಭಿವೃದ್ಧಿಯ ಸೂಚೀ ಪತ್ರ —

31ನೇ ದಶಂಬರಿಗೆ ಅಂತ್ಯವಾಗುವ ವರುಷ	ಕೊಟ್ಟ ನಿಧಿ.	ರಿಸರ್ವ್ ಮತ್ತು ಇತರ ಫಂಡು	ಡಿವಿಡೆಂಡು.
1918	ರೂಪಾಯಿ 18,460	ರೂಪಾಯಿ 6,894	ರೂಪಾಯಿ 1,845
1921	,, 54,078	,, 11,956	,, 1,07,818
1924	,, 1,48,897	,, 56,500	,, 4,94,000
1927	,, 1,99,280	,, 88,000	,, 10,89,261
1930	,, 2,25,000	,, 1,68,719	,, 20,28,897
30 ಸಪ್ಟಂಬರ 1931	,, 2,25,000	,, 2,04,400	,, 20,72,075

ಚಿನ ಮಾಹಿತಿಯನ್ನು ಕೇಳಿದವರಿಗೆ ಬರೆದು ತಿಳಿದುಕೊಳ್ಳಬಹುದು.

ಉಡುಪಿ, 2—10—1931. ಇವರಿಂದ ಆಡಳಿತ ಕಾಂದಾಪುರ ಮತ್ತು ಮಂಗಳೂರು ಪಟ್ಟಣಿಗರುಗಳಿಂದ.

ಸೆಕ್ರೆಟರಿ ಮತ್ತು ಮೆನೇಜರ್, ಉಡುಪಿ

THE BANK OF MANGALORE, LTD.,

(Incorporated under the Indian Companies Act VII of 1913)

MANGALORE.

Authorised Capital.
ಅಧಿಕೃತ ಮೂಲಧನ.
ರೂ. 2,00,000.

ದಿ ಬೇಂಕ್ ಒನ್ಸ್ ಮಂಗಳೂರು, ಲಿಮಿಟೆಡ್.

(1913ನೇ ಇಸವಿಯ 7ನೆ ಆಕ್ಟಿನ್ಸ್ವಯ ಘಟಿತವಾದುದು)

ಮಂಗಳೂರು.

Divided into 8000 Shares of Rs. 25 each
ರೂ. 25ರಂತೆ 8000 ಶಾಲುಗಳು.

ಷರತ್ತು:— ಸರ್ವರಿಗೂ ಸುಲಭವಾಗಿ ಕೊಂಡುಕೊಳ್ಳುವಂತೆ ಬರೇ ರೂ. 5ರ ಕಂತುಗಳಿಂದ ಶಾಲು 1ಕ್ಕೆ ರೂಪಾಯಿ 25ನ್ನು ಅಧಿಕ 2 ವರ್ಷಗಳ ಅವಧಿಯೊಳಗೆ ಸರಿಸಿ, ಸಮಸ್ತ ಮಹಾಜನಗಳ ಬೇಂಕಾಗಿ ಅಭಿವೃದ್ಧಿ ಹೊಂದಲು ಸ್ಥಾಪಿಸಿದೆ.

ಬೇಂಕಿನಲ್ಲಿ ನಡಿಸತಕ್ಕ ವಹಿವಾಟುಗಳು.

ಸ್ಥಿರಮು ಠೇವಣಾತಿ.	ಚಾಲ್ತಿ ಠೇವಣಾತಿ.	ಠೇವಿಂಗ್ಸ್ ಠೇವಣಾತಿ.	ಕಮಲೆಟಿವ್ ಸಂಚಯ ಠೇವಣಾತಿ.
3 ತಿಂಗಳಿಗೊಮ್ಮೆ ಬಡ್ಡಿ ಕೊಡುವ 3, 6, 12, ಮತ್ತು 24 ತಿಂಗಳ ಅವಧಿಯ ಠೇವಣಾತಿಗಳಿಗೆ 5, 5½, 6½, ಮತ್ತು 7ರ ಸರಿ ಬಡ್ಡಿ ಕೊಡಲಾಗುವುದು.	6 ತಿಂಗಳಿಗೊಮ್ಮೆ 3 ಮತ್ತು 2ರ ಸರಿ ಬಡ್ಡಿ ಕೊಡುವ ಚಾಲ್ತಿ ಠೇವಣಾತಿ.	ವರ್ಷಕ್ಕೊಮ್ಮೆ 4ರ ಸರಿ ಬಡ್ಡಿ ಕೊಡುವ ಸೇವಿಂಗ್ಸ್ ಠೇವಣಾತಿ.	ತಿಂಗಳಿಗೆ ರೂ. 1ರಂತೆ—18, 24, 45, 84, ಮತ್ತು 182 ತಿಂಗಳು ತನಕ ಠೇವಣಾತಿ ಮಾಡಿದ್ದಲ್ಲಿ ರೂ. 18½, 25½, 50, 102½, ಮತ್ತು 182½ ಆಯಸ ಅವಧಿಗೆ ಸಿಗುವುದು.

A ತರಗತಿ ತಿಂಗಳಿಗೆ ರೂ. 2ರಂತೆ.
ವ್ಯವಹಾರ ಹಾಸಲು ಆಣೆ 4.

ಭದ್ರತೆ—ಸುಲಭತೆ—ಜನಾದರಣೀಯತೆಗಳುಳ್ಳ—ಸರ್ವ ಜನಪ್ರಿಯ.

ಪ್ರಾಯ್ಜ್ ಚಿಟ್ಟಿ ಎಂಬ ಬಹುಮಾನದ ಸೋಡ್ತಿ.

B ತರಗತಿ ತಿಂಗಳಿಗೆ ರೂ. 5ರಂತೆ.
ವ್ಯವಹಾರ ಹಾಸಲು ಆಣೆ 4.

A— ತಿಂಗಳಿಗೆ ರೂ. 2ರಂತೆ ತೆರುವ ಮಂಜೂರು 50 ತಿಂಗಳುಗಳಲ್ಲಿ ಪ್ರತಿ ತಿಂಗಳಲ್ಲಿ ರೂ. 70–1–119ರ ತನಕ ಬಹುಮಾನಗಳನ್ನು ಸೋಡ್ತಿಯಲ್ಲಿ ಗೆಲ್ಲಬಹುದು. ಬಹುಮಾನಗಳನ್ನು ಗೆದ್ದ ಬಳಿಕ, ಚಾಲೂ ವಂತಿಯನ್ನು ತೆರುವ ಆಗತ್ಯವೇ ಇಲ್ಲ. ಬಹುಮಾನ ಸಿಗದಿದ್ದರೆ, ತತ್ತ ರೂಪಾಯಿ 100ಕ್ಕೆ ಬದಲಾಗಿ ರೂಪಾಯಿ 105 ಪಡೆಯಬಹುದು. ಳ್ಳನೆ ಮಂಜೂರಿ ಗುಚರಾದರೆ, ಪೂರ್ತಿ ಕಾರ್ಯತ ವಿನಸಲಾಗುವುದು. ರೂಪಾಯಿ 300ರಿಂದ ರೂಪಾಯಿ 1800ರ ವರೆಗೆ ಸಾಲಗಳೂ ಸಿಗುವುವು.

B— ತಿಂಗಳಿಗೆ ರೂಪಾಯಿ 5ರಂತೆ ತೆರುವಲ್ಲಿ 50 ತಿಂಗಳ ತನಕ ರೂಪಾಯಿ 175 – 2½ – 297½ ರ ತನಕ ಬಹುಮಾನ ಗೆಲ್ಲಬಹುದು. ಬಹುಮಾನ ಸಿಗದಿದ್ದವರಿಗೆ ರೂಪಾಯಿ 262½ ಕೊಡ ಲಾಗುವುದು. ರೂಪಾಯಿ 500ರಿಂದ ರೂಪಾಯಿ 2500ರ ವರೆಗೆ ಸಾಲಗಳೂ ಸಿಗುವುವು. ಜಾತಿ A ತರಗತಿಯಂತೆ.

ಚಿನ್ನಾಭರಣಗಳ ಅಡವಿನ ಮೇಲೆ ಸಾಲ.

ರೂಪಾಯಿ 10ರಿಂದ ಸುಲಭ ದರದ ಬಡ್ಡಿಯಲ್ಲಿ ಕೊಡಲಾಗುವುದು.

ನಿಮ್ಮ ಎಲ್ಲಾ ವಿವರಗಳಿಗೂ ದಾಖಲಾತಿ ಫೋರ್ಮುಗಳಿಗೂ ಮೆನೆಜಿಂಗ್ ಡೈರೆಕ್ಟರರಿಗೆ ಬರೆದುಕೊಳ್ಳುವುದು.

Cheapest House for all Photo Materials, Jewellery, Silverware Umbrellas etc.

THE IDEAL PHOTO HOUSE,

BRANCH: UDIPI.
SOLE DISTRIBUTORS FOR MANGALORE.
IN SOUTH KANARA

ZEISS IKON

Wellington

PHOTO MATERIALS & CHOKSY MOUNTS.

BEST & PROMPT ATTENTION TO ALL

A VISIT WILL CONVINCE.

GODREJ'S TOILET SOAPS.

ಅಸಾಧ್ಯ.

ಅತೀ ಚಮತ್ಕಾರಿಗಳಾದ ಯುರೋಪಿಯನ್ ಕಾಸ್ಮೆಟ್ಟಿಶಿಯನ್‌ಗೂ ಅಸಾಧ್ಯ.

ಗೊದ್ರೆಜ ಸಾಬೂನಿಂದಾಗಿ ಉತ್ತಮ ಸಾಬಾನನ್ನು, ಗೊದ್ರೆಜರು ಮಾಡುವಂಥಾ ಸುಲಭ ಕ್ರಯಕ್ಕೆ ಅನ್ಯ ಉತ್ತಮ ಸಾಬಾನನು ಮಾಡಲು ಯಾರಿಗೂ ಸಾಧ್ಯವಿಲ್ಲ.

ಉತ್ಕೃಷ್ಟವಾದ ಮೈಗೆ ಹಾಕುವ ಸಾಬೂನನ್ನು ಸುಲಭ ಕ್ರಯಕ್ಕೆ ಮಾಡಲು ಹಿಂದೆಸ್ಥಾನ ದಲ್ಲಿ ಸಾಧ್ಯವೇ ಹೊರತು ಬೇರೆ ಆವ ಸಾಧ್ಯವಿಲ್ಲ. ಮೈಗೆ ಹಾಕುವ ಸಾಬೂನನ್ನು ಮಾಡುವುದಕ್ಕೆ ಉಪಯೋಗಿಸುವ ಪದಾರ್ಥಗಳು ಕಡಿಮೆ ಕ್ರಯದ್ದಾಗಿರಬೇಕು. ಆದರೂ ಸಾಬೂನು ಉತ್ಕೃಷ್ಟವಾದ ಅಂಶಗಳ ಕೊರತೆಯಿಲ್ಲದೆ ಯುರೋಪಿ ಯನ್ನರು ಉಪಯೋಗಿಸುವ ಸಾಬೂನಿಗಿಂತಲೂ ಮಿಗಿಲಾಗಿರಬೇಕು. ಇದಕ್ಕೆ ಬೇಕಾದ ಸಾಮಾನುಗಳ ಬೆಲೆಯ ಮೂಲ್ಯವು ಹೆಚ್ಚಾಗಿರಬಾರದು. ಇಂಥಾ ಅಂಶಗಳನ್ನು ಗೊದ್ರೆಜರು ಸಾಧಿಸಿ ತೋರಿಸಿದ್ದಾರೆ. ಪರಿಣಾಮವಾಗಿ ಗೊದ್ರೆಜ ಸಾಬೂನು ಸುಲಭ ಕ್ರಯದ ಸಾಮಾನುಗಳಲ್ಲಿ ಅತ್ಯುತ್ತಮವಾದುದಾಗಿದೆ.

ಸಾಬೂನುಗಳನ್ನು ಉಪಯೋಗಿಸಿದವರಿಂದಲೂ ಕೊಟ್ಟವರಿಂದಲೂ ತಯಾರುಮಾಡುತ್ತಾರೆ.

ಗೊದ್ರೆಜ ಟ್ರಿಪಲೆಟ್ ಸೋಪ್ ನಂ. 1 ಮತ್ತು 3ನೇ ಸಾಬೂನುಗಳು ಪರೀಕ್ಷಿಸಿದಂಥ ಭಾರತದ ಎಲ್ಲಾ ಸಾಬೂನುಗಳಿಗಿಂತಲೂ ಉತ್ತಮವಾದುದು. ಸಮಸ್ತರು ಚಾಲ್ತಿ ರದು ಅರ್ಥವನ್ನು ಉತ್ಕೃಷ್ಟ ಸ್ಥಿತಿಯಲ್ಲಿರಲ್ಕೆ ಬಳಸಬೇಕೆಂದು ಹೇಳುತ್ತಾರೆ.

ಗೊದ್ರೆಜರ ನಂ. 8 ಬೆರ್ರಿ ಕಲರ್ ಬಾತ್ ಸೋಪ್ ಮತ್ತು ಬೇರೆ ಸಾಬೂನುಗಳನ್ನು ಕ್ರಮವಾಗಿ ಯಾವ ಸಾಬೂನಿಗೆ ಹೋಲಿಸಿದರೂ ಸಮಾನವಾಗಿಯೇ ಇರುತ್ತವೆ. ಉಳಿದ ಎಲ್ಲಾ ಸಾಬೂನುಗಳಿಗಿಂತಲೂ ಸುಲಭ ಕ್ರಯವು.

ಸೋಲ್ ಏಜೆಂಟ್:— ನಾದಿರ್‌ಷಾ, ಪ್ರಿಂಟರ್ಸ್ ಮತ್ತು ಕಂಪನ್ಸಿ,

U. R. Pai, ಸಾಮಾನ್ಯರು — ೧೦೪೬ ಮತ್ತು ಬಾಜಿರ್, ೧೦೩೬, ಎಕ್ಕೆಸಿಕ್ ರೋಡ್, ಮಂಗಳೂರು.

ಅನಕೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಽಮೃತಂ ಗಮಯ

ಆಲೋಚಿಸುವ, ತಿಳಿಯುವ ಮತ್ತು ಹೇಳುವ ಶಕ್ತಿ—ಜ್ಞಾನ ಮಿಲ್ಟನನು ಹೇಳುವಂತೆ—ಎಲ್ಲಾ ರದ ಸ್ವಾತಂತ್ರ್ಯಗಳಿಗಿಂತಲೂ ಪ್ರಿಯತಮವಾ ದು ಇದಿಲ್ಲದೆ ಯಾವ ಜನತೆಗೂ ಸ್ವಾತಂತ್ರ್ಯವು ರಲಾರದು; ಇದಿದ್ದಲ್ಲಿ ದಾಸ್ಯವು ಇರಲಾರದು + + ಭಾವನೆಯೆ ಮತ್ತು ಭಾಷಣದ ಸ್ವಾಂತ್ಯವು ಸಮಸ್ತ ಜನತೆಯ ಹಕ್ಕಾಗಿದೆ

(ವೆಂಡೆಲ್ ಫಿಲಿಪ್ಸ್)

ಸ್ವದೇಶಾಭಿಮಾನಿ.

ಶಾ. ತಿಮ್ಮನೇ ಅಕ್ಟೋಬರ ೧೯೩೧.

ಇಪ್ಪತ್ತೈದು ವರ್ಷಗಳ ವಿಹಂಗಮ ನೋಟ.

ಇಂದಿಗೆ ೨೫ ವರ್ಷಕ್ಕೆ ಮುಂಚೆ ಸ್ವದೇಶಾಭಿಮಾನಿಯು ತನ್ನ ಪ್ರಯಾಣಕ್ಕೆ ಕಾಲಿಟ್ಟಾಗ ಮುಂದಿನ ಕುದ್ದೇಶನನ್ನು ಚಿನ್ನಾಗಿ ಗೊತ್ತುಮಾಡಿಟ್ಟು ಹೊರಟಿತ್ತು ಮನುಷ್ಯನು ತನ್ನ ಆಯುಷ್ಯದಲ್ಲಿ ವರ್ಷಕ್ಕೊಮ್ಮೆಯಾದರೂ ತಾನು ಹಿಂದಣ ವರ್ಷವನ್ನು ಹಾಗೆ ಕಳೆದೆನು, ಮುಂದಣ ಸಂವತ್ಸರವನ್ನು ತನ್ನ ಪುರುಷಾರ್ಥದ ಕಡೆ ಸೇರುವಂತೆ ಹ್ಯಾಗೆ ಕಳೆಯಬೇಕೆಂಬುದನ್ನು ಸರೀಕ್ಷಿಸುವೇಕೆಂಬ ಉದ್ದಿಷ್ಯದಿಂದ ಹಿರಿಯರು ಯುಗಾದಿ ದಿನವನ್ನು ಇಟ್ಟಿರುವರು ಯುರೋಪಿಯರಲ್ಲಿಯೂ ಕೂಡಾ ಯುಗಾದಿಯ ನಿರ್ಣಯಗಳೆಂಬ ಒಂದು ಮಾತಿದೆ ಇದೀ ಸಂಸಾರದ ಜೀವನವ್ಯೋಳಕೊಳ್ಳುವ ಪತ್ರಿಕೆಯು ೨೫ ಸಂವತ್ಸರಗಳು ಮನುಷ್ಯನ ಜೀವನದ ಒಂದು ವರ್ಷವನ್ನು ಹೋಲುವುದು ಆದಕಾರಣ ಇಂದು ಸ್ವದೇಶಾಭಿಮಾನಿಯು ರೊವಿಯರ ಜನಕರಾಯ ಮಾರ್ಕಸ ಟೆರೀಲಿಯನಂತೆ ಶಾಂತ ಮನಸ್ಸಿನಿಂದಲೂ, ನಿರ್ದಾಕ್ಷಿಣ್ಯತೆಯಿಂದಲೂ ತನ್ನ ಹಿಂದುಮುಂದೆ ಗಳನ್ನು ನೋಡಬೇಕಾದ ದಿವಸ.

ಇಂದಿಗೆ ೨೫ ವರ್ಷಕ್ಕೆ ಮುಂಚೆ ಸ್ವದೇಶಾಭಿಮಾನಿಯು ತನ್ನ ಪ್ರಯಾಣಕ್ಕೆ ಕಾಲಿಟ್ಟಾಗ ಮುಂದಿನ ಕುದ್ದೇಶನನ್ನು ಚಿನ್ನಾಗಿ ಗೊತ್ತುಮಾಡಿಟ್ಟು ಹೊರಟಿತ್ತು ಮನುಷ್ಯನು ತನ್ನ ಆಯುಷ್ಯದಲ್ಲಿ ವರ್ಷಕ್ಕೊಮ್ಮೆಯಾದರೂ ತಾನು ಹಿಂದಣ ವರ್ಷವನ್ನು ಹಾಗೆ ಕಳೆದೆನು, ಮುಂದಣ ಸಂವತ್ಸರವನ್ನು ತನ್ನ ಪುರುಷಾರ್ಥದ ಕಡೆ ಸೇರುವಂತೆ ಹ್ಯಾಗೆ ಕಳೆಯಬೇಕೆಂಬುದನ್ನು ಸರೀಕ್ಷಿಸುವೇಕೆಂಬ ಉದ್ದಿಷ್ಯದಿಂದ ಹಿರಿಯರು ಯುಗಾದಿ ದಿನವನ್ನು ಇಟ್ಟಿರುವರು ಯುರೋಪಿಯರಲ್ಲಿಯೂ ಕೂಡಾ ಯುಗಾದಿಯ ನಿರ್ಣಯಗಳೆಂಬ ಒಂದು ಮಾತಿದೆ ಇದೀ ಸಂಸಾರದ ಜೀವನವ್ಯೋಳಕೊಳ್ಳುವ ಪತ್ರಿಕೆಯು ೨೫ ಸಂವತ್ಸರಗಳು ಮನುಷ್ಯನ ಜೀವನದ ಒಂದು ವರ್ಷವನ್ನು ಹೋಲುವುದು ಆದಕಾರಣ ಇಂದು ಸ್ವದೇಶಾಭಿಮಾನಿಯು ರೊವಿಯರ ಜನಕರಾಯ ಮಾರ್ಕಸ ಟೆರೀಲಿಯನಂತೆ ಶಾಂತ ಮನಸ್ಸಿನಿಂದಲೂ, ನಿರ್ದಾಕ್ಷಿಣ್ಯತೆಯಿಂದಲೂ ತನ್ನ ಹಿಂದುಮುಂದೆ ಗಳನ್ನು ನೋಡಬೇಕಾದ ದಿವಸ.

ಹಿಂದೆ ಹೇಳಿದಂತೆ ಇದೀ ಸಂಸಾರವು ಮುಖ್ಯತಃ ಭಾರತೀಯ ಸಂಸಾರವೇ ಪತ್ರಿಕೆಯ ಕಾರ್ಯಕ್ಷೇತ್ರವಾಗಿರುತ್ತಾ ೨೫ ವರ್ಷಕ್ಕೆ ಮುಂಚೆ ಭಾರತೀಯರ ರಾಷ್ಟ್ರೀಯ ಜೀವನವು ಯಾವ ರೀತಿಯಲ್ಲಿತ್ತು, ಇಂದು ಅದು ಎಲ್ಲಿಗೆ ಮುಟ್ಟಿದೆ ಎಂತ ಪರಿಶೀಲಿಸುವುದು ಮೇಲಣ ಪ್ರಶ್ನೆಗೆ ಸಮರ್ಪಕ ಉತ್ತರ ಕೊಡಲು ಅನುಕೂವಿದೆ ಕಾರಣ ರಾಷ್ಟ್ರೀಯ ಪ್ರಗತಿಯೆಂಬ ಸೇತು ಬಂಧನಕ್ಕೆ ಎಂತಹ ದೀನ ಪತ್ರಿಕೆಯಾದರೂ ರಾಮಾಯಣದ ಅಳಿಲಿನಂತೆ ಕೈಲಾದ ಸಹಾಯವನ್ನು ಮಾಡುವುದು. ಪ್ರಾರಂಭ ಕಾಲದಲ್ಲಿ ನಾವು ಮುಂದಿಟ್ಟ ಗುರಿಯನ್ನು ಸಂಗ್ರಹವಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ ಅದು ಸರಕಾರದ ರಾಜತಂತ್ರವನ್ನು ಜನರಿಗೂ ಜನರ ಆಶಿ, ಮನೋಭಾವನಗಳನ್ನು ಸರಕಾರಕ್ಕೂ ಯಥಾಸ್ಥಿತಿಯಾಗಿ ತಿಳಿಯಹೇಳುವದು, ಮತ್ತು ಜನತೆಯ ಸರ್ವತೋಮುಖ ಪ್ರಗತಿಗೆ ಕೈಕೊಡುವದು ಪ್ರಜೆ ಮತ್ತು ಪ್ರಜಾಪರಿಪಾಲಕರಿಬಳಿಗೆ ಇರಬಹುದಾದ ಕಳಂಕವನ್ನು ಅಳಿಸಿ ಅವರೊಳಗೆ ಏಕಮತ್ಯವನ್ನು ಬೆಳೆಸುವದು ದೇಶಹಿತ ಕಾರಿಯ ಕರ್ತವ್ಯವಿದೆ ಈ ಕಾರ್ಯದಲ್ಲಿ ಕಲವೆಡೆ ಇತ್ತೀಂದಿಂದಲೂ ದೂಷಣೆ ಕೇಳುವ ಸಂದರ್ಭವೊದಗುವದು. "ನಿಂದಾಸ್ತುತಿಗಳಿಗೆ ನೋಯದೆ, ಹಿಗ್ಗದೆ", ಒಂದೇ ಮನದೊಳಗೆ ಸಾವಧಿಯಿಡುತ್ತಾ ಈ ಮಜಲು ಸೇರಿದ್ದೇವೆಂದು ಮನಃಪೂರ್ತಿಯಾಗಿ ಹೇಳಬಲ್ಲೆವು.

ನಾವು ಪತ್ರಿಕೆಯ ಮೂಲಕ ಜನತೆಯ ಜೀವನ ಸರ್ವಸ್ವವನ್ನು ಅಂದರೆ ರಾಷ್ಟ್ರೀಯ, ಧಾರ್ಮಿಕ, ಸಾಮಾಜಿಕ, ಸಾಂವತ್ಸಿಕ ಜೀವನವನ್ನು ಮುಂದೊತ್ತುವ ಧ್ಯೇಯವನ್ನು ಸ್ವೀಕರಿಸಿದ್ದೇವೆ. ಇದು ಹಿಂದರಲ್ಲೊಂದು ಹೊಸ್ಕು ಮಿಕ್ಕಿರುವದರಿಂದ ಇವುಗಳಲ್ಲೊಂದಕ್ಕೆ ಮೇರೆಗಟ್ಟು ವದು ಸಾಧ್ಯವಲ್ಲ. ಆದುಕಾರಣವೇ ಅಖಿಲ ಭಾರತ ಜನಾಂಗದ ನಾಯಕನಾದ ಮಹಾತ್ಮಾ ಗಾಂಧಿಯವರು ಭಾರತೀಯರಿಗೆ ಈ ನವಿನ್ಯ ಶಾಪೆಗಳಿಗೆ–ನೇರಿದ ವಿಷಯಗಳನ್ನು ಅಂದರೆ, ಸ್ವರಾಜ್ಯ, ಖಾದಿ, ಅಸ್ಪೃಶ್ಯತಾನಿರ್ಮೂಲ, ಸತ್ಯಧರ್ಮಗಳನ್ನು ಏಳಕಂರದಿಂದ ಬೋಧಿಸುವರು.

ಇಪ್ಪತ್ತೈದು ವರ್ಷಕ್ಕೆ ಮೊದಲು ರಾಷ್ಟ್ರೀಯ ವಿಷಯಗಳಲ್ಲಿ ಬಡ್ಡಕಂಕಣರಾಗಿ ಜೀವನವನ್ನು ನಿಕ್ಷೇಪವಾಗಿ ಅರ್ಪಿಸಿದ ಜನರು ಕೈಬೆರಳುಗಳಲ್ಲಿ ಎಣಿಸುವಷ್ಟಾದ್ದರೂ ಇದ್ದರೋ ಎಂಬುದು ಸಂದೇಹಾಸ್ಪದ ರಾಷ್ಟ್ರೀಯ ಪರಿಷತ್ತು ಬರೇ ವಾರ್ಷಿಕೋತ್ಸವವಾಗಿತ್ತೆನ್ನಬಹುದು ಅಂತು ಜನಸಾನುನ್ಯರಲ್ಲಿ ಈ ವಿಷಯಗಳಲ್ಲಿ ಉತ್ಸುಕತೆ ಇದ್ದಿಲ್ಲ ಆದರೆ ಇಂದು ಪರಿಸ್ಥಿತಿಯು ಬಹುಮಟ್ಟಿಗೆ ಬದಲಾಗಿದೆ ಕಾಂಗ್ರೆಸ್ಸು ವಾಗಾಡಂಬರವನ್ನು ಬಿಟ್ಟು ಕಾರ್ಯಸಾಧನೆಯಲ್ಲಿ ನಿರತವಿದೆ ಕಾಂಗ್ರೆಸ್ಸಿನ ಪ್ರತಿನಿಧಿಯೊಬ್ಬನೇ ಆದರೂ, ಅವನಿಂದ ಹೊರತು ನೂರಾರು ಇತರರಿಂದ ಕೂಡಿದ್ದರೂ ರೌಂಡ್‌ಟೇಬಲ್ಲ್ ಪರಿಷತ್ತು ರಾಮನಿಲ್ಲದ ರಾಮಾಯಣ ದಂತಾಗಿದೆಯೆಂದು ಬ್ರಿಟಿಷ ಸರಕಾರಕ್ಕೇನೇ ಮನಗಾಣುವಂತಹ ನ್ಯಾಯುಕ್ತತೆಯನ್ನು ಕಾಂಗ್ರೆಸ್ಸು ಉಂಟುಮಾಡಿದೆ



ವಂದೇ ಭಾರತಮ್!

(ಮಧ್ಯಮಾವತಿ)

ವಂದೇ ಭಾರತಮ್ ॥ ಪಲ್ಲ ॥
ಇ–ದೊಂದೇ ಮಂತ್ರವಿ, ತಾರಕ ತಂತ್ರವಿ,
ವ–ಸುಂಧರೆಯಲಿ ಶಾಂತಿಗೆ ನೆಲೆ ನಿರತಂ ॥
ವಂದೇ ಭಾರತಮ್ ॥ ಅನುಪಲ್ಲ ।

ಹಿಮಗಿರಿ–ಮಸ್ಥಕಧಲಿ ಯೋಗೀಶ್ವರ ।
ಯಮುನಾತಟ–ಹೃದಯದಿ ವಾಗೀಶ್ವರಿ ।
ಕಮಲಜೆ ಚರಣಾಸ್ಪೃತ ಜಲಧಿಯೊಳಿರೆ ।
ಶಕ್ತಿ ಸತ್ಯ ಸೇವಾಧನಸದನಂ ।
ವಂದೇ ಭಾರತಮ್ ॥ ೧ ।

ಭೂಪನತ್ರಯವ ಸ್ವದೇಶವದೆಂಬುವ ।
ನವಜೀವನವೀದಾಮೃತ ವಾಕ್ಯವ ।
ಕವಿ ಯಸಿ ನೃಪ ಗಾಯಕ ನಟ ಸಾರುವ ।
ವಾಣೀವಿಲಾಸ ನಿವಾಸಂ, ಸತತಂ ॥
ವಂದೇ ಭಾರತಮ್ ॥ ೨ ॥

ಅಕನಕ ಕೊರತೆಯೆ?–ಅಕ್ಷಪೂರ್ಣೆಯರೆ ।
ವನನಕೆ ಇಕ್ಷುಯವರದ ಚಕ್ರಿಯರೆ ।
ಧನನನೆವೇ ಭವಕೆ, ಶಿವನನತರಿಸಿರೆ ।
ಇಹ ಪರಕಭಯಕರಂ, ಸತತಂ ।
ವಂದೇ ಭಾರತಮ್ ॥ ೩ ॥

MNK

ಯದೆ ಇಂದು ಬರಹ ಭಲ್ಲವನಾಗಲಿ, ಇಲ್ಲದವನಾಗಲಿ ದಿನ ದಿನದ ವರ್ತಮಾನವನ್ನು ತಿಳಿಕೊಳ್ಳುವನು ಹಿರಿದೂ ಸ್ಥಾನವು ತನ್ನದು, ಭಾರತ ಮಾತೆಯ ಅಭ್ಯುದಯಕ್ಕೆ ತನು ಮನ ಧನಗಳನ್ನು ಅರ್ಪಿಸುವದು ತನ್ನ ಕರ್ತವ್ಯವೆಂಬುದನ್ನು ಪ್ರತಿಯೊಬ್ಬನೂ ಅರಿತಿರುವನು, ಈ ತತ್ವವನ್ನು ಸಂದರ್ಭವೊದಗಿದಾಗ ಆಚರಣೆಗೆ ತರುವನು. ಈ ಮಹಾತ್ಮಾರ್ಯದ ಅಗ್ರಗಣ್ಯರು ಮಹಾರಾಷ್ಟ್ರ ಕೇಸರಿಯಾದ ಲೋಕಮಾನ್ಯ ತಿಲಕರೂ ಯುವಕಭಾರತ ತಿಲಕರಾದ ಮಹಾತ್ಮಾಜಿಯವರೂ ಆಗಿರುವರು ಇವರ ಕಾಲದಲ್ಲಿ ಜನಿಸಿ ಇವರನ್ನು ಅನುಸರಿಸಿದ ಭಾಗ್ಯವು ನಮ್ಮದೆನ್ನಬೇಕು ಹಾಗೆಯೇ ಖಾದಿ ಪ್ರಚಾರವನ್ನೂ ಅಸ್ಪೃಶ್ಯತಾ ನಿವಾರಣೆಯನ್ನೂ ಆಚರಣೆಗೆ ತಂದು ಹಿಂದಿನ ವಾಗ್ಧೇಯವನ್ನು ಪೂರೈಸಿದ ಕೀರ್ತಿಯು ಮಹಾತ್ಮರದ್ವಾಗಿರುತ್ತದೆ. ಇನ್ನು ರಾಜನೀತಿಯು ಧರ್ಮಗರ್ಭಿತವಾಗಿತಕ್ಕುದು ಎಂಬ ಆಶಯವನ್ನು ಕೈಲಾಸವಾಸಿ ಗೆಜೇಖಲೆಯವರು ಪ್ರಕಟಗೊಳಿಸಿದ್ದರು. ಈ ತತ್ವವನ್ನು ಸತ್ಯಾಗ್ರಹ ಮೂಲಕ ಆಚರಿಸಿ ಮಹಾತ್ಮಾಜಿಯವರು ನಮ್ಮ ಕುರುಕ್ಷೇತ್ರವು ಪೂರ್ವದಂತೆಯೇ ಧರ್ಮಕ್ಷೇತ್ರವಾಗಿದೆ ಎಂತ ರುಜುಪಡಿಸಿದರು. ನಾವಾದರೂ ಸ್ವದೇಶಾಭಿಮಾನಿಯು ಉದ್ಭವಿಸಿದಾಗಲೇ ಧರ್ಮವೇ ಸರ್ವಾರ್ಥವಾಗಿದ್ದಿಗೆ ಅವಕ್ಕೆ ಕಂಠೋಕ್ತವಾಗಿ ಹೇಳಿದ್ದೇವೆ. ಲೋಕದಲ್ಲಿ ಎಷ್ಟೆಷ್ಟಿಗೆ ಒಂದೇ ಶಾಸ್ತ್ರ ಸಲ್ಲುವುದೆಂದು ಕವಿಯು ಹೇಳಿರುವನು. ಅದರಂತೆ ಸ್ವದೇಶಾಭಿಮಾನಿಯು ಕಾಪೋಪಶಾಖೆಗಳ ನಿರ್ವಾಹವು ಆಯಾ ಶಾಸ್ತ್ರ ಪರಿಣತರ ಸಹಕಾರದ ಹೊರತು ಸಾಂಗವಾಗಿ ನೆರವೇರುತ್ತಿದ್ದಿಲ್ಲವೆಂಬು ನಾವು ಪ್ರತ್ಯೇಕವಾಗಿ ಹೇಳಿಬೇಕೆಂದಿಲ್ಲ. ನಿರನೇಕ್ಷ ಬುದ್ಧಿಯಿಂದಲೂ, ಲೋಕೋಪಕಾರ್ಯಕ ದೃಷ್ಟಿಯಿಂದಲೂ ಹಾಗೆ ಸಹಾಯ ಮಾಡಿದ ಮಹನೀಯರಿಗೆ ನಾವು ಸದಾ ಋಣಗಳಾಗಿರುವೆವು. ಅಂತಹ ರನೇಕರಿರುವರಾದರೂ ಅವರ ಪೈಕಿ ಕೆಲವರ ಭಾವ ಚಿತ್ರಗಳನ್ನು ಈ ಸಂಚಿಕೆಯಲ್ಲಿ ಮುದ್ರಿಸಿದ್ದೇವೆ. ಈ ಪ್ರಮುಖರ ಪೈಕಿ ಒಬ್ಬ ಪುರುಷನ ಭಾವಚಿತ್ರವನ್ನು ತೆಗೆಯಲೂ ಮುದ್ರಿಸಲೂ ನಮ್ಮ ಕೈಲಾಗದು. ನಮಗೆ ಉದಾರಾಶ್ರಯವನ್ನಿತ್ತ ಜನನಮುದಾಯವೇ ಆ ಪುರುಷನು ಯುರೋಪಿಯ ಘೋರ ಯುದ್ಧದ ಅವರಿಚಿತ ಯೋದ್ಧನಂತೆ ಇರುವ ಈ ಜನತೆಯ ಕಾಲಿಗೆ ನಮ್ಮ ಕೃತಜ್ಞತೆಯನ್ನು ಇಂದು ಅರ್ಪಿಸುವೆವು ಸ್ವದೇಶಾಭಿಮಾನಿಯನ್ನು ಹೊರಡಿಸುವಾಗ ನಮ್ಮ ನಿಶ್ಚಲ ಹಿತೈಷಿಗಳಿಗೂ ಕೂಡ ಆ ಶಿಶುವಿನ ಆಯುಷ್ಯದ ಕುರಿತು ವಿಧವಿಧದ ಸಂಶಯಗಳಿದ್ದವು. ಆದ ಕಾರಣ ಪತ್ರವನ್ನು ವರೀಕ್ಷಾರ್ಥವಾಗಿ ಪಕ್ಷಪತ್ರಿಕೆಯಾಗಿ ಪ್ರಕಟಿಸಲಾಗಿತ್ತು ಕ್ರಮೇಣ ಆ ಶಿಶುವು ಬೆಳೆಯುತ್ತಾ ವಾರಪತ್ರಿಕೆಯಾಯಿತು ವಾಚಕರ ಉದಾರಾಶ್ರಯವೇ ಇದಕ್ಕೆ ಕಾರಣವಾಯಿತು

ವರೋವಕಾರ ಬುದ್ಧಿಯಿಂದ ಪ್ರೇರಿತರಾದ ಜನರು ಗಾಗಲೀ ಸಂಸ್ಥೆಗಾಗಲೀ ಅವರ ನಿರ್ದಿಷ್ಟಕರ್ತವ್ಯವು ನಿತ್ಯ ಕೈಕೊಡುವದು, ನಿರಂತರ ಮುಂದುವರಿಯುವದು ಉದಾಹರಣಾರ್ಥ ಪ್ರಸ್ತುತ ಸರ್ವಜನರೂ, ಸರ್ವ ಪತ್ರಿಕೆಗಳೂ ಸ್ವರಾಜ್ಯವೊಂದರ ಕುರಿತು ಚಿಂತಿಸುವರು ಆದು ಸರ್ವರ ಪ್ರಯತ್ನದಿಂದಲೂ, ಸರ್ವಶಕ್ತಿಯ ಕೃಸಿಯಿಂದಲೂ, ಹಸ್ತಗತವಾದೊತನೆ ವರೋಪಕಾರಿಗಳಿಗೆ ಉದ್ಯೋಗವಿಲ್ಲ, ಪತ್ರಿಕೆಗಳಿಗೆ ಎಡೆಯಿಲ್ಲವೆನ್ನಬಹುದೇ? ಇದಕ್ಕೆ ಪ್ರತಿಯಾಗಿ ತಕ್ಷಣವೇ ಪುನರಪಿ ಮರಣಂ ಪುನರಪಿ ಜನನಂ ಎಂಬಂತೆ ಇನರಿಗೆ ಹೊಸದೊಂದು ಕರ್ತವ್ಯವು ಹುಟ್ಟಲೇ ತಕ್ಕುವದು ಸಮಾಜವು ಇರುವ ತನಕ ಸಮಾಜಸೇವೆಯಿದೆ ಪತ್ರಿಕಾಕರ್ತರಿ ಕರ್ತವ್ಯವು ಪ್ರತಿ ಸ ಚಿಕೆಯ ಅಂತ್ಯದಲ್ಲಿ ಸಶೇಷವೆಂದು ಬರೆದಿದೆ, ಅಲ್ಲದೆ ಸಮಾಪ್ತಿಯೆಂದು ಬರೆದಿಲ್ಲ ಹಿಂದೆ ಸಮುದ್ರ ಮಥನದ ಕಾಲದಲ್ಲಿ ಉದ್ಭವಿಸಿದ ಹಾಲಾಹಲಕ್ಕೆ ಹೆದರದೆಯೂ ಲಕ್ಷ್ಮಿಯೇ ಮೊದಲಾದ ರತ್ನಗಳಿಂದಲೂ ಕೃಪ್ತರಾಗದೆಯೂ, ಸುರರು ಸಿದ್ಧ ತಾರ್ಥವಾದ ಅಮೃತವು ಕೈಸೇರುವ ವರೆಗೆ ಜವಿಶ್ರಾಂತರಾಗಿ ಸಾಗರವನ್ನು ಕಡೆದರು ತದ್ವತ್ ನಾವು ಕೈಕೊಂಡ ಕಾರ್ಯಮಧ್ಯದಲ್ಲಿ ಒದಗುವ ವಿಪದ್ಪರಿವರ್ತನೆಗಳಿಂದ ಎದೆಗುಂದದೆಯೂ, ಸಂಪತ್ತಿಶೇಷದಿಂದ ಮೈಮರೆಯದೆಯೂ, ಈ ಸಂಸಾರಸಾಗರದಲ್ಲಿ ಪತ್ರಿಕಾ ನೌಕೆಯನ್ನು ಸತ್ಯವೆಂಬ ಧ್ರುವನಕ್ಷತ್ರದ ಕಡೆ ಕಣ್ಣಿಟ್ಟು ಸರೋಪಕಾರ ದೃಷ್ಟಿಯುಂಡು ನಡೆಸುವ ಬುದ್ಧಿಯನ್ನೂ ಆ ನೌಕೆಗೆ ಅಮೃತತ್ವವನ್ನೂ ಪ್ರೊಮೇಶ್ವರನು ವರಿಪಾಲಿಸಲೆಂದು ಪ್ರಾರ್ಥಿಸುವೆವು

ರಜತೋತ್ಸವ ಸಂಚಿಕೆ.

ಸ್ವದೇಶಾಭಿಮಾನಿಯ ಇಪ್ಪತ್ತೈದನೆಯ ವತ್ಸರದ ಯೌವನವನ್ನು ಆಚರಿಸಲೆಂದು ನಾವೀ ಸಂಚಿಕೆಯನ್ನು ತಯಾರಿಸಿದೆವು ಇಂತಹ ಸಂಚಿಕೆಗಳಲ್ಲಿ ಹೆಚ್ಚಾಗಿ ಪತ್ರಿಕೆಯ ಕಳೆದ ಜೀವನದ ಹೊಗಳುವಿಕೆಯ ಲೇಖಗಳೇ ಪ್ರಕಟಿಸಲ್ಪಡುವುದು ರೂಢಿ ಈ ರೂಢಿಯನ್ನು ನಾವು ಈ ಸಂಚಿಕೆಯಲ್ಲಿ ಅನುಸರಿಸಿಲ್ಲ ಅಗತ್ಯವಿದ್ದ ಮಟ್ಟಿನ ಒಂದಿಷ್ಟು ಇತಿಹಾಸವನ್ನಷ್ಟೇ ನಾವಿಲ್ಲಿ ಕೊಟ್ಟಿರುವೆವಲ್ಲದೆ ಅದಕ್ಕಿಂತ ಹೆಚ್ಚಿನ ಆತ್ಮಪ್ರಶಂಸೆಯನ್ನು ಮಾಡ ಹೋಗಿಲ್ಲ ಮುಖ್ಯತಃ ಪತ್ರಿಕೆ ಯೊಂದರ ಪ್ರಾಶಸ್ತ್ಯವು ಅದರ ಆತ್ಮಪ್ರಶಂಸೆಯಿಂದ ಪ್ರತಿಬಿಂಬಿಸಲ್ಪಡುವುದಿಲ್ಲ, ಆಥವಾ ಕೆಲವು ದೊಡ್ಡ ಮನುಷ್ಯರ ಹೊಗಳುವಿಕೆಯಿಂದ ಸ್ಥಾಪಿಸಲ್ಪಡುವುದಿಲ್ಲ. ಅದು ಜನತೆಯ ಮೇಲೆ ಉಂಟುಮಾಡಿರುವ ವರಿಣಾಮವೇ ಆ ಪತ್ರಿಕೆಯ ಆಧಾರವಾಗಿರುತ್ತದೆ.

ಪತ್ರಿಕಾ ವ್ಯವಸಾಯದಲ್ಲಿ ಯಾವ ತರದ ಸಾಹಸಗಳನ್ನು ನಡಿಸಬಹುದು ಎಂಬುದನ್ನು ಪ್ರಯತ್ನಿಸುವುದೇ ಒಂದು ಪತ್ರಿಕೆಯ ಜೀವಮಾನವನ್ನು ಹರಸುವ ಅತ್ಯಂತ ಶ್ರೇಷ್ಠವಾದ ಉಪಾಯವೆಂದು ನಮಗನ್ನಿಸಿತು. ಆ ಉದ್ದೇಶದಿಂದ ಇಪ್ಪತ್ತೊಂದು ದೊಡ್ಡ ಸಂಚಿಕೆಗೆ ಕೈಹಾಕಿದೆವು. ನಮ್ಮ ಪ್ರಯತ್ನಗಳು ಸಫಲವೋ? ವಿಫಲವೋ? ಆ ಬಗ್ಗೆ ನಮಗೆ

(ಇನೀ ತುಟ್ಟಿ ಮುಂದರಿಯಿದೆ)

ಸ್ವದೇಶಾಭಿಮಾನಿಯು

ಮೊದಲಿನ ಸಂಚಿಕೆಯು ಮೊದಲಿನ ಪುಟ.

(ಅಗ್ರಲೇಖ.)

ಪುಸ್ತಕ 1. ಮಂಗಳೂರು 1ನೇ ಜನವರಿ 1907. ಸಂಚಿಕೆ 1.

ಭಾರತೀಯ ಪತ್ರಿಕಾಕರ್ತರ ಉದ್ದಿಷ್ಟ ಕರ್ತವ್ಯವು.

ಕೊಳುಗುಳದೊಳ್ತೋಡಿದರೆ ಕೆಚ್ಚಿಗೆ ಕೆಲಸಮಾಗಾತನ ಮುಂದಣ ।
ಗೊಲಿದುಹಜ್ಜೆಯಿಡಲು ಹಜ್ಜೆಯೊಳ್ಕಮ್ಮ ಧೈರ್ಯಂ ॥

ಅಳಿದನೆಂದೆ ದೇವದೋಕದ ।
ಲಲನೆಯು ತೊಟ್ಟಿರು ಸುರೇಂದ್ರನ ।
ನೆಲನ ಸುಗ್ಗಿಸುವರು ವೀರಸ್ವರ್ಗವಹುದಂದ

ಮಹಾ ಭಾರತ.

"ಪೌರ್ವಾತ್ಯ ಜನಾಂಗಗಳ ಸುಧಾರಣೆಯು ಸ್ವಾವರ ಸ್ವಭಾವದ್ದು. ಪ್ರಾಶ್ಚಾತ್ಯರು ಉನ್ನತಿಯ ಪಥದಲ್ಲಿ ವೃದ್ಧಿಸುವವರು" ಎಂಬ ಈ ಘಾತು ಯುರೋಪಿಯ ಶಾಸ್ತ್ರಕರ್ತರ ಪ್ರಿಯತಮ ಸಿದ್ಧಾಂತವಾಗಿತ್ತು. (Sir H. Maine) ಸರ್. ಹನಿ ಮೇನ್ ಬ್ಲಂಟ್‌ಶ್ಲಿ ಮುಂತಾದ ರಾಜನೀತಿ ವಿಶಾರದರೂ ಈ ಸಿದ್ಧಾಂತಕ್ಕೆ ಸಹಿ ಹಾಕಿದ್ದಾರೆ. ಚೀನ ರಾಜ್ಯವನ್ನು—ಅಚಲಿತ—ದುರ್ಗಂಧ ಜಲತಟಾಕಪ್ರಾಯವಾದ ಸ್ಥಾವರ ವದ್ಧತಿಗಳಿಗೆ ದೃಷ್ಟಾಂತವಾಗಿಟ್ಟರು. ಸಾರಾಂಶ, ಆಸ್ಯಾ ಖಂಡದವರು ಯುರೋಪಿಯರ ದಾಸ್ಯಕ್ಕೆ ಹುಟ್ಟಿದವರು ಎಂದೂ ಇವರು ಕತ್ತಲೆಯಲ್ಲಿ ಹೊರಳಾಡುವ ಬಡಮತಿಗಳಿಗೆ ಬೆಳಕನ್ನೀಯುವ ದೇವತೆಗಳೆಂದೂ ಅಭಿಪ್ರಾಯ ಹುಟ್ಟಿತು.

ಪಾಶ್ಚಾತ್ಯ ವರಿಜ್ಞಾನದಿಂದ ರಚಿತವಾದ ಈ ದುರ್ಗಕ್ಕೆ ಜಪಾನ ದೇಶವು ಮೊದಲನೇ ಬಡಿಕೊಟ್ಟಿತು. ಯುರೋಪಿಯ ರಾಜ್ಯಗಳಲ್ಲಿ ಮುಂದಾಳಾದ ರುಸ್ಸದ ಕೊಬ್ಬನ್ನು ಆಸ್ಯ ಖಂಡದ ನಿನ್ನೆ ಹುಟ್ಟಿದ ಚಿಕ್ಕ ದ್ವೀಪವು ಮುರಿದು ಲೋಕದಲ್ಲಿ ಅನೇಕರಿಗೆ ವಿಸ್ಮಯಾನಂದನನ್ನೂ ಅನೇಕರಿಗೆ ಅಸೂಯಾ-ಭಯಗಳನ್ನೂ ಹುಟ್ಟಿಸಿತು. ಯುರೋಪಿಯರ ಅನುಸರಣೀಯವಾದ ಉತ್ತಮ ವದ್ಧತಿಗಳನ್ನು ತನ್ನಲ್ಲಿ ಪ್ರಚಾರಕ್ಕೆ ತಂದ ಕಾರಣ ಜಪಾನವು ಈ ಅದ್ಭುತ ಕಾರ್ಯವನ್ನು ಕೈಗೂಡಿಸಿತೆಂದು ನೋಡಿ ಆಸ್ಯದ ಮಿಕ್ಕ ರಾಜ್ಯಗಳು ಇದೇ ದಾರಿಯಲ್ಲಡಿ ಇಡುತ್ತಾರೆ. ಪಾರ್ಶಿ ದೇಶದ ಶಾಹಾನು ತನ್ನ ರಾಜ್ಯದಲ್ಲಿ ಪ್ರಜಾಪ್ರತಿನಿಧಿಗಳ ಸಭೆಯನ್ನು ಸ್ಥಾಪಿಸಿದನು. ಚೀನಾ ದೇಶವು ಪಾಶ್ಚಾತ್ಯರ ಯುದ್ಧರಚನೆಯ ರೀತಿಗಳನ್ನು ಧರಂಗಿ ಮುಂತಾದ ಸಾಮಗ್ರಿಗಳನ್ನೂ ತನ್ನಲ್ಲಿ ನೆಲೆಗೊಳಿಸಿ ಸುನಿಯಂತ್ರಿತ ಲೋಕಸಿಯುಕ್ತ ರಾಜವದ್ಧತಿಯನ್ನು ನೆಲಂಬಿಸುವದು. ಅಫಘಾನ ದೇಶದ ಅಮೀರನೂ ಸಹ, ಮತ್ಸಕಾಭಿಮಾನವೇ ಸಲ್ಲದೆಂದು ಕಂಡು ಏಷಿಕ ಶಾಸ್ತ್ರಗಳನ್ನೂ ಪಾಶಶಾಲೆಗಳಲ್ಲಿ ಕಲಿಸುವ ವಿರ್ಪಾಡು ಮಾಡಿರುತ್ತಾನೆ. ತನ್ನ ರಾಜ್ಯಬಲ್ಲಿ ಹಂದು ವಿಧವಾದ ಪ್ರಜಾಪ್ರತಿನಧಿ ಸಭೆಯನ್ನು ನಿರ್ಮಿಸಿದ್ದಾನೆ. ಈ ಎಲ್ಲಾ ಪ್ರವರ್ತನಗಳು ಪಾಶ್ಚಾತ್ಯರ ಉದ್ದಿಷ್ಟ ಸಿದ್ಧಾಂತಗಳನ್ನು ಧ್ವಂಸಪಡಿಸುವವು.

ವಸ್ತುತ: ಸುಧಾರಣೆಯ ಸೂರ್ಯನು ಮೊದಲು ಪೂರ್ವದಲ್ಲಿ ಮೂಡಿ ಕ್ರಮೇಣ ಪಶ್ಚಿಮಕ್ಕೆ ಕೆರಳುತ್ತಿರಲು ಈ ಪ್ರಾಂತ್ಯದಲ್ಲಿ ಕತ್ತಲೆಯೊಯಿತೆಂದು ಇತಿಹಾಸದಿಂದ ತೋರುವದು. ಯುರೋಪಿಯ ಜನಾಂಗಗಳನ್ನು ಉನ್ನತಿಗೆ ತಂದ ಕ್ರಿಸ್ತಧರ್ಮ ಬೋಧಕನು ಆಸ್ಯಖಂಡದವನು.

ಸುತ್ತಲಿನ ದೇಶಗಳಲ್ಲಿ ತೋರುವ ವೃದ್ಧಿಸೂಚನೆಗಳು ಹಿಂದೂ ದೇಶದಲ್ಲಿಯೂ ಕಚ್ಚಿಗೆ ಬೀಳುವವು. ನೇಶನಲ್ ಕೊಂಗ್ರೆಸ್, ಸೊಸಿಯಲ್ ಕೊನ್ಫರೆನ್ಸ್ ಮುಂತಾದ ಸಭೆಗಳೂ, ಬ್ರಹ್ಮ ಸಮಾಜ, ಆರ್ಯ ಸಮಾಜ, ಮುಂತಾದ ಕೂಟಗಳೂ, ಈ ಚಳವಳಿಯ ಕುರುಹುಗಳಾಗಿವೆ. ನಾವೂ ರಾಜಕೀಯ, ಸಾಮಾಜಿಕ, ಸಾಂಪತ್ತಿಕ ವಿಷಯಗಳಲ್ಲಿ ನಮ್ಮ ಕೀಳು ಸ್ಥಿತಿಗೆ ಗಮನಕೊಡತೊಡಗಿದ್ದೇವೆ. ಆದರೆ ಈ ಸ್ಥಿತಿಯನ್ನು ನಿವಾರಿಸುವುದಕ್ಕೆ ನಮಗೆ ಕೆಲವು ಅಭ್ಯಂತರಗಳಿವೆ. ನಮ್ಮಲ್ಲಿ ಏಕರಾಷ್ಟ್ರೀಯ ಕಲ್ಪನೆಯು ಇನ್ನೂ ಬೇರುಗೊಂಡಿಲ್ಲ. ಭಾಷಾಭೇದ, ಜಾತಿಭೇದ, ಮತಭೇದ, ಕುಲ ಭೇದಗಳಿಂದ ತುಂಡುತುಂಡಾಗಿದ್ದೇವೆ. ಸನಿಯಂತ್ರಿತ ರಾಜ್ಯವದ್ಧತಿಯೊದರೋ ಹಿಂದೂದೇಶದಲ್ಲಿ ಅಶ್ರುತಪೂರ್ವ. ವಿಲಾಯತಿಯ ಜನರಿಗಾದರೆ ಅವರ ರಾಜವದ್ಧತಿಯ ದೆಸೆಯಿಂದಲೂ ಅಲ್ಲಲ್ಲಿ ಸ್ಥಾಪಿಸಲ್ಪಟ್ಟ (Association) ಸಂಘೆ (Club) ಕೂಟಗಳ ಮೂಲಕವಾಗಿಯೂ ಆಗಾಗ್ಗೆ ರಾಜನೀತಿ ವಿಶಾರದರು ಹಲ್ಲವಲ್ಲಿಗಳಲ್ಲಿ ಜನರಿಗೆ ಕೊಡುವ ಭಾಷಣದಿಂದಲೂ, ಲಕ್ಷಗಟ್ಟಲೆಯಲ್ಲಿ ಕೊಂಡುಕೊಳ್ಳಲ್ಪಡುವ ಪತ್ರಿಕೆಗಳ ಮುಖಾಂತರವೂ ದೇಶದ ರಾಜ್ಯಭಾರ ವಿಷಯಗಳು ಕುಲಾಂಕುಕವಾಗಿ ತಿಳಿದು ಬರುವವು. ಈ ರಾಷ್ಟ್ರೀಯ ಶಿಕ್ಷಣವು ಎಷ್ಟರಮಟ್ಟಿಗೆ ಸಮಾಜದ-ಎಲ್ಲಾ ವರ್ಗಗಳಲ್ಲಿಯೂ ಹರಡಿದೆಯೆಂದು ವಿಲಾಯತಿಯಿಂದ ಬಂದ ಬಲ್ಲ ರಸಿಕ ಹಿಂದೂ ಗೃಹಸ್ಥರು ಹೇಳಿದ ಒಂದು ಚುಟುಕು ಸಂಗತಿಯಿಂದ ತಿಳಿಯಬಹುದು. ವಿಲಾಯತಿಗೆ ಹೋದೊಡನೇ ಇವರ ಆಪ್ತರು ಬೇಟಿಗೆ ಏಕಾಕಿಯಾಗಿ ಹೋಗಬಾರದೆಂದು ಬೋಧಿಸಿದರು. ಆದರೂ ಇವರು ಒಂದು ಬೆತ್ತವನ್ನು ಕೊಂಡುಕೊಳ್ಳಲಿಕ್ಕೆಂಕ ಒಂದು ಅಂಗಡಿಗೆ ಹೋದರು. ಈ ಗಿರಾಕಿಯನ್ನು ಕಂಡಕೂಡಲೇ ಅಲ್ಲಿದ್ದ ಹೆಂಗಸು (ವಿಲಾಯತಿಯಲ್ಲಿ ಹೆಚ್ಚಾಗಿ ಹೆಂಗಸರು ಮಾರಾಟದ ಕೆಲಸವನ್ನು ಮಾಡುತ್ತಾರೆ.) ಇವರನ್ನು ಕುರ್ಚಿಸಿನಿನ್ನೆ ರಾತ್ರೆ ಪಾರ್ಲಿಮೆಂಟಿನಲ್ಲಿ ಮೆ. ಬಾಲ್ಫರ್ (ಮಾಜಿ ಪ್ರಧಾನ ಮಂತ್ರಿ) ದೊರೆಗಳು ಮಾಡಿದ ಭಾಷಣದ ವಿಷಯ ನಿಮ್ಮ ಅಭಿಪ್ರಾಯವೇನೆಂದು ಕೇಳಿದಳು. ಈ ಪ್ರಶ್ನೆಗೆ ಗಿರಾಕಿಯು ತಟಸ್ಥನಾದನು. ಮತ್ತು ಅಂದಿನಿಂದ ದಿನಸ ದಿವಸದ ವರ್ತಮಾನ ಪತ್ರಿಕೆಗಳನ್ನು ಓದದಿದ್ದರೆ ಕೆರಕುಳ ಅಂಗಡಿಗಾರರಿಂದೆಲೂ ತನ್ನ ಅಭಿಮಾನಕ್ಕೆ ಕುಂದು ಬಂದೀತೆಂದು ಎಣಿಸಿದನು.

ಸರ್ವಸಾಧಾರಣರಿಗೆ ಇಂಥಾ ಶೀಕ್ಷಣ ಸಿಕ್ಕದಿದ್ದರೆ ಪ್ರತಿನಿಧಿ ಸಭೆಯು ಪ್ರಾಪ್ತಿಸಲಾರದು. ತಕ್ಕಾಸು ಪ್ರಾಪ್ತಿಸಿದರೂ ಬದ್ಧಮೂಲವಾಗಿ ಬಾಳಲಾರದು. ಯಾಕಂದರೆ ದೇಶದಲ್ಲಿ ಯಾವ ವರ್ಗವು ವಿದ್ಯಾ, ಬುದ್ಧಿ, ಧನಸಂಪನ್ನವಾಗಿರುವುದೋ ಅವರ ಕೈಯಲ್ಲಿ ರಾಜಭಾರವು ನೇರುವುದೆಂದು ಇತಿಹಾಸದ ಪರಿಚಿತಿಯು ಸ್ಪಷ್ಟಪಡಿಸುವದು. ರಾಜ್ಯದಲ್ಲಿ ಪ್ರಜಾಸಾಮಾನ್ಯರು ಅತಿಕ್ಷಿತರಾಗಿ-ಸಂಭಾವಿತ ಕುಟುಂಬಿಕರು ವಿರಳ ವಾಗಿಯೂ, ಪರಸ್ಪರ ಮತ್ಸರಿಯಿತರಾಗಿಯೂ, ಭೋಗಾಸಕ್ತರಾಗಿಯೂ, ಇದ್ದ ಸೀಮೆಯಲ್ಲಿ ರಾಜನೇ ಸರ್ವ ಸ್ವತಂತ್ರನಾಗಿರುವನು (Absolute monarch). ಕುಲೀನ ಮಂಡಳಿಯವರು ಬಲಾಢ್ಯರಾಗಿ ವಿದ್ಯಾಸಂಪನ್ನರಾದ್ದರಿಂದ ರಾಜ್ಯವು ಇವರ ಕೈಯಲ್ಲಿ ನೇರಾ ಕುಲೀನಾಧಿಪತ್ಯವೆನ್ನಿಸುವದು (Aristocracy). ಸಾಮಾನ್ಯರು ಸುಶಿಕ್ಷಿತರಾದರೆ ತಾವು ತೆರುವ ಕಂದಾಯ ನೆಚ್ಚಮಾಡುವವರಲ್ಲಿ ತಮಗೆ ಅಧಿಕಾರವಿರಬೇಕು, ರಾಜ್ಯಭಾರವು ಪ್ರಜಾಸುಖಕ್ಕಾಧ್ದರಿಂದ ಸರಕಾರದ ರಾಜನೀತಿಯನ್ನು ಚರ್ಚಿಸಲಿಕ್ಕೆ ನಮಗೆ ಸ್ವಾತಂತ್ರ್ಯ ಬೇಕೆನ್ನುವರು. ಈ ರೀತಿ ಪ್ರಜಾಪ್ರತಿನಿಧಿಗಳ ಸಭೆಗೆ ಅನುಕೂಲವಾಗುವದು. ವಿದ್ಯೆಯೇ ಬಲದಾಯಕವಾಗಿರುವದು.

ಪ್ರಜಾಶೀಕ್ಷಣೆಗೆ ಹಿಂದೂದೇಶದಲ್ಲಿ ಯಾವ ಸೌಕರ್ಯವಿರುವದು? ನಮ್ಮಲ್ಲಿಯ ಸಭೆಗಳು ಕುಭಂಕರ್ಣನಿಗಿಂತಲೂ ಇಮ್ಮಡಿ. ಇವು ವರ್ಷಕ್ಕೊಮ್ಮೆ ನಿದ್ರೆಯಿಂದೆದ್ದು ಸುಮ್ಮನೆ ಭಾಷೆಯಲ್ಲಿ ಉಪನ್ಯಾಸ ಮಾಡುವರು. ರಾಜಕೀಯ ವಿಷಯಗಳನ್ನು ಚರ್ಚಿಸುವ ಸಂಘಗಳು ಈ ದೇಶದಲ್ಲಿ ಇಲ್ಲವೆನ್ನಬಹುದು. ಇದ್ದರೂ ಅವುಗಳಲ್ಲಿ ನಡಿಯುವ ಭಾಷಣಗಳು ಇಂಗ್ಲೀಷಿನಲ್ಲಿಯಾದ್ದರಿಂದ ಸಾಧಾರಣರಿಗೆ ಅವು ಅಗಮ್ಯವೇ. ಜನರಲ್ಲಿ ಇಂಗ್ಲೀಷ ಭಾಷಾಪರಿಚಿತಿಯು ಪಸರಿಸುವ ವರೆಗೆ ಕಾದರೆ ಲೋಕಾಂತ್ಯದ ವರೆಗೂ ಕಾಯಬಹುದು.

ದೇಶೋನ್ನತಿಯ ಈ ಉತ್ತಮ ಮಾರ್ಗವನ್ನು ಸಾಧಿಸಲಿಕ್ಕೆ ದೇಶಭಾಷೆಯಲ್ಲಿ ರಚಿಸುವ ಪತ್ರಗಳೇ ಸಹಕಾರಿಗಳು. ತಾವು ಸಳಿಸಿದ ವಿಷಯವನ್ನು ಸರುವಾ ಯಕ್ಕೆ ತಿಳಿಯಹೇಳಿ ಅವರನ್ನು ತಿದ್ದಲಿಕ್ಕೆ ಸುಶಿಕ್ಷಿತರಾದ ಮಹನೀಯರಿಗೆ ಇದೇ ದಾರಿ. ಸ್ವಭಾಷಾಪತ್ರಿಕೆಗಳ ಉದ್ದಿಷ್ಟ ಕರ್ತವ್ಯವು ಇದೇ. ಈಗಲಾದರೋ ಇಂಗ್ಲೀಷ ವಿದ್ಯೆಯಲ್ಲಿ ಸಮಗ್ರ ನಿಪುಣರಾದ ಹಿಡಿತುಂಬ ಜನರಿಗೊ ಉಳಿದ ಕೋಟ್ಯಾವಧಿ ಸರ್ವಸಾಧಾರಣರಿಗೂ ಸಹಾನುಭೂತಿ ಸನುವೇದನೆಗಳಿಲ್ಲ. ಈ ಎರಡು ವರ್ಗಗಳ ನಡುವೆ ನಿರ್ಮಿತವಾದ ಈ ಅಗಳನ್ನು ಧಾಟಲಿಕ್ಕೆ ಸಹಜವಾದ ಸಂಕವು ಸ್ವಭಾಷೆಯೇ! ಇದ್ದ ರಿಂದಲೇ ಬಂಗಾಳ ದೇಶದ (National Council of Education) ರಾಷ್ಟ್ರೀಯ ವಿದ್ಯಾಸಭೆಯು ತಾವು ಸ್ಥಾಪಿಸುವ ಶಾಲೆಗಳಲ್ಲಿ ವಿವಿಧ ಶಾಸ್ತ್ರಗಳನ್ನು ದೇಶಭಾಷೆಯಲ್ಲೇ ಕಲಿಸಬೇಕೆಂದು ನಿಶ್ಚಯಿಸಿ ಈ ಸಲುವಾಗಿ ತಕ್ಕ ಪಾಠಪುಸ್ತಕಗಳನ್ನು ರಚಿಸಲಿಕ್ಕೆಂದು ಕಮ್ಮಿಟಿಯನ್ನು ನೇಮಿಸಿದರು. ರಾಷ್ಟ್ರೀಯ ಕಲ್ಪನೆಯು ಎಲ್ಲರಲ್ಲಿಯೂ ನೆಲೆಗೊಂಡು ಜನರಲ್ಲಿ ಏಕ್ಯಭಾವನೆ ಬೆಳೆದು ಹಿಂದೂದೇಶದಲ್ಲಿಯ ಭೇದಗಳು ನೀಗಲಿಕ್ಕೆ ಸ್ವಭಾಷಾ ಪತ್ರಿಕೆಗಳು ಅತ್ಯಂತ ಸಹಕಾರಿಗಳೆಂದು ನಾವು ನಂಬಿದ್ದೇವೆ. ಹಿಂದೂ ದೇಶದಲ್ಲಿ ಎಷ್ಟು ಕಾಲ ಧಾಟಿದ ನಂತರವಾದರೂ ಇಂಥಾ ಸ್ಥಿತಿಯು ಒದಗಿದರೆ ಈ ಪತ್ರಿಕೆಗೆ ಪ್ರಯತ್ನಗಳು ಸಫಲಿಸುವವು. ಈ ಪತ್ರಿಕೆಗಳ ಜೀವನವು ಹಿಂದೂದೇಶದ ಚರಿತ್ರೆಯಲ್ಲಿ ಗಣನೀಯವಾಗುವದು.

(ನೀಲ ಪುಟದಿಂದ ಮುಂದುವರಿಸುವುದು).

ಯೋಚನೆ ಇರುವುದಿಲ್ಲ. ಆದರೆ ಅಂತಹ ಒಂದು ಪ್ರಯತ್ನವನ್ನು ನಾವು ಮಾಡಿದ್ದೇವೆಂಬ ಆತ್ಮಸಂತೋಷವನ್ನಷ್ಟು ಮಾತ್ರವೇ ಈ ಪ್ರಯತ್ನದ ಪ್ರತಿಫಲವಾಗಿ ನಾವಿಟ್ಟು ಕೊಂಡಿದ್ದೇವೆ.

ಅವಿಲ ಕರ್ನಾಟಕದ ಶ್ರೀಷ್ಠ ಲೇಖಕರನ್ನು ನಮ್ಮಿ ಪತ್ರಿಕೆಯಲ್ಲಿ ಬರೆಸಲೇಬೇಕೆಂಬುದು ಉದ್ದೇಶವು ನಮಗಿತ್ತು. ಅದನ್ನು ಸಂಪೂರ್ಣ ಸಾಧ್ಯಮಾಡಲು ಆಗದಿದ್ದುದು ಒಂದಿಷ್ಟು ವಿಷಾದಕರವಾಗಿ ತೋರಿದರೂ, ನಮ್ಮ ಜಿಲ್ಲೆಯಲ್ಲಿ ಯದೇ ಪ್ರತಿಭೆಗೆ ಹೆಚ್ಚಿನ ಅವಕಾಶಕೊಡಲು ಈ ಕಾರಣದಿಂದ ಸಾಧ್ಯವಾದುದರಿಂದ್ದ, ಈ ಅನಿರೀಕ್ಷಿತ ಪರಿಣಾಮವನ್ನು ನೋಡಿ ನಾವು ಸಂತೋಷಿಸುತ್ತೇವೆ. ಲೇಖಗಳನ್ನು ಆತ್ಮೆಂತ ಜಾಗ್ರತೆಯಿಂದ ಆರಿಸಿದ್ದೇವೆ. ಸಾಮಾನ್ಯ ಓದುಗನಿಗೆ ಶ್ರೀಷ್ಠ ವಠ ಣವು ಸಿಕ್ಕಬೇಕೆಂಬ ಧ್ಯೇಯವಸ್ಟಿಟ್ಟು ನಾವು ಲೇಖಗಳನ್ನು ಸಂಗ್ರಹಿಸಿದ್ದೇವೆ. ನಮ್ಮಿ ಧ್ಯೇಯವು ಸಾರ್ಥಕವಾದರೆ, ನಾವು ಧನ್ಯರೆಂದುಕೊಳ್ಳುವೆವು.

ಪತ್ರಿಕಾವೃವಸಾಯಕ್ಕೆ ಅತ್ಯಂತ ಸ್ಥಾಮುಖ್ಯತೆಯನ್ನು ಕೊಡಬೇಕಾಗಿಯೂ ನಮಗೆ ಆತುರವಿದ್ದಿತು. ಆದರೆ ಆ ಬಗೆ ನಮಗೆ ಧ್ಯೋಗ್ಯವಾದ ಸಹಕಾರ ಸಿಗಲಿಲ್ಲ. ಕರ್ನಾಟಕದ ಇಂದಿನ – ಹಿಂದಿನ ಪ್ರಮುಖ ಸಂಪಾದಕರುಗಳ ಸಚಿತ್ರ ಚಿಕ್ಕ ಚರಿತ್ರೆಗಳನ್ನು, ಈ ಸಂಚಿಕೆಯಲ್ಲಿ ಒಟ್ಟುಗೂಡಿಸಬೇಕಾಗಿಯೂ ನಮಗೆ ಮನಸ್ಸಿದ್ದಿತು. ಆದರೆ ಈ ಸಂಗ್ರಹವು ನಮ್ಮೆದುರಿದ್ದ ಚಿಕ್ಕ ಕಾಲದಲ್ಲಿ ಸಾಧ್ಯವೆಂದು ತೋರಲಿಲ್ಲ; ಸಾಧ್ಯಮಾಡುವವರೂ ನಮಗೆ ಸಿಗಲಿಲ್ಲ.

ಪತ್ರಿಕಾವೃವಸಾಯದಲ್ಲಿ ಇನ್ನೊಂದು ಮುಖ್ಯವಿಷಯವನ್ನು ಗಮನಿಸಬೇಕಾಗಿದೆ. ಲೇಖನವೆಂಬುದು ಬರೇ ಸರೋಪಕಾರದ ವೃತ್ತಿಯಾಗಿದೆ. ಅದಕ್ಕೆ ಪ್ರತಿಫಲವೇನೂ ಇಲ್ಲ—ಬೆಲೆಯಿಲ್ಲದ ಯಶಸ್ಸೊಂದು ಸಿಕ್ಕಿತೋ ಏನೋ!— ಆದುದರಿಂದ ಉಚ್ಚತರಗತಿಯ ಲೇಖಗಳನ್ನು ಬರೇ ಸ್ನೇಹದ ವಕ್ಕಾಯದಿಂದಲಂ, ವಾಕ್ಚಣ್ಯದ ಮೂಲಕವೂ ಹೊಂದ ಬೇಕಾಗುತ್ತದೆ. ಸಹಜವಾಗಿ ಈ ಪರಿಸ್ಥಿತಿಯಲ್ಲಿ ಶ್ರೀಷ್ಠ ಲೇಖಗಳ ಸಂಗ್ರಹವು ಸುಲಭವಾಗಿಲ್ಲ. ಸ್ವಂತ ವೃತ್ತಿಯ ಕಾರ್ಯ ಬಾಹುಳ್ಯದಲ್ಲಿ ಲೇಖಕರಿಗೆ ಲೇಖನವೂ ಸುಲಭವಾಗುವುದಿಲ್ಲ. ಹಾಗೆಂದು ಪ್ರಕಟನಾಕರ್ತರಿಗೆ ಪತ್ರಿಕೆಯ ನಿತ್ಯದ ಖರ್ಚನ್ನು ವಹಿಸಲಿಕ್ಕೆ ಕಷ್ಟವಾಗುವಾಗ ಲೇಖನ ಪ್ರತಿಫಲವು ಕೊಡುವುದು ಅಸಾಧ್ಯವಾಗುತ್ತದೆ. ಈ ಕಾರಣದಿಂದಲೂ ಪತ್ರಿಕಾ ವೃವಸಾಯವು ಬಹಳ ಕೊಡಕಿಗೆ ಬಿದ್ದಿರುತ್ತದೆ.

ಈ ಸಂಚಿಕೆಯ ಸಂಪಾದಕರು ಬರೇ ಪ್ರಶಂಸೆಯನ್ನು ಕೇಳುವುದರಲ್ಲಿ ಉತ್ಸಾಹಿತರಲ್ಲ. ವಿಮರ್ಶೆ ಮಾಡಲಿಚ್ಛಿಸುವ 'ಪತ್ರಿಕೆಗಳು 'ಅಚ್ಚು ಮೆಚ್ಚಾಗಿದೆ' ಇತ್ಯಾದಿ ಟೀಕೆಗಳಿಂದ ಮುಗಿಸದೆ ನಿರ್ದಾಕ್ಷಿಣ್ಯ ವಿಮರ್ಶೆಯನ್ನು ಮಾಡಿ ಇಂತಹ ವಿಶೇಷ ಸಂಚಿಕೆಗಳು ಇನ್ನು ಪ್ರಕಟವಾಗುವಾಗ ಯಾವ ಸುಧಾರಣೆಯನ್ನು ಮಾಡಬಹುದು ಎಂಬುದನ್ನು ಸೂಚಿಸಬೇಕಾಗಿ ಪ್ರಾರ್ಥಿಸುತ್ತೇವೆ. ಈ ಸಂದರ್ಭದಲ್ಲಿ ಈ ಸಂಚಿಕೆಯ ಆಕಾರದ ವಿಷಯದಲ್ಲಿ ಒಂದು ಸೂಚನೆಯನ್ನು ಹೇಳಲಿಚ್ಛಿಸುವೆವು. ಇದನ್ನು ಸಜ್ಜಿ ಪುಸ್ತಕಗಳ ರೂಪದಲ್ಲಿ; ಮುಖ್ಯವಾಗಿ ಕ್ರೌನ್ ೪ ಆಕಾರದಲ್ಲಿ ಪ್ರಕಟನಾಗ ಬೇಕೆಂದು ಹಲವು ಸ್ನೇಹಿತರ ಸೂಚನೆಯಿತ್ತು. ಆದರೆ ಒಂದು ವಾರಪತ್ರಿಕೆಯು ತನ್ನದಾಗಿ ಯಾವಾಗ ಒಂದು ಸಂಚಿಕೆಯನ್ನು ಹೊರಡಿಸುವುದೋ, ಆ ಸಂಚಿಕೆಯ ಆಕಾರವು ಆ ಪತ್ರಿಕೆಯದೇ ಆಗಿ ಅದನ್ನು ಆ ಸಂಚಿಕೆಯು ಪ್ರತಿನಿಧಿಸಬೇಕಾಗಿ ನಮ್ಮ ಅಭಿಪ್ರಾಯವಿದ್ದುದರಿಂದ ನಮ್ಮ ಸ್ನೇಹಿತರ ಮಾತನ್ನು ವಿಾರಿ ಈ ಆಕಾರವನ್ನು ನಾವು ಸಿಕ್ಕಿಯಿಸಿದೆವು. ಈ ಆಕಾರದಲ್ಲಿ ಈ ಸಂಚಿಕೆಯು ಕೋಧಿಸುತ್ತದೋ, ಇಲ್ಲವೋ? ಎಂದು ಹೇಳುವುದು ವಿಮರ್ಶಕರ ಕೆಲಸವಾಗಿದೆ.

ಕಡೆಯದಾಗಿ, ಉತ್ತಮ ಕತೆಗೆ ಪುಸ್ತಕ ರೂಪದ ಅದೇ ಕತೆಯ ಏಳತ್ತು ಪ್ರತಿಗಳನ್ನು, ಉತ್ತಮ ವ್ಯಂಗ ಚಿತ್ರಕ್ಕೆ ಒಂದು ಬೆಳ್ಳಿಯ ಪದಕವನ್ನೂ ಕೊಡುವೆವಾಗಿ ನಾವು ಮಾತು ಕೊಟ್ಟಿದ್ದೆವು. ಅದರಂತೆ ಕತೆಯಲ್ಲಿ ಶ್ರೀ। ಅ. ನ. ಕೃಷ್ಣ ರಾಯರ 'ಶ್ಯಾಮೋತ್ಸವ' ಎಂಬ ಕತೆಯು ನಮಗೆ ಉತ್ತಮವಾಗಿ ಕಂಡುಬಂದುದರಿಂದ, "ಶ್ಯಾಮೋತ್ಸವ"ವನ್ನು ಪುಸ್ತಕ ರೂಪವಾಗಿ ಏಳತ್ತು ಪ್ರತಿಗಳನ್ನು ಮುದ್ರಿಸಿ ಅವರಿಗೆ ಕೊಡುವರಿಯುವೆವು. ವ್ಯಂಗ ಚಿತ್ರಗಳ ಸ್ಪರ್ಧೆಗೆ ಏಂಟು–ಹತ್ತು ಚಿತ್ರಕಾರರಿಂದ ಚಿತ್ರಗಳು ಬಂದಿದ್ದರೂ, ನಾವು ಪ್ರಕಟ ಮಾಡಿದ ಎರಡು ಚಿತ್ರಗಳ ಹೊರತು ಬೇರೆಯವು ಪ್ರಕಟಿಸಲ್ಪಡುವಷ್ಟು ಕೂಡ ಉರ್ಜವಾಗಿಲ್ಲವೆಂದು ತಿಳಿಸಲು ವಿಷಾದಿಸುವೆವು. ೫೫ ಮತ್ತು ಇಲನೇ ಪುಠಗಳಲ್ಲಿ ಪ್ರಕಟವಾದ ಎರಡು ಚಿತ್ರಗಳು ಎಲ್ಲವುಗಳಿಗಿಂತಲೂ ಉತ್ತಮವಿದ್ದುದೆಂಬ ವಿಷಯ, ಇವುಗಳ ಬಗ್ಗೆ ಬೆಳ್ಳಿಯ ಪದಕವೊಂದನ್ನು

ನಮ್ಮ ಇಪ್ಪತ್ತೈದು ವರ್ಷಗಳು.

ಸ್ವದೇಶಾಭಿಮಾನಿಯು ಇಂದಿಗೆ ೨೫ ವರ್ಷ ವಯಸ್ಸಿನ ಪ್ರೌಢೆ. ಪತ್ರಿಕಾ ವೃವಸಾಯದಲ್ಲಿ ೨೫ ವರ್ಷಗಳು ತೀರ ದೊಡ್ಡ ಸಮಯವಲ್ಲ. ಆದರೆ ಕರ್ನಾಟಕ ಪತ್ರಿಕಾ ವೃವಸಾಯದಲ್ಲಿ ಇದು ದೊಡ್ಡದೇ ಸರಿ. ಕರ್ನಾಟಕದಲ್ಲಿ ಪತ್ರಿಕಾ ಜನನಗಳಿಗೆ ಕಡಿಮೆಯಿರುವುದಿಲ್ಲ. ಆದರೆ ಬಾಳುವವುಗಳೆಷ್ಟು? ಎಂಬುದೇ ಪ್ರಶ್ನೆ. ಸ್ವದೇಶಾಭಿಮಾನಿಯು ಎಷ್ಟು ತೊಡಕುಸಂಕಷ್ಟಗಳನ್ನನುಭವಿಸಿದರೂ ನಿರಾತಂಕವಾಗಿ ಸಮುಯಕ್ಕೆ ಸರಿಯಾಗಿ ಪ್ರಕಟಗೊಂದಿರುವಳು. ೨೫ ವರ್ಷ ವಯಸ್ಸಿನ ಹೆಗ್ಗಳಿಕೆಯನ್ನು ತೋರಿಸಬಲ್ಲ ಕರ್ನಾಟಕ ಪತ್ರಿಕೆಗಳು ಕೇವಲ ಕೆಲವೇ. ಆ ಕೆಲವುಗಳಲ್ಲಿ ಸ್ವದೇಶಾಭಿಮಾನಿಯೊಬ್ಬಳು. ಅದೇ ಅವಳ ಅಭಿಮಾನದ ಕಾರಣ; ಮತ್ತು ಇಂದಿನ ರಜತೋತ್ಸವದ ಆಚರಣೆಯ ಕಾರಣವು ಈ ಅಭಿಮಾನ.

, ಆದುದರಿಂದಲೇ ಈ ತನ್ನ ಧೃಢಾವಸ್ಥೆಯಲ್ಲಿ ಅವಳು ತನ್ನ ದೃಷ್ಟಿಯನ್ನು ಕಳೆದು ಹೋದ ೨೫ ವರ್ಷಗಳ ಮೇಲೆ ವಿಸ್ತರಿಸುವಳು. ಆ ೨೫ ವರ್ಷಗಳಲ್ಲಿ ಎಲ್ಲವೂ ಸುಸೂತ್ರವೂ, ಆದರ್ಶಾತ್ಮಕವೂ ಇತ್ತೆಂದಲ್ಲ. ತಪ್ಪು ಹೆಜ್ಜೆಯನ್ನಿಡದ ಮನುಷ್ಯ ಸಡಿಯ ಕಲಿತರೆ ಅದರಲ್ಲಿ ಸಂತೋಷವಿರಲಾರದು; ಹುಡುಗನು ತನ್ನ ಶಿಕ್ಷಣದಲ್ಲಿ ತಪ್ಪುಗಳನ್ನು ಮಾಡದಿದ್ದರೆ ಆ ಶಿಕ್ಷಣದಲ್ಲಿ ಧೈರ್ಯತೆಯು ಇರಲಾರದು; ಭುವನಿಯು ತಪ್ಪುಗಳನ್ನು ಮಾಡದೆ ಅನುಭವವನ್ನು ಪಡೆಯಲಾರನು; ಜೀವನವೊಂದು ತಪ್ಪು–ತಿದ್ದುಪಡಿಗಳ ದೀರ್ಘ ವಾದೊಂದು ಮಾಲೆ; ಅಧ್ಯಯನ ಅಧ್ಯಾಪಕತನದ ಸುಂದರ ವಾದೊಂದು ರಚನೆ. ಇಂದಿನ ಅಭಿಮಾನದ ಮುಹೂರ್ತದಲ್ಲಿ ಸ್ವದೇಶಾಭಿಮಾನಿಯು ಇವನ್ನೂ ಲಕ್ಷಿಸುವಳು.

೧೯೫೯ನೇ ಇಸವಿಯ ವಿಕ್ಟೋರಿಯಾ ಮಹಾ ರಾಣಿಯವರ ಜಾಹೀರುನಾಮೆಯ ನಂತರ ಹಿಂದೀಯರು ತಮ್ಮ ರಾಜಕೀಯ ಹಕ್ಕು ಹೊಣೆಗಳ ಕಡೆಗೆ ಹೆಚ್ಚೆಚ್ಚಾಗಿ ಲಕ್ಷ್ಯವನ್ನು ಕೊಡುವನರಾದರು. ಅನಂತರ ೧೯೦೪ರಲ್ಲಿ ಯುನಿವರ್ಸಿಟಿ ಆಕ್ಟು ಎಂಬುದೊಂದು ವಿದ್ಯಾಸಂಬಂಧವಾದ ಕಾಯಿದೆಯು ಸುಂಜೂರಾಯಿತು. ೧೯೦೫ರಲ್ಲಿ ವಂಗ ವಿಭಜನೆಯಾಯಿತು. ಆದರ ದೆಸೆಯಿಂದ ಹಿಂದೂಸ್ಥಾನದ ರಾಜಕೀಯ ವಾತಾವರಣವು ಆಲ್ಲೋಲ ಕಲ್ಲೋಲ ವಾಯಿತು. ಬಂಗಾಳದಲ್ಲಿ ಹಿಂಸಾಮಯ ವಿಪ್ಲವವೂ ತೀವ್ರ ಸ್ವದೇಶಿ ಚಳವಳಿಯೂ ಆರಂಭವಾಯಿತು. ಲಾಲಾ ಲಜಪತ ರಾಯರಿಗೆ ತುರಂಗವಾಸವು ಪ್ರಾಪ್ತವಾಯಿತು. ರಾಜದ್ರೋಹನನ್ನಣಿಗಿಸಲು ಅನೇಕಾನೇಕ ಹೊಸ ಕಾಯಿದೆಗಳು ನುಂಜೂರಾದುವು. ದೇಶೀಯ ಪತ್ರಿಕೆಗಳು ಈ ವಿಪ್ಲವಕ್ಕೆ ಪ್ರೋತ್ಸಾಹನ್ನೀಯುತ್ತವೆಂಬ ಆರೋಪಣೆಗಳಿಗೊಳಗಾಗಿ "ಪ್ರೆಸ್ ಆಕ್ಟು" ಎಂಬ ಪತ್ರಿಕಾ ಶಾಸನವು ಜಾರಿಗೆ ಬಂತು.

ಆ ಕಾಲದ ಆರ್ಥಿಕ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಯೂ ದೋಷಮಯವಾಗಿತ್ತು. ಅಸ್ಪೃಶ್ಯತೆ, ಬಾಲ ವಿವಾಹ ಮೊದಲಾದ ಅಂಧಾಚಾರಗಳ ದೆಸೆಯಿಂದ ಹಿಂದೂ ಸಮಾಜವು ಅತಿ ಹೀನಾವಸ್ಥೆಯನ್ನು ಪಡೆದಿತ್ತು. ಕ್ರೈಸ್ತ ಪಾದ್ರಿಗಳೂ, ಮಹಮ್ಮದೀಯರೂ ಇದೇ ಸಮಯವೆಂದು

ಚಿತ್ರಕಾರರಾದ ಶ್ರೀ। ಉಮೇಶರಾಯರಿಗೆ ಕೊಡುವನರಿರುವೆವು. ವ್ಯಂಗಚಿತ್ರಲೇಖನವು ಸುಲಭವಿಲ್ಲ. ನಮ್ಮ ಚಿತ್ರಗಾರ ಯುವಕರೆಲ್ಲರೂ ಇದನ್ನು ಕಲಿಯುವುದು ಒಳ್ಳೆಯದು.

ಈ ಸಂಚಿಕೆಯಲ್ಲಿ ಕಂಡುಬರುವ ಲೇಖಕರ ಸಹಕಾರವಲ್ಲದಿದ್ದರೆ ಈ ಸಂಚಿಕೆಯು ರಚನೆಯು ಅಸಾಧ್ಯವೇ ಸರಿ. ಆ ಬಗ್ಗೆ ಅವರ ನಿಸ್ಸಾರ್ಥಸಹಕಾರಕ್ಕಾಗಿ ನಾವು ಅತ್ಯಂತ ಕೃತಜ್ಞರಿರುವೆವು

ಈ ಸಂಚಿಕೆಯ ಮುದ್ರಣದಲ್ಲಿ, ವಿಷಯಚೋಡಣೆಯಲ್ಲಿ, ಮತ್ತಿನ್ನೂ ಹಲವು ತರದಲ್ಲಿ ದೋಷವಿದೆಯೆಂಬುದನ್ನು ನಾವು ತಿಳಿದಿರುವೆವು. ಕರ್ನಾಟಕ ಮುದ್ರಾಶಾಲೆಗಳ ಮತ್ತು ಪತ್ರಿಕಾ ವೃವಸಾಯದ ವೃದಸ್ಥಿಗಳ ಪರಿಸ್ಥಿತಿಯು ಬಹಳ ತೋಡನೀಯವಿರುತ್ತದೆ. ಈ ಸರ್ವಸಾಮಾನ್ಯ ಕಾರಣದಿಂದ ಈ ಸಂಚಿಕೆಯಲ್ಲಿ ದೋಷಗಳಿರುವುವಾದರೆ ಓದುಗರು ಕ್ರಮಿಸಬೇಕೆಂದೂ, ಈ ನಮ್ಮ ಚಿಕ್ಕ ಉಪಪ್ರಯತ್ನವನ್ನು ಆದರದಿಂದ ಸ್ವೀಕರಿಸಬೇಕೆಂದೂ ಎಲ್ಲ ರನ್ನೂ ಪ್ರಾರ್ಥಿಸುವೆವು.

ಗಿಸಿ ಅತ್ಯಕ್ತಿ ಹೊಂದಿದ ಹಿಂದೂಗಳನ್ನು ಮಿಷಂತರಗೊಸುವ ಕಾರ್ಯದಲ್ಲಿ ಪ್ರವೃತ್ತರಾಗಿದ್ದರು. ಆಗಿನ ಬೇಸಾಯ ವೃವಸಾಯ ಕ್ರಮಗಳು ಕತಮಾನಗಳ ಸಾಂಪ್ರದಾಯಗಳನ್ನೇ ಅನುಸರಿಸಿ ಲೋಕದಲ್ಲಿ ಕೋಧಿಸಲ್ಪಡುತ್ತಿದ್ದ ನೂತನ ರೀತಿ ಮತಗಳ ಆಕ್ರಮಣದಲ್ಲಿದ್ದುವು. ಕೆಲವು ಕೈಗಾರಿಕೆಗಳು ಕೇವಲ ಕ್ಷೀಣಾವಸ್ಥೆಯಲ್ಲಿದ್ದುವು. ಕರ್ನಾಟಕ ಸಾಹಿತ್ಯವೂ ಕಲಿಯೂ ನಿದ್ರಾಪರವಶವಾಗಿತ್ತು. ಸಾಮುದಾಯಿಕ ಅರೋಗ್ಯವು ನೆಟ್ಟಗಾಗಿರದೆಜನರು ಪ್ಲೇಗು, ಸಿಡುಬು, ವಾಂತಿಭೇದಿ, ಬೊಧರಾದ ಸಾಂಕ್ರಾಮಿಕ ರೋಗಗಳಿಗೆ ಸಾವಿರಗಟ್ಟಲೆಯಲ್ಲಿ ತುತ್ತಾಗುತ್ತಿದ್ದರು. ದೇಶೀಯ ಪತ್ರಿಕೆಗಳು ಬಹು ವಿರಳವಾಗಿದ್ದವು. ಅದರಲ್ಲಿಯೂ ಕನ್ನಡ ಪತ್ರಿಕೆಗಳು ಬಹು ಅಪರೂಪ. ಯಾವುದೇ ದೃಷ್ಟಿಯಿಂದ ನೋಡಿದರೂ ಆ ಸಮಯವು ಬಹು ಸಂದಿಗ್ಧವೂ ತಮೋಮಯವೂ ಆಗಿತ್ತು.

ಇಂಥಾ ಸಂದಿಗ್ಧ ಸಮಯದ ಅಜ್ಞಾನಮಯ ವಾತಾವರಣದಲ್ಲಿ ಕನ್ನಡಿಗರಿಗೆ, ಸರಿಯಾದ ಅನ್ಯದೇಶ ಒಳದೇಶ ವರ್ತಮಾನವನ್ನಿಯಬೇಕು; ರಾಜಕೀಯ ಆರ್ಥಿಕ ಮತ್ತು ಸಾಂಪತ್ತಿಕ ವಿಷಯಗಳಲ್ಲಿ ಯೋಗ್ಯವಾದ ಸೂಚನೆಗಳನ್ನೀಯಬೇಕು; ಎಂಬ ದೇಶಾಭಿಮಾನದಿಂದ ಸ್ವದೇಶಾಭಿಮಾನಿಯು ೧೯೦೬ನೇ ಇಸವಿಯ ಜನವರಿ ೧೯ರಲ್ಲು ಕರ್ನಾಟಕ ರಂಗಭೂಮಿಗೆ ಪಾಕ್ಷಿಕ ಪತ್ರಿಕೆಯಾಗಿ ಕಾಲಿಟ್ಟಳು. ಸ್ವದೇಶಾಭಿಮಾನಿಯು ಮೊದಲಿನ ಪ್ರತಿಯು ಕ್ರೌನ್ ಸೈಜಿನಲ್ಲಿ ೮ ಪುಠಗಳನ್ನೊಳಗೊಂಡಿತ್ತು. ಆದರೆ ಕ್ರಮೇಣ ಕನ್ನಡಿಗರ ಬೇಂಬಲವು ದೊರೆತುದರಿಂದ ಎರಡು ಮೂರು ತಿಂಗಳೊಳಗೆ ರೊಯಲ್ ಸ್ಯಾಜಿನ ೧೦ ಪುಟವನ್ನು ಅದು ಮಿರಿತಲ್ಲದೆ ಒಂದು ವರ್ಷದಲ್ಲಿ ವಾರಪತ್ರಿಕೆಯೂ ಆಗಿ ಪ್ರಕಟವಾಯಿತು.

ಏಕಾಗ್ರತೆಯೂ ನಿಶ್ಚಿಂತತೆಯೂ ಒಂದು ವ್ಯಕ್ತಿಗೆ ಹೇಗೆ ಆವಶ್ಯಕವೋ ಹಾಗೆಯೇ ಪತ್ರಿಕೆಗೂ ಆವಶ್ಯಕ. ಸ್ವಾರ್ಥದ ದೆಸೆಯಿಂದ ಒಬ್ಬ ವ್ಯಕ್ತಿಯು ತನ್ನ ಧೋರಣೆಯನ್ನು ಕಾಲ ಬಂದಂತೆ ಮಾರ್ಪಡಿಸುವದಾದರೆ, ಅತನ ಬೋಧೆಯು ನಿಸ್ಸಾರವಾಗುವದು. ಬರೇ ಅನುಭೂತಿಮಯವಾದ ಆವೇಶದಿಂದ ಕಾರ್ಯಸಾಧನೆಯು ಕೆಡುವುದು. ಸ್ವದೇಶಾಭಿಮಾನಿಯು ತನ್ನ ೨೫ ವರುಷದ ದೇಶಸೇವೆಯಲ್ಲಿ ಆಂಬಲತೆಯಿಂದಾಗಲಿ, ಕ್ಷಣಿಕವಾದ ಉತ್ತೇಜಿಕತೆಯಿಂದಾಗಲಿ ಒಂದು ಅಭಿಪ್ರಾಯದಿಂದ ಇನ್ನೊಂದು ಅಭಿಪ್ರಾಯಕ್ಕೆ ಸ್ಖೇಜ್ಯೆಯಂತೆ ಚಲಿಸದವಳಲ್ಲ. ಏಕಾಗ್ರತೆಯಿಂದಲೂ ನಿಶ್ಚಿಂತತೆಯಿಂದಲೂ ಕಾರ್ಯಪ್ರವಹಿಸಿ ತಾನು ಕಂಡ ದೋಷಗಳನ್ನು ಟೀಕೆ, ಟಪ್ಪಣಿ, ಅಗ್ರಲೇಖನ, ಸ್ಫುಟವಿಡಾರಗಳ ಮೂಲಕ ಬಯಲುಗೊಳಿಸಿ ಜನರಿಗೆ ಸರಿಯಾದ ಮಾರ್ಗವನ್ನು ಯಾವುದೆಂಬುದನ್ನು ಸೂಚಿಸಲು ಅವಳು ಸದಾ ಪ್ರಯತ್ನಿಸಿರುವಳು.

ಸ್ಥೈರ್ಯವೂ, ನಿಸ್ಪಕ್ಷಪಾತವೂ, ಮನೋವಿಕಾಸತೆಯೂ ಒಳ್ಳೆಯ ಪತ್ರಿಕೆಯು ಪ್ರಾಮುಖ್ಯ ಲಕ್ಷಣಗಳಾಗಿರುತ್ತವೆ. ಸ್ವದೇಶಾಭಿಮಾನಿಯ ಪ್ರಥಮ ಸಂಚಿಕೆಯು ಹೊರಬಿದ್ದ ಆ ಕಾಲದಲ್ಲಿ ಯಾವುದೇ ಬಾಹ್ಯ ವಿಷಯವಸ್ತುವು ಆಚಾರವನ್ನು ಅಥವಾ ಸಂಸ್ಥೆಯನ್ನು ಖಂಡಿಸುವುದು ಸುಲಭ ಕೆಲಸವಾಗಿರಲಿಲ್ಲ. ಸರಕಾರದ ಧೋರಣೆಯನ್ನು ಖಂಡಿಸುವುದು ಅಪಾಯಕರವಾಗಿದ್ದಿತು. ಅತ್ತ ಸೈಸಾಕ್ಷಿನ ಮತ್ತು ರಾಜದ್ರೋಹ ಖಟ್ಲೆಗಳ ಭೀತಿ, ಇತ್ತ ಮಾನಸಿಕ ಮೊಕದ್ದಮೆಗಳ ಭಯ ಈ ಉಭಯ ಸಂಕಷ್ಟಗಳಿಂದ ಪತ್ರಿಕೆಗಳು ನೀಡಿತವಾಗಿದ್ದುವು. ವಂಗವಿಭಜನೆಯ ರಣಕಹಳೆಯೊಡನೆಯೇ ಹೊರಬಿದ್ದ ಸ್ವದೇಶಾಭಿಮಾನಿಯು ಆಗಿನ ಆ ಚಳವಳಿಯ ಕಠಿಣತೆಯಲ್ಲಿ ನುಗ್ಗಿದುದು ಮಾತ್ರವಲ್ಲ. ಸಜವಾಗಿ ನೋಡಿದರೆ, ಆ ೧೯೦೬ನೇ ಇಸವಿಯಲ್ಲಿ ಜಾಗೃತಕಾಲ ಹಿಂದೀ ಆತ್ಮವು ದಿನದಿಂದ ದಿನಕ್ಕೆ ಬಲವಾಗಿ ಬೆಳೆದ ಕ್ಷತ್ರಿಯವಾದ ಸಮರದೊಳಗೆನೇ ಇಂದಿಗೂ ಇದೆ. ೧೯೧೧ನೇ ಇಸವಿಯ ದಶಂಬರಿನಲ್ಲಿ ವಂಗವಿಭಜನೆಯು ಪ್ರತಿಭೆಯು ತೀರಿದರೂ ಆ ಮೂಲಕ ಮೇಲೆದ್ದ ಸ್ವರಾಜ್ಯ ಚಳವಳದ ಬೀಜವು ಮೊಳಕೆಗೊಂಡು ಆ ಮೇಲೆ ಬೆಳೆಯುತ್ತ ಬಂದಿತು. ೧೯೧೩–೧೪ನೇ ಇಸವಿಯ ಶ್ರೀ ಅನ್ನಿಬಿಸೆಂಟಮ್ಮನವರ ತೇಜಸ್ವೀಧರ್ಮೋನ್ಮತಯ ಚಳವಳಿಯು, ಯುರೋಪಿಯ ಮಹಾಯುದ್ಧದ ಸಕಾರಣದಲ್ಲಿ ತಾತ್ಕಾಲಿಕವಾಗಿ ಪರ್ಯವಸಾನವನ್ನು ಹೊಂದಿತು.

ಆದರೆ ೧೯೧೯ನೇ ಇಸವಿಯ ಪ್ರೆಸಿಡೆಂಟ್ ವಿಲ್ಸನರ 'ಸ್ವಯಂ ನಿರ್ಣಯ' (Self determination) ತತ್ವವು ಇದೇ ಜಾಗಾಗನನ್ನು ಸಂಘರ್ಷಿಯಿಸುಂದಿತು. ೧೯೧೮ರ ನವಾಯುದ್ಧವಿರತಿಸ್ತಂಭಾಗ (Armistice) ನಿಂತು ಆ ಮೇಲೆ ಬಂದಮೆರಿಲ್ಲಿ ಸರಿಯಿವುಗಳ ಉಷ್ಣತೆ ತೀಯ ಮರುಹಾಸ್ಯದ [illegible]

ಅಂಚೆಯ ಸೌಲಭ್ಯವು ತೀರಾ ಅಪರೂಪವಾಗಿದ್ದ ಆ ಸಮಯದಲ್ಲಿ ಪತ್ರಿಕೆಗಳ ಪ್ರಸಾರ ಕಷ್ಟಕರವಾಗಿತ್ತು. ಸಾಮಾನ್ಯವಾಗಿ ಪ್ರತಿಯೊಂದು ಪತ್ರಿಕೆಯೂ ಒಂದು ಸಣ್ಣ ವ್ಯಾಪಾರವಾಗಿರುತ್ತಿತ್ತು. ಅಚ್ಚಿನ ಕೆಲಸ, ಪತ್ರಿಕೆಗಳ ಮಾರಾಟ, ಚಂದಾ ವಸೂಲಿ ಎಲ್ಲವನ್ನೂ ಒಬ್ಬನೇ ಮಾಡಬೇಕಾಗಿತ್ತು. ಪತ್ರಿಕೆಗಳ ಪ್ರಸಾರ ಸಂಖ್ಯೆ ಸಾವಿರದ ಗಡಿಯನ್ನು ದಾಟುವುದೇ ಅಪರೂಪವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಪತ್ರಿಕೆಯನ್ನು ಹೊರತರುವುದು ಸಾಹಸವೇ ಸರಿ. ಆದರೆ ಅಂಥ ಸಾಹಸಕ್ಕೆ ಕೈಹಾಕಿದ ಅನೇಕ ಮುದ್ರಣಾಲಯಗಳು ಸರಕಾರದ ವಕ್ರದೃಷ್ಟಿಗೆ ಗುರಿಯಾಗಿ ಮುಚ್ಚಿಹೋಗಿದ್ದವು. ಇನ್ನು ಕೆಲವು ಪತ್ರಿಕೆಗಳು ಪತ್ರಿಕಾಶಾಸನಕ್ಕೆ ಸಿಕ್ಕಿಬಿದ್ದು ಸರಕಾರದ ವಿರೋಧ ರೂಪವಾಗಿ ಅಗ್ರಲೇಖನ ಬರೆಯುವುದನ್ನು ನಿಲ್ಲಿಸಬೇಕಾಯಿತು. ಈ ಕಠಿಣ ಸಮಯದಲ್ಲಿಯೂ ಸ್ವದೇಶಾಭಿಮಾನಿಯು ಸ್ವತಂತ್ರ ಬುದ್ಧಿಯಿಂದ ರಾಷ್ಟ್ರದ ಕರೆಯನ್ನು ಮನಸಾ ಜನತೆಯ ಕಡೆಗಿನ ತನ್ನ ಕರ್ತವ್ಯವನ್ನು ನಿಭಾಯಿಸಿದ್ದೇ ವಿಶೇಷವಾಗಿದೆ.

ಮೇಲಿನ ೫೦ ವರ್ಷಗಳ ರಾಜಕೀಯ ಇತಿಹಾಸವೇ ಸ್ವದೇಶಾಭಿಮಾನಿಯ ಇತಿಹಾಸವಾಗಿದೆ. ಏಕೆಂದರೆ, ಮುಖ್ಯತಃ ಸ್ವದೇಶಾಭಿಮಾನಿಯು, ಅವಳ ಹೆಸರಿನಲ್ಲಿಗೇನೇ ಗರ್ಭಕೋಸಲ್ಲಟ್ಟ ಉದ್ದೇಶಕ್ಕನುಸಾರವಾಗಿ ರಾಜಕೀಯ ಪತ್ರಿಕೆಯು – ರಾಷ್ಟ್ರೀಯ ಪತ್ರಿಕೆಯು: ದೇಶದ ರಾಜಕೀಯ ಇತಿಹಾಸದ ಏರಿಳಿತಗಳೊಡನೆ ಅವಳಿಗೆ ಅತ್ಯಂತ ಹತ್ತಿರದ ಸಂಬಂಧವಿದೆ.

ಆದರೆ ಸ್ವದೇಶಾಭಿಮಾನಿಯು ರಾಜಕೀಯ ಮಾತ್ರವಲ್ಲ; ಆಗಿನ-ಈಗಿನ ಸಮಾಜದ ಯಾವತ್ತೂ ಆವಶ್ಯಕತೆಗಳಿಗಾಗಿ ಹೆಣಗಾಡಿದೆ. ಹಾಗೆಂದು ಯಾವುದೋ ಸಂಸ್ಥೆಯನ್ನಾಗಲಿ ಆಚಾರ, ಕಟ್ಟು, ಕಟ್ಟಳೆಗಳನ್ನಾಗಲಿ ತೀವ್ರವಾಗಿ ಖಂಡಿಸಿದ ಮಾತ್ರದಿಂದ ಪತ್ರಿಕೆಯು ಕೆಲಸವು ಅವ್ಯವಸ್ಥೆಗೀಡಾಯಿತೆಂದು ಹೇಳಲಾಗದು. ಪತ್ರಿಕೆಯು ದೂರದೃಷ್ಟಿಯಿಂದಲೂ, ಹಿಂದಿನ ಚರಿತ್ರೆಯ ಅವರ್ಶದಿಂದಲೂ, ಸುತ್ತಮುತ್ತಲೂ ನಡೆಯುವ ವಿದ್ಯಮಾನಗಳ ಆಧಾರದಿಂದಲೂ ಪ್ರಕೃತದ ವಿಚಾರಗಳನ್ನು ಅಭಿನಿಕ ಮತ್ತು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಿ ಟೀಕಿಸಿದರೆ ಸಾಲದು; ಸಮುದಾಯಿಕ ಅಭಿವ್ಯಾಯವನ್ನು ಸಂಗ್ರಹಿಸಿದರೆ ಸಾಲದು. ಪತ್ರಿಕೆಯು ರಾಜಕೀಯ, ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಮಾರ್ಗದರ್ಶಕವಾಗಿರಬೇಕು. ಸಂಘಶಕ್ತಿಯನ್ನು ವೃದ್ಧಿಗೊರಿಸಬೇಕು. ವಿಧಾಯಕ ಕಾರ್ಯಗಳಲ್ಲಿ ಯೋಗ್ಯವಾದ ಸೂಚನೆಗಳಿಸ್ಪೆಯಬೇಕು. ವ್ಯಜೆಗಳೊಳಗೆ ಏಕ್ಯತೆಯನ್ನು ಸಾಧಿಸಬೇಕು. ಸ್ವದೇಶಾಭಿಮಾನಿಯು ಈ ದೃಷ್ಟಿಯಿಂದಲೂ ತನ್ನ ಕಾರ್ಯವನ್ನು ನೆರವೇರಿಸಿರುವಳು. ಅನಳು ಸಂಕುಚಿತ ಜಾತೀಯ ಭಾವನೆಗಳಿಗೆ ಬಲಬೀಳದೆ ಸಮಾಜಕ್ಯೆಯಾವುದು ಹಿತವೆಂದು ಅವಳಿಗೆ ತೋರಿತೋ ಆ ವಿಷಯಗಳ ಬಗ್ಗೆ ಅವಳು ಪುಟ್ಟಿಕರಣವನ್ನು ಕೊಟ್ಟಿರುವಳು.

ಒಂದು ವಿಷಯವನ್ನು ಮಾತ್ರ ನಾವಿಲ್ಲಿ ಒತ್ತಿ ಹೇಳಬೇಕಾಗುತ್ತದೆ. ಸ್ವದೇಶಾಭಿಮಾನಿಯ ಬಹು ಸಂಘಿಗ್ಧತೆಯ ಸಮಯದಲ್ಲಿ ಕರ್ನಾಟಕ ಪತ್ರಿಕಾ ಜಗತ್ತಿನಲ್ಲಿ ಕಾಲಿಟ್ಟಿದ್ದರೂ, ಆ ಕಾಲದಲ್ಲಿ ಸಕಾರಣವಾದ ಭಿನ್ನಾಭಿಪ್ರಾಯ ಭೇದಗಳಿಗೆ ಮನ್ನಣೆಯಿದ್ದಿಲ್ಲವಾದರೂ, ಆ ಕಾಲದ ಜನರು ಅಂಧಾಚಾರಗಳಿಗೆ ಗುಲಾಮರಾಗಿದ್ದುದರಿಂದ ಯಾವುದೇ ಹೊಸ ಸೂಚನೆಗಳನ್ನು ವಿಚಾರಿಸುವದೆ ತೀಕ್ಷ್ಣವಾಗಿ ಖಂಡಿಸುವ ಸಂಕುಚಿತ ಮನೋವೃತ್ತಿಯುಳ್ಳವರಾಗಿದ್ದರೂ, ಸ್ವದೇಶಾಭಿಮಾನಿಯು ದೂರದೃಷ್ಟಿಯಿಂದ ಮುಂದಿನ ವಿಚಾರಗಳನ್ನು ಹಿಂದೆಯೇ ನೋಡಿ ಹಿಂದೂ ಮುಸಲ್ಮಾನ ಐಕ್ಯತೆ, ಪ್ರಜಾಸತ್ತಾತ್ಮಕ ಸರಕಾರ, ಸ್ವದೇಶಿ ಮತ್ತು ಸ್ವರಾಜ್ಯ ಮೊದಲಾದ ರಾಜಕೀಯ ವಿಷಯಗಳಲ್ಲಿಯೂ ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ವಿಧವಾ ವಿವಾಹ, ಹಿಂದೂ ಸಮಾಜ ಸುಧಾರಣೆ ಮೊದಲಾದ ಸಾಮಾಜಿಕ ವಿಷಯಗಳಲ್ಲಿಯೂ, ಸ್ತ್ರೀ ವಿದ್ಯಾಭ್ಯಾಸ, ಕೈಗಾರಿಕೆ ಮತ್ತು ಸಾಮುದಾಯಿಕ ಶಿಕ್ಷಣ, ಶಿಕ್ಷೋಗಿಕ, ವ್ಯವಸಾಯಿಕ ಮತ್ತು ಕಲಾಸಾಹಿತ್ಯ ಶಿಕ್ಷಣ ಮೊದಲಾದ ವಿದ್ಯಾ ವಿಷಯಗಳಲ್ಲಿಯೂ, ಸಹಕಾರ, ಸ್ವದೇಶಿ, ಸ್ವಸಾಯಶಿಕ್ಷಿದ್ಧಿ, ಮತ್ತು ಸಾರ್ವಜನಿಕ ಆರೋಗ್ಯ ಮೊದಲಾದ ಆರೋಗ್ಯ ಮತ್ತು ಸಾಂಪತ್ತಿಕ ವಿಷಯಗಳಲ್ಲಿಯೂ ಅತ್ಯಾಧುನಿಕ ಅಭಿಪ್ರಾಯಗಳನ್ನೂ ಸೂಚನೆಗಳನ್ನೂ ಕೊಟ್ಟಿರುವಳು.

ಆದರೆ ಸ್ವದೇಶಾಭಿಮಾನಿಯು ಮಾಡಹೊಟ್ಟದೆಲ್ಲವನ್ನೂ ಸಮಾಜವೆಂಬ ಜೀವಿಯು ಸಾಹಸವೆಂದು ಹಾಡಿ ಹೊಗಳಿತೆಂದು ಹೇಳಲಾಗದು. ಪತ್ರಿಕೆಗಳ ಕಾರ್ಯಕ್ಷೇತ್ರದಲ್ಲಿ ಅಪ್ರಿಯವಿದ್ದೇ ಇರುವುದು ಸಹಜವು ಗಮನಿಸಿತಕ್ಕದ್ದು. ಸಮಯಾನುಸಾರವಾಗಿ ಒಂದಲ್ಲ ಒಮ್ಮೆ ಅವರಿಗೆ ಸ್ವದೇಶಾಭಿಮಾನಿಯು ಸಾಧಿಸಿದಳು; ಸಾಧಿಸಬೇಕಾದುದು ಎಷ್ಟೋ ಇದೆ; ಆಕೆಯನ್ನು ಅವಳು ಮನಸಾರೆ ಹರಸುವಳು.

ಪತ್ರಿಕೆಗೆ ಸ್ವತಂತ್ರ ಅಸ್ತಿತ್ವವೆಂಬುದಿರುವುದೆಲ್ಲಿ? ಯಾವ ಸೇವೆಯನ್ನು ಪತ್ರಿಕೆಯು ಉದ್ದೇಶಿಸುವುದೋ ಅವರೆಲ್ಲರ ಸಹಕಾರವು ಅದಕ್ಕೆ ಅಗತ್ಯವಾಗಿ ಬೇಕು. ಓದುಗರ ಸಂಖ್ಯೆಯು ಬೆಳೆದಷ್ಟಕ್ಕೆ ಪತ್ರಿಕೆಯ ತಕ್ಕಯು ಹೆಚ್ಚುವುದು; ಅದು ಜನತೆಗೆ ಹೆಚ್ಚಿ ಉಪಕಾರಯೋಗವಲ್ಲದು; ರಾಷ್ಟ್ರ ನಿರ್ಮಾಣದಲ್ಲಿ ಅದು ಅಳಿಲ ಪ್ರಬಲ ಅಸ್ತ್ರವಾಗಿ ಪರಿಣಮಿಸಲುಬಲ್ಲದು. ಹಾಗೆಯೇ ಲೇಖಕರು ಉತ್ಸಾಹಪೂರ್ಣ ಲೇಖನಗಳನ್ನು ಬರೆದು ಓದುಗರ ಅಭಿಮಾನವನ್ನುಂಟುಮಾಡಬಹುದು; ಉತ್ತಮ ಮುದ್ರಣದಿಂದ ಪತ್ರಿಕೆಯು ಆಕರ್ಷಕವಾಗುವುದು; ಹೆಚ್ಚಿನ ಪ್ರಕಟಣೆಗಳಿಂದ ಪತ್ರಿಕೆಗೆ ಧನ ಬಲವು ದೊರೆಯುವುದು. ಇವೆಲ್ಲವೂ ಒಂದರಮೇಲೊಂದು ಹೊಂದಿರುತ್ತವೆ; ಒಂದು ಕೈಬಿಟ್ಟರೆ ಎಲ್ಲವೂ ಕೈಬಿಡುತ್ತವೆ.

ಸ್ವದೇಶಾಭಿಮಾನಿಯು ನಿಮ್ಮೆಲ್ಲರ ಸಹಕಾರವನ್ನು ಕೋರುವಳು. ನಿಮ್ಮೆಲ್ಲರ ಸಹಕಾರದಿಂದ ಸ್ವದೇಶಾಭಿಮಾನಿಯು ತನ್ನ ಸೇವೆಯ ಕಾರ್ಯಕ್ಷೇತ್ರವನ್ನು ವರ್ಷ ವರ್ಷವೂ ಅಭಿವರ್ಧಿಸಲು ಹಿಂದಿರಿಯಳೆಂಬುದನ್ನು ತನ್ನ ಓದುಗರಿಗೆ ಈ ತನ್ನ ಉತ್ಸವದ ಸಮಯದಲ್ಲಿ ಖಚಿತಪಡಿಸಲು ಆತುರಗೊಳ್ಳುವಳು.

ಹಿಂದಿನ ಕತೆ.

ಸ್ವದೇಶಾಭಿಮಾನಿಯು ಬರೇ ಒಂದು ಕಲ್ಪನೆಯಲ್ಲ; ಅದು ಆ ಕಾಲದ ಬರೇ ಉತ್ತೇಜಕತೆಯ ಫಲವೆ ಅಲ್ಲ; ಇಲ್ಲಿವೇ ಸಾಹಿತ್ಯದೊಳಗಿನ ಪ್ರಾವಿಣ್ಯತೆಯ ದರ್ಪವೂ ಅದಾಗಿರಲಿಲ್ಲ. ಅದು ಒಂದು ಸಂಸ್ಥೆಯಾಗಿರುತ್ತದೆ. ಅದು ಪ್ರಕಟಿತವಾಗುದು ೧೯೦೬ನೇ ಇಸವಿಯಲ್ಲಿ; ಆದರೆ ಅದರ ಪ್ರೇರಣೆಯು ಅದಕ್ಕಿಂತಲೂ ಎಷ್ಟೋ ಪೂರ್ವದ್ದಾಗಿದೆ. ಸ್ವದೇಶಾಭಿಮಾನಿಯ ಮೂಲವನ್ನು, ಅದಕ್ಕೆ ಆಧಾರವಾಗಿದ್ದ ಆದರ್ಶಗಳ ಸರಿಯಾದ ರೂಪವನ್ನು ಕಾಣಬೇಕಾದರೆ ನಮ್ಮ ದೃಷ್ಟಿಯನ್ನು ಸನ ೧೯೦೦ನೇ ಇಸವಿಯ ವರೆಗೆ ಹಿಂದೆ ಚಾಚಬೇಕು.

ಆ ಸಮಯದಲ್ಲಿ, ಈಗ ಕೈಲಾಸವಾಸಿಯಾಗಿರುವ ಉಪೇಂದ್ರ ಪೈಗಳು ಪ್ರತಿಭಾಸಂಪನ್ನ ವಕೀಲರಾಗಿ ತಮ್ಮ ವೃತ್ತಿಯಲ್ಲಿ ಹೆಸರು ಪಡೆದಿದ್ದರು. ಆದರೆ ವಕೀಲವೃತ್ತಿ ಗಿಂತಲೂ ಅವರ ಜೀವನದ ಧ್ಯೇಯವು ಎಷ್ಟೋ ಮಿಗಿಲಿದ್ದಿತು. ಮಂಗಳೂರಿನ ಪ್ರಮುಖ ಸಾಹುಕಾರರ ಪುತ್ರರಾಗಿದ್ದು, ಸೂಕ್ಷ್ಮ ವಿಚಾರಗಳಾಗಿದ್ದರೂ ಮಾತ್ರವಲ್ಲದೆ, ಸಮಾಜಸೇವೆಯೇ ತಮ್ಮ ಜೀವನದ ಮುಖ್ಯ ಧ್ಯೇಯವಾಗಿ ಮಾಡಿಟ್ಟುಕೊಂಡಿದ್ದರು. ಕೆನರಾ ಹೈಸ್ಕೂಲಿನ ಬೆಳವಣಿಗೆಯ ಬಗ್ಗೆ ಅವರು ವಿಶೇಷ ಕೆಲಸ ಮಾಡಿಕೊಂಡಿದ್ದು, ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯ ಪೈಗಳ ಬಲಗೈಯಂತಿದ್ದರು. ಶ್ರೀ ಉಪೇಂದ್ರ ಪೈಗಳ ಸ್ಮಾರಕವಾಗಿ ಅವರ ಭಾವ ಚಿತ್ರವು ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ ಪ್ರತಿಷ್ಠಿತವಿದ್ದುದೇ ಅವರ ಸಾರ್ವಜನಿಕ ಕಾರ್ಯದಕ್ಷತೆಯ ಸಾಕ್ಷ್ಯವಾಗಿರುತ್ತದೆ.

ಸನ್ ೧೯೦೦ರಲ್ಲಿ ಅವರು ಕೊಲೆಜ್ ವಿದ್ಯಾರ್ಥಿಗಳಲ್ಲಿ ಆರಿಸಲ್ಪಟ್ಟ ಕೆಲವರೊಡೆ ಹಿಂದು ಸಮಿತಿಯನ್ನು ವ್ಯವಸ್ಥೆಗೊಳಿಸಿದರು. ಈ ಸಮಿತಿಗೆ ಸಮಾಜ ಸೇವಾಪರವಾದ ಧರ್ಮಬೋಧೆಯನ್ನು ಅವರು ಮಾಡುತ್ತಿದ್ದರು; ಅಲ್ಲದೆ ಪಾಠಗಾರ್ಯೇತರ ವಿಚಾರಗಳಲ್ಲಿ ಅವರು ಹೆಚ್ಚಿನ ಉಸಾದೀತನವನ್ನು ತೊಟ್ಟು ವಿದ್ಯಾರ್ಥಿಗಳನ್ನು ಮುಂದಿನ ಜೀವನಕ್ಕೆ ತಯಾರಿಸುತ್ತಿದ್ದರು. ಆದರೆ ಈ ಸಮಾಜ ಸೇವೆಗೆ ಒಂದು ಮುದ್ರಣ ಶಾಲೆಯ ಆವಶ್ಯಕತೆಯು ಇದೆಯೆಂದು ದೂರದರ್ಶಿಗಳಾಗಿದ್ದ ಅವರು ತಿಳಿಕೊಂಡರಲ್ಲದೆ, ಇಂತಹ ಮುದ್ರಣ ಶಾಲೆಯನ್ನು ದೃಢವಾದ ವ್ಯವಹಾರ ರೂಪದಲ್ಲಿ ಸ್ಥಾಪಿಸಬೇಕಾಗಿ ಅವರು ನಿಶ್ಚಯಿಸಿದರು.

ಅದೇ ಸಮಯದಲ್ಲಿ ಎಸ್. ವೆಂಕಟಾಚಲಯ್ಯ ಎಂಬ ವರೊಡನೆ, ಕಾರಾಮುದ್ರಣಾಲಯವೆಂಬ ಹೆಸರಿನಿಂದ ಒಂದು ಕೈಛಾಪಾಯಂತ್ರವು, ಕೆಲವು ಮೊಳೆಗಳೂ ಮಷೀನಿಯಲ್ಲಿದ್ದುವು. ಈ ಮುದ್ರಣಾಯಂತ್ರವು ಶ್ರೀ ವೆಂಕಟಾಚಲಯ್ಯನವರ ಕೈಯಲ್ಲಿ ರಾಘವೇಂದ್ರರಾಯರಿದ್ದರೂ, ಆಗಿನ ವ್ಯವಹಾರ ಪರಿಚಿತಿಯಲ್ಲಿ ಮಂಗಳೂರಿನಲ್ಲಿ ಆ ಯಂತ್ರದ ಮೂಲಕ ಹೆಚ್ಚು ಕೆಲಸಗಳನ್ನು ಪೂರೈಸಬಹುದಾಗಿ ಶ್ರೀ ಉಪೇಂದ್ರ ಪೈಗಳು ತಿಳಿದರು. ಹಾಗೆಯೇ ಸನ ೧೯೦೭ನೇ ಇಸವಿಯಲ್ಲಿ ಆ ಕೈಛಾಪಾ ಯಂತ್ರವು ಅಪರಿಚಿತರಿಗೆ ಎಲ್ಲಾ ಸಾಮಾನುಗಳೊಡನೆ ಕ್ರಯಕ್ಕೆ ಸಿಕ್ಕಿಹೋಗಿತ್ತು.

ಆ ಮುದ್ರಣಾಲಯವು ಮೂಲತಃ ತನ್ನ ಧಾರಣಾಶಯ ಕ್ಷೇತ್ರವನ್ನು ಬೆಳೆಯಿಸಬೇಕಾಗಿ ಶ್ರೀ ಉಪೇಂದ್ರ ಪೈಗಳನ್ನು ಸೆಳೆದುಕೊಳ್ಳಿತು. ಅವರು ತನ್ನ ಕೆಲಸಗಳನ್ನು ಮುಂದರಿಸಲು ಹತ್ತಿರ ಬರಿಮಿರಿಕೊಂಡ ಕೆಲವೇ ವಿದ್ಯಾರ್ಥಿಗಳಲ್ಲಿ; ಸ್ವದೇಶಾಭಿಮಾನಿಯು ಸ್ಥಾಪಕರೂ, ಸಂಪಾದಕರೂ ಆಗಿರುವ ಶ್ರೀ ಶ್ರೀನಿವಾಸ ಕಲ್ಯುಯರು ಒಬ್ಬರಾಗಿದ್ದರು. ಆಗ ಚಿಕ್ಕ ವಯಸ್ಸಿನಲ್ಲಿದ್ದ ಇವರು ಆ ಸಮಯದಲ್ಲಿಯೇ ತಮ್ಮ ವಿದ್ಯಾಭ್ಯಾಸವನ್ನು ಅಪ್ಪರಿ ವಡಿಸಿದುದರಿಂದ ಶ್ರೀ ಉಪೇಂದ್ರ ಪೈಗಳ ಪ್ರೋತ್ಸಾಹದಿಂದ ಮುದ್ರಣಾಲಯದ ಕೆಲಸನ್ನು ವಹಿಸಿಕೊಂಡರು.

ಆದರೆ ದೂರದರ್ಶಿಗಳೂ, ಸಮಾಜ ಪ್ರೇಮಿಗಳೂ ದೇಶಸೇವಕರೂ, ಪ್ರತಿಭಾಶಾಲಿಗಳೂ ಆಗಿದ್ದ ಶ್ರೀ ಉಪೇಂದ್ರ ಪೈಗಳು ಹೆಚ್ಚುಕಾಲ ಭಾಳಲಿಲ್ಲ. ೧೯೦೯ನೇ ಇಸವಿಯ ದಕ್ಷಿಣಾಯನದ ಕಾರ್ತೀಕ ದಿನದೆ ಅವರು ಗತಿಯನ್ನೈದಿದ ಮಂಗಳೂರಿನ ಆಗಿನ ಪ್ರಮುಖ ಧುರೀಣರನ್ನು ಶೋಕ ಸಾಗರದಲ್ಲಿ ಮುಳುಗಿಸಿದರು.

ಅವರು ತಮ್ಮ ಸುತ್ತುಕೂಡಿಸಿದ ತರುಣವೃಂದಕ್ಕೆ ಯಾವ ಆದರ್ಶವನ್ನಿತ್ತರೋ ಅದೇ ಸ್ವದೇಶಾಭಿಮಾನಿಯ ಜನನಕ್ಕೆ ಕಾರಣವಾಯಿತು. ತತ್ಪೂರ್ವದಲ್ಲಿ ಮುದ್ರಣಾಲಯವು ಹಲವು ಬದಲಾವಣೆಗಳಿಗೂ ವಿಧಿತಕ್ಕೂ ಕಾರಣವಾಯಿತು. ೧೯೦೨ನೇ ಇಸವಿಯ, ಅಂದರೆ ಮುದ್ರಣಯಂತ್ರವನ್ನು ಪಡಕೊಂಡ ಎರಡೇ ತಿಂಗಳೊಳಗೆ ಮಂಗಳೂರಿನಲ್ಲಿ ಪ್ಲೇಗ್ ಹಾವಳಿ ಉಂಟಾಗಿ ಮುದ್ರಣಾಲಯದ ಬೆಳವಣಿಗೆಗೆ ತೊಡಕನ್ನೊಂಟುಮಾಡಿತು. ಆ ಸಮಯದಲ್ಲಿ ಅದು ಬಂಧರಿನಲ್ಲಿ ಒಂದು ಸಣ್ಣ ಕೋಣೆಯಲ್ಲಿದ್ದಿತು. ಆ ಮೇಲೆ, ೧೯೦೬ನೇ ಇಸವಿಯಲ್ಲಿ ಅದು ವೃಕ್ಷತ ಗಣಪತಿ ಹ್ಯಾಸ್ಕೂಲಿನವರು ಪಡಕೊಂಡಿರುವ ಪದುಕೋಣೆ ರಾಮರಾಯರ ಮನೆಯಲ್ಲಿ ಒಯ್ಯಲ್ಪಟ್ಟಿತು. ಇಲ್ಲಿ ಬಂದ ಒಂದು ವರ್ಷದಲ್ಲಿಯೇ ಕೈಯಂತ್ರದ ಬದಲಿಗೆ ಚೆಂಡ್ಲರ್ ಪ್ಯಾಸ್ಟನ್ ಕಾಲಿನಿಂದ ನಡಿಸುವ ಮುದ್ರಾಯಂತ್ರವನ್ನು ಪಡಕೊಳ್ಳೋಣಾಯಿತು.

ಸನ ೧೯೦೬ನೇ ಇಸವಿಯಲ್ಲಿ ಪತ್ರಿಕೆಯೊಂದನ್ನು ಹೊರಡಿಸುವ ವಿಷಯದಲ್ಲಿ ಆಲೋಚನೆ ಮಾಡಲಾಯಿತು. ಈ ಮೊದಲೇ ಹೇಳಲ್ಪಟ್ಟ ಶ್ರೀಯುತ ಉಪೇಂದ್ರ ಪೈಗಳ ತರಬೇತಿ ಹೊಂದಿದ ವಿದ್ಯಾರ್ಥಿ ಸಮಿತಿಯ ಕೆಲವರು ಈ ಪತ್ರಿಕೆಯ ಹೊರಡೋಣದ ಬಗ್ಗೆ ಬಹಳ ಉತ್ಸಾಹಿತರಾಗಿದ್ದರು. ಶ್ರೀ ಶ್ರೀನಿವಾಸ ಕಲ್ಯುಯರ ಹೆಸರೇ ಪ್ರಕಟದಲ್ಲಿ ತೋರಿದರೂ, ಕಾರಣಾಂತರಗಳಿಂದ ಈಗ ಹೆಸರನ್ನು ಉಲ್ಲೇಖಿಸಲಾಗದ ಶ್ರೀ ಉಪೇಂದ್ರ ಪೈಗಳ ಶಿಕ್ಷಣದ ತರುಣರೇ ಇವರೊಡನೆ ಕೂಡಿ ಇದಕ್ಕೆ ಕೈಹಚ್ಚಿದರು. ಇಂತಹ ಮುಖ್ಯ ವಿಷಯವನ್ನು ಕೆಲವರೇ ಕೂಡಿ ತೀರ್ಮಾನಿಸಲಾಗುವುದಿಲ್ಲ; ಇದಕ್ಕೆ ಜನತೆಯ ಸಹಾಯವೂ ಬೇಕು. ಆ ಸಮಯದಲ್ಲಿ ಬಾಸೆಲ್ ಮಿಶನ್ ಪ್ರೆಸ್ಸಿನಿಂದ ಸಕ್ಕದೀಪಿಕೆ ಎಂಬ ವಾರ ಪತ್ರಿಕೆಯು ಹೊರಡುತ್ತಿತ್ತು. ಇದು ಬರೇ ಮಿಶನರಿಯವರ ಮತಾಂತರದ ಉದ್ದೇಶಕ್ಕಾಗಿತ್ತು; ಕುತ್ತು ರಾಜಕೀಯ ಸಂಗತಿಗಳೆಲ್ಲ ಇದು ಕೈಹಾಕುವಂತಿರಲಿಲ್ಲ; ಹಾಕಿದರೂ ರಾಷ್ಟ್ರೀಯ ಅಭಿಪ್ರಾಯಗಳನ್ನು ಪುಷ್ಟೀಕರಿಸುವುದು ಹಾಗಿರಲಿ, ವಿರೋಧಿಸುವ ಉದ್ದೇಶವಿದ್ದುದೂ ಆಗಿತ್ತು. ಆ ಸಮಯದಲ್ಲಿ ಈಗಿನಷ್ಟು ವಾರಪತ್ರಿಕೆಗಳು ಕನ್ನಡದಲ್ಲಿ ಕರ್ನಾಟಕದ ಇತರ ಭಾಗಗಳಲ್ಲೂ ಇರಲಿಲ್ಲ. ಆದರೂ ಕೆಲವರು ಹೊಸ ಪತ್ರಿಕೆಯ ಬಾಳುವೆಯ ವಿಷಯದಲ್ಲಿ ಸಂದೇಹವುಳ್ಳವರೂ ಆಗಿದ್ದರು.

ಅಂತೂ ೧೯೦೬ನೇ ಇಸವಿ ಜನವರಿ ೧೯ನೇ ತಾರೀಕಿನಲ್ಲಿ ಸ್ವದೇಶಾಭಿಮಾನಿಯ ಮೊದಲಿನ ಸಂಚಿಕೆಯು ಪ್ರಕಟಿಸಲ್ಪಟ್ಟಿತು. ಆಗ ಒಂದೇ ಬಾರಿಗೆ ಅದನ್ನು ವಾರಪತ್ರಿಕೆಯಾಗಿ ಹೊರಡಿಸುವ ಧೈರ್ಯವಾಗಿರಲಿಲ್ಲ. ಆದರೆ ೧೯೦೭ನೇ ಇಸವಿಯ ಜನವರಿಯಾಗುವ ಮೊದಲೇ ಪಕ್ಷಪತ್ರಿಕೆಯನ್ನು ವಾರಪತ್ರಿಕೆಯಾಗಿ ಮಾರ್ಪಡಿಸುವ ಆವಶ್ಯಕತೆಯು ತೋರಿಬಂತು. ಆದರೆ, ೧೯೦೭ನೇ ಆಕ್ಟೋಬರ್ ಸಂಚಿಕೆಯಲ್ಲಿಯೇ ಸೂಚಿಸಿದಂತೆ ಮುದ್ರಣದ ಅನಿರ್ಯಾದಿಂದ ಪತ್ರಿಕೆಯನ್ನು ವಾರ ಪತ್ರಿಕೆಯಾಗಿ ಕೂಡಲೇ ಮಾಡಲು ಸಾಧ್ಯವಾಗಲಿಲ್ಲ. ಈ ಬಗ್ಗೆ ೧೯೦೮ನೇ ಇಸವಿಯಲ್ಲಿ ಸ್ವೋದಾರ್ಥ ಎಂಬ ದೊಡ್ಡ ಮುದ್ರಣ ಯಂತ್ರವು ಪಡಕೊಳ್ಳೋಣಾಯಿತು. ಈ ಮಷೀನ್ ಪತ್ರಿಕೆಯನ್ನು ಪಕ್ಷಪತ್ರಿಕೆಯಾಗಿ ಮಾರ್ಪಡಿಸಲು ಸುಲಭವಾಗಿ, ೧೯೦೯ನೇ ಇಸವಿಯಿಂದ ಇದು ಎಡೆಬಿಡದೆ ಇಂದಿನವರೆಗೂ ಪ್ರತಿ ಶುಕ್ರವಾರವೂ ತಪ್ಪದೆ ಪ್ರಕಟಿಸಲು ಶಕ್ತವಾ ಬಂದಿದೆ.

ಅದೇ ಸಮಯದಲ್ಲಿ ಈಗ ಕೈಲಾಸವಾಸಿಯಾಗಿರುವ ಶ್ರೀ ಕುಮಾರ ಬಂಗರಾಯರು – ಆ ಮೇಲೆ ಸ್ವಾವಲಂಬನೆಯು – ತಮ್ಮ ಸಮಾಜ ಸೇವೆಯ ಕೆಲಸಗಳಲ್ಲಿ

ತ್ಸಾಹದಾಧಿ ನಿರತರಾಗಿದ್ದರು. ಮೂವತ್ತು ವರ್ಷಗಳ ತರ ಪ್ರಬಲವಾಗಿ ಪ್ರಾಮುಖ್ಯತೆಯನ್ನು ತಾಳಿದ ಅಸ್ಪೃ ತಾ ನಿವಾರಣೆಯ ತತ್ವವನ್ನು ಅವರು ಮುಂದಾಗಿಯೇ ಡುತ್ತಿದ್ದರು. ಆ ಸಮಯದಲ್ಲಿ ವಿದ್ಯಾಶಾಲೆಗಳಲ್ಲಿ ರಿಯಲು ಸೇರುವ ವಿದ್ಯಾರ್ಥಿಗಳಲ್ಲಿ ಬಿಲ್ಲವರದು ಕಡಿಮೆ ತಿಯಾಗಿತ್ತು; ಆದರೂ ಬಿಲ್ಲವ ಹುಡುಗರನ್ನು ಇತರ ಡನೆ ಒಂದೇ ಸಾಲಿಗೆ ಕೂತುಕೊಳ್ಳಿಸುತ್ತಿರಲಿಲ್ಲ. ಜಾತ ಭೇದಗಳಿಗಿಂತ ಅಂತರ್ಭೇದಗಳೂ ಪ್ರಬಲವಾಗಿದ್ದು, ಗೌಡ ರಸ್ಪತ ಸೆಂಯುಕ್ತ ಪಂಕ್ತಿಯನ್ನು ಪಂಕ್ತಿಸ್ಥ ಕೂಡ ಸಾಂಪ್ರದಾಯವಾದಿ ಳ ಬಂದೆಳಲ್ಲಿನ ಮೇಲೆ ಒಡೆದುಹೋಯಿತು. ಅಂದರೆ, ತೀಯ ಸಂಕುಚಿತೆಯು ಆಗ ಅಷ್ಟು ಪ್ರಬಲವಾಗಿತ್ತು. ಂತಹ ಭೇದಗಳು ಈಗ ನಿರ್ನಾಮವಾಗಿ ಅಳಿದು ೋದರೂ ಅಸ್ಪೃಶ್ಯತಾನಿವಾರಣೆಗೆ ಇರುವ ಈಗಿನ ಪ್ರತಿ ೋಧದ ಪರಿಮಾಣವನ್ನು ನೋಡಿದರೆ, ಆಗಿನ ಆ ಮತಾಂಧ



ಕಾರದಾ ಛಾಪಖಾನೆ.
ಮೊಳೆಹೊಡಿಸುವ ಕೋಣೆ.

ಯ ಸನುಯದಲ್ಲಿ ಶ್ರೀ। ರಂಗರಾಯರ ಪ್ರಯತ್ನಗಳಿಗೆ ಷ್ಟು ವಿರೋಧಗಳಿರಬಹುದಿತ್ತೆಂದೂ, ಅವರು ಆಗಿನ ಸನಾ ದ ತಿರಸ್ಕಾರಕ್ಕೆ ಎಷ್ಟು ಪಾತ್ರರಾಗಿದ್ದರೆಂದೂ ಊಹಿಸ ಬಹುದು. ಆದರೂ ಪ್ರೆಸ್ಬಿ ಕ್ಲಾಸಸ್ ಮಿಶನ ಎಂಬ ಸಂಸ್ಥೆಯು ಅವರು ಮಾಡಿದ ಕೆಲಸಗಳ ಮಹತ್ವವನ್ನು ಗಳೂ ಸಾರುತ್ತಿದೆ.

ಇವರೇ ಸ್ವದೇಶಾಭಿಮಾನಿಯಲ್ಲಿ ಸಮಾಜ ಸುಧಾ ಣೆಯ ಅತ್ಯಂತ ಮೂಲ್ಯವಾನ್ ತತ್ವಗಳನ್ನು ಸುರಿದರು. ಡಾ ಸುಭಟ್ಟರ ಆ ಮೃಂಗಾತ್ಮಕ ಲೇಖನಗಳು ಈಗಲೂ ಓದ ಕ್ಕವೃಗಳಾಗಿವೆ. ಅವು ಬರೀ ಸುಧಾರಣೆಯನ್ನು ಬೋಧಿ ಸುವ ಒಣತತ್ವಗಳಾಗಿರಲಿಲ್ಲ; ಅವು ಹಾಸ್ಯಾತ್ಮಕವೂ ಇದ್ದವು.

ಸ್ವದೇಶಾಭಿಮಾನಿಯಲ್ಲಿ ಹೆಚ್ಚಿನ ಪ್ರೋತ್ಸಾಹ ಕೊಟ್ಟ ರಲ್ಲಿ ಈಗ ಕೃಷಾನವಾಸಿಯಾಗಿರುವ ಬೋಳಾರ ಬಾಬು ರಾಮರಾಯರು. ಇವರ ಚಾಣಕ್ಷತೆಯು ಎಂಬ ಕಾದಂಬ ರಿಯು ಕೆಲವು ಮಹಚರಿತ್ರೆಗಳನ್ನು ಹೊರಗೆಡಹುವಂತಹ ವಾಗಿದ್ದು ಹೆಚ್ಚು ಹೆಸರು ಹೊಂದಿದೆ. ಅವರು ಸರಕಾರೀ ಸೌಕರರ ಆಗಿನ ವರ್ತನೆಗಳನ್ನು ತಿಳಿದವರಾಗಿದ್ದು, ಹಾಸ್ಯಾ ತ್ಮಕವೂ ಮೃಂಗಾತ್ಮಕವೂ ಆದ ಲೇಖನಗಳನ್ನು ಬರೆಯು ತ್ತಿದ್ದರು.

ಪತ್ರಿಕೆಯ ಬಾಲ್ಯದಲ್ಲಿ ಹೆಚ್ಚು ಸಹಕಾರ ಕೊಟ್ಟು ತೊಪುಗೊಳಿಸಿದವರಲ್ಲಿ ಶ್ರೀ। ಪಂಜೆ ಮಂಗೇಶರಾಯರೂ ಪ್ರಾಮುಖ್ಯರಾಗಿರುವರು. 'ಕವಿತೆ'ರಾಗಿ ಅವರು ಬರೆದ ಕವಿತೆಗಳೆಷ್ಟೋ ಓದುಗರಿಗೆ ಸುರಸ ಪಠಣವನ್ನು ಕೊಟ್ಟಿಯವೆ; ಅಲ್ಲದೆ ಇತರ ಲೇಖಗಳೂ ಪತ್ರಿಕೆಯ ಯಶಸ್ಸನ್ನು ಅಭಿವೃದ್ಧಿ ಗೊಳಿಸಿವೆ. ಹಾಗೆಯೇ ಶ್ರೀಮಾನ್ ಗೋವಿಂದ ಪೈಗಳೂ ಪತ್ರಿಕೆಗೆ ಅತ್ಯಂತ ಮುಖ್ಯವಾದ ಲೇಖನಗಳನ್ನೂ ಕೊಟ್ಟಿರು

ತಿದ್ದು ಪಡಿ.

ಲೇಖ—ತಿಮ್ಮಪ್ಪಾಯಣ ಕವಿಯ ಕಾಲವಿಚಾರ.

ಪುಟ	ಕಲಮು	ಖಂಡ	ಆಪಬ್ಧ	ತಪ್ಪು
೩೩	ಮೇಲ್ಕಂಡಿ	೪.	ದಪಲಬರ ೩.	ದಪಲಬರ ೪೧.
೧	೧	೧೬.	ಕರ್ನಾಟಕ ಕವಿ	ಕರ್ನಾಟಕ ಕವಿ
			ಚರಿತೆ—ಪು 349	ಚರಿತೆ—ಪು 349
೧	೨.	೨.	ಉಲ್ಲೇಖ	ಉಲ್ಲೇಖ
೩೬	೧	೧೦	(ಶ ಸ. ೧೧೭)	(ಶ ಸ. ೧೧೭೩)
೩೬	೨	೪೬-೪೭.	(ಪಶ) ಅಂಗಾರಕ,	(ಪಶ- ಅಂಗಾರಕ)

ದರು. ಈಗ ಶ್ರೀಮಾನ್ ಶ್ರೀಕಂಠಯ್ಯನವರಿಗೆ ಸಲ್ಲುತ್ತಿರುವ ಪ್ರಾಸವಿರಚಿತ ವಡ್ಡರಚನೆಯ ಮೂಲ ವುರುಷರೆಂಬ ಮಾತು ನಿಜವಾಗಿ ನೋಡಿದರೆ ಶ್ರೀ। ಗೋವಿಂದ ಪೈಗಳಿಗೇ ಸಲ್ಲ ತಕ್ಕದ್ದು. ಇವರು ಪ್ರಾಸವಿರಚಿತ ವಡ್ಡಗಳನ್ನು ರಚಿಸಿದುದು ಮಾತ್ರವಲ್ಲದೆ, ಸಾಂಪ್ರದಾಯವಿರುದ್ಧ ಇವರು ಬರೆದುದಕ್ಕೆ ಇವರ ಮೇಲೆ ಬಂದ ಶಬ್ದಾಘಾತಗಳನ್ನೂ ಇವರು ಎದುರಿಸ ಬೇಕಾಯಿತು ಇಪ್ಪತ್ತು ವರ್ಷಗಳ ಹಿಂದೆ ೧೯೧೧ನೇ ಇಸವಿ ಯಲ್ಲಿ ಸಪ್ಪಂಬರಿನಿಂದ ಮುಂದೆ ಸ್ವದೇಶಾಭಿಮಾನಿಯಲ್ಲಿ ನಡೆದ ವಾಗ್ಯುದ್ಧವು ಪ್ರಾಸಸಮತೆಯವನ್ನು ತಿಳಿಯಲಬೇಕ್ಷಿಸು ವವರು ಓದತಕ್ಕುದಿದೆ. ಶ್ರೀ। ಗೋವಿಂದ ಪೈಗಳ ಹಲವು ಕವಿತೆಗಳನ್ನು ಬರೆದುದಲ್ಲದೆ, ೧೯೧೦ನೇ ಇಸವಿಯ ಸಂಚಿಕೆ ಗಳಲ್ಲಿ ಅವರು ನವೀನ ಚಂದ್ರಸೇನರ ಬಂಗಾಳಿ ಗ್ರಂಥದಿಂದ ಭಾಷಾಂತರಿಸಿದ 'ಶ್ರೀಕೃಷ್ಣಚರಿತ್ರೆ'ಯು ಪೂರ್ಣವಧಿಸಲ್ಪಟ್ಟು ಪುಸ್ತಕರೂಪದಲ್ಲಿ ಸ್ವತಂತ್ರವಾಗಲು ಯೋಗ್ಯವಿದೆ; ಮತ್ತು ಅಗತ್ಯವೂ ಇದೆ.

ಸ್ವದೇಶಾಭಿಮಾನಿಯ ಲೇಖಕವರ್ಗದಲ್ಲಿ ಶ್ರೀ। ಉಳ್ಳಾಲ ಮಂಗೇಶರಾಯರೂ, ಶ್ರೀ। ಎಸ್. ಎಸ್. ಕಾಮತರೂ ಮುಖ್ಯಭಾಗವನ್ನು ತೆಗೆದು ಕೊಂಡಿರುವರು. ಶ್ರೀ। ಉಳ್ಳಾಲ ಮಂಗೇಶ ರಾಯರ ಶುದ್ಧ ಶೈಲಿಯ ಲೇಖಗಳು, ಶ್ರೀ। ಕಾಮ ತರ ಸುಲಲಿತ ಕವಿತೆ, ವಿದ್ಯಾವಿಷಯಕ ಲೇಖ, ಮತ್ತು ಬಂಗಾಳಿ ಭಾಷಾಂತರಗಳು ಈಗಲೂ ಓದ ತಕ್ಕವುಗಳಾಗಿವೆ. ಶ್ರೀ। ಬಿ. ಬಾಬುರಾವರೂ ಆಗಾಗ ನಮ್ಮ ಪತ್ರಿಕೆಗೆ ಲೇಖಗಳ ಮೂಲಕ ಸಹಾಯ ಮಾಡುತ್ತಿದ್ದರು.

ಆಗಿನ ಲೇಖಕರಲ್ಲಿ ಬೆನಗಲ್ ರಾಮ ರಾವ್, ರಾವ್ ಸಾಹೇಬ್ ಅನಂತ ರಾವ್, ಉಗ್ರಾಣ ಮಂಗೇಶರಾವ್, ಮಾಗಧಿ ರಾಮ ಸ್ವಾಮಯ್ಯಂಗಾರ್, ಎಮ್. ಟಿ. ವಲ್ಲಭ ಯ್ಯಂಗಾರ್, ಬೈಂದೂರು ಆನಂದರಾವ್, ಇವ ರನ್ನೂ ಮರೆಯಲಾಗುವುದಿಲ್ಲ. ಅಲ್ಲದೆ, ನಂಗಳೂರಿ ನಲ್ಲಿ ಕೆಲಕಾಲ ವಾಸವಾಗಿದ್ದ ಸಮಯದಲ್ಲಿ ಶ್ರೀ ಹನು ನಂತರಾವ್ ಮುದವೇದಕರೂ ಪತ್ರಿಕೆಗೆ ಲೇಖನಗಳನ್ನು ಬರೆದಿರುವರು.

ಪತ್ರಿಕೆಯು ಈ ರೀತಿಯಲ್ಲಿ ಲೇಖಕರಿಂದ ಅದ್ಭುತ ವಾದುದಲ್ಲದೆ ವಾಚಕರಿಂದಲೂ ತುಂಬಾ ಅದ್ಭುತವಾಗಿ ಇದ್ದು ಮುದ್ರಣ ಸೌಕರ್ಯಗಳು ಸಾಕಾಗ ಲಾರದೆ ಹೋದುವು. ಫಲವಾಗಿ ೧೯೧೪ರಲ್ಲಿ ಇಲಿಯಟ್ ಎಂಬ ಇನ್ನೊಂದು ದೊಡ್ಡ ಮುದ್ರಣ ಯಂತ್ರವು ಪದಕೊಳ್ಳೋಣಾಯಿತು. ಅಲ್ಲದೆ ಮೊಳೆಗಳನ್ನು ತಯಾರುಮಾಡುವ Foundry ಯಂತ್ರವೂ ತರಲ್ಪಟ್ಟಿತು.

೧೯೧೬ರ ವರೆಗೆ ಈ ಪತ್ರಿಕೆಯು ಕ್ರೌನ್ ಆಕಾರದಲ್ಲಿ ಪ್ರಕಟವಾಗುತ್ತಿತ್ತು; ೧೯೧೬ನೇ ಇಸವಿಯಿಂದ ಇದು ಡೆಮಿ ಆಕಾರಕ್ಕೆ ಬೆಳೆ ಯಿತು. ಮತ್ತು ಅದೇ ವರ್ಷದ ಪ್ರಥಮ ಸಂಚಿ ಕೆಯಲ್ಲಿ "ಸ್ವದೇಶಾಭಿಮಾನಿಯ ಸಂಸ್ಕರಣ" ವೆಂಬ ಅಗ್ರಲೇಖವೂ ಬಂದಿತು. ಈ ಮೂಲಕ ಸ್ವದೇ ಶಾಭಿಮಾನಿಯು ಇನ್ನೂ ಉತ್ತಮವಾಗಿ ಬರುವುದೆಂದು ಆಶ್ವಾಸನೆಯಾಗಿತ್ತು. ಆದರೆ ಈ ವರೆಗೆ ಸ್ವದೇಶಾಭಿಮಾನಿಯ ನಿಕಟ ಸಂಸರ್ಗ ದಲ್ಲಿ ಈ ಕೆಲಸವನ್ನಾಡಿಕೊಂಡು ಸಂಪಾದಕರಾ ಗಿದ್ದ ಶ್ರೀ। ವಿ. ಎಸ್. ಕಾಮತರು ಜಿಲ್ಲೆಯ ಸಹ ಕಾರ ಚಳವಳಿಯಲ್ಲಿ ಯೂ, ಸಿ. ವಿ. ಸಿ. ಕಂಪೆ ನಿಯ ಆದಿಕತದಲ್ಲಿಯೂ ಸಂಪೂರ್ಣ ನಿರತರಾಗಿ ಸ್ವದೇ ಶಾಭಿಮಾನಿಯಿಂದ ದೂರವಾದ ಕಾರಣದಿಂದ ಪತ್ರಿ ಕೆಯು ಹಿಂದಿನ ಉಪಯುಕ್ತತೆಯನ್ನು ಕಡಿಮೆ ಮಾಡಿತು; ಮಾತ್ರವಲ್ಲ ಲೇಖಕ ವರ್ಗವು ಮೆಲ್ಲನೆ ಸಂಕುಚಿತವಾ ಯಿತು.

ಆದರೆ ೧೯೨೬ನೇ ಇಸವಿಯಿಂದ ಸ್ವದೇಶಾಭಿಮಾನಿ ಯಲ್ಲಿ ಪುನಃ ತೇಜಸ್ವಿತೆಯು ಉಂಟಾಗಲಾರಂಭಿಸಿತು. ಲೇಖಕ ವರ್ಗವು ಪುನಃ ಸೃಷ್ಟಿ ಹೊಂದಿತು. ೧೯೨೬ರಲ್ಲಿ ವರ್ಷಾರಂಭವನ್ನು ಒಂದು ಸಚಿತ್ರ ವಿಶೇಷ ಸಂಚಿಕೆಯ ಮೂಲಕ ಸ್ವದೇಶಾಭಿಮಾನಿಯು ಆಚರಿಸಿತು; ಉತ್ತಮ ತರದ ಕಾಗದವನ್ನು ಉಪಯೋಗಿಸಿತು; ಪುಟಗಳು ಗಂಟಿಂದ ೧೬ಕ್ಕೂ ಆ ಮೇಲೆ ೧೮ಕ್ಕೂ ಏರಿಸೋಣಾಗಿ ಓದುಗಾರರಿಗೆ ಓದತಕ್ಕ ವಿಷಯಗಳನ್ನು ಲೇಖಗಳೂ ಹೆಚ್ಚು ಕೊಡಲ್ಪಟ್ಟವು.

೧೯೨೯ರಲ್ಲಿ ಪುನಃ ವರ್ಷಾದಿಯನ್ನು ಸಚಿತ್ರ ವಿಶೇಷ ಸಂಚಿಕೆಯ ಮೂಲಕ ಆಚರಿಸೋಣಾಯಿತು. ಆಗಿನಿಂದ ಪತ್ರಿಕೆಯು ಚೀತನವನ್ನೂ ಶಕ್ತಿಯನ್ನೂ ತೋರಿಸುತ್ತಾ ಬಂದು ಜನತೆಯಿಂದ ಆದರಿಸಲ್ಪಡುತ್ತಾ ಬಂದಿದೆ. ಸ್ವದೇ ಶಾಭಿಮಾನಿಯ ಈವರೆಗಿನ ಉತ್ಕರ್ಷಾಪಕರ್ಷ ಲೇಖಕರಲ್ಲಿ ನಾವು ಮುಖ್ಯವಾಗಿ ವರಿಗಣಿಸಬೇಕಾದವರಲ್ಲಿ ಶ್ರೀ। ಬಿದ್ದ ಮನೆ ಅಕ್ಕಾರಾಮಕ್ಕಾಸ್ಥಿ, ಶ್ರೀ। ಎಮ್. ಗಣಪತಿರಾವ್ ವಿಗಳ ಇವರನ್ನು ಇಲ್ಲಿ ಉಲ್ಲೇಖಿಸಬೇಕು.

ಪತ್ರಿಕೆಯು ಈ ರೀತಿಯಲ್ಲಿ ಯಶಸ್ಕರವಾಗಿ ಬೆಳೆ ದಂತೆ ಮುದ್ರಣಾಲಯವೂ ಬೆಳೆಯುತ್ತಾ ಬಂದಿದೆ. ೧೯೨೬ ರಲ್ಲಿ ಒಂದು ಇಂಜಿನು ತರಿಸಿ ಮುದ್ರಣಯಂತ್ರಗಳನ್ನು ಕೈಯಿಂದ ತಿರುಗಿಸುವ ಹಳೆಯ ಕ್ರಮವನ್ನು ಕೊನೆಗಾಣಿಸ ಲಾಯಿತು; ೧೯೨೯ರಲ್ಲಿ ಯಂತ್ರಕಾಲೆಗೆ ವಿತಾಲಕ್ಟ್ರೋಣ ನನ್ನು ಕಟ್ಟಲಾಯಿತು; ಮತ್ತು ಇನ್ನೂ ದೊಡ್ಡದಾದ ಹೊಸ ಇಂಜಿನು ಮತ್ತು ಡ್ಯಾನೆಮೊ ತರಿಸಿ, ವಿದ್ಯುತ್ ಉತ್ಪಾದನೆಯ ಮೂಲಕ ದೀಪಗಳ ಆಯೋಜನೆಯಾಯಿತು; ೧೯೩೦ರ ಆಪೈರಿಯಲ್ಲಿ ಸ್ಥಳಸಂಕೋಚದ ದೆಸೆಯಿಂದ ಒಂದು ಕೋಣೆಯು ಪುನಃ ಕೂಡಿಸಲಾಯಿತು. ಮತ್ತು ೧೯೩೧ರ ಆದಿಯಲ್ಲಿ ಒಂದು ಹೊಸ ವಿಕ್ಟೋರಿಯಾ ಪ್ಲೇಟನ್ ಮುದ್ರಣಯಂತ್ರವು ಪದಕೊಳ್ಳಲಾಯಿತು.

ಲೇಖಕರಲ್ಲಿ ವಿಜ್ಞಾಪನೆ.

ಈ ಸಂಚಿಕೆಯಲ್ಲಿ ತೋರಿ ಬಂದ ಲೇಖನಗಳ ಕರ್ತೃಗಳ ಮತ್ತು ಕಳೆದ ಇಪ್ಪತ್ತೈದು ವರ್ಷಗಳಲ್ಲಿಯೂ ನಮ್ಮೊತನೆ ಸಹಕಾರದಿಂದ ನಮ್ಮನ್ನು ಪ್ರೋತ್ಸಾಹಿಸಿದ ಎಲ್ಲ ಲೇಖಕರಿಗೂ ನಮ್ಮ ವಂದನೆಗಳನ್ನರ್ಪಿಸುವೆವು. ಈ ವರೆಗೆ ಹೆಸರು ಕಾಣುವ ಲೇಖಕರು ಮಾತ್ರ ವೆಲ್ಲ; ಸರಿಯಾಗಿ ನೋಡಿದರೆ ಹೆಸರೇ ಸಿಕ್ಕದ ಎಷ್ಟೋ ಉತ್ತಮ ಲೇಖಕರು ಪೂರ್ವದಲ್ಲಿ ಬರೆದಿದ್ದಾರೆ; ಹೆಸರು ಕೊಡಲಿಚ್ಛಿಸದ ಎಷ್ಟೋ ಲೇಖಕರು ಈಗಲೂ ಬರೆಯುತ್ತ ಲಿದ್ದಾರೆ. ಎಲ್ಲರಿಗೂ ನಮ್ಮ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇವೆ.

ಕನ್ನಡಿಗರಲ್ಲಿ ಓದುವ ಅಭಿರುಚಿಯು ಕವಿತೆಯೆಂಬ ಅವಯವದಿಂದುತ್ತದೆ; ಇದನ್ನು ಸುಧಾರಿಸುವ ಶಕ್ತಿಯು ಲೇಖ ಕರ ಕೈಯಲ್ಲಿಯೇ ಇದೆ. ಬದುಗರಿಗೆ ಉತ್ಸಾಹಕ ಲೇಖ ಗಳನ್ನು ಬರೆದು ಆ ಮೂಲಕ ಓದುಗರಲ್ಲಿ ವಾಚನಾಭಿರುಚಿ ಯನ್ನು ಬೆಳೆಸಬಹುದು. ಸ್ವದೇಶಾಭಿಮಾನಿಯೂ ಕನ್ನಡಿ ಗರ ವಾಚನಾಭಿರುಚಿಯನ್ನು ಹೆಚ್ಚಿಸುವ ಉದ್ದೇಶವುಳ್ಳವಳಾ ಗಿದ್ದಾಳೆ. ಮುಂದೆಯೂ, ಈ ಸಂಚಿಕೆಯೊಳಗಣ ಲೇಖ

ಕಾರದಾ ಛಾಪಖಾನೆ.
ಮುದ್ರಣಯಂತ್ರಶಾಲೆ.

ಕರೂ, ನಮ್ಮ ಪೂರ್ವದ ಲೇಖಕರೂ, ಸ್ವದೇಶಾಭಿಮಾನಿ ಯಲ್ಲಿ ಈ ವರೆಗೆ ತೋರಿಬಾರದ ಲೇಖಕರೂ ತಮ್ಮ ಲೇಖ ಗಳನ್ನು ನಮ್ಮ ನಿತ್ಯ ಸಂಚಿಕೆಯ ಬಗ್ಗೂ ಕಳುಹಿಸಿ ನಮ್ಮಾ ಉದ್ದೇಶಸಾಧನೆಯಲ್ಲಿ ನಾವು ಕೃತಕಾರ್ಯರಾಗುವಂತೆ ನಮಗೆ ಸಹಾಯ ಮಾಡಬೇಕಾಗಿ ನಾವು ವಿಜ್ಞಾಪಿಸುವೆವು.

ಕಾನಡಾ ವೃತ್ತ.

ಕಳೆದ ೧೫ ವರ್ಷಗಳಿಂದಲೂ
ಸ್ಪತಿ ಸೋಮವಾರವೂ ಕುಮಟೆಯಲ್ಲಿ ಪ್ರಕಟವಾಗುವ
ಸಮುಖ ರಾಷ್ಟ್ರೀಯ ವಾರಪತ್ರಿಕೆ.
ಪ್ರಚಲಿತ ವಿಷಯಗಳನ್ನು ಕೂಲಂಕುಷವಾಗಿ ಕೊಡುತ್ತದೆ.
ರಾಜಕೀಯ ಸಾಮಾಜಿಕ, ಧಾರ್ಮಿಕ ಮತ್ತು
ಸಾಂಪತ್ತಿಕ ವಿಷಯಗಳನ್ನು ವಿಶದಪಡಿಸುವುದು.
ನೂತನ ಸಂಚಿಕೆಯನ್ನು ತಕ್ಷಣ ತರಿಸಿಕೊಳ್ಳಿರಿ.
ವಾರ್ಷಿಕ ಚಂದಾ ಅಂಚೆ ಪೆಟ್ಟಿ ಸಹಿತ ರೂ. ೩-೦-೦
ಜಾಹೀರಾತುದಾರರಿಗೆ ತಮ್ಮ ಮಾಲಿನ ಜಾಹೀರಾತು
ಕೊಟ್ಟು ತ್ವರಿತವಾಗಿ ಲಾಭ ಪಡೆಯಲು ಇದೊಂದೇ ದಾರಿ.

ಇವತ್ತೂದಬೇಡಿ ಸ್ವಾಮಿ!

ಸುಮಾರು ಕಾಲಾಯ್ತು, ಧಾರವಾಡದಲ್ಲಿ ನನ್ನ ಸ್ನೇಹಿತರೊಬ್ಬರು ಇದ್ದರು. "ಬಿಡಿ" ಸಾಹೇಬರೂ ಅಂತಲೂ, ಬಿ.ಎ. ಸಾಹೇಬರೂ ಅಂತಲೂ ಅವರನ್ನು ಕರೆಯುತ್ತಿದ್ದರು. ಅವರ ಹೆಸರು ಮಾತ್ರ ನನಗೆ ಈಗ ನೆನಪಿಲ್ಲ. ಅವರ ಮನೆಯಲ್ಲಿ ಒಂದು ಸಲ ಸಂಜೆ ಹೊತ್ತು ಕುಳಿತಿದ್ದಾಗ ಅವರು ಹೇಳಿದರು: "ಸ್ವಾಮಿ, ಇವತ್ತೂದಬೇಡಿ ಸ್ವಾಮಿ!"

ನಾನು ಆಶ್ಚರ್ಯದಿಂದ ಅವರ ಮುಖ ನೋಡಿದೆ. ಅವರು ಹೇಳಿದರು: "ಇವತ್ತು ಹುಣ್ಣಿಮೆ. ಹುಣ್ಣಿಮೆ ದಿವಸ ಹುಚ್ಚರು ಜಾಸ್ತಿ ಆಗ್ತಾರೆ. ಆಸ್ಪತ್ರೆಗೆ ಹೊಸ ಹುಚ್ಚರು ಬರ್ತಾರೆ. ಅವರನ್ನು ಕಟ್ಟಿ ಹಾಕಿ ಹೊಡೀಬೇಕಾಗುತ್ತೆ. ಆ ಕೆಲಸ ನಾನು ಮಾಡಬೇಕಾಗುತ್ತೆ. ಅದಕ್ಕೆ ಹೇಳಿದೆ, ಇವತ್ತೂದಬೇಡಿ ಸ್ವಾಮಿ!"

ಅವರ ಮಾತಿನಲ್ಲಿ ಹಾಸ್ಯವಿರಲಿಲ್ಲ. ಅವರು ಹೇಳಿದ್ದು ಸತ್ಯವಾಗಿತ್ತು. ಅವರ ಕೆಲಸವೇ ಅಂಥದು. ಅವರು ಹುಚ್ಚರ ಆಸ್ಪತ್ರೆಯ ಡಾಕ್ಟರರಾಗಿದ್ದರು. ಅವರ ಕೆಲಸ ಹುಚ್ಚರನ್ನು ಗುಣಪಡಿಸುವುದು. ಅವರ ಕೆಲಸ ಹುಚ್ಚರನ್ನು ಕಟ್ಟಿ ಹಾಕಿ ಹೊಡೆಯುವುದು. ಅವರ ಕೆಲಸ ಹುಚ್ಚರ ಮೇಲೆ ಔಷಧಿಯ ಪ್ರಯೋಗ ಮಾಡುವುದು. ಅವರ ಕೆಲಸ ಹುಚ್ಚರ ಮೇಲೆ ಶಸ್ತ್ರಕ್ರಿಯೆ ಮಾಡುವುದು. ಅವರ ಕೆಲಸ ಹುಚ್ಚರ ಮೇಲೆ ಕರುಣೆ ತೋರಿಸುವುದು. ಅವರ ಕೆಲಸ ಹುಚ್ಚರ ಮೇಲೆ ಪ್ರೀತಿ ತೋರಿಸುವುದು. ಅವರ ಕೆಲಸ ಹುಚ್ಚರ ಮೇಲೆ ಸಿಟ್ಟು ಮಾಡಿಕೊಳ್ಳುವುದು. ಅವರ ಕೆಲಸ ಹುಚ್ಚರ ಮೇಲೆ ಸಿಟ್ಟು ಮಾಡಿಕೊಳ್ಳದಿರುವುದು. ಅವರ ಕೆಲಸ ಹುಚ್ಚರ ಮೇಲೆ ಸಿಟ್ಟು ಮಾಡಿಕೊಳ್ಳುವುದು ಮತ್ತು

ಕಾಳಿದಾಸನ ಕಾಲದಲ್ಲಿ-

ಲೇಖಕರು:—ಎನ್. ರಾಜಗೋಪಾಲಕೃಷ್ಣರಾಯರು, "ಸೂಕ್ತಿ" ಸಂವಾದಕರು.

ಮಹಾಕವಿ ಕಾಳಿದಾಸನ ಹೆಸರುಕೇಳದವರು ವಸುಮತಿಯಾದ ಈ ನಮ್ಮ ಭರತಭೂಮಿಯಲ್ಲಿ ಬಹಳ ವಿರಳ. ಆದರೂ, ಆ ಕಾಳಿದಾಸನ ಕುರಿತು 'ಕಾಳಿದಾಸ', 'ವಿಕ್ರಮಾದಿತ್ಯ', 'ಶಕುಂತಲಾ', 'ಮೇಘದೂತ', ಎಂಬ ಎರಡೊಂದಿಷ್ಟು ಕತೆಗಳಲ್ಲದೆ, ನಮ್ಮಲ್ಲಿ ಹಲವರಿಗೆ ಇನ್ನೇನೂ ಗೊತ್ತಿಲ್ಲವೆಂಬ ಮಾತ್ರ ದುಃಖ. 'ಶಕುಂತಲಾ', 'ಮೇಘದೂತ'—ಇವು ಮಾತ್ರವಲ್ಲದೆ, ಇನ್ನೂ ಎಷ್ಟೋ ಕಾವ್ಯಗಳನ್ನೂ ನಾಟಕಗಳನ್ನೂ ಆ ಮಹಾಕವಿ ಬರೆದುಹೋಗಿದ್ದಾನೆಂಬುದು ನಮ್ಮಲ್ಲಿ ಎಷ್ಟು ಮಂದಿಗಾದರೂ ಗೊತ್ತಿದೆ? ಕಾಳಿದಾಸನೆಂದು ಹೆಸರು ತೆಗೆವಲ್ಲಿಯೋ, ಅವನ ವಿಷಯವಾಗಿ ಚರ್ಚೆಗೆ ನಿಲ್ಲುವಲ್ಲಿಯೋ, ಅವನನ್ನು ಮಾತ್ರ ಅಗತ್ಯವಾಗಿಯೂ ಬಹಳ ದೊಡ್ಡದು ಮಾಡಿಯುತ್ತೇವೆ ನಾವು!

ತನ್ನ ವಿಷಯವಾಗಿ ಆ ಮಹಾಕವಿ ತಾನೇನನ್ನೂ ಬರೆದಿಟ್ಟಿದಿಲ್ಲ; ಅವನ ಸಮಕಾಲಿಕರಾದಾನರೂ ಏನಾದರೂ ಬರೆದುಹೋಗಿರುವುದೆಂದರೆ, ಅದೂ ಇಲ್ಲ. ಹೆಚ್ಚೇಕೆ? ಅವನ ಆ ಕಾವ್ಯಗಳ ಮುಖ್ಯಟೀಕಾಕಾರನಾದ ಆ ಘುಲ್ಲನಾಥನೂ ಅವನ ವಿಷಯದಲ್ಲಿ ಏಕಪ್ರಕಾರ ನೀರವ! ಅವನ ಸ್ವವಿಷಯವಾಗಿ ಅಂತದೇನೂ ತಿಳಿದಿಲ್ಲವೆನ್ನಿನ; ಆದರೂ, ಆ ಯುಗದಲ್ಲಿ ಅವನ ಅವತಾರವಾಗಿದ್ದಿತೋ ಆ ಯುಗದ ಅನೇಕವೃತ್ತಾಂತಗಳನ್ನು ಅವನ ಆ ಗ್ರಂಥಗಳಿಂದ ನಾವು ತಿಳಿಯಬರುವಂತಿದೆ. ಇದೂ ಒಂದು ಆನಂದವೇ, ತಾನೆ?

ಮಹಾಕವಿಯ ಎಲ್ಲ ಕಾವ್ಯಗಳನ್ನೂ ನಾಟಕಗಳನ್ನೂ ಓದಿ ಮನನಮಾಡುವ ಸುಯೋಗವೂ ಸೌಭಾಗ್ಯವೂ ದೊರೆದವರಿಗೆ ಮಾತ್ರವೇ ಅವನ ಆ ಕಾಲದ ಜನತೆಯ ಪರಿಸ್ಥಿತಿಯ ಕುರಿತು ಅನೇಕಸಂಗತಿಗಳು ತಿಳಿಯಲು ಸಾಧ್ಯವಿದೆ. ನಾನಾ ವಿದ್ಯೆಗಳಲ್ಲಿ ಆಗಳಿನ ಜನರಿಗೆ ಒಳ್ಳೆಯ ಅಭಿನಿವೇಶವೂ ಅಭಿಮಾನವೂ ಇದ್ದಂತೆ ತೋರುತ್ತಿದೆ. ಚಿತ್ರವಿದ್ಯೆಯೇನು, ಗೀತವಾದ್ಯಗಳೇನು, ಮೂರ್ತಿಶಿಲ್ಪವೇನು, ಕಾರು ಕಾರ್ಯಗಳೇನು,—ಎಲ್ಲ ವಿಷಯಗಳಲ್ಲಿಯೂ ಅವರಿಗೆ ಅಪರಿಮಿತವಾದ ಅನುರಾಗವೇ.

ಅರಸರ ಅರಮನೆಗಳಲ್ಲಿ ಆಗಳಿನ ದಿನಗಳಲ್ಲಿ ಸಾಮಾನ್ಯವಾಗಿ ಒಂದೊಂದಾದರೂ 'ಚಿತ್ರಶಾಲೆ'ಯಿಲ್ಲದೆ ಇಲ್ಲ. ಚಿತ್ರಕಾರರು ಬಂದು ಈ ಎಲ್ಲ ಚಿತ್ರಶಾಲೆಗಳಲ್ಲಿ ಅರಸರ ಅಥವಾ ಅರಸಿಯರ ಅಪ್ಪಣೆಯಂತೆ ಚಿತ್ರಗಳನ್ನು ಬರೆದುಕೊಡುವರು.(೧) 'ಆರ್ಟ್ ಗ್ಯಾಲರಿ'ಯೆಂದು ಈಗಳಿನವರೇನು ಹೇಳುವರೋ ಆ ಪರಿಯಾಗಿ ನಾನಾವಿಧದ ಚಿತ್ರಗಳ ಸಂಗ್ರಹಾಲಯಗಳೂ ಅಲ್ಲಲ್ಲಿ ಇರುತ್ತಿದ್ದುವು. ಚಿತ್ರಕಾರರೇ ಚಿತ್ರಗಳನ್ನು ಬರೆಯುತ್ತಿದ್ದರೆಂದಲ್ಲ; ತಾವಾಗಿ ಅರಸರೂ ಅನೇಕವೇಳೆ ಈ ಚಿತ್ರವಿದ್ಯೆಯನ್ನು ಅನುಶೀಲನ ಮಾಡುತ್ತಿದ್ದರು. 'ಶಕುಂತಲೆ'ಯ ದುಷ್ಯಂತ, 'ವಿಕ್ರಮೋರ್ವಶಿ'ಯ ಪುರೂರವ, 'ರಘುವಂಶ'ದ ಅಗ್ನಿವರ್ಣ,—ಈ ರಾಜರು ಚಿತ್ರಗಳನ್ನು ಬರೆದ ವಿವರಣವು ದೊರೆಯುತ್ತಿದೆ. 'ಮೇಘದೂತ'ದ ಆ ಯಕ್ಷನೂ ಮಧ್ಯೆ ಮಧ್ಯೆ ಭಾವಚಿತ್ರಗಳನ್ನು ಬರೆದಿಡಲು ಪ್ರಯತ್ನಪಟ್ಟಿದ್ದಾನೆ.

ಗಂಡುಸರೇ ಅಲ್ಲ; ಆ ಕಾಲದ ಹೆಂಗುಸರೂ ಈ ವಿಷಯದಲ್ಲಿ ಹಿಂದೆಗೆದಿಲ್ಲ. ಅವರಲ್ಲಿಯೂ ಕೆಲಕಲವರು ಚಿತ್ರಲೇಖನದಲ್ಲಿ ತುಂಬ ಶಕ್ತರಾಗಿದ್ದರು. ಪ್ರವಾಸಿಯಾದ ಪತಿಯ ಚಿತ್ರವನ್ನು 'ಮೇಘದೂತ'ದ ಯಕ್ಷಪತ್ನಿ ಬರೆದಿಟ್ಟಿದ್ದಾಳೆ.(೨) 'ಕುಮಾರಸಂಭವ'ದ ಪಾರ್ವತಿಯೂ ಕನ್ಯಾವಯಸ್ಸಿನಲ್ಲಿ ಇತರವಿದ್ಯೆಗಳ ಜೊತೆಗೆ ಚಿತ್ರವಿದ್ಯೆಯನ್ನೂ ಕಲಿತಿದ್ದಳೆಂಬ ವೃತ್ತಾಂತವು ಆಕೆಯ ಸಖಿಯ ಮುಖದಿಂದಲೇ ನಮಗೆ ದೊರೆದಿದೆ.(೩)

ಭಾಸ್ಕರ್ಯಧ್ಯ, ಅಥವಾ ಮೂರ್ತಿನಿರ್ಮಾಣದ ವಿದ್ಯೆಯಲ್ಲಿಯೂ, ಆಗಳಿನ ಕಾಲದ ಜನರು ವಿಶೇಷವಾದ ಉನ್ನತಿಯನ್ನೇ ಪಡೆದಿದ್ದರು. ರಾಜಮಾರ್ಗಗಳಲ್ಲಿಯೂ ಉದ್ಯಾನಗಳಲ್ಲಿಯೂ ಈಗಳಿನಂತೆ ಆಗಲೂ ಅರ್ಧನಗ್ನನಾರೀವಿಗ್ರಹಗಳು ಆಯಾ ಸ್ಥಾನಗಳಲ್ಲಿ ಶೋಭಾವೃದ್ಧಿಯನ್ನು ಉಂಟು ಮಾಡುತ್ತಿದ್ದುವೆಂದು ಮಹಾಕವಿಯ ಗ್ರಂಥಗಳ ಎಷ್ಟೋ ಕಡೆ ಬರೆದಿರುವುದನ್ನು ನಾವು ನೋಡಬಹುದು. ಈ ವಿಗ್ರಹಗಳು ಮರದಿಂದ ಮಾಡಿದುವೆಂದು ಟೀಕಾಕಾರನಾದ ಮಲ್ಲಿನಾಥನು 'ರಘುವಂಶ'ದ ಟೀಕೆಯ ಒಂದೆಡೆ ಹೇಳಿರುವುದಾದರೂ, ಇವು ಮರದುವೋ ಶಿಲೆಯುವೋ ಎಂಬು ಸ್ಪಷ್ಟವಾಗಿ ತಿಳಿಸಿಲ್ಲ. ಮಹಾಕವಿಯೇನನ್ನೂ ಹೇಳಿದುದಿಲ್ಲ. ಉತ್ಸವಕಾಲದಲ್ಲಿ ಪುರವನ್ನು ಬಂಗಾರದ ತೋರಣಗಳಿಂದಲೂ ಚೀನಾಯಕೇತಿಮೆಯ ಪತಾಕೆಗಳಿಂದಲೂ ಸಿಂಗರಿಸಿರುವ ವಿವರಣವನ್ನು(೪) ನೋಡಿದರೆ, ಆಗಳಿನ ಕಾಲದಲ್ಲಿ ಅಭಿವೃದ್ಧಿಯಾಗಿದ್ದ ಕಲಾಕೌಶಲ್ಯದ ಎಷ್ಟೋ ಪರಿಚಯವು ದೊರೆಯದೆ ಇರದು.

ಅನಿತು ದಂತದ ಪದಾರ್ಥಗಳಲ್ಲಿಯೂ ಆಗಳಿನ ಕಾಲದಲ್ಲಿ ಅತ್ಯಾದರವಿದ್ದಿತು. ಸ್ವರ್ಣಸಿಂಹಾಸನದ ಬದಲು ಅರಸರು ಕೆಲವರು ದಂತದ ಸಿಂಹಾಸನದಲ್ಲಿ ಓಲಗಿಸುತ್ತಿದ್ದರು.(೫) ಬಟ್ಟೆಯ ಮೇಲೂ ಬಹುಸುಕ್ಷ್ಮವಾಗಿ ಕಸೂತಿ ಹಾಡುವುದಕ್ಕೆ ಆಗಳಿನವರು ಶಕ್ತರಾಗಿದ್ದರು.

ಗೀತವಾದ್ಯಗಳಲ್ಲಿ ಅವರಿಗೆ ತುಂಬ ಅನುರಾಗವಿದ್ದಿತು. ಅರಸರೂ ಅರಸಿಯರೂ ಹಲವರು ಸೇರಿ ಒಟ್ಟಿಗೆ ಹಾಡುವರು; ಬಾರಿಸುವರು.(೬) ರಾಣಿಯರಿಗೆ ತಮ್ಮತಮ್ಮ ಸಂಗೀತಶಾಲೆಗಳೂ ಇದ್ದುವು; ಅಲ್ಲಿ ಅವಶ್ಯವರು ಇಚ್ಛಾನುಸಾರವಾಗಿ ಸಂಗೀತವನ್ನೂ ವಾದ್ಯಗಳನ್ನೂ ಹಾಡಿಬಾರಿಸುತ್ತಿದ್ದರು.(೭) ಸಂಬಳಕ್ಕೆ ನಿಂತ ಗಾಯಕರೂ, ವಾದ್ಯವಾದಕರೂ, ನರ್ತಕನರ್ತಕಿಯರೂ,—ಎಲ್ಲವೂ ಇದ್ದಕು ಆ ಕಾಲದಲ್ಲಿ; ಇರಲಿಲ್ಲವೆಂದರೆ, ಕೇವಲ ಈಗಳಿನ ಕಾಲದ 'ಥಿಯೇಟರು'ಗಳಂತಹ ನರ್ತಕಿಯರ ದಳಗಳು. ರಾಜಸಭೆಯಲ್ಲಿ ನರ್ತಕಿಯರು ದಳಕಟ್ಟಿಕೊಂಡು ಕುಣಿಯುತ್ತಿದ್ದದೆಂಬ ಅಂತಹ ವ್ಯಾಪಾರದ ಉಲ್ಲೇಖವು ಮಹಾಕವಿಯ ಆವ ಕಾವ್ಯಗಳಲ್ಲಿಯೂ ನಾಟಕಗಳಲ್ಲಿಯೂ ದೊರೆವುದಿಲ್ಲ. ವಾದ್ಯಯಂತ್ರಗಳ ಅನೇಕಪ್ರಭೇದಗಳೂ ಹೆಸರುಗಳೂ ದೊರೆಯುತ್ತಿವೆ. ಢೋಲಕ—ಢಕ್ಕಾ—ಶೃಂಗಗಳೆಂಬಿವಂತೂ ಇದ್ದುವಷ್ಟೆ?(೮) ವೀಣೆಯೋ, ವೇಣುವೋ, ಮೃದಂಗವೋ, ತಬಲೆಯೋ, ಇನ್ನೂ ಆವುದು ಬೇಕು? ಎಲ್ಲವೂ ಅಲ್ಲಿದೆ. ಗೀತವಾದ್ಯಗಳನ್ನು ಕಲಿಯಿಸುವ ಸೌಕರ್ಯವನ್ನು ಹುಟ್ಟುಮಾಡಿಕೊಡುವುದಕ್ಕಾಗಿ ಕೆಲವರು ರಾಜರು ತಮ್ಮ ವೆಚ್ಚದಿಂದ 'ಸಂಗೀತವಿದ್ಯಾಲಯ'ಗಳನ್ನೂ ಕೆಲವಿದ್ದಂತೆ ತೋರುತ್ತಿದೆ.(೯)

ಆ ಯುಗದ ವಿದ್ಯಾಭ್ಯಾಸದ ಅಭಿವೃದ್ಧಿಯನ್ನು ಕುರಿತು ಹೇಳುವುದೇ ಕೇವಲ ಬಾಹುಳ್ಯವಾಗುವುದು. ಸಾಮಾನ್ಯ ಚೀಟಿಯರೇನು, ಪ್ರಹರಿಣಿಯರ್ಯೇನು, ವರಜಾರಿಕೆಯರೇನು,—ಅಂತವರಿಗೂ ಓದುಬರಿಕೆವು ಬರುತ್ತಿದ್ದಿತು; ಸುಲಲಿತವಾದ ಪದ್ಯದಲ್ಲಿ ಪ್ರೇಮಪತ್ರಗಳನ್ನು ಬರೆಯಲು ಕುಮಾರಿಯರೂ ಶಕ್ತರಾಗಿದ್ದರು; ರಾಣಿಯರ ಪತ್ರಗಳನ್ನು ಬರೆದೋದಿಮಾಡುವ 'ಲಿಪಿಕರಿ'ಯರು, ಆರ್ಥಾತ್ ಸ್ತ್ರೀಸೆಕ್ರೆಟರಿಗಳು ಬೇಕಾದಷ್ಟು. ನಿದ್ಯಾವತಿಯರಾಗಿ ದೊಡ್ಡದೊಡ್ಡ ಉಪಾಧಿಗಳನ್ನು, ಅಥವಾ ಪದವಿಗಳನ್ನು,—'ವಂದಿತಾ', 'ಕೌತಿಕೀ' ಮೊದಲಾದ ಮೇಲುಹೆಸರುಗಳನ್ನು—ಪಡೆದ ಹೆಂಗುಸರೂ ಆ ಕಾಲದಲ್ಲಿ ಕಡಿಮೆಯಿರಲಿಲ್ಲ; ಮಹಿಳಾಕವಿಗಳಿಂದ ಬರೆಯಲ್ಪಟ್ಟ ನಾಟಕಗಳ ಅಭಿನಯವನ್ನು ಪುರುಷಪುಂಗವರೂ ಆಗ್ರಹದಿಂದನೆ ನೋಡಲು ಬರುತ್ತಿದ್ದರು. ಇದರಿಂದ ಆ ಕಾಲದ ಜನಸಾಮಾನ್ಯದಲ್ಲಿಯೂ ಎಷ್ಟುಮಟ್ಟಿಗೆ ವಿದ್ಯೆಯ ಉನ್ನತಿಯುಂಟಾಗಿದ್ದಿತೆಂಬುದನ್ನು ಸಹಜವಾಗಿ ಊಹಿಸಬಹುದು.

ವಿಜ್ಞಾನದಲ್ಲಿಯೂ ಜ್ಯೋತಿಷದಲ್ಲಿಯೂ ಆ ಕಾಲದ ಜನಗಳ ಜ್ಞಾನವು ಅಸೀಮವಾದುದ್ದೇ. ಈಗಳಿನಂತೆ ಆಗಳಿನ ಕಾಲದಲ್ಲಿ ಸಲ್ಲಿಯ ನೀರು ದೊರೆಯುತ್ತಿರಲಿಲ್ಲ ವೇನೋ ನಿಜ; ಆದರೆ, ಆಗಳಿನವರಲ್ಲಿಯೂ ಅನೇಕರು ತೋಧಿನಿಯೇ ನೀರನ್ನು ಕುಡಿಯುತ್ತಿದ್ದರು. ಅವರ ಈ ಜಲಶೋಧನವು ಕೆಲ ಹೊಗಳಿಂದ ಆಗುತ್ತಿದ್ದಿತು;(೧೦) ಕೆಲ ಹೂಗಳಿಂದು ಆವ ಹೂಗಳನ್ನು ಅವರು ನಿರ್ದೇಶಿಸುತ್ತಿದ್ದರೋ, ಹೇಳಲಾಗುವುದಿಲ್ಲ. ಈಗಳಿನಂತೆ ಯಂತ್ರಗಳಾಗ ಇರಲಿಲ್ಲವಾದರೂ, ವಿದೇಶದಿಂದ ತರಿಸುವ ಅವಶ್ಯಕತೆಯಿಲ್ಲದೆಯೇ ಆಗಳಿನವರು ಅದೊಂದು ಬಗೆಯ ಯಂತ್ರವನ್ನೂ ತಾವೇ ನಿರ್ಮಾಣಮಾಡುತ್ತಿದ್ದರು; ತಣ್ಣೂಲಕ, ನೀರು ನಿರ್ಝರ (fountain)ದಂತೆ ಮೇಲೆದ್ದು ಕೆಳಗೆ ಬೀಳುತ್ತಿದ್ದಿತು.(೧೧) 'ಇಲೆಕ್ಟ್ರಿಕ್ಸ್' ದೀವಗಳಾಗ ಉರಿಯುತ್ತಿರಲಿಲ್ಲವಾದರೂ ಎಷ್ಟೊಂದು ತೇಜಸ್ಸುಳ್ಳ ಬೆಳಕನ್ನು ಆಗಳಿನ ಕಾಲದವರು ಕಲ್ಪಿಸಲು ಶಕ್ತರಾಗಿದ್ದರೆಂದರೆ, ನಗರದ ವಿಶಾಲವಾದ ಪ್ರದೇಶವನ್ನೂ ಅದೊಂದೇ ಬೆಳಕಿನಿಂದ ಬೆಳಗಿಸಲು ಸಾಧ್ಯವಿದ್ದಿತು. ವಿರಾಟ್ಸ್ವಾಮಿಯುಳ್ಳ ಶಿವವಿಗ್ರಹವನ್ನು ನಿರ್ಮಿಸಿ ಆ ವಿಗ್ರಹದ ತಲೆಯ ಮೇಲೆ ಚಂದ್ರನಂತೆ ಬೆಳಕೊಂದನ್ನು ಸಾಮಾನ್ಯವಾಗಿ ಅವರು ಇಡುತ್ತಿದ್ದರು; ಆ ಬೆಳಕಿನ ತೇಜಸ್ಸಿನಿಂದ ಕಗ್ಗತ್ತಲೆಯ ರಾತ್ರಿಯೂ ಬೆಲ್ದಿಂಗಳು ತುಂಬಿದಂತೆ ಭಾಸವಾಗುತ್ತಿದ್ದಿತು.(೧೨) ಇನ್ನೂ, ಆಗಳಿನ ಕೆಲವರು ವಜ್ರವೇ ಮೊದಲಾದ ಅಮೂಲ್ಯವಾದ ಹರಳುಗಳ ಸುಂದರವಾದ ನೆಕಲನ್ನೂ ಸಿದ್ಧಮಾಡಲು ಸಮರ್ಥರಾಗಿದ್ದರು.(೧೩)

ಚಂದ್ರನಲ್ಲಿ ನಿಜಸ್ವವಾದ ಬೆಳಕೇನೂ ಹೆಚ್ಚಿಲ್ಲ; ಸೂರ್ಯಪ್ರಕಾಶವು ಅವನ ಮೇಲೆ ಬೀಳುವುದೆಂಬೀ ತಿಂಗಳ ಬೆಳಕನ್ನು ನಾವು ಅನುಭವಿಸುತ್ತೇವೆ—ಎಂಬ ಈ ತತ್ತ್ವವೂ ಅವರಿಗೆ ಚೆನ್ನಾಗಿ ಗೊತ್ತಿದ್ದಿತು.(೧೪) ಚಂದ್ರನ ಆಕರ್ಷಣದಿಂದ ಸಮುದ್ರದ ನೀರು ಉಕ್ಕೇರುವ, ನದೀವಕ್ಷಸ್ಸಿನಲ್ಲಿ ಏರಿಳಿತಗಳಾಡುವ, ಈ ಸುದ್ದಿಯನ್ನು ಅವರೂ ಇಟ್ಟಿದ್ದರು.(೧೫) ಶರತ್ಕಾಲದ ನೀಲಾಕಾಶದಲ್ಲಿ ಯಾವ 'ಛಾಯಾಪಥ' ವೆಂಬುದನ್ನು ನಾವು ನೋಡುವೆವೋ—ಇಂಗ್ಲೀಷರು ಯಾವುದನ್ನು 'Milky Way' ಎನ್ನುವರೋ,—ಆ ಛಾಯಾಪಥವೆಂಬುದು ಆ ಯುಗದ ಮಾತಲ್ಲದೆ ಈ ಯುಗದ್ದಲ್ಲ.(೧೬) ಅಮಾವಾಸ್ಯೆಯ ಅನಂತರ ಚಂದ್ರನು ಸೂರ್ಯನ ಹತ್ತಿರದಿಂದ ದೂರಕ್ಕೆ ಹೋಗುವನೆಂದು ಆ ಯುಗದವರೂ ಬಲ್ಲರು;(೧೭) ವಸಂತಕಾಲದ ಬಳಿಕ ಉತ್ತರದಿಕ್ಕಿಗೂ ವರ್ಷಾಸಮಯದಲ್ಲಿ ದಕ್ಷಿಣದಿಕ್ಕಿಗೂ ಸೂರ್ಯನು ತಪ್ಪದೆ ಚಲಿಸುತ್ತಿರುವನೆಂಬ ಇದನ್ನೂ ಬಲ್ಲರು.(೧೮) ಭೂಮಿಯ ನೆಳಲು ಚಂದ್ರನ ಮೇಲೆ ಬೀಳುವುದೆಂದೇ ಆ ಚಂದ್ರನು ನುಲಿನನಾಗಿ ತೋರುವನೆಂದೂ, ಆರ್ಥಾತ್ ಚಂದ್ರಗ್ರಹಣವು ಇದರಿಂದಲೇ ಆಗುವುದೆಂದೂ, ಈಗಳಿನವರು ಪ್ರಯಾಸಪೂರ್ವಕವಾಗಿ ತಿಳಿದುವ ಈ ರಹಸ್ಯವು ಆಗಳಿನವರಿಗೂ ಅಜ್ಞಾತವಾಗಿರಲಿಲ್ಲ.(೧೯)

'ನಾಲೀಕದ' ಅಥವಾ ಬಂದೂಕಿನ ವ್ಯವಹಾರವನ್ನೂ ಆಗಳಿನ ಕಾಲದಲ್ಲಿ ಅನೇಕರು ಅರಿತಿದ್ದರು.(೨೦) "ನಳ ಮಹಾರಾಜನು ಅರಿಯ ಮೇಲೆ ಅಕ್ಕಂತದೀಪ್ತವಾದ ನಾಳೀಕವನ್ನು ಬಿಡುತ್ತಿದ್ದನೆಂದು" ಮಹಾಕವಿ ಹೇಳುವ ಭಾವದಿಂದ ಆಗಳಿನ-ಕಾಲದಲ್ಲಿ ಈ ಬಂದೂಕಿನ ಪ್ರಯೋಗವೆಂಬುದು ಬಹುಶೂರಕೃದ ಕಾರ್ಯವಾಗಿದ್ದಿರಬೇಕು.

ಮಹಾಕವಿಯ ಮಹಾಕಾವ್ಯದಲ್ಲಿಯೂ 'ಜಾಮಿತ್ರ'ವು ಮಾತಾಡಿತ್ತಿದೆ.(೨೧) ನುರೋಪೀಯ ವಂದಿತರ ಅಭಿಪ್ರಾಯದಂತೆ, ಈ 'ಜಾಮಿತ್ರ'ಶಬ್ದವು 'Geometry'ಯ ಅಭ್ರಂಶವಂತೆ! ಅವರಿಗಂತೂ ಈ ಶಾಸ್ತ್ರವು ಗ್ರೀಕರಿಂದ ಕಲಿಯಲ್ಪಟ್ಟಿದು!

ನೌಕಾನಿರ್ಮಾಣದಲ್ಲಿಯೂ ಆಗಳಿನವರು ತುಂಬ ಪಾರಂಗತರು. ವಾಣಿಜ್ಯಕ್ಕಾಗಿ ಜಲಪ್ರಯಾಣ ಸಮುದ್ರಪಥದಲ್ಲಿ ಪ್ರಯಾಣಮಾಡುವ ಅನೇಕವೃತ್ತಾಂತಗಳನ್ನೂ

(೧) ಮಾಲವಿಕಾಗ್ನಿಮಿತ್ರ, ದ್ವಿತೀಯಾಂಕ. (೨) ಉತ್ತರ ಮೇಘ ೨೮. (೩) ೫/೪೪.

(೪) ರಘುವಂಶ, ೯/೬೬. (೫) ಶಾಕುಂತಲಾ ಪಂಚಮಾಂಕ. (೬) ಕುಮಾರಸಂಭವ, ೧೦/೫೬. (೭) ಮಾಲವಿಕಾಗ್ನಿಮಿತ್ರ, ಪ್ರಥಮಾಂಕ.

(೮) ಕುಮಾರ ಸಂಭವ, ೭/೩. (೯) ರಘುವಂಶ, ೧೬/೬೪. (೧೦) ರಘುವಂಶ, ೯/೬೬. (೧೧) ರಘುವಂಶ, ೬/೪೪. (೧೨) ವಿಕ್ರಮೋರ್ವಶೀಯ, ದ್ವಿತೀಯಾಂಕ. (೧೩) ರಘುವಂಶ, ೬/೩೨ (೧೪) ರಘುವಂಶ, ೬/೩೨ (೧೫) ರಘುವಂಶ, ೬/೩. (೧೬) ರಘುವಂಶ, ೬/೪೬. (೧೭) ರಘುವಂಶ, ೬/೪೬. (೧೮) ರಘುವಂಶ, ೧೭/೪೮. (೧೯) ಸಲೋಮದಯ, ೧/೪೪. (೨೦) ಕುಮಾರಸಂಭವ, ೭/೧.

ಮೆಯ ಮಹಾಕವಿಯು ಈಸ್ಟಗಳಲ್ಲಿ ಕಾತ್ತ ಮೋಡಬಹುದು. ಅಲ್ಲಾಗ ಸಾಮ್ರಾಜ್ಯಗಳು (Merchant Venture) ಗಳೂ ಇದ್ದವು; ಇದ್ದುವೆಷ್ಟೆ? ಹಿಳ್ಳಿಲೆಯೂ, ದೊಡ್ಡ ದೊಡ್ಡ ಯುದ್ಧನಾವೆಗಳನ್ನು ನಿರ್ಮಿಸಿಕೊಳ್ಳಲು ಅವರು ಸಮರ್ಥರಾಗಿದ್ದರೆಂಬುದರಲ್ಲಿ ಆವ ಸಂದೇಹವೂ ಇಲ್ಲ. ಬಂಗಾಳ, ಉರ್ಜಾತ ವರಗದೇಶವು ಇದರಲ್ಲಿ ಮುಂದಾಗಿದ್ದಿತು. ವಂಗಿಯರಾದ ಬಂಗಾಲಿಗಳು ನೌಕಾಜಾನಯನ್ನೇ ಕೂಡಿಕೊಂಡು ಗಂಗಾನದಿಯಲ್ಲಿನಲ್ಲಿ ನಂತು ಬಹಿಷ್ಕಾರಗಳ ಆಕ್ರಮಣದಿಂದ ತಮ್ಮ ದೇಶವನ್ನು ರಕ್ಷಿಸುತ್ತಿದ್ದರಂತೆ.(೨೧) ಸಿಂಧುನದಿಯ ಆಚೆಯ ತಟದಿಂದ ಆಗಲಿನ ಬಲೂಚಿಸ್ತಾನ ಮತ್ತು ಅದರ ಉತ್ತರಪಶ್ಚಿಮಕ್ಕೆ ಇದ್ದ ಪ್ರದೇಶಗಳಲ್ಲಿ ಆಗಲಿನವರು ನಾರಸ್ಯದೇಶವೆನ್ನುತ್ತಿದ್ದರು. ಈ ಕಾರಸ್ಯದೇಶವನ್ನು ಸೇರಬೇಕಾದರೆ, ಜಲ, ಸ್ಥಲ, ಖಾಭಯಪಥಗಳನ್ನಿ ಉಪಯೋಗಿಸಬೇಕಾಗುತ್ತಿದ್ದುದರಿಂದ, ಆಗಲಿನ ಅರಬ್ಬೀಸಮುದ್ರವೆಂಬುದನ್ನು ದಾಟಲಬೇಕಾಗಿದ್ದ ಹಡಗುಗಳೆಲ್ಲ ನಿಷ್ಟವಾಗಿಯೂ ವೈಬಲಸಾಧು ಏರಬೇಕು.

ಆಗಲಿನ ದಿನಗಳಲ್ಲಿ ವಿಚಾರವಿತಿಗಳಿಂದರೆ, ರಾಜರೇ; ಎಂದಾದರೊಮ್ಮೆ ರಾಜರ ಆದೇಶದಿಂದ ಅಥವಾ ಅನುಮತಿ ಪಡೆದು ಮಂತ್ರಿಯೂ ವಿಚಾರಮಾಡುತ್ತಿದ್ದನು. ರಾಜರಿಗೆ ಮಂತ್ರಿಗಳು ಒಬ್ಬರಲ್ಲ, ಅನೇಕರು; ಸೇನೆಗಳ ಮೇಲೊಬ್ಬ ಸೇನಾಪತಿಯೂ ಇದ್ದನು. ನಗರದ ಕಾಂತಿರಕ್ಷಣಕ್ಕಾಗಿ ಇದ್ದನೊಬ್ಬ ನಗರಾಧ್ಯಕ್ಷ; ದೂರಪ್ರದೇಶಗಳ ಶಾಸನ ಕಾರ್ಯದಲ್ಲಿ ನಿಯುಕ್ತನಾಗಿದ್ದವನು 'ರಾಜ್ಞಮುಖ'; ರಾಜ್ಯದ ಮೇರೆಗಳನ್ನು ನಿರಾಪದವಾಗಿ ಕಾಪಿಡುವ ಬಗೆಗೆ 'ಅಂತಪಾಲ'.(೨೨) ಚಕ್ರಾಧಿಪನಾದ ಆ ರಾಜನ ಅಧೀನತೆಯಲ್ಲಿದ್ದ ಚಿಕ್ಕಚಿಕ್ಕ ಅನೇಕ ಕ್ಷುದ್ರರಾಜರುಗಳೆಲ್ಲ 'ಸಾಮಂತರಾಜ'ರೆಂಬ ಒಂದೇ ಹೆಸರು; ಇತರರಾದ ಎಲ್ಲ ರಾಜರನ್ನೂ ಯುದ್ಧದಲ್ಲಿ ಜಯಿಸಲು ಸಮರ್ಥನಾದ ಆ ರಾಜನೇ 'ಸಮ್ರಾಟ್' ಎಂದು ಕರೆಯಲ್ಪಡುವನು.(೨೩) ರಾಜಪುತ್ರರಲ್ಲಿ ಎಲ್ಲರೂ ಆಗಲಿನ ದಿನಗಳಲ್ಲಿ ವಿಕೃಭಕ್ತರೇ ಆಗಿದ್ದರೆಂಬುದಿಲ್ಲ; ತಂದೆಯಿರುವಾಗಲೇ ಅಸಹಜಪಾಯಗಳಿಂದ ಸಿಂಹಾಸನವನ್ನು ಕರಗತಮಾಡಿಕೊಂಡ ಮಗನ ಕತೆಯೂ ಇಲ್ಲವೆಂದು ಹೇಳಲಾಗದು.(೨೪)

ಬೆಳಗಿಂದ ಮಧ್ಯಾಹ್ನದ ವರೆಗೆ ರಾಜಕಾರ್ಯವು ನಡೆಯುತ್ತಿದ್ದಾಗ;(೨೫) ಆಗಲಿನಂತೆ ಹಕ್ಕರಿಂದ ಆಯ್ಕರ ವರೆಗೆ 'ಆಳಿಸು'ಮಾಡುವ ರೀತಿಯಲ್ಲ. ಪ್ರಾಯೋನ, ರಾಜರು ಎಲ್ಲವಿಷಯಗಳಲ್ಲಿಯೂ ತಮ್ಮದೊಂದು ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳಲು ಯತ್ನಮಾಡುತ್ತಿದ್ದರು. ಅರಿಗಳ ಮೇಲೆ ಪ್ರಯೋಗಿಸುವ ಬಾಣಗಳಲ್ಲಿ ತಮ್ಮ ತಮ್ಮ ನಾಮಾಕ್ಷರಗಳನ್ನು ಕೆತ್ತಿಸಿಕೊಳ್ಳುವ ಸಂಪ್ರದಾಯವು ಆಗಲಿನ ಕಾಲದ ಯೋದ್ಧೃಗಳಲ್ಲಿ ಅಧಿಕ ಒಂದು ರೀತಿ ಅಥವಾ "ಫ್ಯಾಷನ್" ಆಗಿದ್ದಿತು;(೨೬) ಅನೇಕವೇಳೆ ಏರುತ್ತಿದ್ದ ರಥಗಳಿಗೂ ಒಂದೊಂದು ಹೆಸರಿರುತ್ತಿದ್ದಳು; ತನ್ನ ರಥವನ್ನು ಒಬ್ಬನು 'ನೋಮದತ್ತ'ನೆಂದು ಕರೆಯುತ್ತಿದ್ದನು;(೨೭) ಇನ್ನೊಬ್ಬನು 'ವಿಜಿತ್ಯರ'ನೆಂದು.(೨೮) ಈ ರಥಗಳ ಪತಾಕೆಗಳಲ್ಲಿಯೂ ಆಗಲಿನ ಕಾಲದಲ್ಲಿ ವಿಶೇಷತ್ವವಿದ್ದಿತು; ಒಬ್ಬರ ಪತಾಕೆಯಲ್ಲಿ ಚಿತ್ರಿತವಾದುದೊಂದು 'ಹರಿಣ'; ಇನ್ನೊಬ್ಬರದರಲ್ಲಿ 'ಮತ್ಸ್ಯ';(೨೯) – ಈ ಬಗೆಯಾಗಿ. ಬೇರೆ ಬೇರೆಯ ಪ್ರಾಸಾದ (Palace)ಗಳಿಗೆ ಬೇರೆ ಬೇರೆಯ ಹೆಸರುಗಳನ್ನು ಎಷ್ಟೋಮಂದಿ ಪ್ರತಿಷ್ಠೆಯ ಕಾರಣದಿಂದ ಇಡುತ್ತಿದ್ದರುಂಟು; ಒಂದಕ್ಕೆ 'ದೇವಧೃನ್ಸ'ನೆಂದು; ಒಂದಕ್ಕೆ 'ವೇಳಚ್ಛಂದ' ವೆಂದು; ಒಂದಕ್ಕೆ 'ವೈಜಯನ್ತ'ನೆಂದು; ಒಂದಕ್ಕೆ 'ಮಣಿಹರ್ಮ್ಯ'ವೆಂದು;–ಹೀಗೆ ಹೆಸರುಗಳಿದ್ದುವು. ಯಕ್ಷಪತಿ ಕುಬೇರನ ಆ ಉದ್ಯಾನಕ್ಕೂ ಹೆಸರಿದ್ದಿತು. 'ವೈಭ್ರಾಜ' ವೆಂದು.(೩೦)

ಯೂರೋಪೀಯಯೋದ್ಧೃಗಳು ಪೂರ್ವಕಾಲದಲ್ಲಿ ಯುದ್ಧಮಾಡುತ್ತಿದ್ದುದು ಲೋಹದ ಕವಚವನ್ನು ತೊಟ್ಟು; ಅದೇ ನಮ್ಮ ದೇಶದಲ್ಲಿ ಕೂಲಾಕವಚವನ್ನು ತೊಟ್ಟು ಯುದ್ಧ ಮಾಡುತ್ತಿದ್ದರು ಅನೇಕ ಹೋದ್ಧೃಗಳು.(೩೧). ಲೌಹ ಕವಚವು ಆಗತ್ಯವಾಗಿ ಆಗ ನಮ್ಮ ದೇಶದವರಿಗೆ ಗೊತ್ತಿರಲಿಲ್ಲ ವೆಂದಲ್ಲ; ಕುದುರೆಗಳ ಮೈಯ್ಗೆ ಧಾತುಮಯವರ್ಮವನ್ನಿ ತೊಡಿಸುತ್ತಿದ್ದ ಉಲ್ಲೇಖಗಳೂ ಅಲ್ಲಲ್ಲಿವೆ. ಬೇಟೆಗೆ ಹೋಗುವಲ್ಲಿ ಎಷ್ಟೋ ಬಾರಿ ತನ್ನು ಬಳ್ಳಿದ ಕವಚವನ್ನು ತೊಟ್ಟಿದ್ದರು(೩೨); ಶತ್ರುಗಳಿಗೆ ಅರಿಸ್ಥಿದಲ್ಲಿ ಅಡಗಿಸಿಲ್ಲಲು ಇದರಿಂದ ಸಹಕರ್ಯವುಂಟಾಗುತ್ತಿದ್ದಿತೇನೋ.

ಆ ಕಾಲದ ಸೈನ್ಯ–ವಾಹಿನಿಗಳ ಎಷ್ಟೋ ವಿವರಣಗಳೂ ದೊರೆಯುತ್ತಿವೆ. ಕಾತ್ಯಿರಿಡ ಕುಂಕುಮ ಮತ್ತು ಕೇಸರ,(೩೩) ಕಾಂಧೋಜದ ಅಶ್ವೋತ್ಪನ್ನ,(೩೪) ಚಿನದೆ ರೀತಿಮೆ,(೩೫), ಮಲಯಪರ್ವತದ ಮೆಳಸು,(೩೬) ಮಹೇಶೂರಿನ ಚಂದನ,(೩೭) ದಕ್ಷಿಣಸಮುದ್ರದ ಮುತ್ತು,(೩೮) ದಾರಸ್ಯದ ಕುದುರೆ,(೩೯)–ಆಗಲಿನ ದಿನಗಳಲ್ಲಿ ಇವೆಲ್ಲ ತುಂಬ ವಿಖ್ಯಾತವಾಗಿದ್ದುವು. ಈ ಸಮಸ್ತದ್ರವ್ಯಗಳ ಆಮದುರಫ್ತುಗಳು ಹೇಗೂ ಆಗುತ್ತಿದ್ದುವಲ್ಲದೆ, ನಿತ್ಯ ವ್ಯವಹಾರಕ್ಕೆ ಬೇಕಾದ ಜೀನಸುಗಳ ಮತ್ತೂ ಬಗೆಬಗೆಯ ಬಟ್ಟೆಗಳ ಕ್ರಯವಿಕ್ರಯಗಳೂ ಯಥಾರೀತಿ ನಡೆಯುತ್ತಿದ್ದುವು. ಭರತಭೂಮಿಯು ಹೊರಗೂ ಸಮುದ್ರಪಥದಲ್ಲಿ ವ್ಯಾಪಾರಿಗಳು ಹೋಗಿಬರುತ್ತಿದ್ದುದೆನ್ನೂ ಮಲ್ಲಿನಾಥನು 'ನೌಭಿಃ ಸಮುದ್ರವಾಹಿನೀಭಿಃ' ಎಂಬುದರಿಂದ ಪ್ರಮಾಣೀಕರಿಸಿ ಹೋಗಿದ್ದಾನೆ.(೪೦)

ಹೇಗೂ ಕ್ಷತ್ರಿಯ ಜಾತಿಯಲ್ಲಿ ಆಗಲಿನ ಕಾಲದಲ್ಲಿ ಚಿಕ್ಕ ವಯಸ್ಸಿನಲ್ಲಿ ಮದುವೆಯ ಪ್ರಚಲನವಿರಲಿಲ್ಲ; ಕೊಂಚ ಹೆಚ್ಚು ವಯಸ್ಸಿನಲ್ಲಿಯೇ ಮದುವೆ. ಗಾಂಧರ್ವವಿವಾಹ ಸ್ವಯಂವರವಿವಾಹಗಳು ಒಂದೇ ಬಾರಿಗೆ ಆಗಲು ಬಿಡುವಂತಾಗಿ ಹೋಗಿರಲಿಲ್ಲ; ಅಸವರ್ಣವಿವಾಹದ ಪ್ರಚಲನವೂ ಸ್ವಲ್ಪ ಇದ್ದಿತು.(೪೧) ವಣಪದ್ಧತಿ ಆಗ ಇದ್ದಿಲ್ಲವಾದರೂ, ಹೆಣ್ಣಿನ ತಂದೆ ಕನ್ನ ಶಕ್ತ್ಯನುರೂಪವಾಗಿ ಗಂಡಿಗೆ ಯೌತುಕಾದಿಗಳನ್ನು ಕೊಡಲು ಹಿಂಜರಿಯುತ್ತಿರಲಿಲ್ಲವಲ್ಲದೆ, ಅಲ್ಲಲ್ಲಿ ವಧುವಿಗೂ ಪಣಕೊಟ್ಟೇ ವರನು ವರಿಸಬೇಕಾಗಿದ್ದಿತು.(೪೨) ಕೆಲವೆಡೆ, ಕನ್ಯೆಯನ್ನು ನೋಡುವ ಮೊದಲು ಕನ್ಯೆಯ ಭಾವಚಿತ್ರಕ್ಕಾಗಿ ಹೇಳಿಕಳುಹಿಸುವ ರೀತಿಯೂ ಇರಲಿಲ್ಲವೆಂದಿಲ್ಲ.(೪೩)

ಹೆಚ್ಚುಪಕ್ಷ ಹೆಂಗುಸರು ಆ ಯುಗದಲ್ಲಿ ಓದು ಬರಿಹಗಳನ್ನು ಕಲ್ತವರೇ ಆಗಿದ್ದರೆಂದು ಹಿಂದೇ ಹೇಳಿದೆ. ನೃತ್ಯಗೀತಾದಿಗಳನ್ನು ಬಲ್ಲವರಾಗಿದ್ದರವರು; ಚಿತ್ರಗಳನ್ನು ಬರೆಯಲೂ ಶಕ್ತರಾಗಿದ್ದರು; ನಾಟಕಗಳನ್ನೂ ಬರೆಯುತ್ತಿದ್ದರು; ವಿದ್ವತ್ಪರೀಕ್ಷೆಯಿಂದ ಬಿರುದುಗಳನ್ನೂ ಪಡೆಯುತ್ತಿದ್ದರು; ನಾಗರಿಕಸಾಮಾನ್ಯರು ಸೇರುವ ಉದ್ಯಾನಗಳಲ್ಲಿ ಗಂಡುಸರ ಮುಂದೂ ತಿರುಗಾಡಲು ಹೊರಡುತ್ತಿದ್ದರು; ಇನ್ನೂ ಕಲಿಕೆಲವರು ಹೆಂಗುಸರು ಅಲ್ಪಸ್ವಲ್ಪ ಮದ್ಯವನ್ನು ಕುಡಿದು ಮತ್ತರಾಗಲೂ ಇಷ್ಟಪಡುತ್ತಿದ್ದರು; ಆ ಸಮಯದ ಹೆಂಗುಸರಿಗೆ ತವಸ್ಸಿಗೂ ಅಧಿಕಾರವಿದ್ದಿತು. ಆದುದರಿಂದ ಅವರು ಆಗಲಿನ ಕಾಲದಲ್ಲಿ ಸಮಾಜದಲ್ಲಿಒಮ್ಮೆಯಿಂದೊಮ್ಮೆ ಹೀನರಾಗಿಯೋ, ಆಂಗಹೀನರಾಗಿಯೋ, ಎಂದೂ ಇರಲಿಲ್ಲವೆಂದು ಚೆನ್ನಾಗಿ ತಿಳಿಯಬಹುದುವಂತಿದೆ. ನಾನಾವಿಧವಾದ ಆಭರಣಗಳನ್ನು ಎಂತೂ ಅವರು ತೊಡುತ್ತಿದ್ದರೇ; ಅಷ್ಟೇ ಅಲ್ಲದೆ, ದೇಹಾಲಂಕಾರಕ್ಕಾಗಿ ಎಷ್ಟೋ ಬಗೆಯ ವಿಲಾಸಸಾಮಗ್ರಿಗಳನ್ನೂ ಅವರಾಗ ಉಪಯೋಗಿಸುತ್ತಿದ್ದರು. ಲೋಧ್ರಪುಷ್ಪದ ದೂಳನ್ನು ಮುಖಕ್ಕೆ ಹಚ್ಚಿಕೊಂಡು ದರಿಂದ ಈಗಲಿನ ಪೌಡರಿನ ಕಾರ್ಯಸಾಧನೆಯವರೆಗೆ ಆಗ ಆಗುತ್ತಿದ್ದಿತು; ಧೂಪದ ಹೊಗೆಯಿಂದ ಅವರ ಆ ಕೇಶಪಾಶವು ಸುಗಂಧಿತವಾಗುತ್ತಿದ್ದಿತು; ಕಾಲೀಯಕದಿಂದಲೋ, ಮೃಗನಾಭಿಯಿಂದಲೋ, ಅಗುರುಗಂಧದಿಂದಲೋ, ಲೀಪನ ನೂಡಿ ಅವರು 'ತಮ್ಮ ದೇಹವರಿಮಳವನ್ನು ಉಂಟುಮಾಡಿಕೊಳ್ಳುತ್ತಿದ್ದರು. ದೊಡ್ಡವರ ಮನೆಯ ಹೆಂಗಸರು ಹಕ್ಕಿಗಳನ್ನು ಸಾಕುತ್ತಿದ್ದರು; ನವಿಲುಗಳನ್ನು ಆಡಿಸುತ್ತಿದ್ದರು; ಯವನದೇಶೀಯರಾದ ದಾಸಿಯರನ್ನೂ ಬಾಂದಿಯರನ್ನೂ ಇಟ್ಟುಕೊಂಡಿದ್ದರು. ಸತೀದಾಹದ ವದ್ಧತಿ ಆ ಯುಗದಲ್ಲಿಯೂ ಇದ್ದಿತು;(೪೪) ಆದರೆ, ನೂರು ನೂರಯ್ವತ್ತು ವರ್ಷಗಳ ಕೆಳಗೆ ಆ ಬಂಗಾಳದಲ್ಲಿದ್ದಷ್ಟು ಭಯಂಕರವಾದ ಆಕಾರವನ್ನು ಈ ವದ್ಧತಿ ಆಗ ಧರಿಸಿರಲಿಲ್ಲ. ಮೃತದೇಹವನ್ನು ಸುಡುತ್ತಿದ್ದರಾದರೂ, ಹೂಳುವ ಪದ್ಧತಿಯೂ ಉಲ್ಲೇಖವೂ ಒಂದಿರದು ಇಲ್ಲದೆ ಇಲ್ಲ.(೪೫)

ಜೋರರೂ, ಡಾಕಾಯಿತರೂ, ಗಂಟುಕಳ್ಳರೂ ಇದ್ದಂತೆ, ಪೋಲೀಸಿನವರೆ ಜಾಲುಮಿಗೂ ಹೊಡೆದು ಬಡಿದಾಟಕ್ಕೂ ಈಗಲಿನಂತೆ ಆಗಲೂ ಕಡಿಮೆಯಿರಲಿಲ್ಲ; ಆದರೆ, ಅಂತಹ ಜಾಲುಮೂ ಹೊಡೆದುಬಡಿದಾಟವೂ ಸಂತೆಯೋರುಜುವಾತೋ ದೊರೆದಲ್ಲದೆ ಪ್ರಯೋಜಸಲ್ಲದದು.

ಹೊಲಗದ್ದೆಗಳಿಗೆ ಮತ್ತೂ ಉದ್ಯಾನದ ಗಿಡಗಳಿಗೆ ನೀರು ಹಾಯಿಸುವುದಕ್ಕಾಗಿ ಎಷ್ಟೋ ಮಂದಿಯಿಂದ ಎಷ್ಟೋ ದೊಡ್ಡದೊಡ್ಡ ಕಾಲುವೆಗಳು ತೋಡಲ್ಪಡುತ್ತಿದ್ದುವಾಗಿ;(೪೬) ದಿಙ್ನಿರ್ಣಯ ಮತ್ತು ಕಾಲನಿರ್ಣಯಕ್ಕಾಗಿ ಕೆಲವರು ರಾಜರು 'ದಿಗ್ವಲಯೋಕ್ತಿ'ಗಳನ್ನೋ ಮಾನಮಂದಿರಗಳನ್ನೋ ನಿರ್ಮಾಣಮಾಡಿದ್ದರು. ದೊಡ್ಡದೊಡ್ಡ ನದಿಗಳನ್ನು ದಾಟುವುದಕ್ಕಾಗಿ ಹಸ್ತಿಸ್ಪರ್ಶದ ಮೇಲೆ ಹಲಗೆಗಳನ್ನು ಕಟ್ಟಿ ಸೇತುಗಳನ್ನು ಸಿದ್ಧಮಾಡುವರು.(೪೭)

ಧರ್ಮಶಾಸ್ತ್ರಗಳೂ ದರ್ಶನಗಳೂ ಈಗಲಿನಂತೆ ಆಗಲೂ ಹಾಗೇ ಇದ್ದುವು. ಜನ್ಮಾಂತರವಾದ–ಕರ್ಮಫಲ–ಮೋಕ್ಷ ಮೊದಲಾದ, ಮಹಾ ಕವಿಯ ಆವಿರ್ಭಾವದ ನೂರಾರು ವರ್ಷಗಳ ಮೊದಲೇ ನಮ್ಮ ಈ ದೇಶದ ಋಷಿಗಳಿಂದ ಆವಿಷ್ಕರಿಸಲ್ಪಟ್ಟಿದ್ದ ಆರ್ಯದರ್ಶನದ ಅವೇ ಮೂಲ ತತ್ತ್ವಗಳೂ ತಥ್ಯಗಳೂ ಕಾಳಿದಾಸನ ಆ ಯುಗದಲ್ಲಿಯೂ–ಇಲ್ಲದೆ ಇಲ್ಲ.(೪೮) ಆದರೆ, ದೇವಪೂಜೆಯ ಮತ್ತೂ ಪೂಜಾಪದ್ಧತಿಯ ವರಿಪಾಟಿಯಲ್ಲಿ ಮಾತ್ರ ಅಲ್ಪಸ್ವಲ್ಪ ವರಿವರ್ತನವಾಗಿದೆ. ನಮ್ಮಲ್ಲಿ ಈಗ ಅಗ್ನಿಗೆ ಪೂಜೆಯಿಲ್ಲ; ಆದರೆ ಆಗ ಆ ಅಗ್ನಿದೇವನ ಪೂಜೆಯಾಗದೆ ನಡೆಯುತ್ತಿರಲಿಲ್ಲ; ಕ್ಷತ್ರಿಯರಾಜರಿಗೂ ಮುನಿಮಹರ್ಷಿಗಳಿಗೂ ಒಂದೊಂದು ಸ್ವತಂತ್ರವಾದ ಅಗ್ನಿಗೃಹವೇ ಆಗಲಿನ ಕಾಲದಲ್ಲಿದ್ದಿತು. ಸೂರ್ಯದೇವಾಲಯದ ಮತ್ತು ಸೂರ್ಯ ಪೂಜೆಯ ವಿವರಣಗಳೂ ಎಷ್ಟೋ ದೊರೆಯುತ್ತಿವೆ.(೪೯) ಈಗಲಿನ ಕಾಲದಲ್ಲಿ ಅಷ್ಟಾಗಿ ಪೂಜೆಯಾಗುತ್ತಿರುವಂತೆ ತೋರದ ಆ ವೈದಿಕಯುಗದ ಅನೇಕ ದೇವತೆಗಳೂ ಮಹಾಕವಿಯ ಸಮಯದಲ್ಲಿಯೂ ಯಥಾರೀತಿ ಪೂಜಿಸಲ್ಪಡುತ್ತಿದ್ದರು. ದೇವರಾಜನಾದ ಇಂದ್ರನ ಮಂದಿರವಿದ್ದಿತು. ಅಲ್ಲಿ ಆತನಿಗೂ ನಿಯಮಿತಪೂಜೆ ಆಗುತ್ತಿತ್ತು.(೫೦) ಚಂದ್ರದೇವನಿಗೂ ಶಚೀದೇವಿಗೂ ಪೂಜೆಯಾಗುತ್ತಿದ್ದ ವೈವಸ್ಥೆಯೂ ಅಲ್ಲಲ್ಲಿ ತೋರುತ್ತಿದೆ. ಗೋವ್ಯಾಹ್ಮಣರಿಗೆ ಆ ಯುಗದಲ್ಲಿ ಸನ್ಮಾನಕ್ಕೆ ಕೊನೆಮೊದಲಿರಲಿಲ್ಲ; ಅಜ್ಞಾನ ಕೃತಕರ್ಮದಲ್ಲಿಯೂ ಬ್ರಾಹ್ಮಣನ ಶಾಪವೂ ಗೋಮೊಳೆಯಿನ ದೀರ್ಘಶ್ವಾಸವೂ ಈ ಜೀವನದಲ್ಲಿ ಸದ್ಯ: ಪರಿವರ್ತನವನ್ನು ಎಷ್ಟೋದಾಗಿ ತೆರಬಲ್ಲುದೆಂಬುದನ್ನೂ ಮಹಾಕವಿ ತನ್ನ ಕಾವ್ಯವಗಳಲ್ಲಿ ಪ್ರದರ್ಶನಮಾಡಿದ್ದಾನೆ. ಅಷ್ಟೆ ಏಕೆ, ಆ ಕಾಲದಲ್ಲಿ ಬ್ರಾಹ್ಮಣರು ಧರ್ಮಪರಾಯಣರಾಗಿದ್ದರೆಂಬುದರಿಂದಲೂ, ಅವರಲ್ಲಿ ಅನೇಕರಲ್ಲಿ ತಪಸ್ಸಿದ್ಧವಾದ ಶಕ್ತಿ ತೋರಬರುತ್ತಿದ್ದುದರಿಂದಲೂ, ಜನ್ಮನರವನ್ನು ಸಮಸ್ತಾಸದೆ ಸಾಧ್ಯವಿರುತ್ತಿರಲಿಲ್ಲ.

ಮೆದುಳಿಲ್ಲದಿದ್ದರೂ ವಿಚಕ್ಷಣ ಗಣಕಜ್ಞರು.

ಯಂತ್ರ ಮೂಲಕ ಗಣಿತದ ಸಮಸ್ಯೆಗಳನ್ನು ಬಿಡಿಸುವ ಕ್ರಮ ವ್ಯಾಯತಃ Slide rule ಎಂಬ ಒಂದರೊಳಗಿನೊಂದು ಜಾರಿ ಚಲಿಸುತ್ತಿರುವ ಮರದ ಪಟ್ಟಿಗಳಿಂದಾರಂಭವಾಯಿತೆನ್ನಬಹುದು. ಈ ಮೂಲಕ ಗುಣಾಕಾರ, ಭಾಗಾಕಾರ, Square, cube, Square root, cube root, ಮೊದಲಾದುವುಗಳನ್ನು ಸೂಡಬಹುದಾಗಿತ್ತಲ್ಲದೆ ತ್ರಿಕೋಣಗಣಕ (Trigonometry)ದ Sine, Cosine, ಮೊದಲಾದ ಅಂಶಗಳನ್ನು ಅವುಗಳಿಂದ ಕಂಡು ಹಿಡಿಯಬಹುದಾಯಿತು. ಈ ರೀತಿ 12 ಅಂಗುಲ ಉದ್ದದ ಎರಡು ಕೋಲುಗಳಿಂದ 20 ಪುತದ ಪ್ರಶ್ನೆಕವನ್ನು ತಿರಿಯಿಂ ಬಹಳ ಹೊತ್ತು ತೆಗೆಯ ಬೇಕಾಗದ ಗಣಿತದ ಪ್ರಶ್ನೆಗಳನ್ನು ಈ Slide rule ಅಥವಾ ಜಾರಿಕೆ ಪಟ್ಟಿಗಳಿಂದ ತೀವ್ರವೇ ತೀರ್ಮಾನಿಸಬಹುದಾಯಿತು. ಆದರೆ ಇತ್ತೀಚೆಗೆ ಉಂಟಾಗಿರುವ ಯಂತ್ರಗಳನ್ನು ನೋಡಿದರೆ ಈ ಜಾರಿಕೆ ಪಟ್ಟಿಯು ಮಕ್ಕಳಾಟವಾಗಿ ಕಾಣುವುದು. Calculator ಎಂಬ ಹಲವು ಸಂಖ್ಯೆಗಳನ್ನು ನಿಮಿಷಾರ್ಧದಲ್ಲಿ ಕೂಡಿಸುವ, ಕಳೆಯುವ ಯಂತ್ರವು ಬೇಂಕು ಮತ್ತು ವ್ಯಾಪಾರೀ ಸಂಸ್ಥೆಗಳಲ್ಲಿ, ದೊಡ್ಡ ಶಹರುಗಳಲ್ಲಿ ಇವೆ. ಈಗ ವಿದ್ಯುಚ್ಛಕ್ತಿಯು ಸಹಾಯದಿಂದ ಇನ್ನೂ ಅಗಾಧವಾದ ಸಮಸ್ಯೆಗಳನ್ನು ಯಂತ್ರಗಳ ಮೂಲಕವೇ ಬಿಡಿಸುತ್ತಾರೆ.

---

(೨೦) ರಘುವಂಶ, ೪/೪೬. (೨೧) ಮೂಲವಿಕಾಗ್ನಿಮಿತ್ರ, ಪ್ರಕರಣಂಕ. (೨೨) ರಘುವಂಶ, ೪/೪೫ (೨೩) ರಘುವಂಶ, ೪/೨೩ (೨೪) ಮೂಲವಿಕಾಗ್ನಿ ಮಿತ್ರ, ದ್ವಿತೀಯಾಂಕ (೨೫) ವಿಕ್ರಮೋರ್ವಶೀಯ, ಪಂಚಮಾಂಕ. (೨೬) ವಿಕ್ರಮೋರ್ವಶೀಯ, ಪ್ರಕರಣಂಕ (೨೭) ಕುಮಾರಸಂಭವ, ೧೪/೨ (೨೮) ರಘುವಂಶ, ೭/೪೨ (೨೯) ಮೇಘದೂತ, ಉತ್ತರ ಮೇಘ. (೩೦) ಕುಮಾರಸಂಭವ, ೧೫/೬.

(೩೧) ರಘುವಂಶ, ೪/೬೦. (೩೨) ರಘುವಂಶ, ೯/೬೬. (೩೩) ರಘುವಂಶ, ೪/೬೨. (೩೪) ರಘುವಂಶ, ೪/೬೧. (೩೫) ರಘುವಂಶ, ೪/೬೨. (೩೬) ರಘುವಂಶ, ೪/೪೬. (೩೭) ರಘುವಂಶ, ೪/೩೯. (೩೮) ರಘುವಂಶ, ೬/೪೦. (೩೯) ಮೂಲವಿಕಾಗ್ನಿ ಮಿತ್ರ, ಪ್ರಥಮಾಂಕ, ೭೪ನೆಯ ಪದ್ಯ. (೪೦) ರಘುವಂಶ, ೧೬/೨೯. (೪೧) ಮೂಲವಿಕಾಗ್ನಿ ಮಿತ್ರ, ಪ್ರಥಮಾಂಕ, ೭೪ನೆಯ ಪದ್ಯ. (೪೨) ರಘುವಂಶ, ೧೭/೫೮. (೪೩) ರಘುವಂಶ, ೧೭/೬. (೪೪) ರಘುವಂಶ, ೮/೬೭. (೪೫) ರಘುವಂಶ, ೮/೬೮.

(೪೬) ರಘುವಂಶ, ೯/೬೬. (೪೭) ರಘುವಂಶ, ೬/೩೬. (೪೮) ಕುಮಾರ ಸಂಭವ, ೭/೪. (೪೯) ರಘುವಂಶ, ೧೬/೨೯. (೫೦) ರಘುವಂಶ, ೧೪/೩೪. (೫೧) ಮೂಲವಿಕಾಗ್ನಿ ಮಿತ್ರ, ಪ್ರಥಮಾಂಕ, ೭೪ನೆಯ ಪದ್ಯ. (೫೨) ರಘುವಂಶ, ೧೦/೪೦. (೫೩) ರಘುವಂಶ, ೧೦/೪೮. (೫೪) ರಘುವಂಶ, ೧೬/೩೬. (೫೫) ರಘುವಂಶ, ೮/೩೫. (೫೬) ರಘುವಂಶ, ೧೭/೪೬.

(೫೭) ರಘುವಂಶ, ೧೩/೪. (೫೮) ರಘುವಂಶ, ೪/೪೮. (೫೯) ರಘುವಂಶ, ೧೪/೩೬. (೬೦) ವಿಕ್ರಮೋರ್ವಶೀಯ, ಪಂಚಮಾಂಕ. (೬೧) ವಿಕ್ರಮೋರ್ವಶೀಯ, ದ್ವಿತೀಯಾಂಕ

ಶಿಕ್ಷಣದ ಮೇಲಿನ ಅಮೇರಿಕದ ವಿಶ್ವಾಸ.

ಮತ್ತು ಆ ದೇಶದ ಸಮೃದ್ಧಿಯ ಬಗ್ಗೆ ಅದು ಮಾಡಿರುವ ಕೆಲಸ.

ಲೇಖಕರು —ಶ್ರೀ ಕೆ. ಎನ್. ಶಿಕ್ಷಿ, ಎಮ್. ಎ (ಹೊನ್ನರ್)
(ಇಂಟರ್‌ನೇಶನಲ್ ಹೌಸ್, ನ್ಯೂಯೋರ್ಕ್.)

ಅಮೇರಿಕಕ್ಕೆ ಶಿಕ್ಷಣದ ಮೇಲೆ ಪ್ರಚಂಡ ನಂಬಿಗೆಯಿದೆ. ಅಲ್ಲಿರುವ ೧೨೦ ಮಿಲಿಯ ಜನಸಂಖ್ಯೆಗಾಗಿ ೬೦೦ ಕೋಟಿ ರೂಪ್ಯಾಗಳು ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ದೊರೆಯತಕ್ಕ ಎಲ್ಲಾ ತರದ ಶಿಕ್ಷಣದ ಬಗ್ಗೆ ವಿನಿಯೋಗಿಸಲ್ಪಡುವಾಗ, ಅಲ್ಲಿಗಿಂತಲೂ ಮೂರು ಪಾಲು ಹೆಚ್ಚು ಜನ ಸಂಖ್ಯೆಯಿರುವ ಹಿಂದೂ ಸ್ಥಾನದಲ್ಲಿಯಾದರೋ ಬರೀ ಹತ್ತು ಕೋಟಿ ರೂಪಾಯಿ ಮಾತ್ರ ವಿದ್ಯಾಪ್ರಚಾರದ ಬಗ್ಗೆ ವಿನಿಯೋಗಿಸಲ್ಪಡುತ್ತಿದೆ. ಅಲ್ಲಿರುವ ಬಿಳಿ ಜನರ ಪೂರ್ವಜರು ಯುರೋಪ್ ಖಂಡದಲ್ಲಿ ಒಂದಾನೊಂದು ಕಾಲದಲ್ಲಿ ತಲೆದೋರಿದ್ದ

ಗೃಹಿಣಿ ಶಿಕ್ಷಣ ತರಗತಿ

ಧರ್ಮ ಸಂಬಂಧವಾದ ಜಿಂಸೆಗಳಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಅಮೇರಿಕಕ್ಕೆ ಬಂದರು. ಆದ ಪ್ರಯುಕ್ತ ಪ್ರತಿಯೊಬ್ಬನೂ, ಪ್ರತಿಯೊಬ್ಬಳೂ, ಪಾದ್ರಿಯೇ ಮೊದಲಾದ ಮಧ್ಯಸ್ಥರ ಸಹಾಯವಿಲ್ಲದೆನೇ ತಾವೇ ಬೈಬಲ್ಲನ್ನು ಓದಿ ಅದರಲ್ಲಿ ಅಡಕವಾಗಿರುವ ದೇವವಾಕ್ಯವನ್ನು ಸಂಗ್ರಹಿಸಲು ಶಕ್ತರಾಗಬೇಕೆಂಬುದೇ ಧ್ಯೇಯವುಳ್ಳವರಾಗಿದ್ದರು. ಸಾರ್ವಜನಿಕ ಶಿಕ್ಷಣವೇ ಇದಕ್ಕೆ ಮುಖ್ಯ ಸಾಧನವೆಂದು ಅವರಿಗೆ ತೋರಿತು. ಕಾಲವು ಕಳೆದುಹೋದ ಹಾಗೆಲ್ಲ ಮುಂದಗಾಮಿಗಳ ಧರ್ಮಸಂಬಂಧವಾದ ಅಂಧಾಚಾರಗಳು ತರಗೆಲೆಗಳಂತೆ ಉದುರಿಹೋಗಲು ಜನರ ಲಕ್ಷ್ಯವು ಪಾರಮಾರ್ಥಿಕ ವಿಷಯಗಳನ್ನು ಬಿಟ್ಟು ಕ್ರಮೇಣ ಲೌಕಿಕ ವಿಷಯಗಳ ಕಡೆಗೆ ಹೆಚ್ಚೆಚ್ಚಾಗಿ ಹರಿಯ ಹತ್ತಿತು. ವಿಸ್ತಾರವಾದ ಮತ್ತು ಸಾರವತ್ತಾದ ಪ್ರದೇಶವು ಅನೆರ ಕೈಸೇರಿತು ಆದುದರಿಂದ ಯಾವತ್ತೂ ಸಾಧನಗಳಿಂದ ಜನರಿಗೆ ಲೌಕಿಕ ಸುಖವನ್ನು ಒದಗಿಸಿಕೊಡುವುದೇ ಅವರ ಮುಖ್ಯ ಧ್ಯೇಯವಾಯಿತು ಕ್ರಮೇಣ ಶಿಕ್ಷಣವು ಮತಪ್ರಚಾರಕಾರ್ಯವನ್ನು ಬಿಟ್ಟು ಲೌಕಿಕ ವ್ಯವಹಾರಕ್ಕೂ ಸುಖಸಂಪಾದನೆಗೂ ನೆರವಾಯಿತು

ಇಂದು ಅಮೇರಿಕದಲ್ಲಿ ಎಲ್ಲಾ ಸಾರ್ವಜನಿಕ ಶಿಕ್ಷಣಾಲಯಗಳಲ್ಲಿ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಔದ್ಯೋಗಿಕ ಶಿಕ್ಷಣ, ಕೃಗಾರಿಕೆ ಶಿಕ್ಷಣ ಮೊದಲಾದ ಯಾವತ್ತೂ ಶಿಕ್ಷಣಗಳೂ ಧರ್ಮಾರ್ಥವಾಗಿಯೇ ಕೊಡಲ್ಪಡುವವು ಆದ ಪ್ರಯುಕ್ತ ಪ್ರತಿಯೊಬ್ಬ ವ್ಯಕ್ತಿಯು ತನ್ನ ಮಾನಸಿಕ ವೃದ್ಧಿಗಾಗಲೀ, ಅಥವಾ ಔದ್ಯೋಗಿಕ ತರಬೇತಿಗಾಗಲೀ ತನ್ನ ಸ್ವಂತ ಅಪೇಕ್ಷೆಯ ಮೇರೆಗಿನ ಶಿಕ್ಷಣವನ್ನು ಸಾರ್ವಜನಿಕ ಖರ್ಚಿನಿಂದಲೇ ಪಡೆಯಬಹುದು ಅನೇಕ ಪಟ್ಟಣಗಳಲ್ಲಿ ವಾಕವುಸ್ತಕಗಳು ಕೂಡ ಧರ್ಮಾರ್ಥವಾಗಿ ಕೊಡಲ್ಪಡುವವು ಅಮೇರಿಕದ ಜೀವನವೂ ಯಾವತ್ತೂ ಸಂಸ್ಥೆಗಳೂ ಪ್ರಜಾಪ್ರಭುತ್ವದ ಧೋರಣೆಗನುಸಾರವಾಗಿ ಏರ್ಪಾಟಾಗಿರುವುದರಿಂದಲೂ, ಶಿಕ್ಷಣವೇ ಎಲ್ಲಾ ವೃದ್ಧಿಗೂ ಕಾರಣವಾಗಿರುವದೆಂದೆಣಿಸಲ್ಪಟ್ಟಿರುವದರಿಂದಲೂ, ಅಲ್ಲಿನ ಶಿಕ್ಷಣ ಕ್ರಮವು ಯಾವತ್ತೂ ಜನರಿಗೂ ಪ್ರಯೋಜನಕರವಾಗುವಂತೆ ಏರ್ಪಟ್ಟಿರುತ್ತದೆ. ಯೂರೋಪ್ ಖಂಡದಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿರುವಂತೆ ಅಮೇರಿಕದ ಶಾಲೆ ಮತ್ತು ಕಾಲೇಜುಗಳಲ್ಲಿ ದೊಡ್ಡವರು ಬಡವರೆಂಬ ಭೇದವಿಲ್ಲ. ಎಲ್ಲಾ ಸಾರ್ವಜನಿಕ ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಸಹವಿದ್ಯಾಭ್ಯಾಸವಿದೆ. ಎಲಿಮೆಂಟರಿ ಶಾಲೆಗಳಲ್ಲಿಂತೂ ತೀರಾ ಕಿರಿಯ ಉಪಾಧ್ಯಾಯಿನಿಯರೇ ಕೆಲಸ ನಡೆಸುತ್ತಿರುವರು. ಹೈಸ್ಕೂಲುಗಳಲ್ಲಿಯೂ ಕೂಡ ಅನೇಕ ಉಪಾಧ್ಯಾಯಿನಿಯರಿರುವರು.

೧೪ ವರ್ಷಗಳ ವರೆಗಿನ ಬಾಲಕರಿಗೂ ಬಾಲಕಿಯರಿಗೂ ಎಲ್ಲಾ ಸಂಸ್ಥಾನಗಳಲ್ಲಿಯೂ ಶಿಕ್ಷಣವು ಖಡ್ಡಾಯವಾಗಿರುವದು ಈ ನಿಯಮವು ಶಹರುಗಳಲ್ಲಿಯೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ, ಬಲವಾಗಿ ಜಾರಿಗೆ ಬಂದಿರುವುದು ಹಳ್ಳಿಪಳ್ಳಿಗಳಲ್ಲಂತೂ ಕಾಯಿದೆಗಳ ತೀಕ್ಷ್ಣತೆಯು ಕಡಿಮೆಯಾಗಿರುವದರಿಂದ ಕೆಲವು ಮಕ್ಕಳು ಆರ್ಥಿಕ ಕಾರಣಗಳ ಸಂಬಂಧ ತಮ್ಮ ವಿದ್ಯೆಯನ್ನು ಬೇಗನೇ ತೀರಿಸಿ ಬಿಡುವುದುಂಟು ಆದರೆ ಅಮೇರಿಕದವರಿಗೆ ವಿದ್ಯೆಯ ಪ್ರಯೋಜನದ ವಿಷಯದಲ್ಲಿ ಹೆಚ್ಚಿನ ನಂಬಿಗೆಯಿರುವದರಿಂದ ಒಂದು ವೇಳೆ ಒತ್ತಾಯವಿಲ್ಲದಿದ್ದರೂ ಶಿಕ್ಷಣವನ್ನು ಹೊಂದಲು ಯೋಗ್ಯವಾದ ವ್ಯಾಯದವರ ಸೈಕಿ ಹೆಚ್ಚಿನವರು ಶಾಲೆಗಳನ್ನು ಸೇರಿಯೇ ಬಿಡುವರೆಂದು ಹೇಳಬಹುದು ಕೆಲವು ಸಂಸ್ಥಾನಗಳಲ್ಲಿ ೧೫ ಮತ್ತು ೧೬ ಅಥವಾ ೧೭ ವರ್ಷ ವ್ಯಾಯದ ಮಕ್ಕಳು ನಿರುದ್ಯೋಗಿಗಳಾಗಿದ್ದರೆ ಶಾಲೆಯನ್ನು ಸೇರಲೇ ಬೇಕೆಂದಾ ಒಂದು ವೇಳೆ ಉದ್ಯೋಗಿಗಳಾಗಿದ್ದರೂ ನೂನಸಿಕ ಅಥವಾ ಸಾಹಿತ್ಯ ಜ್ಞಾನವನ್ನು ಅಥವಾ ಕಲೆಕೈಗಾರಿಕ ವಿಷಯಕವಾದ ಅನುಭವನವನ್ನು ಪಡೆಯುವ ಬಗ್ಗೆ ವಾರಕ್ಕೆ ೪ ಯಾ ೫ ಘಂಟೆ ಸಮಯವನ್ನು ಶಾಲೆಯಲ್ಲಿ ಕಳೆಯಬೇಕೆಂದೂ ನಿರ್ಬಂಧವಿರುವುದು ಇತ್ತೀಚೆಗೆ ಖಡ್ಡಾಯ ಶಿಕ್ಷಣದ ಅವಧಿಯನ್ನು ೧೬ ಯಾ ೧೮ ವರುಷಕ್ಕೆ ಮುಂದೊತ್ತುವ ಲಕ್ಷಣಗಳು ಕಾಣುತ್ತಿರುವವು ಕೆಲವು ಸಂಸ್ಥಾನಗಳಲ್ಲಿ ೧೬ ವರುಷಗಳ ವರೆಗೆ ಶಿಕ್ಷಣವು ಖಡ್ಡಾಯವಾಗಿರುವದು ಪ್ರಕೃತದಲ್ಲಿ ತಲೆದೋರಿರುವ ಆರ್ಥಿಕ ದುಸ್ಥಿತಿಯಿಂದ ಇಂಥಾ ವಿದ್ಯಾಭಿವೃದ್ಧಿಗೆ ಅತಂಕಗಳು ಬರಬಹುದು ಆದರೆ ತಮ್ಮ ಮಕ್ಕಳಿಗೆ ತಮಗೆ ತೊರೆತಿರುವ ಶಿಕ್ಷಣಕ್ಕಿಂತಲೂ ಉತ್ತಮ ತರದ ಶಿಕ್ಷಣವು ದೊರೆಯಬೇಕೆಂಬುದೇ ಅಮೇರಿಕದಲ್ಲಿರುವ ಹೆತ್ತವರ ಆಶೆಯು ಇಂಥಾ ಆಶೆಯೂ ಬಲವಾಗಿ ಬೇರೂರಿರುವುದರಿಂದ ಜನರು ಹಳ್ಳಿಪಳ್ಳಿಗಳನ್ನು ಬಿಟ್ಟು ಪಟ್ಟಣಗಳ ಕಡೆಗೆ ಸರಿಯುತ್ತಿರುವರು ಪ್ರೌಢ ಶಿಕ್ಷಣ ಮತ್ತು ವೃತ್ತಿ ಸಂಬಂಧವಾದ ವಿದ್ಯಾಭ್ಯಾಸದ ಸಾಧನಗಳು ಹಳ್ಳಿಗಳಲ್ಲಿ ತೀರಾ ಕಡಿಮೆ ಇಂಥಾ ದುಸ್ಥಿತಿಯು ಅನೇಕ ವರ್ಷಗಳ ತನಕ ಇರಬಹುದು ಈ ವಿಷಯದಲ್ಲಿ ಹೆಚ್ಚಿನ ಪ್ರಯತ್ನಗಳು ನಡೆಯುತ್ತಲಿವೆ. ಆದರೂ ಹಳ್ಳಿ ಪ್ರಾಂತ್ಯಗಳಲ್ಲಿ ಜನ ಸಂಖ್ಯೆಯು ಅಲ್ಲಲ್ಲಿ ಚದರಿರುವದರಿಂದ ಯಾವುದೇ ತರದ ಶಿಕ್ಷಣದ ವಿಸ್ತಾರಣ ವೆಚ್ಚವು ಅತ್ಯಧಿಕವಾಗುವದು ಹೀಗಿದ್ದರೂ ಕೂಡ ಹಳ್ಳಿಯ ಯೂನಿಯನ್ನುಗಳು ಫೋರ್ಡ್ ತಿರುವ ಹೈಸ್ಕೂಲು ವರ್ಗಗಳಲ್ಲಿ ಸೇರಲು ಯೋಗ್ಯವಾಗಿರುವ ಪ್ರಾಯದವುಕ್ಕಳ ಪೈಕಿ ಅರ್ಧಾಂಶಕಹಿಕ್ಕಿಂತ ಮಕ್ಕಳು ಶಾಲೆಗೆ ಹೋಗುತ್ತಿರುವರು. ಆದಲ್ಲದೆ ಅಮೇರಿಕದಲ್ಲಿ ಹೈಸ್ಕೂಲು ವರ್ಗಗಳಲ್ಲಿ ತೇರ್ಗಡೆ ಹೊಂದಿ ಕಾಲೇಜುಗಳನ್ನು ಸೇರಲು ಹೋಗುವ ವಿದ್ಯಾರ್ಥಿಗಳ ದಾನಾಶಯವು ಭೂಲೋಕದ ಇತರ ಯಾವತ್ತೂ ಕಾಲೇಜುಗಳಿಗೆ ಸೇರುವ ವಿದ್ಯಾರ್ಥಿಗಳ ದ್ಯಾನಾಶಯಕ್ಕಿಂತಲೂ ಅತಿಶಯವಾಗಿರುವದೆಂಬುದು ನಿರ್ವಿವಾದ ಕಾಲೇಜು ಶಿಕ್ಷಣದ ಬಗ್ಗಿನ ಕೇವಲ ಆತುರತೆಯಿಂದ ವಿದ್ಯಾರ್ಥಿಗಳು ಪಟ್ಟಣಗಳಿಗೆ ಧರಿಯುವದರಿಂದ ಕಾಲೇಜುಗಳಿಗೆ ಸೇರಲಿರುವ ವಿದ್ಯಾರ್ಥಿಗಳೆಲ್ಲರೂ ಸಾಕಷ್ಟು ಪ್ರವೀಣರೆಂದೂ ವಿದ್ಯಾಚತುರರೆಂದೂ ಹೇಳಲಾಗುವುದಿಲ್ಲ ಆದರೆ ಅಮೇರಿಕವು ಪ್ರಜಾಪ್ರಭುತ್ವ ಧರ್ಮಕ್ಕೆ ತವರುಮನೆಯಾಗಿರುವದು. ಎಲ್ಲರೂ ಸಮಪ್ರಕಾರದ ಹಕ್ಕುಳ್ಳವರು. "ನಮ್ಮ ಮಕ್ಕಳು ತೇರ್ಗಡೆ ಹೊಂದಿ ದಿಗ್ವಿಯನ್ನು ಪಡೆಯದಿದ್ದರೂ ಚಿಂತೆಯಿಲ್ಲ ಅವರು ಕೆಲವು ವರುಷ ಕಾಲೇಜುಗಳಲ್ಲಿದ್ದರೆ ಸಾಕು" ಎಂದು ವಿದ್ಯಾರ್ಥಿಗಳ ಹೆತ್ತವರು ಹೇಳುವರು. ಅವರ ಆಶೆಯನ್ನು ತಡೆಯುವವರಾರು?

ಔದ್ಯೋಗಿಕ ಶಿಕ್ಷಣ.

೧೯೬೩ನೇ ಇಸವಿಯಲ್ಲಿ ಒಂದು ಕೃಷಿ ಕಾಲೇಜನ್ನು ತೆರೆಯಬೇಕೆಂದು ಕೇಂದ್ರ ಸರ್ಕಾರವು ಮಂಜೂರು ಮಾಡಿತು. ಅದರ ರಕ್ಷಣೆಯ ಬಗ್ಗೆ ವಿಶಾಲವಾದ ಸ್ಥಳಗಳು 'ಗ್ರೆಂಟ್' ರೂಪದಲ್ಲಿ ಕೊಡೋಣಾದವು. ಪ್ರತಿಯೊಂದು ಅಶ್ರಿತ ಸಂಸ್ಥಾನವು ಕೂಡ ಕಾಲೇಜಿನ ವೆಚ್ಚದ ಒಂದು ಭಾಗವನ್ನು ನಿರ್ವಹಿಸುತ್ತವೆ. ಈ ಕಾಲೇಜುಗಳು ಕೃಷಿಕೋದ್ಧರಣೆಯನ್ನು ಮಾತ್ರವಲ್ಲದೆ ನಿವೃತ್ತ ರೈತರನ್ನೂ ತರಬೇತು ಮಾಡುತ್ತವೆ. ಇಲ್ಲಿನ ಶಿಕ್ಷಕರೂ, ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳೂ, ಆಗಿಂದಾಗ್ಗೆ ಪತ್ರಿಕೆಗಳಲ್ಲಿ ತಾವು ಮಾಡಿರುವ ಹೊಸ ಹೊಸ ಸಮಸ್ಯೆಗಳನ್ನು ತೀರ್ಮಾನಿಸುವ ಉದ್ದೇಶದಿಂದ, ಕೃಷಿ ಸಂಬಂಧವಾಗ ನವೀನ ಶೋಧನೆಗಳಲ್ಲಿ ನಿರತರಾಗಿರುವರು. ಅವರ ಶೋಧನೆಗಳ ಫಲಿತಾಂಶವು ಉಪನ್ಯಾಸ ಮತ್ತು ಪುಸ್ತಕಗಳ ಮೂಲಕ ರೈತರಿಗೆಲ್ಲರಿಗೂ ತಿಳಿಯುವಂತೆ ಪ್ರಚಾರ ಮಾಡಲ್ಪಡುವುವು. ಹಳ್ಳಿ ಪ್ರಾಂತ್ಯಗಳಲ್ಲಿ ಹೊಸ ಜಮೀನುಗಳನ್ನು ವ್ಯವಸಾಯ ಮಾಡುವ ರೈತರಿಗೆ ಅಗತ್ಯ ವಿರುವ ಉಪದೇಶವನ್ನು ಅವರ ಮನೆಯಲ್ಲಿಯೇ ಕೊಡಲು ಪ್ರತ್ಯೇಕ ಸಿಬಂದಿಯೊಂದಿರುವದು ಈ ಸಿಬಂದಿಯವರು ರೈತರ ಮನೆಗಳಿಗೆ ಹೋಗಿ ಅವರಿಗೆ ಕೃಷಿ ಸಂಬಂಧವಾದ ಸುಧಾರಿತ ಸಾಧನಗಳು, ಜಾನುವಾರುಗಳ ಜಾಗ್ರತೆ, ಕೋಳಿ, ಕುರಿ, ಹಂದಿ ಮೊದಲಾದುವುಗಳ ಆಕ್ಕಿಕೆಯ ವಿಷಯದಲ್ಲಿ ಸದಭೀಪ್ರಯವನ್ನು ಕೊಡುವರು ಈ ಪ್ರಚಾರಕರು ಮುಂದಿನ ರೈತರ ಮತ್ತು ಗೃಹಿಣಿಯರ ಸಹಕಾರಕ್ಕೆ ಈಗಲೇ ಬುನಾದಿ ಹಾಕುವ ಬಗ್ಗೆ ಅಲ್ಲಲ್ಲಿ ಕೃಷಿಕರ ಹುಡುಗ ಮತ್ತು ಹುಡುಗಿಯರ ಸಂಘಗಳನ್ನು ಸ್ಥಳೀಕ ಜನರ ಸಹಾಯದಿಂದ ಏರ್ಪಡಿಸುವರು ಕೃಷೀಕ ಕಾಲೇಜುಗಳಲ್ಲಿ ಕೃಷಿ ಸಂಬಂಧವಾದ ಶಿಕ್ಷಣವಲ್ಲದೆ ಬಾಲಕಿಯರಿಗೆ ಗೃಹಕೃತ್ಯ ವಿಚಾರದಲ್ಲಿಯೂ, ಬಾಲಕರಿಗೆ ಯಂತ್ರ ಕೆಲಸದಲ್ಲಿಯೂ ಶಿಕ್ಷಣವು ದೊರೆಯುವದು ಈ ಕಾಲೇಜುಗಳಲ್ಲಿ ಸಾಹಿತ್ಯ ಉಪಕರಣಗಳ ಪ್ರಚಂಡ ಸಂಗ್ರಹವಿದೆ

ಉದ್ಯೋಗದಲ್ಲಿರುವ ವ್ಯಾಯಸ್ಥ ಕೃಷಿಕರ ಸೌಕರ್ಯಕ್ಕಾಗಿ ಅವರ ವಿರಾಮ ಸಮಯದಲ್ಲಿ ಶಿಕ್ಷಣವು ಕೂಡ ಲಭ್ಯವಾಗುವ ಏರ್ಪಾಡು ಇದೆ ಸಾಮಿರಾರು ಒಕ್ಕಲಿಗರು ಈ ಚಿಕ್ಕ ಶಿಕ್ಷಣಗಳ ವಿಶೇಷ ಪ್ರಯೋಜನವನ್ನು ಪಡೆಯುತ್ತಿರುವರು ಉತ್ತಮವಾದ ಬೀಜ, ಆಕ್ಕುತ್ತೆಯುವಾದ ಗೊಬ್ಬರ, ನವೀನವಾದ ಯಂತ್ರ ಸಾಮಗ್ರಿಗಳು ಕೃಷಿಕಾರ್ಯಕ್ಕೆ ನೆರವಾಗುತ್ತವೆ ವಿಜ್ಞಾನವೂ ಕೈಗಾರಿಕೆಯೂ ಕೃಷೀಕ ಶಾಲೆ ಮತ್ತು ಕಾಲೇಜುಗಳ ಮೂಲಕ ಅಮೇರಿಕದ ಕೃಷಿಕಾರ್ಯದ ಅಭಿವೃದ್ಧಿಗಾಗಿ ಬಹಳವಾಗಿ ಕೆಲಸಮಾಡಿವೆ ಹಲವು ಹೈಸ್ಕೂಲುಗಳಲ್ಲಿ, ಮುಖ್ಯವಾಗಿ ಹಳ್ಳಿ ಸಾಡಿನವುಗಳಲ್ಲಿ ಬಾಲಕರಿಗೆ ಕೃಷಿವಿಷಯಕವಾದ ಶಿಕ್ಷಣವೂ, ಬಾಲಕಿಯರಿಗೆ ಗೃಹಕೃತ್ಯದ ಶಿಕ್ಷಣವೂ ವೃತ್ತಿ ಶಿಕ್ಷಣವಾಗಿ ಕಲಿಸಲ್ಪಡುತ್ತಿವೆ ಇತ್ತೀಚೆಗೆ ಹೆಚ್ಚು ಕಲಿತ ಉಪಾಧ್ಯಾಯರು ಮುಂದೆ ಬಂದಿರುವರು ಪಟ್ಟಣಗಳಲ್ಲಿನ ಶಾಲೆಗಳಲ್ಲಿ ವ್ಯಾಪಾರ, ಗೃಹಕೃತ್ಯ ವಿಚಾರ, ಮತ್ತು "ಕಮರ್ಷಿಯಲ್ ಆರ್ಟ್ಸ್" ಎಂಬ ವೃವಹಾರ



ವೃತ್ತಿ ಶಿಕ್ಷಣ ಶಾಲೆ, ನಕಾಶಾವಾ.

ಸಂಬಂಧವಾದ ಶಿಕ್ಷಣವೂ ವೃತ್ತಿ ಜೀವನವನೆಯ ಉದ್ದೇಶದಿಂದ ಕಲಿಸಲ್ಪಡುತ್ತವೆ.

ವೃತ್ತಿ ನಿರ್ಣಯಕ್ಕೆ ಸಹಾಯ.

ಖಡ್ಡಾಯ ಶಿಕ್ಷಣವನ್ನು ಹೊಂದಿದ ತರುವಾಯ ಶಾಲೆಯನ್ನು ಬಿಡುವ ಬಾಲಕ ಬಾಲಕಿಯರು ಲಾಭಕರವಾದ ಉದ್ಯೋಗವನ್ನು ಪಡೆಯುವದೇ ಸಹಾಯವೂ ಬೋಧೆಯೂ ಅಗತ್ಯವೆಂಬುದನ್ನು ಅಮೇರಿಕದವರು ಮನಗಂಡಿರುವರು. ಆ ಪ್ರಯುಕ್ತ "ವೃತ್ತಿ ನಿರ್ಣಯ ಸಹಾಯ" (Vocational Guidance) ಎಂಬ ಒಂದು ಪ್ರತ್ಯೇಕ ಖಾತೆಯು ಏರ್ಪಾಡಾಗುತ್ತಲಿದೆ. ವಿದ್ಯಾರ್ಥಿಗಳು ತಮ್ಮ ಜೀವನೋಪಕ್ಕೆ ಅನುಗುಣವಾದ ವೃತ್ತಿಗಳನ್ನು ಆರಿಸಿ, ಅವುಗಳಿಗಾಗಿ ಪೂರ್ವತಯಾರಿ ಮಾಡಿ, ಅವುಗಳನ್ನು ಕೈಕೊಂಡು ಅವುಗಳಲ್ಲಿ ಅಭಿವೃದ್ಧಿ ಹೊಂದುವ ಬಗ್ಗೆ ಪ್ರತ್ಯೇ ತ್ರಮುಖ್ಯ



ತಾರಾಪತನ.

(ಈ ರವೀಂದ್ರನಾಥ ಠಾಕೂರರ ಒಂದು ಕವಿತೆಯನ್ನು ಅವಲಂಬಿಸಿ ಬರೆದುದು)

ಗಗನದ ನೀಲ ವಿಶಾಲತೆಯಂ
ಮಿರುತಾರಗೆಗಳನಂತತೆಯಂ
ತಾರಗೆಯೊಂದಿತರತಾರೆಗಳಿ
ದುಮಳಲಗಾದ ಸಮುದ್ರದಲಿ.
ದೂರದ ಪಕ್ಷಿ
ತೇರಿದೆ ಇಕ್ಕೆದೆ
ಎನೆಗೆಗೆ ಸಿಕ್ಕದೆ
ಮಿಳ್ಳನೆನೆ ನಿಮುಷೋಪಮಿತವು
ಕಡುವಿಸ್ಮಯದಲಿ ಬಾಡಿದವು.

ಎದೆಯ ಬೆದಿರುಸನುವೆನೆ ನೀಗಿ
ಮಿಡುಗಲ್ಲಿಲ್ಲಗಲ್ಲಿಗೆ ಸಾಗಿ,
ಅಳುಲಂದವು ಮಲಗಿರುವಲ್ಲಿ
ಕಡಲ ಬುಡದ ಕಾನಿಯಲ್ಲಿ
ಇಸಿರ ನಮನಗ
ದೀ ಬೆಳಕಿನ ಕಣ
ವಿದೂ ನೋಡೀ ಕೃಷ
ಸರ್ವನೇ ಶೇಂತು ಕಾಂತಿಯನು
ಆಡೋಛೆಯ ಬೆಳಿಗಾಂತುದನು.

ಬಿರುಸಗೆಯ ನೋವಿನೊಳ್ ಕಂಪ್ಪಿ
ಬಿರುಸಗೆಯ ಬೇಸಗೆಗೆದಗುಂದಿ,
ಸಂತೆಯಿಂದ ಮುಂಜಾನೆವರಂ
ನಿಸುಗಗುತ್ತಲೆ ನಲವಿನ ನಗರಂ

ಒಂಟೆಯೆ ತೊಳಲಿತು,
ಒಂಟೆಯೆ ಬಳಲಿತು,
ಒಂಟೆಯೆ ಕಳಲಿತು-
ನಗೆಗಳ ಜ್ವಾಲೆಯ ದಳ್ಳುರಿಯಿಂ
ತಾರೆ ಬೆಂದುದಿದು ಬೆಳ್ಳುರಿಯಿಂ.

ತನಕಲ್ಲದ ಹಾಡನು ಹಾಡೆ
ತಾನರಿಯದ ಭಾಷೆಯನಾಡೆ
ನೇಮವನಾಂತಿದೆ ಬರಬಾಗಿ,
ನೋಯುವ ಗಾಯಕ ತಲೆವಾಗಿ,
ತೊರೆಯತು ನೆರೆಯಂ
ಮುಗಿಲಿನ ಮರೆಯಂ
ಬಾಂದೊರೆ ಕರೆಯಂ,
ಸಾರಮುದಂಭೋಧಿಯ ತೆರೆಯಂ;
ಕಡಲಾಳದ ಕತ್ತಲ ಸೆರೆಯಂ.

ಆಳ್ವರಿ! ಬೇರೆ ತಾರಗೆಗಳಿರಾ,
ಇಂತು ಗೆಲಿಯಂ ಗಳಹುವಿರಾ?—
'ನಮಗೇನದರಿಂದಹುದೇ
ನೆಮ್ಮಯ ದೀಧಿತಿ ನಂದುವುದೇ?'
ಗಗನದೊಳುರಿಯ
ಬೆಳಗದು ಸುರಿಯ
ಬೆನದದಿ ಮೆರೆಯ

ಬಯಸಲಿಲ್ಲವಿದು; ಮರೆಯಾಗೆ
ಬಯಸಿದುದಿದು ಸತಿ ಸಸಿನಾಗೆ.

ತಾರಕಿತ ಮಹಾಕಾವ್ಯದಲಿ
ಕಿರಿಯಕ್ಷರವಿದು ರೂಪಿನಲಿ;
ತನ್ನ ತಾನೆ ಮಾಸಿದುದಿಂದು,
ಬರದಾಯ್ನಿದರೆಡೆ ಮುಂದು!
ತನ್ನದನೊಂದು
ಕುರುಹನು ಜೆಂದು
ಉಳಿಸದೆ ಸಂದು
ಜಗುಳಿತೆಂದಿದನು ಜರೆಯದಿರಿ,
ಕರುಣೆಯ ಕದಿರೊಂದುದುರಿಸಿರಿ!

ಮುಳುಮುಳುಗಿತು—ಮುಳುಗಿದುದಲ್ಲಿ
ತ್ತಾರಗೆಯೊಂದು ಮುಳುಗಿತಲ್ಲ!
ಅದರೊಡನೆನ್ನೆದೆ! ಎರಗುವಿಯಾ?
ಸುಖದಿಂದದರೊಡನೊರಗುವಿಯಾ?
ಅಗಾಧದಲ್ಲಿ
ನಿಃಶಬ್ದದಲ್ಲಿ
ಅನಂತದಲ್ಲಿ
ಎನ್ನೆದೆಯೆ! ನೀನುಮೆರಗುವಿಯಾ?
ಸುಖದಿಂದದರೊಡನೊರಗುವಿಯಾ?

ಗೋವಿಂ

ಸ್ವರಾಜ್ಯದಂತೆ ಸಾಹಿತ್ಯವೂ ನಮ್ಮ ಜನ್ಮಸಿದ್ಧ ಹಕ್ಕು; ಅದರಿಂದ ಸಾಹಿತ್ಯವನ್ನು ನಮಗೆ ಯಾರೂ ನಿರಾಕರಿಸುವಂತಿಲ್ಲ. ಆದರೆ ಸ್ವರಾಜ್ಯ ಮತ್ತು ಸಾಹಿತ್ಯಕ್ಕೆ ಇರುವ ವ್ಯತ್ಯಾಸ ಇಷ್ಟು: ಸ್ವರಾಜ್ಯವನ್ನು ನಾವು ಪಡೆಯಬೇಕಾಗಿದೆ; ಆದರೆ ಸಾಹಿತ್ಯ ನಮ್ಮಲ್ಲಿ ಸಹಜವಾಗಿಯೇ ಇದೆ. ಅದನ್ನು ಪಡೆಯಬೇಕಾಗಿಲ್ಲ, ಅದು ಸಹಜವಾಗಿ ಬೆಳೆಯಬೇಕಾಗಿದೆ.

ಸಾಹಿತ್ಯ ಸಹಜವಾಗಿ ಬೆಳೆಯಬೇಕಾದರೆ ಅದಕ್ಕೆ ಸ್ವಾತಂತ್ರ್ಯ ಬೇಕು. ಸಾಹಿತ್ಯ ಸ್ವತಂತ್ರವಾಗಿ ಬೆಳೆಯಬೇಕಾದರೆ ಅದಕ್ಕೆ ಸಾಮಾಜಿಕ ಸ್ವಾತಂತ್ರ್ಯ ಬೇಕು. ಸಾಹಿತ್ಯ ಸಮಾಜದ ಸ್ವತ್ತಾಗಿರಬೇಕು. ಸಮಾಜದ ಸ್ವತ್ತಾಗಿರಬೇಕಾದರೆ ಸಮಾಜದ ಎಲ್ಲ ವರ್ಗದವರಿಗೂ ಅದು ಸಮಾನವಾಗಿ ಹಂಚಿಕೆಯಾಗಬೇಕು. ಸಮಾಜದ ಎಲ್ಲ ವರ್ಗದವರಿಗೂ ಸಾಹಿತ್ಯ ಸಮಾನವಾಗಿ ಹಂಚಿಕೆಯಾಗಬೇಕಾದರೆ ಸಮಾಜದಲ್ಲಿ ಸಾಮಾಜಿಕ ಸಮತೆ ಇರಬೇಕು. ಸಮಾಜದಲ್ಲಿ ಸಾಮಾಜಿಕ ಸಮತೆ ಇರಬೇಕಾದರೆ ಸಮಾಜದಲ್ಲಿ ಸಾಮಾಜಿಕ ಸ್ವಾತಂತ್ರ್ಯ ಇರಬೇಕು. ಸಾಮಾಜಿಕ ಸ್ವಾತಂತ್ರ್ಯ ಇರಬೇಕಾದರೆ ಸಮಾಜದಲ್ಲಿ ಸಾಹಿತ್ಯ ಸಹಜವಾಗಿ ಬೆಳೆಯಬೇಕು. ಸಾಹಿತ್ಯ ಸಹಜವಾಗಿ ಬೆಳೆಯಬೇಕಾದರೆ ಅದಕ್ಕೆ ಸ್ವಾತಂತ್ರ್ಯ ಬೇಕು. ಸಾಹಿತ್ಯ ಸ್ವತಂತ್ರವಾಗಿ ಬೆಳೆಯಬೇಕಾದರೆ ಅದಕ್ಕೆ ಸಾಮಾಜಿಕ ಸ್ವಾತಂತ್ರ್ಯ ಬೇಕು. ಸಾಮಾಜಿಕ ಸ್ವಾತಂತ್ರ್ಯ ಇರಬೇಕಾದರೆ ಸಮಾಜದಲ್ಲಿ ಸಾಮಾಜಿಕ ಸಮತೆ ಇರಬೇಕು. ಸಮಾಜದಲ್ಲಿ ಸಾಮಾಜಿಕ ಸಮತೆ ಇರಬೇಕಾದರೆ ಸಮಾಜದ ಎಲ್ಲ ವರ್ಗದವರಿಗೂ ಸಾಹಿತ್ಯ ಸಮಾನವಾಗಿ ಹಂಚಿಕೆಯಾಗಬೇಕು. ಸಮಾಜದ ಎಲ್ಲ ವರ್ಗದವರಿಗೂ ಸಾಹಿತ್ಯ ಸಮಾನವಾಗಿ ಹಂಚಿಕೆಯಾಗಬೇಕಾದರೆ ಸಾಹಿತ್ಯ ಸಮಾಜದ ಸ್ವತ್ತಾಗಿರಬೇಕು. ಸಾಹಿತ್ಯ ಸಮಾಜದ ಸ್ವತ್ತಾಗಿರ

ಕರ್ನಾಟಕ ಏಕೀಕರಣ
ಮತ್ತು
ದುಂಡು ಮೇಜಿನ ಪರಿಷತ್ತು.

ಲೇಖಕರು:—ಶ್ರೀ. ರಂಗನಾಥ ರಾಮಚಂದ್ರ ದಿವಾಕರರು, ಧಾರವಾಡ.

ದುಂಡು ಮೇಜಿನ ಪರಿಷತ್ತು ಯಶಸ್ವಿಯಾಹುದೆ ಅನೇಕ ರಾಜಕೀಯ ಪ್ರಶ್ನೆಗಳ ತೊಡಕು ಬಿಡಿಸಬೇಕಾಗಿದೆ. ಆದುದರಿಂದ ಅತ್ತಕಡೆಗೆ ಜನರ ಕಣ್ಣು ವಿಶೇಷವಾಗಿದೆ. ಅದೇ ರೀತಿ ದುಂಡು ಮೇಜಿನಲ್ಲಿ ಕರ್ನಾಟಕ ಏಕೀಕರಣದ್ದು ಏನಾಗುವುದು ಎಂಬ ಕುತೂಹಲವು ಸ್ವಾಭಾವಿಕವಾಗಿಯೇ ಕರ್ನಾಟಕಸ್ಥರಿಗೆ ಉಂಟಾಗಿದೆ. ಆ ಬಗ್ಗೆ ನ್ನ ವಿಚಾರಗಳನ್ನೂ ನಾನು ಇಲ್ಲಿ ವ್ಯಕ್ತಪಡಿಸುತ್ತಿರುವೆನು.

ಕರ್ನಾಟಕಕ್ಕೆ ಸ್ವರಾಜ್ಯವು ಎಷ್ಟು ಸ್ವಿಯವೊ, ಅಷ್ಟು ಅಷ್ಟೇ ಏಕೀಕರಣವು ಇಷ್ಟವು ಮತ್ತು ಸ್ವಿಯವು. ಸ್ವರಾಜ್ಯವಿಲ್ಲದ ಏಕೀಕರಣವಾಗಲಿ, ಏಕೀಕರಣವಿಲ್ಲದ ಸ್ವರಾಜ್ಯವಾಗಲಿ, ಕರ್ನಾಟಕಕ್ಕೆ ನೀರಸವೇ ಎನಿಸುವುದರಲ್ಲಿ ಸಂಶಯವಿಲ್ಲ. ಇಲ್ಲಿ ಕರ್ನಾಟಕದ ಏಕೀಕರಣವೆಂದರೆ ಬ್ರಿಟಿಷ್ ಕರ್ನಾಟಕದ ಒಂದು ಪ್ರಾಂತೀಕರಣವೆಂಬುದನ್ನೂ ನಾವು ಅಕ್ಷದಲ್ಲಡಬೇಕು.

ಈಗ ದುಂಡುಮೇಜಿಗೆ ಹೋಗುತ್ತಿರುವ ಪಕ್ಷಗಳಲ್ಲಿ ಮತ್ತು ವ್ಯಕ್ತಿಗಳಲ್ಲಿ ತಮ್ಮ ಹೇಳಿಕೆಯಂತೆ ದುಂಡುಮೇಜು ವರ್ತಿಸಬೇಕು, ಎಂದು ಒತ್ತಿ ಹೇಳುವನ್ನು ಸಾಮರ್ಥ್ಯವು ಒಂದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಇರುವುದು. ತಮಗೆ ಬೇಕಾದುದನ್ನು ಪಡದೇ ತೀರುವವರು, ಎಂಬ ನಿರ್ಧಾರವನ್ನು ಕಾಂಗ್ರೆಸ್ಸಿನವರೊಬ್ಬರೇ ಮಾಡಿರುವರು. ಆದುದರಿಂದ ಕಮಗೆ ಬೇಕಾದುದನ್ನು ದೊರಕಿಸುವವರು ಕಾಂಗ್ರೆಸ್ಸಿನವರು ಮಾತ್ರ. ಮಿಕ್ಕವರು ಕೊಟ್ಟುದನ್ನು ತೆಗೆದುಕೊಂಡು ಅದರಲ್ಲಿಯೇ ಆನಂದಪಡುವರು. ಇನ್ನು ಈ ರೀತಿ ದುಂಡುಮೇಜಿಗೆ ಹೋದ ಪಕ್ಷಗಳು ಇಲ್ಲವೆ ವ್ಯಕ್ತಿಗಳು ಕರ್ನಾಟಕ ಏಕೀಕರಣದ ಬಗ್ಗೆ ಏನು ಮಾಡಬಹುದು ಇದನ್ನು ನೋಡುವ.

ಅದಕ್ಕೂ ಮೊದಲು ಕರ್ನಾಟಕ ಏಕೀಕರಣದ ಪ್ರಶ್ನೆಯು ದುಂಡುಮೇಜಿನಮುರಿಗೆ ಯಾವ ರೂಪದಲ್ಲಿ ಬರುವುದು ಇದನ್ನು ವಿಚಾರಿಸುವ. ಈ ವಿಷಯದಲ್ಲಿ ದುಂಡು ಮೇಜಿಗೆ ಹೋದವರನ್ನು ಕೆಲವರನ್ನೂ, ಹೋಗದೆ ಇದ್ದು ಈ ವಿಷಯದಲ್ಲಿ ನಿಷ್ಣಾತರಿದ್ದವರನ್ನು ಕೆಲವರನ್ನೂ ನಾನು ವಿಚಾರಿಸಿದ್ದೇನೆ. ಅವರು ಕೊಟ್ಟ ಅಭಿಪ್ರಾಯದ ತಾತ್ಪರ್ಯವೇನೆಂದರೆ, ಹಿಂದೂಸ್ಥಾನದ ಸದ್ಯದ ಪ್ರಾಂತರಚನೆಯು ಅಸಮಾಧಾನಕಾರಕವಿರುವುದರಿಂದ ಬೇರೆ ಬಗೆಯ ಪ್ರಾಂತ ರಚನೆಯಾಗಬೇಕು, ಎಂಬ ವಿಷಯವು ದುಂಡುಮೇಜಿನಲ್ಲಿ ಹೊರಡಬಹುದು. ಆಗ ಹೊಸ ಪ್ರಾಂತರಚನೆಯು ಭಾಷಾನುಗುಣವೇ ಆಗಬೇಕು ಎಂಬ ತತ್ವವು ಸ್ವೀಕಾರವಲ್ಲದ ಬಹುದು. ಅದು ಸ್ವೀಕರಿಸಲ್ಪಟ್ಟೇ ತೀರುವುದು ಎಂದು ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ಅಲ್ಲಿ ಇಂತಹದೊಂದು ಪ್ರಾಂತವು ಭಾಷಾನುಗುಣ ಪ್ರಾಂತರಚನೆಯ ತತ್ವಕ್ಕನುಸರಿಸಿ ಪ್ರಾಂತವಾಗಬೇಕೊ ಬಾರದೊ ಎಂಬ ವಿಶಿಷ್ಟ ಪ್ರಾಂತದ ಪ್ರಶ್ನೆಯು ಚರ್ಚೆಗೆ ಹೊರಡುವುದು ಸಾಧ್ಯವಿಲ್ಲ. ಒಮ್ಮೆ ಆ ತತ್ವವು ಸ್ವೀಕೃತವಾದ ಪಕ್ಷದಲ್ಲಿ ಎಷ್ಟು ಮತ್ತು ಎಂಥಾ ಪ್ರಾಂತಗಳಾಗಬೇಕು ಎಂಬ ಬಗ್ಗೆ ದುಂಡುಮೇಜಿನವರು ಒಂದು ಉಪಮುಂದಲವನ್ನು ನೇಮಿಸಬಹುದು, ಇಲ್ಲವೆ ಆ ಪ್ರಶ್ನೆಯನ್ನು ಹೊಸದಾಗಿ ಸ್ಥಾಪಿಸಲ್ಪಡುವ ಹಿಂದೂಸ್ಥಾನ ಸರಕಾರದವರು ವಿಧಿಸಬೇಕೆಂದು ಹೇಳಬಹುದು. ಇನ್ನು ಭಾಷಾನುಗುಣ ಪ್ರಾಂತರಚನೆಯೆ ಉತ್ತಮ ಪ್ರಾಂತರಚನಾ ಪದ್ಧತಿಯು, ಆ ಪದ್ಧತಿ ಇಲ್ಲದಿದ್ದರೆ ರಾಷ್ಟ್ರದಲ್ಲಿ ಸಾಮರ್ಥ್ಯವು ಉಂಟಾಗುವುದಿಲ್ಲ; ನಿಜವಾದ ಲೋಕಸತ್ತಾತ್ಮಕ ರಾಜ್ಯಪದ್ಧತಿಯು ಸ್ಥಾಪಿತವಾಗುವುದಿಲ್ಲ; ಅನ್ಯಾಯಗಳಾಗುತ್ತವೆ ಎಂಬ ಮುಂತಾದ ವಿಷಯಗಳನ್ನು ಸಿದ್ಧಮಾಡುವಾಗ ಕರ್ನಾಟಕದ ಉದಾಹರಣೆಯನ್ನಿತ್ತಿ ಹೇಳಬಹುದು. ಇಂತಹದೊಂದು ಪ್ರಾಂತವು ಭಾಷಾನುಗುಣ ಪ್ರಾಂತರಚನೆಯ ತತ್ವದಂತೆ ಬೇರೆ ಪ್ರಾಂತವಾಗಬೇಕು ಎಂದು ದುಂಡು ಮೇಜಿನಲ್ಲಿ ನಿರ್ಧಾರವಾಗುವುದು ಶಕ್ಯವಿಲ್ಲ. ಈ ರೀತಿ ಅವರ ಅಭಿಪ್ರಾಯವಿರುವುದು.

ಇನ್ನು ಈ ಅಭಿಪ್ರಾಯಗಳು ಬಹಳ ಮಟ್ಟಿಗೆ ಯಥಾರ್ಥವೂ ಸಮಂಜಸವೂ ಇರುವುದು. ಆದರೆ ಹೀಗಿದ್ದ ಪಕ್ಷದಲ್ಲಿ ಉತ್ತರ ಮತ್ತು ಸಿಂಧ ಈ ಪ್ರಾಂತಗಳ ಪ್ರಶ್ನೆಯು ಅಲ್ಲಿ ಹೊರಟು ಅವುಗಳಿಗೆ ಹೇಗೆ ವ್ಯಾಮುಖ್ಯವು ದೊರಕಿತು, ಎಂದು ಕೇಳಬಹುದು. ಅದಕ್ಕೆ ಅವರು ಸಮಾಧಾನ ಹೇಳುವುದೇನೆಂದರೆ, ಸಿಂಧ ಪ್ರಾಂತಿನ ಪ್ರಶ್ನೆಯು ಹಿಂದು ಮುಸಲ್ಮಾನ ಪ್ರಶ್ನೆಯೊಡನೆ ಸಿಗಡಿತವಾಗಿ ಅದಕ್ಕೆ ಮಹತ್ವ ಬಂದಿದೆ ಹೊರತು ಭಾಷಾನುಗುಣ ಪ್ರಾಂತರಚನೆಯಾಗಬೇಕೆಂಬ ತತ್ವಕ್ಕನುಗುಣವಾಗಿಯಲ್ಲ. ಉತ್ತಲದ ಪ್ರಶ್ನೆಯು ಮೊದಲೇ ಮೂರ್ತಸ್ವರೂಪ ಹೊಂದಿ, ಹಿಂದೂಸ್ಥಾನ ಸರಕಾರದವರು ಫಿಲಿಪ್ ದಫಾ ಕಮಿಟಿ ನೇಮಿಸಿದ್ದರು ಮತ್ತು ಆ ಕಮಿಟಿಯವರು ಅನುಕೂಲ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದುದರಿಂದ ಅದಕ್ಕೆ ಮಹತ್ವ ಬಂದಿತು. ಇದಲ್ಲದೆ ದುಂಡುಮೇಜಿನ ಮೊದಲನೇ ಅಧಿವೇಶನದಲ್ಲಿ ಈ ಪ್ರಶ್ನೆಯನ್ನೆತ್ತಲಿಕ್ಕೆ ಯಾವ ಸಂಧಿಯು ಇತ್ತೋ ಅದು ಈ ಅಧಿವೇಶನದಲ್ಲಿ ದೊರೆಯಲಿಕ್ಕಿಲ್ಲ.

ಈ ಪ್ರಶ್ನೆಯ ಬಗ್ಗೆ, ಕಾಂಗ್ರೆಸ್ ಪಕ್ಷದವರಷ್ಟು ಯಾರೂ ಆತುರರಿಲ್ಲ. ದುಂಡುಮೇಜಿನ ಮೊದಲನೇ ಅಧಿವೇಶನದಲ್ಲಿ ಭಾಷಾನುಗುಣ ಪ್ರಾಂತರಚನೆಯ ಮಾತು ಸಹ ಹೊರಡಲಿಲ್ಲ! ಇನ್ನೇ ಅಲ್ಲ. ಅವರಲ್ಲಿ ಅನೇಕರು ಇದಕ್ಕೆ ವಿರುದ್ಧರಿರುವರು. ಸೇಠನಾ, ಸೆಟಲವಾದ ಮುಂತಾದ ಮಹಾಸೇಯರು, ಉದಾರ ಪಕ್ಷ ಮುಂತಾದ ಪಕ್ಷದವರು ಕೇವಲ ವಿರುದ್ಧರಿರುವರು. ಈಗಿದ್ದ ಪ್ರಾಂತರಚನೆಯು ದೈವೀ ಘಟನೆಯಿಂದ ಆದದ್ದು, ಅದೇ ಉತ್ತಮ, ಎಂದು ಅವರ ಮತ! ಅವರಲ್ಲಿ ಸಾಕಷ್ಟು ಕಲ್ಪಕತೆ ಇಲ್ಲ, ಭಾಷಾನುಗುಣ ಪ್ರಾಂತ ರಚನೆಯಿಂದ ಪ್ರತಿಯೊಂದು ಪ್ರಾಂತದಲ್ಲಿ ಎಂಥ ಪ್ರಚಂಡ ಶಕ್ತಿನಿರ್ಮಾಣವಾಗುವುದು—ಇದರ ಚಿತ್ರವು ಅವರ ಕಣ್ಣೆದುರಿಗೆ ನಿಲ್ಲುವುದಿಲ್ಲ. ಮಾತೃಭಾಷೆಯಲ್ಲಿ ಎಲ್ಲಾ ಶಿಕ್ಷಣ ವ್ಯವಹಾರ ನಡೆಯುವುದರಿಂದ ಎಷ್ಟು ಸೌಖ್ಯಗಳುಂಟಾಗುವುವು ಏನು, ಇದರ ವಿಚಾರವನ್ನು ಕೂಡ ಅವರು ಮಾಡುವುದಿಲ್ಲ. ಆದುದರಿಂದ ಅವರಲ್ಲಿ ಯಾರಿಂದಲೂ ನಮಗೆ ಸಹಾಯವಾದೀತೆಂದು ತಿಳಿಯಲಾಗದು. ಇನ್ನು ಅವರಲ್ಲಿ ಕೆಲವೊಂದು ವ್ಯಕ್ತಿಗಳು ನಮಗೆ ಸಹಾಯ ಮಾಡಬಹುದು. ಆ ರೀತಿ ಸಹಾಯ ಮಾಡಲೇ ಬೇಕು ಎಂದು ನಾವು ಕನ್ನಡಿಗರನ್ನು ಮಾತ್ರ ಒತ್ತಾಯ ಪಡಿಸಲು ಸಾಧ್ಯವು. ಆ ರೀತಿ ಬೆನಗಲ್ ಶಿವರಾಯರಿಗೂ ಉಸ್ಮಾನ್ ಮಿರ್ಜಾ ಇವರಿಗೂ ನಾವು ಹೇಳಿಕೊಳ್ಳಬಹುದು.

ಆದರೆ ನಮ್ಮ ಮುಖ್ಯ ಭಾರವು ಕಾಂಗ್ರೆಸ್ ಪಕ್ಷದವರ ಮೇಲೆಯೇ ಇದೆ. ಈಗ ಕಾಂಗ್ರೆಸ್ ಪಕ್ಷದವರೆಂದರೆ ಮಹಾತ್ಮಾ ಗಾಂಧಿಯವರು. ಈ ವಿಷಯದ ಬಗ್ಗೆ ಅನೇಕರೊಡನೆ ಎರಡು ಮೂರು ಸಾರಿ ಚರ್ಚೆಯಾಗಿದೆ. ಅವರು ಅಂದದ್ದರ ತಾತ್ಪರ್ಯವೇನೆಂದರೆ, ಈ ಭಾಷಾನುಗುಣ ಪ್ರಾಂತ ರಚನೆಯು ತತ್ವದ ಜನಕನಾಗದಿದ್ದರೂ ನಾನೇ ಅದನ್ನು ಪ್ರತ್ಯಕ್ಷಕ್ಕೆ ಅಮಲಿನಲ್ಲಿ ತಂದವನು. ಆದುದರಿಂದ ನಾನು ಅದರ ಬಗ್ಗೆ ಹೆಚ್ಚು ಹಿಡಿಯುವೆನೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ನನ್ನನ್ನು ಈ ವಿಷಯದಲ್ಲಿ ನೀವು ನಂಬಲಿಕ್ಕೆ ಬೇಕು. ಇನ್ನು ನನ್ನ ಜೊತೆಗೆ ಯಾರೂ ಸಹಾಯಕರೂ ಅವಶ್ಯರಿಲ್ಲ. ಯಾಕೆಂದರೆ ಅಲ್ಲಿ ತಾತ್ವಿಕ ಚರ್ಚೆ ಮಾತ್ರ ಆಗುವುದು. ಆ ಚರ್ಚೆ ಮಾಡಲು ನಾನು ಸಮರ್ಥ ನಿದ್ದೇನೆ. ನನ್ನ ಜೊತೆಗೆ ಯಾರನ್ನಾದರೂ ಕಳುಹಿಸುವುದೆಂದರೆ ನೈರ್ಘ್ರ ಧ್ರವ್ಯಹಾನಿಯು.

ಹೀಗೆ ಮಹಾತ್ಮಾಜಿಯವರ ಅಭಿಪ್ರಾಯವಿರುವುದು. ಕಾಂಗ್ರೆಸ್ಸಿನ ಬೇಡಿಕೆಗಳಿಗೆ ಒಪ್ಪಿಗೆ ಸಿಕ್ಕದೆ ಭಾಷಾನುಗುಣ ಪ್ರಾಂತ ರಚನೆ ಅರ್ಥಾತ್ ಕರ್ನಾಟಕ ಏಕೀಕರಣ ಇವೆರಡೂ ಕ್ರಮಪ್ರಾಪ್ತವಾದವುಗಳು. ಆ ಬೇಡಿಕೆಗಳಿಗೆ ಅರ್ಧಚಂದ್ರವು ಸಿಕ್ಕು ಪಕ್ಷದಲ್ಲಿ ಮತ್ತೆ ಪೂರ್ಣ ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡುವ ಪ್ರಸಂಗವು ಬರುವುದು ಮತ್ತು ಮಿಕ್ಕ ಪ್ರಶ್ನೆಗಳಿಗಿಂತ ಅತ್ತ ಕಡೆಗೆ ಎಲ್ಲರೂ ಲಕ್ಷ್ಯಕೊಡಬೇಕಾಗುವುದು. ಇನ್ನು ಮಹಾತ್ಮರು ಈ ಬೇಡಿಕೆಯನ್ನು ದುಂಡು ಮೇಜಿನಲ್ಲಿ ಮುಂದಿಟ್ಟಾಗ ಅದಕ್ಕೆ ಎರಡನೇ ಪಕ್ಷದವರು ಬೆಂಬಲ ಕೊಡಲಿ, ಬಿಡಲಿ ಅದು ಕಾಂಗ್ರೆಸ ಬೇಡಿಕೆ ಯಾದುದರಿಂದ ಅದಕ್ಕೆ ಸ್ವಯಂಸಾಮರ್ಥ್ಯವಿದೆ.

ಇನ್ನು ಒಂದೇ ಒಂದು ಮಾತು ಉಳಿಯಿತು. ಕಾಂಗ್ರೆಸಿನ ಬೇಡಿಕೆಗೆ ಅರ್ಧಚಂದ್ರ ಸಿಕ್ಕಿ ಮಹಾತ್ಮರು ಎದ್ದು ಬಂದರೆಂದು ತಿಳಿಯುವ; ದುಂಡು ಮೇಜು ಹಾಗೇ ನಡೆಯುವುದು. ಅದೇನೂ ಮುರಿಯುವುದಿಲ್ಲ. ಮಿಕ್ಕ ಎಲ್ಲ ಪಕ್ಷದವರೂ ಎದ್ದು ಬಂದರೆ ಮಾತ್ರ ಅದು ಮುರಿಯುವದು. ಆದರೆ ಅಷ್ಟು ಸ್ವಾಭಿಮಾನವು ಅಥವಾ ರಾಷ್ಟ್ರ ನಿಷ್ಠೆಯು ಮಿಕ್ಕವರಲ್ಲಿದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಆ ಕಾಂಗ್ರೆಸ್ ಪ್ರತಿನಿಧಿಗಳಿಲ್ಲದ ದುಂಡು ಮೇಜಿನ ಪರಿಷತ್ತಿನಲ್ಲಿ ಏಕೀಕರಣ ಪ್ರಶ್ನೆಯ ಬಗ್ಗೆ ಉಳಿದವರಲ್ಲಿ ಯಾರಾದರೂ ಯಾಕೆ ಯತ್ನಿಸಬಾರದು, ಎಂದು ಕೆಲವರು ಕೇಳಬಹುದು. ಈಗ ಮೊದಲನೆ ಅಧಿವೇಶನದಲ್ಲಿ ಕಾಂಗ್ರೆಸ್ ಇರಲಿಲ್ಲ ಆದರೂ ಪಾರಮಲಜೇಡಿ ಅರಸನು ಉತ್ಕಲದ ಪ್ರಶ್ನೆಯನ್ನು ಎತ್ತಿದುದರಿಂದಲೇ ಅದಕ್ಕೆ ಮಹತ್ವವು ಉಂಟಾಯಿತು, ಹಾಗೆ ಇನ್ನು ಕಾಂಗ್ರೆಸದವರು ಎದ್ದು ಹೋದರೆ ಕೂಡ ಶಿವರಾಯರಾಗಲಿ, ಮಿರ್ಜಾ ಅವರಾಗಲಿ, ಏಕೀಕರಣದ ಸಲುವಾಗಿ ಯಾಕೆ ಯತ್ನಿಸಬಾರದು ಎಂದು ಕೇಳಿದರೆ, ಯತ್ನಿಸಬಹುದು ಎಂದು ಉತ್ತರ ಕೊಡಬೇಕಾಗುತ್ತದೆ. ಆದರೆ ಕಾಂಗ್ರೆಸ ಪಕ್ಷದವರು ಮಾತ್ರ ಇಂಥಹ ಪ್ರಯತ್ನಗಳ ಬಗ್ಗೆ ಉದಾಸೀನರಾಗಿಯೆ ಇರಬೇಕಾದೀತು. ತಮ್ಮ ಪಕ್ಷದ ಬೇಡಿಕೆಗಳು ಯಾವ ಪರಿಷತ್ತಿನಲ್ಲಿ ಫಲಕರವಾಗಿವೆಯೋ ಯಾವ ಪರಿಷತ್ತು ಒಂದು ರೀತಿ ಇಡೀ ರಾಷ್ಟ್ರ ಕೈಯೇ ಆವಮಾನ ಸೂದಿದೆಯೋ ಅಂಥ ಪರಿಷತ್ತಿನಲ್ಲಿ ಸ್ವಲ್ಪಿಲ್ಲ ಸ್ವಲ್ಪ ಲಾಭ ಪಡೆಯೋಣ ಎಂಬ ವೃತ್ತಿಯನ್ನೂ ಕಾಂಗ್ರೆಸಿನವರು ತಾಳಲಾರರು. ಮಿಕ್ಕವರಿಗೆ ಅಂಥ ವೃತ್ತಿಯನ್ನು ಬಿಡಿರಿ ಎಂದರೆ ಅವರು ಬಿಡಲಾರರು. ಆದುದರಿಂದ ಅದರ ಬಗ್ಗೆ ಕಾಂಗ್ರೆಸಿನವರು ಉದಾಸೀನರಿರದ ಹೊರತು ಅನ್ಯ ಉಪಾಯವಿಲ್ಲ.

ಆದರೆ ಭವಿಷ್ಯದ ಗರ್ಭದಲ್ಲಿ ಏನಿದೆ, ಇದನ್ನು ಹೇಳಲು ಸಾಧ್ಯ. ಬ್ರಿಟಿಷರು ಜಾಣರಾದಿದ್ದಾರೆ. ತಮ್ಮ ಸಾಮ್ರಾಜ್ಯದ ಬಾಹ್ಯ ಸೊಬಗನ್ನಾದರೂ ಇನ್ನೂ ಕೆಲದಿನ ಇಟ್ಟುಕೊಳ್ಳಬೇಕೆಂಬ ಅಭಿಲಾಷೆ ಅವರಿಗಿದ್ದರೆ, ಅವರು ಸಾಮಂತ ಸ್ವರಾಜ್ಯದಷ್ಟು (ಡೊಮೀನಿಯನ್ ಸ್ಟೇಟಸ್) ಅಧಿಕಾರಗಳನ್ನಾದರೂ ಕೊಟ್ಟು ಬಿಡುವರು. ಆ ಸ್ವರಾಜ್ಯದಲ್ಲಿ ಏಕೀಕರಣವು ಕಟ್ಟುಪ್ಪ ಗಂಟಿನಂತೆ ನಮಗೆ ದೊರಕಬಹುದು. ಇಲ್ಲದಿದ್ದರೆ ಮತ್ತೆ ಪೂರ್ಣ ರಣಗಾಳಿಯನ್ನೂದಿ ಜಯ ಕರ್ನಾಟಕ, ಜಯ ಭಾರತ ಮಾತೆ, ಎಂದು ಸ್ವಾತಂತ್ರ್ಯ ಸಮರದಲ್ಲಿ ದುಮುಕಬೇಕಾಗುವುದು.

ಅಲ್ಲ ಏನೇ ಆದರೂ ನಾವು ಕರ್ನಾಟಕದವರು, ನಮ್ಮ ನುಡಿಯು ಕನ್ನಡ, ನಾವು ಕರ್ನಾಟಕದವರು ತೂರಿ ವೀರರಂತೆ ಹೋರಾಡುವೆವು. ರಾಷ್ಟ್ರಕ್ಕಾಗಿ ದುಡಿಯಲು ಪುಡಿಯಲು ಸಿದ್ಧರೂ ನಮ್ಮ ನಾಡು ನುಡಿಗಳು ವಿಶುದ್ಧವಾಗಿ ಬೆಳೆಯಬೇಕು, ಹೊಳೆಯಬೇಕು, ಎಂಬ ನುಡತತ್ವಾಕಾಂಕ್ಷೆಯನ್ನಿಟ್ಟುಕೊಂಡು ಮುಂದಿನಗಾಗಬೇಕು. ಅಂದರೆ ಈ ಸೃಷ್ಟಿಕರ್ತನು, ಈ ಭಾವನೋದ್ರೇಕದ ವಿಶಾಲವಾದ ಏಕೀಕರಣವು ಒಂದಲ್ಲೊಂದು ಬಗೆಯಿಂದ ಕೈಗೂಡುವುದು.

ಕರ್ಣ ಸೌಂದರ್ಯವನ್ನು ಹೆಚ್ಚಿಸುವುದು. ಮೇಣಧಾಬೊಂಬೆಯಂತೆ ಮನುಷ್ಯನ ರೂಪವನ್ನು ತಿದ್ದಬಹುದೆಂಬುದೇ ಈಗಿನ ಶಸ್ತ್ರಚಿಕಿತ್ಸೆಕರ (Surgeons) ಎಂಬೋಣ. ಆನೆಯ ತಿವಿಗಳಂತಿದ್ದ ತಿವಿಗಳನ್ನು ಕಡಿದು ಸಣ್ಣದು ಮಾಡಬಹುದು; ಉದ್ದ ಮೂಗು, ಚಪ್ಪಟೆ ಮೂಗು ಇವುಗಳನ್ನು ಸರಿಯಾದ ಆಕಾರಕ್ಕೆ ತರಬಹುದು. ತುಟಿಗಳನ್ನು ತೆಳುವಾಗಿಯೂ ಸುಂದರವಾಗಿಯೂ ಮಾಡಬಹುದು. ಸರ್ವಸಾಧಾರಣವಾಗಿ ಸೌಂದರ್ಯಕ್ಕೆ ಕುಂದನ್ನು ತರುವ ಎಲ್ಲಾ ಕರೀ ದೋಷಗಳನ್ನೂ ತಿದ್ದಬಹುದು. ಪ್ರಾನ್ಸಿನಲ್ಲಿ ಸ್ತ್ರೀಯರಲ್ಲಿ ಸೌಂದರ್ಯಕ್ಕೆ ಬಹಳ ಪ್ರಾಧಾನ್ಯವಿರುವುದರಿಂದ ಇದರ ವಿಶ್ವಾಸನೆಯ ಬಹುಮಟ್ಟಿಗೆ ಮುಂಗಾದಿದೆ. ಪ್ಯಾರಿಯಲ್ಲಿ ಉಂಟಾಗಿರುವ ಘಾಯಗಳ ಕಲೆಗಳು ಕೂಡ ಅಳಿಸಿ ಬಹುದಾಗಿ ಕಂಡುಬಂದಿದೆ.

ದಿ ಪರ್ಫೆಕ್ಟ್ ಪ್ರೊಟೆಕ್ಷನ್ ಪೊಲಿಸಿ
ಎಂಬುವ

ಓರಿಯಂಟಲ್
ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇವರೆ ಕೂಡಿಸಿರುವ ತೃಪ್ತಿದ ಪೊಲಿಸಿಯು ಹೆಂಡಿರು ಮಕ್ಕಳಿಗಾಗಿ, ಕುಟುಂಬಕ್ಕಾಗಿ, ದೊರೆಯಬಹುದಾದ ಸಾಧ್ಯವಾದಷ್ಟು ಸುಗಮವಾದ ಅತ್ಯುತ್ತಮ ರಕ್ಷಣೆಯ ಏರ್ಪಾಡು.

ಕುಟುಂಬದ ಯಜಮಾನನಾಗಿರುವ ಗಂಡನೂ ತಂದೆಯೂ ಆಗಿರುವ ಗೃಹಸ್ಥನೂ ಅಕಾಲಮರಣ ಹೊಂದಿದ್ದಲ್ಲಿ, ಅವನ ಕುಟುಂಬಕ್ಕೆ ಉಂಟಾಗಬಹುದಾಗಿರುವ ಹೆಚ್ಚಿನ ಸಂಕಟಗಳನ್ನು ಯೋಚಿಸಿಕೊಂಡರೆ, ಅಂತಹ ಅವಘಡದಲ್ಲಿ ರೂ. 10,000ವನ್ನು ಪಡೆಗಿಸುವರೆ ಸಂಪೂರ್ಣ ರಕ್ಷಣೋಪಾಯವಾದ
ಈ 'ದಿ ಪರ್ಫೆಕ್ಟ್ ಪ್ರೊಟೆಕ್ಷನ್ ಪೊಲಿಸಿ'ಯ ಪ್ರಯೋಜನವನ್ನು ಸುಲಭವಾಗಿ ಗ್ರಹಿಸುವನು.

ಪೊಲಿಸಿಯು ದೊರೆತ 20 ವರ್ಷಗಳ ಅವಧಿಯೊಳಗಾಗಿ ಅವನು ಮರಣಹೊಂದಿದರೆ–

(1) ಪೊಲಿಸಿಯ ವಿಮಾ ದೊಳಲಿಗಿನ ಸೇಕಡಾ 10ರ ಮೌಲ್ಯವು ಎಂದರೆ ರೂ. 1,000ವು ವಾರ್ಷಿಕವಾಗಿ, ಕಿಂಗಳ ಕಂತುಗಳಲ್ಲಿ, ಪೊಲಿಸಿಯ ಅವಧಿಯಾದ 20 ವರ್ಷಗಳು ಮುಗಿಯುವ ತನಕ ತೆರಲಾಗುವುದು.

(2) ಅವಧಿಯು ಮುಗಿದಾಗ ರೂ. 10,000 ನಗದಾಗಿ ತೆರಲ್ಪಡುವುದು.

ಪೊಲಿಸಿಯು ಜಾರಿಯಾಗಿಸಿದ ದಿನದಿಂದ 20 ವರ್ಷಗಳ ತರುವಾಯ ಮರಣವಾದಲ್ಲಿ, ಕೂಡಲೆ ರೂ. 10,000 ನಗದಾಗಿ ತೆರಲಾಡೀತು.

ದಿ ಪರ್ಫೆಕ್ಟ್ ಪ್ರೊಟೆಕ್ಷನ್ ಪೊಲಿಸಿ

ಸಾಮಾನ್ಯವಾಗಿ ವಿಧವೆಯರು ಹಣವನ್ನು ಬಳಸುವರೆ ಅಷ್ಟು ವಿಚಕ್ಷಣೆಯರಲ್ಲವೆಂದೂ ತಂದೆಯು ಗಳಿಟ್ಟದನ್ನು ಮಕ್ಕಳ ಸಂಪೂರ್ಣ ಪ್ರಯೋಜನಕ್ಕಾಗಿ ವಿನಿಯೋಗ ಮಾಡಲು ಅರಿಯದವರೆಲ್ಲೆಂದೂ ತಿಳಿದೇ ಈ ಪೊಲಿಸಿಯನ್ನು ಏರ್ಪಡಿಸಲಾಗಿದೆ.

ರಕ್ಷಣೆ—ಕುಟುಂಬ ಪೋಷಣೆ—ಮಕ್ಕಳು ವ್ಯಾಪಾರಾದಿ ಮಾಡುವರೆ ಧನಸಹಾಯ,—ಇವಿಷ್ಟಕ್ಕೂ ಈ ಪೊಲಿಸಿಯು ಅತ್ಯಾವಶ್ಯಕವಾಗಿದೆ.

ಲಾಭ ಸಹಿತ ಅಥವಾ ಲಾಭ ರಹಿತ ಪೊಲಿಸಿಗಳನ್ನು ಪಡೆಯಬಹುದು.

ಸಂಪೂರ್ಣ ಮಾಹಿತಿ ಕೊಡುವ ಪತ್ರಕಗಳನ್ನು ಪಡೆಯಲು ಕೂಡಲೇ ಬರೆದುಕೊಳ್ಳಲು ವಿಳಾಸ:—

ಮೆನೇಜರ್, ಓರಿಯಂಟಲ್ ಬಿಲ ್ಡಿಂಗ್ಸ್, ಬೊಂಬಾಯಿ.

ಅಥವಾ

ಮೆಸರ್ಸ್ ಡಿ ವಾಸ್ ಎಂಡ್ ಸನ್ಸ್, ಜೀಫ್ ಏಜಂಟ್ಸ್, ಮಂಗಳೂರು.

ಅಮೃತಾಂಜನ.

ಶೀತ, ಕೆಮ್ಮು, ತಲೆನೋವು, ವಾತ, ಸುಟ್ಟುಹೋಗುವಿಕೆ, ಮತ್ತು ಮನುಷ್ಯರಿಗೆ ಭಂಗಕೊಡುವ ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳಿಗೂ, ಇದು ಎದೆಯೊಡ್ಡಿ ಅವುಗಳನ್ನು ಓಡಿಸುತ್ತವೆ. ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ. ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ.

ಕ್ರಯ:– ಅಂದವಾದ ಬಣ್ಣದ ಒಂದು ಬಾಟ್ಲಿಗೆ 8 ಆಣೆಗಳು.

ಎಲ್ಲಾ ಕಡೆಗಳಲ್ಲೂ ದೊರಕುತ್ತದೆ –

ಗಜಕರ್ಣ ಮುಲಾಮು (ರಾಜಾ ಮತ್ತು ರಾಣಿ ಮಾರ್ಕ್.)

ಗಜಕರ್ಣ ಮತ್ತು ಧೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು, ಎರಡೇ ಸಲದ ತಗಲಿಸುವಿಕೆಯಿಂದ ಗುಣಪಡಿಸುತ್ತದೆ. ಹಳೇ ಮತ್ತು ಬಹಳ ಸಮಯದಿಂದ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ.

ಟಿನ್ನಿಗೆ ರೂ. 0–4–0.

ಡಜನಿಗೆ ರೂ. 3–8–0.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬ್ಬಾ.

ರಾಮೋತ್ಸವ

(ಸಣ್ಣ ಕತೆ)

(ಬರೆದವರು:—ಶ್ರೀ ಅ. ನ. ಕೃಷ್ಣರಾಯರು. "ಅನ್ನಪೂರ್ಣ" ವಿಕ್ಷೇತ್ರರ ತರಂ, ಬೆಂಗಳೂರು ನಗರ.)

— ೧ —

ಆನಂದರಾಯರ ಮನೆಯಲ್ಲಿ ರಾಮೋತ್ಸವದ ಗಬಾಟು. ಅವರ ಹೆಸರು ಮೈಸೂರಿನಲ್ಲಿ ಮಾತ್ರವೇ ಅಲ್ಲದೆ ಮದರಾಸು, ಕುಂಭಕೋಣಂ, ತಿರುಚಿನಾಪಳ್ಳಿ, ತಂಜಾವೂರು ಮೊದಲಾದ ಸ್ಥಳಗಳಲ್ಲಿಯೂ ತುಂಬಾ ಪ್ರಸಿದ್ಧವಾಗಿತ್ತು. "ತೋಡಿ" ರಾಗವಾಗಿ ಅವರ ಬಾಯಲ್ಲಿ ಕೇಳಬೇಕು ಎಂದೊಬ್ಬರೆಂದರೆ "ಭೈರವಿ" ಅವರ ಹಾಗೆ ಯಾರು ಹಾಡುತಾರೀ ಎಂದೊಬ್ಬರು ವ್ಯಾಜ್ಯಕ್ಕೆ ಬರುವರು. "ಶ್ರೀರಾಗ"—"ಹಂಸಧ್ವನಿ"—"ಮಧ್ಯಮಾವತಿ"—"ಕಾನಡ" ಗಳಂತೂ ರಾಯರ ಖಾಸಾರಾಗಗಳು. ರಾಯರ ಕುಟುಂಬಕ್ಕೆ ಅವರ "ಮೆಂದೂಸ್ಥಾನಿ ಕಾಸಿ" ಅಚ್ಚುಮೆಚ್ಚು. ಎಷ್ಟೇ ಕೋವ ಬಂದ್ರೂ ಮೂಗಿಗೆ ಮೆಣಸಿನಕಾಯಿ ಉಜ್ಜಿಕೊಂಡ ಹಾಗೆ ಆಗಿಬಿಡ್ತೀರೂ "ಜಗದ್ಗುದ್ಧಾರನ ಆಡಿಸಿದಳಶೋಧಾ" ಕಿವಿಗೆ ಬಿದ್ದ ತೆಂದರೆ ರಾಯರ ಕುಟುಂಬ ಕರಗಿ ನೀರಾಗಿ ಹೋಗುತ್ತಿದ್ದರು. "ನೀವು ಯಾವಾಗ್ಲೂ ಹೀಗೇಂದ್ರೆ, ಕೋವ ಮಾಡಿಕೊಳ್ಳೋಷ್ಟರಲ್ಲಿ ಅವಕಾಶ ಕೊಡೋದಿಲ್ಲ" ಎಂಬ ದೊಂದು ದೊಡ್ಡ ಅವಾಧನೆ. ಅಂತೂ ಲೋಕದ ಮನಸ್ಸನ್ನರಿತ್ತಿದ್ದ ಕಾಳಿದಾಸ ಅಂದ ಹಾಗೆ ಒಬ್ಬೊಬ್ಬರ ರುಚಿ ಒಂದೊಂದು. ಆದರೆ ರಾಯರ ರುಚಿಯ ಸ್ವರೂಪ, ಆಳ ಒಂದೂ ಗೊತ್ತಾಗುತ್ತಲೇ ಇರಲಿಲ್ಲ. "ತೋಡಿ" ಮೇಲೆ ಹುಚ್ಚು ಹಿಡಿಯಿತೆಂದರೆ, ಒಂದು ವಾರವಾಗಲೀ, ಹತ್ತು ವಾರವಾಗಲೀ ಅದೇ. "ಸಿಂಹೇಂದ್ರ ಮಧ್ಯಮ" ಮನಸ್ಸಿಗೆ ಬಂತೂಂದರೆ ಸಂಗೀತ ಶಾಸ್ತ್ರದಲ್ಲಿಯಾಗಲೀ, ಕಲೆಯಲ್ಲಾಗಲೀ ಬೇರೆ ರಾಗಗಳೂ ಇನೆ ಎಂಬುದೇ ಮೆರೆತು ಹೋಗುತ್ತಿದ್ದಿತು. ಹಾಡುವುದಕ್ಕೆ ಮನಸ್ಸು ಬಂದುಬಿಟ್ಟರೆ ಮೈಮೇಲೆ ಪರಿವೆಯೇ ಇರುತ್ತಿರಲಿಲ್ಲ. ತಾವು ಹಾಡುತ್ತಿರುವುದು ಹುಜೂರ್ ಸನ್ನಿಧಾನದ ಎದುರಿಗೇ, ಹೊಟೇಲಿ ನಲ್ಲಿಯೇ, ಲಲಿತಾದ್ರಿಯ ಮೇಲೇ ಎಂಬುದು ಕೂಡ ಮರೆತು ಹೋಗುತ್ತಿದ್ದಿತು. ಕೇಳುತ್ತಿದ್ದವರಿಗೂ ಅದೇ ತೆರನ ಹುಚ್ಚು ಹಿಡಿಯುತ್ತಿತ್ತು. ರಾಗದೇವಿಯೇ ತನ್ಮೆದುರಿನಿರು ವಳೋ ಎಂಬಂತಹ ಮೋಹದ ಮಾಯೆಯು ಮುಸುಕುತಿತ್ತು. ಆನಂದರಾಯರ ಹುಳುಕು ಮುಖದ, ಕೃಷ್ಣವರ್ಣದ ದೊಡ್ಡ ಕಣ್ಣಿನ, ಸ್ಥೂಲ ದೇಹದ ಬದಲು ಒಬ್ಬ ನವ ಯೌವನ ಶೋಭಿತೆಯೂ, ಸುಂದರಿಯೂ, ಸ್ನಿಗ್ಧವೆದನೆಯೂ ಆದೊಬ್ಬ ದೇವಿಯು ಕಂಡುಬರುತ್ತಿದ್ದಳು. ಒಮ್ಮೊಮ್ಮೆ ರಾಯರು ಹಾಡುತ್ತಾ ಹಾಡುತ್ತಾ ಹುಚ್ಚರಂತೆ ಅತ್ತುಬಿಡುವರು, ನಕ್ಕೂ ಬಿಡುವರು; ಒಮ್ಮೊಮ್ಮೆ ಹಾಡುವುದನ್ನು ನಿಲ್ಲಿಸಿ ಆಯಾಜಲೀಬದ್ಧರಾಗಿ ನಿಂತು "ಅನ್ನಾ, ನಿನ್ನ ಮಗ ನಲ್ಲವೇ ನಾನು. ನನ್ನನ್ನೇಕ ಹೀಗೆ ಪರೀಕ್ಷಿಸುವೆ. ಅಸ್ಪಷ್ಟವಾಗಿ ನೀನು ಕೇಳಿಸುತ್ತಿರುವ ಸ್ವರವ ಸ್ಪಷ್ಟವಾಗಿ ಕೇಳುವಂತೆ ಮಾಡು" ಎಂದು ದೈನ್ಯದಿಂದ ಬೇಡಿ, ಕೇಳುತ್ತಿದ್ದವ ರನ್ನು ಬೆರಗುಮಾಡಿ ಬಿಡುವರು. ಹಾಡಿಕೆಯಲ್ಲಿ ರಸಪೋರ ಬೇಕು, ಜೀವವಿರಬೇಕು, ಹಾಡುವವನ ಜೀವವು ಹಾಡಿನ ಭಾವದಲ್ಲಿ ಸಮರಸವಾಗಬೇಕು, ಎಂಬುದೇ ಅವರ ಸಲ್ಲವಿ. ತಮ್ಮ ಶಿಷ್ಯವರ್ಗಕ್ಕೆ ಅವರು ಒತ್ತಿ ಒತ್ತಿ ಹೇಳುತ್ತಿದ್ದ ವಿಷಯವೂ ಇದೇ. ಕಲೆಗೆ ಹಣದಲ್ಲಿ ಬೆಲೆ ಕಟ್ಟುವುದೂ, ಜನ ಮನರಂಜನೆಗೆ ಆತ್ಮಶಕ್ತಿಯನ್ನು ಮರೆಯುವುದ ರಾಯರಿಗೆ ವಿಷಫಲಗಳಂತೆ—ಅಂತೇ ಅವರ ಗಾಯನದಲ್ಲಿ ಒಂದು ಅಪೂರ್ವ ಶೋಭೆಯಿರುತ್ತಿದ್ದಿತು.

ಇಂದು ರಾಯರ ವರಮಸ್ತ್ರೀಮಶಿಷ್ಯ ರಾಮುವಿನ ಹಾಡುವಿಕೆ. ಬಲ್ಲ, ನುರಿತ, ನುಡಿಜಾಣರ ಪಕ್ಕವಾದ್ಯ ಕೇಳಲು ಬಂದಿದ್ದವರು, ರಸಿಕವೃಂದದಲ್ಲಿ, ಕಲಾಜಗತ್ತಿನಲ್ಲಿ, ಸಾಮಕ್ಯಸಾಮ್ರಾಜ್ಯದಲ್ಲಿ ಹೆಸರುಗೊಂಡಿದ್ದ ಅರಿವು ಳ್ಳ ಶಾರಧಾ ಭಕ್ತರು. ಹಾಡುವವನಿಗೆ ಹೆಮ್ಮೆಯಿಲ್ಲದಿದ್ದೀತೇ?—ಗುರುವಿಗೆ ಹೆಮ್ಮೆಯಿಲ್ಲದಿದ್ದೀತೇ?—ಕೇಳಲು ಬಂದಿದ್ದವರು ಹೆಮ್ಮೆ ಪಡದಿದ್ದಾರೇ?—ಎಲ್ಲಕ್ಕೂ ಎರಡಾಗಿ ತಬ್ಬಲಿಯೆಂದು ತಾವು ಸಾಕಿ, ಸಲಹಿ, ಹಗಲಿರುಳು ಅವನ ಕ್ಷೇಯವನ್ನೇ ಕೋರುತ್ತಿದ್ದ ಗುರುಪತ್ನಿಯ ಹೆಮ್ಮೆಗೆ—ಹೃದಯದ ಹಿಗ್ಗಿಗೆ—ಮಿತಿಯುಂಟೇ?

ಈ ವರುಷದಷ್ಟು ಜನಸಂದಣಿಯು ಎಂದೆಯೂ ಸೇರಿರಲಿಲ್ಲ. ಆನಂದರಾಯರು ತಮಗೆ ಸರಿತೂಗುವಂತಹ ಶಿಷ್ಯನನ್ನು ಸಿದ್ಧಗೊಳಿಸುತ್ತಿದ್ದುದು ಜನತೆಗೆ ತಿಳಿದಿತ್ತು—ಇಂದೇ ಅವನ ಹಾಡಿಕೆ—ನೋಡಲಿನೆಯ ಹಾಡಿಕೆ—ಬಣ್ಣದ



ಗಟ್ಟಿತನವು ಬಯಲಿಗೆ ಬರುವಂತಹ ದಿನ. ರಾಯರಂತೂ ಉತ್ಸವದ ಉತ್ಸಾಹದಲ್ಲಿ ತೆಲ್ಲೀನರಾಗಿ ಹೋಗಿದ್ದರು; ಮನಸ್ಸಿನಲ್ಲಿ, ಶಿಷ್ಯನು ವಿಜಯಶಾಲಿಯಾಗಿ ಬರಲೆಂಬ ಪ್ರಾರ್ಥನೆ. ಮುಖದಲ್ಲಿ, ಲಲಿತವಾದ ಪವಿತ್ರವಾದ ಆನಂದದ ರಸಸ್ಪಷ್ಟ.

ಗಣಪತಿಯ ಸ್ತುತಿಯಾಯಿತು. ಇಷ್ಟದೇವತಾ ಪ್ರಾರ್ಥನೆಯೂ ಮುಗಿಯಿತು. ರಾಮುವು, ಕುಳಿತಿದ್ದಲ್ಲಿಯಿಂದಲೇ ಗುರುವಿಗೊಮ್ಮೆ, ಗುರುಪತ್ನಿಗೊಮ್ಮೆ ಮಣಿದು "ಷಡಾನನ—ಶಿವವಾಹನ" ಕೀರ್ತನೆಯನ್ನು ಹಾಡಲು ಪೊಧಲಿಟ್ಟ. ಅನಂತರ ವರ್ಣಗಳ ಪರಂಪರೆ, ಮಧ್ಯೆ ಮಧ್ಯೆ ಒಂದೊಂದು ಕೀರ್ತನೆ. ಎಲ್ಲವುಗಳಲ್ಲಿಯೂ ಒಂದೇ ಸತ್ಯ. ಒಂದೇ ತೆರನ ಪ್ರತಿಭೆ. ಇಂತಹ ಹಾಡಿಕೆಯನ್ನು ಕಲಿಸುವುದಕ್ಕೆ ಸಾಧ್ಯವೇ ಎಂದು ಶಂಕಿಸುವಷ್ಟು ಪ್ರೌಢತರದ!! ಹೃದಯಾಂತರಾಳದಲ್ಲಿ ನೆಲಸಿ, ತಾನು ನಲಿಯುತ್ತಾ, ಹಾಡುಗಾರನ ಹೃದಯ ತಂತಿಗಳನ್ನೇ ವೀಣೆಗುವಯೋಗಿಸಿಗೊಂಡು ಹಾಡುತ್ತಿದ್ದ ವಾಗ್ದೇವಿಯ ಕಲಾವಿದಗ್ಧತೆಯಲ್ಲಿ ತೆರೆಯನ್ನು ಹರಿದ ನೋಟದಂತೆ ಕಂಡುಬರುತ್ತಿದ್ದಿತು. ಜಗತ್ತಿನ ಸುಖದುಃಖಗಳೆಲ್ಲವೂ ತನ್ನಲ್ಲಿಯೇ ಅಡಕ ಹೊಂದಿವೆಯೋ ಎಂದು ತೋರುತ್ತಿದ್ದ ಆ ಅಂತಃಕರಣಪೂರ್ವಕ ಗಾಯನವು ಶ್ರಾವಕರನ್ನು ತುಸುವೇಳೆಯಲ್ಲಿಯೇ ಮುಗ್ಧತೆಯ ನುಡಲಿನಲ್ಲಿ ಹಾಕಿತು. ಬೆಳೆಯುತ್ತಿದ್ದ ಆ ಮೊಳಕೆಯಲ್ಲಿ ಎಂತಹ ಫಲ ವಿದೆಯೆಂಬುದನ್ನು ಶ್ರಾವಕರು ಗ್ರಹಿಸಿದರು. ಒಂದು ಗಂಟೆಯಷ್ಟು ವೇಳೆ ಹಾಡಿದ್ದಾಗಿತ್ತು. ಬೇಸರವಿಲ್ಲ, ಮುಖದಲ್ಲಿ ಆಯಾಸದ ಕಲೆಯಿಲ್ಲ—ಒಂದು ದೀಪ್ತಿಮೌನವಾದ ಕಾಂತಿ; ನಕ್ಷತ್ರಸಾದೃಶ್ಯವಾದಂತಹ ಕಂಗಳ ಅಪೂರ್ವ ಶೋಭೆ. ಇವುಗಳು ಹೊಸ್ಸಿನ ಹೊಂಬಣ್ಣಕ್ಕೆ ಮೆರುಗು ಕೊಟ್ಟಂತಿದ್ದವು. ರಾಮುವು "ಭೈರವಿ"ಯ ಆಲಾಪನೆ ಮುಗಿಸಿ, ಅದೇ ರಾಗದ "ರಘುವರ ಸುಗುಣಾಲಯ" ಕೀರ್ತನೆಯನ್ನು ಹಾಡಲು ಮೊದಲುಮಾಡಿದ. ಎದುರಿಗಿದ್ದ ಆನಂದರಾಯರು ಅತ್ತಿತ್ತ ನೋಡಿ, ಸದ್ದಾಗದಂತೆ ಎದ್ದು ಹೊರಟು ಹೋದರು. ಶ್ರಾವಕರಲ್ಲಿ ಕೆಲವರು ಕುತೂಹಲ ದಿಂದತ್ತ ತಿರುಗಿದರು, ಮತ್ತೆ ರಾಮುವಿನ ವಿದ್ಯುತ್ಕಾರ್ಷಣವು ಅವರ ಗಮನವನ್ನು ಅವನ ಕಡೆಗೆ ತಿರುಗಿಸಿತು.

— ೨ —

ಆನಂದರಾಯರೆದ್ದು ಬಂದುದು ತಮ್ಮ ಕಿರು ಕೋಣೆಗೆ. ಮನೆಗೊಪ್ಪುವ ಕೋಣೆ. ಶ್ರೀಮಂತರ ಭೋಗ, ವಿಲಾಸಗಳಿಲ್ಲಿಂದ ಬರಬೇಕು? ಶುಭ್ರತೆಯೇ ಅಲ್ಲಿದ್ದ ಶ್ರೀಮಂತಿಕೆ. ಚೆನ್ನಾಗಿ ಶ್ರುತಿಮಾಡಿಟ್ಟ ಎರಡು ತಂಬೂರಿಗಳು, ಒಂದು ಏಟೇಲ್ ಪೆಟ್ಟಿಗೆ, ಒಂದು ಹಾರ್ಮೋನಿಯಂ, ಒಂದು ರುದ್ರ ವೀಣೆ—ಇವುಗಳೇ ಅಲ್ಲಿದ್ದ ಬೆಲೆ ಬಾಳುವ ಪದಾರ್ಥಗಳು. ಕೋಣೆಯ ಒಂದು ಕಡೆ ಸುತ್ತಿಟ್ಟಿದ್ದ ಸುವ್ವತ್ತಿಗೆ, ಇನ್ನೊಂದು ಮೂಲೆಯಲ್ಲಿ ಒಂದು ಹೆಳೆಯ ಮೇಜು, ಒಂದೆರಡು ಕುರ್ಚಿಗಳು. ಮೇಜಿನ ಮೇಲೆ ರಾಯರೂ, ಅವರ ಕುಟುಂಬ ತಮ್ಮ ತಾರುಣ್ಯದಲ್ಲಿ ತೆಗಿಸಿಕೊಂಡಿದ್ದೊಂದು ಮಾಸಿದ ಭಾವಚಿತ್ರ. ಅದರ ಪಕ್ಕದಲ್ಲಿ ವಕ್ಷಾಭಿಷಿಕ್ತ ರಘುರಾಮನ ಅಂಥವಾದ ಚಿತ್ರ. ಅದರ ಪಕ್ಕದಲ್ಲಿ ಹಸುಗೂಸನ್ನೆತ್ತು ಕೊಂಡಿದ್ದ ಒಬ್ಬ ಸುಂದರಿಯ ಭಾವಚಿತ್ರ. ಮುಂಗುರುಳಿಂದ ಮುಚ್ಚಿದ್ದ ಅಗಲವಾದ ಹಣೆ, ಭರಣಿಯಲ್ಲಿ ಬಿತ್ತಿ ಟ್ಟಂತಿದ್ದ ಪುಟ್ಟ ವ್ರೀತಾಕಾರದ ಕಣ್ಣುಗಳು, ಹಣೆಗೊಪ್ಪುವಂತಹ ಎಸಳಾದ ಮೂಗು, ತುಸು ದೊಡ್ಡದಾದರೂ ಮುಖದ ಮಾಟವನ್ನು ಕೆಡಿಸದಿದ್ದ ಬಾಯಿ. ಅದರ ಮೇಲೆ ಹೊಂಬೆಳಕಿನಂತೆ ಬೆಳಗುತ್ತಿದ್ದ ಮುಗುಳ್ನಗೆಗೆ ಕಾಂತಿಯು ಪಾವಿತ್ರತೆಯು ಪ್ರಕಾಶ. ಬಗಲಲ್ಲಿ ಪುಟ್ಟಕೂಸಿನಿಂದು ಎ

ತಾಯಿಯ ಪಡಿಯಚ್ಚು. ರಾಯರು ಕೋಣೆಯ ಬಾಗಿಲನ್ನು ಮುಂಭಕ್ಕೆ ತಳ್ಳಿ ಕುರ್ಚಿಯ ಮೇಲೆ ಕುಳಿತು ಎದುರಿಗಿದ್ದ ಸುಂದರಿಯ ವಕ್ಷನೋಡಿ ದೀರ್ಘವಾಗಿ ನಿಟ್ಟುಸಿರ್ಗರೆದರು. ಹಿಡಿಸಲಾರದಷ್ಟು ಸಂತೋಷ; ತಡೆಯಲಾಗದಷ್ಟು ದುಃಖ, ಎರಡೂ ಒಂದೇ ಸಲ ಉಕ್ಕಿ ಬಂದಂತಿತ್ತು. ಆ ವಕ್ಷವನ್ನು ಕೆಳಗಿಳಿಸಿಕೊಂಡು, ದಿಟ್ಟಿಸಿನೋಡುತ್ತಾ

"ಸುಂದರಾ, ನೀನಿವತ್ತು ಇರಬೇಕಾಗಿತ್ತು. ಇದೊಂದು ದಿನವಸವಿದ್ದು ನಿನ್ನ ಮಗನ ವೈಭವ ನೋಡಿದ್ದರೆ ನಿನಗ್ಹು ತ್ತಿದ್ದಿಧೋ. ಸುಂದರಾ, ಭೈರವಿ ಕೀರ್ತನೆ ನನ್ನ ಹೃದಯಕ್ಕೊಪ್ಪು. ಅದನ್ನು ತಳಿದು ಮಗನ ಮನಸ್ಸಲ್ಲಿ ಕುಳಿತು ಇಂದು ತೋರಿಸಿದೆಯಾ—ಸುಂದರಾ, ನಿನ್ನ ಕಾರೀರ—ನಿನ್ನ ಗಾಂಭೀರ್ಯ—ನಿನ್ನ ಸ್ಫೂರ್ತಿ ಎಲ್ಲವೂ ರಾಮೂಲಿ - ನಮ್ಮಾ ರಾಮೂಲಿ ಇವತ್ತು....."

ಎಂದು ಹೇಳುತ್ತಿದ್ದರು, ಮುಂದೆ ಮಾತನಾಡಲಾರದಾದರು. ಕಂಠವು ಬಿಗಿದುಬಂದಿತು. ಸಮಾಧಾನ ಮಾಡಿಕೊಂಡು ವಕ್ಷದಿಂದ ಉತ್ತರ ನೀರೀಕ್ಷಿಸುತ್ತ ಕುಳಿತರು. ಸಿಂಗರಿಸಿಕೊಂಡು ಬರುವನೆಂದು ಹೇಳಿ ಕಿರುಕೋಣೆಗೆ ಜಾರಿದ, ನಲ್ಲೆಯನ್ನು ನಿರೀಕ್ಷಿಸುತ್ತಾ ನಲ್ಲನು ಎಚೆಯಾಕ್ಕದೆ ಬಾಗಲನ್ನೇ ನೋಡುತ್ತಾ ಏನೇ ಶಬ್ದವಾದರೂ ನಲ್ಲೆಯೇ ಬಂದಿರುವಳೇನೋ ಎಂದು ದಿಗ್ಭ್ರಾಂತನಾಗುತ್ತಾ, ಮರುಕ್ಷಣವೇ "ನಲ್ಲೆಯಲ್ಲ—ಮನಸ್ಸಿನ ಆತಿಯ ಚಿತ್ರ"ವೆಂದರಿತು, ನೀರೀಕ್ಷೆಯನ್ನು ತೀಕ್ಷ್ಣಗೊಳಿಸಿ, ಕಾಯುತ್ತಾ ಕುಳಿತಿರುವಂತೆ, ರಾಯರು, ಎರಡು ಕೈಗಳಲ್ಲಿಯೂ ಚಿತ್ರವನ್ನು ಹಿಡಿದು ನೋಟದಲ್ಲಿ ದನ್ನು ನುಂಗುತ್ತ ಕುಳಿತಿದ್ದರು. ಸ್ವಲ್ಪ ಹೊತ್ತು ಹಾಗೆಯೇ ಕಳೆಯಿತು. ವಕ್ಷವು ಉತ್ತರ ಕೊಡಲಾರದೆಂದು ಮನಸ್ಸಿಗೆ ಹೊಳೆಯಿತೇನೋ, ದಿಟ್ಟಿಯನ್ನಿಳುಹಿ, ಚಿತ್ರವನ್ನಸ್ಸಿ, ಮತ್ತೆ ಮತ್ತೆ ಚುಂಬಿಸಿ, ಅದಕ್ಕೆ ದುಃಖಸಂತೋಷದ ವಾತಾವಾರ ದಿಂದ ಅಭಿಷೇಕ ಮಾಡಿಬಿಟ್ಟರು.

ಸ್ವಲ್ಪ ಹೊತ್ತು ಕಳೆಯಿತು. ರಾಯರು ಹಾಗೆಯೇ ವಕ್ಷವನ್ನು ಮೇಜಿನ ಮೇಲೆ ಗೋಡೆಗೊರಗಿಸಿ, ಕಾರ್ಯೋಡಗಳಂತೆ ಕವಿಯುತ್ತಿದ್ದ ಮನಸ್ಸಿನ ಭಾವನೆಗಳನ್ನು ಮರೆತು ಬಿಡಲು ರಾಮನ ನವಿವನ್ನೊಮ್ಮೆ, ತಮ್ಮ ಸತ್ಕಿಯ ಭಾವ ಚಿತ್ರವನ್ನೊಮ್ಮೆ ನೋಡುತಾರಂಭಿಸಿದರು. ಅದು ಒಂದು ತಕ್ಷಿಯ ಎದುರು ನಿಂತು ಹೋಪಾಡುವಂತಿತ್ತು. ಶಾಲೆಗೆ ತಪ್ಪಿಸಿಕೊಂಡು ಹೋಗುತ್ತಿದ್ದ ಬಾಲಕನನ್ನು ಉಪಾಧ್ಯಾಯನು ತನ್ನ ಶಕ್ತಿಬಲದಿಂದ ಎಳೆದೊಯ್ಯುವಂತೆ, ಒಂದು ಅದೃಶ್ಯ ತಕ್ಷಿಯು ರಾಮುವ ಮನಸ್ಸನ್ನು ಪಿಡಿದು ಮತ್ತೆ ಸುಂದರಿಯ ಪಕ್ಷಕ್ಕೆಳೆಗೆ ಎಳೆದೊಯ್ಯಿತು.

ಜೀವನವೂ ಒಂದು ತೆರನ ನೆಳಲಾಟ. ನೆಳಲಿಗೆ ಕಾಣದಂತೆ, ತಪ್ಪಿಸಿಕೊಂಡು ಓಡಿಹೋಗ ಬಯಸುವ ಮನುಷ್ಯ ನನ್ನು ಬಡದೆ ಅದು ಬೆನ್ನಟ್ಟುವುದೆಂತೆ—ನಿಂತರೆ ನಿಲ್ಲುವುದು, ನಡೆದರೆ ನಡೆಯುವುದು, ಓಡಿದರೆ ಓಡುವುದು - ಏನಾದರೂ ಬೆನ್ನು ಬೆಡದು. ನೆನಹೂ ಹಾಗೆಯೇ!

— ೩ —

ರಾಯರಿಗೆ ನೆನಪಾಯಿತು. ಕೂನ್ಯ ತೆರೆಯ ಮೇಲೆ ಚಲನ ಚಿತ್ರದ ವಿಧ್ಯುತ್ಸಿಕರಣ ಬಿದ್ದಂತೆ, ಬಾಲಯಲಾಗಿದ್ದ ವಾತಾವರಣವು ಚಿತ್ರನುಯವಾಯಿತು. ಇಪ್ಪತ್ತನಾಲ್ಕೆ ವರುಷಗಳ ಹಿಂದೆ "ಶರದೊಳ್ ದಿಗ್ವಿಜಯಂ ಉಚಿತಂ" ಎಂದನ್ನಿಸುವಂತಹ ಶರದೃತು—ಗ್ರೀಷ್ಮನ ಗಾಢ ಗಾಂಭೀರ್ಯವು ಮುಗಿದಿತ್ತು. ರಾಯರು ವಾತಾಗನ್ನು ಮುಗಿಸಿ ಏಳುವುದರಲ್ಲಿದ್ದರು. ಆಗ ಒಬ್ಬ ಮುದಿಗಣಿಕೆಯು ೧೨—೧೩ ವರುಷದ ಹುಡುಗಿಯೊಬ್ಬಳ ಕೈಹಿಡಿದು ಬಳಿಕ್ಕೆ ಬಂದು ಅಡ್ಡ ಬಿದ್ದು, ಹುಡುಗಿಯನ್ನೂ ಅಡ್ಡ ಬೀಳಿಸಿ.

"ತಂ ಧ್ಯಾನಾನ ತಮ್ಮು ಅನ್ನೋಬೇಕ್ಕು ಬುದ್ಧಿ. ದಿಕ್ಕಿಲ್ಲ ದವರೇಕಿ. ಹೊಟ್ಟೆಗ್ ಹಾಕ್ಕೊಂಡು ಮುಂದಕ್ಕರೋ ಭಾರ ತಮ್ಮು. ತಾವ್ ಪುಣ್ಯವಂತ ಮಾರಾಯ್ರು. ನಮ್ಮ ಹಾಗೆ ನಿಮ್ಮ ಹೆಸ್ರು ಹೇಳ್ಕೊಂಡು ಬದ್ಕೋರು ಎಷ್ಟೋ ಸುರೀ ಅತ್ರೆ. ದೊಡ್ಡನಸ್ವಾಡಿ ಕಾಪಾ ಶೈಕಿ....."

ಆನಂದರಾಯರು ಕಾವಾಡುವುದರ್ಥ ಕೇಂದಾಗ, ಆ ಹುಡುಗಿಯನ್ನು ತಾವ ಶಿಷ್ಯೆಯಾಗಿ ಸ್ವೀಕರಿಸಬೇಕೆಂಬುದು ಮನ ವಾಗೆಯಾಯಿತು. ಆನಂದರಾಯರಿಗಿದ್ದ ಶಿಷ್ಯರು ಸಂಖ್ಯೆ

ಸಿಕ್ಕ ಮಾತ್ರಕ್ಕೆ ರಾಯರು ಏಕಾಂಗಿಯಾಗಿ ಕುಳಿತಿರಲಿಲ್ಲ. ಅವರ ಮನಸ್ಸು ಹಿಂದಿನ ಗುರುದೇವನಿಗೆ ಮತ್ತೆ ಮತ್ತೆ ನಮಸ್ಕಾರ ಮಾಡುತ್ತಿತ್ತು. ಆ ಗುರುವಿನ ಮಗಳ ಬಗ್ಗೆ ಅವರಿಗೆ ಅಪಾರವಾದ ಕನಿಕರವಿತ್ತು. ಅವಳ ಮುಂದಿನ ಜೀವನದ ಬಗ್ಗೆ ಅವರು ಎಷ್ಟೊಂದು ಚಿಂತಿಸುತ್ತಿದ್ದರು. "ಏನ್ಮಾಡ್ತಾಳೋ ಏನೋ ಪಾಪ!—ಅವಿದ್ಯಾವಂತರಿಗೆ ಎದುರಿಗೆ ಕಾಣಿಸಿಕೊಂಡು — ನಾಚಿಕೆ ಹೇರಿಸಿಕೊಂಡು" ಎಂದು ಕಳವಳಿಸುತ್ತಿದ್ದರು. "ಹೆಣ್ಣು ಮಕ್ಕಳ ಸಂಗತಿ..ರಂಡೆಗೆ ಮಾರಿ ಹಾಕೋ ವರೆಗೆ" ಎಂದು ಮೊದಲಿಸುತ್ತಿದ್ದರು. ವೇತ್ಯಯಂಗೂಡಿ ಇಲ್ಲವೇ ಇಲ್ಲ. "ನಿಮಗೆ ವಿದ್ಯೆ ಕಲಿಸಿಕೊಡೋರೂ ಬೇರೆ ಇದ್ದಾರೆ. ಅವರಲ್ಲಿಗೆ ಹೋಗಿ" ಎಂದನ್ನುತ್ತಿದ್ದರು.

ತಮ್ಮ ಗುಣವನ್ನು ತಿಳಿದೂ ತಿಳಿದೂ ತಮ್ಮಲ್ಲಿಗೆ ಬಂದಿದ್ದ ನೇತ್ಯೆಯ ಬಿಟ್ಟಿತನವನ್ನು ನೋಡಿ ಕುಪಿತರಾದರು. ತಾವು ಕಲಿತ ವಿದ್ಯೆಯಿಂದ ನೀಡಿರ ಮನುಷ್ಯರಿಗೆ ಜೀವನಸ್ಥಿತಿಯಿಗೆ ಸೋಳಿಗೆ, ತನ್ನನ್ನು ತಾನು ಮಾರಿಕೊಳ್ಳುವ ಕುಲಟೆಗೆ ವಿದ್ಯೆ ಕಲಿಸಿಕೊಡಿದೆನಲ್ಲವು ಎನಿಸಿತು. ಆದರೂ ಆ ಮಗು ಏನ ಅಕರ್ಷಣೆ, ಬೆಲೆವೆಣ್ಣಿನ ಕಂದನೇ ಎಂದು ಸಂದೇಹ ಪಡುವಂತಹ ಸಿಹಿಮಾಟ್ಟು. ಪಾವನ ಮನೆ ಗೊವ್ವುವ ಮಂಗಳ ಮೂರ್ತಿಗೆ ಸರಿಯಿಸುವಂತಹ ನಿರ್ಮಲ ತೇಜಸ್ಸು. ಇವುಗಳ ಮಧ್ಯೆ ಸುಳಿದ ರಾಯರ ಮನಸ್ಸು ಅಂದೋಲನಕ್ಕೀಡಾಯಿತು. ನಿರುಪಾಯರಾಗಿ ಹುಡುಗಿಯನ್ನು ಹತ್ತಿರ ಕರೆದು, ಮೃದುವಾಗಿ ನೇವರಿಸುತ್ತಾ

"ನಿನ್ನ ಹೆಸರೇನು ಮಗೂ?"

"ಸುಂದರಾ"

"ನನ್ನಲ್ಲಿ ಹಾಡೋದನ್ನ ಕಲಿಯಲಿಕ್ಕೆ ಬಂದಿದ್ದೀಯಾ"

"ಹೌದು"

"ನನ್ನ ಹತ್ತಿರವೇ ಯಾಕೆ ಕಲ್ತುಕೋ ಬೇಕು?"

"ನಿಮ್ಮ ಹಾಗೆ ಹಾಡೋದಕ್ಕೋಸ್ಕರ"

"ಅಂದರೆ... ....."

"ಅಂದರೆ.....ಎಲ್ಲಾರ್ತಣ್ಣಲ್ಲ ನೀರು ಬರೋ ಹಾಗೆ ಚೆನ್ನಾಗಿ ಹಾಡುತ್ತೀರಲ್ಲಾ ಹಾಗೆ"

"ಎಲ್ಲಾರೂ ಅಳಿಸಿದ್ರೆ ದುಡ್ಡು ಯಾರು ಕೊಡ್ತಾರವ್ವಾ. ಚೆನ್ನಾಗಿ ಬಟ್ಟೆ ಹಾಕ್ಕೊಂಡು, ಬಣ್ಣ ಬಳಿದ್ಕೊಂಡು, ಥಳಥ್ಥಳಿಯ್ಯಾಂತ ಕುಣಿಯೋದ್ರ ಕಲ್ತುಕೋ ಬೇಕು. ತುಂಬಾ ಜಾವಡಿಗಳ್ಳ ಕಲ್ತುಕೋ ಸಾಕು . . ನವ್ಮಾ ಸಂಗೀತ ಯಾತಕ್ಕೆ?" ಎಂದು ಬಿರುಸು ನುಡಿದಾಗ ಏನೂ ಅರಿಯದ ಆ ಬಾಲಿಕೆಯು ಮನಸೊಂಥು, ಕಣ್ಣೀರ್ಗರೆದು ದು ನೆನ ಪಾಯಿತು. "ಸುಮ್ಮಾಸುಮ್ಮನೆ ಎಳೆ ಕರುಳನ್ನು ನೋಯಿಸಿದೆನಲ್ಲಾ" ಎಂಬ ವಿಷಾದವೂ ಆಯಿತು. ರಾಯರು ಕರುಣೆಯನ್ನು ತಾಳ

"ಯಾಕವ್ಮಾ ಅಳುತ್ತೀ"

"ನೀವೇ ಹೇಗಂದ ಮೇಲೆ ಇನ್ನೇನು ಗುರುಗಳೇ" "ಗುರುಗಳೇ" ಎಂಬ ಪದವೊಂದು ರಾಯರ ಚಿತ್ತವನ್ನು ಬದಲುಮಾಡಿ ಬಿಟ್ಟಿತು.

"ನಾನು ಹೇಳಿದ್ದು ಸುಳ್ಳೇನಮ್ಮಾ"

"ಇರಬಹುದು ಗುರುಗಳೇ — ಆದರೆ ಎಲ್ಲಲ್ಲೂ ಹಾಗೇನೇ? ನಿಮ್ಮಾ ಆತ್ಮಾವಾದಿಂದ ನಾನು ಬೇರೆ ರೀತಿ ಆಗಬಹುದು"

"ಹಾಗಾದರೆ ವಿದ್ಯೆ ಕಲಿತು ಏನು ಮಾಡಬೇಕೂಂತಿದ್ದೀ"

"ಮದುವೆಯಾಗ್ತಾಳಂತೆ ಬಾವ್ಲಿ"

ಬಾಲಿಕೆಯು ನಾಚಿಕೆಯಿಂದ ಕಲೆಬಾಗಿದಳು. ತಾಯಿಯ ತಿರುಗಿ ಮುಗುಳ್ನಗೆ ಬೀರುತ್ತಾ, ಕುಸಿಮುನಿಸನ್ನು ತೋರಿದಳು. ಪ್ರಥಮವೆದೆಯ ಪ್ರಥಮನುಂಡಿಗೆ ಮುನಿದ ಕಾಳಿಂತಿಕೆಯು ಕೋಪದಂತಹ ತೋರಿ.

ರಾಯರು ಹುಸುಹೊಟ್ಟು ಜಿಂಕಿ ಆಗಲೆಂದು ಒಬ್ಬರು ಬಾಲಿಕೆಯು ಹೋಗುವುದಕ್ಕೆ ಮುಂಚೆ ತನ್ನ ಮುಂದಿನ ಗುರುದೇವನಿಗೆ ಮತ್ತೊಮ್ಮೆ ನಮಸ್ಕರಿಸಲು, ತಾಯಿ ಮಗಳು ಬಿಟ್ಟು ತೆರಳಿದರು. ಮಗುವಿನ ಹಾಗೆ ಅತ್ತಕಡೆ ನೋಡುತ್ತಾ ನೋಡುತ್ತಾ ಹೋದ ದೃಷ್ಟಿಯ ರಾಯರ ಸ್ಮೃತಿ ಪಥಕ್ಕೆ ಬಂದಿತು.

* * * * *

ಹುಡುಗಿಯು ಬೆಳೆದಳು. ವಯಸ್ಸು, ವಿದ್ಯೆ, ರೂಪುಗಳೆಲ್ಲಿದರಲ್ಲಿಯೂ ಪ್ರಾಥಿಯಾದಳು. ಇಪ್ಪತ್ತು ವರ್ಷದ ತುಂಬು ತಾರುಣ್ಯ. ಗುರುವನ್ನು ಕೂಡ ಮುಗ್ಧಗೊಳಿಸುವಂತಹ ವಿದ್ವತ್. ರಾಯರು ತಿಷ್ಯಳ ಬೆಳವಣಿಗೆಯನ್ನು ನೋಡುತ್ತಾ ತನ್ನ ಭುಜವನ್ನು ತಾವೇ ತಟ್ಟಿಕೊಳ್ಳುತ್ತಿದ್ದರು. ವಾತ್ಸಲ್ಯವನ್ನು ಧಾರೆಯಿಟ್ಟಾ ಬಂದಿತು. ಇಂದು ಸುಂದರಿಯು ಗುರುವಿನ ಬಳಿ ವಿದ್ಯಾಭಿಕ್ಷೆಯನ್ನು ಬೇಡಬಂದಿರುವ ಕೌಮಾರಿಯಲ್ಲ, ಸ್ತ್ರೀತ್ವದ ಸಂಪೂರ್ಣ ಕಳೆಯನ್ನು ಕಂಡು ಕೊಂಡಿದ್ದ ಮೆನಕೋಹನೆ. ಸುಂದರಿಯು ವಿದ್ಯಾಸಂಪತ್ತಿಯು ಹೆಚ್ಚುತ್ತಾ ಬೃಂದಿದ್ದಂತೆ, ರಾಯರ ಅನುರಾಗ ಸಂಪತ್ತಿಯು ಹೆಚ್ಚುತ್ತಾ ಬಂದಿತ್ತು. ಶಿಷ್ಯಳನ್ನು 'ಕಲಾಮೂರ್ತಿ'ಯನ್ನಾಗಿಸಬೇಕೆಂದು ಹೊರಟಿದ್ದ ಅವರು ಸಂಕಲ್ಪವು ಈಡೇರಿತ್ತು. ತಾವು ಅವಳ ಜೀವನದಲ್ಲಿ ಪ್ರವೇಶಿಸದಿದ್ದರೆ, ಸುಂದರಿಯು ಲಿರುತ್ತಿದ್ದ ಕೆಲಂಬ ನೆನಹು ರಾಯರಿಗೆ ಹತ್ತು ಭುಜಗಳನ್ನಾ ದರೂ ಹೆಚ್ಚಿಗೆ ಕೊಡುತ್ತಿದ್ದಿತು; ಸುಂದರಿಯೂ ಆ ವಿಷಯ ವನ್ನು ಮರೆತಿರಲಿಲ್ಲ. ರಾಯರ ಅನಾರಾಗವು ರೂಪ ವೈತ್ಯಾಸ ಹೊಂದುತ್ತಾ ಬಂದಿತ್ತು. ಇಂದವಳನ್ನು ನೋಡಿದರೆ ತಾವು ಕಾಪಿಟ್ಟು ಬೆಳೆಸಿದ ಮಗಳನ್ನು ಕಂಡಂತಾಗುತ್ತಿರಲಿಲ್ಲ. ನೋಹವನ್ನು ಹುಟ್ಟಿಸುವ ಒಬ್ಬ ಸುಂದರ ಸ್ತ್ರೀಯನ್ನು ಕಂಡಂತಾಗುತ್ತಿತ್ತು.

ಸುಂದರಿಗೆ ಒಂದು ಆಸೆ...ಮಹತ್ತಾದ ಆಸೆ. ಗುರುವಿಗೊವ್ವುವ ಕಾಣಿಕೆಯನ್ನು ಕೊಡಬೇಕೆನ್ನುವುದು. ತನ್ನ ಊಹಾಸಾಮರ್ಥ್ಯವು ಜಾಚುವಷ್ಟು ದೂರವೂ ಅಲೋಚಿಸಿದ್ದಾಯಿತು...ಬಗೆ ಹರಿಯದು. ವಿಕಲ್ಪವನ್ನಿನ್ನು ದ್ರೋಣರು ಹೆಬ್ಬೆರಳು ಕೇಳಿದಂತೆ ಸುಂದರಿಯನ್ನು ರಾಯರು ನಾಲಿಗೆ ಯನ್ನು ಕೇಳಿದ್ದರೆ ಅವಳು ಇಲ್ಲ ವೆನ್ನುತ್ತಿರಲಿಲ್ಲ. "ಅವರನ್ನೇ ಕೇಳಿ ಬಿಡೋಣವೇ" ಎಂದುಮುಕೊಳ್ಳುವಳು—ಮರು ಕ್ಷಣವೇ "ಛೆ! ಛೆ! ಇಂಟೇ. ಅವರು ಹೇಳುವುದೂ ಇಲ್ಲ. ಹೇಳದರೆ ಸ್ಫಾರಸ್ಸವೂ ಇಲ್ಲ. ಅವರಿಗೆ ಆಶ್ಚರ್ಯವಾಗ ಬೇಕು. ಅಂತಹ ಕಾಣಿಕೆಯನ್ನು ಕೊಡಬೇಕು" ಎಂದು ಕೊಂಡು ಬಗೆಹರಿಯದೆ, ಬೇಸತ್ತು ಸುಮ್ಮನಾಗಿಬಿಡುವಳು.

* * * * *

ಶುಕ್ಲಪಕ್ಷದ ಬಿದಿಗೆಯ ರಾತ್ರಿ. ಅವ್ಯತಕಿರಣನ ವ್ರತಾಂತವಾದ ವೈಭವ. ವಸಂತಕಾಲ. ನಳನಳಿಸುತ್ತಿದ್ದ ಎಳೆತಿರುಗಳನ್ನಲಂಕರಿಸಿದ್ದ ಪೂಗಳ ಅರಿಅರಳುವಿಕೆಯ ಚಂದ. ನುದನ, ಶಶಿ, ವಸಂತರ ತ್ರೈತ್ರಯಾತ್ರೆಯ ಏನ ನೆಂಬಂತ್ತಿದ್ದಿತು. ನಡುರಾತ್ರಿ. ವಾತಾವರಣವೆಲ್ಲಾ ಸುನರು ಮಯ. ಬೀಸುತ್ತಿದ್ದ ಮಂದಾನಿಲನೊಂದಿಗೆ ಬೆರೆತ್ತಿದ್ದ ಲಲಿತ ಮಧುರಗಾನ. ಅದೇ ಕೊನೆಯ ರಾತ್ರಿ..ಸುಂದರಿಯ ಸಾಧನೆಯ ಕೊನೆ ಇರುಳು...ಸುಂಚರಿಯು ಭೂಸಾಳಿಯಿಂದ ಭೈರವಿಗೆ ಹೋಗಿದ್ದಳು. ಅದೇ : ಭೈರವಿ..ಅವಳ ಆಚ್ಚು ಮೆಚ್ಚಿನ ಭೈರವಿ..."ರಘುವರ ಸುಗುಣಾಲಯ"...ಹಾಡಿ ಕೆಯು ಮುಗಿಯಿತು. ಮಂಗಳವನ್ನು ಹಾಡಿದ್ದೂ ಆಯಿತು. ರಾಯರು ತಿಷ್ಯಳ ಕೈಹಿಡಿದು

"ಸುಂದರಾ, ಇಂದು ನಿನ್ನ ಪಾಠ ಮುಗಿಯಿತು. ನಾಳೆನಿಂದ ನೀನು ಸ್ವತಂತ್ರಳು. ರಾಗದೇವಿ ನಿನಗೆ ಒಲಿದಿರುವಳು.,'

"ಎಲ್ಲವೂ ತಮ್ಮ ಅನುಗ್ರಹ. ನನ್ನಮ್ಮ...ವೇತ್ಯೆಯ ಮಗಳನ್ನು ಶಾರದಾ ದೇವಿಯ ಮಡಿಲಲ್ಲಿ ಹಾಕಿದ್ದಿರಿ.''

"ಹೌದು, ಆದರೆ ಗುರುದಕ್ಷಿಣೆ ಕೊಟ್ಟ ಹೊರತು ವಿದ್ಯೆಯ ಸಾರ್ಥಕವಿಲ್ಲ ಬಲ್ಲೆಯಾ. ಇಮ್ಮು ದಿನಸವೂ ಅದದ್ದು ಸಾಧನ-ನಿಜವಾದ ಸಿದ್ಧಿ ಗುರುದಕ್ಷಿಣೆ ಕೊಟ್ಟ ಮೇಲೆ.''

"ತಮಗೆ ಯಾವ ದಕ್ಷಿಣೆಯನ್ನು ಕೊಡಲಿ ಗುರುವೇ ನೀವೇ ಹೇಳಿ.''

ರಾಯರು ಕಾಮುಕತ್ವದ್ದೂ ಆ ಕೊನೆ ಮಾತನ್ನೇ ಹೇಳಬೇಕೆಂದಾಸೆ-ಆತುರ—ಉದ್ವೇಗ—ಆದರೆ ಬಾಯಲ್ಲಿ

ಮುಗಿಯಿತು.

ನಾಲಿಗೆ ಹೊರದರು. ಪ್ರಯತ್ನಿಸಿ ಪ್ರಯತ್ನಿಸಿ

"ಸುಂದರಾ ಬೇರೆ ಭಾವಿಸಬೇಡ. ನನಗೆ..ನನಗೆ. ಬೇಕಾದ್ದು ನೀನು..ನಿನ್ನ ಅನುರಾಗ.''

ಸುಂದರಿಯು ಬೆಳೆಸ ಬೆರಗಾದಳು. ತಪ್ಪ ತಿಳಿಯನ್ನು ತಾನೇ ತಂಬುಬಾರದಾಗಿತ್ತು. ವೈವಾಂತ ಸಂಭೂತನಾದ ತನ್ನ ಗುರುವಿನ ಸುಡಿಯು ಅವನದೇ ಎಂದು ನಂಬಲಾರದಾದಳು. ಆದರದು ಅವನದೇ-ತನ್ನ ಗುರುವಿನದು-ರಾಯರದು. "ನಿನು ಗುರುದೇವನು ಕೋರುವುದು ತನ್ನ ಹೇಯ ಪ್ರೇಯಾನನ್ನೇ...ಅರನರ ಅರಸಾಗಿರುವವನು ತಿರುಳನೆ ಎಂಜಲಿಗೆ ಕೈಯೊಡುವನೇ?'' ಎಂಬ ಸಂದೇಹ. ಕಣ್ಣು ಬಿಟ್ಟು ನೋಡಿದರೆ, ತನ್ನ ರೂಪರಾತಿಯನ್ನು ರಕ್ತ, ತುಂಬಿದ ಕಣ್ಣಿಗೆಳಿಂದ ನೋಡುತ್ತಾ, ಜೋಲುಬಿದ್ದ ಕುಟಿಯ ಮೇಲೆ ಬಿಸಿಯುಸುರನ್ನು ಬಿಡುತ್ತಾ ಕುಳಿತ್ತಿದ್ದ ಕರಿಯದೆನ್ನ..ಕಣ್ಣುಜ್ಜಿ ಕೊಂಡುನೋಡುತ್ತಾ ಳೆ—ಎದುರಿಗೆ ತನ್ನ ವಿದ್ಯಾಗುರು—ಅನೆಂದ ರಾಯನು.

ಸುಂದರಿಯು ಧೈರ್ಯಮಾಡಿಕೊಂಡು

"ಗುರುವೇ .. ನಾನು..ನಿಮ್ಮ ಶಿಷ್ಯಳು .. ನಿಮ್ಮ ಮಗಳು'' ಎಂದು ಮಾತ್ರ ಆಡಿದಳು. ರಾಯರಿಗೆ ಸ್ಮೃತ ತಪ್ಪುವಂತಾಯಿತು. ತಪ್ಪಿಂದ ಉದ್ಧಾರ ಹೊಂದಿದ ಸೂಳೆಗೆ ಈ ಉದ್ಧಟತನವೇ?..ಈ ಅಹಂಕಾರವೇ..ತನ್ನ ಕೋರಿಕೆಯನ್ನು ನೆರವೇರಿಸಲಾಗದಂತಹ ಸೊಕ್ಕೇ?... ರಾಯರ ಕಲಾ ವಿದಗ್ಧತೆಯ ಕೋಮಲತೆಯು ಎಲ್ಲಿಗೋ ಮಾಯವಾಗಿ ಬಿಟ್ಟಿತು..ಅಲ್ಲಿ ಆಗ ಇದ್ದುದು ಪುರುಷನ ಕಾಠಿಣ್ಯ—ಮೃಗತೃಷ್ಣಾ—ಅಂಧ ನಿಶಾಸೆ. ಬಲಾತ್ಕಾರದಿಂದ ಬರಸೆಳೆದು ತಮ್ಮಾ ತೋಳ ಸೆರೆಯಲ್ಲಿ ಅವಳನ್ನು ಹಾಕಿದರು :.....ಈ ಚಿತ್ರವು ನೆನಪಾಯಿತು.....

ರಾಯರ ಕಣ್ಣಿಂದ ಮುಃಖದ ಕಿರಿತನದಲ್ಲಿ ಬರುತ್ತಿದ್ದ ಪನಿಸರಣಿಯೂ ನಿಂತುಹೋಯಿತು. ಮುಂದಿನ ಚರಿತ್ರೆಯ ನೆನಹು ಹೃದಯವನ್ನು ಹಿಂಡಿಬಿಟ್ಟಿತು. ಸುಂದರಿಯು ಎರಡೇ ವರ್ಷ ಬದುಕಿದ್ದುದು—ರಾಮುವಿಗೆ ಜನನವಿತ್ತುದು—ಮುಃಖದಿಂದ, ನಿರಾಸೆಯಿಂದ ಕೃಯಿಸಿ ಕೃಯಿಸಿ ಮೃತ್ಯುವಕ ರಾದದ್ದು—ಒಂದಾಗುತ್ತಲೊಂದು ಸೇಡನ್ನು ತೀರಿಸಿಕೊಳ್ಳು ವಂತೆ ಬರಲಾರಂಭಿಸಿದವು.

— ೪ —

ಆ ವೇಳೆಗೆ ರಾಮುವಿನ ಳಧೇರಿ ಕೊನೆಗಂಡಿತ್ತು. ಮುಂಗೆಕಾರತಿಯ ಸಮಯ. ಸುಖದಿಂದ ತನೆದಿದ್ದ ಶ್ರಾವ ಕರು ಸನ್ನೋಹನಾಸ್ತ್ರದಿಂದ ಬಂಧಿತರಾಗಿದ್ದಂತಿದ್ದರು. ರಾಯರನ್ನು ಹುಡುಕುತ್ತಾ ಅವರ ಕೆಲವು ಗೆಳೆಯರು ಕೋಣೆಗೆ ಬಂದರು. ರಾಯರ ಚಿತ್ತ ಸ್ಥಿತಿಯನ್ನು ನೋಡಿ ಆನಂದಿಸ ತಲ್ಲೀನತೆಯೆಂದು ಭಾವಿಸಿಕೊಂಡು ರಾಯರನ್ನು ಹೊರಗೆ ಕರದೊಮ್ಮರು. ಧೂಂಗಳಾರತಿ ಮುಗಿಯಿತು. ಸಭೆಯು ಗುರುಶಿಷ್ಯರನ್ನು ಮೆಚ್ಚುತ್ತಾ ಹೊರಟು ಹೋದರು.

ತೊಟ್ಟಿಯಲ್ಲಿ ಉಳಿದವರು ರಾಯರು, ರಾಮು ಇಬ್ಬರೇ. ಇಬ್ಬರಿಗೂ ಒಂದೇ ಬಗೆಯ ಮನಸ್ಸು. ಏನೋ ಹೇಳಬೇಕೆಂಬ ಹಂಬಲ—ಹೇಳಲಾಗದ ದೌರ್ಬಲ್ಯ. ಈ ನಾಟಕವನ್ನು ನೋಡುತ್ತಾ ಮಂದಾಸನದಲ್ಲಿ ಮಂಡಿಸಿದ್ದ ರಘುರಾಮನು ನಕ್ಕಂತಾಯಿತು. ರಾಯರು ಸೂಜಿಗಲ್ಲಿಂದ ಸೆಳೆಯಲ್ಪಟ್ಟ ಕಬ್ಬಿಣದಂತೆ ಅತ್ತ ತಿರುಗಿದರು. ರಾಮುವು ಉಕ್ಕುತ್ತಿದ್ದ ಭಾವರಸಗಳ ಪ್ರವಾಹವನ್ನು ತಡೆಯ ಲಾರದೆ ಧರದಿಂದ ಬಂದು ರಾಯರ ಚರಣಗಳ ಮೇಲೆ ಬಿದ್ದು ಬಿಟ್ಟ. ರಾಮುರಿಗೆ ಕಟ್ಟಿದ್ದ ಗಂಟಲು ಬಿಟ್ಟಿತು. ರಾಮುವನ್ನಾದರದಿಂದಪ್ಪಿ

"ಕಂದಾ, ತಮ್ಮ ಮಗಳೊಂತ ತಿಳ್ಕೋಳ್ ನನ್ನಾ ಎಂತಾ ಅಂಗಲಾಚಿದ ಸುಂದರನ ಮಾತು ಕೇಳದೆ ಹೋದೆ..ಆದರೆ ನಿನ್ನಂತೂ ಎಂದಿತಾ ನನ್ನ ಮಗಾಂತ ಭಾವಿಸುತ್ತೇನಪ್ಪಾ'' ಎಂದರು.

ಈ ವೇಳೆಗೆಲ್ಲಿಂದಲೋ "ನಮ್ಮ ರಾಮು ಹುಟ್ಟಿದ ಹಬ್ಬ ಎಂದೊಂದ್ರೆ'' ಎಂದು ಒಂದು ಧ್ವನಿ ಕೇಳ ಬಂದಿತು. ಎಲ್ಲರಿಗೆ ರಾಯರ ಕುಟುಂಬ. ರಾಯರ ನೋಟ ಹೆಂಡ ತಿಯ ನೋಟದಲ್ಲಿ ಸೇರಿತು. ಕೂಡಲೇ ಮಿಂದು ಹೊಳೆ ದಂತೆ ಇಬ್ಬರಿಗೂ ಅಭ್ಯಂಜಾರ ಹರಿಯಿತು. ಅವಳ ಮಕ್ಕ ಳಂತೆ ಒಂದಾಗಿದ್ದ ಪ್ರೇಮ, ಕೃಮೆಗಳ ಮಹಿಮೆಯನ್ನು ರಾಯರು ಆ ಕಂಬನಿಯಲಿ ತಂದರು.

(ಕೈದೋಟಕ್ಕೆ ಪ್ರಯೋಜನಕಾರಿಯಾದ ಮಿಶ್ರಗುಣ " ೧೦ " ಎಂಬ ಸಸ್ಯ ಔಷಧ ಗುಣಗಳುಳ್ಳ ಒಂದು ಸಸ್ಯ

ಸಾಮ್ರಾಜ್ಯದ ಸತ್ವ ಪರೀಕ್ಷೆ.

(ಸತ್ಯಾಗ್ರಹ ಚಳವಳಿಯ ಸಿಂಹಾವಲೋಕನ.)

ಬರೆದವರು "ಇತಿಹಾಸಕಾರ"ನು

(All Rights Reserved)

1930ನೇ ಇಸವಿ ಮಾರ್ಚ್ ತಾ ೧೨ರಲ್ಲಿ ಮಹಾತ್ಮಾ ಗಾಂಧಿಯವರು ಕೆಲವು ಸ್ವಯಂಸೇವಕರೊಡನೆ ಗೂಡಿ ಸತ್ಯಾಗ್ರಹವನ್ನು ಹೂಡಿ ಉಪ್ಪಿನ ಕರವನ್ನು ಕಿತ್ತೊಗೆಯಲು ಹೊರಟರು. ಇದರಿಂದ ತದಲ್ಲೆಲ್ಲಾ ಕ್ಷೋಭೆಯೂ ಹಾಹಾಕಾರವೂ ತಲೆದೋರಿತು. ಮಹಾತ್ಮಾ ಗಾಂಧಿಯವರು, ಜೈಲುಗಳನ್ನು ಸತ್ಯಾಗ್ರಹಿಗಳಿಂದಲೂ ಉಪ್ಪಿನ ಶಾಸನೋಲ್ಲಂಘನೆಗಳಿಂದಲೂ ತುಂಬಿಸಿ ಆ ಮೂಲಕ ತನ್ನ ದೇಶಮಾತೆಗೆ ಸ್ವಾತಂತ್ರ್ಯವನ್ನು ಖಂಡಿತವಾಗಿಯೂ ದೊರಕಿಸುವೆನೆಂಬ ಶಪಥವನ್ನಿತ್ತರು. "ನನ್ನ ಆತ್ಮವು ಯೋಗ್ಯವಾದುದ್ದು ನನ್ನ ಸಾಧನಗಳು ಪರಿಶುದ್ಧವಾದವುಗಳು ಸತ್ಯವನ್ನು ತೃಜಿಸುವ ತರಿಗೆ ಸತ್ಯಾಗ್ರಹಿ ಅವಜಯವೆಂಬುದಿಲ್ಲವು" ಎಂದು ಮಹಾತ್ಮರು ತನ್ನ ಪ್ರಯಾಣದ ಮೊದಲಿನ ದಿವಸದಲ್ಲಿ ಸಬರ್ಮತಿ ನದಿಯ ದಡದಲ್ಲಿ ನಿಂತು ಜನಸಮುದಾಯಕ್ಕೆ ಹೇಳಿದ ಮಾತಿನಿಂದ ದೇಶದೇ ಚಕಿತವಾಯಿತೆನ್ನಬಹುದು. ಸೂರ್ಯೋದಯವಾಯಿತು ಮಹಾತ್ಮರನ್ನು ಸಾಯುವ ತನಕ ಅನುಲಂಬಿಸಲು ನಿಶ್ಚಯಿಸಿದ್ದ ಕೆಲವು ಸ್ವಯಂಸೇವಕರು ಕ್ಲಪ್ತಕಾಲದಲ್ಲಿ ಪ್ರಯಾಣ ಸನ್ನದ್ಧರಾಗಿ ಇದಿರಿಗೆ ಬಂದರು. ಎಲ್ಲವೂ ಸಿಶ್ಚಬ್ಧವಾಗಿತ್ತು. ಇವರ ಪ್ರಯಾಣವನ್ನು ನೋಡಿಯಾಡರೋ ಪುಣ್ಯನನ್ನು ಳಿಸಬೇಕೆಂಬ ಸದುದ್ದೇಶದಿಂದ ಅಲ್ಲಿಗೆ ಮಧ್ಯರಾತ್ರಿಯಲ್ಲೇ ಬಂದು ಕಾದಿದ್ದ ಸಾವಿರಾರು ಜನರೂ ಸ್ತಂಭೀಭೂತರಾಗಿ ಈ ಮೆರವಣಿಗೆಯ ಹೊರಡೋಣವನ್ನು ಎವೆಯಿಕ್ಕದೆ ನೋಡುತ್ತಿದ್ದರು. ಪ್ರಾರ್ಥನೆಯಾಯಿತು ಮುಂಗಳಾಂಗಿಯರು ಸ್ವಯಂಸೇವಕರನ್ನು ಕುಂಕುಮುಗಳಿಂದಲಂಕರಿಸಿ ಆಶೀರ್ವದಿಸಿದರು. ಕೇಸ್ವನನ ಅಜ್ಞೆಯಾಯಿತು ಪ್ರಯಾಣಕ್ಕೆ ಆರಂಭವಾಯಿತು ಒಂದೇ ಜಯವು ಅಥವಾ ಲಯವು ಎಂದು ಧ್ಯಾನಿಸುತ್ತಾ ಮೆರವಣಿಗೆಯು "ರಘುಪತಿ ರಾಘವ ರಾಜಾರಾಮ" ಎಂಬ ಸಂಗೀತರಾಗದೊಡನೆ ಮೆಲ್ಲನೆ ಹೊರಡಿತು.

ಈ ಮೆರವಣಿಗೆಯು 240 ಮೈಲು ದೂರವಿರುವ ದಂಡಿಯೆಂಬ ಒಂದು ಕರಾವಳಿ ಪ್ರದೇಶಕ್ಕೆ ಹೋಗಬೇಕಾಗಿತ್ತು. ಅಲ್ಲಿಗೆ ಅದರ ಮೊದಲೇ ಮುಟ್ಟಿ ಎಪ್ರಿಲ್ ೆರಲ್ಲು ಉಪ್ಪಿನ ಸತ್ಯಾಗ್ರಹ ಸಮಾರಂಭವನ್ನಾರಂಭಿಸುವದೆಂಬುದು ಮಹಾತ್ಮರ ನಿರ್ಣಯವಾಗಿತ್ತು. ಸಾಧ್ಯನಾದಷ್ಟು ಮುಟ್ಟಿಗೆ ಉಪ್ಪನ್ನು ತಯಾರಿಸುವದು, ಸುಂಕವನ್ನು ಕೊಡದೆ ಉಪ್ಪನ್ನು ಸಂಗ್ರಹಿಸುವದು ಮತ್ತು ಅದನ್ನು ಹಂಚಿಕೊಡುವುದು ಇವೇ ಉಪ್ಪಿನ ಸತ್ಯಾಗ್ರಹದ ಮೂರು ಸಾಧನಗಳಾಗಿದ್ದವು. ದಂಡಿಯ ಕಡೆಗೆ ಉತ್ಸಾಹದಿಂದ ಸರಿಯುತ್ತಿದ್ದ ಈ ಮೆರವಣಿಗೆಗೆ ಎಲ್ಲೆಲ್ಲಿಯೂ ಉದ್ದಲ ಸ್ವಾಗತವು ದೊರೆಯಿತು. ಉಪ್ಪಿನ ಸತ್ಯಾಗ್ರಹದ ತತ್ವ, ದೇಶಕ್ಕಾಗಿ ಸ್ವಾರ್ಥತ್ಯಾಗ, ಮದ್ಯಪಾನ ನಿಷೇಧ, ಮತ್ತು ಪರದೇಶಿ ವಸ್ತ್ರ ಬಹಿಷ್ಕಾರವೇ ಮೊದಲಾದ ವಿಷಯಗಳಲ್ಲಿ ಮಹಾತ್ಮರು ಅಲ್ಲಲ್ಲಿ ಭಾಷಣಗಳನ್ನಿತ್ತರು. ದಿನಸಗಳು ಕಳೆದುಹೋದ ಹಾಗೆಲ್ಲಾ ಈ ಮೆರವಣಿಗೆಗೆ ಬಲವಾದ ಬೆಂಬಲವು ದೊರೆಯತೆನ್ನಬಹುದು. ಅಷ್ಟರಲ್ಲಿ ಮಹಾತ್ಮರ ಬಲಗೈಯಂತಿದ್ದ ಸರ್ದಾರ್ ವಲ್ಲಭಾಯಿ ಪಟೇಲರು ರಾಸ್‌ಯೆಂಬಲ್ಲಿ ಕೈದುಮಾಡಲ್ಪಟ್ಟರು. ಈರಿಯುವ ಬೆಂಕಿಗೆ ಎಣ್ಣೆಯನ್ನೆರೆದಂತಾಯಿತು. ಸೂರತಿನವರಂತೂ ಆವೇಶದಿಂದ ತುಂಬಿದರು. ಅಖಿಲಕಾನೀಕ ಸರಕಾರಿ ವಕೀಲರು ತಂತಮ್ಮ ಸರಕಾರಿ ಕೆಲಸಕ್ಕೆ ರಾಜಿನಾಮೆ ಕೊಟ್ಟರು. ಇದರಿಂದ ಸರಕಾರವು ಕೂಡ ತಬ್ಬಿಬ್ಬಾಯಿತು. ಮೊತ್ತಮೊದಲು ಪಾಟ್ಣಿಮಾತ್ಮರ ಹಾಸ್ಯಕ್ಕೂ ತಿರಸ್ಕಾರಕ್ಕೂ ಒಳಗಾದ ಈ ಚಿಕ್ಕ ಚಳವಳಿಯು ದೇಶನನ್ನೇ ನವತೀತನದಿಂದ ತುಂಬಿಸಿತು. ಕಾಂಗ್ರೆಸ್ ಸಂಸ್ಥೆಗಳು ಸ್ವಯಂಸೇವಕರನ್ನು ಸಂಗ್ರಹಿಸುವ ಕಾರ್ಯವನ್ನು ಭರದಿಂದ ನುಗ್ಗಿಸಿತ್ತಿದವು. ಮಹಾತ್ಮರ ಮಹತ್ಕಿಳೆಯೂ ಈ ಮೆರವಣಿಗೆಯ ರಾಜಕೀಯ ಮಹಿಮೆಯೂ ಅನೇಕಾನೇಕ ಪಾಶ್ಚಿಮಾತ್ಯ ಪತ್ರಿಕಾಕರ್ತರನ್ನೂ ಇಲ್ಲಿಗೆ ಆಕರ್ಷಿಸಿತು. ಯಾವ ಸ್ಥಳದಲ್ಲಿ ಮಹಾತ್ಮರು ಉಪ್ಪಿನ ಸತ್ಯಾಗ್ರಹ ಸಮಾರಂಭವನ್ನಾಚರಿಸಲು ನಿಶ್ಚಯಿಸಿದ್ದರೋ ಅಲ್ಲಿಗೆ ಸ್ವಯಂಸೇವಕರು ಎಪ್ರಿಲ್ ೫ಕ್ಕೆ ಬಂದು ತಲುಪಿದರು. ಅವ್ವರ ತನಕ ಪೋಲೀಸಿನವರು ಸುಮ್ಮನಿದ್ದರು.

ಎಪ್ರಿಲ್ 6ನೇ ದಿನ ಉಪ್ಪಿನ ಶಾಸನೋಲ್ಲಂಘನೆಯ ದಿನವೆಂದು ಇನ್ನು ಬರೆಯಲಿರುವ ಹಿಂದೂಸ್ಥಾನದ ಚರಿತ್ರೆಯಲ್ಲಿ ಪ್ರಸಿದ್ಧವಾಗುವುದರಲ್ಲಿ ಸಂದೇಹವಿಲ್ಲ. ಮಹಾತ್ಮರು ತಮ್ಮ ಕಾರ್ಯಧಾಗವನ್ನು ಮುಂದಾಗಿ ಎಲ್ಲರಿಗೂ ತಿಳಿಸಿದರು. ತಾನು ಕೈದುಮಾಡಲ್ಪಟ್ಟರೆ ಶ್ರೀ ಅಬ್ಬಾಸ್ ತಯಾಬ್ಜಿಯವರು ಕೆಲಸವನ್ನು ನುಂದರಿಸಬೇಕೆಂದು ನಿಯಮಿಸಿದರು. ಶ್ರೀ ಸರೋಜಿನೀ ದೇವಿಯವರು ದಂಡಿಗೆ ಹಾದು ಬಂದರು. ಸೂರ್ಯೋದಯವಾಯಿತು. ಸುಮಾರು 6 80 ಘಂಟೆಗೆ ಮಹಾತ್ಮರು ತನ್ನ ಸ್ವಯಂಸೇವಕರೊಡನೆ ಸಮುದ್ರವನ್ನು ಹೊಕ್ಕು ಕೆಲವು ಉಪ್ಪಿನ ಕಾಳುಗಳನ್ನು ಹೆಕ್ಕಿದರು. ಶ್ರೀ ಸರೋಜಿನೀದೇವಿಯವರು ಮಹಾತ್ಮರನ್ನು 'ಶಾಸನೋಲ್ಲಂಘಕ'ನೆಂದು ಹರಸಿದರು. ಶಾಸನವನ್ನು ಉಲ್ಲಂಘಿಸುವ ಸಾಧನವನ್ನು ಈ ಸ್ವಯಂಸೇವಕರು ಇತರರಿಗೆ ತೋರಿಸಿದ್ದಲ್ಲದೆ ಕೆಲವು ದಿವಸಗಳ ನಂತರ ಉಪ್ಪನ್ನು ಹೇರಳವಾಗಿ ಹೆಕ್ಕಿ ಸಿರಾತ ಕವಾಗಿ ಮಾರಲಾರಂಭಿಸಿದರು. ಪೋಲೀಸಿನವರು ಇನ್ನೂ ತಟಸ್ಥರಾಗಿದ್ದುದನ್ನು ನೋಡಿ ಮಹಾತ್ಮಾ ಗಾಂಧಿಯವರಿಗೂ ಆಶ್ಚರ್ಯವಾಯಿತು.

ಮಧ್ಯಪ್ರಾಂತ್ಯ ಮತ್ತು ಆಂಧ್ರದೇಶದ ಕಾಂಗ್ರೆಸ್ ಕಮಿಟಿಗಳು ಚಳವಳಿಯನ್ನು ಹೆಚ್ಚಿನ ಪ್ರಜಾರಕ್ಕೆ ತಂದವು. ಆಂಧ್ರದೇಶದಲ್ಲಿ ಶ್ರೀ ಕೋಡ ವೆಂಕಟ್ಟಪ್ಪಯ್ಯನವರೂ, ತಮಿಳು ನಾಡಿನಲ್ಲಿ ಶ್ರೀ ಸಿ ರಾಜಗೋಪಾಲಾಚಾರ್ಯರೂ, ಮಧ್ಯ ರಾಸಿನಲ್ಲಿ ಶ್ರೀಯುತರುಗಳಾದ ಟಿ ಪ್ರಕಾಶಂ ಮತ್ತು ಕೆ ನಾಗೇಶ್ವರ ರಾಯರೂ, ಸಂಯುಕ್ತ ಪ್ರಾಂತ್ಯದಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪಂಡಿತ ಜವಾಹರಲಾಲ್ ನೆಹರುರವರೂ, ಬಂಗಾಳದಲ್ಲಿ ಶ್ರೀ ಸೆನ್‌ಗುಪ್ತರೂ, ಬಾಂಬಾಯಿಯಲ್ಲಿ ಶ್ರೀ ಕೆ ಎಫ್ ನರಿಮಾನರೂ ಮುಹಾತ್ಮರ ಮಾದರಿಯನ್ನನುಸರಿಸಿದರು. ಅಲ್ಲಲ್ಲಿ ಸಾಮುದಾಯಕ ಶಾಸನೋಲ್ಲಂಘನೆಯು ಹೂವಲ್ಪಟ್ಟಿತು.

ಸರಕಾರವು ಮಹಾತ್ಮರನ್ನು ಕೈದುಮಾಡದಿದ್ದರೂ ಇತರ ಶಾಸನೋಲ್ಲಂಘಕರನ್ನು ಬಿಡಲಿಲ್ಲ. ಶ್ರೀ ಮಣಿಲಾಲ್ ಕೋಠಾರಿಯವರೂ ಅವರ ಅನುಯಾಯಿಗಳೂ ಕೈದುಮಾಡಲ್ಪಟ್ಟರು. ಇತರೆಡೆಗಳಲ್ಲಿಯೂ ಸ್ವಯಂಸೇವಕರು ಸಂತೋಷದಿಂದ ಸೆರೆಮನೆಗೆ ಸರಿದರು. ಮುಖ್ಯವಾಗಿ ಬಂಗಾಡಿನಲ್ಲಿಯೂ ಮತ್ತು ಮುಂಬಾಯಿಯಲ್ಲಿಯೂ ಆಬಾಲವೃದ್ಧರು, ಯುವಕರು, ಯುವತಿಯರು, ಬಡವರು ಐಶ್ವರ್ಯವಂತರೆಂಬ ಭೇದವಿಲ್ಲದೆ ಉಪ್ಪಿನ ಸತ್ಯಾಗ್ರಹವೆಂಬ ರಾಷ್ಟ್ರೋತ್ಸವದಲ್ಲಿ ಸೇರಿ ಸೆರೆಮನೆಯನ್ನು ಸೇರಿದರು. ಹೊರಗುಳಿದವರು ಮುಂದೆ ಬಂದು ಕಾರ್ಯವನ್ನು ಮುಂದೊತ್ತಿದರು. ವೇಕಾನರದಲ್ಲಿ ಕೆಲವು ಮುದ್ಯವಾನ ನಿವೇಧಕ ಸ್ವಯಂಸೇವಕರನ್ನು ಕೈದುಮಾಡಲು ಶಾಂತಿಭಂಗವಾಗಿ ವಿ ಲಿಟರಿಯವರು ಗೋಳಿವಾರು ಮಾಡಿದರು, ಮದ್ರಾಸಿನಲ್ಲಿಯೂ ಗೋಳಿಬಾರು ನಡೆಯಿತು. ಶ್ರೀ ಜವಾಹರಲಾಲ್ ಮೊದಲಾದ ಮಹನೀಯರು ಉಪ್ಪಿನ ಕಾಯಿದೆಭಂಗ ಮಾಡಿದುದಕ್ಕಾಗಿ ಕೈದುಮಾಡಲ್ಪಟ್ಟರು. ಆದರೆ ಸತ್ಯಾಗ್ರಹವು ಇನ್ನಿನ್ನು ಭೀಕರವಾಯಿತು. ಮಹಾತ್ಮರು ಇನ್ನರಲ್ಲಿ ಕರಾವಿಯೆಂಬಲ್ಲಿಗೆ ಹೋಗಿ ಅಲ್ಲಿಷ್ಟದ ವಾರ್ಶನ ಉಪ್ಪಿನ ಕೋಟೆಗೆ ಧಾಳಿಯಿಡುವೆನೆಂದು ಪ್ರಕಟಿಸಿದರು. ಸರಕಾರವು ಗಾಬರಿಯಾಯಿತು. ನೇರಲು

ಶ್ರೀಮತಿ ಸರೋಜಿನಿ ದೇವಿಯವರು ಸ್ವಯಂಸೇವಕರನ್ನು ಧಾರ್ಶನದ ಉಪ್ಪಿನ ಕೋಟೆಗೆ ಮುನ್ನಡೆಸಿಕೊಂಡು ಹೋಗುವುದು.

ಇತ್ತ ಮಹಾತ್ಮರ ಶಂಖಧ್ವನಿಯು ದಿಗಂತವನ್ನು ವ್ಯಾಪಿಸಿತೋ ಎಂಬ ಹಾಗೆ ದೇಶದಲ್ಲೆಲ್ಲಾ ಉಪ್ಪಿನ ಕಾನೂನೋಲ್ಲಂಘನೆಯ ಚಳವಳಿಯ ತಲೆದೋರಿತು. ಮುಂಬಾಯಿ, ಮದ್ರಾಸು, ಬಂಗಾಳ, ಪಂಜಾಬು, ಸಂಯುಕ್ತಪ್ರಾಂತ್ಯ, ಮಧ್ಯಪ್ರಾಂತ್ಯ ಕರಾಚಿಯಲ್ಲಿ ಮಧ್ಯರಾತ್ರಿ ಸಮಯ ಕೈದುಮಾಡಲ್ಪಟ್ಟು 1837ನೇ ಇಸವಿಯ 26ನೇ ರೆಗ್ಯುಲೇಶನ್ ಮೇರೆಗೆ ಎರವಾಡ ಸೆರೆಯಲ್ಲಿರಿಸಲ್ಪಟ್ಟರು.

(೨ನೇ ಪುಟಕ್ಕೆ ಮುಂದುವರಿಯುವುದು)

ವ್ಯವಹಾರ ಸೌಕರ್ಯದ ಮೂಲಕ

ಕರ್ನಾಟಕ ಏಕೀಕರಣ

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು,

ತಮ್ಮ ಜೊತೆ ಕಂಪೆನಿಗಳ ಸಹಕಾರದಿಂದ

ಈ ವ್ಯವಹಾರ ಸೌಕರ್ಯವ ಪ್ರಶ್ನೆಯನ್ನು ನಡಲಿಸಿದ್ದಾರೆ.

ಕರ್ನಾಟಕದ ಒಂದು ಕಡೆಯಿಂದ ಇನ್ನೊಂದು ಕಡೆಗೆ

ಸರ್ವಾಮಕೂಲತೆಗಳೊಡನೆ ಸುಖವಾಗಿ ಶೀಘ್ರವಾಗಿ ತಲ್ಪಲು ಎಲ್ಲಾ ತರದ ಯೋಜನೆಗಳನ್ನು ಮಾಡಿದ್ದಾರೆ.

ಉಳಕೊಳ್ಳಲಿಕ್ಕೆ ವಿಶಾಲ ಬಂಗ್ಲೆಗಳು, ಪ್ರಯಾಣಕ್ಕೆ ಉತ್ತಮ ವರ್ಗದ ಬಸ್ಸುಗಳು, ಸೇವೆಗೆ ವಿಶ್ವಾಸಿ ನೌಕರರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಲ್ಲೂರು, ಉಡುಪಿ, ಮೂಡಬಿದ್ರೆ, ಧರ್ಮಸ್ಥಳ, ಸುಬ್ರಹ್ಮಣ್ಯ ಮೊದಲಾದ ಎಲ್ಲಾ ಯಾತ್ರಾ ಸ್ಥಳಗಳಿಗೆ ಪ್ರಯಾಣದ ಸೌಕರ್ಯಗಳಿವೆ.

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ದಿ ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು.



ಶ್ರೀ ಸತ್ಯನಾರಾಯಣ ಭಗವತಿ ವಿಲಾಸ ಮೋಟರ ಸರ್ವಿಸ್, ವೀರರಾಜೇಂದ್ರಪೇಟೆ ಲಿಮಿಟೆಡ್.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸ್, ಚಿಕ್ಕಮಗಳೂರು.

ಚಿಕ್ಕಮಗಳೂರಿಂದ
1. ಕಡೂರಿಗೆ
2. ಮಂಗಳೂರಿಗೆ
3. ಶಿವಮೊಗ್ಗಕ್ಕೆ
4. ತರೀಕೆರೆಗೆ
5. ಸಕಲೇಶ್ವರಕ್ಕೆ
6. ಬೀರೂರು.

ತಾಣಾ ಕೆಲಂ.

ಮಂಗಳೂರಿಂದ ಮುಂಬಾಯಿಗೂ, ಮುಂಬಾಯಿಂದ ಮಂಗಳೂರಿಗೂ, ಮುಂಗಳೂರು ಕಡೂರು ಮಾರ್ಗವಾಗಿ ಓಡುತ್ತಲಿದ್ದು, ಬಿಡಿಸಿ ಪರ್ಮಿಟ್‌ದಾರರು, ಸಮಯ ಕಾಲಕ್ಕೆ ಸರಿಯಾಗಿ ಬರುತ್ತಿದೆ.

ಶ್ರೀ ಸಕಲೇಶ್ವರ ಮೋಟರ ಸರ್ವೀಸ, ಲಿಮಿಟೆಡ್, ಸಕಲೇಶ್ವರ.

ಸಕಲೇಶ್ವರದಿಂದ
1. ಹಾಸನಿಗೂ
2. ಮಂಗಳೂರಿಗೂ
3. ಬೇಲೂರಿಗೆ
4. ಮೂಡಿಗೆರೆಗೆ
5. ಮಂಗಡಹಳ್ಳಿ

ತಾಣಾ ಕೆಲಂ.

ಮಂಗಳೂರಿಂದ ಬೆಂಗಳೂರಿಗೂ, ಬೆಂಗಳೂರಿಂದ ಮಂಗಳೂರಿಗೂ ಹಾಸನ ಮಾರ್ಗವಾಗಿ ಪ್ರಯಾಣ ಮಾಡುವವರು ಇದರ ಪಾಸ ಇಟ್ಟುಕೊಳ್ಳಿರಿ

ಮೊಡರ್ನ ಮೋಟರ ಸರ್ವೀಸ ಒಫ್ ಮೈಸೂರು ಲಿಮಿಟೆಡ್, ಮೈಸೂರು.

ಮೈಸೂರಿಂದ
1. ಮಂಗಳೂರಿಗೆ
2. ತಲಚೇರಿಗೆ
3. ಕಣ್ಣಾನೂರಿಗೆ
4. ಟಿ. ನರ್ಸಿಪುರ
5. ಬನ್ನೂರು.

ತಾಣಾ ಕೆಲಂ.

ಮಂಗಳೂರಿಂದ ಮೈಸೂರಿಗೂ, ಮೈಸೂರಿಂದ ಮಂಗಳೂರಿಗೂ ಮಡಿಕೇರಿ ಮಾರ್ಗವಾಗಿ ಬರೇ ಹದಿನೆರಡು ಘಂಟೆಯ ಹಾದಿ. ಹಾಗೆಯೇ ತಲಚೇರಿ ಕಣ್ಣಾನೂರಿಗೆ ವೀರರಾಜೇಂದ್ರಪೇಟೆ ಮಾರ್ಗವಾಗಿ ಬರೆ 8 ಘಂಟೆ.

ಶ್ರೀ ಸತ್ಯನಾರಾಯಣ ಭಗವತಿ ವಿಲಾಸ ಮೋಟರ ಸರ್ವೀಸು ವೀರರಾಜೇಂದ್ರಪೇಟೆ ಲಿಮಿಟೆಡ್.

ವೀರರಾಜೇಂದ್ರಪೇಟೆಯಿಂದ
1. ತಲಚೇರಿಗೆ
2. ಕಣ್ಣಾನೂರಿಗೆ
3. ಕುಟ್ಟ
4. ಹುದಿಕೇರಿ
5. ಮಾನಂತೋಡಿ.

(೧೫ನೇ ಪುಟದಿಂದ ಮುಂದುವರಿಸಲ್ಪಟ್ಟಿದೆ)

ನರ ಕೈದಿನಿಂದ ದೇಶದಲ್ಲಿ ಕೋಲಾಹಲವಾಯಿತು ಸ್ಟಿಲ್ಲಿಯೂ ಹರತಾಳಗಳೂ ಭಾಷಣಗಳೂ ಮೊಟಕಿಗು ೂ ನಡೆದವು. ಮುಂಬಾಯಿಯ ಕೆಲವು ವರ್ತಕರು ಕಿ ಂರೆಗಳ ತನಕ ವ್ಯಾಪಾರವನ್ನು ನಿಲ್ಲಿಸಿಬಿಟ್ಟರು ದಿಲ್ಲಿ ಯಲ್ಲಿಯೂ ಕಲ್ಕತ್ತೆಯಲ್ಲಿಯೂ ಅಪೇಕ್ಷವು ಪರಮಾವಧಿ ನ್ನು ಮುಟ್ಟಲು ತುಸು ಮಟ್ಟಿನ ಶಾಂತಿಭಂಗವಾಗದಿರ ಲ್ಲ. ಸಂಕ್ಷೇಪವಾಗಿ ಹೇಳುವದಾದರೆ ಮಹಾತ್ಮರ ೀಶವು ಸೆರೆಮನೆಯೊಳಗಿದ್ದರೂ ಅವರ ಆತ್ಮಶಕ್ತಿಯು ಿರಗಿದ್ದ ಹಾಗೆ ಭಾಸವಾಗುತಿತ್ತು

ಆಜ್ಞಾನಿಸುವ ತನಕ ಕಾವು ಎಂದೆಂದಿಗೂ ತೀರ್ವೆಯನ್ನು ಕೊಡಲೊಲ್ಲೆವೆಂಬ ಛಲದ ಪ್ರತಿಜ್ಞೆಯನ್ನು ಮಾಡಿದರು. ಈ ಪ್ರತಿಜ್ಞೆಯನ್ನು ಕಾರ್ಯರೂಪದಲ್ಲಿ ಜ್ಯಾರಿಗೆ ತರುವಲ್ಲಿ ಅವರು ಅಸಹನೀಯನಾದ ಕತ್ಯನನ್ನುಭವಿಸಬೇಕಾಗಿ ಬಂತು ಮದ್ಯಪಾನ ನಿಷೇಧ ಕಾರ್ಯದ ಫಲವಾಗಿ ಜನರು ತಿಂಗಳಗಟ್ಟಲೇ ಕ್ಷುದಿಮಲಾರಂಭಿಸಿದರು ಮದ್ಯ ದಂಗಡಿಯ ಪಹರೆಯ ಸಂಬಂಧ ಅಲ್ಲಲ್ಲಿ ಗಲಾಟೆಗಳಾದವು ತೋಲಾಪುರದಲ್ಲಂತೂ ಭಯಂಕರ ವಿಪ್ಲವವಾಗಿ, ಗೋಳಿ ಬಾರು ಮಾಡಲಾಯ್ತಲ್ಲದೆ ದಿಂಡು ಕಾನೂನು ಜ್ಯಾರಿಗೆ ಬಂತು ಕೆಲವರಿಗೆ ಪಾತಿ ತಿಕ್ಷೆಯು ವಿಧಿಸಲಾಯಿತು

ಟೇಬಲ್ ಪರಿಷತ್ತು ನಿರರ್ಥಕವಾಗುವದೆಂದು ಸರ್ವ ಪಕ್ಷೀಯರೂ ಅಭಿಪ್ರಾಯ ಸೂಚಿಸಿದರು. ಕಾಂಗ್ರೆಸಿನ ಕಾರ್ಯಕಾರಿ ಕಮಿಟಿಯು ಸತ್ಯಾಗ್ರಹವನ್ನು ತೀವ್ರವಾಗಿ ಮುಂದೊತ್ತಲು ನಿರ್ಧರಿಸುತ್ತಿತ್ತು ಆದುದರಿಂದ ಇತ್ತಂಡದವರೊಳಗೂ ಶಾಂತಿಸ್ಥಾಪನೆಯಾಗುವುದುತ್ತಮವೆಂದು ಎಲ್ಲಾ ಪಕ್ಷೀಯರಿಗೂ ಮನಗಂಡಿತು ಆದರೆ ಈ ಕಾರ್ಯಕ್ಕೆ ಪ್ರವೇಶವಾಗಲಿ ಯಾರಿಗೂ ಧೈರ್ಯವು ಸಾಲಲಿಲ್ಲ

ಎರವಾಡ ಜೈಲು ಮಹಾತ್ಮರ ಬರೋಣದಿಂದ ಪವಿತ್ರತೆಯನ್ನು ಹೊಂದಿ ನೂರಾರು ಪ್ರಯಾಣಿಕರನ್ನು ಆಕರ್ಷಿಸುವಂತಾಯಿತು ಲಂಡನಿನ 'ಡೈಲಿಹೆರಾಲ್ಡ್' ಪತ್ರಿಕೆಯ ಬಾತ್ಮಿದಾರರಾದ ಜೋರ್ಜ್ ಸ್ಲೋಕೊ ಬ್ರೌಂಬವರು ಸರಕಾರದ ಅನುಮತಿಯಿಂದ ಮಹಾತ್ಮರನ್ನು ಜೈಲಿನಲ್ಲಿ ನೋಡಿ ಇವರ ಸಂದರ್ಶನದಿಂದ ಮಹದಾನಂದವನ್ನು ಹೊಂದಿದರಲ್ಲದೆ, ಮಹಾತ್ಮರ ಉದಾರತೆಯನ್ನೂ, ಶಾಂತ ಸ್ವಭಾವವನ್ನೂ ಕುರಿತು ತನ್ನ ಪತ್ರಿಕೆಯಲ್ಲಿ ಬಾತಮಿಗಳನ್ನು ಪ್ರಕಟಿಸಿದರು ವ್ಯಾಸರಾಯರು ತನ್ನ ಹನ್ನೊಂದು ಶರ್ತಗಳಿಗೆ ಒಪ್ಪುವರಾದರೆ ತಾನು ಸಂಧಿಗೆ ಸಿದ್ಧನಾಗಿರುವೆನೆಂದು ಮಹಾತ್ಮರು ಹೇಳಿದ್ದನ್ನು ಸ್ಲೋಕೊಂಬ್‌ರು ಮರೆತುಬಿಡಲಿಲ್ಲ ಈ ಶರ್ತಗಳಲ್ಲಿ ಸಂಪೂರ್ಣ ಮದ್ಯಪಾನ ನಿಷೇಧವ್ರು, ಉಪ್ಪಿನ ಕರದ ರದ್ದತಿಯೂ ಮುಖ್ಯವಾಗಿದ್ದವು ಆದರೆ, ವ್ಯಾಸರಾಯರು ಸಂಧಿಮಾಡಲು ಸಿದ್ಧವಿದ್ದುದೇ ಆದರೆ ಮಹಾತ್ಮರು ತನ್ನ 11 ಶರ್ತಗಳ ಪೈಕಿ ಬರೀ ನಾಲ್ಕು ಶರ್ತಗಳನ್ನು ಮಾತ್ರ ಸದ್ಯಕ್ಕೆ ಮುಂದೊತ್ತುವರೆಂದೂ, ಸತ್ಯಾಗ್ರಹ ಚಳವಳನನ್ನು ಉಪಸಂಹಾರ ಮಾಡಿ, ಕಾಂಗ್ರೆಸ್ ಪಕ್ಷದವರು ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಭಾಗವಹಿಸಲು ನೀತಿ ಮಾಡುವರೆಂದೂ ಸ್ಲೋಕೊಂಬ್ ದೊರೆಗಳವರಿಗೆ ಭಾಸವಾಯಿತು ಮಹಾತ್ಮರ ಆಬೈರಿ ಶರ್ತಗಳ್ಯಾವುವೆಂದರೆ—

1 ರೌಂಡ್ ಟೇಬಲ್ ಪರಿಷತ್ತಿನ ಉದ್ದೇಶವು ಹಿಂದೂಸ್ಥಾನಕ್ಕೆ ಸ್ವತಂತ್ರದ ತಿರುಳನ್ನು ಕೊಡುವದಕ್ಕಾಗಿಯೇ ಎಂಬುದು ಖಾತ್ರಿಯಾಗಬೇಕು

2 ಉಪ್ಪಿನ ಕರ ರದ್ದತಿ, ಮದ್ಯಪಾನ ನಿಷೇಧ ಮತ್ತು ಪರದೇಶಿಯ ವಸ್ತ್ರ ಬಹಿಷ್ಕಾರದ ವಿಷಯದಲ್ಲಿ ಸರಕಾರವು ಮಹಾತ್ಮರಿಗೆ ಯೋಗ್ಯವಾದ ಸಮಾಧಾನವನ್ನೀಯಬೇಕು

3 ಸತ್ಯಾಗ್ರಹ ಸಮರವು ಉಪಸಂಹಾರವಾದೊಡನೆ ರಾಜಕೀಯ ಕೈದಿಗಳಿಗೆ ವಿಡುಗಡೆಯಾಗಬೇಕು

4 ಉಳಿದ ಏಳು ಶರ್ತಗಳು ಮುಂದಕ್ಕೆ ಆಲೋಚನೆಗೆ ಸಲ್ಲತಕ್ಕವೆಂದು ಸ್ಲೋಕೊಂ ಎಂಬ ದೊರೆಗಳ ಜನವರಿಯಲ್ಲಿ ಶ್ರೀ ಪಂಡಿತ ಮೋತಿಲಾಲ್ ನೆಹರುರವರನ್ನು ಸಂದರ್ಶಿಸಲು ಅವರೂ ಮಹಾತ್ಮರ ತರ್ತಗಳನ್ನೇ ಅನುಮೋದಿಸಿದರು ಸಂಧಿಯು ಅಸಂಭವನೀಯವಲ್ಲವೆಂದೂ ಆದುದರಿಂದ ಮಹಾತ್ಮರನ್ನು ಜೈಲಿನಿಂದ ಬಿಡುಗಡೆ ಮಾಡುವದು ಯುಕ್ತವೆಂದೂ ಸ್ಲೋಕೊಂಬ್ ದೊರೆಗಳು ಪತ್ರಿಕೆಗಳಲ್ಲಿ ಪ್ರತಿಪಾದಿಸಿದರು ಆಹಾ ಕೇಳುವವರಾರು?

ಮುಂಬಾಯಿ ಬೀದಿಗಳಲ್ಲಿ ಪ್ರಭಾತಫೇರಿಗಳು ಹೋಗುವುದು ಮಹಾತ್ಮಾಜಿಯವರು ಉಪ್ಪಿಗೆಮೊಜ ಸೋರುವುದು

ಅವರ ಬಂಧನದಿಂದ ಸತ್ಯಾಗ್ರಹಿಗಳು ಎದೆಗುಂದಲಿಲ್ಲ ಶ್ರೀ ತಯಾಬ್ಜಿಯವರು ಮಹಾತ್ಮರ ನಿಧುಮದ ಪೀಠಿಗೆ ದಾರ್ಶನದ ವೆ ೆ 59 ಸ್ವಯಂಸೇವಕರೊಡಗೂಡಿ ನಾಳಿಯಿಡಲುದ್ಯುಕ್ತರಾದರು ಸರಕಾರದ ಎಚ್ಚರಿಕೆಗೂ ಅವರು ಹೆದರದೆ ದ ಮೆ 12ರಲ್ಲಿ ಕಾ ಗ್ರೆಹಕ್ಕೊಯ್ಯಲ್ಪಟ್ಟರು ಆದರೆ ಮುಂದಾಳುಗಳಿಗೆನೂ ಕಡಿವೆ ಯಾಗದಿಲ್ಲ ಶ್ರೀ ಸರೋಜಿನೀ ದೇವಿಯವರು ಮುಂದಾಳುತ್ವವನ್ನು ವಹಿಸಿ ಪೋಲೀಸರನ್ನು ಬಹು ಎಕ್ಕಟ್ಟಿಗೆ ತಂದೊಡ್ಡಿದರು ಮುಂಬಾಯಿ ತಾಜಾಮಹಾಲ್ ಹೋಟೆಲಿನ ವೈಭವದಲ್ಲಿ ಬೆಳೆದ ಈ ಮಹಾಕವಿಯಿತ್ರಿಯು ದೇಶಮಾತೆಗಾಗಿ ಉಪವಾಸವನ್ನಾಚರಿಸಬೇಕಾಯಿತು, ಬೀಸಲುಗಾಳಿಯೆನ್ನದೆ ಬರಿಲಿಪಿ ಮೇಲೆ ಮಲಗಬೇಕಾಯಿತು ಈ ಸಂಕಷ್ಟದಿಂದ ಸರಕಾರವು ಇವರನ್ನು ವಿನೋದಿಸಿ ಕಾರಾಗೃಹಕ್ಕೆ ಸೆಳೆದುಕೊಂಡು ಹೋಯಿತು

ದಾರ್ಶನ ಮತ್ತು ಪರಾಲ ಉಪ್ಪಿನ ಕೋಟೆಗಳು ಪವಿತ್ರತೆಯನ್ನು ಹೊಂದಿ ಸಾವಿರಾರು ಸ್ವಯಂ ಸೇವಕರನ್ನು ಆಕರ್ಷಿಸಿದವು ಮುಂಬಾಯಿಯ ಸ್ವಯಂ ಸೇವಕರು ಸೇವಿಕೆಯರು ಶ್ರೀ ಕಮಲಾದೇವಿ ಚಟ್ಟೋಪಾಧ್ಯಾಯರ ನೇತೃತ್ವದಲ್ಲಿ ದಿನ ದಿನಕ್ಕೆ ಸಾವಿರಾರು ರೂಪಾಯಿಗಳ ಉಪ್ಪನ್ನು ಮಾರಿದರು ಮದ್ಯ ಪ್ರಾಂತ್ಯಗಳಲ್ಲಿ ಜಂಗ್ಲಿ ಕಾನೂನನ್ನು ಉಲ್ಲಂಘಿಸಲು ಸತ್ಯಾಗ್ರಹವು ನಡೆಯಿತು ಮದ್ಯಪಾನ ನಿಷೇಧ ಕಾರ್ಯವೂ, ಪರದೇಶ ವಸ್ತ್ರ ಬಹಿಷ್ಕಾರವೂ ಇನ್ನಷ್ಟೂ ತೀಕ್ಷ್ಣವಾಯಿತು ಲೆಜಸ್ಲೇಟಿವ್ ಎಸೆಂಬ್ಲಿಯ ಅಧ್ಯಕ್ಷಸ್ಥಾನಕ್ಕೂ ಮೆಂಬರಿಕೆಗೂ ರಾಜಿನಾಮೆಕೊಟ್ಟ ಶ್ರೀ ವಿ ಜೆ ಪಟೇಲರೂ, ಶ್ರೀ ನಂಡಿತ ಮಾಲವೀಯರೂ ಈ ಕಾರ್ಯಗಳನ್ನು ಭರದಿಂದ ಮುಂದೊತ್ತಿದರು ಪರದೇಶಿ ವಸ್ತ್ರ ವ್ಯಾಪಾರಿಗಳು ಮೂರು ತಿಂಗಳುಗಳ ವರೆಗೆ ಪರದೇಶಿ ವಸ್ತ್ರವನ್ನು ತರಿಸುವದಿಲ್ಲವೆಂಬ ದೃಢ ನಿರ್ಧಾರವನ್ನು ಮಾಡಿದರು ಪರದೇಶಿ ವಸ್ತ್ರದ ಅಂಗಡಿಗಳು ದೇಶ ಸೇವಿಕೆಯರ ತೀವ್ರ ಪಹರೆಗೆ ಒಳಗಾದವು ಅಲ್ಲಿನ ದೇಶ ಸೇವಿಕೆಯರ ಸ್ವಾರ್ಥತ್ಯಾಗವನ್ನೂ ಬಾಲುಗಾಣಾ ಎಂಬ ಸ್ವಯಂ ಸೇವೆಕನ ಪ್ರಾಣತ್ಯಾಗವನ್ನೂ ಎಂದೂ ಮರೆಯಲು ಸಾಧ್ಯವಲ್ಲ

ಅತ್ತರಲ್ಲಿ ಗುಜರಾಥಿನ ಕೃಷಿಕರು, ಮಹಾತ್ಮಾ ಗಾಂಧಿಯವರೂ, ಸರ್ದಾರ್ ವಲ್ಲಭಾಯಿ ಪಟೇಲರೂ ಇದರಿಂದ ಪತ್ರಿಕಾ ಪ್ರಪಂಚದಲ್ಲಿ ಕ್ಷೋಭೆಯಾಗಿ ಕೆಲವು ಪತ್ರಿಕೆಗಳು ನಂತುಹೋದವು. ಅನೇಕ ಪತ್ರಿಕೆಗಳು ಸರಕಾರದಿಂದ ನಿಲ್ಲಿಸಲ್ಪಟ್ಟವು ಇತ್ತರಲ್ಲಿ ರೌಂಡ್‌ಟೇಬಲ್ ಪರಿಷತ್ತು ಒಕ್ಟೋಬರ್‌ತಾ 20ಕ್ಕೆ ವಿಲಾಯತಿಯಲ್ಲಿ ಜರಗಲಿರುವದೆಂದು ಮೇ ತಾರೀಖು 18ರಲ್ಲು ವ್ಯಾಸರಾಯರು ಜಾಹೀರು ಮಾಡಿದರು ಕಾಂಗ್ರೆಸಿನ ಮುಂದಾಳ್ಳುಗಳು ಸಾವಿರಗಟ್ಟಲೆಯಲ್ಲಿ ಸೆರೆಮನೆಯಲ್ಲಿರುವಾಗ ರೌಂಡ್

೧ನೇ ಪೌಲ್‌ರಾಮ್ ೨ನೇ ವಲ್ಲಭಭಾಯಿ ಪಟೇಲ, ಮಹಾತ್ಮಾಜೀ, ಜವಾಹರಲಾಲ ಬಜಾಜ್ ತ್ಯಾಗಶೀಲರ ವಿಹಾರ

ಇತ್ತ ಸತ್ಯಾಗ್ರಹ ಚಳವಳವು ಮೇ, ಜೂನ್, ಜುಲ್ಯಾ ತಿಂಗಳಲ್ಲಿ ವಿತೀಷಾವೇಶವನ್ನು ತಾಳಿತು ಕರ ನಿರಾಕರಣೆ, ಮದ್ಯಪಾನ ನಿಷೇಧ ವಿಷಯದಲ್ಲಿ ಸತ್ಯಾಗ್ರಹಿಗಳ ಸಾಧನೆಯನ್ನು ಎದುರಾಯಿಸುವದಕ್ಕೆ ವ್ಯಾಸರಾಯರು ನೆರವು ಆರ್ಡಿನೆನ್ಸುಗಳನ್ನು ಜ್ಯಾರಿಗೆ ತಂದುಬಿಟ್ಟರು ಕಾಂಗ್ರೆಸ್ ಕಮಿಟಿಗಳು ಅಕ್ರಮಕೂಟಗಳೆಂದು ಸಾರಲ್ಪಟ್ಟವು ತನ್ನ ಸ್ವತ್ವನ ಸ್ಥಾನದಲ್ಲಿ ಕಾಂಗ್ರೆಸ್ ಅಧ್ಯಕ್ಷತೆಯನ್ನು ನಿರ್ವಹಿಸು

ಶ್ರೀ ಪಂಡಿತ ಮೋತಿಲಾಲ್ ನೆಹರುರವರಿಗೆ ಕಾರ್ಯದರ್ಶಿಗಳಾದ ಡಾಕ್ಟರ್ ಸೈಫುದ್ದೀನ್ ಮಹಮ್ಮದರೂ, ಜವಿನ್ ಮಿರ್ಜಾ ಕೈಗುಮಾಡಿಲ್ಲುತ್ತಿರುವರು. ಡಾಕ್ಟರ್ ಅನಸಾರಿ, ಪಂಡಿತ ಮಾಲವೀಯ, ಪಿ. ಜಿ. ವಕೀಲರೂ ಇತರ ವರ್ಕಿಂಗ್ ಕಮಿಟಿಯ ಮೆಂಬರರೂ ಕೈಗುಮಾಡಿಲ್ಲುತ್ತಿರುವರು. ಕಾಂಗ್ರೆಸ್ ಕಮಿಟಿಗಳೆ ಸೊತ್ತುಗಳು ಸರಕಾರದ ವತವಾಯಿತು.

ಅಷ್ಟರಲ್ಲಿ, ಸೈಮನ್ ಕಮಿಶನ್ ವರದಿಯು ಹೊರಬಿತ್ತು. ಇದರಿಂದ ಮುಂದಾಗುವುದೂ ಕೂಡ ಅನಿಶ್ಚಿತವಾಯಿತೆಂದು ಹೇಳಬಹುದು. ಇದರ ಮೇಲಿನ/ತೀರ್ಮಾನಿಕೆಯನ್ನು ನೋಡಿ ವೈಸರಾಯರಾಗಿ ಲೊರ್ಡ್ ಆರ್ವಿನ್ ಸಾಹೇಬರು, ಹಿಂದೂಸ್ಥಾನದ ಭಾವೀ ರಾಜ್ಯರಚನೆಯು ರೌಂಡ್‌ಟೇಬಲ್ ಪರಿಷತ್ತಿನ ನಿರ್ಧಾರದ ಮೇಲೆ ಹೊಂದಿರುವದೇ ಹೊರತು, ಸೈಮನ್‌ಸಪ್ತಕರ ವರದಿಯ ಮೇಲೆ ಹೊಂದಿಲ್ಲ ವದಲ್ಲವೆಂದು ಹೇಳಬೇಕಾಯಿತು. ಈ ಹೇಳಿಕೆಯಿಂದ ಮುಂದಗಾಮಿಯುರಿಗೆ ಲೊರ್ಡ್ ಆರ್ವಿನ್ ಸಾಹೇಬರ ಮೇಲೆ ಸ್ವಲ್ಪ ಧೈರ್ಯ ಮೂಡಿದರೂ ಜೈಲುಗಳಲ್ಲಿಯೂ, ಜೈಲಿನ ಹೊರಗೂ ಇರುವ ಸತ್ಯಾಗ್ರಹಿಗಳ ಬಿಡುವ ಸ್ಥೈಯು ಅಸಹನೀಯವೆಂದು ಕಂಡುಬಂದುದರಿಂದ, ಒಂದೆಡೆ ಸರಕಾರದ ಶಕ್ತಿ ಪ್ರದರ್ಶನೆಯೂ, ಇನ್ನೊಂದೆಡೆ ಶಾಸನೋಲ್ಲಂಘನೆಯೂ ದೇಶಕ್ಕೆ ನಾಶಪ್ರಾಯವಾಗಿರುವುದೆಂದೂ, ಆದ ಪ್ರಯುಕ್ತ ಸರಕಾರವು ಆಗಲೇ ಜ್ಯಾರಿಗೆ ತಂದಿದ್ದ ತೀವ್ರ ಕಾಯಿದೆಗಳನ್ನು ಹಿಂತೆಗೆದು ರಾಜಕೀಯ ಕೈದಿಗಳಿಗೆ ಬಿಡುಗಡೆಯನ್ನು ಪಾಲಿಸಬೇಕೆಂದೂ, ಕಾಂಗ್ರೆಸಿನವರು ತಮ್ಮ ಚಳವಳನವನ್ನು ನಿಲ್ಲಿಸಬೇಕೆಂದೂ ಸರ್ವಪಕ್ಷೀಯರೂ ಸಭೆಮಾಡಿ ನಿರ್ಧರಿಸಿದ್ದರು.



ಧ್ವಜವಂದನೆ.

ಈ ನಿರ್ಧಾರವೇ ಮುಂದಿನ ಸಂಧಿಗೆ ಅಡಿಗಲ್ಲಾಯಿತು. ಸ್ಟೋಕೋಂಬ್‌ರಿಂಬರರು ಪಂಡಿತ ಮೋತಿಲಾಲ್ ನೆಹರುರವರನ್ನು ತನ್ನ ಮುಂದಿಟ್ಟಿದ್ದ ಶರ್ತಗಳ ಪ್ರತಿಯನ್ನು ಶ್ರೀ. ಸರ್ ತೇಜ್ ಬಹದ್ದೂರ್ ಸಪ್ರೂರವರಿಗೂ ಶ್ರೀ. ಎಮ್. ಆರ್. ಜಯಕರ್‌ರವರಿಗೂ ಕಳುಹಿಸಿದ್ದರಲ್ಲದೆ, ಒಂದು ವೇಳೆ ವ್ಯಾಸರಾಯರು ರೌಂಡು ಟೇಬಲ್ ಪರಿಷತ್ತಿನಲ್ಲಿ ಕಾಂಗ್ರೆಸ್ಸಿನ ಧ್ಯೇಯಕ್ಕೆ ವಿರುದ್ಧವಾಗಿ ಏನಾದರೂ ಹೇಳಿದರೆ ಅವರಿಗೆ ಕಾಂಗ್ರೆಸ್ ಪ್ರತಿನಿಧಿಗಳು ಇಲ್ಲದ ಕಾರಣದಿಂದಲೋ ಅಥವಾ ಹಿಂದೂಸ್ಥಾನದ ದುರವಸ್ಥೆಯ ಕಾರಣದಿಂದಲೋ ಪರಿಷತ್ತು ಅಮ್ಮೊಂದು ಯಶಸ್ವಿಯಾಗಿಲ್ಲ. ಇತ್ತ ಸತ್ಯಾಗ್ರಹ ಚಳವಳವು ಇನ್ನಷ್ಟು ಪ್ರಬಲವಾಯಿತು. ಇದು ತನಕ ಹಿಂದೆಬಿದ್ದಿದ್ದ ಮದ್ರಾಸು ಕೂಡ ವ್ಯಾಮುಖ್ಯತೆಗೆ ಬಂತು. ವ್ಯಾಸರಾಯರೂ ಕಾಯಿದೆಯನ್ನೇ ಮುಂದೊತ್ತುವ ತನ್ನ ಮನೋಧಾರ್ಢ್ಯವನ್ನು ಸಾರಿಯೇ ಬಿಟ್ಟರು.

1930ನೇ ಇಸವಿಯು ಮುಗಿದು ಕಾಲವು 1931ನೇ ಇಸವಿಗೆ ಕಾಲಿಟ್ಟಿತು. ರೌಂಡ್ ಟೇಬಲ್ ಪರಿಷತ್ತಿನಲ್ಲಿ ಜನವರಿ 18ರಲ್ಲು ಶ್ರೀ. ಸರ್. ತೇಜ್ ಬಹದ್ದೂರ್ ಸಪ್ರೂಗಳು ಹಿಂದೂ ಸ್ಥಾನದ ರಾಜಕೀಯ ಕೈದಿಗಳ ಬಿಡುಗಡೆಯ ವಿಷಯದಲ್ಲಿಯೂ ಸಂಧಿಸ್ಥಾನೆಯ ವಿಷಯದಲ್ಲಿಯೂ ಮುಖ್ಯ ಮಂತ್ರಿಗಳನ್ನು ಹೃದಯದ್ರಾವಕವಾಗುವ ರೀತಿಯಲ್ಲಿ ಬೇಡಿಕೊಂಡರು. ಮಂತ್ರಿವರ್ಯರು ಈ ಪ್ರಾರ್ಥನೆಗೆ ಸನುವರ್ತಕವಾಗಿ ಉತ್ತರವನ್ನೀಯದಿದ್ದರೂ ಕಾಂಗ್ರೆಸ್ಸಿನ ವ್ಯಾತಿನಿಧ್ಯವನ್ನು ದೊರಕಿಸಿಕೊಳ್ಳುವ ಬಗ್ಗೆ ರೌಂಡ್ ಟೇಬಲ್ ಪರಿಷತ್ತನ್ನು ಮುಂದಿನ ವರ್ಷಕ್ಕಿಟ್ಟರು. ಆದರೆ ದೇಶದ ಮುಂದಾಳುಗಳು ಸೆರೆಮನೆಯಲ್ಲಿರುತ್ತಾ, ಮಂತ್ರಿವರ್ಯರ ಹೇಳಿಕೆಯನ್ನು ಆಲೋಚಿಸಿ ದೇಶಕ್ಕೆ ಮುಂದಿನ ದಾರಿಯನ್ನು ಕಾಣಿಸುವವರು ಯಾರೂ ಇಲ್ಲದೆ ಹೋಯಿತು. ಇದನ್ನರಿತು ವ್ಯಾಸರಾಯರು, ವರ್ಕಿಂಗ್ ಕಮಿಟಿಗಳು ಅಕ್ರಮಕೂಟಗಳೆಂದು ಸೂಚಿಸಿದ ಆರ್ಡಿನೆನ್ಸನ್ನು ಹಿಂದೆಗೆದರಲ್ಲದೆ ಮಹಾತ್ಮಾ ಗಾಂಧಿಯರೇ ಮೊದಲಾದ ಮುಂದಾಳುಗಳನ್ನು ಏನೊಂದು ಶರ್ತವಿಲ್ಲದೆ ಬಿಡುಗಡೆ ಮಾತಿಯೇ ಬಿಟ್ಟರು. ದೇಶವು ಆನಂದಸಾಗರದಲ್ಲಿ ಮುಳುಗಿತು.

ಆದರೆ ಸುಮಾರು 50,000 ಸತ್ಯಾಗ್ರಹಿಗಳು ಇನ್ನೂ ಜೈಲಿನಲ್ಲಿದ್ದರು. ಅಲ್ಲದೆ ಮಹಾತ್ಮರನ್ನು ಬಿಡುಗಡೆ ಮಾಡಿದ ದಿವಸವೇ ಕಲ್ಕತ್ತ, ಬೋಸ್ವದ ಮತ್ತು ಅಹಮ್ಮದಾಬಾದಿನಲ್ಲಿ ಸರಕಾರ ಉದ್ಯೋಗಸ್ಥರು ಸ್ವಲ್ಪ ಅಜಾತುಬ್ಧವನ್ನು ತೋರಿಸಿದರು. ಆದುದರಿಂದ ಜನರಿಗೆ ಸರಕಾರದ ಮೇಲೆ

ಮಹಾತ್ಮಾಗಾಂಧಿಯವರು ಬಿಡುಗಡೆಯ ನಂತರ ಮುಂಬಾ ಅಹಾದ ಮೈದಾನದಲ್ಲಿ ಭಾಷಣ ಕೊಡುವುದು. ಜನಸಂಖ್ಯೆಯು ಲಕ್ಷಾಧಿಯಿಗಿತ್ತು.

ಹಿಂದೂಸ್ಥಾನದ ಸ್ವಾತಂತ್ರ್ಯಾಪೇಕ್ಷೆಯನ್ನು ಕಾನು ಅನುಮೋದಿಸುವೆನೆಂದು ಶ್ರೀ ಪಂಡಿತ ಮೋತಿಲಾಲ್ ನೆಹರುರವರಿಗೆ ವಾಗ್ದಾನವನ್ನು ಮಾಡಲು ಸಾಧ್ಯವಿಲ್ಲವೆಂದೂ ಅಂಥಾ ವಾಗ್ದಾನವನ್ನು ಪಂಡಿತ ಮೋತಿಲಾಲ್ ನೆಹರುರವರು ಕಾಂಗ್ರೆಸ್ಸಿನ ಪರವಾಗಿ ಸ್ವೀಕರಿಸಲು ಸಿದ್ಧರಿಲ್ಲವೆಂದೂ ಸಂಧಿಗೆ ಅವಶ್ಯವಾದ ಪರಿಯಮಾಡಿಸಲಾರೆವೆಂದೂ ಹೇಳಿದ್ದರು.

ಕಾಂಸ್ಟಿಟ್ಯೂಷನ್ ಪ್ರಯುಕ್ತವನ್ನು ಶ್ರೀ. ಸರ್. ತೇಜ ಬಹದ್ದೂರ್ ಸಪ್ರೂ ಮತ್ತು ಶ್ರೀ. ಎಮ್. ಆರ್. ಜಯಕರರು ವಿವರಿಸಿಕೊಂಡರು. ವ್ಯಾಸರಾಯರ ಅನುಮತಿಯಂತೆ ಮಹಾತ್ಮರನ್ನು ಎರವಾಡ ಜೈಲಿನಲ್ಲಿಯೂ, ಪಂಡಿತ ಮೋತಿಲಾಲರನ್ನು ಇವಾಹರಲಾಲರನ್ನಿಟ್ಟಾನ ಜೈಲಿನಲ್ಲಿಯೂ, ಸಂದರ್ಶಿಸಿದರು. ತರಿಗಿ ಎರವಾಡ ಜೈಲಿಗೆ ಬಂದು ಮಹಾತ್ಮರನ್ನು ಕಂಡರು. ತರಿಗೊಮ್ಮೆ ಪಂಡಿತ ಮೋತಿಲಾಲರೂ, ಜವಾಹರ ಲಾಲರೂ ಎರವಾಡ ಜೈಲಿಗೂ ಒಮ್ಮೆಲ್ಲಟ್ಟು, ಮಹಾತ್ಮಾ ಗಾಂಧಿ, ಸರೋಜಿನಿ ದೇವಿ, ಸರ್ದಾರ್ ವಲ್ಲಭಾಯಿ ವಕೀಲ ಇವರೆಲ್ಲರನ್ನೂ ಇವರು ಏಕಸಮಯದಲ್ಲೇ ಸಂದರ್ಶಿಸಿದರು. ಕಾಂಗ್ರೆಸ್ ಮುಖಂಡರು ಮುಂಚಿನ ಶರ್ತಗಳನ್ನು ಮುಂದೊತ್ತಿದರು. ಸರಕಾರವು ಈ ಶರ್ತಗಳಿಗೊಪ್ಪದೆ ಇದ್ದುದರಿಂದ ಸಂಧಿಯು ಸಾಧ್ಯವಾಗಲಿಲ್ಲ. ಚಳವಳವು ಧಗದಂತೆ ನಡೆಯಿತು.

ಆಷ್ಟರಲ್ಲಿ ರೌಂಡ್ ಟೇಬಲ್ ಪರಿಷತ್ತಿನ ಸಭಸ್ಯರ ನಿಯು ಹೊರಬಿತ್ತು. ನವಂಬರ 12ರಲ್ಲು ಲೊರ್ಡ್ ಸಾರ್ವಭೌಮರೇ ಪರಿಷತ್ತಿನ ಶ್ರೀಮತೋತ್ಸವನ್ನು ಘೋಷಿ

ಪೂರ್ಣ ಸ್ವಂತಿಗೆಯುಂಟಾಗಲಿಲ್ಲ. ಆದರೆ ಅಷ್ಟರಲ್ಲಿ ಶ್ರೀಮತೋನಾಲ್ಡ್ ಸಾಹೇಬರು ಕೋಮನ್ಸ್ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಹಿಂದೂಸ್ಥಾನದ ಆಕಾಶಾಕಾಂಕ್ಷೆಗಳನ್ನು ಹೊಗಳಿ ಹೃದಯಂಗಮವಾಗುವಂತೆ ಮಾತಾಡಿದರು. ಇದರಿಂದ ಎಂದೀಯ ವಾತಾವರಣವು ಶುಭ್ರವಾಗುವಂತಾಯಿತು. ರೌಂಡ್ ಟೇಬಲ್ ಪರಿಷತ್ತಿಗೆ ಹೋಗಿದ್ದ ಸರ್ ತೇಜ್ ಬಹ

ಪ್ಪೂರ ಸಪ್ಪು, ಜಯಕರ್, ಮೊದಲಾದವರು ಮುಂಬೈಗೆ ಬಂದಿಳಿದರು. ಅಪ್ಪರಲ್ಲಿ ಪಂಡಿತ ಮೋತಿಲಾಲ್ ನೆಹರುರವರು ದು.ಖಕರವಾದ ಮರಣವು ಹಿಂದೂಸ್ಥಾನವನ್ನು ಶೋಕ ಸಾಗರದಲ್ಲಿ ಮುಳುಗಿಸಿತು.

ದೇಶದ ವಿಸ್ಥಿತಿಯನ್ನೂ ಕೆಲವೆಡೆಗಳಲ್ಲಿನ ಸರಕಾರಿ ಉದ್ಯೋಗಸ್ಥರ ದಬ್ಬಾಳಿಕೆಯನ್ನೂ ನೋಡಿ ಮಹಾತ್ಮರಿಗೆ ಸರಕಾರದ ಮನೋಭಾವನೆಯ ವಿಷಯದಲ್ಲಿ ಧೈರ್ಯ ಗುಂದಿತು. ಆದುದರಿಂದ ಅವರು ಇಂಥಾ ದುರವಸ್ಥೆಯನ್ನು ಕುರಿತು ಬಾತಮಿಗಳನ್ನು ವಿಲಾಯತಿಯ "ಡೈಲಿ ಹೆರಾಲ್ಡ್" ಪತ್ರಿಕೆಗೆ ಕಳುಹಿಸಿದರಲ್ಲದೆ ಒಂದು ಪತ್ರವನ್ನು ವ್ಯಾಸರಾಯರಿಗೂ ಕಳುಹಿಸಿ ಪೋಲೀಸರ ಅತ್ಯಾಚಾರದ ವಿಷಯದಲ್ಲಿ ತನಿಖೆಯು ನಡಿಸಲ್ಪಡಬೇಕೆಂದು ವಾದಿಸಿದರು ಇದಕ್ಕೆ ವ್ಯಾಸರಾಯರು ಸಮ್ಮತಿಸಲಿಲ್ಲ ಅಪ್ಪರಲ್ಲಿ ಮಹಾತ್ಮರಿಗೂ ಲೋರ್ಡ್ ಅರ್ವಿನ್ ಸಾಹೇಬರಿಗೂ ಭೇಟಿಯಾಗುವುದೆಂದು ಸುದ್ದಿಯಾಯಿತು .

ಫೆಬ್ರವರಿ 17ರಲ್ಲು ಅವರಾಹ್ನ 2 80ಕ್ಕೆ ಮಹಾತ್ಮರು ಅರಿಬಟ್ಟೆಯಲ್ಲೇ ವ್ಯಾಸರಾಯರ ಅರಮನೆಗೆ ನಡೆದರು ಈ ಭೇಟಿಯ ನಂತರ ವ್ಯಾಸರಾಯರು ತನ್ನ ಕಮಿಟಿಯೊಡನೆಯೂ ಇಂತಿಯಾ ಸ್ಟೇಟ್ ಸೆಕ್ರೆಟರಿಯವರೊಡನೆಯೂ ಅನೇಕ ಪತ್ರವ್ಯವಹಾರಗಳನ್ನು ಬೆಳಿಸಿದರು. ಇತ್ತ ಮಹಾತ್ಮರು ವರ್ಕಿಂಗ್ ಕಮಿಟಿಯೊಡನೆಯೂ, ಇತರ ಮುಂದಾಳುಗಳೊಡನೆಯೂ ದೀರ್ಘ ಸಂಭಾಷಣೆಯನ್ನು ಬೆಳೆಸಿದರು. ಇದರ ನಂತರ ಮಹಾತ್ಮರೊಳಗೂ ವ್ಯಾಸರಾಯರೊಳಗೂ ಅನೇಕಾನೇಕ ಭೇಟಿಗಳೂ ಸಂಭಾಷಣೆಗಳೂ ನಡೆದವು. ವಾದ ವಿವಾದಗಳು ಕ್ರಮೇಣ ಇತ್ಥರ್ಥಿಸಲ್ಪಟ್ಟವು ಈ ಮಾತುಕತೆಗಳ ಫಲವಾಗಿ ಮಾರ್ಚ್ 4ರಲ್ಲು ಒಂದು ತಾತ್ಕಾಲಿಕ ಸಂಧಿಯಾಯಿತು ಈ ಸಂಧಿಯ ನೇರಿಗೆ ಮುಖ್ಯವಾಗಿ ಜನರು ತಂತಮ್ಮ ಉಪಯೋಗಕ್ಕಾಗಿ ಉಪ್ಪನ್ನು ಹೆಕ್ಕುವದು ಯಾ ಮಾಡುವದೂ, ಅಕ್ಕೀವಶೀಯವಲ್ಲ ವೆಂದು ನಿರ್ಧಾರವಾಯಿತು ರಾಜಕೀಯ ಶಾಂತಮಯ ಕೈದಿಗಳಿಗೆ ಬಿಡುಗಡೆಯಾಯಿತು ಕಾಂಗ್ರೆಸ್ಸಿನ ಸೊತ್ತು ಗಳು ಹಿಂದೆ ಕೊಡಲ್ಪಟ್ಟವು ಆರ್ಡಿನೆನ್ಸುಗಳು ರದ್ದು ಮಾಡಲ್ಪಟ್ಟವು ಕಾಂಗ್ರೆಸ್ ಸಭೆಗಳ ಮೇಲಿನ ಮುಟ್ಟು ಗೋಳು ಹಿಂತೆಗೆಯಲ್ಪಟ್ಟಿತು

ಇದೊಂದು ತತ್ಕಾಲಿಕ ಸಂಧಿಯು ಈ ಸಂಧಿಯ ಶರ್ತಗಳನ್ನು ಇತ್ತಂಡದವರೂ ಪಾಲಿಸುತ್ತಿರುವರೋ ಇಲ್ಲವೋ ಎಂಬ ವಿಷಯವನ್ನು ನಾವೀಗ ಇಲ್ಲಿ ವಿಚಾರಿಸುವ ದಿಲ್ಲ. ಸರಕಾರಿ ಉದ್ಯೋಗಸ್ಥರು ಅನೇಕ ವೇಳೆ ತೋರಿಸಿರ ಬಹುದಾದ ಅವಿವೇಕ ಮತ್ತು ದುರಾಸ್ಥಿತ್ಯವನ್ನು ಕುರಿತು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಆದರೆ ಮೊತ್ತಮೊದಲು ಸರಕಾರದ ಹಾಸ್ಯಕ್ಕೆಡತಿರಸ್ಕಾರಕ್ಕೂ ಗುರಿಯಾಗಿದ್ದ ಈ ಸತ್ಯಾಗ್ರಹ ಚಳವಳಿಯು ಕಾರಣಾಂತರಗಳಿಂದ ಹೇಗೆ ಭೀಕರವಾಯಿತು ಮತ್ತು ಈ ಅಹಿಂಸಾಪರವಾದ ತೀವ್ರ ಚಳವಳಿಯಿಂದ ಹೇಗೆ ಸಾಮ್ರಾಜ್ಯದ ಪೂರ್ಣ ಬಲವು ಕರಿಣತರ ಪರಿಸ್ಥಿತಿಗೆ ಒಳಗಾಯಿತೆಂಬುದನ್ನು ನಾವು ಚಿತ್ರಿಸಿದ್ದಾಯಿತು ಜನ ಸಮುದಾಯವು ತನ್ನು ಹಕ್ಕು ಭಾದ್ಯತೆಗಳ ವಿಷಯದಲ್ಲಿ ಒಮ್ಮೆ ಎಚ್ಚತ್ತರೆ ಯಾವ ಬಲಿಷ್ಠ ಸರಕಾರವಾದರೂ ಅದನ್ನು ಎದುರಾಯಿಸಲು ಸಾಧ್ಯವಿಲ್ಲವೆಂಬ ಭೂಲೋಕದ ಚರಿತ್ರೆಯಿಂದ ಅನೇಕಾವೃತ್ತಿ ಋದಹರಿಸಲ್ಪಟ್ಟ ರಾಜನೀತಿಯನ್ನು ಈ ಸತ್ಯಾಗ್ರಹವು ಭೂಲೋಕಕ್ಕೆ ಅತಿ ಉಜ್ವಲತರವಾಗಿಯೆ ಇನ್ನೊಮ್ಮೆ ಸ್ಥಕ್ತನಡಿಸಿದ್ದಲ್ಲದೆ ರಾಜಕೀಯ ಕಾರ್ಯಾಂತಗೆ ಹಿಂಸೆಯ ಆಧಾರವೇ ಬೇಕಾಗಿಲ್ಲವೆಂಬುದಕ್ಕೂ, ಅಹಿಂಸೆಯೂ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚಾಗಿ ಪರಿಣಾಮಕಾರಿಯಾಗಬಲ್ಲುದೆಂಬದಕ್ಕೂ ಲೋಕದ ರಾಜಕೀಯ ಇತಿಹಾಸದಲ್ಲಿ ಸಂಪೂರ್ಣ ನೂತನವಾದ ನಿದರ್ಶನವನ್ನು ರಚಿಸಿತು

ಸ್ಥಳನಾಮ.

ಲೇಖಕರು—ಶ್ರೀ. ಹಂಚೆ ಮಂಗೇಶರಾವ್, B. A. L. T



ಸೃಷ್ಟಿಯ ಮೇಲಿನ ಸೃಷ್ಟಿಚನುತ್ಪಾದಗಳಿಂದ ಬೆರಗಾಗಿ ಬೆಪ್ಪುಗೊಂಡ ಮಾನವ ಬುದ್ಧಿಯು ಅವುಗಳ ಕಾರಣಗಳನ್ನು ಹುಡುಕಹೋಗಿ ತನ್ನ ಸಮಾಧಾನಕ್ಕಾಗಿ ಕಲ್ಪಿಸಿಕೊಂಡ ಕಥೆಗಳು ಪ್ರತಿಯೊಂದು ಜನಾಂಗದ ಇತಿಹಾಸ ಪ್ರಾರಂಭದಲ್ಲಿ ಅನಾದಿಕಾಲದಿಂದ ದೊರೆಯುತ್ತವೆ ಮನುಷ್ಯನನ್ನು ದಿಗಿಲು ಗೊಳಿಸುವ ಸಿಡಿಲುಮಿಂಚು ಇಂದ್ರನ ವಜ್ರಾಯುಧದಿಂದ ಪ್ರಾಪ್ತವಾಗುತ್ತದೆಂದು ಅವನ ಬುದ್ಧಿಗೆ ತೋರಿತು, ನೆಲವನ್ನು ತಣಿಸುವ ಮಳೆಯು ಅಪ್ಪದಿಗ್ಗಜಗಳ ಸೊಂಡಿಲುಗಳಿಂದ ಹೊಯ್ಯುವ ನೀರೆಂದು ಭಾವಿಯಾಯಿತು, ಸೂರ್ಯ ಚಂದ್ರರ ಗ್ರಹಣವಾಧೆಯು ರಾಹುಕೇತುಗಳ ರಾಕ್ಷಸ ಕಾರ್ಯವೆಂದು ಕಲ್ಪಿತವಾಯಿತು ಮನುಷ್ಯನ ಬುದ್ಧಿಯು ಮೇಲಿನ ಆಕಾಶವನ್ನು ಹೇಗೊ ಹಾಗೆಯೇ ಕೆಳಗಿನ ಸೃಷ್ಟಿಯನ್ನು ಸುತ್ತುತ್ತ ನೋಡುವಷ್ಟಕ್ಕೆ ಅದರ ಮೇಲಿನ ಚರಾಚರ ವಸ್ತುಗಳ ವೈಚಿತ್ರಗಳಿಗೆ—ಅಂದರೆ, ಆನೆಯ ಉದ್ದ ಸೊಂಡಿಲಿಗೆ, ನವಿಲಿನ ಹೀಲಿಯ ಕಣ್ಣಿಗೆ, ಹದ್ದಿನ ಕೊಂಕು ಕೂಡತಿಗೆ, ಹೊಳೆಯ ಕರೆಯ ಮುಳಲಿಗೆ, ಬೆಟ್ಟದ ಮೇಲಿನ ನೀರಿಗೆ, ಬಂಡೆ ಒಳಗಣ ಊಟಿಗೆ—ಕಾರಣಗಳನ್ನು ಹುಡುಕತೆಗೆಯುವುದಕ್ಕೆ ನೋದಿತು ಈ ಅನ್ವೇಷಣೆಯೇ ಸಕಲ ಶಾಸ್ತ್ರಸಿದ್ಧಾಂತಗಳ ಉಗಮಸ್ಥಾನವು ಸೃಷ್ಟಿಯಲ್ಲಿಯ ಆಶ್ಚರ್ಯಾದ್ಭುತಗಳು, ಚಿತ್ರವಿಚಿತ್ರವಾತ್ತಾರಗಳು, ಜನಸಮೂಹಗಳು, ರೋಗರುಜಿನಗಳು, ಇತ್ಯಾದಿಗಳನ್ನು ಶೋಧಿಸಿ ಮಾನವ ಬುದ್ಧಿಯು ಕಂಡುಹಿಡಿದ ಕಾರಣಗಳು ಸರಿಯೂ, ಸತ್ಯವೂ, ಸನಾತನವೂ ಆದರೆ, ವಿಜ್ಞಾನವು (Science) ಜಂಸುವುದು ಕೊ"ಧವು ಸತ್ಯದ ಕಡಿದು. ದಾರಿಯನ್ನು ಬಿಟ್ಟು ಊಹೆಯ ಮಾರ್ಗದಲ್ಲಿ ಬೇಕುಬೇಕಾದಂತೆ ವಿಹರಿಸುತ್ತ ಹೋದರೆ, ಮನೋರಂಜಕವಾದ ಕಥೆಯು ಹುಟ್ಟುವುದು ಈ ಪ್ರಕಾರವಾಗಿ ಮನುಷ್ಯನ ಬುದ್ಧಿಯಿಂದ ಆಗಾಗ ಕಲ್ಪಿತವಾದ ನಾನಾ ಕಥೆಗಳು ತಲತಲಾಂತರವಾಗಿ ಇಳಿದು ಕಾಲಾನುಕ್ರಮದಲ್ಲಿ ದಂತಕಥೆ, ಕಟ್ಟುಕಥೆ, ಅಜ್ಜಿಕಥೆ, ಪುಡಿಕಥೆ, ಪುರಾಣಕಥೆ, ಹಳೆಯ ಪಳಮೆ, ಪಾಡ್ಡೊನೆ, ಪವಾಡ, ಮೊದಲಾದ ಹೆಸರುಗಳಿಂದ ಕರೆಯಲ್ಪಟ್ಟು ಆಯಾ ಜನಗಳಲ್ಲಿ ಹರಡಿಕೊಂಡು, ಕ್ರಮೇಣ ಕವಿಗಳ ಕವಿತೆಗಳಲ್ಲಿಯೂ ಬರಿಹಗಾರರ ಬರಿಹಗಳಲ್ಲಿಯೂ ರೂಪುಗೊಂಡು, ಜನಾಂಗದ ವಾಙ್ಮಯದಲ್ಲಿ ಇದುವರೆಗೆ ಬಂದು ನಿಂತಿವೆ. ಇಂಥ ಕಟ್ಟುಕಥೆಗಳು ಕನ್ನಡ ನಾಡಿನಲ್ಲಿನ ಕೆಲವು ಸ್ಥಳಗಳ ಹೆಸರುಗಳಲ್ಲಿ ಅಡಕವಾಗಿವೆ

ಕೊಡಗು ಸೀಮೆಯಲ್ಲಿ 'ಕೊಡಲಿಪೇಟೆ' ಎಂಬ ದೊಂದು ಸ್ಥಳವಿದೆ ಅದಕ್ಕೆ ಆ ಹೆಸರು ಬರಲು ಕಾರಣವನ್ನು ಹುಡುಕಿ, ಮನುಷ್ಯನ ಬುದ್ಧಿಯು ಯೋಜಿಸಿದ ಕಲ್ಪನೆ ಕೇಳಿ! ಪರಶುರಾಮನು 'ಕ್ಷತ್ರಿಯರ ತಲೆಗಡಿಯೆ ಪರಶುವನು ಮಸೆದರಿಂ' ಆ ಊರಿಗೆ ಕೊಡಲಿಪೇಟೆ ಎಂಬ ಹೆಸರಾಯಿತಂತೆ! 'ಕೊಡಲಿರಾಮನೆಸಗಿದಲಿಗಳುಕಿ ಹಿಂದೋಡಿ ಕಡಲಾರೆ . . . . ಅಲಿಗಳನ್ನೊಡೆದು ಮುಂಡಿ' ತುಳುನಾಡು ಎದ್ದಿಕೆಂತೆ' ಮೈಸೂರು ಸೀಮೆಯಲ್ಲಿ 'ಬಂದಳಿಕ ಎಂಬದೊಂದು' ಹಳ್ಳಿ ಇದೆ. ಅದನ್ನು ಆ ಹೆಸರಿನಿಂದ ಏತಕ್ಕೆ ಕರೆಯುವರೆಂಬುದನ್ನು ಕವಿಯ ಸುರಸವಾದ ಮಾತುಗಳಲ್ಲಿಯೇ ವಿಸ್ತರಿಸುವ ಒಮ್ಮೆ ವರತಿವನು ಹೆಂಡತಿ ಮಕ್ಕಳನ್ನೂ ಮನೆಮಾರನ್ನೂ ತೊರೆದುಬಿಟ್ಟು ಕಾಡಿನಲ್ಲಿ ಒಂಟಿಯಾಗಿ ಅಲೆಯುತ್ತಿದ್ದಾಗ, ಒಂದು ದಿನ "ಹಿಂದಿರುಗಿ ನೋಡಿ, ಪಾರ್ವತಿ ದೇವಿ' ಬಿಟ್ಟೋಡಿ ಬಂದಿರಲು ಇಲ್ಲಿಗೂ ಬಂದಳವಳೆಂದು ಬೇಸರದಿಂದ 'ಬಂದಳಿಕ' ಎನಲು ದೇವನಂದುಸುರಿದಾ ತಾಣದಲಿ ಒಡು ಊರಾಯ್ತು ಜನರೆಲ್ಲ ಬಂದಳಿಕೆ, ಬಂದಳಿಕೆ ಎಂದು ಹೃಸ್ವವಾಗಿ ಕರೆಯತೊಡಗಿದರು "

ಮನುಷ್ಯನ ಕಲ್ಪನಾಸಾಮರ್ಥ್ಯವು ಕುದುರಿದ ಹಾಗೆಲ್ಲಾ ಅನೇಕ ಹಳ್ಳಿವಳ್ಳಿಗಳ ಹೆಸರುಗಳ ಮೇಲೆ ಇಂಥ ಕಟ್ಟುಕಥೆಗಳು ಚಿಗುರಿ ಬೆಳೆದು ಅವುಗಳ ಹುಟ್ಟನ್ನು ಅಡಗಿಸುವಷ್ಟು ಹಬ್ಬಿಹೋಗಿವೆ ಆ ಹೆಸರುಗಳ ಮೇಲೆ ಬೀಳುವ ತರಗೆಲೆಗಳನ್ನೂ ಏಳುವ ಮುಳ್ಳುಪೊದೆಗಳನ್ನೂ ತೆಗೆದು ಬಿಸುಡುವುದಕ್ಕೆ ನಮ್ಮ ಬುದ್ಧಿಯು ಪ್ರಯತ್ನಿಸುವುದೇ ಇಲ್ಲ, ಏಕೆಂದರೆ, ಕೃತಿದಾದ ವಿಚಾರಮಾರ್ಗದಲ್ಲಿ ತಪ್ಪಿಲ್ಲದೆ ಒಂದೊಂದೇ ಹೆಜ್ಜೆಯಿಟ್ಟು ನಡೆಯುವುದಕ್ಕಿಂತ ಕಲ್ಪನೆಯ ಬಯಲಿನಲ್ಲಿ ಅಲೆದಾಡುವುದು ಅದಕ್ಕೆ ಸುಲಭವಾಗಿಯೂ ಸೊಗಸಾಗಿಯೂ ತೋರುತ್ತದೆ ಶೋಧದಲ್ಲಿ ಆಸಕ್ತನಾದವನಿಗೆ ಕಲ್ಪನಾ ಶಕ್ತಿಗಿಂತ ವಿಚಾರಶಕ್ತಿಯು ಅತ್ಯಾವಶ್ಯಕ; ಸತ್ಯವು ಅನ್ಯಯವಾಗಿ ದ್ದರೂ ಅದನ್ನೇ ಕಂಡುಹಿಡಿಯಬೇಕೆಂಬ ಹಟವಿರಬೇಕು ಹೀಗೆ ಹೇಳಿದ್ದರಿಂದ ಹುಡುಕುವವನು ಸ್ಥಳಗಳ ವಿಷಯವಾದ ಆಕಾಶ ಪುರಾಣಗಳನ್ನು ಓದಲೇಬಾರದೆಂದು ಅರ್ಥವಲ್ಲ, ಅವುಗಳಲ್ಲಿ ಜಳ್ಳು ಎಷ್ಟು ಕಾಳು ವೆಷ್ಟು ಎಂದು ತೂರುವ ಮೊದಲು ಆ ಸ್ಥಳಗಳ ಹೆಸರುಗಳನ್ನು ಮುಟ್ಟಿದ್ದ ಗಿದಗಂಟಿಗಳನ್ನು ಕತ್ತರಿಸುವುದಕ್ಕೆ ಪ್ರಯತ್ನಿಸಬೇಕು, ಹಾಗೆ ಕತ್ತರಿಸಿದರೆ ಆ ಹೆಸರುಗಳ ಹುಟ್ಟುಬುದ ವನ್ನು ನಿರ್ಧರಿಸುವುದಕ್ಕೆ ಕಷ್ಟವಾದರೂ, ಅವುಗಳ ಬಂಧು ಬಳಗ, ಕುಲಗೋತ್ರ, ಜೋಡುಕೂಡು, ಮೊದಲಾದುವನ್ನು ತಿಳಿಯಲು ಸಾಧ್ಯವಿದೆ ಈ ವಿಚಾರಸರಣಿಯನ್ನು ಮುಂದುವರಿಸಿದರೆ, ಹಲವು ಕನ್ನಡ ಮಾತುಗಳು ಹೇಗೆ ಬಂದುವು, ಎಲ್ಲಿಂದ ಬಂದುವು ಎಂದು ಗೊತ್ತಾಗೆ ಬಹುದು ಆದ್ರಾವಿಡವೆಂಬ ಭಾಷೆಯಿದ್ದರೆ ಅದರ ಮೂಲಸ್ವರೂಪ ವೆನ್ನು ಮುಟ್ಟಲು ಅವಕಾಶವಾಗ ಬಹುದು ಭಾಷಾಶಾಸ್ತ್ರದ ಅನೇಕ ವಿಧಿಗಳು ಸ್ಥಿರಪಡಬಹುದು ನಮ್ಮಲ್ಲಿ ಹೊಡಿಕೆಯಾಗಿರುವ ಕೈಲಾಸಪತಿ, ನರಸಿಂಹ, ವೆಂಕಟೇಶ, ಸೀತಾರಾಮ, ನಂದಕುಮಾರ, ಗೋವಾಲಕೃಷ್ಣ, ವಿಟ್ಠಲ, ಕಾಳಿದಾಸ, ಮೊದಲಾದ ಎಷ್ಟೋ ಹೆಸರುಗಳಲ್ಲಿ ನಮ್ಮ ಪುರಾಣ ಗ್ರಂಥಗಳಲ್ಲಿನ ಅನೇಕಾನೇಕ ಕಥೆಗಳು ಅಡಕವಾಗಿರುವಂತೆ, ಕನ್ನಡನಾಡಿನ ಹಲವು ಸ್ಥಳಗಳ ಹೆಸರುಗಳಲ್ಲಿ ಚರಿತ್ರಾಂತಗಳು ಅಚ್ಚಳಿಯದೆ ನಿಂತಿವೆ. ಕೊಡಗಿನ ವೀರರಾಜೇಂದ್ರ ಒಡೆಯನು ಕಟ್ಟಿಸಿದ್ದರಿಂದ ವೀರರಾಜೇಂದ್ರ ಪೇಟೆ, ಟಿಪ್ಪುವು ತನ್ನ ತಾಯಿಯ ಹೆಸರನ್ನು ಕೋಟೆಗೆ ಇಟ್ಟುದರಿಂದ ಜಮೂಲಾಬಾದು, ಫರಂಗಿಯರು ನೆಲೆನಿಂತುದರಿಂದ ಫರಂಗಿಪೇಟೆ, ಕುಲತೀಱುವರ ರಾಜಧಾನಿಯಾದುದರಿಂದ ಕುಲಶೇಖರ, ಹಾಗೆಯೇ ಸುಬ್ರಹ್ಮಣ್ಯ ಸ್ವಾಮಿಯ ದೇವಸ್ಥಾನವಿದ್ದುದರಿಂದ ಸುಬ್ರಹ್ಮಣ್ಯ, ರಂಗಸ್ವಾಮಿಯ ದೇವಾಲಯವಿದ್ದುದರಿಂದ ಶ್ರೀರಂಗಪಟ್ಟಣ, ಹರಿಹರ ದೇವರಿದ್ದುದರಿಂದ ಹರಿಹರ ಇನ್ನು ದೇವರ ಮಹಿಮೆಯೂ ಇಲ್ಲದೆ ದೊಡ್ಡವರ ಕೀರ್ತಿಯೂ ಪಡೆಯದೆ ಯಾವ ಕಾಲದಲ್ಲಿಯೊ ಬದುಕಿಬಾಳಿ ಬಿದ್ದುಹೋದ ಹಲವ ಅನ ತ, ಜಾತ್ರೆ, ಪೊನ್ನು, ಗುರುವಯ್ಯ ಮೊದಲಾದವರ ಹೆಸರುಗಳನ್ನು ನೆನಸಿಗೆ ತರುವ ಹಂಬನಕಟ್ಟೆ, ಅನಂತ್ತಾಡಿ ಜಾತ್ರೆಬೆಟ್ಟು, ಪೊನ್ನಂಪೇಟೆ, ಗುರುವಯ್ಯನಕೆರೆ—ಇವೇ ಮೊದಲಾದ ಸ್ಥಳಗಳಿಗೆ ಆ ಹೆಸರುಗಳು ಹೇಗೆ ಬಂದುವೆಂದು ಹೇಳುವುದಕ್ಕೆ ತೊಡಕಿರುವುದಿಲ್ಲ ಹೀಗೆ ಒಂದೊಂದು ಸಲ ಮನುಷ್ಯನ ಹೆಸರೇ ಸ್ಥಳಕ್ಕೂ ಬರುವಂತೆ ಒಂದು ಜಾತಿಯ ಹೆಸರಿಂದ ಮೊತ್ತಮೊದಲು ಕರೆಯಲ್ಪಟ್ಟ ಚಿಕ್ಕ ಸ್ಥಳವು ಕ್ರಮೇಣ ಆ ಜಾತಿಯವರು ಅಲ್ಲಿಂದ ಒಕ್ಕಲು ಹೋದರೂ ಆ ಹೆಸರಿನಿಂದಲೇ ಕರೆಯಲ್ಪಡುವುದು ಈಗ ಕಂಚುಗಾರರು ಇಲ್ಲದಿದ್ದರೂ, ಕರೆಯುವುದು ಕಂಚುಗಾರ ಕುಟ್ಟು ಎಂದೇ ಹೆಸರು ಜೈನಪೇಟೆ, ಊರಲ್ಲಿ ಮಾತ್ರ ಜೈನರಿಲ್ಲ, ಬ್ರಾಹ್ಮರಕಟ್ಟು ಎಂಬ ಹೆಸರಿದೆ, ಆ ಸ್ಥಳದಲ್ಲಿ ಈಗ ಬ್ರಾಹ್ಮರ ಮನೆ ಇದೆಯೊ ಇಲ್ಲವೊ ಎಂಬುದು ಮಾತ್ರ ಸಂಧೇಹ ತಾಳಿಪಾಡಿ, ಗೋಳಿತಟ್ಟು, ಈತಲಪಾಡಿ, ಏಲತ್ತೆಬೆಟ್ಟು, ನೆಲ್ಲಿಕುಂಜ, ಕುಕ್ಕುಂದೂರು, ಮಾವಿನ ಕಾರು, ಬಸರಿಕಾರು, ಪುಣಚೆತ್ತಾರು ಎಂದೀ ಸ್ಥಳಗಳು ಅಲ್ಲಲ್ಲಿದ್ದ ತಾಳೆ, ಗೋಳಿ, ಈಚಲು, ಹಲಸು, ನೆಲ್ಲಿ ಮಾವು ಮೊದಲಾದ ಗಿಡಮರಗಳಿಂದ ಮೊದಲು ಪ್ರಸಿದ್ಧವಾಗಿರಬೇಕು ಗುರುವಿದ್ದ ಪುರ ಗುರುಪುರ, ದೇವಂಗೆ ಬಿಟ್ಟ ಕಾಡು ದೇವರ್ಕಾಡು, ಬಟ್ಟರಿಗೆ ಸೇರಿದ ಬೆಟ್ಟು ಬಟ್ಟಬೆಟ್ಟು, ಸೋಮವಾರ ಸಂತೆಯಿರುವ ಸ್ಥಳ ಸೋಮವಾರಪೇಟೆ, ಚಾವಡಿವರ ಬೆಟ್ಟು ಚಾವಡಿಬೆಟ್ಟು, ಸೇವಂತಿಇಲ್ಲವೆ ಸಾವಂತನ ಊರು ಸೇವ ತೂರು, ಒಡೆಯರಿಗೆ ಇಲ್ಲವೆ ಒಡಾನಿಗೆ ಬಿಟ್ಟ ಬೆಟ್ಟು ಒಡ್ಡಬೆಟ್ಟು, ಸುಂಕ ಎತ್ತುವ ಕಟ್ಟೆ ಸುಂಕದ ಕಟ್ಟೆ, ಹಡಗು ಲಂಗರು ಹಾಕಿ ನಿಲ್ಲುವ ಸ್ಥಳ ಹಂಗರು ಕಟ್ಟೆ, ಕಡೆ ಶಿವಾಲಯವಿರುವ ಕ್ಷೇತ್ರ ಕಡೇಶ್ವಾಲ್ಯ, ಧರ್ಮಕ್ಕಾಗಿ ಪ್ರಸಿದ್ಧ ಪಡೆದ ಸ್ಥಳ ಧರ್ಮಸ್ಥಳ, ೨ ಕೇರಿ ಇದ್ದ ಇಕ್ಕೇರಿ, ೪ ಕೇರಿ ಇದ್ದ ನಾಲ್ಕೇರಿ, ೪೦ ಒಕ್ಕಲಿದ್ದ ನಾಪೊಕ್ಲು, ೬೦ ಒಕ್ಕಲಿದ್ದ ಅರುವತ್ತೊಕ್ಲು, ೯ ಕೆರೆಯಿದ್ದ ಒಂಭತ್ತೆರೆ, ಹಿರೆಯಂಗಡಿ, ಹಳೆಬೀಡು, ಪಡುಕೋಣೆ, ನಡುಬಯ್ಲು ಹೊಸಮಟ್ಟು, ಮೇಲ್ ಕೋಟೆ—ಇತ್ಯಾದಿಗಳ ಅರ್ಥವು ಸುಲಭವಾಗಿ ಗೊತ್ತಾಗುತ್ತದೆ ಹೀಗೆ ಸುಲಭವಾಗಿ ತೋರಿದರೂ ಒಂದೊಂದು ಕಡೆ ನಮ್ಮ ವಿಚಾರವು ಬರಿಯ ಶಬ್ದಸಾಧ್ಯತೆಯಿಂದ ಮೋಸ ಹೋಗುವುದುಂಟು. ಜಂಗಮಯ್ಯನ ಮಟವಿದ್ದುದರಿಂದ ಹೊಸಮಟ್ಟ, ಮಟಪ್ಪಬೆಟ್ಟು, ಕಾಡುಮಟ್ಟ, ಮಟಹತ್ತು ಎಂಬ ಹೆಸರುಗಳುಂಟಾದುವು ಇದೇನೊ ನಿಜ; ಆದರೆ ಮಂಗಳೂರಿನ ಬೊಳ್ಳಮಟ್ಟದಲ್ಲಿ ಹಿಂದೆ ಒಂದು ಕಾಲದಲ್ಲಿ ಜಂಗಮಮಟವಿತ್ತೆಂಬ ಊಹೆ ಮಾತ್ರ ತಪ್ಪು. ಬೊಳ್ಳಮಟ ಪದದಲ್ಲಿನ ಮಟಕ್ಕೂ ಜಂಗಮ್ಮಯ್ಯನ ಮಟಕ್ಕೂ ಯಾವ ಸಂಬಂಧವೂ ಇಲ್ಲ. ಈಗ ಬೊಳ್ಳಮಟ

ಬಂದ ಹೊಸಬಂದ ಅಧಿಕಾರಿಯು ಸ್ವಲ್ಪ ಸಮಯದ ಒಳಗೆ ಆ ಬಂಗಲೆಯನ್ನು ತನ್ನ ಹೆಂಡತಿಯ (Belmont) ಎಂಬ ಹೆಸರನ್ನು ಕೊಟ್ಟ. ಈ ಬೆಲ್‌ಮೊಂಟ್ ತನ್ನುವ ಅಸಭ್ಯಂತವೇ ಆಗುವುದೆಂದು ತಿಳಿಯಬಾರದೇ.

ತನ್ನ ಸಾಮರ್ಥ್ಯವನ್ನು ತೋರಿಯುವುದೇ ತಡ, ಮೆಜಿಸ್ಟ್ರೇಟರ ಹೆಸರುಗಳನ್ನು ಕುಂಬು ಬೇಕಾದ ಕಟ್ಟು ಕಥೆಗಳನ್ನು ಬರೆಯುತ್ತಾನೆ. ಬಟ್ಟಿಪತ್ರದಲ್ಲಿ ಒಂದು ಕಾಲದಲ್ಲಿ ದೊಡ್ಡ ಪಾಲಯವಿದ್ದು, ಅದನ್ನು ಕೆಡಿಸಿ ಅಲ್ಲಿ ಕಟ್ಟಿಸಿದ [illegible] ಗುರಿಯಂದ ಬಲ್ಲವೆಂಬದಾಗಿಯೂ; ಭೂತಾಳ ಪಾಂಡ್ಯನು ತನ್ನ ೧೨ ಮಂದಿ ಕನ್ನೆಯರಿಗಾಗಿ ಕಟ್ಟಿಸಿದ ಅರಮನೆಯನ್ನು ಕಟ್ಟಿಸಿ ಅದನ್ನು ಬಾರಕನ್ಯಾವುರವೆಂಬ ಹೆಸರಿನಿಂದ ಕರೆಯಬೇಕೆಂದು ಮಾಡಿದ ಆಜ್ಞೆಯಿಂದ ಬಾರಕನ್ಯಾವುರ, ಇಲ್ಲವೆ ಬಾರಕೂರ ಎಂಬ ಹೆಸರು ಬಂತೆಂಬದಾಗಿಯೂ; ಮಹಿಷಾಸುರನನ್ನು ವಧಿಸಿದ ಪುರಾಣ ಕಥೆಯಿಂದ ಮೈಸೂರು, ಆಯತೆಂಬದಾಗಿಯೂ; ಕೊಂಕಾದೇವಿಯ ನಿಮಿತ್ತ ಪರಶುರಾಮನು ಮೈಮು ಗಟ್ಟಿದ ಕೆಳಗಿನ ಬಯಲಿಗೆ ಕೊಂಕಣವೆಂದು ಹೆಸರಿಟ್ಟನೆಂಬದಾಗಿಯೂ ಹಾಲಿಲ್ಲದ ಕಥೆಗಳು ಕಲ್ಪಿಸಲ್ಪಟ್ಟಿವೆ. ನೂಲವನ್ನು ಹುಡುಕುವನೆನು ಇಂಥ ಕಟ್ಟುಕಥೆಗಳನ್ನು ಹಳೆಯ ಮಾತುಗಳೆಂದು ನಂಬಿದರೆ ಬಾಧಕವಿಲ್ಲ, ಆದರೆ ಅವನ್ನು ಆಧಾರವಾಗಿಟ್ಟುಕೊಂಡು ಮುಂದುವರಿದರೆ "ಉದ್ದುದ್ದ ಮೂಕಾಡಿ ಇದ್ದದನ್ನು ಹೋಗಾಡಿ ಉದ್ದ ಮರದ ತುದಿಯೇರಿ ವಿದ್ವಂತಕನು."[1] ಇದು ಹೇಗೆಂದು ನಿದರ್ಶನಿಸಲು ನನ್ನ ಮಂಗಳೂರನ್ನೇ ಕುರಿತು ವಿಚಾರಿಸುವ!

ಮಂಗಳೂರು–ಈ ಹೆಸರು ಹೇಗೆ ಬಂತು? ಮಂಗಳಾದೇವಿಯ ದೇವಸ್ಥಾನವಿದ್ದುದರಿಂದ ಮಂಗಳೂರಾಯು ತೆಂಬುದು ಒಂದು ಹಳೆಯ ವಿಚಾರ. ಹೆಸರಿಗೆ ಒಂದು ಕಾರಣವನ್ನು ಕೊಟ್ಟಿದ್ದಾಯಿತು. ದೇವಿಯ ನಾಮವಿಟ್ಟು ಬಲಗೊಳಿಸಿದ ಹಿರಿಯರ ಅಭಿಪ್ರಾಯವನ್ನು ಅಲ್ಲಗಳೆಯುವುದಕ್ಕೆ ಯಾರಿಗೆ ತಾನೆ ಧೈರ್ಯವಿದೆ? ಆದರೆ ನೋಡಲು ಇದ್ದದ್ದು ಹಾಗೆ, ಮತ್ತೆ ಆದದ್ದು ದೇಗುಲ; ದೇಗುಲದಲ್ಲಿ ದೇವಿಯನ್ನು ಪ್ರತಿಷ್ಠೆಮಾಡುವ ಮುಂಚೆ ಜಾಗವು ಮಂಗಳೂರಾಗಿತ್ತೇ ಎಂದು ಕೇಳಿದರೆ, ಕುತರ್ಕವಾಗುತ್ತದೆ ಅದು ಹೋಗಲಿ! ಮಂಗಳೂರು ಎಂಬ ಹೆಸರು ಬಂದದ್ದು–ಆ ದೇವಸ್ಥಾನದಲ್ಲಿ ಪ್ರತಿಷ್ಠಿತವಾದ ಮಂಗಳಾದೇವಿಯಿಂದಲ್ಲ, ಅದನ್ನು ಕಟ್ಟಿಸಿದ ಮಂಗಳಾದೇವಿ ಎಂಬ ಒಬ್ಬ ವಿರಾಗಿನಿ ಹೆಂಗಸಿನಿಂದ ಎಂಬ ಕಥೆಯೂ ಇದೆ ಇದರಲ್ಲಿ ಯಾವುದು ನಿಜ? ಯಾವುದು ಸುಳ್ಳು? ಅದು ಹಾಗಿರಲಿ! ಈ ವೃತ್ತಿ ಬಬ್ಬುವುದಕ್ಕೆ ಇನ್ನೊಂದು ಹಾದಿಯಿದೆ ಚಿಕ್ಕ ಮಂಗಳೂರು ಹೇಗೆ ಉಂಟಾಯಿತು? "ಅದೋ? ಕೇಳ! ಚಿಕ್ಕಮಂಗಳೂರಲ್ಲ, ಚಿಕ್ಕಮಗಳೂರು, ಇದರ ಪಕ್ಕದಲ್ಲಿ ಹಿರೇಮಗಳೂರು ಇದೆ. ಚಿಕ್ಕಮಂಗಳೂರೆಂದು ಅನು ಸ್ವಾರಯುಕ್ತವಾಗಿ ಕರೆಯುವುದು ಮೈಸೂರಲ್ಲಿ ರೂಢಿಯಲ್ಲ. ಸಕ್ಕಲ್ಲಿ ಪಾಣೆಮಂಗಳೂರು ಇದೆಯಲ್ಲ! ಇದಕ್ಕೇನು ಹೇಳುವಿರಿ?

ಪಾಣೆಮಂಗಳೂರು ಎಂಬುದು ಹೊಸರೂಪ. ಇದರ ಹಳೆಯ ರೂಪವು ಒಂದು ಶಿಲಾಶಾಸನದಲ್ಲಿಯೂ ಒಂದು 'ಪಾಡ್ಯೊನೆ'ಯಲ್ಲಿಯೂ ದೊರೆಯುತ್ತದೆ ಮೊಗರುನಾಡು, ಇದರ ಹತ್ತಿರ ವಣೆಮೊಗರು; ಈ ವಣೆಮೊಗರು—ಗಟ್ಟಿಂದ ಇಳಿದು ಮಂಗಳೂರಿಗೆ ಬಂದು ಹೋಗತಕ್ಕವರ ದಾರಿಯಲ್ಲಿದ್ದು, ವಣೆಮಂಗಳೂರೆಂದು ಬದಲಾಯಿಸಲ್ಪಟ್ಟಿತು. ಹೀಗೆ ಪಲ್ಲಟವಾದ ಹೆಸರನ್ನು Panemangalore ಎಂದು ಬರೆಯಲಾಗಿ, ಇಂಗ್ಲಿಷ್‌ರವನು ಅದರೊಳಗಿನ ಪೂರ್ವಪದವನ್ನು ಪಾನೆ, ಪಾನಿ, ಎಂದು ಹಿಡಿದ ಅರ್ಥವಾಗಿ ಆಗದೆ, ಪಾನೆ, ಪಾನಿ (ನೀರು) ಎಂದು ಉಚ್ಚರಿಸಿ, ಪಾಣಿ ಮಂಗಳೂರು ಎಂದರೆ ನೀರಿನ ಮಂಗಳೂರು ಎಂಬ ವಿಪರೀತಾರ್ಥವನ್ನು ಕಲ್ಪಿಸಿಬಿಟ್ಟನು.

ಇಷ್ಟರವರೆಗೆ ಮಾಡಿದ ವಿಚಾರದಿಂದ ಚಿಕ್ಕಮಂಗಳೂರು, ಪಾಣೆಮಂಗಳೂರು ಎಂಬೀ ಹೆಸರುಗಳು ಬಂದಿರುವ ರೀತಿಯನ್ನು ತೋರಿಸುತ್ತಿದೆಯೇ ಹೊರತು ಮಂಗಳೂರು ಪದದ ಬೇರಿಗೆ ಮುಟ್ಟುವಲ್ಲಿ ದಿಲ್ಲವಷ್ಟೆ! ಮಂಗಳಾದೇವಿಯು ಸಾಕ್ಷಿಭೂತಳಾಗಿರುವಳೆಂಬುದು ಈ ಅಭಿಪ್ರಾಯವು ಸರಿಯೊ ತಪ್ಪು ಎಂಬದು ಮೇಲಿನ ವಿಚಾರದಿಂದ ನಿರ್ಣಯಿಸುವುದಿಲ್ಲ. ಆ ಅಭಿಪ್ರಾಯವನ್ನೇನೋ ದೇವಿಯ ಮೇಲಿನ ನಮ್ಮ ಭಕ್ತಿ ಕಾರಣಕ್ಕೆ ಸಮರ್ಥಿಸಬಹುದು! ಆದರೆ ಇದನ್ನು ಒಪ್ಪಿ ತೊಂದರೆ ಎತ್ತಿಸುವುದಿಂದ ತಲೆಕಾಸುವ ಪ್ರಶ್ನೆಯಿಲ್ಲ ಸಮಂಜಸ ಪರಿಹಾರವಾಗುತ್ತದೆ.

ಮಂಗಳೂರಿನಲ್ಲಿ ಬೆಸಿಮಂಜ ಮಂಗಳೂರು ಬಂತೆಂದು ಸಾಧಿಸಿದರೆ, ಕಲ್ಲು ಚಿಕ್ಕೆಯುಳ್ಳಿಕ ಮಂಗಳಕಾಯಿ ಮಂಗಳಪೇಟೆ, ಉಪ್ಪರ ಮಂಗಳ, ಕಾಂತುಮಂಗಳ, ಕುಳ ಮಂಗಳ ಮೊದಲಾದ ಊರುಗಳಿಗೆ ಅದೇ ನಾಮ ಕರಣವಾಗುವುದಕ್ಕೆ ಅಲ್ಲಲ್ಲಿ ಮಂಗಳಾದೇವಿ ಇತ್ತೇ? ಆ ಸ್ಥಳಗಳಲ್ಲಿ ದೇವಿಯುಕ್ತವಾದ ಕುರುಹೇ ಇಲ್ಲವೆಂದ ಮೇಲೆ ಆ ಹೆಸರುಗಳಲ್ಲಿ ಮಂಗಳ ಎಂಬ ನುಡಿಯು ಹೇಗೆ ಸೇರಿಕೊಂಡಿತು? ಇದಕ್ಕೆ ಉತ್ತರವೇನು? ಸರ್ವ ಮಂಗಳೆಯು ಸರ್ವ ವ್ಯಾಪಿನಿಯಾಮದರಿಂದ ಸಕಲ ಸ್ಥಳಗಳಲ್ಲಿಯೂ ಇದ್ದಾಳೆಂದು ಎಂದುರಾದಿರೆ, ಆ ವಿಚಾರವು ವೇದಾಂತಕ್ಕೆ ಏರಿಹೋಯಿತೇ ಹೊರತು ನಮಗೆ ಆದರ ಣೀಯವಾಗಲಾರದು.

ಮಂಗಳ, ಕಲ್ಯಾಣ, ಶುಭ ಎಂಬೀ ಪದ್ಯಗಳು ಸಮಾನಾರ್ಥವುಳ್ಳವುಗಳು; ಮಂಗಳವೆರು, ಮಂಗಳವೇಟೆ, ಕಲ್ಯಾಣವೆರ, ಕಲ್ಯಾಣ ದುರ್ಗ ಮುಂತಾದ ಹೆಸರುಗಳಲ್ಲಿ ಈ ಅರ್ಥವು ಸ್ಫುರಿಸೋಗುತ್ತದೆ. ಆದರೆ ಕಾಂತುಮಂಗಳೆ ಬೀರಮಂಗಳಗಳಲ್ಲಿ ವಿಪರೀತವಾಗಿ ಬರುವ ಈ ಮಂಗಳಕ್ಕೆ ಆ ಅರ್ಥವು ಸರಿಯಾಗಿ ಹೊಂದುವುದಿಲ್ಲ.

ವಾಸ್ತುಶಾಸ್ತ್ರದ ವ್ಯಕಾರ ಮಂಗಲ ಎಂದರೆ ದುರ್ಗ ರಕ್ಷಣಕ್ಕಾಗಿ ನಗರದಲ್ಲಿದ್ದ ಸೈನ್ಯಕ್ಕ ಬೇಕಾದ ಸೌಕರ್ಯ ಗೆಳುಳ್ಳ ಸ್ಥಳವೆಂದರ್ಥ, ದಂಡಿನವರು ಇರುವ ಕೋಟೇರಿ ಎಂದು ಹೇಳಬಹುದು ಈ ಮಂಗಲವು ನೆಲದಡಿಯಲ್ಲಿ ದ್ದರೆ ನೆಲಗುಂಗಲವಾಯಿತು, ನಗರದ ಎಡಕ್ಕಿದ್ದರೆ ಎಡ ಮಂಗಲವಾಯಿತು. ದುರ್ಗದ ಆಕಾರವನ್ನೊ ಸೈನ್ಯದ ಮಿತಿಯನ್ನೊ ಅನುಸರಿಸಿ ನಾಗಮಂಗಲವಾಗುತ್ತದೆ, ಇಲ್ಲವೆ ಈಶ್ವರ ಮಂಗಲವಾಗುತ್ತದೆ. ಕೋಟೆಯನ್ನು ಕಾಳಾನು ಕಟ್ಟಿಸಿದ್ದರೆ ಕುಳಮಂಗಲ, ಕಾಂತನ ಕಾಲದ್ದಾದರೆ ಕಾಂತ ಮಂಗಲ, ಬೀರನ ವತದಲ್ಲಿದ್ದರೆ ಬೀರಮಂಗಲ ಎಂದು ಪ್ರಸಿದ್ಧವಾಗುತ್ತದೆ. ಮಂಗಲದ ಒತ್ತಿನಲ್ಲಿದ್ದ ಪೇಟೆ ಮಂಗಲಪೇಟೆ, ಪಾಡಿ, ಮಂಗಲಪಾಡಿ, ಪುರ, ಮಂಗಳಪುರ! ಹೀಗೆ ದುರ್ಗ ನಿರ್ಮಾಣ ಕಾಲದ ಮಂಗಲ ಎಂಬ ಹೆಸರು ಕ್ರಮೇಣ ವಕ್ಕದಲ್ಲಿದ್ದ ಇತರ ಹಳ್ಳಿಗಳ ಮೇಲೆ ಬಿದ್ದು, ತುಳುವಾಡಿನ ಬಹುಭಾಗವನ್ನು ಆಕ್ರಮಿಸಿ, ವಿಜಯನಗರದ ಕಾಲದಲ್ಲಿ ರಾಜ್ಯವೆನ್ನಿಸಿಕೊಂಡು, ಈಗ ಮಂಗಳೂರ ತಾಲೂಕಿಗೆ ನಿಂತಿದೆ ಆದರೂ ಪುರಾತನ ಕಾಲದಲ್ಲಿ ಇಲ್ಲಿ ಕೋಟೆಕೊತ್ತಲ ಇತ್ತೆಂಬುದಕ್ಕೆ ಮಂಗಳೂರ ಎಂಬ ಮಾತೇ ಸಾಕಾಗಿದೆ; ಈ ಕೋಟೆಯಲ್ಲಿನ ಧ್ವಜ ವಿಜಯ ದಶಮಿಯ ದಿನ ದಂಡಯಾತ್ರೆಗೆ ಹೊರಡುವ ಸಾಂಪ್ರದಾಯ ವಿತ್ತೆಂಬುದಕ್ಕೆ ಮಂಗಲದೇವಸ್ಥಾನದ ರಥೋತ್ಸವವನ್ನು ಬೋಳಾರ ಧ್ವಂಜು ಎಂದು ಈಗಲೂ ಕರೆಯುವುದೇ ಸಾಕ್ಷ್ಯವಾಗಿದೆ

ಮಂಗಳೂರು, ಇದರಂತೆ ಕೋಟೆಕಾರು, ಗಡಾಯಿಕಲ್ಲು ಮುಂತಾದ ಹೆಸರುಗಳು ನಮ್ಮ ಜಿಲ್ಲೆಯ ಇತಿಹಾಸಾಂಶದ ಒಂದೆರಡು ಚೂರುಗಳನ್ನು ಭದ್ರವಾಗಿ ಕಾವಾಡಿಕೊಂಡಿವೆ. ವೃಷ್ಟಿಯ ಮೇಲಿನ ಇತರ ಮಾರ್ಪಾಟುಗಳ ಇತಿಹಾಸವನ್ನು ಸೂಚಿಸುವ ಹೆಸರುಗಳು ಇವೆ ಮಂಗಳೂರು ಚರಿತ್ರೆ ಸಂಬಂಧವಾದ ಹೆಸರು, ಬೋಳಾರು ಭೂಶಾಸ್ತ್ರ ಸಂಬಂಧವಾದ ಹೆಸರು. ಮಂಗಳೂರಿನ ನಿವಿಡಲ್ಪಟ್ಟ ಬೋಳಾರು ಹೇಗೆ ಬಂತು?

ಬೋಳಾರು! ಈ ಹೆಸರನ್ನು ಕಡಿದು, ತುಂಡುಗಳನ್ನು ಗುರುತಿಸಿದರೆ ಸಾಕು! ಆದರೆ ಕಡಿ ಸರಿಬೀಳಬೇಕು' ಬೋ+ಳಾರು–ವಿಗ್ರಹ ನಿರಿಯಾಗಿಲ್ಲ. ಬೋಳಾ+ರು—ಇದು ನ್ಯೂರ್ಥ. ಬೋಳ್+ಆರು—ಈ ಪ್ರಥಕ್ಕರಣ ಬಹುತಃ ತಪ್ಪಲ್ಲವೆಂದು ಕಾಣುತ್ತದೆ. ಬೋಳ ಎಂದರೆ ಪಾಲಿ, ಆರು ಎಂಬುದು ಒಂದು ಸಂಖ್ಯೆ ಆದರೂ ಅರ್ಥ ಹೊರಡುವುದಿಲ್ಲವಷ್ಟೆ! ಅಕ್ಕರದೋಷವಿರಬಹುದೇ? ಆರು? ಅಲ್ಲ ಊರು? ಹೀಗೆ ತಪ್ಪುಬಿದ್ದಿದೆಂದು ಸ್ಥಾಧಿಸಿ, ಆರನ್ನು ಊರ ನ್ನಾಗಿ ಬದಲಾಯಿಸಿ, 'ಬೋಳೂರು' ಎಂದು ಹಿಡಿದು ಬೋಳುಗುಡ್ಡೆಯಂತೆ ಬರಿದಾಪ್ಪ ಸ್ಥಳವೆಂದು ಅರ್ಥ ಹೇಳಿ, ಇಂಗ್ಲಿಷರ ಆಳಿಕೆಯು ಪ್ರಾಪ್ತವಾದ ನಂತರ ಆ ಸ್ಥಳವು ಬೀಳುವಿದ್ದಿರುವುದರಿಂದ ಅದನ್ನು ಬೋಳೂರು ಇಲ್ಲವೆ ಬೊಳಾರು ಎಂದು ಕರೆಯುತ್ತಾರೆಂದು ವಿಸ್ತರಿಸಿದರೆ ಈ ವ್ಯಾಖ್ಯಾನವು ಸುಳ್ಳು ಕಲ್ಪನೆಯೆಂದು ಹೇಳಬೇಕಾಗುತ್ತದೆ. ಇಂಥ ಕಲ್ಪಿತ ಕಥೆಯು ಕೇಳುವುದಕ್ಕೆ ಸೊಗಸಾದರೂ ಸ್ವೀಕರಿಸುವುದಕ್ಕೆ ನಿರಾಧಾರವಾಗಿದೆ. ಬೋಳಾರು—ಇಲ್ಲಿ ಪೂರ್ವ ಪದವು ಬೋಳ್, ಪರಪದವು ಆರು. ಈ ಪದಗಳು ಇತರ ಹೆಸರುಗಳಲ್ಲಿವೆಯೋ ಎಂದು ಹುಡುಕೋಣ!

ಬೋಳೂರು, ಕೊಣ್ಣಾಯ್ತು, ಕೊಣ್ಣ, ಕೋಣಾಜೆ, ಮೋಣ್ಕಿರು [illegible] ಮೊದಲಾಗಿರುವ ಹೆಸರುಗಳು ನಿಮಗೆ ಬರುವುದಿಲ್ಲ! ಹೋಗಲಿ!

ಕಡೂರು, ಆಲೂರು, ಅಕ್ಕಾಜಿ, ಅಜ್ಜ, ಅಕ್ಕಾಜಿ ಅಲ್ಲೋಣ— ಇವಲ್ಲಿ ಆರು ಪೂರ್ವಪದ.

ಮಲಾಜಿ, ಕಲ್ಯಾ—ಬ್ಯಳೆಯೂರು, ತೋಲಾಜಿ, ಮೈರಾಳ, ಸಾಲೂರು–ಇವಲ್ಲಿ ಆರು ಪರಪದ.

ಬೋಳ್ ಎಂದರೆ ತುಳು ಮಾತಿನಲ್ಲಿ ನೀರಿನ ವ್ಯವಹಾ. ಬೋಳ್ ಎಂಬುದು ಒತ್ತುಗೆಟ್ಟು ನಿಲ್ಲುವುದಕ್ಕೆ ಆಧಾರವಿದೆ. ಕಣ್ಣು–ಳಣು, ಮುಳ್ಳು–ಮುಳು. ಬೋಳ್+ತ್ತೂರು ಇದ್ದದ್ದು ಬೊಳ್ಳತ್ತೂರು–ಬೊಳ್ತೂರ ಎಂದು ಸಬಂಧಕವಾಗುವುದಕ್ಕೆ ಫೌಜು–ಫೌಂಜು, ನಿತ್ತು–ನಿಂತು, ಗೊತ್ತು–ಗೊಂತು, ಎಟ್ಟು–ಎಂಟು, ಉದು–ಉಂದು ಇದು ಇಂದು) ಇತ್ಯಾದಿಗಳೇ ದೃಷ್ಟಾಂತಗಳು. ಈ ಬೋಳ್ ತಲ್ಲುತ್ತ ಬೆಳತಂಗಡಿ, ಬೆಳ್ಳಿ ಪಾಡಿ, ಇತ್ಯಾದಿಗಳಲ್ಲಿ ಬೇರೆ ರೂಪಗಳನ್ನು ಧರಿಸುತ್ತದೆ.

ಬೋಳ್ ಆರ್, ಬೋಳಾರ್ ಎಂದರೆ ನೀರಿನ ವ್ಯವಾಹವು ಎಲ್ಲಿ ಬಹಳ ಆಳವಾಗಿದೆಯೋ ಅಲ್ಲಿಯ ಸ್ಥಳವೆಂದು ಅರ್ಥ ಇರಬಹುದು. (ಆರ್ – ಆಳ) ಆದರೆ ನನ್ನಲ್ಲಿ ಬೋಳಾರು ಮತ್ತು ಬೊಳೂರು ಹೀಗೆ ಎರಡು ಹೆಸರುಗಳಿವೆ ಇವು ಭಿನ್ನಾರ್ಥಕಗಳೋ? ಸಮಾನಾರ್ಥಕಗಳೋ? ಊರ್ ಬಂದದ್ದು ಉರ್ ಧಾತುವಿನಿಂದ ಈ ಉರ್ ಎಂಬದು ಇರ್ ಎಂಬದರ ಮತ್ತೊಂದು ರೂಪ ಮನುಷ್ಯನು ಎಲ್ಲಿ ನಿಲ್ಲತಾನೋ ಅದೇ ನೆಲ, ನೆಲೆ, ಎಲ್ಲಿ ತೋಡ್‌ತಾನೋ ಅದೇ ತೋಡು, ತೋಟ, ಎಲ್ಲಿ ನಡ್‌ತಾನೋ ಅದೇ ನಾಡು, ನಾಟ್, ಎಲ್ಲಿ ಉರು (ಇರು) ತ್ತಾನೋ ಅದೇ ಊರು ವಸ್ತುಗಳು ಹತ್ತಿರ ಇವೆಯೋ ದೂರ ಇವೆಯೋ ಎಂಬುದನ್ನು ಇದು (ಈ), ಉದು (ಊ), ಅದ (ಅ) ಎಂಬಿವುಗಳ ಪ್ರಯೋಗದಿಂದ ತೋರಿಸುವಂತೆ, ನೀರಿನ ವ್ಯವಾಹವಿರುವ ಸ್ಥಳವು ದೂರವಿದ್ದಾಗ ಬೋಳಾರು ಎನ್ನಿಸಿತು, ಹತ್ತಿರವಿದ್ದಾಗ ಬೊಳೂರು ಎನ್ನಿಸಿತು ಹೀಗೆಂದು ಹೇಳಿ ಇದನ್ನು ಸಮರ್ಥಿಸುವುದಕ್ಕೆ ಪಡೂರು — ಪಡಾರು ಮೂಡೂರು — ಮೂಡಾರು, ಕೊಯ್ಕೂರು — ಕೊಯ್ಕಾರು, ಪುತ್ತೂರು — ಪುತ್ತಾರು, ಪೇರೂರು—ಪೇರಾರ, ಎಂಬೀ ಜೋಡು ಹೆಸರುಗಳ ದೃಷ್ಟಾಂತಗಳನ್ನು ಹೇಳುವುದುಂಟು ಊರು, ಇದು ಇರ್ ಧಾತುವಿನಿಂದ ಹುಟ್ಟಿದ್ದೆಂದು ಹೇಳುವುದಕ್ಕಿಂತ ಉರ ಎಂಬ ದರಿಂದ ಬಂತೆಂದು ಹೇಳಬೇಕು ಉರ ಎಂದರೆ ತುಳುವಿನಲ್ಲಿ ಉಳುವುದೆಂದರ್ಥ, ಗದ್ದೆಯೆಂದು ಎರಡನೆಯ ಅರ್ಥ (ಉರುವಲ ಉರು) ಯಾವ ಸ್ಥಳವು ಉರ್‌ತ್ತು (ಉತ್ತು) ಇದೆಯೋ ಅದೇ ಊರು ಎಂದು ಹೇಳುವುದಕ್ಕೆ ಅಡ್ಡಿಯೇನು?

ಇದುವರೆಗೆ ಮಾಡಿದ ವಿಚಾರದಿಂದ ನಮ್ಮ ಹಳ್ಳಿಯ ಹೆಸರುಗಳ ಕೆಲವು ಲಕ್ಷಣಗಳು ತೋರಮಟ್ಟಿಗೆ ಗೊತ್ತಾದುವು ಸ್ಥಳವು ಚಿಕ್ಕದಿದ್ದರೂ ದೊಡ್ಡದಿದ್ದರೂ ಅದಕ್ಕೊಂದು ಹೆಸರಿದೆ ಅಂಥ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ತುಂಡುಗಳಿವೆ. ಈ ತುಂಡುಗಳಿಗೆ ಬಹುತಃ ಅರ್ಥವಿರಬೇಕು ಈ ತುಂಡುಗಳು ಒಂದು ಹೆಸರಿನಲ್ಲಿ ಪೂರ್ವದವಾಗಿಯೂ ಮತ್ತೊಂದರಲ್ಲಿ ಪರದವಾಗಿಯೂ ಬರುತ್ತವೆ ಇಂಥ ಪಿಡಿನುಡಿಗಳಲ್ಲಿ ಕೆಲವು ಯಾವುವೆಂದರೆ—

I ಪೊನ, ಪಳ, ಹಿಂ, ಕಿರಿ, ಮೇಲೆ(ಮಿತ್ತ್) ಕೆಳ(ತಿತ್ತ್)ದ ಎಡ ಬಲ, ಹಿಂದು (ಪಿನ್), ಮುಂದು (ಮುನ್), ನಡು, ನೇರ ಒಳ, ಹೊರ ಮೂಡು, ಪಡು, ಬಡಗು, ತೆಂಕು (ತೆಲ್ಕ್), ಒಂದು (ಒನ್), ಎರಡು, ಮೂರ್, ಇತ್ಯಾದಿ ಗುಣವಾಚಿಗಳು, ದಿಗ್ವಾಚಿಗಳು, ಸಂಖ್ಯಾವಾಚಿಗಳು.

II ಹಲವು ತುಂಡುಗಳು ಭೂವಿವರಣೆಯಲ್ಲಿ ನೆಲಜಲ ಭಾಗಗಳನ್ನು ಸಂಬಂಧಿಸಿದ ನುಡಿಗಳು–ಅಡ್ಡ ಅಂಗಳ, ಅಜೆ, ಅಂಗಡಿ, ಉಡುಪಿ, ಒಜೆ, ಕಡವು ಕರೆ, ಕಟ್ಟೆ, ಕಳ, ಕಮ್ಮಲ, ಕಾಡು, ಕಾನ, ಕಾವು, ಕುಳಿ, ಕುದುರು, ಕುದುಮ, ಕೆರೆ, ಕೇರಿ, ಕೋಟ, ಕೋಲ, ಕೋಟೆ, ಗದ್ದೆ, ಗೋಣ, ತೋಟ, ತೋಪು, ತ್ಯೌ, ನಾಡು, ಪದವು, ಪಳ್ಳ, ಪಳ್ಳ, ಪಡಪ್ಪ, ಪಾಡಿ, ಪಾಲ್ಯ–ಪೇಟೆ, ಬಯಲು, ಮ್ಯೌ, ಮುಜಲು, ಮುಣ್ಣೂ, ಮುಳ್ಳೆ, ಮೂಳೆ, ಮುಳಿ, ಮೊಸರು, ಸೂರ–ಇತ್ಯಾದಿ.

ಈ ನುಡಿಗಳ ಜ್ಞೋಡಣೆಯಿಂದ ಹೇಗೆ ಸ್ಥಳಗಳ ಹೆಸರು ಗಳಾಗುತ್ತವೆ ನೋಡಿ!

ಪೊಳಕಾಲ, ಅಂಗಡಿ, ಅಂಗಡಿಪೊಳಲು, ಮೊಗ್ರಂಪಾಡಿ, ಪಾಡಿಕ್ಕಾನ, ಕೋಡಿಮಜ್ಜೆ, ಮುಜ್ಜಗುಡ್ಡೆ, ಗುಡ್ಡೆಕೊಮ್ಮ, ಕಾಡುಮೆಟ್ಟು, ಮೈಲಾಡಿ, ಪಾಡಿಮನೆಲು, ಮುಜಲ್ಕಟ್ಟೆ, ಗದ್ದೆಕೇರಿ.

ಮೇಲಿನ ನುಡಿಗಳಲ್ಲಿ ಆಲ ಎಂಬದು ಹೊರತು ಉಳಿದುವುಗಳು ತುಳು ಮಾತಿನಲ್ಲಿ ತೋರಿಕೆ ರೂಢಿಯಲ್ಲಿರುವ ಶಬ್ದಗಳು ಆಲ ಎಂಬ ನುಡಿಯಂತೆ ಕನ್ನಡ ಅರ್ಥವಾಗಿದ ಎಷ್ಟೋ ನುಡಿಗಳಿವೆ. ಈ ಆಲ ಎಂಬದು ಆರ ಶಬ್ದಕ್ಕಂತೆ

ಹಲವು ಹೆಸರುಗಳ ಮೊದಲಲ್ಲಿಯೂ ಕಡೆಯಲ್ಲಿಯೂ ಬಂದು ನಿಲ್ಲುತ್ತದೆ.

ಅಂಬರ, ಅಬ್ಬೆ, ಅಲ್ಪೆ, ಬಜಾರ್, ಸಾಲಾ, ಕುರಿಯಾಲ್, ಉಚ್ಚಾರ್, ಬೆಳಿಂಜ, ಸಂಪ್ಯಾರ್.

ಅಲ, ಆಲ, ಲ–ಈ ನುಡಿಯು ಆರ, ಆರ್, ರ ಎಂಬವರ ರೂಪವೆಂದು ಕೆಲವರ ಅಭಿಪ್ರಾಯ; (ಆಳಿರು). 'ಆಲ್ಲಿ' 'ಆ ಕಡೆ' ಎಂಬರ್ಥದಲ್ಲಿ ಬರುತ್ತದೆಂದು ಮತ್ತೊಂದು ಅಭಿಪ್ರಾಯ; ಉದಾಹರಣೆ—ಮೊಡು, ಮೊಡಲ್, ಮೂಡಲು. ಲ್ ಎಂಬದು ಅನೇಕ ಕಡೆ ಕೃಯಾನಾಮದ ಪ್ರತ್ಯಯವೆಂದು ನನಗೆ ತೋರುತ್ತದೆ; ಬಯಲ್ ಎಂದರೆ ಬಯ್ ಇರುವಂಥಾದ್ದು, ಬಜಲ್—ಬಜ ವಡಿದಿರುವಂಥಾದ್ದು; ಮಲೆಯಾಲ್—ಮಲೆ ಇರುವಂಥಾದ್ದು, ಕೂಡ್ಲು – ಎಂದರೆ ಕೂಡು (ಸಂಗಮ) ಇರುವಂಥಾದ್ದು. ಈ ಲ ಎಂಬ ಅಂತ್ಯಪ್ರತ್ಯಯವು ತುಳುನಾಡಿನ ಅನೇಕಾನೇಕ ಸ್ಥಳಗಳಲ್ಲಿ ಸೇರಿಕೊಂಡಿದೆ; ಆ ಲಕಾರವನ್ನು ಬಿಟ್ಟು ಹೆಸರುಗಳನ್ನು ಬರೆದರೆ ಮುಕ್ಕಲರೂಪದಲ್ಲಿ ಎರಡಕ್ಕಿಂತ ಹೆಚ್ಚು ಅಕ್ಷರಗಳು ಉಳಿಯುವುದಿಲ್ಲ.

ಅಮ್ಮ, ಅಬ್ಬ, ಇಟ್ಟ, ಉಳ್ಳಾಲ, ಕಾಪ್ಪ, ಕಾಪ್ಪ, ಕೇಪ್ಪ, ಕೆಟ್ಟ, ಕೇಪ್ಪ, ಕಯ್ಯಾಲೆ, ಚೇರ್ಪ, ದೇಪ್ಪ, ನಾಯ್ಪ, ನೇಪ್ಪ, ನೆಪ್ಪ, ನೆಟ್ಟ, ಪಟ್ಟ, ಪುತ್ತಿಲ, ಪೇಪ್ಪ, ಬೇಲ, ಮಂಜಿಲ, ಮಯ್ಯೂರ, ಶಿರಿಪ್ಪ ಇತ್ಯಾದಿ.

ಆಯ್, ಆಸ್, (ಇದು ಪೊಜಲು ಖಂದಿನ), ಇಟ್, ಉಳ್, (ಉಳಿ ಕುಮರು ಉಳಿ ಬುಡು ಉಳಿ), ಕಾರ್, ಕಾ, ಕೀ, ಕೆಳ್, ಕೇರ್, ಕಯ್, ಚೀರ್, ದೀಂ, ನಾ, ನೇ, ನೆಕ್, ನೆಸ್, ಪಟ್, ಪುತ್, ಪೇರ್, ಬೀ, ಮಸ್; ಮಯ್, ಶಿಪ್ ಇತ್ಯಾದಿ.

ಹೀಗೆಯೇ ಬಜಲ್, ಮಜಲ್, ಪೂಜಾಲ್, ಬ್ರಾಲ್, ಅಜಲ್, ಕಾಜಲ್, ಸೂರ್ಕಾಲ್ ಇತ್ಯಾದಿಗಳಿಂದ ಬಜ,ಮಜ, ಪೂಂ, ಬಳ್, ಅಜ, ಕಜ, ಸೂರ್ ಮೊದಲಾದ ರೂಪಗಳನ್ನು ಊಹಿಸಬಹುದು.

ಇವು ಹೊರತು ಇನ್ನು ಎಷ್ಟೋ ನುಡಿಗಳಿವೆ.

ಅಜ, ಕಳು ಕುರ್, ಕಾಲ್; ಏರ್, ಮಾರ್; ಮುಂದ, ಕುರ್; ಜಾರ್, ಕಳ; ಕೊಮ್, ಪದವು; ಮೇರ್, ಕಜ; ಇನ್ ಉಳ ಬೇ ಕಿಲ ಪೊಯ್, ಅಜ; ಬಾ, ಕಿಲ್; ಮೂರ್, ನಾಡು; ಪಾ, ಊರ್; ಪಯ್, ಅಳ್ಳೆ; ಪೆಜ, ಮಾಡಿ; ನಾ ಪಳ್ಳ; ಸಮ್ಮ, ಅಜಿ ಇತ್ಯಾದಿ.

ಕೆಳಗಿನವುಗಳಲ್ಲಿ ಅಂತ್ಯಾಕ್ಷರಗಳಾದ ಅ, ಕ, ರಿ, ವೆ, ವು, ಸೆ, ಮ, ಗೆ, ಸೆ, ದಿ ಈ ನಾಮವಾಚಕ ಪ್ರತ್ಯಯಗಳನ್ನು ಬಿಟ್ಟು ಜುಳಿಯುವ ರೂಪಗಳು ಲಕ್ಷ್ಯಾರ್ಹವು.

ಸಿರ್ಯ, ಬಾರ್ಯ, ಉಳ್ಯ, ಸೂರ್ಯ, ನೀರ್ಯ ತೋಡ್ಯ, ಕರ್ಯ, ಸಂಪ್ಯ, ಪೆರ್ಯ, ತಿನ್ಯ, ಎಲ್ಯ, ನೇಲ್ಯ ಅಳ್ಕೆ, ಮುಳ್ಕ, ಕಜ್ಕ, ಕೊಳ್ಕೆ, ಕರ್ಕೆ (ಕಳ್ಳ) ಕಟ್ಟೆರಿ, ಉಳ್ಳೆ, ಪಡ್ಡಿ, ಮೂಡ, ಕುಂಡ, ಉಳ್ಳ, ಕಳ್ಳ, ಒಡ್ಡು ಉಜ್ಜು), ಕುಡ್ಲ, ಪಡ್ಡ, ಬಲ್ಲ, ಕಾಜ, ಕೆಲ್ಲ, ಕರ್ಲ, ಮರ್ಲ, ತೊರ್ಲ, ಕಲ್ಲ, ಬಜಲ, ಉಡ್ಡು, ಪೊಳ್ಳ, ಕುಡ್ಲು, ಕೊಲ್ಲ, ಪುತ್ತಿಗೆ, ಮುಳ್ಳಿಗೆ, ಕಳ್ಳಗ, ತೊನಸ್ಕ, ಕುಮ್ಮ, ಕಿಂಜಾಸ, ಬನ್ನಾಸ, ಸಿರ್ಸ, (ಕುಲ್ಶಿರ). ಇರ್ದ, ಪದ್ಮುಡಿ ತೊಪ್ಪು, ತೊರ್ಮೆ, ಪಮ್ಮ.

ಇನ್ನು ಈ ಪಟ್ಟಿಯಲ್ಲಿ ಎಷ್ಟೋ ನುಡಿಗಳನ್ನು ತುಂಬಿ, ಅವನ್ನು ಒಂದು ಕ್ರಮಪದ್ಧತಿಲ್ಲಿ ಕೆಂದೊಡ್ಡಿ ಸೈಕಳ್ಕರಿಸಿ ನೋಡಿದರೆ, ಆ ನುಡಿಗಳು ಮೂಲದಲ್ಲಿ ಏಕಾಕ್ಷರಿಗಳೇ ಎಂಬ ಅನುಮಾನವು ಹುಟ್ಟುತ್ತದೆ.

ಉದಾಹರಣೆ:—ಉಯ್ಯೂರು,ಬಯ್ಯಾರ್,ಬಯ್ಯಂಗಡಿ ಬಯ್ಯು. ಬಯ್ ಎಂದರೆ ತುಳುವಿನಲ್ಲಿ ಒಣಹುಲ್ಲು. ಕಾವಲ್ ಮೂಡೂರ್, ಕಾವೂರ, ಕಾವಲಿ, ಕಾವು, ಕಾಪು ಕಾ ಎಂದರೆ ರಕ್ಷಿಸಿಕೊಳ್ಳು. ಕಾರ್‌ಕಳ, ಕಾರ್‌ನಾಡು, ಕಾರ್‌ಕ್ಳ (ಕಾಡಕ್ಕೆ) ಕಾರ್ ಎಂಬದು ಕಾಡು ಎಂಬದರ ರೂಪಭೇದ. ಕಾರ ಎಂಬದು ಅಕ್ಕಾರ (ಆ ಕಡೆ) ಇಕ್ಕಾರ (ಈ ಕಡೆ) ಎಂಬಿವುಗಳ ವಿಕೃತಿಯೆಂದೂ ಹೇಳುವರು; ತುಳು ಶಬ್ದಗಳಲ್ಲಿ ವ್ಯಥಮೂಕ್ಷರವು ಸ್ವರವಾಗಿದ್ದರೆ ಲೋಪವಿದೆ. ಉಸುಪು—ಮುಳ್ಳು ಒಣಗುಣಗುಸು ಉಲಿಪು—ಲಿಪ್ಪು; ಎಡ್ಡು—ರಡ್ಡ್. ಕಲ್ತೂರು, ಕಳಾರ, ಕಳ್ಳಿ, ಕಯ್ಕೆ—ಇವುಗಳಲ್ಲಿ ಕಳ್. ಕಸ್ತೂರು, ಕಸ್ತೂರ್, ಕಣಿಯೂರು, ಕಣ್ಣಿ—ಇವುಗಳಲ್ಲಿ ಕಣ್; ಈ ಕಣ್ ಮತ್ತು ಕಳ್ ಬಂದೇ. ಕಣ್ಣಾ, ಕಳ್ಳೆ (ಗದ್ದೆ).

ಕೆಲವು ಕಡೆ ಈ ಮೂಲಾಕ್ಷರಗಳ ಅರ್ಥವನ್ನು ನಿರ್ಧರವಾಗಿ ಹೇಳಬರುವುದಿಲ್ಲ.

ಕುಮ್ಮೆಲೆ (ಕುಂಬಲೆ), ಕುಮ್ಸೆ (ಕುಂಸೆ), ಕುಮ್ಟೆ (ಕುಂಟೆ), ಕುಮ್ಜ (ಕುಂಜ), ಕುಮ್ಮರಿ, ಕುಮೇರು, ಕುಮ್ಕಿ—ಇತ್ಯಾದಿಗಳಿಂದ ಕುಮ್ ಎಂಬ ಮೂಲರೂಪವು ಹೊರಬೀಳುತ್ತದೆ. ಅದೇ ಮೂಲರೂಪವೆಂಬದನ್ನು ಬಡಾಜೆ, ಕುಮ್ಬಡಾಜೆ, ಎಂಬ ಹೆಸರುಗಳೂ ಧೃಢಪಡಿಸುತ್ತವೆ. ಆದರೆ ಈ ಕುಮ್ ಯಾವ ಅರ್ಥದಲ್ಲಿ ಪ್ರಯೋಗವಾಗುತ್ತದೋ ಗೊತ್ತಾಗುವುದಿಲ್ಲ. ಕೋಣಾಗರು ಎಂದರ್ಥವೇ?

ನಡುವಜ (ಉಪ್ಪ ಆಜ), ಪೆದುವಜ (ದೊಡ್ಡ ಆಜ), ಸಂಪಾಜ (ತಂಪು ಆಜ), ಕಾರಂಜ (ಕಾಡು ಆಜ), ಅಜಕಳ (ಆಜದ ಕಳ)—ಈ ಹೆಸರುಗಳಿಂದ ಅಜ ಎಂಬ ನುಡಿಯು ಹೊರಬೀಳುತ್ತದೆ. ಆದರೆ ಜಪ್ಪು, ಜರ್ಪು, ಜಪ್ಪಳ ಎಂಬಿವುಗಳಿಂದ ಜ ಮಾತ್ರ ಹೊರಡುತ್ತದೆ. (ಜಪ್ಪು) ಜರ್ಪು ಎಂದರೆ ತುಳುವಿನಲ್ಲಿ ಮಲಗು, ಇಳಿ ಎಂದರ್ಥ. ಜರಿ, ಜಾರು, ಜಾರ್ ಇವನ್ನು ಹೋಲಿಸಬಹುದು. ಆಜ ಇದ್ದಲ್ಲಿ ಪೂರ್ವಸ್ವರವು ತಪ್ಪಿ ಜ ನಿಂತಿರಲೂ ಬಹುದು. (ಎಡ್ಡು—ರಡ್ಡು).

ಈ ಜಕಾರವು ಹಲವು ಹೆಸರುಗಳಲ್ಲಿ ನುಸುಳಿಕೊಂಡಿದೆ; ಉಚ್ಚಾರಣೆಗೆ ತೊಡಕಾಗದಂತೆ ಈ ಜಕಾರದ ಮುಂದೆ ಬಿಂದು ಬರುತ್ತದೆ. ಈ ಜಕ್ಕಾರಕ್ಕೆ ಚ, ದ, ತ, ಸಕಾರಗಳು ಅದೇಶವಾಗಿ ಬರುವುದೂ ಉಂಟು.

ಉದಾಹರಣೆ:—ಕಾರಂಜೆ (ಕಾರಂಜೆ), ಕಜಕಾರ, ಬಜಪೆ ಮಜಿಬೈಲ್, ಮಜಿ, ಸುಜಿರ, ಪಜಿರ, ಕುಂಜ, ಕಿಂಜಾರು, ಕಂಜಿಪಡ್ಪು ಕಂಜ, ಪೆಜ, ಮಜ, ಮುಂಜ, ಪೂಂಜ, ನಂಜ, ಮಂಜ; ಪೊನಂಜೆ, ಉಜಿರ

ಉದಿಯೂರ (ಉಜ್ಜಾರ್), ನಂದಾರ (ನಂಜಾರ) ಬಿದೂರ (ಬಿದೂರ್), ಬೆದಲಾಡಿ (ಬಿಜಲಾಡಿ). ಕಜ = ಒಂದು ಜಾತಿಯ ಹುಲ್ಲು. ಮಜ = ತೇಮವಾದ? ಪಜರ = ಹಸಿ ಹುಲ್ಲು. ಪಜ = ಹಸಿ.

ಈ ಮೂಲರೂಪಗಳನ್ನು ಲಕ್ಷಿಸಿದರೆ ತುಳು ನುಡಿಗಳು ಇತರ ಭಾಷೆಗಳಲ್ಲಿ ಸೇರಿರಬಹುದೊ ಎಂಬ ಸಂದೇಹವಾಗುತ್ತದೆ. ವಾಡಿ–ಇದು ತುಳು ಪಾಡಿ (ವಡು=ಒತ್ತಾಗಿರು ಎಂಬ ಧಾತು. ಪಟ್ಟೆ–ಒತ್ತಾಗಿದ್ದದ್ದು ಎಂದರ್ಥ. ಪಟ್ಟಮೊಗರು, ಪಟ್ಲಮೆ. ಪಟ್ಟಿ–ಪಟ್ಲ–ಪಟ್ಟ. ಪಡುಧಾತು. ಮೂಲರ ಪಟ್ಟ, ಬೊಕ್ಕಪಟ್ಟ. ಕುಂಜ–ಬಳ್ಳಿಮನೆ ಎಂದು ಸಂಸ್ಕೃತದಲ್ಲಿದೆ. ನೆಲ್ಲಿಕುಂಜ, ಕುಟಜ ತ್ವಗ್ರ, ಕುಂಜಾರ; ಕುಂ ಧಾತುವಿರಬೇಕು. ಬಜಾರ–ಹಿಂದುಸ್ಥಾನಿಯಲ್ಲಿ ಪೇಟೆ ಎಂದರ್ಥ. ಬಜ, ಬಜಪೆ, ಬಜಪೆ, ಬಜಾಲ್, ಬಜಾರ. ಬಂಜರ ಶಬ್ದವು ಬಿಂದು ಗೆಟ್ಟು ಬಜಾರಾಯಿತೇ? ಕುಮಕಿ–ಕುಂ ಧಾತುವಿನಿಂದ ಹುಟ್ಟಿತೇ?

ಇದು ವರೆಗೆ ಮಾಡಿದ ವಿಚಾರವು ಹೊಸ ಶಬ್ದಗಳ ಗುಟ್ಟನ್ನು ಕಂಡು ಹಿಡಿಯುವುದಕ್ಕೆ ಎಷ್ಟು ಮಟ್ಟಿಗೆಸಹಾಯಕವಾಗುತ್ತದೋ ನೋಡೋಣ!

ಸಿರೂರ್–ಸೀರ್ ಊರ್. ಸಿರಾಡಿ, ಸಿರಾಲೆ, ಸಿರ್ಲ. ಸಿರ್ ಎಂದರೆ ಸಣ್ಣದು ಕಳಗೆ ಎಂದೂ ಅರ್ಥವಿದೆ. ತೀರೂರು, ಇದು ಸೀರೂರಿನ ಇನ್ನೊಂದು ರೂಪ.

ಪಡಭಾಂಡೇಶ್ವರ–ಇದು ಒಡವು ಅನಂತೇಶ್ವರ ಎಂಬದರ ರೂಪಾಂತರ. ಒಡ, ಉಡ, ಅಡ= ಜೋಡಿಸಿರು, ಅಡ್ಡನಿರು ಎಂದೂ ಅರ್ಥವಿದೆ.

ಮೈಸೂರ್–ಮೆಯ್ ಪೂರ್ವಪದ (ಮೆಯ್ನಾಡು, ಮೆಯ್ಕಾರು); ಮೆಯ್ ಪರಪದ (ವಟ್ರಮೆಯ್ ಬೊಳ್ಳ). ಮೆಯ್=ಮೇಯಿಸುವುದು. ಸೂರು–ಸೂರ್ ಪೂರ್ವಪದ (ಸುರಾಲ, ಸೂರಂಜೆ); ಸೂರ್ ಪರಪದ ಹೂಸೂರು, ಅಯ್ಯೂರು, ಮಾಸೂರು) ಸೂರ್=ಸುತ್ತು, (ಸುರುಳಿ, ಸುಳಿ.)

ನೈಕುಂಠ—ನೆಯ್ಗುಂಟ (ನೆಯ್ ನಾಡು, ನೆಯ್ ಕೊಮ್ ಪೆರುನೆಯ್, ಗುಂಟೂರು, ಗುಂಟಕಲ್ಲು, ರೇಣಿಗುಂಟ) ನೆಯ್=ನೆರಳಾಗಿರು. ಗುಂಟ (ಕುಂಟೆ)=ನೀರಿನ ಕುಂಟೆ. ನೀರಿನ ಕುಂಟೆಯ ನೆರಳಾದ ಸ್ಥಳ.

(ಒನೇ ಪುಟಕ್ಕೆ ಮುಂದುವರಿಯದೆ.)

ಪ ಹ ರೆ.

ಲೇಖಕರು:–ಕುದ್ಪಿ ವಾಸುದೇವ ಶೆಣೈ, ಕರಂಗಲಪಾಡಿ.

ತನಿನವರನ್ನು ತಣಿಸಿ, ದಣಿನವರನ್ನು ದಣಿಸಿ, ದಣಿದ ದಿನಮಣಿಯು ದಿಗ್ವಿತೆಗಳನ್ನೆಲ್ಲ ಮಲಿನವಾಗಿಸಿ ವಿರಾಮಕ್ಕಾಗಿ ತೆರಳಿದನು. ಆ ತನಕ ಪ್ರಫುಲ್ಲವದನವನ್ನಿಟ್ಟುಕೊಳ್ಳಲೆತ್ನಿಸಿದ್ದ ಕುಮುದೆಯ ಮುಖವು ಕಳೆಗುಂದಿತು. ಅನಿವಾರ್ಯವಾಗಿ ಎದ್ದು, ಸಣ್ಣ ದೀಪವನ್ನೆತ್ತಿ ಉರಿಸಿಟ್ಟಳು. ಕುಮುದೆಗಾಗಿ, ಹೆಚ್ಚಿನ ಸಹಾನುಭೂತಿಯನ್ನು ತೋರಲಾಪದ ಆ ದೀಪವು ಹೊಗೆ ಉಡುತ್ತ ಉರಿಯ ತೊಡಗಿತು. ಕುಮುದೆಯು ಆ ದೀಪವನ್ನೇ ದಿಟ್ಟಿಸುತ್ತ ಕುಳಿತಳು. ಅವಳ ಮನಸ್ಸು ಅದಾವುದೋ ದೂರದ ಸಾಮ್ರಾಜ್ಯದಲ್ಲಿ ಭ್ರಮಣ ಮಾಡುತಿತ್ತು.

ಕೊತಡಿಯ ಒಂದು ಬದಿಯಿಂದ ಕ್ಷೀಣ ಸ್ವರವೊಂದು 'ಅಮ್ಮಾ' ಎಂದು ಕೂಗಿತು. ಕುಮುದೆಯು ತಟ್ಟನೆ ಎದ್ದು ಆ ಕಡೆಗೆ ನಡೆದು, 'ಏನೆಮ್ಮಾ?' ಎಂದು ಕೇಳಿದಳು.

'ಮಗುವು ಒಂದರೆ ನಿಮಿಷ ಏನನ್ನೋ ಯೋಚಿಸುತ್ತ, 'ಅಮ್ಮಾ, ಅಪ್ಪನು ಬರಲಿಲ್ಲವೇ?' ಎಂದು ಪ್ರಶ್ನಿಸಿತು.

'ಇಲ್ಲ.'

'ಈ ದಿನ ಬರುವನಲ್ಲವೇ?'

'ಆಹುದು ಮಗು; ಕೊಂಚ ಹೊತ್ತಿನಲ್ಲಿ ಬರುವರು. ಆದರೆ, ನೀನು ಎಚ್ಚರವಾಗಿರಬೇಕಾದುದಿಲ್ಲ; ನಿದ್ದೆ ಮಾಡು.'

ಮಗುವು, ತನ್ನ ಕಿಸ್ಸ ಕುಡಿಗಳನ್ನು, ಚೀತನ ಪೂರ್ಣವಾದಂಥ ಸಾಲಗೆಯಂತೆ ಸರಿಯಿಸಿ, 'ಅಲ್ಲಿ, ನನ್ನ ನಿದ್ದೆ ಬಾರ್ತಮ್ಮ. ನನಗೆ ಬಾಯಾರಿದೆಯಮ್ಮ! ಎಂದಿತು.'

ಕುಮುದೆಯು ಸಮೀಪದಲ್ಲಿರಿಸಿದ್ದ ತಟ್ಟೆಯಿಂದ ಸ್ವಲ್ಪ ನೀರನ್ನು ತೆಗೆದು ಮಗುವಿನ ಬಾಯಿಗೆ ಗುಟುಕು ಗುಟುಕಾಗಿ ಬಿಟ್ಟಳು. ನೀರನ್ನು ಕುಡಿದು ಮಗುವು ಪುನಃ ಪ್ರಶ್ನೆ ಮಾಡಿತು. ಅಮ್ಮಾ, ನಿನ್ನ ಊಟವಾಯಿತೇ? '

'ಇಲ್ಲ ಮನೂ, ಇನ್ನು ಮಾಡಬೇಕಾಗಿದೆ.'

'ಅಮ್ಮಾ, ನಾನು ಊಟಮಾಡುವುದಾವಾಗ?'

'ನೀನು ಸೌಖ್ಯವಾಗನು; ಆ ಮೇಲೆ ನಿತ್ಯವೂ ಊಟವಲ್ಲನೇ?'

'ನೋಡು, ನಾನು ಸೌಖ್ಯವಾಗಬೇಕೆನ್ನುವೆ. ಯಾವಾಗಲೂ ಹಾಗೆಯೇ ಹೇಳುತ್ತಿರುವೆ. ನಾನು ಸೌಖ್ಯವಾಗುವುದೆಂದರೆ ಯಾವಾಗ? ನನಗೀಗ ಜ್ವರವಿದೆಯೇ?'

'ಅಹುದು ಮಗು, ಕೊಂಚವಿದೆ.'

'ಅಹು ಎಂದೆಂದೂ ನಿಲ್ಲುವುದಕ್ಕಿಲ್ಲವೇ?'

'ಇದೆ. ನೀನು ಬೇಗನೆ ಗುಣಹೊಂದುವೆ.'

'ಬೇಗನೆ?—ಯಾವಾಗ? ಎರಡು ದಿನಗಳಲ್ಲೇ?'

'ಅಹುದಹುದು.'

ಮಗುವಿಗೆ ತುಂಬಾ ಯೋಚನೆಯಿಟ್ಟಿತು. ಎರಡೇ ದಿನಗಳಲ್ಲಿ!–ಕಾಯ ಸೌಖ್ಯವಾದ ಮೇಲೆ ಇಂಥ ಖಾದ್ಯ ಪದಾರ್ಥಗಳನ್ನೆಷ್ಟುವೆಯಬೇಕು!–ಇಂಥವೆರೊಡನೆ ಇಂಥಿಂಥ ಆಟಗಳನ್ನು ಆಡಬೇಕು!–ಎಂಥ ಸುಖ!

ತಡೆಯಲಾರದೆ ಮಗುವು, ಮುಖವರಳಿ, ಆವೇಶದಿಂದ ನುಡಿಯಿತು; 'ಅಮ್ಮಾ, ನಾನು ಸೌಖ್ಯವಾದ ಮೇಲೆ ನಾನು ಕೇಳಿದ ತಿಂದಿಗಳನ್ನೆಲ್ಲ ನೀನು ಕೊಡಬೇಕು!'

'ನನ್ನ ಅಮ್ಮನ್ನಿಗೆ ಕೊಡದಿರುವೆನೇ?'

'ನಾನು ರಾಜುನೊಡನೆ ಓಡಾಡುವಾಗ 'ಇತ್ತ ಬಾರೇ ಮನೂ' ಎಂದು ನನ್ನನ್ನು ಕರೆದು, 'ಎಣ್ಣೆ ತಾ, ಕಾಳು ತಾ' ಎಂದು ಹೇಳುವಾರದು!'

'ಇಲ್ಲ ಅಪ್ಪಾ!'

'ಮತ್ತೆ ನಾನು ಶಾಲೆಗೆ ಹೋಗುವಾಗ ನನಗೊಂದು ಹೊಸ ಕೊಡೆ ಕೊಡಬೇಕಮ್ಮ. ಇನ್ನು ನಾನು ರಾಜುವಿನ ಕೊಡೆಗಾಗಿ ಕಾದಿರಲಾರೆ. ಆಕೆ ಎಂದೆಂದೂ ನನ್ನನ್ನು ಮೈತುಂಬ ನೆನೆಯಿಸಿ, ಹಾಗೇಕೆ ಮಾಡಿದೆಯೆಂದಾಗ 'ನಿತ್ಯವೂ ಕೊಡೆಯಲ್ಲಿದ್ದರೆ ಶಾಲೆಗೇಕೆ ಬರುವೆ?' ನಿನ್ನ ಅಪ್ಪನಿಗೆ ಕುಡಿಯಲಿಕ್ಕೆ ಮಾತ್ರ ಗೊತ್ತೇ?, ಒಂದು ಕೊಡೆಯನ್ನು ಕೊಂಡುಕೊಡುವಂತೆ ಹೇಳು!' ಎಂದು ಗದರಿಸುವಳೆಮ್ಮ.–ನಾ ರಾಜು! ಕೊಡೆಯೊಂದು ಹೊಸತಾಗಿ ನನಗೆ ಬೇಕೇ ಬೇಕು!'

ಕುಮುದೆಯು ಮೌನವಾಗಿದ್ದಳು. ಆಕೆಯ ಹೃದಯ ಭಾರವನ್ನೆಷ್ಟು ಈ ಹಸುಳೆ ಬಲ್ಲುದೇನು?

ಮಗುವು ಮತ್ತೂ ಕಾಡಿತು; 'ಕೊಡೆ, ತೀಯುತೇ ನಮ್ಮ!'

'ಆಹುದಹುದು!'

'ಅಣ್ಣ ಬಾರು ರಾಮುಮಿಷಿಂಗ್- ಕಾತೆ ಕೋಗ ಕಿಣ್ಣೆ, ಎಂಬ ಮಕ್ಕಳ ಕೂಗಾಟಕ್ಕೆ ಮುಗ್ಧರೆಕ್ಕೆ, ಕಣ್ಣ ಕೊಂ ಕಂಡ- ತಿಳ್ದುಬೀಳ್ಸು!!

'ಬೇಗ ಕುಮುದಿ ಏಳ್ಸು ಮಗು.'

'ಇಲ್ಲ, ನಿದ್ದೆಯಿಲ್ಲ ಅಮ್ಮಾ. ಅವ್ಯಸೊನೆ ನಾನು ಮಾತಾಡಲೇಬೇಕು. ಅವನೆಂದು ಬರುವನು?'

'ಅವರು ಬರಲು ಹೊತ್ತಿದೆ ಮನೂ; ನೀನು ಮಲಗಿ ಕೋ ಎಂದೆನ್ನಲ್ಲ!'

'ಇರಲಮ್ಮ... ಅಮ್ಮ ಕುಡಿಯುವುದೆಂದರೇನಮ್ಮ?'

ಕುಮುದಿಗೆ, ಹೃದಯವನ್ನು ಕಲುಕಿಸಿಬಿಟ್ಟಂತಾಯಿತು. ಮುಗುವಿನ ನಿಮಲ ಮಾತುಗಳು ಮತ್ತು ಆಕೆಯ ಎದೆಯನ್ನು ಸಿಡಿದುವು.

''ರಾಜುವ ಹೇಳುವಲ್ಲ,— ಕುಡಿವುದೆಂದರೆ ಕೆಟ್ಟದೆಂದು? ನಾನು ಕುಡಿತಿಲ್ಲವೇ?—ನೀನು ಕುಡಿವುದಿಲ್ಲವೇ? ಹಾಗೆಯೇ, ನೀನೂ ಕುಡಿವುದಲ್ಲವೇ ರಾಜು?—ನಿನ್ನ ಅಪ್ಪನು ಕುಡಿದರೆ ಮಾತ್ರ ಕೆಟ್ಟುದು ಹೇಗೆ?' ಎಂದು ನಾನು ಕೇಳಿದೆ. ಅದಕ್ಕಮ್ಮಾ.....ನನಗೆ ತೋಪ ಬರುವುದೆಮ್ಮಾ .....ನಕ್ಕಪ್ಪನು ಕುಡಿವುದು ಮಾತ್ರ ಕೆಟ್ಟದೆಂದು ಅವಳ ತಾಯಿಯು ಮಾತಾಡುತ್ತಿದ್ದಳೆಂದು- ಹೇಳಿದಳಮ್ಮ!-ಕೆಟ್ಟ ರಾಜು! ಇನ್ನು ನಾನು ಅಳಯೊಡನೆ ಮಾತಾಡಕೂಡದೇ?''

''ಬೇಡ.''

'ಆದರೆ, ಕುಡಿವುದೆಂದರೇನು?'

ಹೊರಗೆ ಕಾಲುಗಳ ಸಪ್ಪಳ ಕೇಳಿಸಿತು. ಅದರೊಡನೆ ಈ ವಾಕ್ಸರಣಿಯು ತೇಲಿಕೊಂಡು ಬಂತು;—'ವಿಕೆಟಿಂಗ್—ವಿಕ್, ವಿಟ್, ಇಂಗ್—ವಿಕ್, ವಿಕ್, ಇಂಗ್—ವೀ, ಕೆಟ್ ಇಂಗ್—ವೀ ವಿಂಗ್—ವಿಂಗ್—ವಿಂವಿಂಗ್.....' ಬಾಗಿಲು ಬಲವಾಗಿ ನೂಕಲ್ಪಟ್ಟು, ಕೆಂಗಣ್ಣಿನ ಕರಾಳ ಮಾನವ ಚೀರಿಯೊಂದು ಆ ಹರಕು ಕೊಠಡಿಯನ್ನು ಪ್ರವೇಶಿಸಿತು!

ಕುಮುದಿಯು ಅತ್ತ ಕಡೆ ಹೊರಳಿ ನೋಡಿ, ಮುಸಿ ಮುಖ ತಿರುಗಿಸಿಕೊಂಡಳು. ಮಗುವು ಹ್ಞಾಸಿಗೆಯಲ್ಲಿದ್ದು ಕುಳಿತುಕೊಳ್ಳಲೆತ್ನಿಸಿ, ಸಫಲವಾಗದೆ, ತಲೆಯನ್ನು ಮಾತ್ರ ಬಾಗಿಲ ಕಡೆಗೆತಿರುಗಿಸಿ, ''ಅಪ್ಪ ಬಂದ!'' ಎಂದು ಸಂತೋಷದಿಂದ ಕೂಗಾಡಿತು.

ಅರಂಗುಲ ಉದ್ದಕ್ಕೆ ಬೆಳೆದ ಕೂದಲುಳ್ಳ ತಲೆ, ನಾಲ್ಕಂಗುಲದ ಹಣೆ; ಕೆಂಪಡರಿದ ಕಣ್ಣುಗಳೆರಡು; ಮುಖ ತುಂಬ ಗಡ್ಡ; ಬಾಗಿ ಸಂಕೋಚಿಸಿಕೊಂಡ ಭುಜಗಳು; ಗುಂಡಿಯಿಲ್ಲದ ಅಂಗಿಯ ಕೆಳಗೆ ಕೊಳಕಾದ ಬಂಡಿ; ಇವಿಷ್ಟು ಕೂಡಿದರೆ ಒರ್ವ ಸಂಪತನಾಗುವನು. ಆ ಸಂಪತನು ಕುಮುದಿಯ ಗಂಡ!— ಈ ಚಂದ್ರಮನನ್ನು ಮುಸುಕಿದ ಮೋಡ!

ಸಂಪತನು ಒಳಗೆ ಪ್ರವೇಶಿಸಿದವನೇ ಬಾಗಿಲನ್ನು ಮುಚ್ಚದೆ ಅಸ್ಪಷ್ಟ ಹೆಜ್ಜೆಗಳನ್ನಿಕ್ಕುತ್ತ ಕೊಠಡಿಯದೊಂದು ಮೂಲೆಗೆ ಹೋಗಿ ಬಿದ್ದುಬಿಟ್ಟನು. ಕುಮುದಿಯು ಈ ಮಾನವ ವ್ಯಾಣಿಯನ್ನು ಸಹಿಸಲಾಗದೆ ನೋಡಿ,—ನೋಡಿ ಸಹಿಸದಾದಳು. ಮಗುವು ಕೂಗಿತು: 'ಅಪ್ಪ....'

ಸಂಪತನು ಮಗುವಿನ ನಿಸ್ತೇಜ ಮೊಗವನ್ನು ಕಾಣಲಿಲ್ಲ; ಮುಮತೆಯ ವಚನವನ್ನಾಲಿಸಲಿಲ್ಲ. ತನ್ನ ಸಂಗೀತವನ್ನು ಮುಂದೆರಿಸಿದನು: 'ಇಂಗ್, ಇಂಗ್, ಇಂಗ್, ವಿಕೆಟಿಂಗ್. ವಿಕ್, ವಿಟ್ ಇಕ್ ಇಕ್ ಇಂಗ್! ಕುಮುದ, ಎಲ್ಲಾ ಇಂಗ್, ವಿಕೆಟಿಂಗ್! ಒಳಗೆ ಹೊರಗೆ ಮೇಲೆ ಕೆಳಗೆ ಎಲ್ಲಾ ಇಂಗಿಂಗ್! ಹೂ, ಹೂ! ವಿಸಿ ಇಲ್ಲ ಕೂದಲಿಲ್ಲ— ಅಲ್ಲ, ಕೂದಲುಂಟು ವಿಸಿ ಇಲ್ಲ — ಹುಡುಗಿಯರು! 'ಕುಡಿಯ ಬೇಡಣ್ಣಾ ಅಂತೆ!—ಇಲ್ಲ ವಿಸಿ! ನಾನು ಕೇಳಿದೆ, ಹೇಳಿದೆ, ಬೇಕಿದೆ ಕುಡಿದೆ! ಕುಡಿದು ಕುಡಿದು ಬೇಕೆದೆ ಎದ್ದು ಕುಡಿದೆ! ಹೇಳಲೇ ಇಲ್ಲ ಹುಡುಗಿಯರು ಕೇಳಲೇ ಇಲ್ಲ! ವಿಸಿಯೂ ಇಲ್ಲ! ಪೂಸ್! ಒಂದು, ಎರಡು ಹುಡುಗಿಯರೆಲ್ಲಾ ಹುಡುಗಿಯರು—ಕೇಳಿದರೆ ವಿಕೆಟಿಂಗ್ಗೂ ಕುಮುದಿ! ಹುಡುಗಿಯರು, ಆಡಗಾರರ ಹುಡುಗಿಯರು!'

— ಮಗುವು ಬಿಕ್ಕಾಯಿತು. ಕುಮುದಿಯು ಮೌನವಾಗಿ ಕೇಳಿದಳು. ಸಂಪತನು ಮುಂದೆ ಒಡಲುತ್ತಲೇ ನಡೆದನು:

'ಏಳ್ಸು ಕುಮುದಿ! ಹುಡುಗಿಯೆಲ್ಲಾ ಪಡಗಿನ? ಎಲ್ಲಾ ಮೋಡ! ಗಾಂಧಿ ಮುಕ್ಕ ತೀಂದು ಮುಸು ಮೋಸಿ ಕುಮ್ಮು ಕುರಿವರಿಗೆ ಏಳಿಂಗ್!—ಕಾಲಿಗಾರಂಗೆ!'

ಮಗುವು ಕೊಂಚ ತೇಗನೆಗೊಂಡು, ವೈಶಿ 'ಅಪ್ಪಾ' ಎಂಬುದು.

ಸಂಪತನ ಕೆಂಪು ಕಣ್ಣುಗಳು ಕೆಂಪಡಾರುವ 'ಅಪ್ಪಾ ಅಪ್ಪಾ!—ಇಲ್ಲ ಊರಲ್ಲಿ ಮುಕ್ಕ! ನನ್ನಪ್ಪ ನನ್ನಪ್ಪ ಸುಮ್ಮನೆ ಅಪ್ಪ! ಗಾಂಧಿಯೂ ಅಪ್ಪನಂತೆ! ಅವನೂ ವಿಕೆಟಿಂಗ್, ನೀನೂ ವಿಕೆಟಿಂಗ್..... .....'

ಕುಮುದಿಯ ಕಣ್ಣುಗಳಲ್ಲಿ ನೀರಹನಿಗಳು ಕಾಣಿಸಿಕೊಂಡವು. 'ಮನುವು ನಿಮ್ಮೊಂದಿಗೆ ಮಾತಾಡಬೇಕೆಂದು ಎಷ್ಟರವಾರಿಯಳು' ಎಂದಳು.

ಸಂಪತನಿಗೆ ಅಂದು, ತೇಂದಿ ಅಂಗಡಿಯ ಮುಂದೆ ವಿಕೆಟಿಂಗ್ ನಡೆಸುವ ಹುಡುಗಿಯರು ತಡೆದ ಕಾರಣ ಪ್ರಪಂಚದ ಮೇಲಿನ ವಿಶ್ವಾಸವೇ ಕಳಚಿ ಹೋಗಿದ್ದಿತು. ಎಂದನು: 'ಏಲ್ಲಾ ಸುಳ್ಳು ಕುಮುದಿ. ನೀನೂ ಸುಳ್ಳು, ಮನುವೂ ಸುಳ್ಳು! ಎಲ್ಲಾ ವಿಕೆಟಿಂಗ್. ಕೇಳಿದರೆಲ್ಲ ವಿಕೆಟಿಂಗ್. ಧುಡ್ಡು ಕೊಟ್ಟರೂ ವಿಕೆಟಿಂಗ್! ಕೊಟ್ಟುಕೊಟ್ಟು ವಿಕೆಟಿಂಗ್! ಕೂಡದಿದ್ದರೆ ಕಿಕ್ಕಿಂಗ್!'

ಮಗುವು ಮೌನವಾಯಿತು. ಕುಮುದಿಯೂ ಮಾತೆತ್ತಲಿಲ್ಲ. ಸಂಪತನು ಅರೆ ತಾನಿನ 'ತನಕ ಚೀರಾಡಿ, ನೆಗಾಡಿ 'ಇಂಗ್—ಇಂಗ್' ಸಂಗೀತವನ್ನು ಹಾಡುತ್ತಾ ಅಲ್ಲೇ ಅಡ್ಡಾಡಿದನು. ಯಾರಿಗೂ ಅನ್ಯಾಹಾರವಿಲ್ಲ, ನೀರಿಲ್ಲ.

ಮೇಕಗಳೆರಡು ಆ ವ್ಯಾಪ್ತಿಯಿರುವ ಗವಿಯಲ್ಲಿ ನಿದ್ರಾವಶವಾದವು. ವ್ಯಾಪ್ತಿ?—ಛೆ! ವ್ಯಾಪ್ತವು 'ಪಕ್ಷಿಪ್ರೇಮ' ವನ್ನು ಬಲ್ಲುದು; 'ಪುತ್ರ ಪ್ರೇಮ'ವನ್ನೂ ಬಲ್ಲುದು. ಸಂಪತನು....ವ್ಯಾಪ್ತನಲ್ಲ; ಅದೆಕ್ಕಿಂತಲೂ ಲಕ್ಷ ಪಾಲು ಕೀಳು. ಸುರಾದೇವಿಯ ಮಡಿಲಲ್ಲಿ ಬೆಳೆದ ಭೀಷಣಕೊಸು!—ಪ್ರಪಂಚ ವನ್ನರಿಯಲಾಪದ ಜೀವನ್ಮೃತನು!!—ಸ್ವ-ಪರಹಾನಿಗಳನ್ನು ಮಾತ್ರ ಬಲ್ಲ ಕರಾಳಯಂತ್ರ!!!

ಅನಂತಮಹಿಮಳಾದ ನಿಶಿಯು ಇಂಥ ಅನಂತ ಭೀಷಣ ದೃಶ್ಯಗಳನ್ನು ಜಡನೇತ್ರಗಳಿಂದ ಮರೆಯಿಸಿ ಅನಂತಾಕಾಶದಲ್ಲಿ ಮೆರೆದಳು. ಅನಂತನು ಮಾತ್ರ ಅನಂತಲೋಚನಗಳಿಂದಿದನ್ನು ನೋಡಿ ಅನಂತಾಲೋಚನೆಗಳಗೊಳಗಾದನು.

ನೀರಿನ ಅಂತರಾಳದಲ್ಲಿದ್ದರೂ ಮುಕ್ಷವು ನೀರಿನಲ್ಲಾದ ತಾಡನವನ್ನು ತಿಳಿಯಂತೆ, ನಿದ್ದೆಯಲ್ಲಿದ್ದರೂ ಸಂಪತನ ಗುಡಿಸಲಲ್ಲಿ ಏಂದು ಮಾತ್ರ ಹೃದಯವು ಆಕಸ್ಮಿಕವಾಗಿ ಕಂಪಿಸಿತು. ಕುಮುದಿಯು ತಟ್ಟನೆದ್ದು ಕುಳಿತು, ನೇತ್ರಯುಗಗಳನ್ನು ಅಗಲವಾಗಿಸಿದಳು. ಅದಾವುದೋ ಒಂದು ವಿಧದ ನಿಗೂಢ ಭೀತಿಯಿಂದಾದ ಚಳಿಯಿಂದಾಕೆಗೆ, ತಾನು ಹಿಮಾಲಯದ ಕಂದರದಲ್ಲಿ ಕುಳಿತಂತೆನಿಸಿತು. ತಾನು 'ಅಮ್ಮಾ' ಎಂಬ ಕೃಣ ಸ್ವರವನ್ನು ಕೇಳಿದನೇ, ಅಥವಾ ಕನವರಿಸುತ್ತಿರುವೆನೇ ಎಂಬುದು ಆಕೆಗೆ ತಿಳಿಯದಾಯಿತು. 'ಮನೂ, ಕಲೆದೆಯೇ ನಮ್ಮೆ?' ಎಂದು ಮಮತಾವಾಣಿಯಿಂದ ಕೇಳಿದಳು; ಉತ್ತರವಿಲ್ಲ! ಮತ್ತೊಮ್ಮೆ ಹೃದಯವು ಬಲವಾಗಿ ಕಂಪಿಸಿತು. ಆ ಭೀತಿ!

ಮರುಕ್ಷಣದಲ್ಲಿ ದೀಪವನ್ನುರಿಸಿ, ಅಡಸ್ಪೆತ್ತಿ ಮಗುವಿನ ಕಡೆಗೆ ನೋಡಿದಳು. ಅದೇನು?—ಬಾಲೆಯ ನಿಸ್ತೇಜವರಂತು, ಸುಂದರವಾದ ಮುಖವು ಇದೇಕೆ ಹೀಗೆ?—ಬಾಯಿಯು ತೆರೆದುಕೊಂಡಿದೆ! ಕಣ್ಣುಗಳು ಶಾಂತ ನಿದ್ರಾ ಸೂಚಕವಾಗಿ ಮುಚ್ಚಿಕೊಂಡಿರುವುದೇನೋ ನಿಜ; ಆದರೆ, ಹುಚ್ಚಲನೆಯು ಕಾಣುವುದೇ? — ಕುಮುದಿಯ ಭೀತಿಯು ದ್ವಿಗುಣತವಾಯಿತು. ಚಳಿಯ ಆಭಾಸವಾದರೂ ಆಕೆಯ ಹತ್ತಿಯಲ್ಲಿ ಬೆವರ ಹನಿಗಳು ಕಾಣಿಸಿಕೊಂಡವು. ತನ್ನ ಕೈಯನ್ನು ಮಗುವಿನ ಎದೆಯ ಮೇಲಿರಿಸಿದಳೆ; ಮರು ಕ್ಷಣದಲ್ಲಿ ಅವಳ ಆರ್ತನಾದವು ದಿಗಂತವನ್ನೆ ಭೇದಿಸಿ ಹೊರಟಿತು!

ಆ ಹಳ್ಳಿಯಲ್ಲಿ ಆ ಆರ್ತಿಯ ಕೂಗು ಅಂದು ಯಾರಿಗೂ ಕೇಳಿಸಲಿಲ್ಲ. ಕೇಡವನ ನಾತಿನಲ್ಲಾದರೂ ಅದು ಅರಣ್ಯ ರೋದನವೇ ಆಯಿತು. ಕಂಪರ್ಯಂತ ಮದ್ಯಪ್ರಾತನ ಮಾಡಿ ಪ್ರಪಂಚವನ್ನೇ ಮರೆತು ನಿದ್ರಿಸುವ ಸಂಪತನಿಗೂ ಅದು ಕೇಳಿಸಲಿಲ್ಲ!

ಅಹುದು;—ಕ್ರಿಮಿಕೀಟಗಳು ಮರುಳಗೊಂಡವು; ನೈತ್ಯಗಳು ಸುಯ್ಯೆಂದು ನಿಟ್ಟುಸಿರಿಟ್ಟವು; ರಾಯುವು ಸಹಾನುಭೂತಿಯ ಸಂದೇಶವನ್ನರುಹುವ ತೆರೆಗಳನ್ನು ಗುಡಿ ಸಂಪತ ನಿರ್ಗಮನ ಗೋಡೆಗಳೂ ಎಚ್ಚರಗೊಂಡು ಬೇಡ ಪ್ರಶ್ನೆ ಮಾಡುತ್ತಿರುವಂತೆ ತೋರಿತು; ಆದರೆ, ಸಂಪತನು ಮಾತ್ರ ಈ ಲೋಕಕ್ಕೆ ಸಂಬಂಧಪಟ್ಟವನೆನ್ನಲ!

ಕುಮುದಿಯ ರೋದನದ ಧ್ವನಿಯು ಕಡಿಮೆಯಾಯಿತು. ಎದ್ದು, ಪತಿಯನ್ನು ಬಲವಾಗಿ ಅಲುಗಾಡಿಸಿದಳು. ಆದರೆ, ಸಂಪತನಿಗೆ ಕುಮುದಿಯ ಛಾಪೆಯೇ ತಿಳಿಯದು. ಅವನ ವರವಾಗಿ ಸುರಾದೇವಿಯು ಉತ್ತರಕೊಟ್ಟಳು. 'ವಿಕೆಟಿಂಗ್ ಇಂಗಿಂಗ್, ವಿಕ್ಕಿಂಗ್, ಕಿಕ್ಕಿಂಗ್!'

ಹಾಯ್, ಕುಮುದಿ! ನೀನು ಕೆಸೆರನಲ್ಲೇ ಬೆಳೆದು ಬೇಕೇ?

ಸಹಸ್ರ ವರ್ಷಗಳ ಕೆಳಗಿನ ಕಾತಿಯ ಸ್ಮಶಾನದಲ್ಲಿನ ಅತ್ಯವಲ್ಲವಿದ್ದು;—ಚಂದ್ರಮತಿಯು— ಲೋಹಿತಾಸ್ಯನ ಕರವನ್ನು ತೊಡೆಯಲ್ಲಿರಿಸಿ, ಆ ಗಾಢ ನಿಶಿಯಲ್ಲಿ ವರಮಾತ್ಮನಲ್ಲಿ ಮೊರೆಯಿಟ್ಟಳು!

* * * *

ಮುಂಜಾನೆ ಕುಮುದಿಯ ವಂಚಿತಕೊಟ್ಟಿಲು ಅಲ್ಲಿಗೆ ಬಂದಾಗ,—ನಸ್ಸ ಚೇತನ ವಿಹೀನ ಬಾಲೆಯ ಅಸ್ಪಸಂದರವನ್ನು ತೊಡೆಯಲ್ಲಿಟ್ಟು ಕುಳಿತು ನಗುತ್ತಿರುವ ಕುಮುದಿಯನ್ನು ನೋಡಿ ಬೆರಗಾದಳು; ಭಯಗೊಂಡಳು!

ಅದು ಹಳ್ಳಿಯು; ನಿಜ- ನಗರದ ವೇಟಿಗಳಲ್ಲಿನ ವಿಲಾಸ ಸಾಮಗ್ರಿಯಗಳೂ ಸಾಧನಗಳೂ ಅಲ್ಲಿರಲಿಲ್ಲ;— ಅದೂ ನಿಜ. ಆದರೆ, ಭೋಗಾಧಿಲಾಷಿಗೆ, ಕನ್ನ ವಾಂಛಿತ ಭೋಗಕ್ಕಾಗಿ ನಗರವೇ ಆವಶ್ಯಕವೆಂದಿಲ್ಲ. ದುಷ್ಕರ್ಮ ಸಾಧನೆಗೆ ಹಳ್ಳಿಯೂ ಯಥೇಷ್ಟ ವಸ್ತುಗಳನ್ನೊದಗಿಸಿ ಕೊಡಬಲ್ಲುದು..

ಮಧ್ಯದ ಮಾತು—ಮದ್ಯಕ್ಕೆ ನಗರವೇ ವ್ಯಾಮುಖ್ಯವೇ?—ಅಲ್ಲ. ಹಳ್ಳಿ.....ಅದರ ಉಗಮಸ್ಥಾನ! ಹಳ್ಳಿಯ ಕೃಪೆಯಿಂದಲೇ ನಗರದ ಲಕ್ಷ ಕಂಠ ನಾಳಗಳು ಸುರೆಯನ್ನು ಸುರಿದುಕೊಳ್ಳುವುವು- ಅದು ಕಾರಣ, ನಗರವಾಸಿಗಳೇ ಮದ್ಯವಾಯಿಗೆಸ್ಪಲಾಗದು.

ಅಹುದು, ಅದು ಹಳ್ಳಿಯು. ಅಲ್ಲೊಂದು ಮದ್ಯದ ಗುಡಿಯು. ಮೂರು ಮೈಲುಗಳ ವ್ಯಾಸಕ್ಕೆ ವಾಸವಾಗಿರುವ ಸುರಾ ಭಕ್ತರಿಗೆ ಇಲ್ಲೇ ಉಪವಾಸೆ.

'ಶಾಸನಭಂಗ' ಚಳವಳಿಯ ಗ್ರಾಮಾಂತರಗಳಲ್ಲೂ ಹರಡಿ, ರಾಜಕೀಯ ವಿಷಯಗಳನ್ನರಿಯದ ಪಾಮರರಿಸಿದ ಗ್ರಾಮವಾಸಿಗಳಲ್ಲೂ ವಿವೇಕೋದಯವನ್ನುಂಟು ಮಾಡಿತ್ತು. ಎರಡನೇ ಬುದ್ಧನ ಬೋಧನೆಯು ಅಲ್ಲಿಗೆ ಮುಟ್ಟಿತು. ಅದುಕಾರಣ ಇಂದು ಅಲ್ಲಿ, ಮಧ್ಯದ ಗುಡಿಯ ಮುಂದೆ ಈರ್ವರು ಲಲನೆಯರು ನಿಂತು ಕೆಲವು ದಿನಗಳಿಂದ ನಡೆಯುಬಂದಂತೆ ವಹರೆ (ವಿಕೆಟಿಂಗ್) ನಡೆಸುತ್ತಿದ್ದರು. ನೂರು ಜನರು ಆ ಗುಡಿಯೆದುರಲ್ಲಿ ನಿಂತು, ಆ ಲಲನೆಯರ ಕಂಠದಿಂದ 'ಮದ್ಯವಾನ ಮಾಡದಿರು' ಎಂದು ಹೊಸಹಾಡಾ ಕೊಳಲದನಿಯನ್ನು ಕೇಳಿ ಆನಂದಿಸುತ್ತಿದ್ದರು. ಸಮಯ— ಆರು ಘಂಟೆ; ಸೂರ್ಯಾಸ್ತಮಾನ.

ಇನ್ನೊರು ಕಣ್ಣುಸಳ ತೀಕ್ಷಾಯುಕ್ತ ದೃಷ್ಟಿಯನ್ನು ಅಗಣ್ಯ ಮಾಡಿ, 'ಮಾನವ'ನೆಂದು ಯಾರಿಂದಲೂ ಕರೆಯಲ್ಪಡುತ್ತಿದ್ದ ಪ್ರಾಣಿಯೊಂದು ನೆಟ್ಟಗೆ ಆ ಗುಡಿಯ ಮುಂದೆ ಬಂತು. ಬಂದು ಒಳಹೊಕ್ಕುವೆನೆನ್ನುವಾಗ ಲಲನಾದ್ವಯದ ನಾಲ್ಕು ಕೈಗಳು ಆ ಜೀವಿಯನ್ನು ತಡೆದುವು; ಕೋಮಲವಾಣಿ 'ಹೋಗದಿರು, ಕೈ ಮುಕಿಯುವೆವು; ಮದ್ಯವೆ ಮರಣವು' ಎಂದಿತು. ಸಂಪತನು ತಲೆಯೆತ್ತಿ ನೋಡಿ ಆ ಲಲನೆಯರೆಲ್ಲೋರ್ವಳನ್ನು ಗುರುತಿಸಿ, 'ಏನು, ನೀನೇ ಕುಮುದಿ!' ಎಂದು ಸಪೀದಾರ್ಢ್ಯದಿಂದ ಕೇಳಿದನು.

'ಕುಮುದಿ?—ಅಹುದು. ಆದರೆ, ಅರಳಿದ ಕುಮುದವಲ್ಲ' ಎಂದೇ ಕುಮುದಿಯು ಉತ್ತರವಿತ್ತಳು. 'ಕುಮುದವಲ್ಲ? ಕುಮುದವಾದರೆ, ಬಾಂಧವನನ್ನು ನೋಡಿದಾಗ ಅರಳುವುದು!'

ಸಂಪತನು ತಿರಸ್ಕಾರದಿಂದ ನುಡಿದನು. 'ಸಾಕು ನಡೆ ಮನೆಗೆ!'

ಕುಮುದಿಯು ಕದಲಲಿಲ್ಲ. 'ಮನೆ! ನನಗೆಲ್ಲಿ ಮನೆ!—ಈ ಮದ್ಯದ ಗುಡಿಯನ್ನು ಬೀಳಿಸಿ, ಇಲ್ಲಿ ಮನೆಯನ್ನು ಕಟ್ಟುವಷ್ಟಕ್ಕಾಗಿ ಬಂದಿರುವೆನು. ಆ ತನಕ ನನಗೆ ಮನೆಯಿಲ್ಲ ಅಷ್ಟೆ' ಎಂದಳು.

ಅಷ್ಟೆ!—ಗಂಡನನ್ನು 'ಅಷ್ಟೆ'ನೆನ್ನುವಳು!

ಸಂಪತನು ರೋಷದಿಂದ ಗರ್ಜಿಸಿದನು. 'ಪಾಪೀ ಮುಸೀ!—ಅಣ್ಣನೆಂದಾರೆನ್ನು ಕರೆವೆ? ನಿನ್ನ ಅಣ್ಣನು ಎಂದೋ ಸಮ ಜ್ವರಕ್ಕೆ ತುತ್ತಾಗಿ ನರಕಕ್ಕೆ ಹೋಗಿರುವೆನು!' ಎಂದು ಎದರಿದನು.

ಕುಮುದಿಯು ಶಾಂತವಾಗಿಯೇ ಉತ್ತರವಿತ್ತಳು. ಇಲ್ಲ, ನನ್ನ ಅಣ್ಣನು ಇಲ್ಲೇ, ನನ್ನ ಮುಂದಿರುವನು. ಅವನು ವಿಷಮ ಜ್ವರಕ್ಕೆ ತುತ್ತಾಗಿರುವುದೇನೋ ನಿಜ; ಆದರೆ, ಇನ್ನೂ ನರಕಕ್ಕೆ ಹೋಗಲಿಲ್ಲ;—ಹೋಗಿ ಮುಟ್ಟಲಿಲ್ಲ. ಮದ್ದು ಎಂಬ ವಿಷವನ್ನು ಪಾನಮಾಡಿ ಅದೊಂದು ಜ್ವರವನ್ನು ಸಂಪಾದಿಸಿ, ನರಕದ ವಥದಲ್ಲಿ ವಿಹಾರ್ವನ ಮಾಡಿರುವನಷ್ಟೆ. ಅವನನ್ನು ತಡೆಯಲು ನಾನಿಲ್ಲಿ ಬಂದುದಾಗಿದೆ.

ಸಂಪತನು ರೋಷೋನ್ಮತ್ತನಾಗಿ, ಮೈಮರೆತು 'ನಾನು ನಿನ್ನ ಗಂಡನು!' ಎಂದು ಗರ್ಜಿಸಿದನು.

ಆ ಗರ್ಜನೆಗೆ ಕುಮುದಿಯು ಕೆಂಪಿಸಿಲಿಲ್ಲ. 'ಗಂಡ!—ಎಲ್ಲಿಯ ಗಂಡ? ಅಣ್ಣಾ, ಹೀಗೇಕೆ ಮಾತಾಡುವೆ? ನನಗೆ ವಿವಾಹವಾದುದಿಲ್ಲ. ನೀನು ನನ್ನ ಅಣ್ಣನು!' ಎಂದು ಧೈರ್ಯವಾಗಿ ನುಡಿದಳು.

ಸಂಪತನು ರೋಷಾವೇಶದಿಂದ 'ಛಿ! ನರಕ!' ಎಂದು ಚೀರುತ್ತಾ, ಕುಮುದಿಯನ್ನು ಆಕೆಯ ಸಂಗಾತಿಯನ್ನೂ ಎರಡೂ ಕೈಗಳಿಂದ ತಟ್ಟನೆ ಬಲವಾಗಿ ದೂಡಿ ಮದ್ದಿನ ಗುದಿಯನ್ನು ಪ್ರವೇಶಿಸಿದನು. ವಿನಯಾನ್ವಿತಾರಿಗಳಾದ ಆ ಸ್ತ್ರೀಯರ ಮೇಲೆ ಕೈಮಾಡಿದ ಆ ಪಾಪಿಯನ್ನು ಹಿಸುಕಿಬಿಡಲು ಎದುರಲ್ಲಿ ಕೂಡಿದ ಜನಸ್ತೋಮದಿಂದ ನೂರು ಕೈಗಳು ಮುಂದುವರಿದುವು. 'ಆಕೆಯ ನತಿಯನ್ನು, ಹೊಡೆಯಲಾಗದು. ಶಾಂತಿ ಸಂದೇಶವು ನೆನೆಸಿರಲಿ!' ಎಂದು, ಆ ನೂರು ಕೈಗಳನ್ನು ಬೇರೆ ನೂರು ಶಾಂತಿಹಸ್ತಗಳು ತಡೆಡುವು.

— ✻ —

ಮೇಲೆ ವಿವರಿಸಿದ ಘಟನೆಗಳು ನಡೆದ ರಾತ್ರಿ:—ಭೀಷಣಾಂಧಕಾರ. ಆ ಮದ್ದಿನ ಗುಡಿಯ ಆಕಾರವನ್ನೆ ಹೋಲುವ ಸಂಪತನ ಮನೆಯಲ್ಲಿ, ಕುಮುದಿಯು ತೊಳಕಾದ ನೆಲದ ಮೇಲೆ ಗೋಡೆಗೆ ಆತುಕುಳಿತಿದ್ದಳು. ಪಾಪಿ ಸಂಪತನು ಆಕೆಯನ್ನು ರೋಷದಿಂದ ದೃಷ್ಟಿಸಿ ನಿಂತಿದ್ದನು.

ಸಂಪತನ ಹೊಲಸು ಬಾಯಿಯು ಅವಾಚ್ಯ ಮಾತುಗಳನ್ನು ವ್ಯಸನಿಸಿತು. 'ಪಾಪೀಯಸಿ! ನಿನಗಾರು ಕುಮುದವೆಂದು ನಾಮಕರಣ ಮಾಡಿದರು?—ಅನ್ಯ ಜನಸ್ತೋಮದ ಮುಂದೆ ನಿನ್ನ ವತಿಯಾದ ನನ್ನನ್ನು ಏನೆಂದು ಗಳಹಿದೆ?—ನಾನು ನಿನ್ನ 'ಅಣ್ಣ'?! ಚಾಂಡಾಲ ಸ್ತ್ರೀ! ಗಂಡನನ್ನು ಅಣ್ಣನೆಂದು ಕರೆವ ತತ್ವಜ್ಞಾನವನ್ನು ನಿನಗಾರು ಕಲಿಸಿದರು? ಆ 'ಗಾಂಧೀ ಪಂಥ'ದನರೇ? ಗೃಹಿಣೀಧರ್ಮವನ್ನು ಮರೆತು ಸಂತಸೂಳೆಯ ವೇಷವನ್ನು ಧರಿಸಿ ಆ ಜನರ ಸಂತೆಯ ಮುಂದೆ ನಿಲ್ಲುವ ದಿಟ್ಟತನ! ಛೀ, ಛೀ- ನಿನ್ನ ಬಾಳು!'

ತುಟಿಗಳನ್ನು ಕಡಲಿಸದೆ, ಕುಮುದಿಯು ಮೌನವಾಗಿ ಕುಳಿತಿದ್ದಳು. ಸಂಪತನು ಮುಂದೆ ಒದರಿದನು:

'ಮದ್ದಿನ ಅಂಗಡಿಯನ್ನು ಬೀಳಿಸುವೆನೆಂದೆಯಾ? ಮತ್ತೆ ಅಲ್ಲಿ ಮನೆಕಟ್ಟುವ ಸಾಹಸವೇ? ಹೇ ಕ್ಷುದ್ರಜೀವಿಯೆ! ಒಲೆಯು ಕುಸಿದರೆ ಒಂದು ಹಿಡಿ ಮಣ್ಣನ್ನು ಮೆತ್ತಲಾಪದೆ ನಿನ್ನ ಆ ಪುಟ್ಟ ಕೈಯು, ಮದ್ದುಗುಂಡಿಯನ್ನು ಕೆಡವಿ ಹೊಸ ಮನೆಯನ್ನು ಕಟ್ಟುವ ಶಕ್ತಿಪ್ರದರ್ಶನ ಮಾಡಬಲ್ಲುದೇ?'

ಇಲ್ಲ, ಕುಮುದಿಯ ಬಾಯಿಂದ ಉತ್ತರವಿಲ್ಲ. ಸಂಪತನ ವಾಕ್ಪಟುತ್ವದ ಭರವೂ ಕಡಿಮೆಯಾಗಲಿಲ್ಲ.

'ನಿನಗೆ ವಿವಾಹವಾಗಿಲ್ಲ? ಹೇ, ಮೋಸಗೇಡಿಯೇ! ಅಷ್ಟು ಜನರನ್ನು ಅಲಕ್ಷಿಸಿ, ನಿನ್ನ ಗಂಡನ ಮುಖದಲ್ಲಿ ಆ ಮಾತುಗಳನ್ನಾಡುವ ಸಾಹಸವೆ?—'

ತಟ್ಟನೆ ಮುಂದರಿದು ಸಂಪತನು ಕುಮುದಿಯ ಬಾಯಿಗೆ ಬಲವಾಗಿ ಬಡಿದನು! ನಿಶಾಹಾರದಿಂದ ಶುಷ್ಕವಾಗಿದ್ದಾ ಅಧರಗಳೊಡೆದು ನೆತ್ತರು ಹರಿಯಿತು! ಸಹಿಸಲಾರದೆ ಕುಮುದಿಯು ಭೂಶಾಯಿಯಾದಳು!

ಸಂಪತನು ಅಷ್ಟಕ್ಕೇ ನಿಲ್ಲಲಿಲ್ಲ. 'ಹೇಳು, ನಾನು ನಿನ್ನ ವತಿಯ ಸ್ಥಾನದಲ್ಲಿರುವೆನೇ? ಅಥವಾ ನಿನ್ನ ಅಣ್ಣನಾಗಿ ತೋರುವೆನೇ? ಎನ್ನುತ್ತ ಒದೆದನು.

ಒಳಗಿಂದೊಳಗೆ ಕುದಿಯುತ್ತಿದ್ದ ಜ್ವಾಲಾಮುಖಿಯು ಮೇಲಕ್ಕೆ ಹೊರಮಿತು. ಹೇಳಿದಳು: 'ಅಹುದು; ನೀನು ನನಗೆಷ್ಟಾಗಬೇಕು! ಪ್ರೇಮದ ಸಿಹಿಯನ್ನು ನನಗಾಗಿ ನಿನ್ನ ಹೃದಯದಲ್ಲಿ ಬಿತ್ತಿ, ಅದಕ್ಕೆ ನೀರೆರೆದು, ಶ್ರಮಪೂರ್ವಕವಾಗಿ ಅದನ್ನು ಬೆಳೆಯಿಸಿಕೊಡಬೇಕಿದ್ದನು. ನಿನ್ನನ್ನೊಲಿಸಲು ಮಮತಾಪರ್ವತವನ್ನು ಸುರಿದು ಸುರಿದು ಒಣಗಿದೆನು. ನಿನ್ನ ಕುಡಿಕತನವನ್ನು ಬಿಡಿಸಲು ರಾತ್ರಂದಿನವೂ ಹೆಣಗಾಡಿ ಹೆಣವಾದೆನು. ಮನಸಿಲ್ಲಿ ಕಾಳುಕಡ್ಡಿಯಿಲ್ಲದಿದ್ದರೂ ಅದನ್ನು ಸೃಜಿಸಿ ಅಡುಗೆಯನ್ನೆಟ್ಟು ನಿನಗೆ ಬಡಿಸಿದೆನು. ಸಾಕಷ್ಟು ಅನ್ನವಿಲ್ಲದಿದ್ದರೆ ನಿನಗೂ ನನ್ನ ಮನುವಿಗೂ ಬಡಿಸಿ, ನಾನು ಉಪವಾಸದಿಂದ ದಿನಗಳೆದೆನು. ಅನ್ನವು ಕೇವಲ ಕಡಲು ಇದ್ದಾಗ, ಮೊದಲೇ ಮದ್ಯದಿಂದ ಅಸ್ತಿಪಂಜರವಾದ ನೀನು ಅನ್ನವಿಲ್ಲದೆ ನತಿಸಿಹೋಗಬಾರದಾಗಿ ನಿನಗಾಗಿ ಸಾಕಷ್ಟು ಇಟ್ಟು, ನನ್ನ ಮನುವಿಗೆ ಅರೆಹೊಟ್ಟೆಯಲ್ಲಿಯೇ ತೃಪ್ತಿ ಪಡಿಸಿ ಅವನನ್ನು ಕ್ಷಯದ ಬಾಯಿಗೆ ಬಲಿಗೊಟ್ಟೆನು. ಆ ದುರ್ಭಾಗಿ ಬಾಲೆಯು ನನ್ನ ಪಾಪೀ ಬಸಿರಲ್ಲಿ ಜನನಕ್ಕೆ ಬಂದು, ಕೆಲ ಕಾಲ ಈ ನರಕ ಭೋಗವನ್ನನುಭವಿಸಿ, ಯಾವುದೋ ಸುಖ ಸಾಮ್ರಾಜ್ಯಕ್ಕೆ ಹೊರಟು ಹೋಯಿತು. ನಾನು ಇಲ್ಲೇ ಉಳಿದೆನು. ಆತ್ಮಹತ್ಯೆಗೆ ನನ್ನ ಮನಸ್ಸು ಒಪ್ಪದಾಯಿತು. ಉಳಿದ ಜೀವಿತವನ್ನು ನಿನ್ನ-ಸಾಧ್ಯವಾದರೆ ಇತರರ-ಮದ್ಯಪಾನಚಟ ನಿರ್ಮೂಲನಕ್ಕಾಗಿ ಸವೆಯಿಸಬೇಕೆಂದು ಮನಸ್ಸಾಯಿತು. 'ದೇಶ ಸೇವಿಕೆ'ಯಾಗಿ ಸೇರಿ, ನೀನು ಉಪಾಸನೆಗಾಗಿ ತೆರಳುವ ಆ ಸುನಾದೇವಿ ಮಂದಿರದ ಮುಂದೆ ನಿಂತುಕೊಂಡೆ. ನಿನಗಾಗಿಯೇ ನನ್ನ ಹೃದಯದಲ್ಲಿ ಸಾಕಿ ಸಲುಹಿದ ಪ್ರೇಮದ ಸಿಹಿಯೆನ್ನು ಕಡಿದಾತನು ನೀನೇ. ಆದರೆ, ಅದನ್ನು ಪುನಃ ಚಿಗುರಿಸುವಂತೆ ಮಾಡಲು ಯತ್ನಗೊಳ್ಳುವೆನು. 'ಅದು ಕಾರಣವೇ, ನಿನ್ನ ಕುಡಿಕತನದ ಚಟವು ಸಂಪೂರ್ಣ ಕಿತ್ತು ಹೋಗುವ ತನಕ, ನಿನ್ನನ್ನು ಅಣ್ಣನೆಂದೇ ತಿಳಿದು, ಹಾಗೆಯೇ ಸಂಬೋಧಿಸುತ್ತ; ತದ್ರೀತಿಯಲ್ಲಿಯೇ ಸಂಪರ್ಕವನ್ನಿಟ್ಟುಕೊಳ್ಳಬೇಕೆಂದು ನಿರ್ಧರಿಸಿರುವೆನು!'

ಕುದಿಯದಿರು ಕೈ ಮುಗಿವೆವು ಕುಡುಕನೇ ಮರಣವು

ಸ್ತಂಭೀಭೂತನಾಗಿ ಸಂಪತನು ಎಲ್ಲವನ್ನೂ ಕೇಳಿದನು. ಢಂದು ಗರ್ಜನೆ,—ಒಂದು ಬಲವಾದ ಒದೆ,—ಒಂದು ಆರ್ತನಾದ;—ಸಂಪತನ ಮನೆಯ ಭಾಗ್ಯಜ್ಯೋತಿಯು ದಿವ್ಯ ಜ್ಯೋತಿಯಲ್ಲಿ ವಿಕ್ಯಹೊಂದಿತು!

ಈ ಪಾಮರ ಜನಸಾಗರದ ತಳದಲ್ಲಿ ಅಗಣ್ಯವಾಗಿ ಬಿದ್ದಿದ್ದ ಅಮೌಲ್ಯ ಮೌಕ್ತಿಕವನ್ನು ವಿಧಾತನು ಹೆಕ್ಕಿ ತನ್ನ ಕಂಠಹಾರದಲ್ಲಿ ಧರಿಸಿಕೊಂಡನು!

* * * *

ವಾಸಿಯ ಮೈಯು ಚಿರ್ರನೆ ತೆಣ್ಣಗಾಯಿತು. ಭೀತಿಯ ಸಹಸ್ರ ಕರಾಳ ವದನಗಳು ಅವನನ್ನು ನೋಡಿ ನಗುವಂತೆ ಭಾಸವಾಯಿತು. ಓಡಿಹೋಗಿ ಕುಮುದಿಯ ಕಳೇಬರವನ್ನು ಅಪ್ಪಿಕೊಂಡು ಕೇಳಿದನು. 'ಕುಮುದ! ನೋವಾಯಿತೇ?'

ಕುಮುದಿಯ ಭೀತಿ ಮತ್ತು ದುಃಖಸೂಚಕ ಮುಖವು ಉತ್ತರಕೊಡಲಿಲ್ಲ.

ಆ ಶವವನ್ನು ಅತ್ತಿತ್ತ ಅಲುಗಾಡಿಸಿ, ಮತ್ತೊಮ್ಮೆ ಕೇಳಿದನು. 'ಕುಮುದ, ನನ್ನ ಕುಮುದ! ಮಾತಾಡು,—ನೋವಾಯಿತೇನಮ್ಮ?'

ಉತ್ತರವಾಗಿ, ತಲೆಯೊಳಗಿಂದ ನೆಣೆಯು ಬಲವಾಗಿ ಬೀಸಿ ದೇವನನ್ನು ನೊಂದಿಸಿ ಬಿಟ್ಟಿತು. ಸಂಪತನು ಸ್ತಂಭಿತನಾಗಿ, ಶರೀರವೆಲ್ಲವೂ ತನಕ ಸ್ಥಿರವಾಗಿ ನಿಂತನು.

ಆಕಸ್ಮಿಕವಾಗಿ ಅವನಲ್ಲಿ ಅನರ್ಘ್ಯನೀಯ ಮಾರ್ಪಾಟಾಯಿತು; ಅದು ಸ್ವರ್ಗವೂ ಇರಬಹುದು, ನರಕವೂ ಇರಬಹುದು. ಎದ್ದು, ಆ ಕಳೇಬರಥ ಕತ್ತಿಗೆ ಕೈಯಿಕ್ಕಿ, ಎರಡಾಕೆಯ ಗಾಣಿನ ಮಾಡಿಗೆಳಿರುವ ಮಾಂಗಲ್ಯಸೂತ್ರವನ್ನು ಕಿತ್ತು ತೆಗೆದನು. ಎಂಥ ವೈಶಾಚಿಕ ದೃಷ್ಟಿ!—ಎಂಥ ನಗು! ಈ ನರವಿಶಾಚಿಯನ್ನು ನೋಡಿ ನಿಜವಿಶಾಚಿಗಳು ಭೀತಿಯಿಂದ ನಡುಗಿರಬೇಕು!

ಅಂದಿನ ಆ ನಿಶೆ ವಿಧಾತನು ತನ್ನ ಕಲಾಜ್ಞಾನವನ್ನೆಲ್ಲ ವ್ಯಯೋಗಿಸಿ ಅದನ್ನು ರಚಿಸಿರುವನೆಂಬಂತೆ ತೋರುತ್ತಿತ್ತು. ಆ ಅಂಧಕಾರದ ಭೀಕರ ಸೌಂದರ್ಯವನ್ನು ನೋಡಿ ದೇವಗಣಗಳೂ, ಕಾಮಾಮಂಡಲವೂ ಮುಗ್ಧವಾದಂತ್ತಿದ್ದುವು. ಸೂಪತನು ಅದರ ಕಡೆಗೆ ತಿಲಾಂಶವೂ ಗಮನಕೊಡದೆ, ಉನ್ಮಾದನಂತೆ ಮನೆಯಿಂದ ಹೊರಬಿದ್ದನು. ಈ ಕೊಲೆಗಡಕನನ್ನು ಸ್ಪರ್ಶಿಸಲಾರದೆ ವಾಯುದೇವನು ಕೂಗುತ್ತ ದಿಕ್ಕು ತೋಚದೆ ಓಡಾಡಿದನು. ಭೀತಿಗೂ ಪ್ರೇಮುಕ್ಕೂ ಪ್ರವೇಶವಿಲ್ಲದ ಸಂಪತನ ಎದೆಯು ಕಂಪಿಸಿಲಿಲ್ಲ!

ಲಕ್ಷ ಹೃದಯಗಳನ್ನು ಕೊರೆದು ತಿಂದ ಆ ಪಾಪ ಮಂದಿರವು, ಆ ಕತ್ತಲಲ್ಲಿ ಕದಲದೆ ನಿಂತಿತ್ತು. ಯಾವ ಬಿರುಗಾಳಿಯೂ ಸಿಡಿಲೂ ಆದನ್ನು ಕೆಡಹಿರಲಿಲ್ಲ. 'ಸುರೆ! ಸುರೆ!' ಎಂದು ಒದರುತ್ತ ಸಂಪತನು ಅತ್ತ ಓಡಿ ಬಂದನು. ನಾಯಿಗಳೆರಡು ಈ ವಿಶಾಚಿಯನ್ನು ಕಂಡು ಬೊಗಳಿದುವಷ್ಟೆ. ಮಾನವನಾರೂ ಆ ಮಾರ್ಗದಲ್ಲಿ—ನೂರು ಗಜಗಳ ವ್ಯಾಸದಲ್ಲಿ—ಇರಲಿಲ್ಲ.

ಆ ಪಾಪಮಂದಿರವು—ಮದ್ದಿನ ಗುಡಿಯು—ಸಮೀಪಿಸಿತು. ಸಂಪತನು ಅದರ ಮೆಟ್ಟಲುಗಳನ್ನು ಹತ್ತಿ ನೋಡಿದನು. ಬೀಗ ಇಕ್ಕಿಕೊಂದಿತ್ತು. ಅಲ್ಲಿ ಯಾರೂ ಇರಲಿಲ್ಲ. ಉನ್ಮಾದನಂತೆ ಬಾಗಿಲಿಗೆ ಬಡಿದನು:

'ಸುರೆ! ಸುರೆ!'

ಆದರೆ, ಆ ಮರದ ಕದವು ಉತ್ತರ ಕೊಡಲಿಲ್ಲ.

ಸಂಪತನಲ್ಲಿ ಉದ್ರೇಕವು ಹೆಚ್ಚಿತು. ಶ್ವಾಸಕೋಶಗಳು ಉಚ್ಛ್ವಾಸ-ನಿಶ್ವಾಸಗಳ ಆ ವೇಗವನ್ನು ತಡೆಯದಾದುವು. ರಕ್ತದ ಒತ್ತಾಟವು ರಭಸದಿಂದ ನಡೆಯ ಹತ್ತಿತು. ಪಾಪಿಯ ಶಿರದಲ್ಲಿ ಅಸಹನೀಯ ವೇದನೆಯ ಆಭಾಸವಾಯಿತು.

'ಸುರೆ! ಸುರೆ!'

ಹ್ಞ! ಎಲ್ಲಿದೆ ಸುರೆ?—ಇದೆ, ಮುಂದಿರದ ಒಳಗೆ. ಆದರೆ, ಆ ಸುರಾಭಾಂಡಕ್ಕೆ ಚೇತನವಿಲ್ಲ. ವಿನಂತಿಯನ್ನು ಕೇಳಿ ಹೊರಗೆ ಬರಲಾಪದು.

ಪಾಪಿಗೆ ಯಾರಿಂದಲೂ ಉತ್ತರವಿಲ್ಲ. ಆತನ ಶಿರೋವೇದನೆಯು ದ್ವಿಗುಣೀಕೃತವಾಯಿತು. ತ್ರಿಕರಣಗಳೂ ತಾಂತವಾದುವು. ಎದೆಗುಂದಿಗೆಯು ಸಹಜ ವ್ಯಮಾಣವನ್ನು ನೂರು ಉಬ್ಬುತಗ್ಗುಗಳಾರಂಭಿಸಿತು.

'ಸುರೆ! ಸುರೆ!—

ಸರಿ,—ಸಂಪತನು ದೊಪ್ಪನೆ ಬಿದ್ದುಬಿಟ್ಟನು! ಬಾಯೊಳಗಿಂದ ನೆತ್ತರು ಹರಿದು ಬಂತು. ಅಧಿಕೋದ್ರೇಕದಿಂದ ರಕ್ತ ಕೋಶವು ಒಡೆದಿತ್ತು!—'ಸು. . .ಖಾ. . .ರೆ' ಎಂದು ಮತ್ತೂ ತೊದಲುತ್ತ, ಬಾಗಿಲಿಗಾಗಿ ಕೈಯೆತ್ತಿದನು. ಆ ಕೈಯು ಪುನಃ ಮೆಟ್ಟಿಲ ಮೇಲೆ ಬಿತ್ತು. ಸುರಾದೇವಿಯು ಪ್ರಸನ್ನಳಾಗಲಿಲ್ಲ. ಸಂಪತನ ಜೀವಶುಕವು ಹಾರಿ ಹೋಯಿತು!

* * * *

ಮರುದಿನ ಆ ಪಾಪಮಂದಿರದ ಮುಂದೆ ಸಹಸ್ರ ಗ್ರಾಮವಾಸಿಗಳು ನಿಂತು ಈ ಭೀಕರ ದೃಶ್ಯವನ್ನು ನೋಡಿದರು. ಮಾಂಗಲ್ಯಸೂತ್ರವನ್ನು ಘಟ್ಟಿಯಾಗಿ ಹಿಡಿದುಕೊಂಡ ಕೈಯನ್ನು ಆ ಪಾಪಮಂದಿರದ ಕಡೆಗೆತ್ತಿ ಸಂಪತನ ಶವವು ಅಂಗಾತ ಬಿದ್ದುಕೊಂಡಿತ್ತು. ಆ ವಿಕಾರಮುಖವು ಒಂದು ನಿಗೂಢ ಅರ್ಥಸೂಚಕವಾಗಿದ್ದು, ಕಣ್ಣುಗಳ ದೃಷ್ಟಿಯು ಏಕಕಾಲದಲ್ಲಿ ಎಲ್ಲರ ಕಡೆಗೂ ನೆಡಲ್ಪಟ್ಟು 'ಎಚ್ಚರವಿರಲಿ!' ಎನ್ನುವಂತಿತ್ತು. ಈ ಪಹರೆಯನ್ನು ನೋಡಿ ಸಹಸ್ರ ಹೃದಯಗಳು ಕಂಪಿಸಿದುವು!

ಜನಸ್ತೋಮದಿಂದೊಬ್ಬನು ಹೇಳಿದನು. ಸಂಪತನು ಸ್ವರ್ಗಕ್ಕೆ ಹೋಗಿರಬಹುದಾದರೆ ಆ ಮಾಂಗಲ್ಯಸೂತ್ರವೇ ದಾರಿ ತೋರಿಸಿರಬೇಕು—ಎಂದು.

ಎನ್ ಸಂಪೂರ್ಣ ಎಂ.

ಜಮಾಲಾಬಾದು ಕೈಫಿಯತ್ತು.

ಲೇಖಕರು—ಶ್ರೀ. ವೆಂಗಲ್ ರಾಮಣ್ಣಾವ್, M. A. LL. B.

(All Rights Reserved.)

ಕ್ರಿ ಶಕೆಯುಗದ ಆರಂಭದಲ್ಲಿ ಮೈಸೂರವರ್ಮ (ಸಂ) ಅರಸು ಕ್ಷತ್ರಿಯ(ಆ?)ಹ ಕ್ಷೇತ್ರದಿಂದ ಬ್ರಾಹ್ಮಣರನ್ನು ಕರೆತಂದು ತುಳು ಮೂವತ್ತೆರಡು ಗ್ರಾಮದ ಸ್ಥೈಕ ಉಜರೆ ಎಂಬ ಗ್ರಾಮದ ಕೆಳಗೆ ದೇಶಾಧಿಕಾರ್ಯಕ್ಕೆ ನೇಮಿಸಿ ಕೊಟ್ಟರು. ಹೀಗೆ ಇರುತ್ತಿದ್ದಲ್ಲಿ ನಗರದ ಸಂಸ್ಥಾನದಲ್ಲಿ (a) ಅನ್ಯಾಯವು ಇಕ್ಕೇರಿ ಸಂಸ್ಥಾನವನ್ನು ಆಳಿಕೊಂಡಿರುತ್ತಿದ್ದಲ್ಲಿ ಹೈದರನಾಯಕನು ಪ್ರಬಲಿಸಿಕೊಂಡು, ಪ್ಯೆಸೂರು ಸೀಮೆ ಸ್ವಾಧೀನ ಮಾಡಿಕೊಂಡು ನಗರಕ್ಕೆ ಬಂದು ಅಮ್ಮಾಜಿಯನ್ನು ಕೈಸೆರೆ ಹಿಡಿದು, ಇಕ್ಕೇರಿ ಸಂಸ್ಥಾನವನ್ನು ತನ್ನ ಅಧೀನ ಮಾಡಿಕೊಂಡು ಇರುತ್ತಿದ್ದಲ್ಲಿ, ಹೈದರನಾಯಕನು ತೀರಿ ಹೋಗಿ ಆತನ ಮಗ ಟೀಪುಸುಲ್ತಾನನು ರಾಜ್ಯ ಆಳಿಕೊಂಡು ಇರುತ್ತಿದಲ್ಲಿ, ಇಂಗ್ರೇಜಿಯವರು ಬಂದು ಕೊಡಿಯಾಲ ಮಂಗಳೂರಿನ ಹೆಳೆಯ ಹೆಸರು) ಪ ಕೋಟೆ ತೆಗೆದುಕೊಂಡ ಮಿತ್ತವಾಗಿ, ಟೀಪುಸುಲ್ತಾನನು ಶ್ರೀರಂಗ ಪಟ್ಟಣದಿಂದ ಕೊಡಿಯಾಲಕ್ಕೆ ಬಂದು, ಇಂಗ್ರೇಜಿಯವರ ಕೈಯ ಲಡಾಯಿ ಮಾಡಿ, ಎರಡನೇ (b) ವಿವೇಕದಲ್ಲಿ ಆ ಕೊಡಿಯಾಲದ ಕೋಟೆಯನ್ನು ತನ್ನ ಅಧೀನ ಮಾಡಿಕೊಂಡು, ತಿರಿಗಿ ಶ್ರೀರಂಗಪಟ್ಟಣಕ್ಕೆ ಹೋಗುವಾಗ್ಗೆ, ಈ ಒಳಗೆ ಬ್ರಿಟಿಷರಿಂದ ಕೊಂಡೂರು ಮಾರ್ಗವಾಗಿ ಬಂದಲ್ಲಿ ಈ ಉನ್ನತಮಾದ c) ಕಲ್ಲನ್ನು ನೋಡಿಕೊಂಡು, ಇದರ ಮೇಲೆ ಕೋಟೆ ಹಾಕಬೇಕು ಎಂಬುದಾಗಿ ಯೋಚನೆ ಮಾಡಿ, ಆಜಿಜಿಖಾನನ ಮೇಲೆ ಯವಕೊಲ್ಲು(?) ಮೊಕರೂರು ಮಾಡಿ ಇಟ್ಟು, ಈ ಕಲ್ಲಿಗೆ ಗೆಜಮಲಾಬಾದು (d) ಎಂತ ಹೆಸರಿಟ್ಟು ಹೋದನು ಈ ಕಲ್ಲಿಗೆ ಮಾರ್ಗವನ್ನು ಕಡಿದು ಮೇಲೆ ಕೋಟೆಯನ್ನು ಕಟ್ಟಿಸಿ ವಕೀರನಿಗೆ ಸೇರಿಸಿಟ್ಟು, ಕೆಳಗೆ ಬಂದು ಸ್ಥುತ್ತು ಕೋಟೆಯನ್ನು ಕಟ್ಟಿಸಿ, ಕೋಟೆಯೊಳಗೆ ನೇಟೆ ಅಂಗಡಿ ಮಾಡಿಸಿ ದೊಡ್ಡ ಕಚೇರಿ ಕಟ್ಟಿಸಿ, ಈ ಪ್ರಕಾರ ಕೆಲವು ದಿನಸ ಇರುತ್ತಿದ್ದಲ್ಲಿ, ಕಾಲಯುಕ್ತಿ ಸಂವತ್ಸರದಲ್ಲಿ ಶ್ರೀರಂಗ ಪಟ್ಟಣವನ್ನು ಇಂಗ್ರೇಜಿಯವರು ತೆಗೆದುಕೊಂಡು ಕೊಡಿಯಾಲಕ್ಕೆ ಬಂದು ಆ ರೇವು ರಾಜ್ಯ ಹಾಕಿಕೊಂಡು ತುಳುದೇಶ ಯಾವತ್ತನ್ನು ಸ್ವಾಧೀನ ಮಾಡಿಕೊಂಡು, ಜಮಾಲಾಬಾದಿಗೆ ಬಂದಲ್ಲಿ ಫೋಲೆ, ಕೋಟೆ ಬಿಡಬೇಕಾದರೆ ಲಡಾಯಿ ಮಾಡಿ ಬಿಡುವುದು ಹೊರತು, ಆ ನಗರ ಬಿಡುವುದಿಲ್ಲವೆಂಬುದಾಗಿ ಕಿಲ್ಲೇದಾರರು ಹೇಳಿದ್ದರಿಂದ, ಕೊಡಿಯಾಲದಿಂದ ಕಪ್ತಾನ (e) (Captain)ರು ಮುಂದೆ ಮಾಡಿಕೊಂಡು ಬಂದು ಆ ಕಲ್ಲಿನ ಸಂಯಾಗಿ ಎತ್ತರವಾಗಿ ಮೂರ್ಚೆ ಕಟ್ಟಿ ಮೇಲಕ್ಕೆ ಗುಂಡು ಹೊಡೆದುದರಿಂದ, ಭಯವಟ್ಟು ಕೋಟೆಯನ್ನು ಕೌಲುಮಾಡಿಕೊಂಡು ಬಿಟ್ಟುಕೊಟ್ಟರು ಆ ಬಳಿಕ ಕಲ್ಲು ಮೇಲಿಂದ ಕಿಲ್ಲೇದಾರನನ್ನು ನೂತ್ತ ಕೆಳಗೆ ಇಳಿಸಿ, ಈತನ ಸಂಗಡ ಇದ್ದ ಜನಗಳು ಯಾವತ್ತು ಅಲ್ಲೇ ಇಟ್ಟು ಆ ಕಲ್ಲಿನ ಕೆಳಗೆ ಸರದಾರರು ಜಾವಣೆ ಮಾಡಿಕೊಂಡು ಇರುತ್ತಿದ್ದರು. ಈ ಪ್ರಕಾರ ಇರುವಾಗ್ಗೆ ಕಣ್ಣಾನೂರಿನಿಂದ (f) ಫತ್ತೆ ಹೈದರ ಎಂಬವನು ಆದೂರ (sic) ಹತ್ತರ ಆದೂರು ಎಂಬ ಗ್ರಾಮದಲ್ಲಿ ಇರುತ್ತಿದ್ದನು- ಅಲ್ಲಿ ಎಡ ಬಲದ ಜನಗಳನ್ನು "ತಲಬುಕೊಡುತ್ತೇನೆ, ಸಂಬಳ ಕೊಡುತ್ತೇನೆ"ಬುದಾಗಿ ನೂರಾರು ಜನಗಳನ್ನು ಜಮಾಯಿಸಿಕೊಂಡು ಇರುವ ವೇಳೆಯಲ್ಲಿ (g) ಪ್ರಗೂರ ಅರಸು ಕೃಷ್ಣನಾಯಕನೆಂಬವನು ಆ ಊರ ಎಗೆಗೆ ಆಳು, ಜಮಾಯಿಸಿಕೊಂಡು ಬಾಳೆಕಟ್ಟೆ ಎಂಬ ಸ್ಥಳದಲ್ಲಿ ಕುಂಪಣಿ ಸುಂಕದ ಕಟ್ಟಿಯಲ್ಲಿ ಪೂರ್ಣಯ್ಯನವರ ಕಡೆಯ ಎರಡು ಮೂರು ವಾರಾಜನ ಶಿಪಾಯಿ ಜನರು ಇರುವವರ ಮೇಲೆ ಬಂದು ಬಿದ್ದು ಅಲ್ಲಿ ಇರುವಂಥಾ ಯಾವತ್ತು ಜನರನ್ನು ಕಡಿದು ಕೊಚ್ಚಿ ಸಾಪುಮಾಡಿ, ಆ ಸುಂಕದಕಟ್ಟೆಯಲ್ಲಿ ತನ್ನ ಕಡೆಯ ಜನರ ಪ್ರಾಣ ಇಟ್ಟು, ತುಸಕ್ಕ ಪ್ರಗೂರಿಗೆ ಹೊರಟು ಹೋದನು. ಈ ಸಮಾಚಾರ ಯಾವತ್ತು ಫತ್ತೆ ಹೈದರ ಕೇಳಿ, ತನ್ನ ಕಡೆ ಜಮಾದಾರನನ್ನು ಪ್ರಗೂರಿಗೆ ಕಳುಹಿಸಿ ಕೊಟ್ಟು, ಬಾಳೆಕಟ್ಟೆ, ಸುಂಕದ ಕೆಟ್ಟೆ, ಬಳಿಯಲ್ಲಿ ಯಾರೋ ಲಡಾಯಿ ಮಾಡಿದರು, ಎಂಬ ಸಮಾಚಾರ ಕೇಳುತ್ತ "ಆ ಊರನವರೇ ತಮ್ಮ ತಮ್ಮೊಳಗೆ ಜಗಳವಾಡಿದರೋ, ಅಥವಾ ಪ್ರತ್ಯೇಕ ಅರಸು ಹುಟ್ಟಿ, ಆ ಊರನರ ಮೇಲೆ ಬಿದ್ದು ಲಡಾಯಿ ಮಾಡಿದರೋ ಎಂಬ ನೆಲವರ (?) ವರ್ತಮಾನ ಕೇಳಿಕೊಂಡು ಬಾ" ಎಂಬುದಾಗಿ ಹೇಳಿದ್ದರಿಂದ ಈ ಜಮೇದಾರನು ಪ್ರಗೂರಿಗೆ ಹೋಗಿ, ಅಲ್ಲಿ ಅರಸುಗಳ ಕೂಡಿ- "ನೀವು ಯಾರು? ಯಾವ ಧೇಶದವರು? ಮೊನ್ನೆ ಇಲ್ಲಿ ಲಡಾಯಿ ಮಾಡಿದವರು ಯಾರು?" ಎಂತ ಕೇಳುವುದಾಗ್ಗೆ— "ನಾವಾದರೆ ಇಲೇ ಊರ ಅರಸುಗಳು. ನಾವೇ ಲಡಾಯಿ ಮಾಡಿದವರು," ಎಂಬುದಾಗಿ ಹೇಳಿದ್ದರಿಂದ ಈ ಮಾತು ಯಾವತ್ತು ಕೇಳಿ, "ನಾನು ಫತ್ತೆ ಹೈದರ ಕಡೆಯಿಂದ ಬಂದವನು" ಎಂಬುದಾಗಿ ಹೇಳಿದ್ದರಿಂದ, ತನ್ನ ಕಡೆಯಿಂದ ಒಬ್ಬ ಜಮೇದಾರನನ್ನು ಇವನ ಸಂಗಡ ಕೂಡಿಸಿಕೊಟ್ಟು, ತನ್ನ ಹೆಸರಲ್ಲಿ ಫತ್ತೆ ಹೈದರನಿಗೆ ಉತ್ತರ ಬರೆಸಿಕೊಟ್ಟು ಕಳುಹಿಸಿಕೊಟ್ಟದ್ದರಿಂದ, ಇವರು ಉಭಯತ್ತರು ಜಮೇದಾರರು ಆ ಊರಿಗೆ ಬಂದು ಅರಸು ಬರಕೊಟ್ಟಂತಾ ಕಾಗದ ಕೊಟ್ಟು, ಆ ಕಾಗದ ನೋಡಿಕೊಂಡು ತಾನು ಜಮೇಮಾಡಿದಂತಾ ಜನರನ್ನು ಕರೆದುಕೊಂಡು ತೊಂಬಾರದ ಘಟ್ಟಾನಿ (ಘಟ್ಟದ ?) ಪ್ರಗೂರ ಅರಸನ ಬಳಿಗೆ ಹೋಗಿ, ಅಲ್ಲಿ ಅರಸನ ಭೇಟಿ ಮಾಡಿದ್ದಲ್ಲಿ—"ನೀನು ಯಾರು? ಫತ್ತೆ ಹೈದರೇ ಸರಿಯೋ?" ಎಂತ ಕೇಳಿದ್ದರಿಂದ, ನಾವೇ ಫತ್ತೆ ಹೈದರು ಎಂತ ಹೇಳಿದ್ದರಿಂದ ಇವರ ವಶಕ್ಕೆ ತನ್ನ ಎಸಗೆ ಆಳು ಸೈಕ, ಮನ್ನೂರು ಜನರುಗಳನ್ನು ಕೂಡಿಸಿಕೊಟ್ಟು, ಆ ಜನರುಗಳನ್ನು ಕರೆದುಕೊಂಡು, ಆಲ್ಲೇ ಸವಿಾಪದಲ್ಲಿ ದೇವರ ಮನೆ ಎಂಬ ಹಳ್ಳಿಗೆ ಬಂದು ನಿಂತು ಅಲ್ಲಿಂದ ಜಮಲಾಬಾದು ಗಡದ ಕಲ್ಲಿನ ಮೇಲೆ ವ್ಯಾಕು ಇರುವ ಜನರ ಬಳಿಗೆ ಭೂತೂರು ಕಳುಹಿಸಿ ಕೊಟ್ಟಿದ್ದರಿಂದ, ಆ ಜನರು ಜಮಾಲಾಬಾದು-ಕಲ್ಲ ಮೇಲಕ್ಕೆ ಬಂದು, ತಾವು ಬಂದ ಅಭಿವ್ಯಾಯ ಯಾವತ್ತು ಹೇಳಿ, ಅಲ್ಲಿಂದಲೂ ಒಬ್ಬನನ್ನು ಸಂಗಡ ಕರೆದುಕೊಂಡು ಈ ಫತ್ತೆ ಹೈದರನ ಬಳಿಗೆ ಬಂದು, ಜಮಲಾಲಾಬಾದು ಕಿಲ್ಲೆಯಲ್ಲಿ ಇರುವ ಶಿಪಾಯಿ ಯಾವತ್ತು ಹೇಳಿದ ಮಾತು ಕೇಳಿ ಕೊಂಡು ತನ್ನ ಕಡೆ (h) ತಿಮ್ಮನಾಯಕ ಎಂಬವನ ಸಂಗಡ ಕೆಲವು ಜನ ಕೊಟ್ಟು ಕಳುಹಿಸಿಕೊಟ್ಟದ್ದರಿಂದ ಇವರು ಬಂದು ಜಮಾಲಾಬಾದು ಕಿಲ್ಲೆಯನ್ನು ತೆಗೆದುಕೊಂಡಿರುವ ಆ ಬಳಿಕ (i) ಪತ್ತುಮುಡಿ ಸುಬ್ಬರಾಯ ಎಂಬವನು ಆ ದೇವರಮನೆಗೆ ಬಂದು ಈ ಫತ್ತೆ ಹೈದರನ ಭೇಟಮಾಡಿ ಕೊಂಡು, ಇವರು ಉಭಯ ತರ ದೇವರಮನೆ ಗಡಿಯಿಂದ ಇಂದು ಭೂತ್ತೂರು ದೇವಸ್ಥಾನಕ್ಕೆ ಬಂದು ಇರುವಾಗ್ಗೆ, (j) ಇತ್ತಲಾಗಿ ತುಮುಲರ (?) ಹೆಗ್ಗಡೆಯವರು, ತಮ್ಮ ಕಡೆ ಜನತೆಗೆದುಕೊಂಡು, ಭೂತ್ತೂರು ದೇವಸ್ಥಾನಕ್ಕೆ ಬಂದು ಲಡಾಯಿ ಮಾಡುವ ವೇಳೆಯಲ್ಲಿ ಹೆಗ್ಗಡೆಯವರಿಗೆ ಕೈಗೆ ಗುಂಡು ತಾಗಿದ್ದರಿಂದ, ಹೆಗ್ಗಡೆಯವರು ಜನ ಸಹ ಹಿಂದಿರುಗಿ ಹೋಗುವಾಗ್ಗೆ ಇವರ ಕಡೆಯ ಜನವು ಪುನಃ ತಮ್ಮ ವಿಕಾಣೆಗೆ ಹೋದರು ಆ ಮೇಲೆ ಫತ್ತೆ ಹೈದರನು, ಆದೂರು ಮಾರ್ಗವಾಗಿ ಬಂದು ತುಮುಲರ ಹತ್ತರ ಸಹಾಯ (?) ಎಂಬವನ ಮನೆಯಲ್ಲಿ ಬಿಡಾರ ಮಾಡಿ ಕೊಂಡಿರುವಾಗ್ಗೆ, ಸುಬ್ರಹ್ಮಣ್ಯದಿಂದ ಕುಂಪಣಿ ಜನ ತೆಗೆದು ಕೊಂಡು ಸೂಜಿರಾಯರ ತಮ್ಮ ಕೃಷ್ಣಯ್ಯ ಎಂಬುವನು ಸಂತಯ್ಯ ಎಂಬುವನ ಮನೆ ಹತ್ತರ ಬಂದು ಲಡಾಯಿ ಮಾಡಿದ್ದರಿಂದ ಜಯಿಸಲಾರದೆ ವರಾರಿಯಾಗಿ ತನ್ನ ಕಡೆಯ ಕುದುರೆ ಜನ ಸಹಾ ಬಿಟ್ಟು ಹಿಂದಕ್ಕೆ ಬಳಿ ಘಟ್ಟಾದಿ (?) ಹೋದನು. ಮುವುಗೆಹಳ್ಳಿ ದೇವಸ್ಥಾನಕ್ಕೆ ಹೋಗಿ ವರಾರಿಯಾದಂಥ ಜನರ ಯಾವತ್ತು ಜಮಾಯಿಸಿಕೊಂಡು ಅಲ್ಲಿಂದ ಆಸ್ತಾರೆಗೆ ಎತೂರಿನವರಿಸಿದ್ದರಿಂದ ಆ ಊರಿಗೆ ಕಿಲ್ಲೇದಾರನು ಇವರಿಗೆ ಬರುವೆ ಹಾಗೆ ಮಾಡುಕೊಟ್ಟಿದ್ದರಿಂದ ಇದರ ಸಂಗಡ ಇರುವ ಪತ್ತುಮುಡಿ ಸುಬ್ಬರಾಯನು, ಆ ಕಡೆ ಜನ ತೆಗೆದುಕೊಂಡು ಹೋಗಿ ಕೋಟೆ ಮೇಲಕ್ಕೆ ಹೋಗುವಾಗ್ಗೆ, ಕಿಲ್ಲೆದಾರನು ಕೋಟೆ ಒಳಗಿಂದ ಬಿಚ್ಚುಕತ್ತಿ ತೆಗೆದು ಕೊಂಡು ಬಂದು, (k) ಸುಬ್ಬರಾಯನೂ ಕಿಲ್ಲೆದಾರನೂ ಕೋಟೆಯೊಳಗಿಂದ ಹೊದಿರುಗಿ ಬರುವಾಗ್ಗೆ ಕತ್ತಿಯಿಂದ ಹೊಡೆದುಹಾಕಿದನು. ಇವನ ಸಂಗಡ ಹೋದ ಜನ ಯಾವತ್ತು ವರಾರಿಯಾಗಿ ಹಿಂದಿರುಗಿ ಬಂದರು. ಅಲ್ಲಿಂದ ಫತ್ತೆ ಹೈದರ ಯಾವಲ್ಲಿಗೆ ಹೋದನು ಎಂಬುದು ಗೊತ್ತಿಲ್ಲ. ಇತ್ತಲಾಗಿ ಜಮಾಲಾಬಾದಿನಲ್ಲಿ ಇರುವ ತಿಮ್ಮಾಜಿ ನಾಯಕ ಎಂಬವನ ಮೇಲೆ ಕುಂಪಣಿ ವೆವಜು ಬಂದು ಯುದ್ಧಮಾಡಿದ್ದರಿಂದ ಕಲ್ಲಿನ ಮೇಲಿರುವ ಜನರ ಪೈಕಿ ಕೆಲವು ಜನರು ವರಾರಿಯಾಗಿ ಹೋಧರು ಕೆಲವು ಜನರು ಕೈಸೆರೆ ಸಿಕ್ಕಿದರು (ಕುಂಪಣಿಯವರು) ಕಿಲ್ಲೆಯನ್ನು ತಮ್ಮ ಸ್ವಾಧೀನ ಮಾಡಿಕೊಂಡು ರಾಜ್ಯ ಹಾಕಿ, ತಮ್ಮ ಕಡೆ ಜನರನ್ನು ಇಟ್ಟ ದ್ದಾರೆ

ಈ ಊರಿನಲ್ಲಿರುವ ದೇವಸ್ಥಾನದ ವಿವರ.

ಮುರ್ಗದ ಮೇಲೆ ಅಮ್ಮನವರ ದೇವಸ್ಥಾನ	೧
ಗಣಪತಿ ದೇವರ ದೇವಸ್ಥಾನ	೧
ಊರೊಳಗೆ ಚಿಕ್ಕದು ದೊಡ್ಡದು ಸಹ ಇಪ್ಪ ದೇವಸ್ಥಾನ	೯
ವಿಷ್ಣು ದೇವಸ್ಥಾನ	೨
ಭೂತಸ್ಥಾನ	೨
ವಿಶ್ವೇಶ್ವರ ದೇವಸ್ಥಾನ	೨
	೧೧
ಜುಮ್ಮಾ ಮಹಜೀದು	೧
ಆಲಾಬಿ ದೇವರ ಮಹಜೀದು	೩
	೪

ಊರ ಬಾಗಿಲುಗಳ ವಿವರ:—

ಕೊಡಿಯಾಲ ಬಾಗಿಲು	೧
ಈ ಬಾಗಿಲ ಹೊರಗೆ ಜುಮ್ಮಾ ಮಹಜೀದು	೧
ಸಟ್ಟಣದ ಬಾಗಿಲು	೧
ದಿಳ್ಳೀ ಬಾಗಿಲು	೧
	೪

ಮೂರು ಬಾಗಿಲು ಒಂದು ಮಹಜೀದು. ಅಂತು ನಾಲ್ಕು

ಟಿಪ್ಪಣಿ.

(a) ಈಳ ರಾಜ್ಯ ವೀರಪ್ಪಾಜಿ—(೧೬೩೭—೧೬೬೭).

(b) ಒಪ್ಪಂದ ಯಾತೆ ಕಲಿಯು.

(c) ಈ ಬಂಡೆಯ ಕಲ್ಲು ಬೆಳತಂಗಡಿಯಿಂದ ಮೂರು ಮೈಲಿ ದೂರದಲ್ಲಿ ಬೆಟ್ಟದಲ್ಲಿ ನಿಂತು 'ಗಡಾಯಿ ಕಲ್ಲು" ಎಂಬ ಹೆಸರಿಂದ ಪ್ರಸಿದ್ಧವಾಗಿದೆ.

(d) ಟೀಪುವು ತನ್ನ ತಾಮಿಯಾದ ಜಮಾಲ ಬೀಬಿಯ ಹೆಸರಿಂದ ಕಟ್ಟಿಸಿದ ಕೋಟೆಯನ್ನು ಜಮಾಲಗಢವೆಂದೂ ಅದರ ಸುತ್ತಲೂ ನರ್ಮಿಸಿದ ಪೇಟೆಯನ್ನು ಜಮಾಲಬಾದು ಎಂದೂ ಕರೆದನು.

(e) Capt. Munroe Military Govenor of Kanara.

(f) ಈತನು ಫಿಲ್ಸು ಸುಲ್ತಾನನ ಹಿರಿಯ ಮಗ.

(g) ಈತನು ಬಕ್ಕಂ ಎಂದರೆ ಮಂಜರಾಬಾದು ನಾಡಿನ (ಬಗೂರು) ಪಾಳೆಯಗಾರನು.

(h) ರಾಮರಾಜ ಕ್ಷತ್ರಿಯ ಜಾತಿಗೆ ಸೇರಿದ ಈತನು ಟೀಪುಸುಲ್ತಾನನ ಕಾಲದಲ್ಲಿ ಬೇಳಲ ಕೋಟೆಯ ಸೈನ್ಯದಲ್ಲಿ ಒಬ್ಬ ಸ್ಟು ಅಧಿಕಾರಿಯಾಗಿದ್ದನು. ಆ ಕೋಟೆಯು ಇಂಗ್ಲೀಷರ ವಶವಾದ ಬಳಿಕ ಅವರ ಕೆಳಗೆ ನೌಕರಿ ಸ್ವೀಕರಿಸಿ, ಬಳಕಂಡು ನಡೆದನು.

(i) ಈತನು ಕೊಯಮತ್ತೂರಿನಲ್ಲಿ ಟೀಪುವಿನ ಕರಣೀಕನಾಗಿದ್ದನು.

(j) ಈತನು ಬಂಟವಾಳದ ಪೈಕ ಹೆಗ್ಗಡೆಯಾಗಿದ್ದನು. ಈತನನ್ನು ನ್ಯಾ ಮನೆಯವರು ೩೦೦ ವೀರರ ಸೈನ್ಯಕ್ಕೆ ಅಧಿಪತ್ಯ ಕೊಟ್ಟು ಪುತ್ತೂರಿಗೆ ಕಳುಹಿಸಿದನು.

(k) ಇಂಗ್ಲೀಷರು ಪಂಗೆಗಾರರೆಲ್ಲ ಹಲವರನ್ನು ಹಿಡಿದು ತಿಕ್ಕಿಸಿದರಾದರೂ ಸುಬ್ಬರಾಯನೂ ಫತ್ತೆ ಹೈದರನೂ ಅವರ ಕೈಗೆ ಸಿಕ್ಕಲಿಲ್ಲವೆಂದು ಒಂದು ಪುಸ್ತಕದಲ್ಲಿ ಹೇಳಿದೆ.

ಮುಖ್ಯ ಉದ್ದೇಶ ತೊಂದ ಜಾಹೀರಾತಿಗೆ ಅಲ್ಲಿನ ಒಬ್ಬ ಕೊಗಿ—ಪತ್ರಿಕೆಯ ಜಾಹೀರಾತಿಗಾಂಗಲೂ ಕಮ್ಮಿಯ ಕಂಡಿ ನಮಗೆ ಸುಖೋಪಾಧ್ಯಾಯರಿಲ್ಲ.

ಜಾಹೀರು (ಸ್ವಲ್ಪ ಹೆಗ್ಗಳಿಕೆ ಮಿಮ್ಮು)—ಆಟೀಮ! ಕೋಗಿ—ಸಾಪ್ತ ಪಟ್ಟುಕೆಯೇ ಇಲ್ಲೀರಿ.

ಹೊಂಡ (ಸ್ವಾರ್ಥದಿಂದ)—ನನಗೆ ಲೋಕದಲ್ಲಿ ಅತ್ಯಮೂಲ್ಯವಾದ ಪಶ್ಚಿಮವನ್ನು ಕಟ್ಟಲು ಕೊಡಿಸೀರೆಂದರೆ ಏನನ್ನು ತೊಡಿಸಲಿ?
ಗಂಡ (ನಿಸ್ಪೃಹತೆಯಿಂದ)—ಹುಬ್ಬುಗಳನ್ನು ತೊಡಿಸಲು.

ಶಿಶುಮಾಯಣ ಕವಿಯ ಕಾಲವಿಚಾರ.

ಲೇಖಕರು—ಗೋವಿಂದ ಪೈ.

(All rights reserved by the Author)

ಕವಿಚರಿತಕಾರರು ಆಧರಿಸಿರುವ ಪಾಠವೇ ಸರಿಯೆಂದು ಭಾವಿಸಿದರೂ, "ತ್ರಿಪುರದಹನ"ವನ್ನು ರಚಿಸಿದ ಸಂವತ್ಸರವು ಅವರು ಹೇಳಿರುವಂತೆ ಶಾ ಶ ೧೧೩೪ ಆಗಲಾರದು. ಶಾ. ಶ ೧೩೫೪ನೆಯ ನಂದನ ಸಂವತ್ಸರದ ಮಾಘ ಶು। ಪಾಡ್ಯ ಶ್ರ ಶಕದ 1372ನೇ ಡಿಸೆಂಬರ 3ನೇ ಗುರುವಾರ ದಿನ ಶಿಶುಮಾಯಣನು ತನ್ನ "ತ್ರಿಪುರದಹನ"ವನ್ನು ಬರೆದು ಮುಗಿಸಿದನೆಂಬಲ್ಲಿ ಸಂದೇಹವಿಲ್ಲ. ಆತನಿನ ಶಿಶುಮಾಯಣನ ಜೀವಸಕಾಲವು ಶ್ರ ಶಕದ 15ನೇ ಶತಮಾನದ ಉತ್ತರಾರ್ಧವಾಗಿರಬೇಕು

ಪುರ ದಹನ' ಮತ್ತು 'ಅಂಜನಾ ಚರಿತ್ರೆ' ಗಳೆಂಬ ಸಾಂಗತ್ಯಬದ್ಧವಾದ ಕಾವ್ಯಗಳನ್ನು ರಚಿಸಿದ ಶಿಶುಮಾಯಣನೆಂಬ ಜೈನ ಕವಿಯ ಕಾಲವನ್ನು ಕಂಡು ಹಿಡಿದ ಬಗ್ಗೆ ಆತನೆ ತ್ರಿಪುರದ ಹನ'ದಲ್ಲಿರುವ ಒಂದು ಸಾಂಗತ್ಯವನ್ನಲ್ಲದೆ ಬೇರೆ ಆಧಾರತೋರಿಬರುವುದಿಲ್ಲ. ನನಗೆ ತಿಳಿದಿರುವ ಮಟ್ಟಿಗೆ ಮಂಗಳೂರಿನ 'ಕನ್ನಡ ಸಹಕಾರಿ' (XI ಒ ೪)ಯಲ್ಲಿ ಆ 'ತ್ರಿಪುರ ದಹನ'ವನ್ನು ಪ್ರಕಟಿಸುವ ವರೆಗೆ ಆ ಕಾವ್ಯವಲ್ಲಿಯೂ ಆ ಮುಂಚೆ ಪ್ರಕಟವಾಗಿರಲಿಲ್ಲ. 'ಅಂಜನಾ ಚರಿತ್ರೆ' ಇನ್ನೂ ಪ್ರಕಟವಾಗಿಲ್ಲವೆಂದು ಕಾಣುತ್ತದೆ. ಕವಿಚರಿತಕಾರರು ಕೆಂದಿರುವ 'ತ್ರಿಪುರ ದಹನ'ದ ಹಸ್ತಪ್ರತಿಯಲ್ಲಿ ಆ ಪದ್ಯದ ಪಾಠವು ಹೇಗಿದೆ ('ಕರ್ನಾಟಕ ಕವಿಚರಿತೆ'—ಪು 849)—

ಶಕವರ್ಷದ ಸಾವಿರದ ನೂರೊಳಿಳು । ತ್ಕಲವಾದಾರು ವತ್ಸರದ ।
ಪ್ರಕಟಿತ ಪುತ್ರ ವರ್ಷದ ಮಾಘ ಶುದ್ಧದಿ । ನಕಳಂಕ ಪಾಡ್ಯದೊಳಾಯ್ತು ॥

ನಾನು ಕೆಲವು ತಿಂಗಳ ಹಿಂದೆ ಮದ್ರಾಸಿನ ಪ್ರಾಚ್ಯ ಹಸ್ತಪ್ರತಿಗಳ ಭಂಡಾರ (Oriental Mss Library)ದ ಕನ್ನಡದ ಕಾಪಿಯೊಲ್ಲಿರುವ 'ತ್ರಿಪುರ ದಹನ'ದ ಕಾಗದದ ಪುಸ್ತಕದ ಹಸ್ತಪ್ರತಿಯಲ್ಲಿ (ನಂ 522) ಕಂಡ ಅದೇ ಪದ್ಯದ ಪಾಠವು ಹೆಚ್ಚುಕಡಿಮೆ ಹಾಗೆಯೇ ಇದೆ—

ಶಕ ವರ್ಷ ಸಾವಿರದ ನೂರಕ್ಕೊಳುತ್ಕಲವಾದಾರು ವತ್ಸರದ
ಪ್ರಕಟಿತ ಪುತ್ರ ವರ್ಷ ಮಾಘ ಶುದ್ಧದಿಯಕಲಂಕ ಪಾಡ್ಯದೊಳಾಯ್ತು
॥ ೨೪೨ ॥

ಕವಿಚರಿತಕಾರರು ಎಂದಿರುವಂತೆ 'ಪುತ್ರ ವರ್ಷ' ವೆಂದರೆ ನಂದನ ಸಂವತ್ಸರವೆಂಬಲ್ಲಿ ಸಂಶಯವಿಲ್ಲ. ಆದರೆ ಅವರು 'ಉತ್ಸಕಲ' ಎಂಬ ಪದಕ್ಕೆ 'ವಿಶೇಷಾರ್ಥವೇನಾದರೂ ಇರಬಹುದೋ ಏನೋ ತಿಳಿಯದು' (ಪು 850) ಎಂದು ಕಂಕಸಿರುವರಾದರೂ, ಯಾವ ಕಾರಣದಿಂದೇನೋ ಆ ನಂದನ ಸಂವತ್ಸರವು ಶಾ ಶಕ ೧೧೫೪ (ಕ್ರಿ ಶ. 1232–33) ಎಂದು ಊಹಿಸಿಕೊಂಡು ಶಿಶುಮಾಯಣನಿಗೆ ಆ ಕಾಲವನ್ನು ಗೊತ್ತುಹಚ್ಚಿರುವರು

ಆದರೆ ಡಾ। ವೆಂಕಟ ಸುಬ್ಬಯ್ಯನವರು ತನ್ನ 'ಕೆಲವು ಕನ್ನಡ ಕವಿಗಳ ಜೀವನ ಕಾಲವಿಚಾರ' ಎಂಬ ಗ್ರಂಥದಲ್ಲಿ (ಪು ೨೨೮–೩೧) ಕವಿಚರಿತಕಾರರ ಆ ಊಹೆಗೆ ಆಕ್ಷೇಪಿಸಿ, ಶಿಶುಮಾಯಣನು ತನ್ನ 'ಅಂಜನಾ ಚರಿತ್ರೆ'ಯಲ್ಲಿ ಹೊಗಳಿರುವ ಜೈನ ಗುರುಗಳ ವರಂಪರೆಯಲ್ಲಿ ತೋರುವ 'ನಾದಿ ವಿದ್ಯಾನಂದ' ಎಂಬ ಹೆಸರು ಕ್ರಿ ಶ. ಸುಮಾರು 1530 ನೆಯ ನಗರದ (E C VIII) ನಂ 46ನೆಯ ಶಾಸನದಲ್ಲಿ ದೊರೆಯುತ್ತದೆ ಎಂಬೀ ಮೊದಲಾದ ಕಾರಣಗಳಿಂದ ಶಿಶುಮಾಯಣನು ಕ್ರಿ ಶ ಸುಮಾರು 1660ರಲ್ಲಿ ಜೀವಿಸಿರಬೇಕೆಂದು ಹೇಳಿರುವರು

'ಕನ್ನಡ ಸಹಕಾರಿ'ಯಲ್ಲಿ ಪ್ರಕಟಿಸಿದ (ಮೂಡುಬಿದರೆಯ ಜೈನ ಸಾಮಿತ್ಯ ಭಂಡಾರದಿಂದ ತರಿಸಿಕೊಂಡ ಓಲೆಗರಿಯ ಮೂಲಪ್ರತಿಯ ಆಧಾರದಿಂದ ಪ್ರಕಟಿತವಾದುದೆಂದು ಕೇಳಬರುವ) 'ತ್ರಿಪುರದಹನ'ದಲ್ಲಿ ಈ ಮೇಲೆ ಕೊಟ್ಟಿರುವ ಆ ಸಾಂಗತ್ಯಕ್ಕೆ ಇದೊಂದು ಬೇರೆಯೇ ಪಾಠವಿದೆ—

ಶಕವರ್ಷ (ದ) ಸಾವಿರದ ನಾನೂರೊಕ್ಕೊಲವಾದಾರು ವತ್ಸರದ
ಪ್ರಕಟಿತ ಪುತ್ರ ವರ್ಷ (ದ) ಮಾಘ ಶುದ್ಧದಿಯಕಳಂಕ ಪಾಡ್ಯದೊಳಾ
ಯ್ತು ॥ ೨೪೬ ॥

ಕವಿಚರಿತಕಾರರು ಕಂಡ ಪಾಠದಲ್ಲಿ 'ಸಾವಿರದ ನೂರು' ಮತ್ತು 'ಉತ್ಸಕಲ' ಎಂದಿದೆ, 'ಸಹಕಾರಿ'ಯ ಪಾಠದಲ್ಲಿ 'ಸಾವಿರದ ನಾನೂರು' ಮತ್ತು 'ವಿಕಲ' ಎಂದಿದೆ ಹೀಗೆ ಇವೆರಡು ಪಾಠಗಳಲ್ಲಿ ಮುನ್ನೂರು ವರ್ಷಗಳ ಅಂತರವಷ್ಟೇ ಅಲ್ಲ, ಮೊದಲನೆಯದರಲ್ಲಿರುವ ಯಾವ ಅರ್ಥಕ್ಕೂ ಸಲ್ಲದೆ, ಅರ್ಥಕ್ಕೆ ಅಸಾಧ್ಯವೇ ಎನ್ನಬಹುದಾದ ಆ 'ಉತ್ಸಕಲ' ಎಂಬ ಪದಕ್ಕೆ ಬದಲಾಗಿ ಎರಡನೆಯದರಲ್ಲಿ ನೇರವಾಗಿ ಅರ್ಥವಾಗತಕ್ಕ 'ವಿಕಲ' ಎಂಬ ಪದವೂ ಇದೆ. ಆದರೆ ಇವೆರೆಡರಲ್ಲಿಯೂ ಯಾವ ಪಾಠವೆಂದು ಆ ಮಾಘ ಶುದ್ಧ ಪಾಡ್ಯ ಬಂದಿತ್ತೆಂದು ಹೇಳಿಲ್ಲವೆಂದೇ ಇದಕ್ಕೆ ಕಾರಣ; ವಾರವನ್ನು ಹೇಳಿದ್ದರೆ ಇವಲ್ಲಿ, ಯಾವ ಪಾಠವು ಶುದ್ಧ, ಯಾವುದು ಅಶುದ್ಧವೆಂದು ಬಹುಶಃ ಸಾಕಷ್ಟು ಸುಲಭವಾಗಿ ನಿರ್ಧರಿಸಲಾಗುತ್ತಿತ್ತೇನೋ ಹೇಗೂ ಇರಲಿ, ಈಗ ಇತರ ಸಾಧಕಗಳಿಂದಾದರೂ ಇವಲ್ಲಿ ಯಾವ ಪಾಠವು ಸರಿಯಾಗಿರಬೇಕು? ಮತ್ತು ಏಕೆ? ಎಂಬುದನ್ನು ಕಂಡಿತವಾಗಿ ನಿರ್ಧರಿಸಲಾದರೆ, ಶಿಶುಮಾಯಣನ ಕಾಲವನ್ನು ಸರಿಯಾಗಿ ಗೊತ್ತುಹಚ್ಚಬಹುದಂತಾಗುತ್ತದೆ ಎಂದು ಬೇರೆ ಹೇಳಬೇಕಿಲ್ಲ

ಇವೆರಡು ಪಾಠಗಳಲ್ಲಿ ಯಾವುದು ಸರಿ ಎಂಬುದನ್ನು ನಿರ್ಧರಿಸುವ ಮುಂಚೆ, ಆ 'ಉತ್ಸಕಲ'ವೆಂಬ ಪದಕ್ಕೆ ಅರ್ಥವಾಗುವುದಿಲ್ಲ ಎಂದು ಕವಿಚರಿತಕಾರರೂ ಡಾ। ವೆಂಕಟ ಸುಬ್ಬಯ್ಯನವರೂ ಮುಕ್ತಕಂಠವಾಗಿ ಹೇಳಿರುತ್ತಾರೆಂಬುದನ್ನು ಚೆನ್ನಾಗಿ ಗಮನಿಸಬೇಕು ಆ ಪದಕ್ಕೆ ಅರ್ಥವಾಗುವುದಿಲ್ಲ ನುತ್ತಾನ್ವಯ, ಅದಕ್ಕೆ ಅರ್ಥವೇ ಇಲ್ಲ, ಅದೊಂದು ಅನಪಾತವೆಂದು ಧೈರ್ಯವಾಗಿ ಹೇಳಬಹುದು ಅದು ಯಾವನೊಬ್ಬ ಸಂವ್ಯತಿಕಾರನಿಂದ ಆದ ಕೆಯ್ತನ್ನು ಎಂಬುದರಲ್ಲಿ ಸಂಶಯವಿಲ್ಲ ಆದರೂ ಆ 'ಉತ್ಸಕಲ' ಎಂಬ ಪದವು ಸರಿಯಾಗಿ ಅರ್ಥವುಳ್ಳ ಪದವೇ ಎಂದಾದರೆ ಆ ಪದಕ್ಕೆ, ಅಲ್ಲವೆ ಅದೊಂದು ಸಾರ್ಥವಾದ ಸರಿಯಾದ ಬೇರೆ ಪದದ ಬದಲಾಗಿ ಬರೆದುಹೋದ ಕೆಯ್ತನ್ನು ಎಂದಾದರೆ ಅಂಥ ಸಾರ್ಥವಾದ ಸರಿಯಾದ ಆ ಮೂಲಪದಕ್ಕೆ 'ಕೂಡಿಸಿದ–ಕೂಡಿಸಲ್ಪಟ್ಟ' ಅಥವಾ 'ಕಳೆದ–ಕಳೆಯಲ್ಪಟ್ಟ' ಎಂದು ತಾನೆ ಆ ಸಂದರ್ಭದಲ್ಲಿ ಅರ್ಥವಾಗಬೇಕಲ್ಲದೆ, ಬೇರಾವ ಅರ್ಥವಾದರೂ ಆಗಲಾರದಷ್ಟೆ ಅದರೆ ಈ 'ಉತ್ಸಕಲ' ಎಂಬ ಪದವಿರುವ ಪಾಠದಲ್ಲಿ 'ಸಾವಿರದ ನೂರೊಳು' ಎಂಬ ಸಪ್ತಮೀ ವಿಭಕ್ತ್ಯೆಯೊಂದಿಗೆ ಆ ಪದವು ಜೋಡಿಸಲ್ಪಟ್ಟಿರುವುದರಿಂದ, ಅದಕ್ಕೆ ಆ ಸಂಖ್ಯೆಯಲ್ಲಿ 'ಕಳೆದ–ಕಳೆಯಲ್ಪಟ್ಟ' ಎಂದು ತಾನೆ ಅರ್ಥವಾಗಬೇಕಲ್ಲದೆ, 'ಕೂಡಿಸಿದ–ಕೂಡಿಸಲ್ಪಟ್ಟ' ಎಂದು ಅರ್ಥವಾಗಲಾರದು, ಏಕೆಂದರೆ 'ಕೂಡಿಸಿದ ಎಂಬ ಅರ್ಥವುಳ್ಳ ಪದದೊಂದಿಗೆ ಚತುರ್ಥಿ ವಿಭಕ್ತ್ಯೆಯ ಪ್ರಯೋಗವೇ ಸರಿಯಲ್ಲದೆ, ಸಪ್ತಮಿಯ ಪ್ರಯೋಗವು ಸರಿಯೆನಿಸದು ಹಾಗಾದರೆ 'ಉತ್ಸಕಲ' ಎಂಬ ಪದಕ್ಕೆ 'ಕಳೆದ–ಕಳೆಯಲ್ಪಟ್ಟ' ಎಂಬ ಅರ್ಥ ಏದಿಯೇ? ಅಥವಾ 'ಉತ್ಸ' ಎಂಬ ಅಧಿಕಾರ್ಥವುಳ್ಳ ಉಪಸರ್ಗವಿರುವ ಪದವು ನಸ್ಯನಾರ್ಥವನ್ನು ಹೇಗೆ ತಾನೆ ಸೂಚಿಸೀತು?

ಡಾ। ವೆಂಕಟ ಸುಬ್ಬಯ್ಯನವರು 'ಪುತ್ರ ವರ್ಷ' ಎಂಬ ಪದಕ್ಕೂ ಅರ್ಥವು ಇಂಥದೇ ಎಂದು ನಿರ್ಧರಿಸಲಾಗುವುದಿಲ್ಲ' (ಪು ೨೨೯) ಎಂದು ಆಕ್ಷೇಪಿಸಿರುವನೇಕೋ ತಿಳಿಯದು, ಆದರೆ ತಮ್ಮ ಆಕ್ಷೇಪನೆಗೆ ಅವರು ಯಾವುದೊಂದು ಕಾರಣವನ್ನಾದರೂ ಕೊಟ್ಟಿಲ್ಲ 'ಪುತ್ರ ವರ್ಷ' ಎಂದರೆ ನಂದನ ಸಂವತ್ಸರವೇ ಬಾರ್ಹಸ್ಪತ್ಯಮಾನದ ಆ ಅರುವತ್ತು ಸಂವತ್ಸರಗಳಲ್ಲಿ 'ಪುತ್ರ' ಎಂಬ ಅರ್ಥ ಹುಟ್ಟುವ ಸಂವತ್ಸರವು 'ನಂದನ' ಎಂಬುದೊಂದೇ ವಿನಾ ಬೇರೆ ಇಲ್ಲ ಅತ ಏನ 'ಪುತ್ರ ವರ್ಷ' ಎಂಬುದು ಪ್ರತ್ಯೇಸವೂ ಅಲ್ಲ, ಅವಪಾತವೂ ಅಲ್ಲ, ಸಂವ್ಯತಿಕಾರರ ಕೆಯ್ತವ್ವೂ ಅಲ್ಲ, ಕವಿ ತಾನೇ ಸಾರ್ಥವಾಗಿ ಉಪಯೋಗಿಸಿರುವ ಪದ, ನಂದನ ಸಂವತ್ಸರವೆಂಬುದಕ್ಕೆ ತದೇವ ಅರ್ಥದಲ್ಲಿ ಇಟ್ಟಿರುವ ಸೊಗಸಾದೊಂದು ಪದ

ಹೀಗೆ ಈ ಮೇಲೆ ಕೊಟ್ಟಿರುವ ಅವೆರಡು ಪಾಠಗಳಲ್ಲಿ, ಒಂದರಲ್ಲಿ ಶಕವರ್ಷ ೧೧೦೦ರಲ್ಲಿ ೩ ವರ್ಷಗಳು 'ಉತ್ಸಕಲ'ವಾದರೆ ನಂದನ ಸಂವತ್ಸರ (ಅಂದರೆ ನಂದನ ಸಂವತ್ಸರದ ಶಕಸಂಖ್ಯೆ) ಎಂದೂ, ಇನ್ನೊಂದರಲ್ಲಿ ಶಕವರ್ಷ ೧೪೦೦ರಲ್ಲಿ ೩ ವರ್ಷಗಳು 'ವಿಕಲ'ವಾದರೆ ನಂದನ ಸಂವತ್ಸರವೆಂದೂ ತಿಳಿಯುತ್ತದೆ. ಎರಡನೆಯ ಪಾಠದಲ್ಲಿಯ 'ವಿಕಲ' ಎಂಬ ಪದಕ್ಕೆ ಕಳೆಯಲ್ಪಟ್ಟ (ಅಥವಾ ಕಡಿಮೆ ಮಾಡಲ್ಪಟ್ಟ) ಎಂದು ನಿಷ್ಕರ್ಷಾರ್ಥವಿರುವುದರಿಂದ ಹಾಗೆ ಮಾಡಿದರೆ, ಶಕವರ್ಷ ೧೪೦೦–೩=ಶಕ ೧೩೯೪=ಕ್ರಿ. ಶ. 1472—ಇದು ನಂದನ ಸಂವತ್ಸರ ತಾನೆ. ಮೊದಲನೆಯ ಪಾಠದಲ್ಲಿಯ 'ಉತ್ಸಕಲ' ಎಂಬುದಕ್ಕೆ ಅರ್ಥವಿದೆಯೇ ಎಂದಾದರೆ, ಅದೂ 'ಕಳೆದ–ಕಳೆಯಲ್ಪಟ್ಟ' ಎಂದು ತಾನೆ ಆಗಿರಬೇಕಲ್ಲದೆ ಅನ್ಯಥಾ ಆಗಿರಲಾರದೆಂದು ಈ ಮೇಲೆ ನಿರ್ಣಯಿಸಿದೆಯಾದರೂ, ಅದರರ್ಥವು ಕೂಡಿಸುವುದೆಂದೂ ಕಳೆಯುವುದೆಂದೂ ಇನ್ನೂ ನಿಷ್ಪನ್ನವಿಲ್ಲ ಎಂದು ಇಟ್ಟುಕೊಂಡು, ಶಕವರ್ಷ ೧೪೦೦ಕ್ಕೆ ೩ ವರ್ಷಗಳನ್ನು ಕೂಡಿಸಿಯೂ ನೋಡೋಣ ಶಕವರ್ಷ ೧೪೦೦ರಿಂದ ೩ ವರ್ಷಗಳನ್ನುಕಳೆದೂ ನೋಡೋಣ, ಹೇಗೆ ಮಾಡಿದರೆ ನಂದನ ಸಂವತ್ಸರದ ಶಕಸಂಖ್ಯೆ ಹುಟ್ಟುತ್ತದೆಂದು ನೊಡೋಣ—

(೧) ಶಕ ೧೪೦೦ + ೩ = ಶಕ ೧೪೦೩ = ಕ್ರಿ ಶ 1184—
ಕ್ರೋಧಿ ಸಂವತ್ಸರ

(೨) ಶಕ ೧೪೦೦–೩ = ಶಕ ೧೩೯೪ = ಕ್ರಿ ಶ 1172—
ನಂದನ ಸಂವತ್ಸರ

ಹೇಗೆಂಬುದರಿಂದ 'ಉತ್ಸಕಲ' ಎಂಬೀ ಪದಕ್ಕೆ ಅರ್ಥವೇ ಇಲ್ಲವಾದರೂ, ಇದು ಸರಿಯಾದ ಪದವೇ ಅಲ್ಲವಾದರೂ, ಇದಕ್ಕೆ ಅರ್ಥವಿದೆ ಎಂದಾದರೆ, ಅದು 'ಕಳೆದ–ಕಳೆಯಲ್ಪಟ್ಟ' ಎಂದೇ ವಿನಾ ಬೇರೆಯಲ್ಲ ಎಂದಾಗುತ್ತದೆ ಆದರೆ ಈ ಪದವೂ ಇಲ್ಲ, ಇದ್ದರೆ ಅದಕ್ಕೆ ಈ ಅರ್ಥವೂ ಆಗಲಾರದು ಎಂಬುದರಿಂದ, ಇದು ಕೇವಲ ಕೆಯ್ತಪ್ರಾಗಿರಬೇಕಲ್ಲದೆ, ಮತ್ತು ಇದರ ನೇರಾದ ಪಾಠವು 'ವಿಕಲ' ಎಂದೇ ಆಗಿರಬೇಕು ಎಂದು ನಿಶ್ಚವಾಗುತ್ತದೆ ಹಾಗೆಯೇ ಈ ಮೇಲಣ ಲೆಕ್ಕದಲ್ಲಿ ಸರಿಯಾಗಿ ನಂದನ ಸಂವತ್ಸರವು ಹೊರಡುವುದರಿಂದ 'ಪುತ್ರ ವರ್ಷ' ಎಂಬುದು ಅರ್ಥವಿಲ್ಲದ ಪದವೂ ಅಲ್ಲ, ಪ್ರತ್ಯೇಸವೂ ಅಲ್ಲ, ಸರಿಯಾದ ಅರ್ಥವಿರುವ ಪದವೆ ದೂ ಕವಿ ಅದನ್ನು ನಂದನ ಸಂವತ್ಸರ ಎಂಬ ಅರ್ಥದಲ್ಲಿ ಸಾರ್ಥವಾಗಿ ನೇರಾಗಿ ಇಂಥ ಯೋಗಿಸಿರುತ್ತಾನೆಂದೂ ನಿಶ್ಚವಾಗುತ್ತದೆ

ಈಗ ಈ ಮೇಲೆ ಕೊಟ್ಟಿರುವ ಪಾಠಗಳಲ್ಲಿ, 'ಸಾವಿರದ ನೂರು' ಎಂದಿರುವ ಮೊದಲನೆಯ ಪಾಠ ಸರಿಯಾಗಿರಲಿ, ಅಲ್ಲವೆ 'ಸಾವಿರದ ನಾನೂರು' ಎಂದಿರುವ ಎರಡನೆಯದು ಸರಿಯಾಗಿರಲಿ, ಇದಿಷ್ಟು ಸ್ವಯಂವ್ಯಕ್ತವೆ—

(ಅ) ೧೧೦೦ರಲ್ಲಿಯೂ ೧೪೦೦ರಲ್ಲಿಯೂ ಕಡೆಯ ಎರಡು ಸ್ಥಾನಗಳಲ್ಲಿ ಫಿರದು ಸೊನ್ನೆಗಳೇ ಇವೆಯಲ್ಲದೆ ಅಂಕೆಗಳಿಲ್ಲ,

(ಆ) 'ಉತ್ಸಕಲ' ಆಗಲಿ 'ವಿಕಲ' ಆಗಲಿ, ಅವಕ್ಕೆ 'ಕಳೆದ–ಕಳೆಯಲ್ಪಟ್ಟ' ಎಂದೇ ವಿನಾ ಬೇರೆ ಅರ್ಥವಲ್ಲ ಎಂಬುದರಿಂದ, ಕಡೆಯ ಎರಡು ಸ್ಥಾನಗಳಲ್ಲಿ ಎರಡು ಸೊನ್ನೆಗಳಿರುವ ಈ ೧೧೦೦ರಿಂದಲೂ ೧೪೦೦ರಿಂದಲೂ ೬ ಕಳೆಯಲ್ಪಡುವೊಡನೆ ಶೇಷಸಂಖ್ಯೆಯ ಕಡೆಯ ಎರಡು ಸ್ಥಾನಗಳಲ್ಲಿ '೯೪' ಎಂಬೆರಡು ಅಂಕೆಗಳೇ ಇರಬೇಕಲ್ಲದೆ ಬೇರಾವ ಅಂಕೆಗಳೂ ಇರಲಾರವು (೧೧೦೦–೬ = ೧೦೯೪, ೧೪೦೦–೬ = ೧೩೯೪)

ಆದುದರಿಂದ ಕವಿಚರಿತಕಾರರು ಆಧರಿಸಿರುವ ಆ ಮೊದಲನೆಯ ಪಾಠವೇ ಸರಿಯೆಂದು ಭಾವಿಸಿದರೂ, ಶಿಶುಮಾಯಣನು 'ತ್ರಿಪುರ ದಹನ'ವನ್ನು ರಚಿಸಿದ ನಂದನ ಸಂವತ್ಸರವು ಶಾ ಶ ೧೧೦೦–೬ = ಶಾ ಶ ೧೦೯೪ (=ಕ್ರಿ ಶ 1172)ನೆಯ ನಂದನ ಸಂವತ್ಸರನೇ ಆಗಬೇಕಲ್ಲದೆ, ಅವರು ಯಾವ ಕಾರಣದಿಂದೇನೋ ಹೇಳಿರುವಂತೆ ಶಾ ಶ ೧೧೩೪=ಕ್ರಿ ಶ 1232–33ನೆಯ ನಂದನ ಸಂವತ್ಸರವೆಂದಿಗೂ ಆಗಲಾರದು.

ಈಗ ಶಕ ೧೦೦೦ (ಕ್ರಿ ಶ 1078)ರಿಂದ ಶಕ ೧೬೦೦ (ಕ್ರಿ ಶ 2078)ರ ವರೆಗಣ ಈ ಸಹಸ್ರಾವಧಿಯಲ್ಲಿ, ಕೊನೆಯ ಎರಡಂಕೆಗಳು '೯೪' ಎಂದಿರುವ ಮತ್ತು ಇದು ವರೆಗೆ ಆಗಿ ಹೋಗಿರುವ ನಂದನ ಸಂವತ್ಸರಗಳು ಈ ಮೂರು ತಾನೆ ವಿನಾ ನಾಲ್ಕನೆಯದಿಲ್ಲ—ಶಕ ೧೰೯೪ (ಕ್ರಿ ಶ 1172), ಶಕ ೧೪೯೪ (ಕ್ರಿ ಶ. 1472) ಮತ್ತು ಶಕ ೧೮೯೪ (ಕ್ರಿ. ಶ. 1772). ಆದುದರಿಂದ ಈ ಮೂರರಲ್ಲಿಯ ಯಾವುದೊಂದು ತಾನೆ ನಂದನ ಸಂವತ್ಸರವೆಲ್ಲಿ ಶಿಶುಮಾಯಣನು ತನ್ನ 'ತ್ರಿಪುರ ದಹನ'ವನ್ನು ರಚಿಸಿರಬೇಕಲ್ಲದೆ, ಬೇರೆ ಯಾವ ವರ್ಷದಲ್ಲಿಯೂ ಅಲ್ಲ; ಆತನ ನಂದನ ಸಂವತ್ಸರವೆಂಬುದನ್ನು ವಿಚಾರಿಸೋಣ.

(೧) ಈತನಿಂದಿಗೂ ಶಾ. ಶ. ೧೦೯೪ (ಕ್ರಿ. ಶ. 112)ರಲ್ಲಿ ಆದನ್ನು ರಚಿಸಿರಲಾರದು; ಏಕೆಂದರೆ–

(ಕ) ಈತನು 'ಯತಿವರ ಚರಿತ್ರೆ' ಮತ್ತು 'ಅನಂತ ನಾಥ ಪುರಾಣ'ಗಳನ್ನು ರಚಿಸಿದ ಕವಿ ಜನ್ನನನ್ನು ತನ್ನ 'ಅಂಜನಾ ಚರಿತ್ರೆ'ಯಲ್ಲಿ ಹೊಗಳಿರುತ್ತಾನೆಂದು 'ಕವಿ ಚರಿತೆ' (I ಪು 350)ಯಲ್ಲಿ ಹೇಳಿದೆ. ಜನ್ನನು 'ಯತಿವರ ಧರ ಚರಿತ್ರೆ'ಯನ್ನು ರಚಿಸಿದುದು ಕ್ರಿ ಶ 1205ರಲ್ಲಿ, 'ಅನಂತನಾಥ ಪುರಾಣ'ವನ್ನು ಕ್ರಿ. ಶ. 1225ರಲ್ಲಿ.

(ಖ) ಈತನ 'ತ್ರಿಪುರದಹನ'ದಲ್ಲಿ 'ಪವುಜು'(=ಸೈನ್ಯ) ಎಂಬ ಅರಭೀ ಭಾಷೆಯ ಶಬ್ದವಿದೆ–

'ರಕ್ಷಸನಾಯಕರಿಕ್ಕಿದ ಪವುಜನಿಲ್ಲನನು'(೨೦೩)

(ಗ) ಆ ೧೨೩೮ನೆಯ ಕತ್ತಮಾನದ ಕವಿಗಳು ಮಾಡಲೊಲ್ಲದ ಪ್ರಾಸದೋಷಗಳು 'ತ್ರಿಪುರ-ದಹನ'ದಲ್ಲಿ ಅಲ್ಲಲ್ಲಿವೆ–

ಲೋಕದೊಳುಳ್ಳ ಕವಿಾಶ್ವರಕ್ಕೆ । ಗೋಚರಮಲ್ಲದಿನ್ನಮದೇ ೭೧ ॥
ಗಮ್ಮುಗೆಯನು ಪೊಡವಿಪ್ಪನ ನೋಹಾಸುರ ನಿಷ್ಠೆಯನು ಪೊರ್ದಿ ನಂದು ॥
ಆಶ್ಚರ್ಯ ಮಹಾಸೀರನು ಖಾತಿಗೊಳೆ ಸುಮ್ಮ । ನರ್ದುಪಡಿಲ ಜನನೆಲ್ಲ
॥ ೧೪೮ ॥
ನಿಮ್ಮಡಿಗಳಿಗೆ ಕಪ್ಪವನಿತ್ತು ದಾರದ । ಗಮ್ಮನಿದಾವನಿಲೆಯೊಕ್ಕು ॥ ೧೪೫ ॥
ಮುಡ್ಡೆಯುಂಗುರ ಮೊದಲಾದ ತೊಡರುಗಳ ತೋಡ್ಪನೆನಲಿಕ್ಕಿನಂದು
॥ ೧೭೯ ॥
ಕುಳ್ಳಧ್ಯಾನನೆಸಲ ಕಿಚ್ಚಿನಂ ತ್ರಿಪು । ರಕ್ಕಾಧಾರದ ಬಲವನು ॥ ೧೯೨ ॥
ನಿದ್ರಾವರಣೆಯ ಭಂಗವಡಿಸಿದ । ಸುದ್ಧಿಯನಾ ಕ್ಕೋಧ ಮೊದಲಾ–
॥ ೨೨೫ ॥

ಇವೆಲ್ಲದೆ ೪೪–೧೧೩–೧೨೫–೨೦೧–೨೪೦–೨೬೧ನೆಯ ಪದ್ಯಗಳನ್ನೂ ನೋಡುವುದು

(ಘ) ವರಸ್ವರ ಪ್ರಾಸಾಕ್ಷರಿರೆಗಳಾಗಲಾರದ ರಳ–ಳುಳ–ಕ್ಷಳಗಳು ಸರಾಗವಾಗಿ ಪ್ರಾಸಾಕ್ಷರಗಳಾಗಿ ಉಪಯೋಗಿಸಲ್ಪಟ್ಟಿವೆ–ಪದ್ಯಗಳು ೨೦–೪೧–೪೪–೯೦–೯೬–೧೨೩–೧೩೯–೧೫೮–೧೫೫–೨೦೮–೨೩೩–೨೫೩–೨೫೪–೨೫೫

(೨) ಹಾಗೆಯೇ ಈತನು ಶಕ ೧೬೯೪ (ಕ್ರಿ ಶ 1772)ನೆಯನವನೂ ಅಲ್ಲ; ಏಕೆಂದರೆ–

(ಕ) ಹಾಗಿದ್ದರೆ ಆತನ 'ತ್ರಿಪುರ ದಹನ'ದಲ್ಲಿಯ ಆ ಸಾಂಗತ್ಯದ ಪಾರವು ಮೇಲೆ ಕೊಟ್ಟಿರುವಂತೆ ಅವೆರಡೂ ಬಗೆಯಾಗಿರದೆ,

ಶಕನರ್ಷದ ಸಾವಿರದೇಳು ನೂರರೊಂ । ಭ್ಯಕಲವಾಪಾರು ವತ್ಸರದ ।

ಎಂದಿರಬೇಕಷ್ಟೆ ('ಉತ್ಪಕಲ' ಎಂದಿದ್ದರೆ ಪ್ರಸ್ತಾರಕ್ಕೆ ತೊಡಕಾಗುತ್ತದೆ), ಆದರೆ ಅಂಥಾ ಪಾರವೇ ಇಲ್ಲ

(ಖ) ಕ್ರಿ ಶ 1772ರಲ್ಲಿ ಮೈಸೂರು ಸೀಮೆ ಹೈದರ್ ಅಲ್ಲೀಯ ತಾಬೆಯಲ್ಲಿತ್ತು ಆಗ್ಗೆ ಬೆಳುಕೆರೆಯ (ಶ್ರವಣ ಬೆಳ್ಗೊಳದ) ಪುರದ ಅರಸಾದ ಗುಮ್ಮಟದೇವನು ಹೇಳಿನಲು ತಾನು ತನ್ನ 'ಅಂಜನಾ ಚರಿತ್ರೆ'ಯನ್ನು ಬರೆದೆನೆಂದು ಈ ಕವಿ ಹೇಳಿರುವ (ಕವಿಚರಿತೆ–I ಪು 349) ಆ ಗುಮ್ಮಟ ದೇವನೆಂಬ ಅರಸು ಶ್ರವಣಬೆಳ್ಗೊಳದಲ್ಲಿ ಆಳುತ್ತಿದ್ದಂತೆ ಕಾಣುವುದಿಲ್ಲ ಮಾತ್ರವಲ್ಲ, ಹೈದರನ ಕಾಲದಲ್ಲಿ ಸ್ವತಂತ್ರ ನಾದೊಬ್ಬ ಅರಸು ಬೆಳ್ಗೊಳದಲ್ಲಾಗಲೀ ಆ ಸೀಮೆಯಲ್ಲಿ ಬೇರೆತ್ತಲಾಗಲೀ ಇದ್ದಿರಲಿಕ್ಕೆ ಸಾಧ್ಯವಿದ್ದಿಲ್ಲ ತಾನು 'ಮಾನವ ಪತಿಗಳ ಸಭೆಯೊಳು ರತ್ನಸನಾನ ದೀಪದ ಪೊಲೊಪ್ಪುವನು' (ಕವಿಚರಿತೆ I–ಪು 349) ಎಂದೀ ಕವಿ ಅದೇ ಕೃತಿಯಲ್ಲಿ ಹೇಳಿಕೊಂಡಿರುವನಲ್ಲ, ಹೈದರನ ಅಳಿಕೆಯಲ್ಲಿ ಮೈಸೂರು ರಾಜ್ಯದಲ್ಲಿ ಮಾನವಪತಿಗಳು ಎಷ್ಟಿದ್ದರು? ಎಲ್ಲೆಲ್ಲಿದ್ದರು?

ಡಾ. ವೆಂಕಟ ಸುಬ್ಬಯ್ಯನವರು ಈ ತಿಮ್ಮಣ್ಣನು ಹೆಸರಿಸಿರುವ ಆತನ ಜೈನ ಗುರುಗಳ ವೀಲೆಯನ್ನು ಆಧರಿಸಿ ಈ ಕವಿಯು ಕಾಲವು ಕ್ರಿ. ಶ ಸುಮಾರು 1660 ಆಗಿರಬೇಕೆಂದಿರುವರೆಷ್ಟೆ ಇದ್ದಿಂದಿಗೂ ಸ್ಥಿರಯಾಗಿರದು; ಏಕೆಂದರೆ–

(ಕ) ಈತನು 'ತ್ರಿಪುರ ದಹನ'ವನ್ನು ರಚಿಸಿ ಮುಗಿಸಿದ ಕಾಲವು ಕೊನೆಯಲ್ಲಿ '೯೪' ಎಂದಿರುವ ಒಂದು ಸಾವಿರದಿಂದ ಸರದು ಸಾವಿರದೊಳಗಣ ನಾಲ್ಕು ಅಂಕೆಗಳ ಸಂಖ್ಯೆಯಿಂದ ನಿರ್ದಿಷ್ಟವಾದ ನಂದನ/ಸಂವತ್ಸರವೇ ಆಗಿರಬೇಕಲ್ಲದೆ, ಇತರ ಯಾವ ವರ್ಷವೂ ಆಗಿರಲಾರದೆಂದು ಈ ಮೇಲೆ ಕಂಡಿರುವೆವಷ್ಟೆ. ಅವಲ್ಲಿ ಕೊನೆಯದಾದ ಶಾ ಶ. ೧೬೯೪ (ಕ್ರಿ ಶ 1772)ಕ್ಕೂ ಇವರ ಊಹೆಯ ಕ್ರಿ ಶ 1660ಕ್ಕೂ ಸುಮಾರು 113 ವರ್ಷಗಳ ಅಂತರ ವಿದೆ ಎಂಬುದರಿಂದ ಕ್ರಿ ಶ 1772ರಲ್ಲಿ ಕಂಡಿತವಾಗಿ ಇದ್ದಿರಲಾರನೆಂಬ ಶಿಶುಮಾಯಣನು ಕ್ರಿ. ಶ 1660ರಲ್ಲಿಯೂ ಇದ್ದಿರಲಾರನೆಂಬುದು ಕಂಡಿತವೇ

(ಖ) ಆತನು ತನ್ನ 'ಅಂಜನಾ ಚರಿತ್ರೆ'ಯಲ್ಲಿ ಹೇಳಿರುವ ಆ ವೀಳಿಗೆಯೂ (ಕವಿಚರಿತೆ I ಪು 855 F N I) ಈ ವಿದ್ವಾಂಸರು ಆಧರಿಸಿರುವ ಕ್ರಿ ಶ ಸುಮಾರು 1580 ರಲ್ಲಿ ಹುಟ್ಟಿದ ನಗರ ನಂಬ್ರ 46ನೆಯ (E C VIII) ಶಾಸನದಲ್ಲಿ ವಿಸ್ತೃತವಾದ ಜೈನ ಗುರುಗಳ ಪರಂಪರೆಯೂ ತೀರ ಬೇರೆ ಬೇರೆ, ಅವೆರಡೂ ಎಂದಿಗೂ ಒಂದೇ ಗುರು ವ್ಯವರವಲ್ಲ ಅವೆರಡರಲ್ಲಿಯೂ 'ವಾದಿ ವಿದ್ಯಾನಂದ' ಎಂದು ಒಂದು ಹೆಸರಷ್ಟೇ ದೊರೆತರೆ, ಆತನ ಹಿಂದು ಮುಂದಣ ಹೆಸರುಗಳು ಇದರಲ್ಲಿ ಬೇರೆ, ಅದರಲ್ಲಿ ಬೇರೆ– 'ಅಂಜನಾ ಚರಿತ್ರೆ'ಯಲ್ಲಿಯ ವಿದ್ಯಾನಂದನ ಹೆಸರು ವಂದಿತ ಯೋಗಿ ಮತ್ತು ವರ್ಧಮಾನರೆಂಬ ಹೆಸರುಗಳ ನಡುವೆ, ಇದೆ, ನಗರದ ಶಾಸನದ ವಿದ್ಯಾನಂದನು ವಿಶಾಲಕೀರ್ತಿ ಮತ್ತು ದೇವೇಂದ್ರಕೀರ್ತಿ ಎಂಬವರ ನಡುವಣನನು ಆದುದರಿಂದ ಈ ಆಧಾರವನ್ನು ನೆಮ್ಮಲಾಗುವುದಿಲ್ಲ ಹಾಗೆಯೇ ಬ್ರಹ್ಮಕವಿ ತನ್ನ 'ವಜ್ರಕುಮಾರ ಚರಿತೆ'ಯಲ್ಲಿ ಹೆಸರಿಸಿರುವ ಕಾಣೂರ್ಗಣದ ಭಾನುಮುನಿ (ಕವಿಚರಿತೆ II ಪು 342) ಲಕ್ಷ್ಮೀಸೇನಯತಿಯ ಮತ್ತು ಪಾಲ್ಕುರ್ತಿಯ ನಡುವಣನನು, ಚಿದುರಚಂದ್ರಮನು ತನ್ನ 'ಕಾರ್ಕಳದ ಗೋಮಟೇಶ್ವರ ಚರಿತೆ'ಯಲ್ಲಿ ಹೇಳಿರುವ ಕಾಣೂರ್ಗಣದ ಭಾನುಕೀರ್ತಿ (ಕವಿಚರಿತೆ II ಪು 372) ಶ್ರುತಸಾಗರನ ಮತ್ತು ಬಲ್ಲಾಳರಾಯ ಜೀವರಕ್ಷಿತ ಚಾರುಕೀರ್ತಿಯ ನಡುವಣನನು, ಶಿಶುಮಾಯಣನು ಹೆಸರಿಸಿರುವ ಕಾಣೂರ್ಗಣದ ಭಾನುಮುನಿ (ಕವಿಚರಿತೆ I. ಪು 351) ಯಾದರೊ ಸಮಂತಭದ್ರ ಮತ್ತು ಯತಿವರ್ಧಮಾನರೆಂಬವರ ನಡುವಣನನು ಅದರಂತೆಯೆ ಆದಿಯಪ್ಪನು ತನ್ನ 'ಧನ್ಯಕುಮಾರ ಚರಿತೆ'ಯಲ್ಲಿ ಸ್ತುತಿಸಿರುವ (ಕವಿಚರಿತೆ II ಪು 414) ದೇಸೀಯಗಣದ ಚಂದ್ರಕೀರ್ತಿ ಮತ್ತು ಅವನ ಮಗ (ಶಿಷ್ಯ) ನಾದ ಪ್ರಭೇಂದು ಎಂಬವರು ಶಿಶುಮಾಯಣನಿಂದ ಸ್ತುತರಾದ ಇಂದುಕೀರ್ತಿ ಮತ್ತು ದೇಶೀಯಗಣದ ಚಂಗದೇಶದ ಪ್ರಭೇಂದು ಎಂಬವರೊಳಗಿರಲಾರರೆಂಬ ಏಕೆಂದರೆ ಆದಿಯಪ್ಪನ ಚಂದ್ರಕೀರ್ತಿಯ ಶಿಷ್ಯನೇ ಪ್ರಭೇಂದುವಾದರೆ, ಶಿಶುನಾಯಣನ ಇಂದುಕೀರ್ತಿಗೂ ಪ್ರಭೇಂದುವಿಗೂ ನಡುವೆ ಸಾಸಿರ ಕೀರ್ತಿ ಎಂಬೊಬ್ಬ ಗುರುವಾಗಿ ಹೋಗಿರುವನಷ್ಟೆ ಆದ ಕಾರಣ ಪ್ರತ್ಯೇಂಗದಲ್ಲಿಯೂ ಸರಿಸಮಾನವಿರದೆ, ಕೆಲಕೆಲವು ಹೆಸರುಗಳಷ್ಟೆ ಸಾಮಾನ್ಯವಾಗಿರುವ ಹಾಗೂ ತುದಿಯಿಂದ ತುದಿ ವರೆಗಣ ವಿವಿಧಿಯಲ್ಲಿ ನಡುನಡುವೆ ಎಷ್ಟೋ ಹೆಸರು ಗಳನ್ನು ಅಲ್ಲಲ್ಲಿ ಬಿಟ್ಟುಬಿಟ್ಟು ಒಬ್ಬೊಬ್ಬ ಕವಿ ತನಗನಗೆ ಇಷ್ಟವಿದ್ದಂತೆ ಅಥವಾ ತಾನುತಾನು ಕೇಳಿಬಲ್ಲಂತೆ ಬರೆದಿಟ್ಟ ಇಂಥಾ ಪರಂಪರೆಗಳನ್ನು ಒಂದಕ್ಕೊಂದು ಹಚ್ಚಿಸಿ ಅವಲ್ಲಿ ಒಂದೆರಡು ಹೆಸರುಗಳು ಮಾತ್ರ ಸಾಮಾನ್ಯವಿದ್ದರೆ ಅವನ್ನು ಆಧರಿಸಿ ಕಾಲಾದಿಚಾರವನ್ನು ಮಾಡಿಕೊಳ್ಳುವುದು ಸರಿಯಲ್ಲ ವೆಂದು ನನಗೆ ಕಾಣುತ್ತದೆ.

ಇನ್ನು 'ತ್ರಿಪುರದಹನ'ವು ಶಾ ಶ. ೧೦೯೪ (ಕ್ರಿ. ಶ 1172), ಶಾ ಶ. ೧೩೯೪ (ಕ್ರಿ ಶ 1472) ಮತ್ತು ಶಾ. ಶ ೧೬೯೪ (ಕ್ರಿ ಶ 1772) ಈ ಮೂರರಲ್ಲಿಯು ಯಾವು ದೊಂದು ವರ್ಷದಲ್ಲಿಯೇ ವಿನಾ ಬೇರಾನ ವರ್ಷದಲ್ಲಿಯೂ ರಚಿತವಾಗಿರಲಾರದು ಎಂಬುದಿಷ್ಟೇ ನಿಶ್ಚಿತವಿರುವಾಗ, ಹಾಗೆಯೇ ಈ ಮೂರರಲ್ಲಿಯ ಮೊದಲನೆಯ (ಕ್ರಿ. ಶ 1172) ಮತ್ತು ಕೊನೆಯ (ಕ್ರಿ ಶ 1772) ನಂದನ ಸಂವತ್ಸರಗಳಲ್ಲಿ ಈ ಮೇಲಣ ಕಾರಣಗಳಿಂದ ಅದು ರಚಿತವಾಗಿರಲಾರದೆಂದೂ ನಿಶ್ಚಿತವಿರುವಾಗ, ಅವಲ್ಲಿ ಉಳಿದ ಶಾ ಶ ೧೩೯೪ (ಕ್ರಿ ಶ 1472)ನೆಯ ನಂದನ ಸಂವತ್ಸರದಲ್ಲಿ ತಾನೆ ಅದು ರಚಿತವಾಗಿರಬೇಕೆಂದು ಸ್ವಯಂಸಿದ್ಧವಾಗುತ್ತದೆ ಆ ಕ್ರಿ ಶ 1472ನೆಯ ನಂದನ ಸಂವತ್ಸರದಲ್ಲಿ ಮಾಘ ಶುದ್ಧ ಪಾಡ್ಯವು ದಶಂಬರ 31ನೆಯ ತಾರೀಕು ಗುರುವಾರ ದಂದಾಗಿತ್ತು, ಅಂದು ತಾನೆ ಶಿಶುನಾಯಣನು ತನ್ನ 'ತ್ರಿಪುರ ದಹನ'ವನ್ನು ಬರೆದು ಮುಗಿಸಿದನೆಂಬಲ್ಲಿ ಸಂದೇಹವಿಲ್ಲ, ಆತ ಏನ ಶಿಶುನಾಯಣನ ಜೀವನಕಾಲವು ಕ್ರಿ ಶಕದ 15ನೆಯ ಶತಮಾನದ ಉತ್ತರಾರ್ಧವಾಗಿರಬೇಕೆಂಬಲ್ಲಿಯೂ ಸಂದೇಹವಿಲ್ಲ ಈ ಕಾರಣಗಳಿಂದ 'ತ್ರಿಪುರದಹನ'ದಿಂದ ಮೇಲೆ ಎತ್ತಿಕೊಟ್ಟಿರುವ ಆ ಕಾಲವಾಚಿ ಸಾಂಗತ್ಯದ ಪಾರವು ಕನ್ನಡ ಸಹಕಾರ'ಯಲ್ಲಿ ಪ್ರಕಟಿತವಾಗಿರುವ ಪೀಠರಿಗೆ ತಾನೇ ಇರಬೇಕು, ಆ ಪಾರವೇ ಶುದ್ಧವಾಗಿರಬೇಕು ವಿನಾ ಅದು 'ಕವಿಚರಿತೆ'ಯಲ್ಲಿ ಕೊಟ್ಟಂತೆ ಇರಲಾರದು, ಆದರೆ 'ಶಕವರ್ಷ(ದ) ಸಾವಿರದ ನಾನೂರರೊಳ್ಕಲವಾದಾರು ವತ್ಸರದ' ಎಂಬ ವಾರವೇ ಸರಿಯಲ್ಲದೆ, 'ಶಕ ವರ್ಷದ ಸಾವಿರದ ನೂರರೊಳಳ್ತಲ್ಕಲವಾದಾರು ವತ್ಸರದ' ಎಂಬುದು ಸರಿಯಲ್ಲವೆಂದೂ ನಿಷ್ಪನ್ನವಾಗುತ್ತದೆ

ಇನ್ನುಳಿದುದೆಂದರೆ ಶಿಶುಮಾಯಣನಿಂದ 'ಅಂಜನಾ ಚರಿತ್ರೆ'ಯನ್ನು ಬರೆಸಿದ ಆ ಬೆಳುಕೆರೆಯ ಅರಸಾದ ಗುಮ್ಮಟ ದೇವನನ್ನು ಕುರಿತು ಎಲ್ಲಿಯಾದರೂ ಕುಲ್ಲೇಖವಿದೆಯೋ ಎಂಬ ವಿಚಾರ ಶ್ರವಣಬೆಳ್ಗೊಳದ ನಂಬ್ರ 65ನೆಯ ಶಾಸನ ದಲ್ಲಿ (E C II) ಬೆಳುಕೆರೆಯಧಿಪನಾದ ಗುಮ್ಮಟನೆಂಬ ಒಬ್ಬನ ಹೆಸರಿದೆ ಎಂಬುದನ್ನು ಕವಿಚರಿತಕಾರರೇ ತೋರಿಸಿ ಕೊಟ್ಟಿರುವರು (ಕವಿಚರಿತೆ I ಪು ೩೨೦) ಆ ಶಾಸನದಲ್ಲಿ ಹೀಗದೆ––

ಪಂಚ ತ್ರಿಂಶತ್ಸಂಯುತ ಶತದ್ವಯಾಧಿಕ ಸಪ್ತಸಂತ ವರ್ಷೇಷು ।
ವೃತ್ತೇಷು ಶಕವತ್ಸರ್ಷ ತು ಕಾಲೇ ವಿಸ್ತೀರ್ಣ ವಿಶಪರ್ವ್ಯನ ನೇಮೌ ॥
ಪ್ರಮಾದಿ ಸಂವತ್ಸರೇ ವಾಸೇ ಶ್ರಾವಣೇ ತಮುಮುತ್ಥಿತಃ
ವಕ್ಷ್ಯೇ ಕೃಷ್ಣ ಚತುರ್ದಶ್ಯಾಂ ಬುಧಚಂದ್ರೋ ಮೈತ್ರಾಯುತಿಃ ॥
ಗುರು ರಾಮಚಂದ್ರ ಯತಿಪನ ವರ ಶಿಷ್ಯ ಪುಣೇಂದು ಮುನಿಯ
ನಿಸ್ತಿಗೆಯಂ ವಿ ।
ಸ್ತರದಿಂ ಮಾಡಿಂದಂ ಬೆಳು । ಕರೆಯಧಿಪಂ ರಾಯ ರಾಜಗುರುಗುಮ್ಮಟ್ಟುಂ ॥

ಎಂಬುದರಿಂದ ಈ ಶಾಸನದ ಪಾಸಾ ಕೇದಿ ಇದರಲ್ಲಿ ಹೇಳಲ್ಪಟ್ಟಿರುವ ಶಾ ಶ ೧೩೩೩ನೆಯ ಪ್ರಮಾದಿ (ಪ್ರಮಾಥೀಚ) ಸಂವತ್ಸರದ ಶ್ರಾವಣ ಬಹುಳ ೧೪ ಮಂಗಳವಾರ (ವಕ್ರ) ಅಂಗಾರಕ) ಎಂದರೆ ಕ್ರಿ ಶ 1313ನೆಯ ಅಗೋಸ್ತು 31 ನೆಯ ತಾರೀಕು ಮಂಗಳವಾರದಿಂದ ಈಚೆಯದಾಗಬೇಕು ಆದುದರಿಂದ ಕ್ರಿ ಶ 1472ರಲ್ಲಿ ಇದ್ದ ಶಿಶುಮಾಯಣನ ಸಮಕಾಲಿ'ನನಾಗಿದ್ದ ಬೆಳುಕೆರೆಯ ಅರಸಾದ ಗುಮ್ಮಟ ದೇವನೆಂಬವನು ಈ ಶಾಸನದಲ್ಲಿ ಹೇಳಲ್ಪಟ್ಟಿರುವ ಬೆಳು ಕರೆಯಧಿಪನಾದ 'ರಾಯ ರಾಜಗುರು ಗುಮ್ಮಟ'ನ ನೊಮ್ಮನಿಗನೊ ನೊಮ್ಮಗನ ಮಗನೊ ಆಗಿರಬೇಕು

ಜರ್ಮನಿಯ ವಿಮಾನಿನ ಕೈಬ್ಬಿಗೆ ೫೫ ಸಾವಿರ ಸದಸ್ಯರಿದ್ದಾರೆ ಈ ಕೈಬ್ಬಿಗೆ ಇಂಜನು ಇದ್ದ ೧೫೫ ವಿಮಾನಗಳೂ ಇಂಜನು ಇಲ್ಲದ ಗ್ಲೈಡ್ ವಿಮಾನಗಳೂ ಇದ್ದಾವೆ ಅಲ್ಲದೆ ೬೦ ಬೆಲೂನುಗಳೂ ಕೂಡ ಇವೆ ೬೯೦೦ ಯುವತಿ ವೈಮಾನಿಕರು ಇಂಜನು ಇಲ್ಲದ ವಿಮಾನುಗಳನ್ನು ಉಪಯೋಗಿಸಿದ್ದಾರೆ. ೨೬೬ ಸದಸ್ಯರು ಬೆಲೂನಿನಲ್ಲಿ ಹಾರುತ್ತಾರೆ ತಾತ್ಕಾತ್ಮನು ವಿಮಾನ ಯುಗದಲ್ಲಿರುವಾಗ ಹೆಂಡೂಸ್ಥಾನವು ಎಲ್ಲಿ?

* * * *

ಕ್ರಿಸ್ಟೋಫರ್ ಸ್ಟೋನ್ ಎಂಬುವರು ತಮ್ಮ ಉಯಿಲಿನ ಗ್ರೇಮಫೋನು ರಿಕಾರ್ಡು ಮಾಡಿಸಿದ್ದಾರೆ. ಅವರು ಮರಣ ಪಟ್ಟ ನಂತರ ಅವರ ಉಯಿಲನ್ನು ಗ್ರೇಮಫೋನು ಮೂಲಕ ಅವರ ಸ್ನೇಹಿತರಲ್ಲಿಯೇ ಕೇಳಬಹುದು ತಾನು ಪತ್ತನಂತರ ಈ ಉಯಿಲನು ಕಾನೂನಿಗೆ ವಿರುದ್ಧವೆಂದು ಯಾರಿಂದಲು ಇದನ್ನು ರದ್ದುಪಡಿಸಲು ಪ್ರಯತ್ನಿಸಿದರೆ ತಾನವರಿಗೆ ಪ್ರೇತ ಬಾಧೆ ಕೊಡುವೆನೆಂದೂ ಅವರು ಹೆದರಿಕೆಯುಟ್ಟಿದ್ದಾರೆ

* * * *

ಭವಿಷ್ಯವನ್ನು ತಿಳಿಯುವ ಕುತೂಹಲವು ಹೆಂದೀಯರಿಗೆ ಮಾತ್ರವಲ್ಲ, ಯುರೋಪ ಅಮೇರಿಕದಲ್ಲಿಯೂ ಹೆಚ್ಚಿನ ನುಂದಿ ತಮ್ಮ ಭವಿಷ್ಯವನ್ನು ತಿಳಿಯುವ ಕುತೂಹಲವಿದ್ದವ ರಾಗಿದ್ದಾರೆ. ಫಲವಾಗಿ ಅಲ್ಲಿಯೂ ಭವಿಷ್ಯಜ್ಞರು ಹೇರಳ ವಿದ್ದಾರೆ. ಅಮೇರಿಕದಲ್ಲಿ ಅಂಜನಗಿರೆರು, ಜ್ಯೋತಿಷಿ ಗಳು, ಸಾಮುದ್ರಿಕರು, ಹಸ್ತರೇಖೆವರೀಕ್ಷಕರು, ಮೊದ ಲಾದ ಎಲ್ಲಾ ಬಗೆಯ ಭವಿಷ್ಯಜ್ಞರೂ ಅದೃಷ್ಟ ತೋಧಕರೂ ಒಂದು ಲಕ್ಷ ಮಂದಿಗಂತ ಹೆಚ್ಚಿರುವರು. ಇವರ ವರ್ಷಾ ವಧಿ ಒಟ್ಟು ಉತ್ಪನ್ನವು ೩೫ ಕೋಟಿ ರೂಪ್ಯಾ. ಒಂದು ನ್ಯೂಯೋರ್ಕ್ ನಗರೀ ಗಣರಿಂದ ೩೦ ಸಾವಿರ ಜನರಿಗೆ ಇಂತಹ ಭವಿಷ್ಯ ರಿಂದ ತುಂಬಿರಿ ಈ ಉದ್ಯಾನ ಸಿಗಾಗಿ ಪ್ರತಿ ತಿಂಗಳವ್ಯಾಪಾರ ಸಂಬಂಧದ ಜಾತಕ ಬಾಂಧಿಕೊಡಲಿಕ್ಕೆ ಪ್ರತಿ ಒಬ್ಬರೂ ಇವನಿಗೆ ವರ್ಷಾವಧಿ ೨೬೫೦ ರೂಪಾಯಿ ಕೊಡುತ್ತಾರೆ.

ಗಳು ವರ್ಷಕ್ಕೆ ೨೪ ಕೋಟಿ ರೂಪ್ಯಾಗಳನ್ನು ಈ ಮೋಹ ಕ್ಯಾಗಿ ವ್ಯಯಿಸುತ್ತಾರೆ "ಚಿಕಾಗೊ" ಶಹರಿನ ನಿವಾಸಿ ಗಳು ಇದಕ್ಕಾಗಿ ವರ್ಷಕ್ಕೆ ೩೫ ಕೋಟಿ ರೂಪ್ಯಾಗಳನ್ನು ಖರ್ಚುಮಾಡುತ್ತಾರೆ. ನ್ಯೂಯೋರ್ಕಿನ ಭವಿಷ್ಯ ಹೇಳುವ ಒಬ್ಬ ಹೆಂಗುಸು ಒಂದು ವಾರಿ ಭವಿಷ್ಯ ಹೇಳಿದ್ದಕ್ಕೆ ೬೫೦ರಿಂದ ೨೬೫ ರೂಪ್ಯಾ ವರೆಗೆ ವಸೂಲು ಮಾಡುತ್ತಾಳೆ ಟೆಪ್ಪಾಲು ಮೊಲಕವೇ ತಿಂಗಳಿಗೆ ಇವಳಿಗೆ ೨೫ ಸಾವಿರ ರೂಪಾಯಿ ಉತ್ಪನ್ನವಿದೆ. ಚಿಕಾಗೊ ಪಟ್ಟಣದಲ್ಲಿ ನೂರು ಪ್ರಸಿದ್ಧ ವ್ಯಾಪಾರಿಗಳು ಗಿರಾಕಿಯಾಗುಳ್ಳ ಒಬ್ಬ ಭವಿಷ್ಯಜ್ಞನಿದ್ದಾನೆ ಪ್ರತಿ ತಿಂಗಳವ್ಯಾಪಾರ ಸಂಬಂಧದ ಜಾತಕ ಬಾಂಧಿಕೊಡಲಿಕ್ಕೆ ಪ್ರತಿ ಒಬ್ಬರೂ ಇವನಿಗೆ ವರ್ಷಾವಧಿ ೨೬೫೦ ರೂಪಾಯಿ ಕೊಡುತ್ತಾರೆ.

ಹಿಂದೀಯ ಚಲಚ್ಚಿತ್ರಗಳಲ್ಲಿರುವ ದೋಷಗಳೂ ಅವುಗಳ ನಿವಾರಣೋಪಾಯಗಳೂ.

ಲೇಖಕರು –ಟಿ. ನರ್ಸಪ್ಪ, ಬಿ. ಎ.

ಹಿಂದೂಸ್ಥಾನದಲ್ಲಿ ಇತ್ತೀಚೆಗೆ ಪ್ರಚಾರಕ್ಕೆ ಬಂದಿರುವ ಕೈಗಾರಿಕೆಗಳಲ್ಲಿ ಚಲಚ್ಚಿತ್ರ ಕೈಗಾರಿಕೆಯು ಒಂದಾಗಿರುತ್ತದೆ ಪ್ರಕೃತದಲ್ಲಿ ಎಲ್ಲಾ ಮುಖ್ಯ ಶಹರುಗಳಲ್ಲಿಯೂ ಅನೇಕಾನೇಕ ಸಿನೆಮ ಕಂಪೆನಿಗಳಿವೆ ಇವುಗಳ ಸಂಖ್ಯೆಯು ಸ್ಥಾಲದೊ ಎಂಬಂತೆ ದಿನೇ ದಿನೇ ಹೊಸ ಕಂಪೆನಿಗಳು ತಲೆಯೆತ್ತುತ್ತಲಿವೆ ಈ ಕೈಗಾರಿಕೆಯು ಸಾಕಷ್ಟು ಲಾಭಕರವಾಗಿವೆಯೆಂದೂ ಹೇಳಲು ತಕ್ಕ ಆಧಾರಗಳಿವೆ ಕೆಲವರು, ಸಿನೆಮಗಳನ್ನು ನೋತುವುದರಿಂದ ಈಗಿನ ಬಾಲಕ ಬ್ಯಾಲಿಕೆಯರ ನಡೆನುಡಿಗಳು ಕೆಟ್ಟಿರುವೆಂದು ಸಿನಿಮಗಳನ್ನೇದೂಷಿಸುತ್ತಿದ್ದರೂ, ಸಿನೆಮ ಕೈಗಾರಿಕೆಯು ಹೋಗುವಂತಿಲ್ಲ ಚಿತ್ರಗಳ ಇಂದಲೆ ಅವರು ವಹಿಸುವರುವ ಭೂಮಿಕೆಗೆ ಅರ್ಹರೆಂಬುದು ಭಾಸವಾಗುತ್ತದೆ ಆದಿಗೆ ತೊಡಿಗೆಗಳ ವಿಷಯದಲ್ಲಿ ಹಿಂದೀಯರು ವಿಶೇಷ ಧನಸ್ಯಯವನ್ನು ಮಾಡುವರೇ ಹೊರತು ಆವಾಯ ಕಥೆಯ ಕಾಲವಿಚಾರವನ್ನು ಸರಿಯಾಗಿ ಮಾಡು

ವಿಕೆಯು ಹೋಗುವಂತಿಲ್ಲ ಚಿತ್ರಗಳ ಇಂದಲೆ ಅವರು ವಹಿಸುವರುವ ಭೂಮಿಕೆಗೆ ಅರ್ಹರೆಂಬುದು ಭಾಸವಾಗುತ್ತದೆ ಆದಿಗೆ ತೊಡಿಗೆಗಳ ವಿಷಯದಲ್ಲಿ ಹಿಂದೀಯರು ವಿಶೇಷ ಧನಸ್ಯಯವನ್ನು ಮಾಡುವರೇ ಹೊರತು ಆವಾಯ ಕಥೆಯ ಕಾಲವಿಚಾರವನ್ನು ಸರಿಯಾಗಿ ಮಾಡು

ಮಿಸ್ ದುರ್ಗಾಬ್ಬಾ
ಮಿ ಲಾಜ್ ಎಂಬ ಮುಂಬ್ಬಾ ನಟೀಲರ ಮಗಳು
ಪ್ರಿನ್ಸ್ ಎಂಬ ಮಾತಾಡುವ ಚಲಚ್ಚಿತ್ರದಲ್ಲಿ ಅಭಿನಯಿಸಿದವಳು

ದಲ್ಲಿ ದೋಷಭೂರದಂತೆ ಪಾಶ್ಚಿಮಾತ್ಯರು ವಿಶೇಷ ಶ್ರಮವನ್ನು ವಹಿಸುವರು ಅಂದರೆ ಅವರು ಯೋಗ್ಯ ನಟನಟಿಯರನ್ನು ದೇಶ ವಿದೇಶಗಳಿಂದ ತರಿಸುವರಲ್ಲದೆ ಅವರನ್ನು ಅನೇಕ ವಿಧದಿಂದ ಪರೀಕ್ಷಿಸಿದ ನಂತರವೇ ಆಯಾಯ ಪಾರ್ಟುಗಳಿಗೆ ಆರಿಸುವರು. ಹಿಂದೀಯ ಚಲಚ್ಚಿತ್ರಗಳಲ್ಲಿಯಾದರೋ ಈ ವಿಷಯದಲ್ಲಿ ಸಾಕಷ್ಟು ಮುಂಜಾಗ್ರತೆಯನ್ನು ತೆಗೆದುಕೊಳ್ಳುವುದು ಅವರೂಪ ಆದುದರಿಂದಲೇ ಅವುಗಳನ್ನು ನೋಡುವಾಗ್ಗೆ, ಅವುಗಳ ನಟರು ಸ್ಥಾನದಲ್ಲಿ ಪ್ರಕೃತಿಸೌಂದರ್ಯ ಮತ್ತು ಐತಿಹಾಸಿಕ ಸ್ಥಳಗಳಿಗೂ, ಗೋಪುರ, ದೇವಾಲಯ ನದಿ ಪರ್ವತಗಳಿಗೂ ಕಡಿಮೆಯಿಲ್ಲ ಆದುದರಿಂದ ಹಿಂದೀಯರು ಫರದೆಗಳ ಮೂಲಕ ಸೀನುಗಳನ್ನು ತಯಾರಿಸುವ ದುರಭ್ಯಾಸವನ್ನು ಇನ್ನಾದರೂ ಬಿಟ್ಟುಬಿಡಬೇಕು

ಕಥೆಯನ್ನು ಆರಿಸುವ ವಿಷಯದಲ್ಲಿಯೂ ಹಿಂದೀಯರು ಅಷ್ಟೊಂದು ವಿಚಾರವನ್ನು ಮಾಡುವಂತೆ ಕಾಣುವದಿಲ್ಲ ಕೆಲವು ಕಂಪೆನಿಯವರು ಪೌರಾಣಿಕ, ಇನ್ನು ಕೆಲವರು ಸಾಮಾಜಿಕ ಕಥೆಗಳನ್ನೇ ಬರೆಯುವರು ಯಾವ ಕಥೆಗಳನ್ನು ನೋಡಿದರೂ ಅವುಗಳಲ್ಲಿ ಸಾಧಾರಣ ಮಟ್ಟಿಗೆ ಒಂದೇ ನಮೂನೆಯ ಘಟನೆಗಳು ಕಾಣಬರುವವು ಪೌರಾಣಿಕ ಕಥೆಗಳಿಗೆ ಹಿಂದೂಸ್ಥಾನದಲ್ಲಿ ಹೆಚ್ಚಿನ ಪ್ರೋತ್ಸಾ

ತೋರುತ್ತದೆ ಹಿಂದೂಸ್ಥಾನದಲ್ಲಿ ಚಾರಿತ್ರಿಕ, ವ್ಯಾವಹಾರಿಕ ಮತ್ತು ಆರೋಗ್ಯಕ ವಿಷಯಗಳನ್ನೊಳಗೊಂಡ ಚಿತ್ರಗಳ ತೀರಾ ಕಡಿಮೆ ಚಲಚ್ಚಿತ್ರಗಳ ಮೂಲಕ ಶಿಕ್ಷಣಾಭಿವೃದ್ಧಿಯಾಗಬೇಕಾದರೆ ಈ ಕೆಳಗಿನ ಹಿಂದೀಯ ಚಲಚ್ಚಿತ್ರಗಳಲ್ಲಿರುವ ದೋಷಗಳನ್ನು ನಿವಾರಿಸಿ ಅವುಗಳನ್ನು ಸುಧಾರಿತ ಸೂರ್ಗದಲ್ಲಿ ವೃದ್ಧಿಸುವದರಿಂದ ನಾಟ್ಯ ನೃತ್ಯ ಕಲೆಗಳು ಯಶಸ್ವಿಯಾಗುವಲ್ಲದೆ, ದಣದವರಿಗೆ ವಿನೋದವೂ ಅಶಿಕ್ಷಿತರಿಗೆ ಶಿಕ್ಷಣವೂ, ಅನನುಭವಿಗಳಿಗೆ ಲೋಕಾನುಭವವನ್ನೂ ದೊರೆಯುವುದರಲಿ ಸಂದೇಹವಿಲ್ಲ ಸಿನೆಮ ಕೈಗಾರಿಕೆಯ ಅಸ್ತಿತ್ವವೇ ಚಿತ್ರಗಳ ಯೋಗ್ಯಾಯೋಗ್ಯತೆಯ ಮೇಲೆ ಹೊಂದಿರುತ್ತದೆ ಈಗಿನ ಹಿಂದೀಯ ಚಲಚ್ಚಿತ್ರಗಳು ಎಷ್ಟೋ ಉತ್ತಮವಾಗಿದ್ದರೂ ಪಾಶ್ಚಿಮಾತ್ಯರಷ್ಟಂತೂ ಅವೇಗದವರ ಚಿತ್ರಗಳು ಹೊಂದಿರುವ ಉತ್ಕೃಷ್ಟತೆಯನ್ನು ಹೊಂದಿರುವವೆಂದು ಹೇಳಬರುವುದಿಲ್ಲ ಇವುಗಳ ಸುಧಾರಣೆಯ ಬಗ್ಗೆ ಚಲಚ್ಚಿತ್ರ ಪ್ರವೀಣರೂ, ನಾಟಕ ಸಾಹಿತ್ಯ ನೃತ್ಯ ಕಲಾಕೋವಿದರೂ, ಧನವಂತರೂ ಕೈಹಚ್ಚಬೇಕಾಗಿದೆ

ಚಿತ್ರವು ಆಕರ್ಷಣೀಯವಾಗಿರಬೇಕಾದರೆ ಉತ್ತಮ ತರದ ನಟ ನಟಿಯರು ಬೇಕು ಯೋಗ್ಯವಾದ ಪ್ರಕೃತಿ ಸೌಂದರ್ಯದ ಬೆಂಬಲವಿರಬೇಕು ಯೋಗ್ಯ ಉಡಿಗೆ ತೊಡಿಗೆಗಳ ಸಹಾಯವೂ ಬೇಕು ಸದ್ಯಕ್ಕೆ ಹಿಂದೂಸ್ಥಾನದಲ್ಲಿ ಉತ್ತಮ ತರಗತಿಯ ನಟನಟಿಯರು ಬಹು ವಿರಳರಾಗಿರುವರು ಅವರನ್ನು ಬೆರಳಿನ ಮೇಲೆ ಎಣಿಕೆಮಾಡಬಹುದು (ಬೆರಳಿನ ಮೇಲೆ ಬರುವವರ ಪ್ರಾಮಾಣ್ಯವೂ ಶ್ರೇಷ್ಠವೆನ್ನಲಾಗುವದಿಲ್ಲ–ಸಂ) ಕಥೆಯಲ್ಲಿರುವ ಭೂಮಿಕೆಗಳನ್ನು ವಹಿಸುವವರು ಆಯಾಯ ಪಾರ್ಟುಗಳನ್ನು ಪ್ರದರ್ಶಿಸಲು ಯೋಗ್ಯವಾದ ವಿದ್ಯೆ, ಅಂಗಸೌಷ್ಠವ, ಅಭಿನಯ ಮತ್ತು ರೂಪವುಳ್ಳವರಾಗಿರಬೇಕು ಕಥೆಯಲ್ಲಿ ಅಡಕವಾಗಿರುವ ಭಾವನೆಗಳನ್ನೂ, ರಸಗಳನ್ನೂ ಪ್ರದರ್ಶಿಸುವಷ್ಟು ವಿಚಕ್ಷಣರಾಗಿರಬೇಕು. ಪಾಶ್ಚಿಮಾತ್ಯರ ಚಿತ್ರಗಳನ್ನು ನೋಡಿದರೆ ಅವುಗಳಲ್ಲಿ ಹೆಚ್ಚಿನವರೊಳಗೆ ಪ್ರತಿಯೊಬ್ಬನೂ, ಪ್ರತಿಯೊಬ್ಬಳೂ ಆಯಾಯ ಭೂಮಿಕೆಗಳನ್ನು ವಹಿಸಲು ಸರ್ವವಿಧದಲ್ಲಿಯೂ ಯೋಗ್ಯರಾಗಿ ಕಾಣುವರು. ಈ ವಿಷಯ ವಂತಿಲ್ಲ ಪಾಶ್ಚಿಮಾತ್ಯರು ಬೇರೆ ಬೇರೆ ಕಥೆಗಳಿಗೆ ಬೇಕಾಗಿರುವ ದೃಶ್ಯಗಳನ್ನು ಮೊದಲೇ ತಯಾರಿಸುವರು ಪ್ರಕೃತಿ ಸೌಂದರ್ಯದ ದೃಶ್ಯವು ಬೇಕಾಗಿದ್ದರೆ ಅಂಥಾ ಸ್ಥಳಗಳಿಗೆ ಹೋಗಿ ಅಲ್ಲಿ ತಮ್ಮ ಚಿತ್ರಗಳನ್ನು ತೆಗೆಯುವರು ಹಿಂದೂ

ಹವಿದ್ದಂಕೆ ಕಂತ ಒಂದೆ ಆಧುನಿಕ ಕಾಲಗಳನ್ನು ತಿರಿಗಿ ತಿರಿಗಿನೆಂಡಿಜನರು ಬೇಸ್ತಿರುವದರಿಂದ ಅವುಗಳು ಎಲ್ಲಾ ಜಾತಿಯ ನರಿಗೂ ಆಕರ್ಷಣೀಯವು ಆಗುವುದಿಲ್ಲ ಜನರಲ್ಲಿರತಕ್ಕ ಸಾರ್ವಜನಿಕ ದೌರ್ಬಲ್ಯಗಳನ್ನು ಆದರ್ಶಪೂರ್ವಕವಾಗಿ ಪರಿಹರಿಸುವ ಸಾರ್ವಜನಿಕ ಕಥೆಗಳು ಸರ್ವ ಜನರಿಗೂ ಮಾನ್ಯವಾದವುಗಳೆಂದು ನಮ್ಮ

ಅವರು ವಹಿಸುವರುವ ಭೂಮಿಕೆಗೆ ಅರ್ಹರೆಂಬುದು ಭಾಸವಾಗುತ್ತದೆ ಆದಿಗೆ ತೊಡಿಗೆಗಳ ವಿಷಯದಲ್ಲಿ ಹಿಂದೀಯರು ವಿಶೇಷ ಧನಸ್ಯಯವನ್ನು ಮಾಡುವರೇ ಹೊರತು ಆವಾಯ ಕಥೆಯ ಕಾಲವಿಚಾರವನ್ನು ಸರಿಯಾಗಿ ಮಾಡು

ಹಿಂದೂಸ್ಥಾನದಲ್ಲಿ ಭಾಷಾವಾರ್ಯತೆಯು ಇಲ್ಲದಿರುವದರಿಂದ ಚಲಚ್ಚಿತ್ರ ಕೈಗಾರಿಕೆಗೆ ಅದೊಂದು ದೊಡ್ಡ ಆತಂಕವು ಹಿಂದೂಸ್ಥಾನದಲ್ಲಿ ಚಿತ್ರದ ವಿಷಯಕವಾದ ಸೂಚನೆಗಳನ್ನು ಮೂರು ಯಾ ನಾಲ್ಕು ಭಾಷೆಗಳಲ್ಲಿ ಕೊಡಬೇಕಾಗುತ್ತದೆ ಇದರಿಂದ ಮೂಲಭಾಷಾನಂಭಾಷೆಯ ಸ್ವಾರಸ್ಯವು ಹೋಗುತ್ತದಲ್ಲದೆ ಮತ್ತು ನಾಲ್ಕು ಭಾಷೆಗಳಲ್ಲಿನ ಟೀಕೆಗಳನ್ನು ತೋರಿಸುವ ಅನಿವಾರ್ಯತೆಯಿರು

ವದರಿಂದ ಶ್ರೇಕ್ಷಕರಿಗೆ ಸಮಯವು ಹಾಳಾಗುತ್ತದೆ. ಹಿಂದೀಯ ಚಲಚ್ಚಿತ್ರಗಳು ವಿಷಯದ ಆದ್ಯತೆಯ ಬೇಕಾಬಿಟ್ಟಿ ಇರಲಿಂದು ಕಾರಣ. ಹಿಂದೂಸ್ಥಾನದಲ್ಲಿ ಹಿಂದೀ ಭಾಷಾವ್ಯವಹಾರವು ತುಂಬಾ ಬಹು ಭರದಿಂದ ಸಾಗುತ್ತಿರುವುದರಿಂದ ಇನ್ನು ಮುಂದಿನ ಚಿತ್ರಗಳಲ್ಲಿ ಇಂಗ್ಲೀಷು ಮತ್ತು ಹಿಂದೀ ಭಾಷೆಯಲ್ಲಿ ಸೂಚನೆಗಳನ್ನು ಕೊಟ್ಟರೆ ಶಾಕಾಗುವದೆಂದು ತೋರುತ್ತದೆ.

ಹಿಂದೀಯ ಕಥೆಗಳಲ್ಲಿ ಕೆಲವು ಅಸಂಭವನೀಯವಾದ ವಿಷಯಗಳನ್ನು ಪ್ರದರ್ಶಿಸುವಾಗ ನಗೆಯು ಬರುವುದು. ವಾಚ್ಚಿಮಾತ್ಯರು ಇಂಥಾ ಸಂಗತಿಗಳನ್ನು ಪ್ರದರ್ಶಿಸುವದರಲ್ಲಿ



ಮಿಸ್. ಮಾಧುರಿ.

ಮುಂಬಾಯಿಯ ಸಿನೆಮಾ "ನಕ್ಷತ್ರ"

ಗಳನ್ನು ವಚೀಲಸಲು ಬಹು ಶ್ರಮವನ್ನು ವಹಿಸುವರು. ಹಿಂದೀಯ ಚಿತ್ರಗಳಲ್ಲಿ ಅನೇಕ ವೇಳೆ ಈ ವಿಷಯದಲ್ಲಿ ದೋಷ ಬರುವುದುಂಟು. ಆದಕೆ ಸಾಧನೆ ಮಾಡಿದರೆ ಹಿಂದೀಯ ಚಲಚ್ಚಿತ್ರವು ಎಷ್ಟು ಸ್ವಾರಸ್ಯಯುಕ್ತವಾಗಿಯೂ, ಶಿಕ್ಷಣಯುಕ್ತವಾಗಿಯೂ ವರ್ಣಿಸಬಹುದೆಂಬುದು "ದೇವದಾಸ", "ಚಂದ್ರಸೇನ" ಮೊದಲಾದ ಉಜ್ವಲ ಹಿಂದೀಯ ಚಲಚ್ಚಿತ್ರಗಳಿಂದ ತಿಳಿಯಬಹುದು. ಆದುದರಿಂದ ಹಿಂದೀಯ ಸಿನೆಮ ಪರಿಣಾಲಕರು ತಮ್ಮ ಚಿತ್ರಗಳಲ್ಲಿ ಕಾಲದೇಷಗಳು ಭಾರ್ಧಕ್ಕೆ ಹೋಗುವದು ಅತ್ಯಗತ್ಯ.

ಹಿಂದೀಯರು ಖಾಲಿ ಚಲಚ್ಚಿತ್ರಗಳನ್ನು ತಯಾರಿಸುವದರಲ್ಲಿ ಸಾಕಷ್ಟು ನಿಪುಣತೆಯನ್ನು ಹೊಂದದೆ ಮಾತಾಡುವ ಚಲಚ್ಚಿತ್ರಗಳಿಗೆ ಕೈಹಾಕಿರುವದರಿಂದ ವಿಶೇಷ ಟೀಕೆಗೆ ಗುರಿಯಾಗಿರುವರು. ಭದ್ರವಾದ ತಳಹದಿಯಿಲ್ಲದ ಭವನವು ಮೆಳಿಗಾಳಿಯ ಬಡಿತದಿಂದ ಕುಸಿದು ಬೀಳುವಂತೆ, ಖಾಲಿ ಚಲಚ್ಚಿತ್ರದಲ್ಲಿಯೇ ಗೌರವ ನಿಪುಣತೆಯನ್ನು ಹೊಂದದವರು ಮಾತಾಡುವ ಚಲಚ್ಚಿತ್ರಕ್ಕೆ ಕೈಹಾಕಿದುದು, ಅತಾಲವಾಯು ತೆನ್ನಬಹುದು. ಹಿಂದೂಸ್ಥಾನದಲ್ಲಿ ಪ್ರಥಮ ಮಾತಾಡುವ ಚಲಚ್ಚಿತ್ರವಾದ "ಆಲಂ-ಆರಾ" ಎಂಬ ಕಥೆಯು ಮಾತಾಡುವ ಪಟ್ಟಿಗೆ ದೋಷಯುಕ್ತವಾಗಿದ್ದರೂ ಅಭಿನಯದ ಮಟ್ಟಿಗೆ ಅಪ್ರತಿಮವಾಗಿರುವದೆಂದೇ ಹೇಳಬಹುದು. ಹಿಂದೀಯರು ಸಾಧನೆ ಮಾಡಿದರೆ, ಏನು ಮಾಡಬಲ್ಲರಿಂಬುದಕ್ಕೆ ಮಾತಾಡುವ ಈ ಪ್ರಥಮ ಚಲಚ್ಚಿತ್ರದಲ್ಲಿನ ಅಭಿನಯವೇ ನಿದರ್ಶನವು. ಆದರೂ ಹಿಂದೀಯ ಚಲಚ್ಚಿತ್ರಗಳು ಮೊದಲು ತನ್ನ ಮೌನತೆಯಿಂದ ಪ್ರೇಕ್ಷಕರನ್ನು ಮುಗ್ಧಗೊಳಿಸಿದ ನಂತರ ಮಾತಾಡಲು ಆರಂಭಿಸುವುದು ಲೇಸು.



ಮಿಸ್. ಕಾಂತಕುಮಾರಿ.

ರಣಜಿತ್ ಕಂಪೆನಿಯ ಸಿನೆಮಾ "ನಕ್ಷತ್ರ"

ಪ್ರಹಸನಗಾರರಿಗೂ ಹಿಂದೂಸ್ಥಾನದಲ್ಲಿ ಕಡಿಮೆಯಿಲ್ಲ. ಹೀಗಿರುವಾಗ ಪಾಶ್ಚಿಮಾತ್ಯರಲ್ಲಿರುವಂತೆ ಹಿಂದೀಯರೂ ಕೆಲವಾದರೂ ಪ್ರಹಸನ ಚಿತ್ರಗಳನ್ನು ತಯಾರಿಸುವದು ಲೇಸು.

ವ್ಯಾಣಹಾಸಿಗೂ ಹೆದರುವದಿಲ್ಲ ಅಥವಾ ವಿಶೇಷ ವಿಲಕ್ಷಣತೆಯನ್ನು ತೋರಿಸಿ ತಾವು ಮಾಡುವ ಕೃತಕ ಆನೈಸರ್ಗಿಕ ಕೆಲಸಗಳನ್ನು ತಾವು ನಿಜವಾಗಿಯೇ ಮಾಡುವಂತೆ ಭಾಸವಾಗುವ ಹಾಗೆ ಯತ್ನಿಸುವರು. ಹಿಂದೀಯರಿಗೆ ಅಸಂಭವನೀಯ ಮತ್ತು ಅತ್ಯುಕ್ತಿಯ ಮೇಲೆ ತುಂಬಾ ಪ್ರೀತಿಯಿದ್ದಂತೆ ಕಾಣುವುದು. ಒಂದು ವೇಳೆ ಅಂಥಾ ಅಸಂಭವನೀಯ ಸಂಗತಿಗಳನ್ನು ವಾಸ್ತವವಾಗಿ ಮಾಡಿ ತೋರಿಸಲು ಅಸಾಧ್ಯವಾಗಿದ್ದರೆ, ಅವುಗಳನ್ನು ಆಕ್ಷೇಪಣೀಯವಾಗುವ ನಮೂನೆಯಲ್ಲಿ ಮಾಡುವದಕ್ಕಿಂತಲೂ ಅವುಗಳನ್ನು ದೃಶ್ಯಗಳ ಮಧ್ಯೆ ಬರುವ ಗದ್ಯಗಳ ಮೂಲಕ ಸೂಚಿಸುವುದು ಲೇಸು.

ಹಿಂದೀಯ ಚಲಚ್ಚಿತ್ರಗಳ ಕಥೆಯಲ್ಲಿ ಇನ್ನೊಂದು ದೋಷವಿರುವದು. ಪಾಶ್ಚಿಮಾತ್ಯರ ಕಥೆಗಳಲ್ಲಿ ಆರಂಭದಿಂದ ಅಂತ್ಯದ ವರೆಗೂ ಸ್ವಾರಸ್ಯವಿರುವದು. ಕಥೆಯೂ ಅಷ್ಟೊಂದು ಉದ್ದವಾಗಿರುವದಿಲ್ಲ. ಕಥೆಯ ಎಲ್ಲಾ ಅಂಶಗಳು, ಆ ಕಥೆಯಲ್ಲಿ ಅಡಕವಾಗಿರುವ ಮುಖ್ಯ ತತ್ವವನ್ನು ಪುಷ್ಟೀಕರಿಸಿ ಅದಕ್ಕೆ ವೇಗವನ್ನು ಕೊಡುವವು. ಹಿಂದೀಯ ಕಥೆಗಳಲ್ಲಿ ಉಪಕಥೆಗಳು ವಿಪರೀತವಿರುತ್ತವೆ. ಕಥಾನಾಯಕನ ಅಥವಾ ನಾಯಕಿಯ ಅಭ್ಯುದಯಕ್ಕೆ ಅಲ್ಲಲ್ಲಿ ಅನೇಕಾನೇಕ ಒಂದೇ ನಮೂನೆಯ ಅಕಂಳಗಳು ಬರುವವು. ಇವುಗಳ ದೆಸೆಯಿಂದ ಕಥೆಯ ಮುಖ್ಯ ತತ್ವವು ಮರೆಯಾಗಿ ಕಥೆಯು ವೇಗವನ್ನು ಕಳೆದು ನಿಸ್ಸಾರವಾಗುವುದು.

ಕಾಲಸ್ಥಿತಿ ಗಣನೆಯು ಚಲಚ್ಚಿತ್ರಕ್ಕೆ ಬಹು ಮುಖ್ಯವು. ಈ ವಿಷಯದಲ್ಲಿ ಪಾಶ್ಚಿಮಾತ್ಯರು ಬಹು ಹೆಚ್ಚಿನ ಪ್ರಯತ್ನವನ್ನು ವಹಿಸುವರು. ಚಲಚ್ಚಿತ್ರಕ್ಕೆ ತಮಗುಮನೆಯೆಂದೆನಿಸಿಕೊಂಡಿರುವ ಹೋಲಿವುಡಿನಲ್ಲಿ ಯಾವುದೇ ಶತಮಾನದ ಅಥವಾ ಯಾವುದೇ ದೇಶದ ವಿಷಯಕವಾದ ಕಥೆಯನ್ನು ಪ್ರದರ್ಶಿಸಲು ಯೋಗ್ಯವಾದ, ಆ ಕಾಲದ ವಿಲ್ಲಕ್ಷಣವಾದ ಕಟ್ಟೋಣಗಳು, ಬೀದಿಗಳು, ಕೆರೆಗಳು, ವಿಹಾರಾದಿ ಉದ್ಯಾನವನಗಳಿರುವಂತೆ, ಅದೇ ಮೇರೆಗೆ ಪಾಶ್ಚಿಮಾತ್ಯರು ಆಯಾ ಕಾಲದ ಉಡುಗೆ ತೊಡುಗೆ ಆಕಾರ ವಿಹಾರ

ಸ್ಟೈಕ್.

ಚಲಚ್ಚಿತ್ರಗಳು ಧನಿಕರಿಗೆ ನಿತ್ರಾಂತಿಯನ್ನೂ ವಿನೋದವನ್ನೂ ಕೊಡುವರೆಂಬುದಕ್ಕೆ ಸಂದೇಹವಿಲ್ಲ. ಪಾಶ್ಚಿಮಾತ್ಯರಲ್ಲಿ ಅನೇಕ ಸ್ವಾರಸ್ಯಯುಕ್ತವಾದ ಚಿಕ್ಕ ಚಿಕ್ಕ ಪ್ರಹಸನಗಳು ಇರುವವು. ಹಿಂದೀಯರು ಇಂಥಾ ಚಿಕ್ಕ ಪ್ರಹಸನಗಳನ್ನು ಅನೇಕ ತಯಾರಿಸುವದಿಲ್ಲವೇ ತೀ

ಹಿಂದೂಸ್ಥಾನದಲ್ಲಿ ನಟನಟಿ ವರ್ಗಕ್ಕೆ ವಿಶೇಷವಾಗಿ ನೈತಿಕತೆಯನ್ನು ಕೊಡುವದಿಲ್ಲ. ಹಿಂದೀಯ ಸಿನೆಮ ಕಂಪೆನಿಯಲ್ಲಿ ಒಕ್ಕ ನೆಟನಟಿಯರಿಗೆ ಸಾಕಷ್ಟು ಸಂಬಳವೂ, ಗೌರವವೂ, ಪ್ರೋತ್ಸಾಹವೂ ಇಲ್ಲದ್ದರಿಂದ ಯೋಗ್ಯರಾದ ಮತ್ತು ವಿದ್ಯಾವಂತರಾದ ನಟನಟಿಯರು ಹೆಚ್ಚಿಜ್ಜಾಗಿ ಇದಿರು ಬರಲು ಅಂಜುವರು. ಆದುದರಿಂದಲೇ ಮೇಲೆ ಹೇಳಿರುವಂತೆ ಇಲ್ಲಿ ಉತ್ತಮ ತರಗತಿಯ ನಟನಟಿಯರು ವಿರಳರು. ಸಂಬಳವೂ, ಗೌರವವೂ, ಪ್ರೋತ್ಸಾಹವೂ ಹೆಚ್ಚುವದಾದರೆ ಈ ಕೈಗಾರಿಕೆಯಲ್ಲಿ ಉತ್ತಮತರದ ಕುಲೀನೆಯರೂ ಸುಶಿಕ್ಷಿತ ನಟನಟಿಯರೂ ಸೇರಿ ಹಿಂದೀ ಚಲಚ್ಚಿತ್ರಗಳು ಉತ್ಕೃಷ್ಟವಾಗುವುವು.

ಮೇಲೆ ನಮೂದಿಸಲ್ಪಟ್ಟಿರುವ ದೋಷಗಳಿಗೆ ಧನಾಭಾವವೇ ಮುಖ್ಯ ಕಾರಣವು. ಹಿಂದೂಸ್ಥಾನದಲ್ಲಿ ಅಯೋಗ್ಯತರ ಸ್ಪರ್ಧೆಗೆ ಕಡಿಮೆಯಿಲ್ಲ. ಒಬ್ಬನು ಒಂದು ಹೊಸ ಕೈಗಾರಿಕೆಯನ್ನು ಆರಂಭಿಸಿದನೆಂದರೆ ಕೂಡಲೇ ಅನೇಕರು ಅದೇ ಕೈಗಾರಿಕೆಯನ್ನು ಪ್ರಾರಂಭಿಸುವರು. ಅರ್ಧವಿಲ್ಲದ ಸ್ಪರ್ಧೆಯಿಂದ ಲಾಭವು ಕಡಿಮೆಯಾಗುವುದು. ವಾಚ್ಚಿಮಾತ್ಯ ದೇಶಗಳಲ್ಲಿ ಅನೇಕ ಚಿಕ್ಕ ಚಿಕ್ಕ ಕಂಪೆನಿಗಳು ಒಟ್ಟಾಗಿ ಒಂದು ಕಂಪೆನಿಯಾಗಿ ಸಹಕರಿಸಿರುವುದರಿಂದ ವಾಚ್ಚಿಮಾತ್ಯ ಸಿನೆಮ ಕಂಪೆನಿಗಳಿಗೆ ವಿಶೇಷ ಧನಸಹಾಯವಿರುವುದು. ಹಿಂದೂಸ್ಥಾನದಲ್ಲಿ

ಸಿನೆಮಾ ನೋಟಗಳು.

ಸಿನೆಮಾದಲ್ಲಿ ಕುಟುಂಬಸ್ಥರಾದ ಕುಲೀನ ಸ್ತ್ರೀಯರೇ ಭಾಗವಹಿಸಿಕೊಳ್ಳಬೇಕಾಗಿ ಕೆಲವರ ಸೂಚನೆ, ಇಲ್ಲದಿದ್ದರೆ ಸಿನೆಮಕ್ಕೆ ಮರ್ಯಾದೆ ಬರುವುದಿಲ್ಲವಂತೆ ನಟನೆಗೆ ಮಹತ್ವವೂ ಬರುವುದಿಲ್ಲವಂತೆ!

* * * * *

ಆದರೆ ಪಾಶ್ಚಾತ್ಯರ ಆ ಆದರ್ಶ ಸಿನೆಮಗಳ ನಟರೊಳಗೆ ಕುಲೀನರೆಷ್ಟು ಮಂದಿ? ಅನೈತಿಕಗಿನ ವ್ಯಕ್ತಿಗಳ ನುಡುವೆ ಮತ್ತು ವಿಚ್ಛೇದ (Marriage & Divorce) ಗಳ ಸಂಖ್ಯೆ ನೋಡಿದರೆ ತಿಳಿಯದೇ? ಗಾಂಧರ್ವ ವಿವಾಹಗಳ ಸಂಖ್ಯೆ ಕೇಳುವುದೇ ವೇಡ

* * * * *

ಬೆಂಗಳೂರಿನ ಚಲಚಿತ್ರ ಕಂಪೆನಿಯ ನಟರು ಮದ್ರಾಸಿಗೆ ಹೋಗದೆ ಮದ್ರಾಸಿನಲ್ಲಿ ಅಭಿನಯಿಸಬೇಕಾದ ನಟನಾವಳಿಗಳ ಚಲಚಿತ್ರವನ್ನು ತಯಾರಿಸುವುದು ಸಾಧ್ಯವೇ? ಅಮೇರಿಕದಲ್ಲಿ ಆ ರೀತಿಯ ಚಲಚಿತ್ರಗಳಾಗುತ್ತವೆ ಖಾಲಿ ಸ್ಥಳದಲ್ಲಿ—ಪ್ಯಾರಿಸಿನಲ್ಲಿ ಅಭಿನಯಿಸಬೇಕಾದ ಪಟಿವೆಗಳನ್ನು —ಅಭಿನಯಿಸಿ ಚಿತ್ರ ತೆಗೆಯುವರು, ಪ್ಯಾರಿಸಿನ ಯಾವ ಭಾಗಗಳಲ್ಲಿ ಈ ಅಭಿನಯವಾಗಬೇಕೋ ಅವುಗಳ ಚಿತ್ರವನ್ನೂ ತೆಗೆಯುವರು ಇವೆರಡನ್ನೂ ಜೋಡಿಸುವರು ನೋಡುವಾಗ ನಟನಟಿಯರು ಪ್ಯಾರಿಸಿನಲ್ಲಿ ಅಭಿನಯಿಸುವಂತೆಯೇ ಕಾಣುವರು ಇದಕ್ಕೆ (Dunning's Process) ಎಂದು ಹೆಸರು

* * * * *

ಇಂಗ್ಲೆಂಡಿನಲ್ಲಿ ಕೂಡ ಇದರ ಕ್ರಮ ತಿಳಿಯದೆ ಅಮೇರಿಕದಿಂದ ಅದು ಗೊತ್ತಿದ್ದವರನ್ನು ಕರೆಸಿ ಕಲಿತುಕೊಳ್ಳುವರು ಈ ಕ್ರಮದಿಂದ ಇದೇ ನಾದರಿಯ ಹಲವು ಆಶ್ಚರ್ಯಗಳನ್ನುಂಟುಮಾಡುವ ಮತ್ತು ಅಸಾಧ್ಯವೆಂದು ಕಾಣುವ ದೃಶ್ಯಗಳನ್ನು ತೋರಿಸಬಹುದು ಮತ್ತು ಖರ್ಚನ್ನು ಬಹಳವಾಗಿ ಉಳಿಸಬಹುದು

* * * * *

ಪಾಶ್ಚಾತ್ಯರಲ್ಲಿ ಸಿನೆಮಾ ನಟರಿಗೆ ಬಹಳ ಮರ್ಯಾದೆ ಇದೆ ಇಂಗ್ಲೆಂಡಿನಲ್ಲಿ ಜಾರ್ಜ್ ಚೆಪ್ಲಿನಿಗೆ ರಾಜರಿಗೆ ಕೊಡುವಂತಹ ಮರ್ಯಾದೆಯನ್ನು ಕೊಡುತ್ತಾರೆ ಅಮೇರಿಕದ ಪಾರ್ಲಿಮೆಂಟಿನ ಪ್ರೇಕ್ಷಕ ವಿಭಾಗದಲ್ಲಿ ಡಗ್ಲಾಸ್ ಫೆರ್ಬೇಂಕರು ಪ್ರವೇಶಿಸಿದ ಕೂಡಲೇ ಇಡೀ ಪಾರ್ಲಿಮೆಂಟು ಎದ್ದುನಿಂತು ಅವರಿಗೆ ಮರ್ಯಾದೆ ತೋರಿಸಿದೆ

* * * * *

ಕ್ಲಾರಾ ಬೌ ಎಂಬ ಪ್ರಸಿದ್ಧ ಸಿನೆಮಾ ನಟಿಯ ಜೀವನದ ಕತೆಯನ್ನು ಒಂದು ಪತ್ರಿಕೆಯು ಪ್ರಕಟಿಸಿದ ಮೇಲೆ, ಅನಳು ಸಿನೆಮಾ ಅಭಿನಯವನ್ನೇ ಬಿಟ್ಟುಕೊಡಬೇಕಾಯಿತು! "ಸಿನೆಮಾ ಅಭಿನಯವೆಂಬುದು ಅವಳಿಗೆ ಮೈಮೇಲಿನ ವಸ್ತ್ರಗಳನ್ನೆಲ್ಲಾ ಎಚ್ಚಿಹಾಕಲಿಕ್ಕೆ ಒಂದು ನೆವನ ಮಾತ್ರವಾಗಿತ್ತು" ಎಂದು ಒಬ್ಬರ ವಿಮರ್ಶೆ

* * * * *

ಈಗ ಬಹಳ ಪ್ರಸಿದ್ಧಿಯಿರುವ ಅಮೇರಿಕ ತಮಚಿತ್ರಗಳು ಬರೀ ಮರ್ಯಾದೆಗಳಿಗೆ ಪ್ರೇರಕವಾಗುವಂತಹವುಗಳಾಗಿವೆ ಜೋಪ, ಹಕ್ಕೆ, ವ್ಯಭಿಚಾರ ಇವುಗಳಿಗೆ ಪ್ರೋತ್ಸಾಹ ಬೇಕಾದರೆ ಬೇರೆ ಕಡೆಗೆ ಹೋಗಬೇಕಲ್ಲ

* * * * *

ಚಲಚಿತ್ರಗಳಲ್ಲಿ ರಶ್ಯಾ ದೇಶದವುಗಳು ಆದರ್ಶವಾದವುಗಳೆಂಬ ಹೆಸರಿರುತ್ತದೆ ರಶ್ಯಾ ದೇಶದ ಚಲಚಿತ್ರಗಳು ಈ ದೇಶದಲ್ಲಿ ಹೆಚ್ಚಿಗೆ ಬರುವುದಿಲ್ಲ ಆದರೆ ಕಲಾದೃಷ್ಟಿಯಿಂದಲೂ ಅಭಿನಯ ದೃಷ್ಟಿಯಿಂದಲೂ ಅಂತಹವುಗಳಿಗೆ ಪ್ರೋತ್ಸಾಹ ಕೊಡುವುದು ಉತ್ತಮವಿದೆ

ಇಂಥಾ ದೊಡ್ಡ ಸಿನಿಗಳು ಸ್ಥಾಪಿಸಲ್ಪಡುವವಾದರೆ ಸಿನಿಮ ನಟನಟಿಯರ ಸ್ಥಿತಿಗತಿಯು ಉತ್ತಮವಾಗುವುದು ಉತ್ತಮ ತರದ ಸುಶಿಕ್ಷಿತ ನಟ ನಟಿಯರು ಮುಂದೆ ಬರುವರು ಕಲಾಕೋವಿದರಾದ ಡೈರೆಕ್ಟರರು ಸಿಗುವರು ಉಡಿಗೆ ತೊಡಿಗೆ, ದೃಶ್ಯ, ಕಥೆ ಮೊದಲಾದ ವಿಷಯಗಳಿಗೆ ಬೇಕಾದಷ್ಟು ಧನ ಸಹಾಯವು ದೊರೆಯುವುದು ಚಿತ್ರ ತೆಗೆಯುವ ಕೆಮರ ಮತ್ತು ಇನ್ನಿತರ ಅತ್ಯಾಧುನಿಕ ಯಂತ್ರಸಾಮಾಗ್ರಿಗಳನ್ನು ಒದಗಿಸಿಕೊಳ್ಳಲು ಆ ಮೂಲಕ ಸಾಧ್ಯವಾಗುವುದರಿಂದ ಚಿತ್ರವು ಚಿತ್ತಾಕರ್ಷಕವಾಗುವುದು ಈ ಮೇಲಿನ ದೋಷಗಳನ್ನು ಪರಿಹರಿಸುವದಾದರೆ ಹಿಂದೀಯ ಚಲಚ್ಚಿತ್ರ ಕೈಗಾರಿಕೆಯು ಇನ್ನಷ್ಟೂ ಉತ್ತಮವಾಗಿಯೂ ಪ್ರಬಲವಾಗಿಯೂ ಕುವೆಯೋಗಕರವಾಗಿಯೂ ಪರಿಣಮಿಸಿ ಪಾಶ್ಚಿಮಾತ್ಯ ಚಲಚ್ಚಿತ್ರಗಳನ್ನು ನೋಲಿಸುವದರಲ್ಲಿ ಸಂದೇಹವಿಲ್ಲ ಚಿತ್ರಗಳು ಉತ್ತಮತರವಾದಂತೆ ಪ್ರೇಕ್ಷಕರ ಪ್ರೋತ್ಸಾಹವು ಅಧಿಕವಾಗುವುದರಿಂದ ಚಲಚ್ಚಿತ್ರ ಕೈಗಾರಿಕೆಯು ಆದಾಯಕರವಾಗುವುದರಲ್ಲಿಯೂ ಸಂದೇಹವಿಲ್ಲವು.

(ಮೇಲಿರುವ ಲೇಖಕರ ಹೆಸರಿನಲ್ಲಿ "ಟಿ" ಬದಲಿಗೆ "ಎಚ್" ಎಂದು ಓದಿಕೊಳ್ಳಬೇಕು.)

ಶ್ರೀ ರಾಗಿಣಿ ದೇವಿಯವರ ಪರಿಚಯ.

ಲೇಖಕ—ಕೌಶಿಕ.

ನಮ್ಮ ದೇಶದ ಜನರಿಗೆ ನಮ್ಮ ನಾಡಿನ ಕಲೆಗಳಲ್ಲಿ ಅಭಿಮಾನವು ಶೂನ್ಯವಾಗುತ್ತ ಬಂದಿದೆ. ಎಷ್ಟೋ ಕಲೆಗಳ ಹುಟ್ಟಡಗಿ ಹೋಗಿವೆ. ಕೆಲವು, ಪರಂಪರಾಗತವಾದ ಆಚರಣೆಯಿಂದ ಉಳಿದುಬಂದರೂ, ಅವುಗಳ ಮೇಲಿನ ಮಮತೆಯು ನಮ್ಮ ನಾಡ ಜನರಲ್ಲಿ ಅಳಿದಿರುವುದು ಅಂಥ ಅವಸ್ಥೆಯನ್ನು ಹೊಂದಿರುವ ಕಲೆಗಳಲ್ಲಿ ಈ ದೇಶದ ಚಿತ್ರಕಲೆ ನಾಟ್ಯಕಲೆಗಳು ಮುಖ್ಯವಾದುವು ಚಿತ್ರಕಲೆಯ ವಿಚಾರದಲ್ಲಿ ಸ್ವಲ್ಪ ಆಸೆಯನ್ನು ಹುಟ್ಟಿಸುವ ಗಳಿಗೆಯು ಬಂದಿದೆ ಶ್ರೀ ಹಾವೆಲ್ ಡಾ ಅವನೀಂದ್ರ ನೊದಲಾದ ಮಹಾನುಭಾವರ ಸಾಹಸಗಳಿಂದ ಅದು ತಲೆಯೆತ್ತ ತೊಡಗಿದೆ ಮೊದಲು ಯಾವ ಚಿತ್ರಗಳು ಅರ್ಥಹೀನ, ವಿಕಾರ ಸ್ವರೂಪಗಳೆಂದು ತಿಳಿಯಲ್ಪಟ್ಟಿದ್ದುವೋ ಅಜಂತ ಮೊದಲಾದಲ್ಲಿನ, ಅವೇ ಚಿತ್ರಗಳು ಇಂದು ಭಾವಪೂರ್ಣ ಅರ್ಥಗರ್ಭಿತವಾದ ಉತ್ತಮ ಕೃತಿಗಳೆಂದು ಗಣಸಲ್ಪಟ್ಟಿವೆ ಆದರೆ ಆ ಮಾತು ಭರತನಾಟ್ಯವನ್ನು ಕುರಿತು ಇನ್ನೂ ಅನ್ವಯಿಸುವುದಿಲ್ಲ. ಈ ವಿಷಯವಾಗಿ ಅಲ್ಲಲ್ಲಿ ಕೆಲವರು ಪುಶ್ರಮುವಡುತ್ತಿರುವರು ಆದಕೆ ಅವು ಬರೀ ಹೀನ ಅಂಗವಿನ್ಯಾಸಗಳಾಗಿ ಉಳಿದಿವೆ. ಇವುಗಳಲ್ಲಿಯ ಮಹತ್ವವನ್ನು ಕೃತಿಯಿಂದ ಜಗಕ್ಕೆ ಎಳೆದು ತೋರಿಸಿದವರು ಕೆಲವರಿಯವರು ಅವರಲ್ಲಿ ಸ್ವರ್ಗವಾಸಿಯಾದ ರುಕ್ಮಿಣಿ ಅನ್ನಾ ಪಪ್ಪೋಷನ ಎಂಬವಳು ಮೊದಲಿನವಳು ಅವಳು ಭರತನಾಟ್ಯವನ್ನು ಕಲಿತು ಅಲ್ಲಿನ ಕೆಲವು ಸ್ವಾರಸ್ಯದ ಭಾಗವನ್ನು ಗ್ರಹಿಸಿ, ದೇಶವಿದೇಶಗಳಲ್ಲಿ ಪ್ರದರ್ಶಿಸಿ ಮೈಲ್ಡೆಯನ್ನು ಗಳಿಸಿಕೊಂಡಳು

ಈಗ ನಮ್ಮ ನಾಡಿನ ಉದಯಶಂಕರನೆಂಬ ತರುಣನು ನರ್ತನ ಕಲೆಯನ್ನು ಸಾಧಿಸಿಕೊಂಡು ಫ್ರಾನ್ಸು ಮೊದಲಾದ ದೇಶಗಳಲ್ಲಿ ಸಂಚರಿಸುತ್ತಿರುವನು ಇನ್ನು ಅಂತೆಯೇ ಪ್ರಖ್ಯಾತವಾದ ಮೂರನೆಯ ಹೆಸರು ಶ್ರೀ ರಾಗಿಣಿದೇವಿಯದು ಅವರು ಜನ್ಮತಃ ಅಮೇರಿಕನರು ಹಿಂದೂ ಪತಿಯ ಸಹವಾಸದಿಂದ ಭರತ ಖಂಡದ ಸ್ನೇಹವನ್ನು ಗಳಿಸಿಕೊಂಡು ಇಲ್ಲಿನ ನರ್ತನ ಕಲೆಯನ್ನು ಸಾಧಿಸಿಕೊಂಡು, ಅದನ್ನು ಅವೆರಿಕದಲ್ಲಿ ಬಳಕೆಗೆ ತರಲು ಯತ್ನಿಸುತ್ತಿರುವರು ಅವರೂ ಈಗ ಭರತ ಖಂಡದಲ್ಲಿ ಸಂಚರಿಸುತ್ತಿದ್ದಾರೆ ಅವರ ಕಲಾಪ್ರೇಮಕ್ಕೆ ಅವರು ಬರೆದ "ನೃತ್ಯಾಂಜಲಿ"

ಶ್ರೀ ರಾಗಿಣಿದೇವಿ

ಒಂದೀಯ ನೃತ್ಯದೊಳಗಣ ಒಂದು ಪೋಜು

ಬಾಯಿಮಾತಿನವ್ರಿಗಳಿಸಿವೆ ಈ ಕಾರ್ಯದಲ್ಲಿ ಕಾರ್ಯತಃ ಮುಣುಗಿದವರು ಕಡಿಮೆ ನಮ್ಮ ನಾಡಿನವರ ಒಂದು ಸ್ವಭಾವವೆಂದರೆ, ನಮ್ಮಲ್ಲಿನ ಒಳಿತುಗಳನ್ನು ನಾವು ಒಳಿತೆಂದು ಸ್ವೀಕರಿಸಲು, ಪರಕೀಯರು ಖಂಡು ಅದು ಒಳಿತೆಂದು ಹೇಳಿ ಹೋಗಿರಬೇಕು

ಇಂದು ನಮ್ಮ ದೇಶದ ಭರತ ನಾಟ್ಯವು ಎಲ್ಲೋ ತಲೆಮರೆಸಿಕೊಂಡಿದೆ. ಕಲೆಯ ನಾಹಕವು ವರಂಪರೆಯಿಂದ ದೇವಾಲಯದಲ್ಲಿ ಹಬ್ಬಹುಣ್ಣೆಮೆಗಳಲ್ಲಿ ಕಾಣಿಯುವ ಕೆಲ ಕೆಲವು ವೇಶ್ಯೆಯರ ಕರದಲ್ಲಿ ಉಳಿದಿದೆ ಭರತನಾಟ್ಯದ ಹಾವಭಾವದಳ, ಚಲನವಲನಗಳು, ಕಾಲಗತಿಗಳು, ಕಲಾ ಉನ್ಮೇಷಕಶಕ್ತಿಗಳು ಅವರಿಗೆ ತಿಳಿಯದೆ, ಕೇವಲ ಅರ್ಥ ಎಂಬ ನಾಟ್ಯ ವಿಷಯಕ ಚಿಕ್ಕ ಗ್ರಂಥವು ಸಾಕ್ಷಿಯು

. ರಾಗಿಣಿ ದೇವಿಯವರು ಭಾರತೀಯ ನಾಟ್ಯದ ಪರಿಚಯವನ್ನು ಗಳಿಸಿ ಅದರಲ್ಲಿ ಸವಿಕಟ್ಟನ್ನು ನಮ್ಮ ಜನರ ಮುಂದಿರಿಸಲು ಶಕ್ತರಾಗಿರುವರು. ಅಮೇರಿಕದ ನಿವೃತ್ತ ಅಧ್ಯಕ್ಷರಾದ ವಿಲ್ಸನರ ಕುವರಿಯೊಬ್ಬಳು ಈಗ ಕೇರಳದಲ್ಲಿ ಕೆಲವು ಸಮಯದಿಂದ ನೆಲಸಿ ಅಲ್ಲಿನ 'ಕಥಕ್ಕಳಿ' ನೃತ್ಯ ಪದ್ಧತಿಯನ್ನು ಅಭ್ಯಾಸಿಸುತ್ತಿರುವರಂತೆ. ಇದರ ಮೇಲಿಂದ ಲಾದರೂ ತಮ್ಮ ನಾಡಿನವರು ಕಣ್ಣೆರೆಯಬಾರದೇ. ನಮ್ಮ ನಾಡಿನ ಕಲೆಗಳಲ್ಲಿನ ಇಂಪುಸೊಂಪುಗಳನ್ನು ವರಲು ಬಂದು ನವಿಯುತ್ತಿರಲು, ನಾವು ಮಾತ್ರ ಮಂಕರಂತೆ ಕುಳಿತಿದ್ದರೆ ಏನು ಆದಂತಾಯಿತು?

ನೂರಕ್ಕಲ್ಲ...

(ಸಣ್ಣ ಕಥೆ)

ಲೇಖಕರು:—ಜೋಜಾವರ ಸದಾಶಿವ ರಾವ್, (ವಿಶ್ವೇಶ್ವರಪುರ, ಮಂಗಳೂರು.)

ಆ ಸಂಜೆ ಸಂಜೆಯ ಸಮಯ. ಅಂದ ಬಳೇ ಬಾವಟಿ ಗುಡ್ಡೆಯ ಒಂದೇ ಒಂದು ಬಾಡಿಗೆಯ ಮೇಲೂ ಸ್ಥಳವು ಹಾಗಿ ಬಿದ್ದಿರ ಲಿಲ್ಲ. ಮಂಗಳೂರಿನಲ್ಲಿದ್ದ ವ್ಯಕ್ತಿಯೇ ಬೈಸಂಬಿಲ್ಲಿಂದು ಬಿನಬಾವಟಿ ಗುಡ್ಡೆಗೆ ಬಂದೇ ಬರುವನು. ಅಲ್ಲಿಯ ತಂಗಾಳಿಯ ವೈಭವವೇನು! ಸಾವಿರ ಕಂಬದ ತೀರ್ಥಯೇನು! ಹಬಗಾ ರ್ಥಾರ್ಥ ಬಂದಿರದ ಸೊಬಗೇನು! ಎಲ್ಲಾ ವರ್ಣನಾತೀತ. ಸೀಟಿನ ಮೇಲೆ ಕುಳಿತುಕೊಂಡು ಪಕ್ಕಕ್ಕೆ ನೋಡಿದರೆ ರಮ್ಯವಾದ ಮುದ್ದು ದೃಶ್ಯ—ಹೆಜ್ಜಾಗಿ ಒಂದಿರದು ಪಡಗುಗಳು ಅಲ್ಲಿ ರಂಗುತ್ತಿರೋ ಹೂರು ಹೋಗುತ್ತಿರೋ ಇವೆ. ಉತ್ತರಕ್ಕೆ ಮುಖ ತಿರುಗಿಸಿದರೆ ಸೈಂಟ್ ಎಲೋಶಿಯಸ್ ಕೊಲೇಜಿನ ಸುಸ್ಸಾದ ಕಟ್ಟಿಡ. ಕೆಳಗೆ ನೋಡಿದರೆ ಕಣ್ಣಿಗೆ ಕಾಣಿಸುವ ಬೆರೆಗೂ ತೆಂಗಿನ ಮರದ ತರೆಗಳು—ಏನೋ ಹಚ್ಚಿಗೆ ಹರಡಿ ದಂತೆ ಸುಂದರವಾಗಿ ಕಾಣುವುವು. ಯಾವ ಕಡೆಗೆ ತಿರುಗಿದರೂ ಒಂದಿಲ್ಲಿಂದು ಮನವನ್ನು ಮರುಳು ಮಾಡುವ ದೃಶ್ಯವೇ ಸಿಕ್ಕುವುದು. ಸೂರ್ಯನು ಅಸ್ತವಿಸುವ ಅಂದವನ್ನು ನೋಡಲು ವ್ಯಕ್ತಿಯನ್ನೂ ಜನ ದಂಪತಿಗೆ ಬಂದಂತೆ ಬರುತ್ತಿತ್ತು. ಹೆಂಗಸರಿಗೆ ಪ್ರತ್ಯೇಕ ಸ್ಥಳವು ವರ್ಷಾಶಿಸಿತ್ತಾದ್ದರಿಂದ ಅವರ ಸಗ್ಗೂ ತುಂಬಿ. ಒಂದೇ ಮಾತಿನಲ್ಲಿ ಹೇಳುವುದಾದರೆ, ಸಾಯಂಕಾಲ ಬಾವಟಿ ಗುಡ್ಡವು ಒಂದು ದಾರ್ಶನಿಕ ದೃಶ್ಯ; ಕಣ್ಣುಗಳಿಗೆ ಹಬ್ಬವನ್ನುಂಟುಮಾಡುವ "ಸೊಬಗಿನ ಸುಗ್ಗಿ" ಅನ್ನುತ್ತಾರಲ್ಲಾ, ಅದು. ಒಟ್ಟಾರೆ ಮಂಗಳೂರಿನವರಿಗೆ—ಬಂದವರಿಗೂ ಇದ್ದವರಿಗೂ—ಬಾವಟಿ ಗುಡ್ಡ ಎಂದರೆ ಒಂದು ತರದ ಅಕ್ಕರೆ, ಅಭಿಮಾನ.

ಉಮೇಶರಾಯನು ಮೊನ್ನೆ ತಾನೇ ವರಂಗದಿಂದ ಹಿಂದೆ ಬಂದಿದ್ದ. ಅವನು ಮಂಗಳೂರಿನ್ನು ಬಿಟ್ಟು ಬಹಳ ವರ್ಷಗಳಾಗಿದ್ದವು. ಆದುದರಿಂದ ಬಂದವನೇ ಸ್ನೇಹಿತ ರೊಂದಿಗೆ ಸಾಯಂಕಾಲ ಬಾವಟಿ ಗುಡ್ಡಗೆ "ಹವಾ ತಿನ್ನೋ" ದಕ್ಕಾಗಿ" ಬಂದ. ಆ ದಿನವೂ ಎಂದಿನಂತೆ ಬಾವಟಿ ಗುಡ್ಡೆಯು ಜನರಿಂದ ತುಳಿದಿತ್ತು. ಸೌಖ್ಯವಾಗಿ ಕುಳಿತರು ವುದಕ್ಕೆ ಸೀಟುಗಳಲ್ಲಿ ಸ್ಥಳ ಸಂಕೋಚ. ಜನರು ನೆಲದ ಮೇಲೂ ಕುಳಿತಿದ್ದರು. ಕೆಲವರು ಸುಖವಾಗಿ ಗಾಳಿಗೆ ಮೈಯೊಡ್ಡಿ ಕುಳಿತು ಸಂಧ್ಯೆಯ ಸೌಂದರ್ಯದ ಸವಿಯನ್ನು ಸವಿಯುತ್ತಿದ್ದರು. ಇನ್ನೂ ಕೆಲವರು ವಾರ್ತಾ ಪತ್ರಿಕೆಗಳ ನ್ನೋದಿ ಹತ್ತಿರ ಕುಳಿತಿದ್ದವರೊಡನೆ ಟೀಕೆ ಮಾಡುತ್ತಿದ್ದರು; ಮತ್ತೂ ಕೆಲವರು ಗೆಳೆಯರೊಡನೆ ಹರಟೆ ಹೊಡೆಯುತ್ತಿದ್ದರು "ಛಸ್ಸ್: ರುಚಿ... ...ಸಂ..." ಇದೆಯೆಲ್ಲಾ ತ್ಲೋಕ.

ಕುಳಿತುಕೊಂಡು ಕೊಂಚ ಸಮಯದ ವರೆಗೆ ಶೋಕಾಭಿರಾಮವಾದ ಮೇಲೆ, ಉಮೇಶನು ಸೀಟುಗಳಲ್ಲಿ ಕುಳಿತಿದ್ದ ವರನ್ನು ನೊದಲು ಬೇಸರದಿಂದ ಮತ್ತೆ ಕೌತುಕದಿಂದ ನೋಡಿ ದನು. ಸ್ವಲ್ಪ ದೂರದಲ್ಲಿ ಹೆಂಗಸರು ಕುಳಿತುಕೊಳ್ಳುವ ಸೀಟಿನಲ್ಲಿ ಯಾರೋ ಒಬ್ಬ 'ಲಾವಣ್ಯಮಯಿ ಪೆಣ್ಣು' ಕುಳಿತಿದ್ದುದು ಅವನ 'ವಿಹಂಗಮ ದೃಷ್ಟಿಗೆ' ಗೋಚರಿಸಿತು. ತಾನವಳನ್ನು ಈ ಮೊದಲು ಬೇರೆಲ್ಲೋ ನೋಡಿದ್ದೇನೆಂಬ ತರ್ಕೆಯು ಉಮೇಶರಾಯನ ಮನಸ್ಸಿನಲ್ಲುಂಟಾಯಿತು. ಎಲ್ಲಿ ಎಂದು ಒಮ್ಮೆಯೇ ಹೇಳಬರುವಂತಿಲ್ಲವಾದರೂ ನೋಡಿದುದು ನಿಶ್ಚಯ. ಅಂತೂ ಸೀಟಿನಲ್ಲಿ ಕುಳಿತಿದ್ದ ಸುಂದರಿಯ ಪರಿಚಯವಾಗುವ ವರೆಗೆ ಉಮೇಶನ ಮನಸ್ಸಿ ನಲ್ಲಿ ಅನವರತ; ಏನೋ ಕಾರಣದಿಂದ ಬಳಿಯಲ್ಲಿದ್ದ ಗೆಳೆಯರೊಡನೆ ಮಾತು ಅಷ್ಟಕ್ಕೆ;—ಮನಸ್ಸಿಲ್ಲದವರ ಹಾಗೆ ಅಲ್ಪಸ್ವಲ್ಪ ಇತ್ತೊಮ್ಮೆ ಮಾತಾಡುತ್ತಿದ್ದ. ಗೆಳೆಯರಿಗೂ ಆಶ್ಚರ್ಯವೆನಿಸಿತು. ಈ ಹುಡುಗನಿಗೆ ವಯಸ್ಸು ಇವತ್ತು ಇನ್ನೆತ್ತಿರದಾಗಿರಬಹುದು. ಹುಡುಗನಲ್ಲದ ಮತ್ತೇನು? ಇದೆಂತಾ ಹುಚ್ಚು! ಬಿದಿ ಬುದ್ಧಿ ತಿಳಿಯದೆ ಸ್ವಲ್ಪ ತಂಗಾಳಾದರು.

ಉಮೇಶರಾಯನು ನೋಡುತ್ತಿದ್ದ ಯುವತಿಯ ವಯಸ್ಸನ್ನು ಜನಿಸಿಯು ಇವತ್ತು ರಬಸಗಳಿಗೆ ಏರಲಾರದ ಮಟ್ಟು ತೋರುತ್ತಿತ್ತು. ಮುಖವಿಕ್ಕೆ ಬಳ್ಳಿಯಾಗಿ ಮುಖ. ಮುಂಡಿಕ ಕಾಯಂದಂತೆ ಬಿಗಿದ ಬೈಕು. ಬೆಳಿಂಗಳಿನ ಬಣ್ಣವನ್ನು ಬೀಡಿಸಿ ಬಾಡು. ಹಣಾಡಿಸಿ ಸಲುವಿಲ್ಲ ಬಣ್ಣ. ಮಿಂಚಿನಂತೆ ಹೊಳೆಯುವ ಕಣ್ಣುಗಳು. ಅಷ್ಟಾಗಿ ಎತ್ತರವಿಲ್ಲದ ಆಕೃತಿ. ಎಲ್ಲಿಯೂ ಒಳ್ಳೆಯ ಬಟ್ಟೆಯಿಂದ ಅಲಂಕರಿಸಿ ಕೊಂಡಿರುವ ಮಹಿಳೆಯರಿಗೆ ಕಡಿಮೆಯಿಲ್ಲದ ಸೌಂದರ್ಯ ಸಿರಿ. ಅವಳ ಮುಖದಲ್ಲಿ ಮಂದಹಾಸ ಮಾಡಿಟ್ಟುಕೊಂಡಿರುವಮಟ್ಟಿಗಾರ್ಯು ಅವಳೆಂತು ಒಂದೇ ಮಾತಿನಲ್ಲಿ ಹೇಳಬಹುದು. ಪೂರ್ವಪರಿಂದಂತೆ ಅನ್ನುವುದಾದರೆ, ಅವಳ ಸೌಂದರ್ಯ ವರ್ಣನಮಾಡಲು ಸಾವಿರ ನಾಲಿಗೆಯ ಮಹಾಶೇಷನಿಗೂ ಅಶಾಧ್ಯ—ರಸ ಯುತಹ ರೂಪು.

ಉಮೇಶನನ್ನು ಆಕರ್ಷಿಸಿದ ಯುವತಿಯು ಅವನ ಗೆಳೆಯರಿಗೆ ಅಪರಿಚಿತಳಾಗಿರಲಿಲ್ಲ. ಮಾತನಾಡಿಸಲಿಯು ವಿಲ್ಲವಾದರೂ ನೋಡಿ ತುಂಬಾ ಗುರುತ್ತಿತ್ತು. ಅವಳ ಹೆಸರು ವಿಲ್ಸನ್ ಲಲಿತಾ ವಿಲ್ಸನ್ ವಿಧವೆ. ಯಾರೋ ಸಾಹೆಬನೊಬ್ಬನನ್ನು ಲಗ್ನಂಬಾಯಿಯಲ್ಲಿಯೋ, ಎಲ್ಲಿಯೋ ಮಧುವೆಯಾಗಿ (ಮದುವೆಯೋ ಮೆಣ್ಣೋ) ಅವನ ಅಕಾಲ ಮರಣಾನಂತರ ವಿಧವೆ ವಿಧವೆಗೆ ಅಧಿಕಾರಿಣಿಯಾಗಿ ದ್ದಳು. ಈಗ ಮಂಗಳೂರಿಗೆ ಬಂದು ರಾಣಿಯ ಹಾಗೆ ಮೆರೆಯುತ್ತಲಿದ್ದಾಳೆ. ದಿನಕ್ಕೊಂದು ಉಡುಪೇನು! ವಿಧ ವಿಧದ ಆಭರಣಗಳೇನು! ತಲೆಬಾಚುವ ರೀತಿಯೇನು! ಹೌ ಜೇಲ್ಯಾ ಪಾದರಕ್ಷೆಯನ್ನು ಮೆಟ್ಟಿ ನಡೆಯುವ ವಿಧಾನವೇನು! ಎಲ್ಲಾ ಜನರ ಕಣ್ಣು ಅವಳ ಮೇಲೆ; ಸೂಜಿ ಕಲ್ಲಿನ ಹಾಗೆ ಎಲ್ಲರನ್ನೂ ತನ್ನ ಕಡೆಗೆ ಆಕರ್ಷಿಸುವ ಅಜ್ಞಾತ ಶಕ್ತಿಯೊಂದು ಅವಳಲ್ಲಿ ಅಡಗಿತ್ತೆಂದರೆ ಅತಿಶಯೋಕ್ತಿಯಾಗಲಾರದೆಂದು. ಈ ಎಲ್ಲಾ ಸಮಾಚಾರ ಸಂಗ್ರಹ ಮಾಡಿಕೊಟ್ಟ ಮಿ। ವೆಂಕ ಟ್ರಾಯರೇ ಹೇಳಿದ್ದರು. (ಈ ಮಹಾರಾಯರಿಗೆ ತಿಳಿಯದ್ದು ಯಾವುದೂ ಇಲ್ಲ. ಸರ್ವಜ್ಞಾನಿ. ಒಂದು ತರದ ಜಿಕ್ಕ "ಎನ್‌ಸ್ಯಾಕ್ಲೋಪೀಡಿಯ ಜ್ಞಾನಕೋಶವೇ ಅವರು.)

ಉಮೇಶರಾಯನಿಗೂ ಅವಳ ಪರಿಚಯವಾಯಿತು. ಆದರೂ ಅವನ ಯೋಚನಾಪರತೆಯು ಹೋಗಲಿಲ್ಲ. ಏನೋ ಯೋಚಿಸುತ್ತಿದ್ದನು. ಕಾರಣವೇನೆಂದು ಗೊತ್ತಾಗದೆ, ಅವನು ಗೆಳೆಯರಿಗೊಂದು ಸಮಸ್ಯೆಯಾಗಿ ಪರಿಣಮಿಸಿದನು.

ಲಲಿತ ವಿಲ್ಸನಳು ಸೀಟಿನಿಂದೆದ್ದು ಕ್ಲಬ್ಬಿಗೆ ಹೋದಳು. ಕ್ಲಬ್ಬೂ ಅಲ್ಲೇ ಹತ್ತಿರ. ಬಾವಟಿಗುಡ್ಡೆಯ ಸಠಹದ್ದಿನಲ್ಲೇ ನೂರು ನಾಲ್ಕು ಕ್ಲಬ್ಬುಗಳಿವೆ. ಅವುಗಳಿಗೇನೂ ಅಭಾವ ವಿಲ್ಲ. ಅವಳೆದ್ದು ಹೊರಟು ಹೋದ ಬಳಿಕವೂ ಕುಳಿದವರು ಕೊಂಚ ಹೊತ್ತು ಮಾತನಾಡುತ್ತಾ ಕುಳಿತು, ಕತ್ತಲಾಗಲು ಆ ದಿನದ ಲೋಕಾಧಿರಾಮಕ್ಕೆ ಪೂರ್ಣವಿರಾಮ ಹಾಕಿ ಮನೆಯ ಕಡೆ ಹೊರಟರು.

ಉಮೇಶರಾಯನ ಮನಸ್ಸಿನಲ್ಲಿ ನಾನಾತರದ ಭಾವನೆ ಗಳು ಉತ್ಪನ್ನವಾಗಿದ್ದವು. ಇದೇನು ಇಂದ್ರಜಾಲ ವಿದ್ಯೆ! ಮೊದಲು ಅವಳು—ಲಲಿತ ವಿಲ್ಸನಳು ತನ್ನ ಅಕ್ಕನ ಮನೆ ಯಲ್ಲಿ ಮಕ್ಕಳನ್ನು ನೋಡಿಕೊಳ್ಳುವ ದಾದಿಯಾಗಿದ್ದಳು. ಆಗ ಅವಳಿಗೆ ಈ ಹೆಸರೇನೂ ಇರಲಿಲ್ಲ. ಬರೀ ಗೌರಿ ಎಂದಿತ್ತು. ಈಗಲಾದರೋ ಅದೆಲ್ಲಾ ಹೋಗಿ, ಲಲಿತ ವಿಲ್ಸನಳಾಗಿ, ಮಂಗಳೂರಿನಲ್ಲಿ ಧನಿಕ ವಿಧವೆಯ ಹಾಗೆ ನಟಿಸುತ್ತಿದ್ದಾಳೆ. ಉಮೇಶರಾಯನಿಗೆ ಏನೂ ಹೊಳೆಯ ದಾಯಿತು. ಎರಡು ವರ್ಷಗಳ ಹಿಂದೆ ಹೊಟ್ಟೆಗಿದ್ದರೆ ಬಟ್ಟೆಗಿಲ್ಲ. ಬಟ್ಟೆಗಿದ್ದರೆ ಹೊಟ್ಟೆಗಿಲ್ಲದ ರೀತಿಯಲ್ಲಿದ್ದ ಗೌರಿಯು ಈಗ ಸಾವಿರಾರು ರೂಪಾಯಿ ಬೆಲೆ ಬಾಳುವ ವಜ್ರಗಳನ್ನು ಧರಿಸಿಕೊಂಡು ಕ್ಲಬ್ಬುಗಳಿಗೆ ಹೋಗಿಕೊಂಡು, ಮಂಗಳೂರಿ ನಲ್ಲಿ ಮೆರೆದಾಡುವುದರ ಹುರುಳನ್ನು ಉಮೇಶರಾಯನು ಕಂಡು ಹಿಡಿಯದಾದನು.

ಒಂದು—ಉಮೇಶನು ಹುಡುಗಾಟಿಕೆಯನ್ನು ಬಿಟ್ಟು ಯಾವನದಲ್ಲಿ ವದಾರ್ವಣ ಮಾಡಿದ ಕಾಲ—ಗೌರಿಯ ಮುಖದಲ್ಲಿದ್ದ ನಿಷ್ಕಾಭಾವ, ಮಾತುಗಳಲ್ಲಿದ್ದ ಮಾರ್ದವ, ಕಣ್ಣುಗಳಲ್ಲಿದ್ದ ತಿಳಿಹೃದಯದ ನಿರ್ಮಲ ಛಾಯೆ. ಇವೆಲ್ಲಾ ಅವನ ಮನಸ್ಸಿನಲ್ಲಿ ತೊರಿ, ತರಂಗಮಾಲೆಗಳನ್ನೆಬ್ಬಿಸಿ, ತಾಂಡವವಾಡಿದ್ದಿತು. ಅವಳು ಆಗ ತಾನೇ ಪೇಟೆಯಲ್ಲಿ ಕಾಲಿಟ್ಟ ಹಳ್ಳಿಯ ಹುಡುಗಿ—ಆಗಿನ ಹಳ್ಳಿಗಾಡಿನ ಮುಗ್ಧತೆಯೇ ಅವಳಿಗೊಂದು ಆಭರಣವಾಗಿತ್ತು. ಉಮೇಶನು ಆ ತಿಳಿಹೃದಯದ ಮುಗ್ಧಯುವತಿಗೆ ತೀರಾ ಮನಸೋತಿದ್ದನು ಆದರೆ ಅವಳು ಅವನ ಕಣ್ಣಮುಂದೆ ಬಹಳ ಸನುಯವರ ವಿಲ್ಲ. ಅವಳು ಹೊರಟುಹೋದ ಕೆಲಸಮಯದೊಳಗೆ ಉಮೇಶನು ಅವಳನ್ನು ಮರೆತುಬಿಟ್ಟು, ಪ್ರಕೃತಿ ಪ್ರಣಯದ ಆಸ್ಥಿಕ್ಯ, ಮೇಲೆ ಕಾಲನ /ತೀಕ್ಷವಾದ ಲೇವನ, ಇವುಗಳ ಪ್ರಧಾನನೇ ಅಂತಹದು.

ಈಗ ಅವಳನ್ನು ಇನ್ನೊಮ್ಮೆ ನೋಡಿದ ಬಳಿಕ, ಆ "ಹಳೆಯ ಪರಿಚಯ"ಗಳು ಏಳೆಂಟಾಗಿ ಮೆಲಕು ಬರಲಾ ರಂಭಿಸಿದವು. ಅಂದಿನ ಗೌರಿಗೂ ಇಂದಿನ ಗೌರಿಗೂ ಅಜಗಜಾಂತರವಿದೆ. ತನ್ನ ಅಕ್ಕನ ಮನೆಯಲ್ಲಿದ್ದ ಆ ಗೌರಿಯು ಇಂದು ಇಲ್ಲಿ ಮಾಡುವ ಕಾರ್ಯಕಲಾಪಗಳನ್ನು ಕಂಡು, ಉಮೇಶನ ಮನಸ್ಸು ಕೊಂಚ ಕಠಿಣ ಭಾವನೆಯನ್ನು ತಾಳಿ, ಅವನು ಮನದಲ್ಲಿ ಹೀಗಂದುಕೊಂಡ, "ಇವಳೇ ತಿಳಿಹೃದಯದ ಮುಗ್ಧ ಯುವತಿ?"

ಲಲಿತ ವಿಲ್ಸನಳು ಗೌರಿಯೆಂಬುದು ನಿರ್ವಿವಾದ. ಅವಳನ್ನು ಅವನು ಬರೇ ಮೂರು ನಾಲ್ಕು ಬಾರಿ ನೋಡಿದ್ದ ನಾದರೂ, ಆ ಮುಖವು ವಕ್ಷನೆ ಮರೆತು ಹೋಗುವಂತಹು ದಾಗಿರಲಿಲ್ಲ. ಆ ಮುಖವೇ ಅವಳ ನಿಜಚಿಹ್ನೆಯರ್ಯ. ಅವನ ಅಕ್ಕನ ಮನೆಯಲ್ಲಿದ್ದಾಗ ಅವಳೊಡನೆ ಮಾತಾಡಲು ಒಳ್ಳೆಯ ಸಂದರ್ಭಗಳೊದಗಿರಲಿಲ್ಲ. ಏನಾದರೂ ಮಾಡಿ ಚೆನ್ನಾಗಿ ಪರಿಚಯ ಮಾಡಿಕೊಳ್ಳಬೇಕೆಂದು ಮತ್ತೊಮ್ಮೆ ಅಕ್ಕನ ಮನೆಗೆ ಹೋದಾಗ ಗೌರಿಯು ಕೆಲಸ ಬಿಟ್ಟು ಹೋಗಿದ್ದಳು.

ಆದರೆ ಈಗ ಅವನು ಮಂಗಳೂರಿಗೆ ಬಂದಾಗ ಇಲ್ಲಿ ಅದೇ ಗೌರಿಯು ಕುಬೇರನ ಪಟ್ಟದ ರಾಣಿಯಂತೆ ಲಲಿತ ವಿಲ್ಸನಳಾಗಿ ಮೆರೆಯುತ್ತಿದ್ದುದು ವಿಧವಿಲಾಸವೋ, ಅಥವಾ ಹೆಂಗಸಿನ ನಟನಾ ಚಾತುರ್ಯವೋ? ಪ್ರಾಯಶಃ ನಟನೆಯೇ ಆಗಿರಬೇಕು. ಆದರೂ ಧನಿಕ ವಿಧವೆಯಂತೆ ಇಲ್ಲಿ ನಟಿಸು ತಿರುವ ಉದ್ದೇಶವೇನು? ಹೀಗೆಲ್ಲಾ ಹಣವನ್ನು ನೀರಿನಂತೆ ಚೆಲ್ಲಾಡಲು ಅವಳಿಗೆ ಹಣವೆಲ್ಲಿಂದ? ಇವಳಿಗಾರೂ ದಿಕ್ಕು ದಾತಾರರಿಲ್ಲವೇ? ಇವೇ ಮುಂತಾದ 'ಧೇತಾಳ' ಪ್ರಶ್ನೆ ಗಳಿಗೆ ಸರಿಯಾದ ಉತ್ತರಗಳನ್ನು ಕಂಡು ಹಿಡಿಯಲು ಉಮೇಶನು ಬದ್ಧಕಂಕಣನಾದನು.

ಉಮೇಶರಾಯನೂ ಕ್ಲಬ್ಬಿಗೆ ಸೇರಿ ವಿಲ್ಸನಳ ಪರಿ ಚಯವನ್ನು ಮಾಡಿಕೊಳ್ಳಲು ಹವಣಿಸಿದನು. ಅವಳಾ ದರೋ ಎಂದಿನಂತೆ ಪ್ರತಿ ದಿನವೂ ಹೊಸ ಹೊಸ ರೀತಿಯಲ್ಲಿ ಶೃಂಗಾರ ಮಾಡಿಕೊಂಡು ಹೊಸ ಹೊಸ ತರದ ಒಡವೆಗಳನ್ನು ಧರಿಸಿಕೊಂಡು ಕ್ಲಬ್ಬಿಗೂ ಬಾವಟಿ ಗುಡ್ಡೆಗೂ ಬರುತ್ತಿದ್ದಳು. ಒಂದು ದಿನ ಉಮೇಶರಾಯನು ಅವಳಿಗಾಗಿ ಕಾದು ಕೊಂಡಿದ್ದು ಅವಳು ಕ್ಲಬ್ಬಿನಿಂದ ಹೊರಹೊರಡುವಾಗ ತಾನೇ ಪರಿಚಯ ಮಾಡಿಕೊಂಡನು.

"ಹ! ಯಾರು?.....ಗೌರಿ!"

ಲಲಿತ ವಿಲ್ಸನಳು ಬೆಚ್ಚಿ ಬಿದ್ದಳು. ಆದರೂ ಅತ್ಯಲ್ಪ ಕಾಲದಲ್ಲೇ ನುನಸ್ಥೈರ್ಯವನ್ನು ಪಡೆದುಕೊಂಡಳು.

"ನೀವು ತಪ್ಪಾಗಿ ತಿಳಿದಿರಿ...ನನ್ನನ್ನು ಬೇರೆ ಯಾರೋ ನಿಮ್ಮ ಪರಿಚಿತರೆಂದು ಗೃಹಿಸಿರಬಹುದು. ನನ್ನ ಹೆಸರು.... ಲಲಿತ ವಿಲ್ಸನ್ . ವಿಸಸ್ ಲಲಿತ ವಿಲ್ಸನ್"

ಉಮೇಶರಾಯನು ಕ್ಷಣಕಾಲ ಅವಳನ್ನೇ ನೋಡಿದನು.

"ಈಗ ಹಾಗಾಗಿರಬಹುದೇನೋ! ಆದರೆ ನೀವು ನನ್ನ ಅಕ್ಕನ ಮನೆಯಲ್ಲಿ—ಕುಮುದಾ ಬಾಯಿಯವರ—ಮನೆಯಲ್ಲಿರುವಾಗ ನಿಮ್ಮ ಹೆಸರು ಗೌರಿ ಎಂದೇ ಇತ್ತು."

ಲಲಿತೆಯು ಸ್ವಲ್ಪ ಕಪ್ಪದಿಂದ "ಹೋ" ಎಂದಳು.

ಉಮೇಶನು ಇನ್ನು ಗೆದ್ದ ಹಾಗೆಯೇ ಸರಿಯೆಂದು ಮನಸ್ಸಿನಲ್ಲಂದು ಕೊಂಡು,

"ನಮ್ಮಕ್ಕನ ಮನೆಯಲ್ಲಿ ನಿಮ್ಮನ್ನು ಗೌರಿಯೆಂದು ಕರೆದ ಜ್ಞಾಪಕವಿತ್ತು ನೋಡಿ. ಮೊನ್ನೆ ಇಲ್ಲಿಗೆ ಬಂದಾಗ ನಿಮ್ಮನ್ನು ಕಂಡೆ. ಇಲ್ಲೀಗ ನಿಮ್ಮ ಹೆಸರು...ಲಲಿತ ವಿಲ್ಸನ್ ಎಂದು ಕೇಳಿ ಸ್ವಲ್ಪ ಆಶ್ಚರ್ಯವಾಯಿತು" ಎಂದನು.

ಲಲಿತ ವಿಲ್ಸನಳು ಮನಸ್ಸಿನಲ್ಲಿ ಏನನ್ನೋ ಸ್ವಲ್ಪ ಹೊತ್ತು ಆಲೋಚಿಸಿದಳು. ಇನ್ನು ಮರೆಮಾಚ ಪ್ರಯೋ ಜನವಿಲ್ಲವೆಂದು ತಿಳಿದು ಎಲ್ಲವನ್ನು ಹೇಳಿಬಿಡಲು ನಿರ್ಧಾರ ಮಾಡಿದಳೆಂದು ತೋರುತ್ತೆ.

"ಬನ್ನಿ, ಪೆನ್ಸಿಸ್ ತೋರ್ಸಿನ ಬಳಿ ಹೋಗೋಣ. ನಿಮ್ಮ ಬಳಿ ಮುಚ್ಚುಮರೆ ಪ್ರಯೋಜನವೇನು? ನಾನು ಹೇಗೆ ಇಷ್ಟೆಲ್ಲಾ ದರ್ಜೆಯಲ್ಲಿ ಆಲಂಕಾರಿಕವಾಗಿರಬೇಕೆಂದು ಅಲ್ಲಿ ಹೇಳು ತ್ತೇನೆ! ನಿಮ್ಮಿಂದ ಮುಗುಳ್ನಗೆಯೊಂದನ್ನು ಭೀಕ್ಷೆಯು.

ಹಾ: ಎಂತಹ ನಗೆಯದು! ಕೊಂಚ ಪ್ರಯತ್ನಸಿದಾದ ಕ್ಷಣ ನಗುವೇ ಆಗಿರಲಿಲ್ಲವೇನೆ? ಆ ಮುಗ್ಧ ಮುಖಕ್ಕೆ

ಶೈಶಾಚಿಕ ಸೌಂದರ್ಯ.

ಲೇಖಕರು:—ಎಮ್. ಆಚಾರ್ಯ, ಬರ್ಲಿನ್.

ಈಗಿನ ಸೌಂದರ್ಯ ಭಾವನೆಯು ಅಹಂಕಾರವನ್ನು ವ್ಯಾಪಾರೀ ಬುದ್ಧಿಯನ್ನೂ ಗಳಿಸುವುದು; ನಿಜಕ್ಕೂ ಅದರಿಂದ ತನ್ನ ಆತ್ಮವೂ ಆನಂದವೂ ನಾಶವಾಗದಿರವು.

ನಾವಿಂದಾರು ಜನರು, ಇಂದು ಹೊಟ್ಟೆಬಟ್ಟೆಗಿಲ್ಲದೆ ನರಳುತ್ತಿರುವ ಈ ಕಾಲದಲ್ಲಿ, ತಾನು ಇತರರಿಗಿಂತಲೂ ಸುಂದರವಾಗಿ ಕಾಣಿಸಬೇಕೆಂಬ ಲವಲವಿಕೆಯು ಅಸಭ್ಯ ಭಾವನೆಯಲ್ಲವೇನು? ವರರಿಂದ ಸುಲಿದ ಹಣವೇ ಅವರಿಗೆ ಇಂಥ ಸೌಂದರ್ಯವನ್ನು ಕೊಡುವುದೆಂದು ಬಿಡಿಸಿ ಹೇಳಬೇಕೆ? ತೀರ ಅನಾಗರಿಕ ಕಾಲದಲ್ಲಿನ ಜನರು, ಮನುಷ್ಯರನ್ನು ತಿನ್ನುತ್ತಿದ್ದರಂತೆ. ಹಾಗೆ ಕೊಂದು ತಿಂದು, ಅವರ ತಲೆಬುರುಡೆಗಳ ಮಾಲೆಯೊಂದನ್ನು ಧರಿಸಿಕೊಂಡು ತಮ್ಮ ದೇಹವನ್ನು ಶೃಂಗರಿಸಿ ಕೊಳ್ಳುತ್ತಿದ್ದರಂತೆ. ಈಗಿನ ಶ್ರೇಣಿಂತರ ಸೌಂದರ್ಯದ ಕಾಂಕ್ಷೆಯು ಅಷ್ಟೇ ಜೀನವಾಗಿ ಕಾಣಿಸುವುದಿಲ್ಲವೇನು?

ಅವರು ಬಯಸುವ ಸೌಂದರ್ಯವಾದರೂ ಏನು? ಎಲ್ಲರಿಂದ ಕೊಳ್ಳಲು ಸಾಧ್ಯನಲ್ಲದ, ಅನೂಲ್ಯ ಒಡವೆಗಳನ್ನು ತಾವು ಕೊಂಡು, ಮೈಮೇಲೆ ಧರಿಸಿಕೊಳ್ಳುವುದು. ವರರು ಸತ್ತರೂ ಚಿಂತೆಯಲ್ಲ. ತಮಗೆ ಅವು ದೊರಕಿದರಾಯಿತು; ತಮಗೆ ಅವು ದೊರೆತರೇನೆ ಸಂತೋಷ—ಎನ್ನುವ ಮನೋವೃತ್ತಿಯು ಅವರದು. ಅವರು ಹೇಗೆ ಗಳಿಸಿಕೊಂಡ ಸೌಂದರ್ಯವನ್ನು ಕಂಡು ಮಿಕ್ಕವರು ಅವರನ್ನು ಗೌರವಿಸಬೇಕು. ಈ ಲಾಲಸೆಯು ತೀರ ಪೈಶಾಚಿಕಲಾಲಸೆಯಲ್ಲವೇನು?

ಆಭರಣ, ಉಡುಗೆಗಳಿಂದಲ್ಲದೆ ಇನ್ನೂ ಹಲವು ವಿಧಗಳಿಂದ ಶರೀರ ಶೃಂಗಾರವನ್ನು ಮಾಡಿಕೊಳ್ಳುವರು. ತಲೆ ಕೂದಲನ್ನು ಶೃಂಗರಿಸುವುದು, ಮುಖವನ್ನು ವರ್ಣಿಕೆಗಳಿಂದ ಸವರಿಕೊಳ್ಳುವುದೂ, ಸುಗಂಧ ದ್ರವ್ಯಗಳನ್ನು ಉಪಯೋಗಿಸುವುದು—ಇವೇ ಎಲ್ಲ. ಇವುಗಳ ಉದ್ದೇಶವೇನು? ಎಲ್ಲರ ಗಮನವೂ ತಮ್ಮ ಕಡೆಗೆ ಆಕರ್ಷಿಸಲ್ಪಡಬೇಕೆಂಬುದೇ ಅಲ್ಲವೆ?

ಕೃತಕ ವರ್ಣಿಕೆಯಿಂದ ತನ್ನ ಮುಖವನ್ನು ಶೃಂಗರಿಸಿಕೊಂಡ ನಾರಿಯೊಬ್ಬಳು—"ಹೇಗೆ ನನ್ನ ಮುಖವು ಆಕರ್ಷಕವಾಗಿ ಕಾಣಿಸುವುದೇ?" ಎಂದು ಕೇಳಿದರೆ ಏನು ಹೇಳಬೇಕು? ಹೀಗೆ ಕೇಳದಿದ್ದರೂ ಮನಸ್ಸಿನಲ್ಲಿ ಕೋರಿಯೇ ಕೋರುವಳು. ವರರು ಅವಳನ್ನು ಕಂಡು, ಅವಳ ಸೌಂದರ್ಯ ವಿಮರ್ಶೆಗೆ ಹೊರಟರೆ ಅವಳಿಗೇನು ಆನಂದ? ವೇಶ್ಯೆಯರಂತಾಯಿತು. ಅವಳ ಮನ. ಅವಳಿಗೆ ತನ್ನಲ್ಲೇ ಆನಂದವಿಲ್ಲ. ವರರು ತನ್ನಿಂದ ಆಕರ್ಷಿಸಲ್ಪಡುವ ತನಕ ಅವಳಿಗೆ ಸಂತೋಷವಿಲ್ಲ. ಅದಕ್ಕಾಗಿ ಅವಳು ಕಾದು ಕುಳಿತಿರುವಳು. ನಿಜಕ್ಕೂ, ವರರ ಕುಚ್ಚೆಗೆ ತೊಪ್ಪನುಕೊಡಲು ಅವಳು ಬದುಕುವವಳು.

ವೇಶ್ಯೆಯಂತೆ, ತನ್ನ ಮುಖ ವರ್ಣಿಕೆಯಿಂದಳವು ವರರಿಗಾನಂದವನ್ನುಂಟುಮಾಡಿ ಅವರು ತನ್ನನ್ನು ಕಂಡು ಅಭಿನಂದಿಸುವಂತೆ ಮಾಡುವಳು. ಇದರ ನಿಜವಾದ ತಾತ್ಪರ್ಯವೇನು? ಅವಳೊಂದು ಮಣ್ಣಾಗೊಂಬೆ. ವರರು ತನ್ನನ್ನು ಅಭಿಮಾನದಿಂದ ಕಾಣಲಿ ಎಂದು ಬಯಸುವ ಪ್ರತಿಮೆ. ಅವಳನ್ನು ಸ್ತುತಿಸುವವರ ಕಡೆಗೆ ಅವಳ ಭಾವನೆಗಳು ಹೇಗೆ ವರರಿಗಿಂತ ತಾನು ಸುಂದರವಾಗಿ ಕಾಣಿಸಬೇಕೆನ್ನುವ ಅವಳಿಗೆ, ವರರ ಮೇಲೆ ಅಭಿಮಾನ ಗೌರವಗಳು ಉಂಟಾಗಲಾರವು. ವರರ ಪಾಲಿಗೆ ಅವಳ ಭಾವನೆಗಳು ವ್ಯಕ್ತಿವಾದಂತೆಯೇ ಸರಿ! ಇಂಥೊಂದು ಮಣ್ಣಾಗೊಂಬೆಯ ಬಳಿಗೆ ಹೋಗಿ, ನನ್ನ ಹೃದಯವನ್ನು ನಾನೆಂದಿಗೂ ಒಪ್ಪಿಸಲಾರೆ. ಇಂಥೊಂದು ಪ್ರಾಣಿಗಿಂತ, ತನ್ನಲ್ಲೇ ಜೀನವಿದ್ದು, ಪರರ ಮೇಲೆ ಅಭಿಮಾನ ಕರುಣೆಗಳಿರುವ, ಬಾಹ್ಯ ಶೃಂಗಾರ ವಿರಹಿತವಾದ, ಕುರೂಪಿಯೇ ಲೇಸಲ್ಲವೇ? ಅಂಥ ಕುರೂಪಿಯನ್ನು ಭಯಸುವುದರಿಂದಲಾದರೂ ಹೆಚ್ಚಿನ ಸುಖವಿದೆ.

ಈ ರೀತಿಯ ಬಣ್ಣಬೆಡಗುಳಿಲ್ಲದ ಸೌಂದರ್ಯ ಸಾಧನೆಗಳೂ ಇವೆ. ಅಂತಹವನ್ನು ಉಪಯೋಗಿಸುವವರ ಮನೋವೃತ್ತಿಯಾದರೂ ಹಾಗೆಯೇ ಸರಿ. ತಾವು ವರರಿಂದ ಸ್ತುತಿಸಲ್ಪಡಬೇಕೆಂಬುದೇ ಅವರ ಭಯಕೆ. ತಮ್ಮನ್ನು ತಾವು ಕೊಂಡಾಡಿಕೊಳ್ಳುವುದರಲ್ಲಿ, ಹಾಗೆ ಇತರರು ಕೊಂಡಾಡ ಬೇಕೆಂದು ಭಯಸುವುದರಲ್ಲೇ ಅವರ ಆತ್ಮದ ನಾಶವ್ಯಾಯತು. ಅವರ ಚಿತ್ತವು ಎರಡು ಬಗೆಯ ಆಸೆಗಳನ್ನು ಹಿಡಿಯುವುದು. ನನ್ನ ಸೌಂದರ್ಯವು ಅವನನ್ನು ಆಕರ್ಷಿಸುತ್ತಿದೆಯೇ? ಅವುಂದ ನಾನೇನಾದರೂ ಲಾಭವನ್ನು ಕೇಳ ಬಹುದೆ?— ಎಂದು.

ಜೀಗಾಗಿ, ಈ ಸೌಂದರ್ಯದ ಭಾವನೆಯು, ಎಂಥದೇ ಇರಲಿ, ಅಹಂಕಾರವನ್ನೂ, ವ್ಯಾಪಾರೀ ಬುದ್ಧಿಯನ್ನೂ ಗಳಿಸುವುದು. ತನ್ನ ಸೌಂದರ್ಯವನ್ನು ವರರಿಗೆ ತೋರಿಸಿ, ಅವರನ್ನು ಬೆರಗುಮಾಡಿ, ಆದರಿಂದಲೇನಾದರೂ ಲಾಭ ಹೊಂದುವಂತೆ ಮಾಡುವಯತ್ನದಿಂದೇನು ಫಲ? ನಿಜಕ್ಕೂ ಅದರಿಂದ ತನ್ನ ಆನಂದವೂ, ಆತ್ಮವೂ—ಎರಡೂ ನಾಶವಾಗದಿರವು. ಈದೇ ಇಂದು ಸಾವಿರಾರು ಜನರ ಹವ್ಯಾಸವಾಗಿದೆ.

ಇಂಥ ಮನಸ್ಸುಗಳು, ಪ್ರತಿಯೊಂದು ಸಂದರ್ಭವನ್ನು ಲಾಭಕ್ಕಾಗಿ ಉಪಯೋಗಿಸುವ ಯಂತ್ರಗಳು. ಇಂಥ ಮನಸ್ಸುಗಳಲ್ಲಿ ತಾನೇ ಅಧಿಕ, ತಾನೇ ಶ್ರೇಷ್ಠನೆಂಬ ಭಾವನೆಯು ತುಂಬಿ ತುಳುಕುವುದು. ಇಂಥ ಸ್ತ್ರೀಪುರುಷರ ಪಾಲಿಗೆ, ಈ ಜಗತ್ತೆಲ್ಲ ತಮ್ಮ ವ್ಯಾಪಾರಕ್ಕಾಗಿ ನಿರ್ಮಿತವಾಗಿದೆಯೆಂದೇ ತೋರುವುದು. ಇಂಥ ಸ್ತ್ರೀಯರ ಮನಸ್ಸೂ, ಶರೀರವೂ ನಿಜವಾದ ಆನಂದವೇನೆಂದೇ ಸವಿಯದೆ, ಯಾವಜ್ಜೀವವೂ ಹಾಳಾಗಿ ಹೋಗುವುದು.

ಇಂಥ ನಾರಿಯೊಬ್ಬಳು, ಪುರುಷನೊಬ್ಬನ ಸಂಗಡ ವ್ಯವಹರಿಸುವುದರಿಂದೇನು ಲಾಭ? ಅವಳ ಸ್ತ್ರೀ ಶರೀರವು ಬರೀ ಒಂದು ವ್ಯಾಪಾರದ ಸಾಮಗ್ರಿ. ಅವರ ಮನಸ್ಸಿಗೆ ವರರ ಮನಸ್ಸಿನ ಮೇಲೆ ಈಗಾಗಲೇ ಯಜಮಾನಿಕೆ ಉಂಟಾಗಿದೆ. ವರರ ವಸ್ತುಗಳನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಪುರುಷರು ಅವಳ ಪಾಶಕ್ಕೆ ಬೀಳಬಹುದು. ಅವಳಂತಿರುವ ಭ್ರಾಮಕರು ಅವಳನ್ನು ಸೇರಬಹುದು. ಅಂಥವರ ಸಂಯೋಗವೆ ಮನುಷ್ಯನೀ ಗಿಳಿತನವಲ್ಲ. ಇವರೆಲ್ಲ ಭಾವಗಳ ಕೊಲೆಗಡಕರು. ಇಂದು ನೂರಾರು ಸುಂದರಿಯರು, ತಮ್ಮನ್ನು ಅಲಂಕರಿಸಿಕೊಂಡು ವರರನ್ನುಆಕರ್ಷಿಸುತ್ತ, ಕುಳಿತಿರುವರು. ಯಾರಾದರೂ ಅವರನ್ನು ಕಂಡು ಬೆರಗಾಗಿ, ತನ್ನ ಮನೆಗೆ ಬಯ್ಯುವರು. **ಇದೇ ವಿವಾಹ.** ಇಂಥ ಸೌಂದರ್ಯ ಬಯಸುವ ದಂಪತಿಗಳ ಜೀವವು ನಷ್ಟವೇ ಸರಿ. ಅವರು ಸಮೂಪವಾಗಲು, ಆ ವರಸ್ಪರ ಸ್ವಾರ್ಥಗಳು ತಿಳಿದು ಅವರ ಭ್ರಾಂತು ಬಯಲಾಗುವುದು.

ವರರು ತಮ್ಮನ್ನು ಕೊಂಡಾಡಲಿ—ಎಂದು ಮಾಡುವ ಸೌಂದರ್ಯವು ಅಹಂಕಾರ, ಆತ್ಮಪ್ರಶಂಸೆಗಳ ಮೂಲವು ಅದರಿಂದ ಪ್ರೇಮ, ಆನಂದಗಳ ಸಮಾಧಿಯೇ ಆಗುವುದು. ಅದು ಪೈಶಾಚಿಕ ವೃತ್ತಿ. ಅದೇ ಮರಣ ಸಮಾನ ಹಣ, ಅಧಿಕಾರಿಗಳೆಂದ ದೊರೆಯುವ ಈ ಸೌಂದರ್ಯಲಾಲಸೆಯು ಪ್ರೇಮದ ವೈರಿಯು. ಇಂದು ತೀರ ಬಡವರೂ ಸಹ ಇದೆನ್ನು ಹೆಂಬಾಲಿಸುತ್ತಿರುವುದನ್ನು ಕಂಡರೆ ವ್ಯಥೆಯಾಗುವುದು.

ಆರೆ ಅರಳಿದ ಮಲ್ಲಿಗೆ ಹೂವಿನಂತಹ ಹುಡುಗಾದ, ಮುಂದೆ ಹಾಸಪೂರ್ವಕವಾದ ಎಡೆಯಿಲ್ಲದ ಸಡಗರದ ಆ ಮುಗುಳು ನಗೆಯು ಹೇಗೆ ಕಾಂತಿಯನ್ನು ಕೊಡುತ್ತಿದ್ದೆ! ಕಣ್ಣುಗಳ ಎಳೆ ಬಿಂಬು, ದೋರೆಯ ಎಳೆ ನಗು, ಇವೆರಡರ ಹೊಳಪೂ ವರಸ್ಪರ ಬೆರೆತು ಹೇಗೆ ತೋಧೆಯಲ್ಲಿ ಕೊನೆಗಾಣುತ್ತಿವೆ! ಬೇರೆಯೂರಾದರೂ ಇವನ್ನು ಕಂಡಿದ್ದರೆ ಅವ್ಯತಿಭರಗಾಗುತ್ತಿದ್ದರು. ಆದರೆ ಈಮೇಶರಾಯನ ಹೃದಯದಲ್ಲಿ ಅಂದು ಏತೋ ಕೊಂಚ ಕಾಂಣ್ಮವು ತಲೆದೋರಿತ್ತು. ಮನವು ಸ್ಥಿಮಿತದಲ್ಲಿತ್ತು. ಚಿಕ್ಕಂದಿನಲ್ಲಿ ಕಂಠ ಪಾಠ ಮಾಡಿದ್ದ ನೆದ್ಯ ಚರಣವೊಂದು ಅಕಸ್ಮಾತ್ತಾಗಿ ಅವನ ಜ್ಞಾಪಕಕ್ಕೆ ಬಂತು. "ಕ್ರೂರ ನಕ್ರಾಕುಲದೊಳಿದಿರ್ದ ಪೆಣ್ಣಂ ಪಡು ಗಧೀರ ನಿರ್ಮಲ ಜಲದೊಳಿಸೆವಂತೆ...." ಬಾಹ್ಯ ಅಂತರ್ಯಗಳಲ್ಲಿಷ್ಟು ಭೇದ, ಏನು ಕಾವಟ್ಟು, ಅನ್ನಿಸಿತು.

ಈಮೇಶನು ಅವಳ ವೃತ್ತಾಂತವನ್ನು ಕೇಳಲು ಉತ್ಸುಕನಾಗಿದ್ದನೆಂಬುದೇನೋ ನಿಜ. ಆದರೆ ಅವನದನ್ನು ಹೊರಗೆ ತೋರ್ಪಡಿಸಲಿಲ್ಲ. ಅವನೂಲಲಿತೆಯೂ ಟೆನ್ನಿಸ್ ಕೋರ್ಟಿನ ಬಳಿಯಲ್ಲಿರುವ ಬೆಂಚುಗಳೊಂದರಲ್ಲಿ ಕುಳಿತುಕೊಂಡರು. ಲಲಿತೆ ವಿಲ್ಸನಳು ತನ್ನ ವೃತ್ತಾಂತವನ್ನು ಹೇಳತೊಡಗಿದಳು.

"ನನ್ನ ಹೆಸರು ಗೌರಿ ಎಂಬುದು ನಿಜ. ಆದರೆ ಇಲ್ಲಿ ಲಲಿತಾ ವಿಲ್ಸನಳೆಂದು ಕರೆಸಿಕೊಳ್ಳುತ್ತೇನೆ—ಜನರಿಗೆ ನನ್ನ ಮೇಲೆ ಕೌತುಕವುಂಟಾಗುವಂತೆ ನಾನೊಬ್ಬ ವಧವೆಯೆಂದು ಇವಳಿಲ್ಲಾ ನಂಬಿದ್ದಾರೆ. ಹಾಗೆ ನಂಬಿಸಿ ಬಿಟ್ಟಿದ್ದೇನೆ. ನನ್ನ ಅಂದಿನ—ನಿಮ್ಮ ಅಕ್ಕನ ಮನೆಯಲ್ಲಿದ್ದಾಗಿನ—ಸ್ಥಿತಿಗೂ ಇಂದಿನ ಸ್ಥಿತಿಗೂ ಇರುವ ತಾರತಮ್ಯವನ್ನು ಕಂಡು ಸೋಜಿಗಗೊಂಡಿದ್ದದಂತೆ ತೋರುತ್ತೆ. ಅಲ್ಲವೇ? "

ಈಮೇಶರಾಯನು 'ಹೌದು' ಎಂದು ಉತ್ತರವಿತ್ತನು.

"ಹಾಗಾದರೆ ಕೇಳಿ. ನಾನು ನಿಮ್ಮ ಮನೆಯಲ್ಲಿ ಕೆಲಸಕ್ಕಿದ್ದಾಗ ಚಿಕ್ಕವಳಾಗಿದ್ದೆ, ರೂಪವತಿಯಾಗಿದ್ದೆ, ಸುಖದಲ್ಲಿ ಆಸೆಯುಳ್ಳವಳಾಗಿದ್ದೆ. ಆದರೆ ದಾಸಿಯಾಗಿದ್ದವಳಿಗೆ ಸುಖದ ಸಾಧನಗಳು, ಕೈಗೆಟಕಲಾರವೆಂದು ಮನನಂಗಿ. ಆ ಸಮಯದಲ್ಲಿ ಅದೃಷ್ಟವಶಾತ್ ಮುದರಾಸಿನ ಭೂಸಲಾಲ ಜೇರಾ ಶೇಟರು ನನ್ನನ್ನು ಕಂಡು ಕರೆಸಿಕೊಂಡರು. ನಿಮ್ಮ ಊಳಿಗವನ್ನು ಬಿಟ್ಟು ಅವರ ಕೈಹಿಡಿದೆ. ಬಡತನವು ಹೋಗಿ ಸಿರಿತನವು ಬಂತು. ಅದರ ಫಲವಾಗಿ ಈ ಆಭರಣಗಳು, ಈ ಉಡುಗೆ ತೊಡುಗೆಗಳು, ಈ ಸುಖಸಾಮಗ್ರಿಗಳು. — ಈಗ ತಿಳಿಯತೆ?"

ಕುಳಿತಿದ್ದ ಈಮೇಶರಾಯನು "ಹೌದು" ಎನ್ನುತ್ತಾ ತಟ್ಟನೆ ಎದ್ದು ನಿಂತನು. ಆದರೆ ಅವಳು ಅವನನ್ನು ಬಲವಂತ ಮಾಡಿ ಕುಳ್ಳಿರಿಸಿ, ಮುಂದೆ ಹೇಳತೊಡಗಿದಳು.

"ನಾನು ಹೇಳುವುದನ್ನೆಲ್ಲಾ ಕೇಳಿ. ಇನ್ನು ಬೇರೆ ಯಾರೊಡನೆಯೂ ಹೇಳಲಾರೆಂದು ನಿಮ್ಮೊಡನೆ ಹೇಳಿದೆ. ಹೇಳಲು ಇನ್ನೇನೂ ಬಹಳ ಉಳಿದಿಲ್ಲ...ನಾನು ಸರುಪಕ್ಕೆ ಒಂದೆರಡು ಬಾರಿ ದೊಡ್ಡ ಪಟ್ಟಣಗಳಿಗೆಲ್ಲಾ ಹೋಗಿ, ಅಲ್ಲಿಯ ಉಚ್ಚ ಸಮಾಜದಲ್ಲಿ ಬೆರೆತು, ಎಲ್ಲಾ ಜನರ ಪರಿಚಯವನ್ನೂ ಮಾಡಿಕೊಳ್ಳುತ್ತೇನೆ. ಈ ದಿನ ವಜ್ರ ತೊಟ್ಟಿದ್ದೇನಾದರೆ ನಾಳೆ ಮುತ್ತು, ನಾಡಿದು ನೀಲ, ಹೀಗೆ ಬೇರೆ ಬೇರೆ ತರದ ಆಭರಣಗಳನ್ನು ತೊಟ್ಟುಕೊಳ್ಳುವೆನು. ಇಲ್ಲಿಯ ಹೆಂಗಸರೆಲ್ಲರೂ ನನ್ನ ಗೆಳೆಯರು. ನೋಡಿ, ಇವರೆಲ್ಲಾ ನನ್ನ ಆಭರಣಗಳಿಂದ ಆಕರ್ಷಿಸಲ್ಪಟ್ಟವರು. ನನ್ನ ಉದ್ದೇಶವೂ ಅದೇ. ಈ ಹೆಸರು, ಈ ಉಡುಗೆತೊಡುಗೆ, ಈ ನಾಗರೀಕತೆಯ ಸೋಗು, ಇವೆಲ್ಲಾ ಒಂದು ಶಕ್ತಿಮಯವಾದ ಸೂಜಕಲ್ಲು. ಇದರಿಂದ ಆಕರ್ಷಿಸಲ್ಪಡದ ಹೆಂಗಸೇ ಇಲ್ಲವೆನ್ನಬೇಕು. ನನ್ನ ಆಭರಣಗಳನ್ನು ಕಂಡು ಮನಸ್ಸಿನೊಳಗೆ ಎಲ್ಲರೂ ನನ್ನ ಮೇಲೆ ಅಸೂಯೆ ಪಡುವರು. ತಮಗೂ ಅಂತಹುದೇ ಬೇಕೆಂದು ತಮ್ಮ ತಂದೆತಾಯಂದಿರನ್ನೋ, ಗಂಡಂದಿರನ್ನೋ ಹಠಹಿಡಿಯುವರು. ನಾನು ಇವುಗಳನ್ನೆಲ್ಲಾ ಕೊಂಡುಕೊಂಡುದುದು ಮದರಾಸಿನ ರತ್ನ ವರ್ತಕ ಭೂಸಲಾಲ ಜೇರಾ ಶೇಠರಿಂದೆಂದು ಎಲ್ಲರಿಗೂ ಗೊತ್ತು. ಜೇರಾಶೇಠರೇ ಮದರಾಸಿನ ರತ್ನ ವ್ಯಾಪಾರಿಗಳೆಲ್ಲಾ ಹೆಸರಾದವರೆಂದು ನಿಮಗೂ ಗೊತ್ತಿರಬಹುದು, ಈಗ ತಿಳಿಯಿತೇ?"

ಈಮೇಶರಾಯನು ಆಶ್ಚರ್ಯದಿಂದ "ಹೌದು" ಎಂದನು.

"ಏನು?"

"ಇಂತಹುದನ್ನು ಇಷ್ಟರ ವರೆಗೆ ಕಂಡು ಕೇಳಿಲ್ಲ ನೀನ ರೀತಿಯ ಜಾಹೀರಾತು!!

"ಈ ಹಂಚಿಕೆಯಿಂದ ಚೆನ್ನಾಗಿ ವ್ಯಾಪಾರವಾಗುತ್ತಯೇ?"

"ಹೌದು." ನಸುನಗೆ.

"ಇದು ಯಾರ ಆಲೋಚನೆ? ಸಾಧಾರಣ ತಲೆಯ ವರದ್ದಲ್ಲ. ನಿಮ್ಮದೇ:"

"ಹೌದು!" ಉತ್ತರದೊಂದಿಗೆ ಒಂದು ಮುಗುಳ್ನಗೆ.

ಈಮೇಶರಾಯನು ಈ ಬಾರಿಯ "ಹೌದು"ನ್ನು ಕೇಳಿ ಲಲಿತಾ ವಿಲ್ಸನ್—ಉರುಫ್ ಮಿಸೆಸ್ ಭೂಸಲಾಲ ಹೀರಾಶೇಠ್—ಉರುಫ್ ಗೌರಿಗೆ ಮರ್ಯಾದೆಸೂಚಕವಾದ ವಂದನೆ ಇನ್ನಿಲ್ಲ. ನಮ್ಮೂನೆಯದು—ಹೇಳಿ ಎತ್ತಿನಮೂದಲ್ಲಿ ಮಾಡುತ್ತಾರಲ್ಲ ಅಂಥಾದ್ದು - ಮಾಡಿ, ಉಸಿರೆತ್ತದೆ ಹೊರಟುಹೋಗಬಿಟ್ಟನು.

ಹೊರಟು ಹೋಗುತ್ತಿದ್ದ ಈಮೇಶರಾಯನನ್ನು ನೋಡಿ ಗೌರಿಯು ಇನ್ನೊಂದು ನಸುನಗೆಯನ್ನು ಬೀರಿದಳು.

—ಸಮಾಪ್ತ—

THE EMPIRE LODGE

BRAHMINS RESTAURANT.

Market Square, Santhepet, Mysore.

Delicious Lunch! Clean & Sumptuous Food!

ದಿ ಎಂಪ್ಯಾರ್ ಲಾಡ್ಜ್

ಬ್ರಾಹ್ಮಣರ ಊಟದ ಹೋಟೆಲ್ ಮತ್ತು ಕಾಫಿ ಕ್ಲಬ್.

ಮಾರ್ಕೆಟ್ ಸ್ಕ್ವೇರ್, ಸಂತೆಪೇಟೆ, ಮೈಸೂರು.

ರುಚಿಕರವಾದ ಫಲಹಾರ. ನಿರ್ಮಲವಾದ ಭೋಜನ.

ಮಹನೀಯರುಗಳಲ್ಲಿ ವಿಜ್ಞಾಪನೆ.

ಮೇಲ್ಕಂಡ ಹೋಟೆಲನ್ನು ಮಹಾಜನಗಳ ಸೌಕರ್ಯಕ್ಕಾಗಿ ಹೊಸದಾಗಿ 3–8–'31ರಲ್ಲಿ ಸ್ಥಾಪಿಸಿದ್ದೇವೆ. ಇಲ್ಲಿ ಹಸನಾದ ತುಪ್ಪದಿಂದ ರುಚಿಕರವಾದ ತಿಂಡಿ ಪದಾರ್ಥಗಳನ್ನೂ, ಮತ್ತು ನಿರ್ಮಲವಾದ ಭೋಜನವನ್ನೂ ತಯಾರಿಸುತ್ತೇವೆ. ಅಲ್ಲದೆ ಸ್ಥಳೀಯರಿಗೂ ಮತ್ತು ಪರಸ್ಥಳದವರಿಗೂ ಬಂದರೆ ಇಳಿದುಕೊಳ್ಳಲು ಅಂದವಾದ ರೂಮುಗಳು ಸದಾ ಬಾಡಿಗೆಗೆ ಸಿದ್ಧವಾಗಿವೆ. ಆದಪ್ರಯುಕ್ತ, ಮಹನೀಯರು ಗಳು, ಈ ನಮ್ಮ ಹೋಟೆಲನ್ನು ಒಂದಾವರ್ತಿಯಾದರೂ ಸಂದರ್ಶಿಸಿ, ಇದರ ನಿಜತ್ವವನ್ನು ಪರೀಕ್ಷಿಸಿ, ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಶ್ರೀ ಸಮರ್ಥ ಆಯುರ್ವೇದಿಕ್ ಫಾರ್ಮಸಿ, ಮಂಗಳೂರು, ದ. ಕ. ಜಿಲ್ಲಾ.

ಬ್ರಿಟಿಷ್ ಇಂಡಿಯಾ ಸರಕಾರದ ಗಣಿಕನೇ ಇನಮಿಯೆ ಆಕ್ಟ ನೆಂಬು XVI ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ಟ್ರೇಡ್ ಮಾರ್ಕು.

ಪರಿಶುದ್ಧತೆ ಮತ್ತು ಉತ್ಕೃಷ್ಟತೆಗಳ ಗ್ಯಾರಂಟಿಯಾದ ಈ ಟ್ರೇಡ್ ಮಾರ್ಕು ಇರುವ ಔಷಧಗಳನ್ನೇ ಖಾತ್ರಿಯಾಗಿ ನಮ್ಮ ಔಷಧಗಳೆಂದು ಗ್ರಹಿಸಿರಿ.

ವೈದ್ಯ ಬಿ. ಆರ್. ಹರಿದಾಸ್, ಪ್ರೊಪ್ರೈಟರ್:–ಶ್ರೀ ಸಮರ್ಥ ಆಯುರ್ವೇದಿಕ್ ಫಾರ್ಮಸಿ, ಮಂಗಳೂರು.

ಕಸ್ತೂರಿ ವಿಶೇಷ

ದ ತ ಮೂ ಲಾ ರಿ ಷ್ಟ

ಮುಂದಾಗಿ ಜನಾಂಗದ ತಾಯಂದಿರಿಗೆ ಜನಾಂಗವು ಸುಭಿಕ್ಷವಾಗುವಂತೆ ಸಾಧಿಸಿದ ವಿಶಿಷ್ಟವೆಂದರೆ ದತಮೂಲಾರಿಷ್ಟವೆ.

8 ಔನ್ಸಿನ ಬಾಟ್ಲಿಗೆ ರೂ. 1–14–0.

ಧಾರಾಳ ಕಮಿಶನು ಕೊಡಲಾಗುತ್ತೆ. ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆದು ಕೊಳ್ಳುವುದು.

ಚ್ಯವನ ಪ್ರಾಕ್ಕಾವ ಲೇಹ

ಕೊಡ್ಲಿವರ್ ಎಣ್ಣೆ ಮೊದಲಾದವುಗಳನ್ನು ವೃಥಾ ಸೇವಿಸಿ ಏಕಕ್ಕೆ ವ್ಯಥೆಪಡುವಿರಿ!

ರಾತ್ರಿಗೆ ರೂ. 3–8–0.



— ಎಲ್ಲಾ ಕಡೆಗಳಲ್ಲಿಯೂ ವಿಜಂಟರು ಬೇಕಾಗಿರುವರು —

ಚಂದಾದಾರರಾಗಿ ಪ್ರೋತ್ಸಾಹಿಸಿರಿ!

ಪ್ರತಿ ಗುರುವಾರ ಹೊರಡುವ

ಉತ್ಕೃಷ್ಟ ಕನ್ನಡ ವಾರ ಪತ್ರಿಕೆ

ಸಂಪಾದಕ:–ಎ. ಬಿ. ಶೆಟ್ಟಿ, ಎಮ್. ಎಲ್. ಸಿ.

ನವಯುಗದ ನಡೆನುಡಿ ವಿಷಯಗಳ ಕುರಿತು ವಿಚಾರಪರ ಲೇಖ, ಮನೋರಂಜಕ ಕಥೆ, ರಸಭರಿತ ವಿನೋದವಿಚಾರ, ಚಿತ್ರಾಕರ್ಷಕ ಸಮಾಚಾರ, ವಿಮರ್ಶಕ ಟೀಕೆ ಟಿಪ್ಪಣಿಗಳಿಂದ ಸರ್ವರಿಗೂ ಅತ್ಯುಪಯುಕ್ತವಾಗಿ,

ನವಯುಗಕ್ಕೊಪ್ಪುವ ಪತ್ರಿಕೆಯೆಂದರೆ

ನವಯುಗವು

ಉತ್ಕೃಷ್ಟ ಲೇಖನ, ಮುದ್ದಾದ ಮುದ್ರಣ, ವಿವಿಧ ಚಿತ್ರಗಳಿಂದ ವಾರಪತ್ರಿಕೆಗಳಲ್ಲಿರಬೇಕಾದ ಯಾವತ್ತು ಸಲ್ಲಕ್ಷಣಗಳು ಈ ಪತ್ರಿಕೆಯಲ್ಲಿವೆ.

ರಾಜಕೀಯದಲ್ಲಿ ನ್ಯಾಯಶೀಲ ಪ್ರಗತಿಪರ ಧೋರಣೆ, ಉಜ್ವಲ ಸಾಮಾಜಿಕ ಸುಧಾರಣೆ, ಎಲ್ಲಾ ವಿಧದ ವಿಚಾರಪರ ಧಾರ್ಮಿಕ ವಿಚಾರ ಪ್ರಸರಣೆಯೇ ಈ ಪತ್ರಿಕೆಯ ಮುಖ್ಯೋದ್ದೇಶಗಳು.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) 3-4-0.

ಕರ್ನಾಟಕ ಪ್ರಾಂತ್ಯದೆಲ್ಲಾ ಮುಖ್ಯರಾಗಿ ಪತ್ರಿಕ ಕನ್ನಡದ ವರ್ತಮಾನದಲ್ಲಿ ಅತೀವ ಆಸಕ್ತಿಯುಳ್ಳ ಪ್ರತಿಯೊಬ್ಬ ವರ್ಗಗಳಿಂದ ಅಭಿವೃದ್ಧಿಯಾಗಿ ಜಾರಿಗೆ ಮಾಡುತ್ತಿರುವ ಈ ಪತ್ರಿಕೆಯ ಹಾಗೆಗೆ ಕೂಡಲೇ ಬರೆದುಕೊಳ್ಳಿರಿ.

ಜಾಹೀರಾತುಗಳನ್ನು ಪ್ರಕಟಿಸಬೇಕೆಂದಿರುವವರು ಈ ವಿಳಾಸಕ್ಕೆ ಬರೆದುಕೊಳ್ಳಿರಿ.

ಮೆನೇಜರ್, 'ನವಯುಗ' ಕಂಪನಿಯವರು, ಮಂಗಳೂರು.

ಪ್ರತಿ ಕನ್ನಡಿಗನು ಪ್ರೋತ್ಸಾಹಿಸತಕ್ಕ

ಶ್ರೇಷ್ಠ ವರ್ಗದ ಕನ್ನಡ ನುಡಿಯ

ವಾರ್ತಾ ಪತ್ರಿಕೆ.

ಪ್ರತಿ ಮಂಗಳವಾರ ಪ್ರಕಟೀಕೃತವಾಗುವುದು.

ವಾರ್ಷಿಕ ಚಂದಾ:–

ಸ್ಥಳೀಯರಿಗೆ	...	ರೂ. 2	8 0
ಪರಸ್ಥಳೀಯರಿಗೆ (ಅಂಚೆ ವೆಚ್ಚ ಸೇರಿ)		ರೂ. 3	5 0

ತಾತ್ಕಾಲಿಕ, ರಾಜಕೀಯ, ಸಾಂವತ್ಸರಿಕ ಮತ್ತು ಸಾಮಾಜಿಕ ವಿಷಯಗಳನ್ನು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸುವುದು. 'ಅಗ್ರಲೇಖನ, ಉಪಸ್ಯಾಸಗಳ, ಪ್ರಬಂಧಗಳ, ಸ್ಥಳ ಪರಸ್ಥಳೀಯ ವಿಚಾರಗಳ ಮತ್ತು ಪತ್ರವ್ಯವಹಾರ ಮುತ್ತು ಪುಸ್ತಕವಿಮರ್ಶೆ ಮೊದಲಾದ ಪ್ರಮುಖ ಸಾಮಾಗ್ರಿಗಳ ಯೋಗ್ಯ ಭಾಂಡಾಗಾರ!

ಜಾಹೀರಾತುಗಳ ದರವನ್ನೂ ಮಾದರಿ ಸಂಖ್ಯೆಯನ್ನೂ ಅಪೇಕ್ಷಿಸಿದಲ್ಲಿ ಕಳುಹಿಸುವೆವು.

"ಕಂಠೀರವ ಕಾರ್ಯಾಲಯ"

ಮಂಗಳೂರು, ದ. ಕನ್ನಡ.

ಇವರೊಡನೆ ವ್ಯವಹಾರ ನಡೆಸುವಿರಿ.

ಹೊಸ ದಾಸ್ತಾನು! ಸ್ವದೇಶಿ ಲೇಖನ ಸಾಮಾಗ್ರಿ!

ಮಟ್ಟಿಪುಂಡಲೀಕ ರಾಮಪ್ರಭು

ಮಂಗಳೂರು ಸ್ಟೇಶನರಿ ಮಾರ್ಟ್,

ಗೋಳಿಕಟ್ಟೆ ಬಜಾರ್, ಮಂಗಳೂರು.

ಕಾಲಾ ಆಫೀಸುಗಳ ಸಾಹಿತ್ಯಗಳು ಸಿಗುವ ಅಗ್ಗ ಮತ್ತು ಉತ್ತಮ ಮಂದಿರ

ವಿದ್ಯಾರ್ಥಿಗಳಿಗೂ, ಪ್ರಾ, ಕಾಫಿತೋಟ, ಆಫೀಸು, ಭಂಡ ಸಾಲೆ, ಅಂಗಡಿ ಇತ್ಯಾದಿ ಸಂಸ್ಥೆಗಳಿಗೆ ಬೇಕಾದ ಎಲ್ಲಾ ನಮೂನೆಯ ದೇಶಿ, ವಿದೇಶಿ ಲೇಖನ ಸಾಹಿತ್ಯವು ರಬ್ಬರ್ ಮತ್ತು ಚಿಲ್ಲರೆಯಾಗಿಯೂ ತಕ್ಕ ಕ್ರಯಕ್ಕೆ ದೊರಕ ಬೇಕಾದರೆ ನುಂಗಳೂರು ಸ್ಟೇಶನರಿ ಮಾರ್ಟಿಗೆ ಬನ್ನಿರಿ ನಮಗೆ ಕೃಪ್ತಿಕರವಾಗುವಂತೆ 'ಕಾಳೆಸ'ರವರ ಲೋಟಸ ಪೌಂಟನ ಶಾಯಿ ಮತ್ತು ರ್ಯಾಟಿಂಗ್ ಶಾಯಿ ಭರಣಿಗಳನ್ನೂ

ಎಫ್. ಎನ್. ಗುಪ್ತರವರ ಹೇಂಡ್ಸ್, ನಿಬ್ಬು, ಪೆನ್ಸಿಲುಗಳನ್ನೂ ಮದ್ರಾಸ್ ಪೆನ್ಸಿಲು ಫೆಕ್ಟರಿಯಲ್ಲಿ ತಯಾರಾದ ಕೊಪಿಂಗ್ ಕಲ್ಲಡ್ಡ ಎಚ್. ಬಿ. ಪೆನ್ಸಿಲುಗಳನ್ನೂ

ಪೊಟರ ಕೆಲ್ಲರಬೋಕ್ಸ್, ಕಂವಾಸ ಬೋಕ್ಸ್, ವಂಡಿಂಗ್ ಮೆಶಿನ್ಸು, ಸ್ಪ್ರಿಂಗ್ ವ್ಯಾಲುಗಳೂ, ಪ್ರೆಸ್ಸ ಕೋಪಿ ಪುಸ್ತಕಗಳೂ ಕಾರ್ಬನ್ ಪೇಪರ, ಟೈಪುಪೇಪರ, ಟ್ಯಾಪರ್ಯಾಟಿಂಗ್ ಪೇಪರ ಟ್ಯಾಪರ್ಯಾಟಿಂಗ್ ರಿಬ್ಬನ್ಸು, ಇತ್ಯಾದಿ ಯಾವತ್ತೂ ಸ್ಟೇಶನರಿ ಸಾಮಾನು ಸಿಗುವ ಸ್ಥಳ:–

The Mangalore Stationery Mart,

Goltkatta Bazaar, Mangalore.

ಇಂಡಿಯದ ನಾಗರಿಕತೆಯ ಪ್ರಾಚೀನತೆಯು

ಲೇಖಕರು:—ತ್ರಿಳ ಏ. ಶಿವರಾಮಯ್ಯ, ಕರ್ನಾಟಕ ಪಂಡಿತ, ಬೋರ್ಡ್ ಹೈಸ್ಕೂಲ್, ಕುಂದಾಪೂರ

ಜಗತ್ತಿನಲ್ಲೆಲ್ಲಾ ಹಿಂದೂ ಜನಾಂಗವೇ ನಾಗರಿಕತೆಯಲ್ಲಿ ಪ್ರಾಚೀನವಾದುದು. ಇಂಡಿಯವು ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ತನ್ನ ವಸಾಹತುಗಳನ್ನು ಸ್ಥಾಪಿಸಿದ್ದಿತು. ಈಜಿಪ್ತ, ಗ್ರೀಸ್, ಫಾರ್ಸಿ, ಸ್ಕಿಂದನೇವಿಯಾ, ಚೀನಾ ಮೊದಲಾದ ದೇಶಗಳು ಕೂಡ ತಮ್ಮ ನಾಗರಿಕತೆಯನ್ನೂ ತಮ್ಮ ಮತವನ್ನೂ ಹಿಂದೂಗಳಿಂದಲೇ ಪಡೆದರು.

ಹಿಂದೂಗಳ ಪ್ರಾಚೀನ ನಾಗರಿಕತೆಯು ಯಾರನ್ನೂ ಬೆರಗುಗೊಳಿಸುವಷ್ಟು ಉತ್ಪ್ರೇಕ್ಷವಾಗಿರುವುದು ಮನುಷ್ಯ ಶಕ್ತಿಯಿಂದ ತಿಳಿಯಲಸಾಧ್ಯವಾದ ಅದರ ಪ್ರಾಚೀನತೆಯನ್ನು ಕಂಡು ಪಾಶ್ಚಾತ್ಯ ಪಂಡಿತರೆಲ್ಲಾ ಬೆರಗಾಗಿ ಹೋಗಿರುವರ್ದು ಗ್ರೀಕರ ಮತ್ತು ಈಜಿಪ್ತಿಯಾನರ ಕಲ್ಪನಾಯುಗಕ್ಕಿಂತ ಅಧುನಿಕ ಪಾಶ್ಚಾತ್ಯರ ಶಿಲಾಯುಗಕ್ಕಿಂತ ಅತೀ ಪ್ರಾಚೀನವಾದ ಹಿಂದೂಗಳ ನಾಗರಿಕತೆಯನ್ನು ಎಣಿಸಿದರೆ ಈಗಿನ ಪಾಶ್ಚಾತ್ಯರ ನಾಗರಿಕತೆಯು ನಿನ್ನೆ ಹೊತ್ತೆ ಹುಟ್ಟಿದುದೆಂಬಂತೆ ತೋರುವುದು. ಈ ಭೂಮಿಯುಂಟಾಗಿ ಎಷ್ಟು ಕಾಲವಾಯಿತೆಂದು ಹೇಳಬೇಕಾದರೆ ಅದನ್ನು ಕೋಟಿ ಗೆಟ್ಟಲೆಯಿಂದ ಎಣಿಸಬೇಕಲ್ಲದೆ ಸಾವಿರಗಟ್ಟಲೆಯಿಂದ ಸಾಗದು.

ಜನಾಂಗದ ಪ್ರಾಚೀನತೆ ಮತ್ತು ಅವರ ನಾಗರಿಕತೆಯ ಪ್ರಾಚೀನತೆಯನ್ನು ಕುರಿತು ಬಹಳ ವಿಚಾರ ಮಾಡಿದ ಕೌಂಟ್ ಜೋರ್ನಸ್ ಜರನಾ (Count Bjornst Jerna) ಎಂಬ ಪಾಶ್ಚಾತ್ಯ ಪಂಡಿತರೊಬ್ಬರು ನಾಗರಿಕತೆಯ ವಿಷಯದಲ್ಲಿ ಮತ್ತು ಧರ್ಮದ ಪ್ರಾಚೀನತೆಯ ವಿಷಯದಲ್ಲಿ ಹಿಂದೂಗಳನ್ನು ಸರಿಗಟ್ಟುತಕ್ಕವರು ಭೂಮಿಯಲ್ಲಿಯೇ ಇಲ್ಲವು ಎನ್ನುವರು. ಇದಲ್ಲದೆ ಅಮೇರಿಕದ ಯಾಲೇ ಕಾಲೇಜಿನ ಮುಖ್ಯಸ್ಥರಾದ ಪಂಡಿತ ಸ್ಟೈಲೆ ಎಂಬವರು (Dr Stile) ಇವರು ಅತ್ಯಂತ ಸುತಪ್ರಾಂತರಾಗಿದ್ದರೂ ಹಿಂದೂಗಳ ಗ್ರಂಥ ನಿರ್ಮಾಣ ಕಾಲದ ಪ್ರಾಚೀನತೆಗೆ ಬೆರಗಾಗಿ ಅಂತಹ ಪ್ರಾಚೀನ ಪುಸ್ತಕಗಳ ಸಂಗ್ರಹಕ್ಕಾಗಿ ಹಿಂದೂಸ್ಥಾನಕ್ಕೆ ಹೋಗುವಂತೆ ವೀಡಿಕೊಂಡರು.

ಹಿಂದೂಗಳಲ್ಲಿ ರೂಢಿಯಾಗಿರುವ ಕೃತ, ತ್ರೇತಾ ದ್ವಾಪರ, ಕಲಿ ಎಂಬ ನಾಲ್ಕು ಯುಗಗಳ ಕುರಿತು ಮಾತಾಡುವಾಗ ಹಾಲ್ಬೆಡ್ (Mr Halbed) ಎಂಬವರು ಈ ಚತುರ್ಯುಗಗಳ ಲೆಕ್ಕದಿಂದ ಈ ನಾಗರಿಕತೆಯು ಬಹು ಪ್ರಾಚೀನವಾದುದು ಅಂದರೆ ಬ್ಯಾಬಲಿನ ಮೋಸೆಯ ಜನನಕ್ಕಿಂತ ಪ್ರಾಚೀನವಾದುದು ಮಾತ್ರವಲ್ಲ, ನಿಸ್ಸಿಕುಂಟಾದುದೆಂಬಷ್ಟು ಅಧುನಿಕವಾಗಿಯೂ ಇರುವುದೆಂದು ಹೊಗಳಿರುವರು. ಕಾಲವು ಅನಂತವಾಗಿದ್ದರೂ ಪ್ರಾಚೀನ ಹಿಂದೂ ಜನರು ಅಷ್ಟು ಪೂರ್ವದಲ್ಲಿಯೇ ಅದನ್ನು ಗೇಣಿನಿಂದ ಅಳೆದುದನ್ನು ಕಂಡರೆ ಆಶ್ಚರ್ಯವಾಗುವುದೆಂದು ಹೇಳಿರುವರು.

ಹಿಂದೂಗಳ ಜ್ಯೋತಿಷ ಶಾಸ್ತ್ರದ ಪ್ರಾಚೀನತೆಯ ವಿಷಯವಾಗಿ ಹಿಂದೆ ಹೇಳಿದ ಕೌಂಟ್ ಜೋರ್ನಸ್ ಜರನಾ ಸಾಹೇಬರೇ 'ಹಿಂದೂ ಜನರು ಕ್ರಿ ಪೂ. 3000 ವರುಷಕ್ಕಿಂತ ಮುಂಚೆಯೇ ಸಿದ್ಧಾಂತ ಶಾಸ್ತ್ರದಲ್ಲಿಯೂ, ಗಣಿತ ಶಾಸ್ತ್ರದಲ್ಲಿಯೂ ಪ್ರೌಢರಾಗಿದ್ದಲ್ಲದೆ ಇತರ ಶಾಸ್ತ್ರ ವಿಚಾರದಲ್ಲಿಯೂ ತಕ್ಕ ವ್ಯವಸಾಯವನ್ನು ನಡಿಸಿ ಮುಂದೆ ಮುಂದೆ ಬಂದರು' ಎಂದು ಹೇಳಿರುವರು.

ಅದಲ್ಲದೆ ಪ್ಲಿನಿ ಎಂಬ ಇನ್ನೊಬ್ಬರು ಹಿಂದೂಗಳು ಬಹು ಪ್ರಾಚೀನ ಕಾಲದಲ್ಲಿಯೇ ದೇಶಗಳನ್ನು ಕಟ್ಟಿ ಆಳ್ತೊಡಗಿದ ನಾಗರಿಕ ಜನಾಂಗವಾಗಿದ್ದರೆಂದೂ ಗ್ರೀಕರ ದೇವರಾದ ಬಾಂಕೋಸನ ಕಾಲದಿಂದ ಪ್ರಾರಂಭಿಸಿ ಇಂಡಿಯಾದಲ್ಲಿ ಕ್ರಮವಾಗಿ 154 ಮಂದಿ ರಾಜರು ಒಟ್ಟು 6451 ವರುಷ ಆಳಿದ್ದರೆಂದೂ ಹೇಳಿರುವರು.

ರಾಜತರಂಗಿಣಿಯ ಭಾಷಾಂತರ ಕರ್ತನಾದ ಅಬುಲ್ ಫಜಲನು ಇಂಡಿಯದ ಪ್ರಾಚೀನ ರಾಜರ ಚರಿತ್ರರೂಪವಾದ ಆ ಗ್ರಂಥದಲ್ಲಿ ಹಲವು ರಾಜರ ಹೆಸರನ್ನು ಕ್ರಮವಾಗಿ ಹೇಳಿ ಅವರ ಆಳಿಕೆಯ ಕಾಲವನ್ನೆಲ್ಲಾ ಒಟ್ಟಾಗಿ ಸೇರಿಸಿದರೆ 4109 ವರುಷ 11 ತಿಂಗಳು 9 ದಿನವಾಗುವುದೆಂದು ಹೇಳಿರುವನು. ಅಲ್ಲದೆ ಪ್ರೊಫೆಸರ್ ಹೀರನ್ (Prof Heeren) ಎಂಬವರೂ ಇಂಡಿಯದ ಪ್ರಾಚೀನ ರಾಜರಲ್ಲಿ ಒಬ್ಬನಾದ ದಯಾನಿಶೇಷ (Dionysees)ನಿಂದ ತೊಡಗಿ ಚಂದ್ರಗುಪ್ತನ ಕಾಲದ ವರೆಗೆ 6042 ವರುಷಗಳು ದಾಟುವ ನೆನ್ನುತ್ತಾನೆ. ಗ್ರೀಕ್ ರಾಯಭಾರಿಯಾದ ಮೆಗಸ್ತೆನೀಸನು ಕೂಡ ಸ್ಪೇತಾಂಬನಿಗೂ(Spatembas) ಚಂದ್ರಗುಪ್ತನಿಗೂ ನಡುವೆ 6042 ವರುಷಗಳ ಅಂತರವಿರುವುದೆನ್ನುತ್ತಾನೆ.

ಪಂಡಿತ ಮ್ಯಾಕ್ಸ್ ದಂಕರ್ (Prof. Max Dancker) ಎಂಬವರು ಈ ಸ್ಪೇತಾಂಬನೆಂಬವುದು ದಯಾನಿಶೇಷನ ಬೇರೊಂದು ಹೆಸರಾಗಿರಬೇಕೆಂದೂ ಅವನ ಆಳಿಕೆಯು ಕ್ರಿ ಪೂ 6717ರಲ್ಲಿ ಪ್ರಾರಂಭವಾಗುವುದೆಂದೂ ಹೇಳುತ್ತಾರೆ. ಅಲ್ಲದೆ ಯುಧಿಷ್ಠಿರ ಶಕದ ತರುವಾಯ 3044 ವರುಷಗಳು ದಾಟಿದ ಮೇಲೆ ವಿಕ್ರಮ ಶಕವು ಪ್ರಾರಂಭವಾಗುವ ಕಾರಣ ಈ ಯುಧಿಷ್ಠಿರ ಶಕವು ಕ್ರಿ ಪೂ 3100ರಲ್ಲಿ ಪ್ರಾರಂಭವಾಗಿರಬೇಕೆನ್ನುವರು. ಗ್ರೀಕ ರಾಯಭಾರಿಯಾದ ಮೆಗಾಸ್ತೆನೀಸನೂ ಪಾಟಲಿಪುತ್ರದಲ್ಲಿ ದೊರೆತ ಕಾಲಗಣನೆಯ ಪಟ್ಟಿಯನ್ನು ಪರಿಶೋಧಿಸಿ ಆ ನಗರಿಯಲ್ಲಿ ಆಳಿದ 153ಕ್ಕೆ ಕಡಮೆ ಇಲ್ಲದಷ್ಟು ಮಂದಿ ರಾಜರ ಕಾಲವೆನ್ನು ಗೊತ್ತುಮಾಡಿ ದಯಾನಿಶೇಷನಿಂದ ತೊಡಗಿ ಚಂದ್ರಗುಪ್ತ ವರೆಗಿನ ಅವರ ಹೆಸರನ್ನೆಲ್ಲಾ ಕ್ರಮವಾಗಿ ಕಾಣಿಸಿರುವನಲ್ಲದೆ ಇವರ ಒಟ್ಟು ಆಳಿಕೆಯ ಕಾಲವು 6451 ವರುಷಗಳೆಂದೂ ಹೇಳಿರುವನು. ಇದರಿಂದ ದಯಾನಿಶೇಷ ರಾಜನು ಕ್ರಿ ಪೂ 7000 ವರುಷದಲ್ಲಿ ಪಟ್ಟಕ್ಕೆ ಬಂದಿರಬೇಕು. ಈಜಿಪ್ತಿನ ಪ್ರಾಚೀನ ರಾಜನು ಪಟ್ಟಕ್ಕೆ ಕುಳಿತುದು ಕ್ರಿ ಪೂ 5867 ವರುಷಗಳ ಹಿಂದೆ ಅಂದರೆ ಗೈಜೆಸಿರಮಿದನ್ನು ಕಟ್ಟಿಸಿದ ಸೌಫಿ ರಾಜನಿಗಿಂತ 2000 ವರುಷಗಳ ಹಿಂದೆ.

ಇದಲ್ಲದೆ ಪುರಾಣಗಳನ್ನನುಸರಿಸಿಯೂ ಮಗಧದಲ್ಲಿ ಬೃಹದ್ರಥನ ಸಂತತಿಯವರು ಆಳಿದುದು ಕ್ರಿ ಪೂ 2100 ರಲ್ಲಿ ಅಲ್ಲಿ ಆಳಿದ ಪ್ರದ್ಯೋತನ ಮನೆತನಕ್ಕಿಂತ ಹಿಂದೆ ಸೋಮವಂಶಿಯ, ರಿಪುಂಜಯ ಮಹಾರಾಯರಿಗಿಂತ 1000 ವರುಷಕ್ಕೆ ಮುಂಚೆ ಈ ಬೃಹದ್ರಥನ ಮನೆತನದಲ್ಲಿ, ಬೃಹದ್ರಥ, ಜರಾಸಂಧ, ಸಹದೇವ, ಬೃಹದ್ರಥ ಎಂಬ ನಾಲ್ಕರು ಆಳುವರು. ಆದರೆ ಕಾಲಗಣನೆಯ ವೇಳೆ ಸಂತತಿಯನ್ನೇ ತಕ್ಕೊಳ್ಳುವರಲ್ಲದೆ ಸಂತತಿಯ ರಾಜರನ್ನೆಲ್ಲಾ ಬೇರೆ ಬೇರೆಯಾಗಿ ತೆಕ್ಕೊಳ್ಳುವ ಪದ್ಧತಿಯಲ್ಲ.

ಇವೆಲ್ಲ ಆಧಾರವನ್ನು ಕ್ರೋಡೀಕರಿಸಿ ವಿಚಾರಿಸಿದಲ್ಲಿ ಪ್ರಾಚೀನ ಹಿಂದೂ ನಾಮ್ಯಾಜ್ಞವು ಬಹು ಪುರಾತನವೆನ್ನಲು ದೊರಕುವುದು. ಹಿಂದೆ ಜೋರ್ನಸ್ ಜರನಾ ಮಹಾಶಯರು ಹಿಂದೂಗಳ ಸಿದ್ಧಾಂತ ಶಾಸ್ತ್ರಗಳನ್ನೂ ವಿಚಾರಿಸಿ ಅವರ ನಾಗರಿಕತೆಯ ಪ್ರಾಚೀನತೆಯ ಕುರಿತು ಪ್ರಬಲವಾದ ರುಜುವಾತುಗಳನ್ನು ತೋರಿಸಿರುವರು. ಅದೂ ಅಲ್ಲದೆ ಬಂಡೆಯಲ್ಲಿ ಕೊರೆದ ಅದ್ಭುತಗಳಾದ ಮತ್ತು ಬಲವಾದ ದೇವಾಲಯಗಳು ಎಲಿಫಾಂಟಾ, ಎಲ್ಲೋರಾ ಮೊದಲಾದ ಕಡೆಗಳಲ್ಲಿವೆ, ಈ ದೇವಾಲಯಗಳನ್ನು ಈಜಿಪ್ತಿನ ವಿರಮಿಡಗಳೊಡನೆ ಹೋಲಿಸಿದ್ದಲ್ಲಿ ಅವಕ್ಕಿಂತ ಎಷ್ಟೋ ಮೇಲಾಗಿಯೂ ಆಶ್ಚರ್ಯಕರಗಳಾಗಿಯೂ ಪ್ರಾಚೀನ ಹಿಂದೂ ಜನಾಂಗದ ನಾಗರಿಕತೆಯ ಗುರುತಾದ ಕಲಾ ಕೌಶಲಗಳನ್ನು ತೋರಿಸತಕ್ಕವಾಗಿಯೂ ಇರುವವೆಂದು ಹೇಳುವರು.

ಮಹಾ ಭಾರತವನ್ನು ಅನುಸರಿಸಿ ಹೇಳುವುದಾದರೆ ಸಗರನ ಸಂತತಿಗೆ ಸೇರಿದ ಕನೂಜಿನ ರಾಜನುನೆತನದ ಮೂಲ ಪುರುಷನ ತರುವಾಯ 1500 ವರುಷಗಳ ವರೆಗೂ ಅಯೋಧ್ಯೆಯು ಸುಖಸಮೃದ್ಧಿಯ ಪರಾಕಾಷ್ಠೆ ಸ್ಥಿತಿಯಲ್ಲಿದ್ದಿತು. ದಿಲ್ಲಿ ಅಥವಾ ಇಂದ್ರಪ್ರಸ್ಥದ ಬುನಾದಿ ಅಂದರೆ ಅದು ಜಗದ್ವಿಖ್ಯಾತವಾದ ಯಶಸ್ಸಿಗೆ ಬಂದ ಕಾಲವು ಹಿಂದೆ ಹೇಳಿದ ಈ ಜಪ್ತಯಾನರ ಕಲ್ಪನಾಯುಗದಷ್ಟೇ ಪುರಾತನವಾದುದು ರೆನೆಲ್ ಸಾಹೇಬರು (Renell) ಹಿಂದೂಗಳ ಕನ್ಯಕುಬ್ಜ ಅಥವಾ ಕನೂಜು ನಗರವು ಕ್ರಿ ಪೂ 1000 ವರುಷಕ್ಕೆ ಹಿಂದೆಯೇ ಇದ್ದಿತೆಂದು ಹೇಳುವರು.



2000 ವರ್ಷಗಳ ಹಿಂದಿನ ಶಿಲ್ಪ

ಪೇಶಾವರ ಜಿಲ್ಲೆಯ ಕೋಟಿಲೈಮ್ ಎಂಬಲ್ಲಿಯದು ಬುದ್ಧನಿಗೆ ಶಿಷ್ಯರ ಪೂಜೆ. ಈಗ ಇದು ಮುಂಬಾಯಿಯ ಪ್ರಿನ್ಸ್ ಆಫ್ ವೇಲ್ಸ ಪ್ರದರ್ಶನ ಶಾಲೆಯಲ್ಲಿದೆ.

1841ರ ಏಸ್ಯಾಟಿಕ್ ಜರ್ನಲಿನಲ್ಲಿ ಹೀರನ್ ಸಾಹೇಬರು ಅಯೋಧ್ಯೆಯ ಪ್ರಾಚೀನತೆಯ ಕುರಿತು ಮಾತಾಡುವಾಗ 'ನಾವು ಅದರ ಪ್ರಾಚೀನತೆಯನ್ನು ಕ್ರಿ ಪೂ 1500 ರಿಂದ 2000 ವರುಷದ ಮಧ್ಯಕಾಲವೆಂದರೆ ಒಹಳ ತಪ್ಪಾಗುವುದು ಅದರ ಪ್ರಾಚೀನತೆಯು ಇನ್ನೂ ಹಿರಿದಿರುವುದೆನ್ನುವರು. ಅದಲ್ಲದೆ ಬಾಕ್ಟ್ರಿಯದ ಆಧಾರಗಳನ್ನವಲಂಬಿಸಿ ಮಾತಾಡುವುದಾದರೆ, ಬಾಕ್ಟ್ರಿಯದಲ್ಲಿ ಮಹಾಭಾರದೀನರೆಂಬ ರಾಜರು ಅಲೆಕ್ಸಂದರನು ಇಂಡಿಯಕ್ಕೆ ದಂಡೆತ್ತಿ ಬಂದ ಕಾಲಕ್ಕಿಂತ 5600 ವರುಷಗಳ ಹಿಂದೆಯೇ ಅಲ್ಲಿ ಆಳುತ್ತಿದ್ದರು. ಈ ಬಾಕ್ಟ್ರಿಯದ ರಾಜರೆಲ್ಲಾ ಹಿಂದೂ ಜನರೇ. ಈ ಆಧಾರವನ್ನವಲಂಬಿಸಿ ಹಿಂದೂಸ್ಥಾನವು ಸುಮಾರು ಕ್ರಿ ಪೂ 6000 ವರುಷಗಳಿಗಿಂತ ಹಿಂದೆಯೇ ನಾಗರಿಕತೆಯ ಶಿಖರವನ್ನೇರಿದ್ದಿತೆಂದು ತೋರುವುದು.

ಇದರಿಂದ ಜಗತ್ತಿನಲ್ಲೆಲ್ಲಾ ಹಿಂದೂ ಜನಾಂಗವೇ ನಾಗರಿಕತೆಯಲ್ಲಿ ಪ್ರಾಚೀನವಾದ ಜನಾಂಗವೆಂದು ತೋರುವುದು. ಇದರಿಂದ ಈ ಕಾಲದಲ್ಲಿ ಪ್ರಥ್ವಿಯ ಬೇರೆ ಬೇರೆ ಭಾಗದಲ್ಲಿ ವಾಸವಾಗಿರುವ ಜನಾಂಗವೆ ನಾಗರಿಕತೆಯನ್ನು ಇಂಡಿಯದಿಂದಲೇ ಸಂಪಾದಿಸಿತೆಂದು ವ್ಯಕ್ತವಾಗುವುದು. ಆ ಕಾಲದಲ್ಲಿ ಇಂಡಿಯವು ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ತನ್ನ ವಸಾಹತುಗಳನ್ನು ಸ್ಥಾಪಿಸಿದ್ದಿತು. ದೃಷ್ಟಾಂತವಾಗಿ ಈಜಿಪ್ತ, ಗ್ರೀಕ್, ಫಾರ್ಸಿ, ಅಮೇರಿಕಾ? ಮುಂತಾದ ಕಡೆಗಳು, ಅಲ್ಲದೆ ಸ್ಕಿಂದಿನೇವಿಯ, ಚೀನಾ ಮೊದಲಾದ ಇತರ ದೇಶಗಳೂ ಕೂಡ ತಮ್ಮ ನಾಗರಿಕತೆಯನ್ನು ತಮ್ಮ ಮತವನ್ನೂ ಹಿಂದುಗಳಿಂದಲೇ ಪಡೆದರು ಸಂಕ್ಷೇಪವಾಗಿ ಹೇಳುವುದಾದರೆ, ಭೂಲೋಕಕ್ಕೆಲ್ಲಾ ವಿದ್ಯೆಯನ್ನೂ, ನಾಗರಿಕತೆಯನ್ನೂ, ಮತವನ್ನೂ ಹಿಂದುಗಳಿಂದಲೇ ಇಂಡಿಯವು:

ಈಗ ದೊರೆಯತಕ್ಕ ನಾಣ್ಯಗಳಲ್ಲಿ ಅತ್ಯಂತ ಪ್ರಾಚೀನ ನಾಣ್ಯಗಳು ಆರ್ಯರಾದ ಹಿಂದೂ ಜನರದು. ಇಂಡಿಯದಲ್ಲಿ ದೊರೆತ ಈ ಪ್ರಾಚೀನ ನಾಣ್ಯಗಳಿಂದಲೂ ಹಿಂದೂಗಳ ನಾಗರಿಕತೆಯ ಪ್ರಾಚೀನತೆಯನ್ನು ನಿರ್ವಾದ ಸಿದ್ಧವಾಗಿ ತಿಳಿಯಬಹುದು.

ಪ್ರತಿಯೊಂದು ಶಾಸ್ತ್ರಕ್ಕೂ ಸಂಬಂಧಿಸಿದಂತೆ ಸೃಷ್ಟಿಯ ಕೆಲವು ಮೂಲಭೂತ ವಿಷಯಗಳನ್ನು ಕುರಿತು ಕೆಲವು ತತ್ವಗಳಿರುತ್ತವೆ. ಆ ತತ್ವಗಳನ್ನು ಆಧರಿಸಿಯೇ ಆಯಾ ಶಾಸ್ತ್ರಗಳ ಮೂಲಕರ್ತೃಗಳು ತಮ್ಮ ತಮ್ಮ ಶಾಸ್ತ್ರಗಳನ್ನು ರಚಿಸುತ್ತಾರೆಂಬುದು ಎಲ್ಲ ಶಾಸ್ತ್ರಜ್ಞರಿಗೂ ತಿಳಿದ ವಿಷಯ. ಹೀಗೆ ಇಂಥ ಶಾಸ್ತ್ರದ ಪರಿಧಿಯಲ್ಲಿ ಬರುವ ಎಲ್ಲ ಶಾಸ್ತ್ರಗಳಿಗೂ ಸಾಮಾನ್ಯವಾಗಿ ಕೆಲವು ತತ್ವಗಳಿರುತ್ತವೆ. ಆ ತತ್ವಗಳಿಂದ ಹೊರಗೆ ಅವು ಹೋಗುವುದಿಲ್ಲ. ಆ ತತ್ವಗಳಿಗೆ ಅನುಗುಣವಾಗಿಯೇ ಅವು ಇರುತ್ತವೆ. ಆ ತತ್ವಗಳಿಗೆ ವಿರುದ್ಧವಾಗಿ ಯಾವ ಶಾಸ್ತ್ರವೂ ಇರಲಾರದು. ಇಂಥ ಶಾಸ್ತ್ರಗಳ ಮೂಲಕರ್ತೃಗಳಿಗೆ ಆ ತತ್ವಗಳ ಬಗ್ಗೆ ಯಾವ ಸಂದೇಹವೂ ಇರುವುದಿಲ್ಲ. ಆ ತತ್ವಗಳು ಅವರಿಗೆ ಸ್ವಯಂಸಿದ್ಧವಾಗಿರುತ್ತವೆ. ಆ ತತ್ವಗಳನ್ನು ಅವರು ಸಾಧಿಸಬೇಕಾಗಿಲ್ಲ. ಆ ತತ್ವಗಳಿಂದ ಅವರು ಸಾಧಿಸಲು ಹೊರಡುವ ವಿಷಯಗಳನ್ನು ಸಾಧಿಸುತ್ತಾರೆ. ಆ ತತ್ವಗಳಿಂದ ಹೊರಗೆ ಅವರು ಹೋಗುವುದಿಲ್ಲ. ಆ ತತ್ವಗಳಿಗೆ ವಿರುದ್ಧವಾಗಿ ಅವರು ಯಾವ ವಿಷಯವನ್ನೂ ಸಾಧಿಸುವುದಿಲ್ಲ. ಆ ತತ್ವಗಳಿಗೆ ಅನುಗುಣವಾಗಿಯೇ ಅವರು ಸಾಧಿಸುವ ವಿಷಯಗಳು ಇರುತ್ತವೆ. ಆ ತತ್ವಗಳಿಗೆ ವಿರುದ್ಧವಾಗಿ ಯಾವ ವಿಷಯ

ಕೆಪ್ಪಟೆ-ರಾಯ.

ಲೇಖಕರು—ಶ್ರೀ। ಎಮ್. ಎಸ್. ಕಾಮತ್, ಕನ್ನಡ ಹೈಸ್ಕೂಲ್, ಮಂಗಳೂರು.

ರಾಜಕುಮಾರನಿಗೆ ಅಸುಖವುಂಟಾಗಿದೆ ವಾಸ್ತವವಾಗಿಯೂ, ಪತ್ರಿಕೆಗಳಲ್ಲೆಲ್ಲ ಗೋಳಾಟವೆದ್ದಿದೆ. ಅರಮನೆಯ ಹೊರ ಬಳಿಯದ ಗೋಡೆಯ ಮೇಲೆ ಎತ್ತರಕ್ಕೆ ಒಂದು ನೋಟೀಸು,—ದೊಡ್ಡಕ್ಷರದಲ್ಲಿ! "ರಾಜಕುಮಾರನು ಹಾಸಿಗೆ ಪಿಡಿದಿದ್ದಾನೆ" ಎಂದೇ ಆ ನಲ್ಬತ್ತು ಪಾತ್ರಗಳ ಅರ್ಥ

ಅವನಿಗೇನಾಗಿದೆ?—ಕೆಪ್ಪಟೆ.

ಅವನ ಕೋಣೆಯಲ್ಲಿ ಮೂರು ಮೊಳ ಎತ್ತರದ ತುಪ್ಪುಳು ಹಾಸಿನ ಮೇಲೆ ರಾಜಕುಮಾರನು ನರಳುತಿದ್ದಾನೆ. "ಏನು ಬೇಸರ!" ಎಂದು ಆಗುವಷ್ಟು ಮುಖಸಪ್ಪೆ ಮಾಡಿ ತುಟಿ ಓರೆ ತಿರುಗಿಸಿ ಆಳಿಗೆ ಎಂದನು "ಏನು ಸಿಡಿತ ರಂಡೇದು!" ಎನ್ನುತಿದ್ದನು; ಹಾಸಿಂದರೂ ಆ ಬೇನೆಗೆ ಏನೂ ಸಿಟ್ಟಾಗುತಿರಲಿಲ್ಲ; ಆದರೆ ಹೇಳಿಲ್ಲ ರಾಜಕುಮಾರರು ಅಂತಹ ಶಬ್ದಗಳನ್ನು ಮನಸ್ಸಿನಲ್ಲಿ ಬತ್ತಿ, ಹೇಳಿದರೂ, ಬಾಯಲ್ಲೆತ್ತಬಾರದು ಅಷೇ ಅವರಿಗೆ "ಟ್ಯೂಟರ್" ಕಲಿಸಿಕೊಟ್ಟ ಮರ್ಯಾದೆ ಎಳೇ ವ್ಯಾಯದಿಂದಲೂ, ರಾಜಕುಮಾರರು ಮನಸ್ಸಿನಲ್ಲಿರುವುದನ್ನು ಇದ್ದಂತೆಯೇ ಆಡಲೇ ಬಾರದೆಂದು ಕಲಿತುಕೊಳ್ಳಬೇಕಾಗಿದೆ. ಮುಂದೆ ಅವರಲ್ಲವೆ, ರಾಜರಾಗುವರು? ಅದು ಕಾರಣವೇ, ಕೆಪ್ಪಟೆಯು ಸಿಡಿದು ಜುಮ್ಮೆಂದರೂ, ಕುಮಾರನು 'ಬೇಸರ'ದಲ್ಲಿಯೇ ಅದನ್ನು ಮುನಿಸಿದನು ಹೊರತು, ಆದರೆ ಮಾತೃಕುಲವನ್ನು ಉದ್ಧಾರ ಮಾಡಿ ಹೆಗ್ಗಲಿಲ್ಲ ಕೆಪ್ಪಟೆಯೇ ಆದರೂ ಕುಮಾರನು ತಾನು ರಾಜಕುಮಾರನೆಂಬುದನ್ನು ಸ್ಮರಣೆಯಲ್ಲಿಟ್ಟುಕೊಂಡೇ ಇದ್ದನು

ಇದಕ್ಕಾಗಿಯೇ, ಪತ್ರಿಕೆಗಳಲ್ಲೆಲ್ಲ ಶ್ರೀಮದ್ರಾಜಕುಮಾರರ ವಿದ್ಯೆ, ವಿನಯ, ಗಾಂಭೀರ್ಯಬುದ್ಧಿ, ವಿಚಕ್ಷಣತೆ, ಇತ್ಯಾದಿಗಳ ಪ್ರಶಂಸೆಯು ಯಾವಾಗಲೂ ಪ್ರಕಟವಾಗುತ್ತಿತ್ತು ರಾಜಭಕ್ತರೂ, ದೇಶಭಕ್ತರೂ ಮಾತ್ರ ಈ ಪತ್ರಿಕೆಗಳ ಸಂಪಾದಕರು ಅವರಿಗೆ ಸ್ವ-ರಾಜ್ಯದ ಮೇಲೆ ಎಷ್ಟು ಭಕ್ತಿಯಿದ್ದಿತೆಂದು ನಾವು ತಿಳಿಯೆವಾದರೂ, ಸ್ವರಾಜಕುಮಾರರ ಮೇಲೆ ಶ್ರದ್ಧೆ ವಿಶೇಷವಿದ್ದಿತು. ಪತ್ರಿಕೆಗಳಲ್ಲಿ ಜ್ಯಾಜೀರಾತುಗಳ ಪುಟಗಳಲ್ಲಿ ಎಲ್ಲಿ ನೋಡಿದರೂ ಅಲ್ಲಿಯೆಲ್ಲ ಶ್ರೀಮದ್ರಾಜ ಕುಮಾರರ ಗುಣಕಥನ, ಗುಣಗಾನ, ಗುಣನಿರೂಪಣ ಅಷ್ಟು ಆಸಕ್ತಿ "ಇವರೇಗ ರಾಜವಂಶದ ಮಕುಟವರ್ಧನರು" — "ಮಹಾಮಾಯೆಯ ವರ ಪ್ರಸಾದ!" — "ದೇಶಮಾತೆಯ ರತ್ನಗರ್ಭ" ಎಂಬಿತ್ಯಾದಿ ನಾಲ್ಕಾರು ಗುಣವಿಶೇಷಣಗಳ ಬಿರುದುಗಳನ್ನು ಎರಡಂಗುಲದ ಅಕ್ಷರಗಳಲ್ಲಿ ಮುದ್ರಿಸದೆ, ವಿಜ್ಞಾಪನೆಗಳ ಪುಟಗಳನ್ನು ಅವರು ಬೇರೆ ಯಾವ ಯೋಗ್ಯ ರೀತಿಯಿಂದ ತುಂಬ ಬಲ್ಲರು?

ಕುಮಾರನು ಐವತ್ತಂಗುಲ ಎತ್ತರದ, ಗ್ಲಷ್ಟಮುಟ್ಟಾದ ಹುಡುಗ ಮೈಯೆಲ್ಲ ಚರ್ಮದ ಮೇಲೆ ಮೀಣ ಒಳಿದಂತೆ ಥಳಥಳ! ಕೂದಲು, ಮುಂದೆ ಚಿನ್ನದ ಮಕೆಟವನ್ನು ಧರಿಸಬೇಕೆಂದೇ ವಿನೋ, ಈಗಲೇ ಕಬ್ಬಿಣ-ಚಿನ್ನ ಮಿಶ್ರಿತ ಬಣ್ಣದ್ದಾಗಿದೆ ಹಣೆಯು, ದೊನ್ನೆಯಲ್ಲಿನ ಹಾಲುಕೆನೆಯ ಹಾಗೆ, ಒಂದೇ ತಲ ಆದರೆ ಇಂದು ಮಾಡಲೆನು? ಪೂರ್ತಿಯಾಗಿ ಬೆಳೆದು ಹಣ್ಣಾದ ಎರಡೇ ಎರಡು ಕೆಪ್ಪಟೆಗಳು, ಕಿವಿಯಿಂದ ಕೆಳಗೆ ಕೊರಳ ವರೆಗೂ ಹರಡಿದ್ದು, ಭಾರವಾಗಿ, ದಂಗಿಮೋರ ಪ್ರಜೆಗಳನ್ನಾಳುವ ಭಾರವೂ ಎಂತಂತೆ, ಅವನ ಹೆಗಲು ಮುಟ್ಟಿ ಒತ್ತಿದ್ದುವು ಕಂಠಹಾರವನ್ನು ಸರಿಯಿಸುವುದೂ ಕಷ್ಟವಾಗಿ, ಅದನ್ನೆಳೆದರೆ, ಅದರ ಮಣಿಗಳು ಗಲ್ಲದ ಕೆಳಗಿಂದ ಕೊರಲಸಂದಿನಿಂದ ಎದೆಯ ಮೇಲೆ ಹರಿಯುವಾಗ, ಸುರಂಗದೊಳಗಿಂದ ಹೊರಟೋದುವ ರೈಲ್ವೆಗಾಡಿಗಳಂತೆ ತೋರುತಿದ್ದುವು ಇನ್ನೂ "ಬೇಸರ"ವೆಂದಕೆ, ಕೆಪ್ಪಟೆಯಾದರೇ ಅದು ಕೆಪ್ಪನೆಲ್ಲ; ಕೆಪ್ಪಟೆಯಾಗಿ ಮುಖ ಲಕ್ಷಣವು ಅಷ್ಟು ವಿಕಾರವಾಗಿದೆ ಎಂದು ಇದೀ ಹಗಲೂ ರಾತ್ರಿಯೂ ಎಚ್ಚರಿಸುವ ಹಾಗೆ ಹಾಸಿನ ಕಾಲಬಳಿಯಲ್ಲಿಯೇ, ಮನುಷ್ಯಪ್ರಮಾಣದ ನಿಲುಗನ್ನಡಿಯು, ಏಳೇ ತಿಲೆಯ ಗೋಡೆಯಲ್ಲೇ ಗಟ್ಟಿಯಾಗಿ ಪ್ರತಿಷ್ಠೆ ಹೊಂದಿದ್ದು, ಬೇಡವೆಂದರೂ ಕೆಪ್ಪಟೆಯ ಮುಖಭೂತವಾದ ಮಹತ್ವವನ್ನು ಕುಮಾರನ ಕಣ್ಣಿಗೆ ಕುಕ್ಕುನಂತೆ ಪ್ರತಿಬಿಂಬಿಸುತ್ತಿತ್ತು. ಇದೇ "ಬೇಸರ"ಕ್ಕೆ ಹೆಚ್ಚಿಸಿದ. ನಮ್ಮ ತನಲಕ್ಷಣವನ್ನು ನಮಗೆ ಹೇಗೆ ಕಣ್ಣಿಗುಕ್ಕುವಂತೆ ಸದಾಕಾಲವೂ ಪ್ರತಿಬಿಂಬಿಸುವುದೆಂದರೆ ಏನು, ಮನಸ್ಸಷ್ಟ ವಲ್ಲದೇ? ಮನೋಲಕ್ಷವಲ್ಲವೇ?

ಕುಮಾರನ ವಯಸ್ಸು 28 ವರ್ಷ ಮತ್ತಿನೇ ಕೆಲವಿನ ಗಳು ಅವನ ಹಣೆ ನೋಡಿದರೆ, ತಲೆಯೊಳಗೆ ವಿಶೇಷ ವೇನೂ ಭಾಂಡವಲವಿಲ್ಲವೆಂದು ಒಡೆದು (ತಲೆ ಒಡೆದಲ್ಲ) ಕಾಣಿಸುವುದು. ಹಾಗೆಂದು ಕುಮಾರನೇನೂ ಬಡ್ಡನಲ್ಲ, ತೈಲಬುದ್ಧಿಯವನೆಂದು ಪತ್ರಿಕೆಗಳೆಂದುವು; ಟ್ಯೂಟರರೂ ಎಂದರು ಮೆದುಳೊಳಿಗಣ ತೈಲವೆಲ್ಲ ಹರಿದು ಹರಿದು, ಎಣ್ಣೆ ಕಡಿಮೆಯಾಗುವುದರಿಂದ ಮೆದುಳಿಗೆ ಮಂಜು ಪಡಿದರೆ ಒಳಗಣ ಯಂತ್ರ ವಿತೇಷಗಳು ಹಾಳಾಗಬಹುದೆಂಬ ಅಂಜಕೆಯಿಂದ ಮಾತ್ರ, ಕುಮಾರನು ವಿದ್ಯಾಭ್ಯಾಸಕ್ಕಾಗಲಿ ಇತರ ಅನುಭವಕ್ಕೂನುಗವಾಗಲಿ ಮೆದುಳಿಗೆ ಅಷ್ಟು ಕೆಲಸ ಕೊಡುತಿರಲಿಲ್ಲ. ಅವನ ಜೀವಕ್ಕೆ ರಗಳೆಯೆಂದರೆ ರಾಜ ಕುಮಾರನಾಗಿ ಬಾಳಬೇಕಾಯಿತಲ್ಲ ಎಂಬೊಂದೇ ಚಿಂತೆ. ಕುಮಾರನು ಕುಮಾರನಾಗಿಯೆ ಇರಬೇಕಾಯಿತಲ್ಲ ಎಂದೇ ಅವನ ಕಳವಳ, ಮಾಡುವುದೇನು? ಜನನ ಕಾಲದಿಂದಲೂ ರಾಜಕುಮಾರನಾಗಿ ಆವ್ಯಾಯತನಾಗಿ, ಕುಮಾರನಂತೆ ಸ್ವನ್ನ ವೇರಲು ಪ್ರೇರೇಪಿತನಾಗಿ, ಕುಮಾರನಂತೆ ಉಡುಪು ಹಾತಿ ಕೊಳ್ಳಲು ಬದ್ಧನಾಗಿ, ಕುಮಾರನಂತೆ ಶಿಕ್ಷಿತನಾಗಿ, ಬೆಳೆದ ಕಾರಣವೇ ಈಗ 28ನೆಯ ವಯಸ್ಸಿನಲ್ಲೂ ಅಚ್ಚ ಕುಮಾರನೇ ಆಗಿ ಕುಮಾರನು ಬಾಳಬೇಕಾಯಿತು ಇನ್ನು ಕುಮಾರನಾಗಿಯಲ್ಲದೆ ಮತ್ತೇತು ಅವನು ಇರಬಹುದು?

ಅಹುದು, ಇನೇನೀ ರಾಜಕುಮಾರನು,—ಅಲ್ಪತ? ರಾಜಕುಮಾರನು! ದೇಶದ ರಾಜ್ಯಭಾರದಲ್ಲಿ ಮುಖ್ಯಾಧಿಕಾರ ವಹಿಸುವ ಮಂತ್ರಿ, ಸೇನಾಧ್ಯಕ್ಷ, ಖಜಾನ್ಜಿ, ನ್ಯಾಯಾಧೀಶ ಮೊದಲಾದವರಂತೆ, ರಾಜಕುಮಾರನೇನೂ ಉದ್ಯೋಗ ವಹಿಸುವವನಲ್ಲ ಇವೆಲ್ಲ ಅಧಿಕಾರಗಳನ್ನು ಪ್ರಜೆಗಳಲ್ಲಿ ಯಾರೂ ವಹಿಸಿಕೊಳ್ಳಲಾಪರು ಆದರೆ ರಾಜಕುಮಾರನು ಇದೊಂದನ್ನೂ ಮಾಡುವುದಕ್ಕಿಲ್ಲವಾದರೂ, ಪ್ರಜೆಗಳಲ್ಲಿ ಯಾರೂ ರಾಜಕುಮಾರನಾಗಬಲ್ಲರೇ? ಅವರಿಗೂ ಇವನಿಗೂ ಇಷ್ಟು ಭೇದ ಇವನಂತೆ ಅವರಾದರೆ, ಮೂರು ಹರದಾರ ನಡೆದು, ಮನೆಮಾರು ತೊಲಗಿ ತಲೆಯೊಡನ ಕಾಲ್ಲುಡುವ ಬಿಸಿಲಲ್ಲಾಗಲಿ ಮರಳಟ್ಟುವ ಚಳಿಯಲ್ಲಾಗಲಿ ಪ್ರೇತ ಬಾಧೆ ತೊಲಗಿಸುವ ಸುರಿಮಳೆಯಲ್ಲಾಗಲಿ ಕತ್ತೆ, ಕಸ್ತೆ, ಕೋಣಗಳಂತೆ ಈ ಅಧಿಕಾರಿಗಳು, ಕುಮಾರನ ಮೋಟರು ಸುಳಿವ ಕ್ಷಣಾರ್ಧದಲ್ಲಿ ಅವನಿಗೆ ಜಯಕಾರ ಕೂಗಲು ಕಾಯುತ್ತ, ಉಸವಾಸಿಗಳಾದರೂ ನಕ್ಕು, ದಾರಿಯುದ್ದಕ್ಕೂ ನಿಲ್ಲುವರೇನತ್ತೆ? ನೂರು ಭಕ್ಷುಕರಾದರೂ ಉಳಕೊಳ್ಳಲಾರದ ಛತ್ರದಷ್ಟೇ ದೊಡ್ಡದಾದ ಅದೊಂದು ಹಂದರದಲ್ಲಿ, ಇವೆರೇ ಉಜ್ಜಾಧಿಕಾರಿಗಳು ಆಯ್ಕೂರು ಮಂದಿಯೂ ಒಬ್ಬರ ಮೇಲೊಬ್ಬರು ನುಗ್ಗಿ, ಕೈ ಮೈಗಳು ಬಾತುಕೊಂದರೂ, 'ನಿಮ್ಮಲ್ಲರನ್ನು ಕಾಣಲು ನನಗೆ ತುಂಬಾ ಸಂತೋಷವೆನ್ನಿಸುತ್ತಿದೆ' ಎಂದವ್ಹನ್ನೆ ಕುಮಾರನು ಹೇಳುವಾಗ, ಇವರೇ ಮೈಸಂಕಟವನ್ನು ಹಲ್ಕೊತ್ತಿ ಅಡಗಿಸಿ ತುಟಿ ತೆರೆಯಲ್ಲಿ ಬಾಯಿ ಅರಳಿಸಿ ಚಪ್ಪಾಳೆ ಹಾಕುವರೇಕೆ? ರಾಜಕುಮಾನು ರಾಜಕುಮಾರನೆ, ಇತರರು ಇತರರೇ

ಯೌವನಕ್ಕೆ ಸ್ವಾಭಾವಿಕವಾದ ಒಂದು ಬಗೆಯ ಲಜ್ಜೆಯೂ ಕುಮಾರನಲ್ಲಿದ್ದಿತಾದರೂ, ನಾಲ್ಕರು ಕೂಡಿದಲ್ಲಿ ತಾನು ನೆರೆದಾಡಬೇಕೆಂಬ ಲವಲವಿಕೆಯು ಕುಮಾರನಲ್ಲಿ ಮೂರಿನ ಸೊಳ್ಳೆ ವರ್ಯಂತವೂ ವಿದ್ದಿತು ಊರಲ್ಲಿ ಈ ರಾಜಕುಮಾರನೊಬ್ಬನು ಇಲ್ಲದಿರುತ್ತಿದ್ದರೆ, ಬೋರ್ಡ್ ಪ್ರೆಸಿಡೆಂಟರು ಸಂಕ ಕಟ್ಟುತಿರಲಿಲ್ಲ, ಕಾಲಿವೆ ತೋಡಿಸುತಿರಲಿಲ್ಲ, ಮುನಿಸಿಪಾಲಿಟಿಯವರು ಹೊಸ ಮಾರ್ಕೆಟು ಶಾಲೆ ಆಸ್ಪತ್ರೆಗಳನ್ನು ಕಟ್ಟಿಸುತಿರಲಿಲ್ಲ ಮಾತ್ರವಲ್ಲ, ಹಳೆಯವನ್ನೂ ದುರುಸ್ತು ಮಾಡಿಸುತಿರಲಿಲ್ಲ, ಸರಕಾರದ ಇಲಾಖೆಯವರೇ ಆದರೂ ಹೊಸ ಮಾರ್ಗಗಳನ್ನು ಮಾಡುತಿರಲಿಲ್ಲ, ಹಳೆ ಮಾರ್ಗಗಳನ್ನು ಅವಿಸ್ಮೋ ಸಾವಿರ ಜನರಿಗಾದರೂ ಉಪಯೋಗದವಿರಲಿ, ಸರದಿಪಡಿಸುತಿರಲಿಲ್ಲ; ಅಖಂಡ ಬಂಡೆಗಲಂತಿರುವ ಲೋಭಿಗಳ ಹೃದಯದಿಂದ ಔದಾರ್ಯದ ಬುಗ್ಗೆಗಳು ಹೊರಟು, ಸಾರ್ವಜನಿಕ ಕೆರೆ ಬಾವಿಗಳಲ್ಲಿ ಹಂಯುತಿರಲಿಲ್ಲ; ಮೇಲ್ಜಾತಿಯವರು ಕಠಿನ ಕೌಶಲ್ಯ ಕಾರ್ಪಣ್ಯಗಳಿಂದ ಮಡಿದ ಹೊಸ ಕಾನುಗಳ ಲಾಭಾದಾಯವು ಕೆಳ ಜಾತಿಯವರ ಅಭ್ಯುದಯಕ್ಕಾಗಿ ವಿದ್ಯಾರ್ಥಿ ವೇತನ ವಸತಿಗಳ ಬಗ್ಗೆ (ಸ್ವಜಾತಿಯವರನ್ನು ಮೂಲೆಗೊತ್ತಿ) ವ್ಯಯವಾಗುತಿರಲಿಲ್ಲ ಆದುದರಿಂದ ರಾಜಕುಮಾರನಿಲ್ಲದೆ ರಾಜ್ಯವು ಅಭ್ಯುದಯ ಹೊಂದುತಿರಲಿಲ್ಲ ಇಂತಹ ಅಭ್ಯುದಯ ಸೂಚಕ ಪ್ರೇರಕಗಳಾದ ಸಂಭವಗಳೆಲ್ಲೆಲ್ಲ ರಾಜುಕುಮಾರರು ಸ್ವಯಂ ಪ್ರತ್ಯಕ್ಷರಾಗುತಿದ್ದರು. ಎಲ್ಲಿ ಬುನಾದಿಕಲ್ಲು ಸ್ಥಿಪಬೇಕು, ದಾರಾ ತೆರೆಯಬೇಕು, ಕಲ್ಲು ವ್ರತಿಮೆ ಪ್ರತಿಷ್ಠಿಸಬೇಕು, ಶಾಲಾ ಆಸ್ಪತ್ರೆಗಳನ್ನು ಸಂದರ್ಶಿಸಬೇಕು, ಅಲ್ಲಿಗೆ ರಾಜಕುಮಾರರು 'ಜಯ ಗೆಯ್ದು, ಯಾರಿಗೂ ಬಾಧೆ ಕೊಡದೆ ಎಲ್ಲರಿಗ ತುಷ್ಟಿಗೊಳಿಸುವ ನಾಲ್ಕು ಮಾತುಗಳ ಬಾಯಪಾಠವನ್ನು ಒಸ್ಸಿಸದೆ ಬಿಡಲಿಲ್ಲ ವ್ರಜೆಗಳಲ್ಲಿ, ಇವನನ್ನು ಕಂಡೊಡನೆ, ರಾಜಭಕ್ತಿಯ ಆವೇಶವುಂಟಾಗಿ, ಜಯಕಾರಗಳು ಅರ್ಭಟೆಯಾಗಿ ಹೊರಡುತಿದ್ದುವು, ರಾಜಕುಮಾರನ ದಿವ್ಯ ಸನ್ನಿಧಾನದ ಮಾಹಾತ್ಮ್ಯವೆಷ್ಟು! ರಾಜಕುಮಾರನ ಭಾಷಣಗಳು ಎಂತಹವಿದ್ದುವೆಂದು ಯಾರೂ ತಿಳಿಯುವಂತಿರಲಿಲ್ಲ, ವಕೆಂದರೆ, ಇವನು ಬಾಯ್ತೆರೆಯ ಲಾರಂಭಿಸುವುದಕ್ಕೊಳಗಾಗಿ ಚಪ್ಪಾಳೆಗಳೂ ಅರ್ಭಟೆಗಳೂ ಕುಂಟಾಗಿ, ಇವನು ಪುನಃ ಆಸೀನನಾದ ಬಳಿಕವೂ, ಬ್ರಹ್ಮ ರಥೋತ್ಸವ ಕಾಲದ 'ಶ್ರೀಮದ್ವಿಮೂರಮಣ ಗೋವಿಂದಾ ಗೋವಿಂದ' ಘೋಷದಂತೆ—ಕೇಳಿಸುತ್ತಿದ್ದುವು ಆದರೆ, ಪತ್ರಿಕೆಗಳಲ್ಲಿ ತುಂಬಾ ವಿಸ್ತಾರವಾದ ಭಾಷಣಗಳು ವ್ರಕಾಶಗೊಳುತಿದ್ದುವು, ಅವನ್ನೋದಿ ಕುಮಾರನ ವೈಲಕ್ಷಣ್ಯಕ್ಕೆ ಜನರು ಬೆರಗಾಗುತಿದ್ದರು ಉದಾಹರಣೆಗಾಗಿ, ಹಂದಣ ದೊಂದು (ಯಾವುದಾದರೊಂದರಲ್ಲೂ ಹೀಗೆಯೇ) ಸಂಚಿಕೆಯಲ್ಲಿ 'ದಿನಮಣಿ' ಪತ್ರವು ಹೇಗೆ ಬರೆದುದನ್ನು ಓದ ಬಹುದು —

'ರಾಜಕುಮಾರಕೀಜೈ!!!'ಎಂಬ ತಿರೋನಾಮೆಯಿಂದ, "ಹಾರೂರಗ್ರಾಮದ ನೂತನ ಅಳಕಾಪುರ ಎಂಬುವ ಸ್ಮಶಾನವನ್ನು 'ತೆರೆ'ಸ ದರ್ಭದಲ್ಲಿ ರಾಜಕುಮಾರರ ಸವಾರಿಯು ಅಲ್ಲಿಗೆ ಬಂದು ತಲಪುವ ನಾಲ್ಕು ಗಂಟೆಗಳ ಮೊದಲೇ ಸಾವಿರಾರು ಮಹಾಶಯರೂ ಪ್ರಮುಖರೂ ಮುಂದಾಳುಗಳೂ ಹತ್ತು ಸಮಸ್ತರೂ ಮೊಕ್ಕೇಸರರೂ ಖಾನೆಸುಮಾರಿ ಮತ್ತು ಅಬಕಾರಿ ಸಿಬ್ಬಂದಿಗಳೂ ಭಾಗವತ ವೇಷಧಾರಿ ಅಥಣಿಗಾರರೂ ಸ್ಮಶಾನದಲ್ಲಿ ನೆರೆದು ಬಂದಿದ್ದರು ನೂರಾರು ಮಹಿಳೆಯರೂ ಹಾಜರಿದ್ದು ಪುಷ್ಪಾಂಜಲಿಯನ್ನು ಕುಸುಮಾಕರ ಮೋಟಕ ಮೇಲೆ ಸುರಿಸಿ, ಪೂರ್ಣ ಕುಂಭಗಳನ್ನು ತೋರಿಸಿ, ಆರತಿ ನಿವಾಳಿಸಿ, ಕುಂಕುಮದ ಬೊಟ್ಟು ಸ್ಪಿಟ್ಟರು ಕುಮಾರರು ಮೋಟರಿಂದಿಳಿದು ವಿನಯಭಾವದಿಂದ ಹಲವರೊಡನೆ ಶೇಕ್ ಹ್ಯಾಂಡ್ ಉಪಚಾರವನ್ನು ಮನಸಾ ಮುಗಿಸಿ, ಎಂದಿನಂತೆ, ಕಾಲೋಚಿತ ಭಾಷಣ ಮಾಡಿದರು 'ಸ್ಮಶಾನಗಳನ್ನು ಸಂದರ್ಶಿಸಲೊಪ್ಪಲು ಮನವು ಒಡಂಬಡಲಿಲ್ಲವಾದರೂ, (ಸ್ಪಷ್ಟ ನಗು) ಇಷ್ಟು ಜನರು ಒಮ್ಮೆಯೇ ಸ್ಮಶಾನದಲ್ಲಿ ನೆರೆದಾಗ,—ಹತ್ತರ ಸಾವು ಮುದುವೆಗೆ ಸಮಾನವಾದ ಕಾರಣ (ವಿಶೇಷ ನಗು!) ನನಗೆ ಇಲ್ಲಿಗೆ ಬಂದವರನ್ನು ನೋಡಲು ಮನಸ್ಸಿಗೆ ಮಹದಾನಂದವೆನಿಸಿದೆ (ಚಪ್ಪಾಳೆಗಳು) ಇಂತಹ ನೂತನ ವಿಶಾಲ ಲೋಕ್ಷೇಮಕರ ಸ್ಮಶಾನಗಳು ಎಷ್ಟು ಹೆಚ್ಚುವುವೊ, ರಾಜ್ಯಕ್ಕೆ ಅಷ್ಟು ಹೆತ! (ರಾಜಕುಮಾರಕೀ ಜೈ' ಎಂಬ ಘೋಷವು ಮೂರು ನಿಮಿಷ) ಸ್ಮಶಾನವಿಲ್ಲದ ಊರು ಅದೊಂದೆ ಊರೇ! (ಹ' ಹ!) ಹಂದೆ ಈ ಊರಲ್ಲಿ, ಏಕೆ ಈ ರಾಜ್ಯದಲ್ಲಿ ದಿನಂಗತರಾದವರು, ಪುನಃ ಇಲ್ಲಿಗೆ ಬಂಧ್ಯ ದಿನಂಗತರಾಗಿ, ಈ ಸ್ಮಶಾನಂಗತರಾಗಲು ನಿರ್ಧರಿಸಿ, ದಿನವನ ತ್ಯಜಿಸಿ ಇಲ್ಲಿಗೆ ಶವದಲಾಗಿ ಬರುವುದಕ್ಕಾಗಿ ಹಾರಯಿಸಿ ಮೇಲೂ ಕೆಳಗೂ ಗುಂವು ಕೂಡಿ, ತಾನು ಮುಂದೆ ತಾನು ಮುಂದೆ ಎಂದು ಉರುಡಾಡುತಿದ್ದಾರೆ. "(ಪಹವ್ವಾರೆ ಕುಮಾರಾ! ಕ್ಯಾಬಾತ್! ರಾಜ-ಕುಮಾರನಿಗೆ ಸಂಗ ಎಂದ ಘೋಷ ಮತ್ತು ಚಪ್ಪಾಳೆಗಳು) ನೀವೊ ಇಷ್ಟು ಮುಂದಾದುದು ದೇಶ ಹಿತಕರವಾಗಿದೆ. (ತಹವಾಸ್!) ಆದುದರಿಂದ ನಿಮ್ಮೆಲ್ಲರನ್ನು ಇಲ್ಲಿ ಕಂಠದಕ್ಕಾಗಿ ನಾನು ಕೃತ್ರಜ್ಞನಾಗಿದ್ದೇನೆಂದು ನನ್ನ ಸಂತೋಷವನ್ನು ನಿಮಗೆ ಪುನಃ ತಿಳಿಸುತ್ತೇನೆ.

ಇಂಡಿಯದ ನಾಗರಿಕತೆಯ ಪ್ರಾಚೀನತೆಯು

(34ನೇ ಪುಟದಿಂದ ಮುಂದರಿಸಿದ್ದು.)

ಮನುಷ್ಯ ಪ್ರಾಣಿಯ ಸೃಷ್ಟಿಯಾಗಿದೆ ಎಂದು ಹೇಳಬಹುದು. ಈ ಕಾಲವನ್ನು ಮಿಲಿಯ ಗಟ್ಟಲೆಯಿಂದ ಹೇಳಬೇಕಲ್ಲದೆ ಸಾವಿರಗಟ್ಟಲೆಯಿಂದಲ್ಲ. ಮನುಷ್ಯನ ಜನನ ಕಾಲವನ್ನು ಗೊತ್ತು ಹಚ್ಚುವುದಕ್ಕಿಂತ ಅವನು 'ನಾಗರಿಕತೆಗೆ ಬಂದ ಕಾಲವನ್ನು ಗೊತ್ತುಮಾಡುವುದೇ ಮೇಲಾದುದು. ಮನುಷ್ಯನು ಕಾಡು ಸ್ಥಿತಿಯಲ್ಲಿರುವಾಗ ಅವನಿಗೂ ವ್ಯಗಗಳಿಗೂ ವಿಶೇಷ ಭೇದವಿರದ ಕಾರಣ ಅವನು ಮನುಷ್ಯನಾದುದು ನಾಗರಿಕನಾದ ಮೇಲೆಯೇ.

(ಆದರೆ ಅಜಾಗರಕತೆ, ಹಿಂದೂಗಳ ಮತ್ತು ಇತರಿಯರ ಗತಿ ಯೇನು? — ಲೇಖಕರು — ಸಂ.)

ಬಲ್ಲ ಕಲಿಯೆಂದಂ, ದಾಕ್ಷಿಣ್ಯರಲ್ಲಿ ನಾಲ್ಕು ಬೆಟ್ಟಿಕೊಳ್ಳುಗಳ್ಕು ಒಂದೀ ಬಾರಿಗೆ ಬಾಳ್ಗುಲ್ಲಿ ಕುರುಸಿಕೊಂಡ 'ಕಾಂಗಡಿ ತಿಮ್ಮ'ನ ಹಾಗೆ, ರಾಜಕುಮಾರನು ತಗ ಪ್ರಸನ್ನವದನನಾಗಿಹನು. 'ಇತ್ಯಾ' ಳಿಗೆ ಸಿಕ ತಿಳೀರನ್ನು ಕುಡಿದನೆಂದರೆ, ನೀರುಹನಿಗಳು ಗಟ್ಟಲ್ಲಿ ಇಳಿವಾಗ, ಅವ ಬಿಸಾರ ಮುತ್ತಿನ ಸರವನ್ನು ನುಂಗಿದಂತೆ, ಹಲ ಹಾಯಾಗಿ ಇಳಿಯುತಿದ್ದುವು. ಇಷ್ಟು ಸಾಲದೆಯೆಂಬಂತೆ, ಮೈ ಬಿಸಿಯಾಗಿಸಿಕೊಳ್ಳಲು-ಛೇ! ಕೈಕಾಲು ಗಟ್ಟಿಮುಗಳು ಸೋಯುತ್ತ, ಕುಮಾರನ ದೇಹದಲ್ಲಿ ಇನ್ನೂರು ಎಲುವುಗಳು ತುಂಡು ತುಂಡಾದಿದ್ದು ತೋರಿಸಲ್ಪಟ್ಟನೆ ಎಂದು, ಆ ಸಂದುಗಳನ್ನು ಗುರುತಿಸಿ ತೋರುತಿದ್ದುವು. ಇಂತಹ ಸಮಯದಲ್ಲಿ ಕೆಪ್ಪಟಿಯೇ? ದೇಹವು ಕಣ್ಣು ಬಿಟ್ಟು ಅವನ ಆಗಮನವನ್ನು ಹಾಳೆ ನೀಕ್ಷಿಸುವಾಗ ಕೆಪ್ಪಟಿಯೆ? ಪ್ರಜ್ಞಾಗಣವು ಕಾದಿರುವಾಗ, ನಾಳಿನ ಮುಹೂರ್ತಕ್ಕೆ ಕಡಿಯಾಗಿಯೆ ಕೆಪ್ಪಟಿಯೆ? 'ಇದು ಗಂಡಾಂತರವೆ? ಅಪಾಂತರವೆ? ದೂರದೇತದಿಂದ ಹವಿಂರ ಪುರದ ಮಹಾರಾಜರು ಈ ಆರಮನೆಗೆ ನಾಳೆ ಬರುವ ರಲ್ಲವೆ? ಆಗ ಕುಮಾರನು ಅವರ ಎಡನುಗ್ಗುಲಲ್ಲಿ, ರಾಜರು (ತಂದೆ) ಬಲಮಗ್ಗುಲಲ್ಲಿ ಇದ್ದು, ಅರಮನೆಯ ಮೇಲ್ಕಾಳಿಗೆ ಯಿಂದ ಜನಸ್ತೋಮದ ಇರಿಲ್ಲಿ ಪ್ರೇಕ್ಷಕ್ಷಣಾಗಿ ಜನ್ಗಣದ ಜಯಕೋಷವನ್ನು ಲಾಲಿಸಿ, ನಕ್ಕು ನೆಮ್ಮಕರಸಬೇಡವೇ? ಕುಮಾರನು ಅಲ್ಲಿರಲಾರನಾದರೆ, ಕೆಪ್ಪಟಿಯು ನೆವವನ್ನು ಕೇಳುವವರಾರು? ಬಂದ ಮಹಾರಾಜರು ಇದನ್ನೆ ಕಾರಣ ವಾಗಿಟ್ಟುಕೊಂಡು ಅಸತ್ಕಾರವಾಯತೆಂದು ಕ್ರೋಧದಿಂದ ಕೆರಳಿ, ಯುದ್ಧವನ್ನು ಹೂಡಿರೆ? ಆಗ ನಿಸ್ತಾರವಲ್ಲವೆ? ಎರಡು ರಾಜ್ಯಗಳ ಸೈನ್ಯಗಳಲ್ಲಿ ಎಷ್ಟು ಮಂದಿ ಸಾಯರು? ಎಷ್ಟು ಊರುಗಳು ಧ್ವಂಸವಾಗವು? ಎಲ್ಲಕ್ಕೂ ಈ ಹಾಳು ಕೆಪ್ಪಟಿಯೆ ಕಾರಣವಾಯಿತಲ್ಲ!

ಇದೆಲ್ಲದೆ, ನೊಡಲೇ, ಹವಿಂರ ಪುರಕ್ಕೂ ಕುಮಾರ ಪುರಕ್ಕೂ (ಕುಮಾರನಿದ್ದ ರಾಜ್ಯದ ರಾಜಧಾನಿ) ಹಗೆತನದ ಸೋಂಕು ತೆಗೆಲಿಯೆ ಇದ್ದಿತು; ವ್ಯವಲವಾಗಿ ಹರಡಿಯೂ ಇದ್ದಿತು. ಕುಮಾರಪುರದ ದರ್ಬಾರದಲ್ಲಿ ಒಬ್ಬ ವೈದ್ಯ ಜವಿನುದಾರನು,—ಹವಿಂರಪುರದ ರಾಜರನ್ನು ಕುರಿತಾದಿ, "ಮುದಿ ಆನೆಯಂತಿರುವನಾದರೂ ಅವನ ತಲೆಯಲ್ಲೆಲ್ಲ ತಗುಜೆ ತುಂಬಿದೆ" ಎಂದಿದ್ದನೆಳೆ? ಇದಕ್ಕಾಗಿ, ಹವಿಂರ ಪುರದ ರಣಸಚಿವನು ಕುಮಾರನ ತೀರ್ಥರೂಪರನ್ನು, ಮರು ದಿನವೇ ಆ ಊರ ದರ್ಬಾರದಲ್ಲಿ,—'ಅವನೇನೂ ಕಾಂಚ ನಲತಾಕೋಮಲಾಂಗನಾಗಿಲ್ಲವಷ್ಟೆ! ಹೆಗ್ಗಣಕ್ಕೂ ಮೂರು ಅಂಗಲ ಗಿಡ್ಡನೆ!' ಎಂದು, ತನ್ನ ರಾಜಭಕ್ತಿಯನ್ನು ಮೆರೆಯು ಸದನಂತೆ. ಅಲ್ಲಿಲ್ಲಿನ ರಾಯಭಾರಿಗಳು ಈ ವೃತ್ತಾಂತ ಗಳನ್ನು ತಮ್ಮ ಸರಕಾರಿಗೆಳಿಗೆ ವಿವರವಾಗಿ ಬರೆದು ತಿಳಿ ಸಲು, ರಾಯಭಾರಿಗಳ ರಿಪೋರ್ಟನ್ನು ಓದಿದ ರಾಯರು ಗಳ ಮುಖಗಳು ಭಾರವಾದುವು. ಈ ಮಧ್ಯೆ, ರಣ ಸನ್ನಾಹವನ್ನು ಕಡಿಮೆಮಾಡಬೇಕೆಂದು ಎಲ್ಲ ರಾಜರುಗಳೂ ಬಹಿರಂಗವಾದ ಸಭೆಯಲ್ಲಿ ನಿರ್ಧರಿಸಿ, ಶಾಂತಿದೇವತೆಯು

ಸ್ವರ್ಗಲೋಕದಿಂಪ ಧರೆಗಿಳಿದು ಬಂದರೆ, ತಂತಮ್ಮ ರಾಜ್ಯ ದಲ್ಲಿ ನೆಲೆನಿಲ್ಲಬೇಕೆಂದು, ಒಬ್ಬರಿಂದೊಬ್ಬರು ದಿವ್ಯವಾದ ಮಂದಿರಗಳನ್ನು ಕಟ್ಟ ತೊಡಗಿದರು. ಆದರೆ, ಒಳಗಿಂದೊ ಳಗೆ ನಡೆವ ಹೊಸ ಪರಿಯ ಯುದ್ಧಸನ್ನಾಹಕಾರ್ಯವನ್ನು ತಡೆಯಲಿಲ್ಲ. ಹವಿಂರಪುರದವರು, 75 ಕಿಲೋಮೀಟರ ದೂರ ಹಾರಿಸಲಾಗುವ, ಹಾರಿಯೂ ಪುನಃ ಫಿರಂಗಿಯ ಬಳಿಗೆ ಮದ್ದು ತುಂಬಿಸಲ್ಪಡಲೋಡಿ ಬಂದೊದಗುವ ಗುಂಡೊಂದನ್ನು ನೂತನವಾಗಿ ಕೋಧಿಸಿ ರಚಿಸಿದರೆಂದು. ಅಲ್ಲಿದ್ದ ಕುಮಾರ ಪುರದ ರಾಯಭಾರಿಯು ತಿಳಿಸಿಯೇ ಇನ್ನೊಂದು ಪ್ರಕರಣ ವನ್ನಾರಂಭಿಸಿದನು. ರಾಯಭಾರಿಗಳ ವರದಿಗಳೇ ಯುದ್ಧ ಭೇರಿಗಳನ್ನು ಮೊಳಗಿಸುವುವಾಗಿ ಎಂದಿನಂತಿದ್ದ ಸೂತ್ರಕ್ಕೆ ಇವರಿಬ್ಬರೂ ವಿಧೇಯರಾಗಿದ್ದರು. ಆದರೆ ಕುಮಾರಪುರದ ಮಂತ್ರಿಗಳು ಹವಿಂರಪುರದ ರಾಜಕನ್ಯೆಯನ್ನು ನಮ್ಮ ರಾಜ ಕುಮಾರನಿಗೆ ವಿವಾಹಮಾಡಿಸುವರೆ ಸರ್ವ ಸನ್ನಾಹಗಳನ್ನು ಮಾಡಿಸಿ, ಹವಿಂರಪುರವು ಇದಕ್ಕೊಪ್ಪುವಂತೆಯೂ ಮಾಡಿ ದರು. ನಾಳೆಗೇ ಬೆಳಿಗ್ಗೆ ಹವಿಂರಪುರದ ರಾಜರು, ಇದೇ ಅವರ ಜನ್ಮದಲ್ಲಿ ಮೊದಲನೆ ಸಲ ಕುಮಾರಪುರದ ಅರಮನೆಗೆ ಬರುವರು! ಎರಡನೆ ಪ್ರಹರದೊಳಗಾಗಿ ಮೇಲ್ಕಡಿಯಲ್ಲಿ ಕುಮಾರಪುರದ ರಾಜ, ರಾಜಕುಮಾರರೊಡನೆ, ಪ್ರಜಾ ಗಣಕ್ಕೆ ದರ್ಶನವನ್ನಿತ್ತು, ಸತ್ಕಾರ ಸಂಭ್ರಮ ಪ್ರಥೆಯುವರು! ಹತ್ತು ಗಾವುದಗಳಂದಲೂ ಸಾಲುಮರಗಳು ಬಿಡಾರಗಳಿಗೆ ಬಟವಾಸು ತೆಗಿಸಿಕೊಂಡು ಬಿಳೀ ರಿಜರ್ವ ಪೋಲೀಸರಾಗಿ ನಿಂತಿರುವನೆ. ಪ್ರತಿಯೊಂದು ಹಕ್ಕಿಯೂ ಹಾರುಗಳನ್ನು ಭಾಯಿಕಾಕ ವಾಡಿಕೊಂಡು ಅಲ್ಲಿಂದಿಲ್ಲಿಗೆ ಹಾರಾಡುತ್ತಾ ಹಾಡಲು 'ರಣರಣ' ಮೂಮ್ ನಿಶ್ಚತೆ ಮುಗಿಸಿಕೊಂಡಿದೆ. ರಣರಣಾದಿಕ ಮೆಳಿಗೆಂದ ಎರಿರುಗಳು ತೊಡಲೇ ಹೊಂಬಿಸಲು ಎಷ್ಟೇ ಬಿಂದು, ನೆರೆಮನೆಯಲ್ಲಿ ಕೈ

ಗಳು ಕಯ್ಯಾರಿಸಿ ಕೆಲಸ ನಾಳಿನ ಹನ್ನಗಳನ್ನು ಕಿತ್ತು ತಮ್ಮ ತರಿಗೆ ಸುತ್ತಿಕೊಂಡು ಧಾಡಕಾಯ ರಾಜರನ್ನೆಯ ಇಬ್ಬಂದಿಯಲ್ಲೂ ಊರಿ ನಿಂತಿವೆ; ತುತ್ತು ಗಾವುದ ವಿಸ್ತೀರ್ಣ ದೊಳಗಣ ಮೂವ ಎಲೆಗಳು ಸಾಲಾಗಿ ಹಾರಿ ಬಂದು, ಈ ಬದಿರು ಕರೆಯ ಹಗ್ಗಗಳಿಗೆ ಸಿಲ್ಕಿ ತೂಗಾಡುತ್ತಿ ರಿವೆ. ಸರಕಾರದ ಎಡಿಷ್ ಪೈಯರ್ ಎರಿಮೆಂಟರಿ ಶಾಲೆಗಳ ಬಾಲಕರ ಧ್ಯಾಯಂಗ ಪುಸ್ತಕಗಳ ಹಾಳೆ ಗಳೆಲ್ಲ, ತಮ್ಮ ಮೇಲೆ ಬರೆದ ಬಣ್ಣ ಬಣ್ಣದ ಚಿತ್ರ ಗಳೊಂದಿಗೆ ಒಟಕ್ಕನೆ ಕಿತ್ತು ಹಾರಿ ಈ ತೋರಣಗಳ ಮಾವಳಿಗಳ ನಡುವೆ ಇಣಕುತ್ತ ಅಂಟಿಕೊಂಡು ತೂಗುವೆ. ದಿವ್ಯಾಂತರಾಗುವವರ ಸ್ವಾಸ್ಥಾನಯತ್ನಕ್ಕೆಗಳಲ್ಲಿ ಮೆರೆವ ಭಜನೇ ಕಾರರು ಬೇಂಡ್ ವಾದ್ಯದ ಮೇಳಗಳೂ ಎಲ್ಲರಿಗೂ ಮೊದ ಲಾಗಿ, ಊರ ಹೆಬ್ಬಾಗಿಲಿಗೆ ನಿನ್ನೆಯ ಸಂಜೀ ಹೊತ್ತಿಗೆ, ಸಚ್ಚೇಲ ಪರಿವಾರ ಸಹಿತವಾಗಿ ಹೊರಟು, ಈ ಸಂಜೆ ಯಿಂದ ನಾಳಿನ ಸಂಜೆ ಹವಿಂರರಾಜರು ಹಂತೆರೆಳುವ ತನಕ

ನಿರಾಶೆ.

ಮಂಜಿಬ್ಬನಿಗಳು ಎರೆಯುವ ಶಾವು
ಬೆಟ್ಟದ ಕೋಡಲಿ ಬೆಳೆದಿತು ಹೂವು
ಇದ ಮೂಸಿದರೂ ವಾಸನೆಯಿಲ್ಲ
ಹುಟ್ಟಿತೇಕೊ ಹುಟ್ಟಿಸಿದನ ಬಲ್ಲ
ನೀಳನ ತುಂಬಿನ ನಿಡುಬುದಿಯಲ್ಲಿ
ಬಿರಿದಿತೊ ಹೂವಿನ ಎದೆಗುದಿ ಅಲ್ಲಿ
ಎರಡೇ ಎಸಳು ನಾಲ್ಕೇ ಪಕಳೆ
ಕಳೇವರದೊಳು ಕಂಡಿತೊಂದು ಕಳೆ
ಇದೆ ಎಣಿಸಿತು ಮೈಮಾಟದ ಚಂದ
ಎಲ್ಲದೆ ಇಲ್ಲದೆ ಮೈಮೆಯ ಗಂಧ
ಕಣ್ಣನೆಳೆದರೂ ಸೋಲಿಸಲಿಲ್ಲ
ಮನವ ಸೆಳೆದರೂ ಸೆಕೆಗೊಳಲಿಲ್ಲ
ಗಾಳಿ ತಟ್ಟಲಿದು ಅಲೆಯಲೆ ಇಲ್ಲ
ತಟ್ಟದ ಗಾಳಿಯು ನಲಿಯಲೆ ಇಲ್ಲ
ಸೆಟೆದ ಹೂವು ಸೆಟೆಸೆಟೆದೇ ಇತ್ತು
ಬಿರುಗಾಳಿಯು ಮೈ ಮರಗಟ್ಟಿತ್ತು
ಹುಡಿಯಣುವಿಲ್ಲ ನೀರ್ನಿಂತಿಲ್ಲ
ಇದ ಹುಡುಕುವ ಅಲಿ ಬರಲೂ ಇಲ್ಲ
ಏನಿದು ಬಾಳು ಹಾಳಿಗು ಹಾಳು
ಬದುಕನಣಕಿಸುವ ಕತ್ತಲೆ ಕಾಳು
ಹಾಗೂ ಉಂಟು ಹೀಗೂ ಉಂಟು
ವಿಧಿಯು ಹೊಸೆದ ಕಗ್ಗಿನ ಕಗ್ಗಂಟು
ಸ್ವತ್ತಣ ಗಾಳಿಯು ಬಿಸುಸುಯ್ತತ್ತು
ಅದಕೂ ಈ ಹೂ ಬಾಡದೆ ಇತ್ತು.

ಕಂಬನಿಗರೆದವು ಚುಕ್ಕಿಗಳೆಲ್ಲ
ಆದರಿದರ ಮೈ ನೆನೆದಿರಲಿಲ್ಲ
ನೇಸರು ಕಣ್ಣನು ಕೆಕ್ಕರಿಸಿದರೂ
ತಿಂಗಳು ಮುಳುಮುಳು ಬಿಕ್ಕಳಿಸಿದರೂ
ಮಿಟಿಮಿಟಿ ಸ್ವರ್ಗದೊಳಿತ್ತು ಸಮಾಧಿ
ಕಾಣಲಿಲ್ಲ ಈ ಹೂವಿನ ಹಾದಿ
ಋತುಗಳ ಬಣ್ಣವು ತಿರುಗುತ್ತಿತ್ತು
ಬೆಟ್ಟ ಸವೆದು ಇಳಿಗೆರಗುತ್ತಿತ್ತು
ಬರೆದೊಲು ಇದ್ದೊಲು ಇತ್ತು ವಿಚಿತ್ರ
ಪ್ರಕೃತಿ ಪುಟದೊಳೀ ಹೂವಿನ ಚಿತ್ರ.

ಅಂಬಿಕಾತನಯ ದತ್ತ.

ಸಾಯುವವರ ಶವಗಳನ್ನೆತ್ತದಂತೆ ನಿರ್ಬಂಧಿಸಿಯೇ ಬಂದು ಸುಖಸಲ್ಲಾಪಗಳನ್ನಾಡುತ್ತಿರುವರು. ಆಗಾಗ ದರೋಡೆ ಗಳಿಗೆ ನಡೆಯುತ್ತಿದ್ದರೂ ಪೋಲೀಸ ಘಾತಿನ ವತ್ತೆಗೇ ದೊರೆ ಯದ ಕೇಡಿಗಳ ಹೆಂಡು ಸುಸಂಭಾವಿತರಾಗಿ, ತಮ್ಮ ಜೈಸನ್ನು ಇಲ್ಲದ ತುಪಾಕಿಗಳನ್ನೂ ಸಿದಿಗುಂಡುಗಳನ್ನೂ ಧರಿಸಿ ಕೊಂಡು ಅಲ್ಲಲ್ಲಿ ಓಣಗಳು ಹೆದ್ದಾರಿಗಳಿಗೆ ಕೂಡುವ ಸಂದುಗಳಲ್ಲೆಲ್ಲಕಾದಿದ್ದು, ಹವಿಂರರಾಜರು ಹಾದು ಹೋಗು ವಾಗ, ಜನ್ಮದಲ್ಲಿದ್ದೊಂದೇ ಸಲ ಯಾರಿಗೂ ಅಪಾಯ ವಾಗದಂತೆ, ಗೌರವಾರ್ಥಕ್ಕಾಗಿ ತುಪಾಕಿ ಹಾರಿಸಿ ಮನ್ನನೆ ಕೊಡಬೇಕೆಂದಿದ್ದಾರೆ. ಭೂತೆದ ವೇಷಗಳೂ, ಕಂಬಳದ ಕೋಣಗಳೂ, ಕಟ್ಟುವ ಹುಂಜಗಳೂ, ಅಗಸರ ಕತ್ತೆಗಳೂ, ರೈಲ್ವೆ ಮೋಟಾರುಗಳೂ ಅಲ್ಲಲ್ಲಿ ನಿಂತಿದ್ದ ಬಳಿಕ, ಇನ್ನು ಹವಿಂರರಾಜರು ಭಾವೀ ಮಹಮಗನ ಭವನಕ್ಕೆ ಬರುವ ದೊಂದೇ ವಿಷಯವೀಗ ಉಳಿದಿದೆ: ಸ್ವಾಗತಜಂಗಮಗಳೇ ಇತ್ತು ರಾಜಭಕ್ತಿ ಕುಮಾರ ಪ್ರೇಮಗಳಂದಱೆ ಸತ್ಕಾರ ಸಿದ್ಧರಾಗಿದ್ದೆವೇಳೆ. ವರಕುಮಾರನೇ ಕೆಪ್ಪಟಿ ತಡಿದು ಬಿದ್ದರು ವನಲ್ಲ! ಹಾಳು ಕೆಪ್ಪಟಿಯೆ!—'ಏನು ಬೇಸರ' ಎಂದು ಕುಮಾರನು 'ರಿಮಾರ್ಕ್' ಮಾಡಿದ್ದುದು ಇದಕ್ಕಾಗಿಯೆ.

ರಾಜವಂಶದ 178ನೇ ಕವಿಂನ ವರೆಗಣ ಸಮಸ್ತ ಗಂಡು ಹೆಣ್ಣು ಮೆಂಬರರು ಕ್ಲಪ್ತಕಾಲಕ್ಕೆ ಅರಮನೆಯ ಇದಿ ರಲ್ಲಿರುವ ಮೈದಾನಿಲ್ಲಿ ಮೈದೋರಿರಬೇಕೆಂದು, ಅವರನ್ನು ಇದ್ದಲ್ಲಿಯೇ ಜೀವಂತ ಹೂಳಲಾಗುವುದೆಂದು ರಾಯಭಾ ವಿರುತ್ತಾ, ಅವರು ಮೊನ್ನೆ ತಾನೆ ಕುಮಾರರೇ ತೆರೆದ ಸ್ವಶಾನ ದಲ್ಲಿ ದಹನಕ್ರಿಯಾಸಂಭಾವನೆಯ ಅವ್ಯಕ್ತಾನಂದವನ್ನು ಅನುಭವಿಸುವುದನ್ನು ಕೊರೆದು ಹೇಗೆ ದಫನಹೊಂದಲೆಳಿ ಸದೆ, ಎಲ್ಲರೂ ಹಾಜರಾಗಿರುವರು. ವರನು ಅತಿಥಿರಾಜರ ವಾಮಭಾಗದಲ್ಲಿ ಯುವರಾಜನಿಗೊಪ್ಪುವ ವೇಷಭೂಷ ಗಳನ್ನು ಧರಿಸಿ ಅದೊಂದು ಗಳಿಗೆ ಮೆರೆಯಲೇ ಬೇಕಾಗಿತೆ ಎಂದು ತಂದೆ ರಾಜನ ಅಪ್ಪಣೆ. ಕುಮಾರನ ಮುಖಾವ ರೆಯು ಈ ರೀತಿಯಾಗಿ ಸಿವಿದು ಅರಳಿದೆ ಎಂದು ತಂದೆ ಗೆಲ್ಲಿಯ ಗೊತ್ತು? ಕುಮಾರನು ಅತಿಥಿಯ ವಾಮಾಂಗನಾಗಿ ಮೆರೆಯದಿರುವಲ್ಲಿ, ಇದು ಹೆದಡಣ ಥರ್ಟಾರಿನಲ್ಲಾದ ಅವ ಮಾನದ ಪ್ರತೀಕಾರವೆಂದು ರಾಯಭಾರಿಗಳು ತಿಳಿಸಲಾರರೆ? ಹಾಗಾಗಿ ಯುದ್ಧವಾಗದೇ?

ಕುಮಾರನು ತಂದೆಯ ಅಪ್ಪಣೆ ಕೇಳಿದನು. ಗಲ್ಲ ತುಂಬಾ ಗಾಳಿಯೂದಿದನು. ಗಲ್ಲಗಳು ಇನ್ನು ಅರಳು ವುದೇ ಸಾಧ್ಯವಾಗಿರಲಿಲ್ಲ, ಗಾಳಿಯೂದುವುದೆಂತು? ಕಂಗೆ ಟ್ಟನು. ಗಾಳಿ ಊದಲೂ ಆಗದ ಕುಮಾರನು ಇನ್ನೂ ಬಲ ಹೀನನಲ್ಲವೇ? ಅವನು ಮುಗಿದ್ದಲ್ಲಿಂದ ಬೆರಳನ್ನು ಅಲ್ಲಾ ಡಿಸಬಾರದಾಗಿ ರಾಜವೈದ್ಯ ವೈದ್ಯರಾಜರ ಕಠಿಣಾಜ್ಞೆ. ರಾಜನು ಕೇಳುವನೇ? "ಚಿಕಿತ್ಸೆಗೆ ಮಣ್ಣು ಹಾಕಿರಿ, ಹುಡು ಗನು ಮುಖದೋರಲೇ ಬೇಕು" ಎಂದನು. "ಅವನ ಜೀವಕ್ಕೆ ಹಾನಿಯಿದೆ" ಎಂದರು ವೈದ್ಯರಾಜರು. "ನಮ್ಮ ರಾಜ್ಯಕ್ಕೆ ಹಾನಿಯಿದೆ" ಎಂದರು ರಾಜರು. "ಅವನಿಗೆ ಕೆಪ್ಪಟಿಯಾಗಿದೆ, ಎಂದು ವೈದ್ಯರು ಎಂದರೆ, ಊರು ನಂಬುವುದೇ? ಆದರೆ, ಈ ಸಂಕಟದ ನಿರೆಯನ್ನು ದಾಟು ವುದು ಹೇಗೆ?" ಇದನ್ನೇ ಭಾವಿಸುತ್ತಾ ರಾಜರು ಮೀಸೆ ತುದಿ ಕಚ್ಚಿಕೊಂಡೇ, ರಾಜ ಹಜಾಮನ ಕತ್ತರಿಯ ಕೆಲಸವನ್ನು ಬಹುಸುಟ್ಟಿಗೆ ಪೂರೈಸಿದರು. ಆದರೆ, ಉಪಾಯವೇನೂ ತೋಚದಾಯಿತು. ರಾಜರು ದಿಗ್ಭ್ರಾಂತರಾದರು.

ಅಷ್ಟರಲ್ಲೆ ಹಲವು ರಥಗಳು ರಭಸದಿಂದ ಓಡಾಡು ವಂತೆ ಕೇಳಿಸಲು ರಾಜರೂ ವೈದ್ಯನೂ ಕುಳಿತಿದ್ದ ಕುರ್ಚಿ ಗಳೊಳಗಿಂದ ಚೀಳುಗಳೆದ್ದು ಕದಿದಂತೆ ದಿಗ್ಭ್ರಾಂತರಾಗೆದ್ದು, ಒಬ್ಬರ ಮುಖವನ್ನೊಬ್ಬರು ನೋತಿದರು. ಹವಿಂರರಾಜರು ಬೇಕಂದೇ ಸಂಚಾರದ ಕ್ರಮತಪ್ಪಿಸಿ ಮುಂಚಿತವಾಗಿ ಬಂದ ರೇನು? ರಾಜರುಗಳು ಪ್ರಕಟಿಸಿದ ಇಸ್ತಿಹಾರಿನಂತೆ ಹೆಂಡು ಮುಂದಾಗಲೆ ಸಂಚಾರ ಮೂಡುವುದು ಅಪೂರ್ವವಷ್ಟೆ. ಹಾಗೆ ಸಂಚರಿಸಲು ಬದ್ಧರಾದವರು ನೋಕರರು. ಇನ್ನ ರಲ್ಲಿ ಬಂದರೇನು? ಅಯ್ಯೋ, ಈ ಕೆಪ್ಪಟಿಗೇನು ಗತಿ? ಎಂದೇ ಇಬ್ಬರೂ ಸ್ತಂಭೀಭೂತರಾದರು. ರಾಜರ ಕೈಗಳು ತಲೆಯ ಕಡೆಗೂ ಅಲ್ಲಿಂದ ಹೃದಯದ ಕಡೆಗೂ ಹಾರಿದುವು. ಇದನ್ನು ನೋಡಿಯೆ, ರಾಜಭಕ್ತರಾದ ರಾಜವೈದ್ಯರು, ಬಹು ದಿನಗಳ ಅಭ್ಯಾಸ ಕ್ರಮದಿಂದ, ತಮ್ಮ ಕೈಗಳನ್ನು ಅಂಗೀಕಸೆ ಯೊಳಕ್ಕೆ ತುರುಕಿ, ಹೃದಯದ ಉದ್ವೇಗಸೂಚಕ ಪರೀ ಕ್ಷೆಯ ಕೊಳವೆಯನ್ನು ನೆಳೆದಿಕ್ಕಿ, ಮತ್ತಷ್ಟು ಉದ್ವೇಗದಿಂದ ತಾನು ಕಿವಿಗೆ ತುರುಕಿಕೊಳ್ಳಬೇಕಾದ ಕೊಳವೆ ಕೊನೆಗಳನ್ನು ಚಕಿತರಾಗಿ ಪಾಯ್ತೆರೆದ ರಾಜರ ಬಾಯೊಳಕ್ಕೆ ತುರುಕಿಟ್ಟು, ಹೃದಯದ ಮೇಲಿಡುವ ಕೊಳವೆ ಕೊನೆಯನ್ನು ತನ್ನ ಕೈ ಯಲ್ಲಿಟ್ಟುಕೊಂಡು, ತಾನು ಗಡಿಯಾರವನ್ನು ನೋಡುತ್ತಿರು ವಂತೆ ಎರಡು ನಿಮಿಷ ಏಕಾಗ್ರದೃಷ್ಟಿಯಿಂದ ನಿಂತರು! ರಾಜರು ಭೂಕಂಪವೆಂದೆಣಿಸಿದ್ದುದು ಇನ್ನೂ ಮುಗಿದಿಲ್ಲವೊ ಮಿಗಿಲಾಯಿತೋ ಎಂದು ಒಂದೂ ತಿಳಿಯಲಾರದೆ, ವೈದ್ಯರ ಗಡಿಬಿಡಿಯ ಕಡೆಗೆ ಗಮನಕೊಡಲಿಲ್ಲ. ವೈದ್ಯರು ಪ್ರಮಾ ದವನ್ನರಿತು, ರಾಜರಿಗಿನ್ನೂ ತನ್ನ ಕಡೆಗೆ ದೃಷ್ಟಿ ಹರಿದು ದಿಲ್ಲೆಂದು ಹಿಗ್ಗಿ, ನಳಿಗೆಯನ್ನು ರಾಜರ ಬಾಯೊಳಕ್ಕೆ ತೂರಿ ದ್ದಷ್ಟೇ ವೇಗವಾಗಿ ಹಿಂದಕ್ಕೆಳೆದುಕೊಂಡು, ಆ ನಳಿಗೆ ಹಾವನ್ನು ತಮ್ಮ ಅಂಗಿಯ ಬಿಲದೊಳಿಗೆ ನುಸುಳಿಸಿದರು! ಅಯ್ಯೋ, ಪುನಃ ಧ್ವಜಂಡವೇಗವಾಗಿ ರಥಗಾಲಿಗಳ ಚಿತ್ಕಾರ ವೆದ್ದುದೆಂದೇ ಇವರಿಬ್ಬರು ಕೇಳಿಯೆ ವಲಾಯನ ಸೂತ್ರ ಜಪಿಸುವರೆನ್ನುವುದರೊಳಗೆ,—

ದಫರಖಾನ ದಲಾಯಿತನು ಪ್ರವೇಶಿಸಿ, ವಿಧಿಬದ್ಧವಾಗಿ ಹೊರಸೂಸಿದ ಕುಸಿರನ್ನು ಎಂದೆ ಒಳಕ್ಕೆಳೆಯಲಾರದೆ ಏನು ಸುಯ್ಯುತಿರಲು,—

ರಾಜ—ವೈದ್ಯರಿಬ್ಬರ ಪ್ರಾಣಗಳೂ ನಾರಾಯಣ ಮಂತ್ರವನ್ನು ಜಪಿಸತೊಡಗುವಂತಾಗಿ, ಇಬ್ಬರೂ ಸಂಜ್ಞಾ ಪೂರ್ವಕ ವಿಚಾರ ಮಾಡಿದರು.

೨೬ನೇ ಅಕ್ಟೋಬರ.

ಸ್ವದೇಶಾಭಿಮಾನಿ.

ಚಿತ್ರಗಳ ಪುರವಣಿ

ರಜತೋತ್ಸವ ಸಂಚಿಕೆ.

ಕೈ ವಾ ಉಪೇಂದ್ರ ಪೈ
(೮೮ ವರ್ಷ)

ಸ್ವದೇಶಾಭಿಮಾನಿ ಆಫೀಸು ಮತ್ತು
ಶಾರದಾ ಛಾಪಖಾನೆ

ಶಾರದಾ ಛಾಪಖಾನೆ
ಪ್ರಿಂಟಿಂಗ್ ಮತ್ತು ಕಂಪೋಜಿಂಗ್ ರೂಂ



ಪಂಜೆ ಮಂಗೇಶರಾಯರು
(ಮಂಗಳೂರು ಕರ್ನಾಟಕ ಸಂಘದ ಪೌಷ್ಠಿಕದಿಂದ)

ನಾಹಂ ಕರ್ತಾ, ಹರಿಃ ಕರ್ತಾ
ತತ್ಪೂಜಾ ಕರ್ಮಚಾಖಿಲಂ.

ಕುದ್ಮುಲ ರಂಗರಾಯರು.
(ಮಂಗಳೂರು ಹಿಂದೂ ಹೈಸ್ಕೂಲ್ ಮುಖ್ಯ ಶಿಕ್ಷಕರು)

ರಜಪೂತ ಚಿತ್ರಕಲೆ.

ತಿವ ಪಾರ್ವತಿ.



ಸಪ್ತ ವಾ.

ಪಟಮಂಜರಿ ರಾಗಿಣಿ



ಬೇರೆ ಬೇರೆ ರಾಗಗಳಿಂದ ಹೃದಯದ ಮೇಲಾಗುವ ಸಂಗತಿಯನ್ನು ಚಿತ್ರರೂಪದಿಂದ ಚಿತ್ರಿಸಲು ಪ್ರಾಚೀನ ಚಿತ್ರಗಾರನು ಯತ್ನಿಸುವನು.

ನಾಯಕ ನಾಯಿಕಾ ಮಿಲನ.



ಸಜ್ಜಕೆಯು ಕೃಷ್ಣನ ದೀಕ್ಷಣೆಯ ಪ್ರಥಮ ಅವಸ್ಥೆಯ ಪರೆ ಅವಸೊಡನೆ ಆಗುವ ಒಂತರಾಗದ ಮಿಲನವು ಭಾಷೆ ಎರಡನೆಯ ಅವಸ್ಥೆ ಇಲ್ಲಿನ ಎಂಥಾಕೃಷ್ಣ ನಾಯಕ ನಾಯಿಕೆಯರು.

ಇಂಗ್ಲೆಂಡಿನ, ಹಳ್ಳಿಗಳ—ನೃತ್ಯ—

ಇಂಗ್ಲೆಂಡಿನ ಮೂಲ ಜಾನಪದರು ಮೇ ದಿನದ (May Day)ದಲ್ಲಿ ಹಳ್ಳಿಗರ ನೃತ್ಯ

ಹಿಂದೂಸ್ಥಾನದ ಇತಿಹಾಸ ರಚಯಿತರು.

ಬಿಡುಗಡೆಯಾದ ನಂತರ ಸ್ಟೇಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿ
ಸರಕಾರದ ರಕ್ತಸನ್ನಾಸವನ್ನು ಮಾಡಿ ಸತ್ಯಾಗ್ರಹವನ್ನು ಒಲ್ಲಿಸಲು ನಿರ್ಣಯಿಸಿದವರು.



ಶ್ರೀ ವಲ್ಲಭಾಯಿ ಪಟೇಲರು.
ಸಂಘಾನದ ಕಾಂಗ್ರೆಸ್ ಅಧ್ಯಕ್ಷರು.

ಶ್ರೀ ಜವಾಹರಲಾಲ ನೆಹರು
ಸನುದದ ಕಾಂಗ್ರೆಸ್ ಅಧ್ಯಕ್ಷರು.

ರಾಗಿಣಿ ದೇವಿ.
ಇವರು ಒಬ್ಬ ಅಮೇರಿಕ ದೇಶದ ಮಹಿಳೆಯರು.
ಹಿಂದೀಯರೊಬ್ಬರನ್ನು ಮದುವೆಯಾಗಿ ಒಂದೀ ಗೀತ-ನೃತ್ಯ ಕಲೆಗಳನ್ನು ಅಭ್ಯಾಸಮಾಡಿದ್ದಾರೆ



ಸಿಂಹಗುಹೆಗಳ ಸಾಂಚಿಯ ಪ್ರತಿಕೃತಿ.



ಅಜಂತ ಗುಹೆಗಳಲ್ಲಿನ ಒಂದರ ಮುಂಬಾಗ.

ಸಿಗ್ರಿ ಗುಹೆಯ ಒಂದು ಚಿತ್ರ, ಸಿಂಹಳದಲ್ಲಿ.



ಯುದ್ಧದಲ್ಲಿ ಪರಾಜಯವಾದ ನಾರೀಯನ್ನು ಅವಸಾನಕ್ಕೆ ತಂದಿಟ್ಟ ದೃಶ್ಯ ಕೆಳಗಿನ.



ಅಜಂತ ಗುಹೆಗಳ ಪಡುಪ್ಪಸ್ಸ. (ಹೈದರಾಬಾದಿನ ಸಂಸ್ಥಾನದಲ್ಲಿ.)

ಆನೆಗಳ ಮೆರವಣಿಗೆ.

ಬಾಳಿಗಾ (ಮೈಸೂರು). ಗ್ರಾಫಿಯರ್ ಕಛೇರಿ.

ಗುಜರಾಥಿನಲ್ಲಿ ನವರಾತಿ.

ದಲಾಯಿತನು,—"ರಾಜಭಕ್ತಿಯು ಮಹಿಮೆ! ನೋಡೂರು ಗಾಡಿಗಳು! ಮಾರ್ಕೆಟ್ಟು, ಹೆಲ್ತಾಫೀಸು, ಮ್ಯುನಿಸಿಪಲ್ ಆಫೀಸುಗಳಿಂದ ತಾವೇ ತಾವಾಗಿ ರಸ್ತೆಯುದ್ದಕ್ಕೂ ಹಾರಾಡಿ ಬಂದುವು! ಅಲ್ಲಲ್ಲಿದ್ದ ಹತ್ತೆಂಟು ದಿನಗಳ ಕೆಸರಿನಿಂದ ರಾತ್ರಿಗಳು ಹಾರಿ ಹಾರಿ ಇವುಗಳಲ್ಲಿ ಬಿದ್ದುಕೊಂಡುವು! ಮಲಮೂತ್ರಾದಿಗಳ ಭಾಂಡಗಳು ಎಲ್ಲಿಲ್ಲಿಂದಲೂ ಬಂದು ಅವನ್ನು ಹೊಕ್ಕುವು; ಗಾಡಿಗಳು ಯಾವ ಪ್ರಾಣಿಗೂ ಬಾಧಕವಿರದಲ್ಲಿ, ತಮ್ಮಲ್ಲಿ ತುಂಬಿಕೊಂಡಿದ್ದ ದಾರಿಗಳನ್ನು ಎಲ್ಲಿಗೊಯ್ಯಬೇಕೋ ಅಲ್ಲಿಗೆ ತಲಪಿಸಿ ಸುರಿದುವು! ಮತ್ತೆನ್ನ ಮೋಟರುಗಳ ಮೇಲಣ 'ಟಾಂಕಿ'ಗಳಲ್ಲಿ ಊರಿಲ್ಲಿನ ಕೆಸರು ಕೊಳೆ, ಕೆರೆ ಬಾವಿಗಳ ನೀರು ಸುಯ್ಯನೆ ಸ್ರವಿಸಿ ತುಂಬಲಾಗಿ, ಈ ರಾಡಿಗಳೆಲ್ಲ ಹೆದ್ದಾರಿಗಳಲ್ಲಿ ಒಡ್ಡಿ, ನೀರು ಬೆಲ್ಲಿ, ಹಲವು ದಿನಗಳೂ ಮಾಸಿಕೊಂಡಿದ್ದ ದಾರಿಗಳನ್ನು ಮಿಯಿಸಿ, ತಿಕ್ಕಿ, ತೊಳೆದು ಶುಭ್ರಗೊಳಿಸಿದುವು! ಅವುಗಳ ಓಡಾಟವನ್ನು ಕೇಳಿಲ್ಲವೇ? ಪ್ರತಿದಿನವೂ ಇವು ಇಷ್ಟೆ. ಕೆಲಸಮಾಡದೇಕಾಗಿದ್ದಿತು. ಆದರೆ, ' ಇಂತಹ ಚೀತ್ಕೃತಿಯಾಗುತರಲಿಲ್ಲ ಎಂದೇ ಈ ದಿನ ಅವುಗಳ ಓಡಾಟದಿಂದ ಭೂಕಂಪವಾಗುವಂತೆ ಬೆದರಿದ್ದೆವು; ಇನ್ನು ಉಳಿದೆವು.—ಮಹಾಸ್ವಾಮಿ! ರಾಜಭಕ್ತಿಯ ಮಹಿಮೆ! " ಎಂದು ಬೆನ್ನವಿಸಿದನು.

ರಾಜರು ವೈದ್ಯರನ್ನು ನೋಡಿದರು. ವೈದ್ಯರು ರಾಜರನ್ನು ನೋಡಿದರು. ಒಬ್ಬರು ಮತ್ತೊಬ್ಬರನ್ನು ನೋಡಿಯೆ, ಮೆಲ್ಲಮೆಲ್ಲನೆ ನಸುನಗುತ್ತ, ಕ್ರಮೇಣ ಗಟ್ಟಿಯಾಗಿ ಬಾಯ್ತೆರೆದು, 'ಹ್ಹಹ್ಹೇ' ಎಂದು ಗಹಗಹಿಸಿಬಿಟ್ಟರು. ಈ ಅವಸರದಲ್ಲಿ ವೈದ್ಯರು ತಮ್ಮ ಬಲಗೈಯಿಂದ ರಾಜರ ಬೆನ್ನ ಮೇಲೆಯೆ ಪ್ರಬಲವಾಗಿ ನಗುವಿಗೆ ಸರಿಯಾಗಿ ತಾಳ ಬಡೆದು ದನ್ನು ಇಬ್ಬರೂ ಗಮನಕ್ಕೆ ತಂದುಕೊಂಡಿಲ್ಲ. ಆದರೆ,—

ರಾಜರು, ತಾವು ರಾಜರೆಂಬುದನ್ನು ಎಷ್ಟು ನಿಮಿಷ ತಾನೆ ಮರೆಯಬಹುದು? ಕೂಡಲೆ, ರೇಗಿದಂತೆ ನಟಿಸಿ, ದಲಾಯಿತನನ್ನು ಕುರಿತು,—"ಇಷ್ಟು ತಿಳಿಸುವುದಕ್ಕೆಂದೇ ನಿನ್ನನ್ನು ದಲಾಯಿತನಾಗಿಟ್ಟಿವೇ? ರಾಜಭಕ್ತಿಯು ಊರಲ್ಲೆಲ್ಲಾ ತುಂಬಿ ತುಳುಕುತ್ತಿದೆ ಎಂದು ನಾವು ತಿಳಿದಿಲ್ಲವೇ? ಇಲ್ಲಿ, ಯುದ್ಧವಾರಂಭವಾದೀತೋ ಎಂದು ಸಂದೇಹಗೊಂದಿದ್ದೇವೆ. ಉಪಾಯ ತೋರದಾಗಿದೆ. ಕುಮಾರನನ್ನು ಕೆಪ್ಪಟೆ ಅಕ್ಕಯ್ಯನಿಸಿದೆ. ನಾಳಿನ ಬೆಳಗ್ಗೆ ಅವನು ಅತಿಥಿ ರಾಜರ ವಾಮಪಾರ್ಶ್ವದಲ್ಲಿ ನಿಂತು ಪ್ರಜಾಸಗರ್ದದ ಅಭಿವಂಜನೆಗಳನ್ನು ಸ್ವೀಕರಿಸಬೇಕು. ವೈದ್ಯರು, ಅವನು ಎದ್ದರೆ ಅಪಾಯವಂತೆ; ಏಳದಿದ್ದರೆ, ನನ್ನ ರಾಜ್ಯಕ್ಕೆ ಅಪಾಯವಿದೆ. ಉಪಾಯ ಕಾಣಲಾರದು. ನಾವು ತಲೆಗೆ ಹೊಡೆದುಕೊಂಡ ಶತವದಿಯಂತೆ, ಚಿಂತಾಕ್ರಾಂತರಾಗಿ ಮುದುರಿಕೊಂಡು ಬಿದ್ದಿದ್ದೇವೆ. ಸುಡಲಿ, ನಿನ್ನ ರಾಜಭಕ್ತಿಯ ಮಹಿಮೆ! ಉಸ್" ಎಂದು ಸೊಳ್ಳೆಯರಳಿಸಿ, ಬೆದರಿಸಿತೊಡಗಿದಾಗ ತಾವೇ ಕಚ್ಚಿ ಕಿರಿದುಮಾಡಿಕೊಂಡ ವಿಸಿ ಕುಡಿಗಳು, ಸೊಳ್ಳೆಗಳನ್ನು ತಿಕ್ಕಲು, ಈ ಕೋನುಲ ಅನುಭವನ್ನು ಅಡಗಿಸಿ, ಎಡಅಂಗೈಯನ್ನು ತಂಗಿಯೆದ್ದ ಆ ವಿಸಿಗಳ ಮೇಲೆ ಅಡಿಸಿ ಅವನ್ನಣಗಿಸಿದರು.

ದಲಾಯಿತನು ರಾಜರನ್ನು ಅಂದಿನಿಂದಲೂ ಬಲ್ಲವನೇ. ರಾಜರು ವರ್ಷದಲ್ಲಿ ಗ್ರೀಷ್ಮ ಋತುವನ್ನಾದರೂ ವಿಲಾಯತಿ ಭ್ರಮಣದಲ್ಲಿ ಕಳೆಯದೆ ಇರುತ್ತಿರಲಿಲ್ಲ. ಮಹಾರಾಜರೆಂಬವರಿಗೆಲ್ಲ ಹೆಚ್ಚಾಗಿ ಆರು ತಿಂಗಳು ಜೀವನ ವಿದೇಶದಲ್ಲಿ: ಹಾಗಿಲ್ಲದಿದ್ದರೆ, ಆವರಲ್ಲಿ ಪ್ರಜೆಗಳಿಗೆ ಭಕ್ತಿ ಹೆಚ್ಚುವುದೇ ಇಲ್ಲ. ಏಕೆಂದರೆ, ಅದೊಬ್ಬ ಮಹಾರಾಜರು ವಿಲಾಯತಿಗೆ ಹೋಗಿ ಬಿಟ್ಟು ಅಲ್ಲಿನ ನಾಗರೀಕ ರಮಣಿಯರನ್ನು ರಾಣಿಯರನ್ನಾಗಿ ಮಾಡಿಕೊಂಡು ಅಲ್ಲೇ ಇರುವರಾದಲ್ಲಿ,—ವಿಲಾಯತಿಗೆ ಹೋಗುವ ಬದಲಾಗಿ ಅವರು ಸ್ವರ್ಗಕ್ಕೆ ಹೋದರಾದರೂ ಸುಲಭವಾಗಿ ಉತ್ತರಾಧಿಕಾರಿಯನ್ನು ನಿಯಮಿಸಬರುತ್ತಿದೆ—ಇನ್ನರ ಉತ್ತರಾಧಿಕಾರಿಯೆನ್ನು ನೇಮಿಸಲು ಕಷ್ಟ ತಾವತ್ತಯಗಳೂ ಹೆಚ್ಚಿ ತಮ್ಮ ಪಾಲಿನೆಗೆ ತೊಡಕುಂಟಾಗುವುದಾಗಿ ಪ್ರಜೆಗಳು ನಂಬಿ, ಅವರು ವರ್ಧಂತಿದೊಡನೆ ಸಂಪೂರ್ಣ ಭಕ್ತರಾಗಿಲ್ಲದಿದ್ದರೂ ಪೂರ್ಣ ಭಕ್ತಿಘಾಂದ ನಡೆದುಕೊಳ್ಳುವರು. ಕಮಲವುರದ ರಾಜರು ಒಮ್ಮೆ ವಿಲಾಯತಿಗೆ ಹೋದಾಗ್ಗೆ ' ಜರ್ಮನಿಗೆ ತೆರಳಿದ್ದರು. ರಾಜರು ಮಾಜೀ ಕೈಸರರಲ್ಲಿದ್ದಂತೆ, ದಲಾಯಿತನು ಕೈಸರರ ದಲಾಯಿತರಲ್ಲಿದ್ದನು. ಕೈಸರರ ಕಾರ್ಯನಿರ್ವಾಹ ಕ್ರಮಗಳನ್ನು ಆ ದಲಾಯಿತನಿಂದ ಈ ದಲಾಯಿತನು ಸುಧಾರಿತ ರೀತಿಯಲ್ಲಿ ತಿಳಿದುಕೊಂಡಿದ್ದನು. ಅವರು ಈ ಸಂದಿಗ್ಧ ಸಮಯದಲ್ಲಿ ತಪ್ಪನ ಯಾವುದೋ ಒಂದು ಉಪಾಯವನ್ನು ಕಂಡೇ ಪಡೆದನು. ಅದನ್ನು ಗೋಪನವಾಗಿ ರಾಜರಿಗೆ ತಿಳಿಸುವುದಕ್ಕಾಗಿ ಸಂಗೀತ ಮಾಡಲು, ವೈದ್ಯರು ರೋಗಿಯ ಬಳಿಗೆ ಸಡಿಯಬಹುದಾಗಿ ಕೂಡಲೆ ಅವಕಾಶವಾಯಿತು. ವೈದ್ಯರು ಕೆಪ್ಪಟೆಯ ಆಕ್ರಮಣವನ್ನು ಯುದಾರಾಯನ ಸೈನ್ಯ ಹಕ್ಕಾಗಿ ಕೂಡಲೆ ತೆರಳಿದರು.

ಹೇಗೂ ಇರಲಿ—ದಲಾಯಿತನು ರಾಜರೊಡನೆ ಏನು ಹೇಳಿದನೋ, ನಾವರಿಯೆವು. ಆದೇ ನಿಮಿಷಗಳಲ್ಲಿ ದಲಾಯಿತನು, ವಿಂಚು ಹರಿಯುವಂತೆ, ಆ ಮಹಡಿಯಿಂದ ಸರ್ರನೆ ಇಳಿದು ಮಾಯೆ ನದನು. ರಾಜರು, ಉತ್ತೇಜಿತರಾಗಿ ಅತ್ತಿತ್ತ, ಸಾದಚಾಲನೆ ನೂಡುತ್ತ (ರೈಟ್—ರಿಫ್ಟ್—ಎಬೌಟ್—ಟರ್ನ್) ಇಂಪಾಗಿ, ಮಿಸೆಗಳನ್ನೂ ಹುಬ್ಬುಗಳನ್ನೂ ತಲೆಗೂದಲನ್ನೂ ಕೈಗಳಿಂದ ನವರುತ್ತ, ಶಹಬಾಸ್! ತೈಲಬುದ್ಧಿ! ರುಸ್ತುಮ್ ಉವಾಯ! ಪಕ್ಕಾ ಸಾಧನೆ! ಕುಲದೇವರ ಪ್ರಸಾದ! ಭಳಿರೆ ದಲಾಯಿತ! ಸಾಧಾರಣ ರಾಜರ ವಂಶದ ಎರೆ ಕವರಿನ ಯಜಮಾನನಾಗಲು ಯೋಗ್ಯನು! ಇವನು ಯಜಮಾನನಾಗಿದ್ದರೆ ನಾನೆಲ್ಲ ರಾಜನಾಗುತ್ತಿದ್ದೆನು? ಅಹ! ಅದೇ ನಾನು ರಾಜನಾದೆನು, ಇವನು ದಲಾಯಿತನಾದನು!! ಎಂದೆಂದುಕೊಳ್ಳುತ್ತ,—ಕಿವಿಯೊಳಗೆ ಗುಂಗಾದಿ ನೊಣ ಹೊಕ್ಕರೆ ತಲೆಯನ್ನು ಬಿಲವಾಗಿ ಅತ್ತಿತ್ತ ತಿರುಗಿಸುವಂತೆ,—ದಲಾಯಿತನು ಸೂಚಿಸಿದ ಉಪಾಯಕ್ಕೆ ಮೆಚ್ಚಿ ನಗುತ್ತ ತಲೆಯನ್ನಲ್ಲಾಡಿಸುತ್ತಿದ್ದನು. ಹಾಗೆ ಮುನ್ನಡೆದು ಸಂಸ್ಥಿಸ್ತಿಯಿಂದ ಕುಮಾರನ ಕೊಠಡಿಯನ್ನು ಪ್ರವೇಶಿಸಿ, ನಗುತ್ತ ನಾಲ್ಕಾರು ನಿಮಿಷಗಳಾದ ಬಳಿಕ ಮಾತ್ರ, ವೈದ್ಯನೂ ಕುಮಾರನೂ ಬಾಯ್ತೆರೆದು ತನ್ನನ್ನು ನೋಡುತ್ತಲೂ ಒಬ್ಬರನ್ನೊಬ್ಬರು ನೋಡಿ ನಿಸುನಗುತ್ತಲೂ ಇದ್ದುದನ್ನು ತಿಳಿದು,—'ಏನು? ನಾಳಿನ ಮುಹೂರ್ತದ ನೆನಪಿರಲಿ. ಹೇಂ?' ಎಂದು ಗಂಭೀರವಾಗಿರಲು ಯತ್ನಿಸಿ, ಎಳೇ ಪ್ರಾಯದಲ್ಲಿ ತನ್ನ ತಂದೆ ಸತ್ತಂದಿನ ಗೋಳಾಟದ ನೆನಪನ್ನು ತನ್ನ ನಗುವಿಗೆ ಲೇಪಿಸಿ, ಅದನ್ನು ತಿದ್ದಿಕೊಂಡನು.

ಆ ಮೇಲೆ ರಾಜನು—"ಮಗೂ, ಆ ಮಗ್ಗುಲಿಗೆ ತಿರುಗಿ ಸುಖವಾಗಿ ನಿದ್ದೆಹೋಗು." ಎನ್ನುತ್ತ, ವಿಸಿ ಕಡಿದು, ವೈದ್ಯನ ಕೈಹಿಡಿದುಕೊಂಡು ಹೊರಟೇ ಹೋದನು.

ರಾತ್ರಿ. ಊಟ ಸಾಧ್ಯವಿಲ್ಲ. ಹಾಲೂ ಹಲ್ಲಿಗಾಗದು. ಮೈ ಬೆಚ್ಚಗಾಗಿಯೇ ಇದೆ. ಹಾಸಿಗೆ ಬೇಕಾದಷ್ಟು ಆದರ ಕೊಟ್ಟಿದೆ. ಆ ಮಗ್ಗುಲಿಂದ ಈ ಮಗ್ಗುಲಿಗೆ ತಿರುಗುವಾಗ, ಈ ಕೆನ್ನೆಯು ಆ ಕೆನ್ನೆಗೆ ಥವರಾಕು ಕೊಡುವಂತೆ ಸೆಳೆತ, ಸಿಡಿತ. ಎದ್ದುಕೊಂಡರೆ, ವೈದ್ಯರ ಅಭಿಪ್ರಾಯದಲ್ಲಿ, ಮರಣ. ಬಿದ್ದುಕೊಂಡರೆ, ನಿದ್ದೆ ಹತ್ತದು. ಅರೆಮರುಳಲ್ಲಿಯೇ ಬಿದ್ದುಕೊಂಡನು. ಅದೂ ಸುಖವಾಗಿ ಸಾಗಿತೆ? ಕನಸೂ 'ಬಿತ್ತು'.—ಒಂದು ತಗುಣೆ ಹೆಗ್ಗಣವನ್ನು ಕಡಿಯತೆಂತೆ; ಹೆಗ್ಗಣವು ಮುದಿಯಾನೆಯ ಸುಂಡಿಲ್ಲಿ ನುಗ್ಗಿತಂತೆ; ಮುದಿಯಾನೆಯು ಯಾವನೋ ಒಬ್ಬ ಕಾಂಚನಲತಾ ಕೋನುಲಾಂಗಿಯ ಕೊರಳಿಗೆ ಆದರ ಸುಂಡಿಲನ್ನು ಸುತ್ತಿತಂತೆ; ಕೋನುಲಾಂಗಿಯು ಇವನೇ ರಾಜಕುಮಾರನ ಬಳಿಗೆ ಧಾವಿಸಿ ಬಂದಳಂತೆ; ಅವಳ ಹಿಂದೆಯೇ ಹೆಗ್ಗಣವನ್ನು ಸುಂದಿಳಿಳಗೆ ಇಟ್ಟುಕೊಂಡ ಮುದಿಯಾನೆ; ಅದನ್ನು ಕಂಡು ಕುಮಾರನು ಬೆದರಿದನು. ಕನ್ಯೆಯನ್ನು ನೋಡಲೊ, ಆನೆಯನ್ನು ನೋಡಲೊ? ಕನ್ಯೆ ಬೇಡುತ್ತಾಳೆ, ಆನೆ ಕಾಡುತ್ತಿದೆ; ಪ್ರಾಣಕ್ಕೆ ಬಂತು. ಆ ನೋಟವೇ ಬೇಡವೆಂದು, ಕುಮಾರನು ಮಗ್ಗುಲನ್ನೇ ಬದಲಾಯಿಸಿದನು. ಆಗ, ಆನೆಯು ಸುಂಡಿಲನ್ನು ಕನ್ಯೆಯ ಕೊರಳಿಂದ ಹೆಂತೆಗೆಯುತ್ತು, ಅದರಿಂದ ಹೆಗ್ಗಣ ಹೊರಕ್ಕೆ ಹಾರಿತು. ಆದರ ಬೆನ್ನ ಮೇಲಿಂದ ತಗುಣೆ ಕೆಳಕ್ಕಿಳಿಯಿತು. ಕುಮಾರನ ಮಂಚದ ಕಾಲನ್ನು ವರುತ್ತಾ ಹಾಸುಗೆ ಹತ್ತಿ, ಅವನ ಕೆನ್ನೆಯನ್ನೆ ಕಡಿಯಿತು. ಆಗಲೆ, ಕೆನ್ನೆಯಿಂದಲೇ ಕುಮಾರನು ಅದನ್ನು ಬಲವಾಗಿ ಬತ್ತಿ ಜಜ್ಜಿದನು. ಕೆನ್ನೆಯ ನೋವು ದಬ್ಬಣದಂತಾಗಿ, ಅವನ ದವಡೆಯನ್ನು ಹೊಕ್ಕು ಮೆದುಳಿಂದ ಹೊರಟಿತು. ಕುಮಾರನು ಚೀರಿ ಎದ್ದನು. ನೋಡಿದರೆ ಅಲ್ಲಿ ಯಾರೂ ಇಲ್ಲ. ತಗುಣೆ ಕಡಿದಿರಬಹುದು. ಅನೆ ಗೀನೆ ಇಲ್ಲವೆಂದು ನಕ್ಕನು; ಕನ್ಯೆಯಲ್ಲವೆಂದು ಬಿಸುಸುಯ್ದನು. ಕೆಪ್ಪಟೆಯಾದರೆ, ಇಂತಹವೇ ಕನಸುಗಳು, ಎಂದನು.

ಬೆಳಗಾಯ್ತು. ಕನಸಿನ ಬಾಧೆಯಿಂದ ನಿದ್ದೆ ಹಿಡಿಯಲು ತಡವಾದುದರಿಂದ, ಎದ್ದೇಳುವಾಗ, ಎರಡನೆ ಪ್ರಹರ ಪ್ರಾರಂಭವಾಗಿದೆ. ಹಾಸುಗೆಯ ತಲೆಯ ಬಳಿಯಲ್ಲಿಯೆ, ಕಿಟಿಕಿ. ಅದಕ್ಕೆ ವರಡೆಯಿದೆ. ಅದನ್ನು ಸರಿಯಿಸಿದರೆ ಗಾಜಿನ ಮುಚ್ಚಿಗೆಯಿದೆ. ಹೊರಗೆ ನಡೆವುದನ್ನೆಲ್ಲ ಕಾಣಬಹುದು. ಕನ್ನಡಿಯ ನೋಡಿದರೆ, ಅವನು ನಂಬದ ನೋಟ. ನೋಡಿ, ತಾನು ವೈದ್ಯರ 'ಅಭಿಪ್ರಾಯದಂತೆ ಸತ್ತಿದ್ದನೋ ಎಂದು ಕೆನ್ನೆ ಮುಟ್ಟಿ ನೋಡಿದನು. ಬೇನೆ ಇಹೆ. ಸತ್ತಿಲ್ಲ ವೆಂದು ನಂಬಿದನು; ಆದರೂ ಆ ನೋಟವನ್ನು ನಂಬಲಾರನು. ಏನದು?

ಹೊರಗೆ ಮಹಡಿಯ ಮೇಲೆ, ಸ್ಕೌಂಡರನ ಗಾತ್ರವನ್ನೆ ನುಡಿದುನೊಬ್ಬನು, ವಿಜಯದಶಮಿಯ ಉತ್ಸವದ ಪೋಷಾಕಿನಲ್ಲಿ ಮುಂದೆ ಬರುತ್ತಿದ್ದನು. ಅವನ ಬಲಭಾಗದಲ್ಲಿ, ಕುಮಾರನ ವಿಕಾರರಾಜನು ಅದೇ ಉತ್ಸವದ ಪೋಷಾಕಿನಲ್ಲಿ, ಅವನ ಕಾಂಗೆ ಸರಿಯಾಗಿ ಕಾಲು ಇಡುತ್ತ ಬರುತ್ತಿದ್ದನು. ಮೊದಲಿನವನು ಹೊರಕ ರಾಜನೆಂದು ಅವನನ್ನು ಎಂದೂ ಕಾಣದಿದ್ದ ಕುಮಾರನು, ವಾಚಕ ಮಹಾಶಯರಂತೆಯೆ, ಊಹಿಸಿದನು. ಬಲಭಾಗದಲ್ಲಿಂತೊ ತಂದೆಯಿರುವನು. ಇನ್ನೇನಾಗುವುದೋ! ಪ್ರಜೆಗಳೇನೆಂದಾರೊ! ಎಂದು ಧಾವಿಸಿ ಕುಮಾರನು ಕಿವಿ ಕಣ್ಣುಗಳಿರಡನ್ನೂ ಮುಚ್ಚಿಕೊಂಡನು. ಪ್ರಚಂಡ ಕೋಲಾಹಲವಾಯಿತು. ಮುಚ್ಚಿದ್ದ ಕಿವಿಕಣ್ಣುಗಳಿರೆಡೂ ಒತ್ತಿದನ್ನು ಬಲವಾಗಿ ತೆರೆದೇ ಹೋದುವು! ನಿಜವಾಗಿ, ಯುದ್ಧವಾಗುವುದು! ಸೈನ್ಯಗಳ ಯುದ್ಧಕೋಲಾಹಲವಿದು! ಇನ್ನು ಗತಿಯೇನು? ನನಗೆ ಎದ್ದರೆ ಮರಣವೆಂದು, ನಾನೇಳದೆ ಅಷ್ಟೂ ಜನರಿಗೆ ಮರಣವಾಗುವುದಲ್ಲ! ಅಯ್ಯೋ, ಪುನಃ ಅದರ ಮರುಧ್ವನಿಯಾಯಿತು, ಮೂರು ಮೂರು ಸಲವೂ ಆಯಿತು. ಇನ್ನೇನು ಗತಿ? ಕೆಪ್ಪಟೆಯಿಂದ ರಾಜ್ಯವೇ ಕೆಡುವುದಲ್ಲ! ಎನ್ನುತ್ತ ಕುಮಾರನು ದಿಗ್ಭ್ರಾಂತನಾಗುವುದರೊಳಗೆ, ಎಲ್ಲವೂ ಸದ್ದಿಲ್ಲದಷ್ಟು ಶಾಂತನಾಯಿತು. ಒಂದು ಕ್ಷಣದ ಹಿಂದೆ ಆದ ಆ ಹೃದಯಭೇದಕ ಘೋಷ ಗರ್ಜನೆಗಳೆಲ್ಲಿ, ಮತ್ತೀಗ ಕನ್ನ ಹೃದಯದ ಬಡಿದಾಟನನ್ನೇ ಕೇಳಿಸುವಂತೆ ಅತಿ ಮೌನವಾದ ಈ ಶಾಂತತೆಯೆಲ್ಲಿ? ಕುಮಾರನು ಒಂದೂ ತಿಳಿಯದೆ, ಇದೂ ನಿನ್ನೆ ರಾತ್ರಿಯ ಕನಸಿನ ಎರಡನೆಯ ಆವೃತ್ತಿಯೆಂದೇ ಭಾವಿಸಿ, ಆಗಲೂ ಒಂದು ತಗುಣೆ ಕಡಿದರಾಗಬಹುದಾಗಿ ಭಾವಿಸಿದನು.

ಮೆಲ್ಲನೆ, ಕಣ್ತೆರುಗಿಸಿ ಹೊರಕ್ಕೆ ನೋಡಿದನು. ಅತಿಥಿ ರಾಜನೂ ತನ್ನ ತಂದೆಯೂ ಮಹಡಿಯಲ್ಲಿಲ್ಲ. ದಲಾಯಿತನೂ ಮತ್ತೊಬ್ಬ ವ್ಯಕ್ತಿಯೂ ಮಾತ್ರ ಇರುವರು. ವ್ಯಕ್ತಿಯು ಸಾಯಲು ಸಿದ್ಧನಾದ ಸಿಪಾಯಿಯಂತೆ, ಒಂದಿಷ್ಟೂ ಅಲ್ಲಾಡದೆ ಕಂಬ ನೆಟ್ಟಂತೆ, ನಿಂತಿರುವನು. ಶವನೇ? ಅಲ್ಲ, ಈಗ ತಾನೆ ಬಲಗೈಯೆತ್ತಿದನು. ಅದೋ ಎಡಗೈ ಎತ್ತಿದನು. ಎರಡೂ ಕೈಜೋಡಿಸಿ, ನಮಸ್ಕಾರ ಮಾಡಿದನು. ಇವನಾರು? ಪುನಃ ಪ್ರಚಂಡ ಘೋಷವಾದುದೇ? ಅರಮನೆಯ ಮಹಡಿಯ ಮೇಲೆ, ಕಾಣಿರಬೇಕಾದ ಸ್ಥಾನದಲ್ಲಿ ಇವನಾರು ಇಷ್ಟು ಪ್ರಚಂಡ ಘೋಷವೆಬ್ಬಿಸಲು ಕಾರಣನಾದವನು? ಎನ್ನುವುದರೊಳಗಾಗಿ, ದಲಾಯಿತನು ಆ ವ್ಯಕ್ತಿಯನ್ನು ನಡೆಸಿದಂತಾಯಿತು. ವ್ಯಕ್ತಿಯು ಕಾಲಿನ ಮೇಲೆ ಕಾಲಿಟ್ಟು ನಡೆವ ಬದಲಾಗಿ, ಎರಡೂ ಕಾಲುಗಳಿಂದ ಸರ್ರನೆ ನಡೆದಂತಾಯಿತು. ಹಾಗಾಗುತ್ತಲೆ, ಕುಮಾರನ ಕಡೆಗೆ ವ್ಯಕ್ತಿಯ ಮುಖವು ತಿರುಗಿತು. ಏನು ನೋಡುವನು? ವಿಜಯದಶಮಿಯ ದಿನ ತಾನು ಧರಿಸುವ ಪೋಷಾಕಿನಲ್ಲಿ ಈ ವ್ಯಕ್ತಿ ನಿಂದಿರುವನು! 'ನನ್ನಂತೆಯೆ ಇರುವನು!' ನಾನೇ ಏನು? ಅವನೇ ರಾಜಕುಮಾರನಾದರೆ, ನಾನ್ಯಾರು? ನಾನು ರಾಜಕುಮಾರನಾದರೆ, ಅವನ್ಯಾರು? ನನ್ನ ಮಾತೆಯು ಅವಳೆ ಮಕ್ಕಳೆನ್ನು ಹೆತ್ತುದಿಲ್ಲ; ಹೆತ್ತಿದ್ದರೂ, ಇದುವರೆಗೆ ಈ ವ್ಯಕ್ತಿಯು ಎಲ್ಲಿದ್ದಿತು? ಈಗ ಎಲ್ಲಿಂದೆ ಬಂದೊದಗಿತು?' ಎಂದು ಕುಮಾರನು 'ಆಲೋಚಿಸುತ್ತ, ತತ್ತರಿಸುತ್ತ, ಕೆಪ್ಪಟೆಯನ್ನು ಗಣನೆಗೆ ತಾರದೆ, ಹಾಸಿಗೆ ಮೇಲೆ ಬಿದ್ದು ಬಿಟ್ಟನು.

ಹಾಗೆಯೇ ಹತ್ತಿರದ ಒಂದು ಧ್ವನಿ ಕೇಳಿ, ಕುಮಾರನು ಕಣ್ತೆರೆದನು. ಈ ಮಗ್ಗುಲಿಗೆ ತಿರುಗಿದನು. ಅಲ್ಲಿ ರಾಜನು ನಿಂತಿದ್ದನು. ರಾಜನು ಮಗನನ್ನು ಅಂದು ತನಗಾದ ಸಂತೋಷದಿಂದ ತಕ್ಕೈಸುವುದಕ್ಕಾಗಿ ಅವನ ಕೆನ್ನೆಯನ್ನು ತನ್ನ ಮುದ್ರೆಯುಂಗುರ ಧರಿಸಿದ ಕೈಯಿಂದ ಮುಟ್ಟಿದನು. "ಅಯ್ಯೋ, ಕೆಪ್ಪಟೆ! ಕೆಟ್ಟೆ!" ಎಂದು ಕುಮಾರನು ಮೋರೆ ಕಡಿಮಾಡಿ, ಪೂರ್ಣ ಎಚ್ಚರಗೊಂಡನು.

ರಾಜನು ಮಗನನ್ನು ಮಾತಾಡಿಸಿದನು. ಮೊದಲೇ ಅವನಿಗೆ ಕೆಪ್ಪಟೆ; ಬೇನೆ ಬೇಸರ; ಆಗಲೇ ನೋಡಿದ ವಿಚಿತ್ರ ನೋಟ; ಇನ್ನೇನು, ಅವನು ಮಾತನಾಡುವಂತಿಲ್ಲ.

ತಾನು ತಕ್ಕೈಸ ಹೋಗಿ, ಮಗನನ್ನು ಕುಕ್ಕಿದಂತಾಯಿತೆಂದು ರಾಜನಲ್ಲಿ ದುಃಖವು ಉಕ್ಕಿ ಬಂತು. ಓಮಗೂ, ನಿನಗೆ ಇಂದಿನ ಮುಹೂರ್ತದ ನೆನಪಿರಲಿ, ಎಂದಿನಲ್ಲವೆ? ನೀನು ಹಾಸಿನಿಂದೆದ್ದರೆ ವೈದ್ಯರು ಮರಣನನ್ನೆಸೂಚಿಸಿದ್ದರಲ್ಲವೆ ಅದಕ್ಕಾಗಿ ನಾನು ಉಪಾಯವನ್ನು ಮಾಡಿದೆನು. ಗೆದ್ದೆನು! ನಿನ್ನ ಅಪ್ಪನು ಗೆಲ್ಲಿದಿರುವನೆ? ಈ ದಲಾಯಿತನಾಗೇ ಗೊತ್ತು, ಅವನೂ ಇಂದಿನಿಂದ ಮೌನ, ಮೂಗ! ನಾಳಿಗೆ ಅಲ್ಲಾಡದೆ ತನಕ್ಕ ನಮ್ಮ ಅಡುಗೆ ಕೋಣೆಯಲ್ಲೇ ಅವನ ನಿವಾಸ. ಅದು ಅಲ್ಲಾಡಿದೊಡನೆ ಮತ್ತೆ ಅವನ ಬಾಯೊಳಗೆ ನಾಲಗೆ ಇರದು ಹೌ ಸಮಯದಲ್ಲಿ ರಾಜವೈಭವಕ್ಕೆ ನಾಲಗೆ ಬಂತು ಮಹದಲ್ಲಿ ಗಣಿಸಿ ವಿಗ್ರಹದ ದರ್ಶನಕ್ಕೆ ಬರುವವರ ವಿನೋದಕ್ಕಾಗಿ, ನಿನ್ನದೊಂದು ಮೂಕಿನ ಪ್ರತಿಮೆ ನಿರ್ಮಾಣಗೊಳ್ಳುವುದು. ಅದನ್ನು ಇವನೇ ನೋಡಿ ಮೆಚ್ಚಬೇಕಿದ್ದರೂ ಇವನಿ

...ಯಿ ಯಾರು ಮಾಡಿ ಹೊಟ್ಟೆ ಕಳ್ಳು, ಅವನನ್ನು ಇಂದಿನ ...ಸಂಜೆಗಾಗಿ, ನಿನ್ನ ಕಡುರಾತ್ರಿಗೆ ಇಲ್ಲಿಗೆ ಕರೆಯಿಸಿ ...ತು. ರಾಗ್ಯವೆಂದರೆ, ಅದರ ಕೈಗಳಲ್ಲಿ ಹೊಲಿಸಲಾಗಿ ...ಮಾಡಿಸಿದ್ದರು: "ಡಲಾಯಿತನು ಜಗ್ಗನನ್ನೆಕೆಂದೆ ...ತು ಕೈಮುಗಿ ನಮಸ್ಕಾರ ಮಾಡುವುದು. ಏನು ಎಷ್ಟು ...ಕಾರ್ಯಯುಷ! ಅದರಿಂದಾಗಿ ಈಗ ಆ ಕಾರುಣ್ಯ ಕಲೆಯು ...ನು ತಿಳಿಯಲಾದರೆ ನೀನೆಂದೇ ಭಾವಿಸಿದನು. ಪ್ರಜೆಗಳು ...ಯುಕೀರ್ತನೆಗಳನ್ನು ಮಾಡಿದರು. ಈಗ ನಾವು ಉಕಾಯು ...ಂಬ ಹೆಸರುಯನ್ನೆ ಗೆದ್ದೆವು. ಇನ್ನು ನಿನ್ನ ವಿವಾಹವೊಂದಿಗೆ ...ದೆ. ಇದಕ್ಕೆ ಸಿದ್ಧನಾಗೆಂದು ಪರಲು ನಿನ್ನ ಕೈಸೆ ಮುಟ್ಟಿ ...ನು. ನೀನು (ಅಯ್ಯೋ ಕೆಟ್ಟೆ ಎನ್ನುವಂತಾಯಿತು! ನನ್ನ ...ಗ್ಯ!)" ಎಂದು ಆನಂದಭಾಷ್ಪ ಸುರಿಸಿ ರಾಜಾ ಕುಮಾ ...ನಿಗೆ ವಿನಯವಾಗಿ ಹೇಳಿದನು:

ರಾಜಕುಮಾರನು, ಕೆಪ್ಪಟ್ಟೆ ನೀಡಿಸಿದರೂ, ರಾಜ ಕುಮಾರನಾಗಿಯೆ ಬೆಳೆದು ಬ್ರಾಳಿದವನೆಂದು ಮೊದಲೇ ಹೇಳಿರುವೆವು. ಅವನು ಈ ಠಕ್ಕನ್ನು ಮನ್ನಿಸಲಾರದೆ,— "ಅಪ್ಪಾ, ಕೆಪ್ಪಟೆ ಇರಲಿ, ಹೋಗಲಿ ನಾನು ಕಲಿಸಿ ಕೊಟ್ಟಂತಲ್ಲ, ಕಂದಂತೆ ಆದಿಯೇ ಆಡುವೆನು. ಈ ಹೊಂದೆಯ ಠಕ್ಕು ನನಗೆ ಒಲ್ಲದು. ನಾನೆಲ್ಲವನ್ನೂ ಹೋದಿ ತಿಳಿದೆನು. ನಾನೇನು? ರಾಜಕುಮಾರನೆ, ಹೊಂಬೆಯೆ? ಡಲಾಯಿತನು ಹಗ್ಗ ಎಳೆದಂತೆ ಕೈಚಾಚಿ ಬಗ್ಗಿಸಿ ನಮಸ್ಕರಿಸುವ ನಾನು ರಾಜಕುಮಾರನೆ, ಹೊಂಬೆಯೆ? ಪ್ರಜೆಗಳು ನನ್ನನ್ನೇನು ಬಲ್ಲರು, ಪ್ರೀತಿಸುವರು, ಶ್ಲಾಘಿಸುವರು, ಗೌರವಿಸುವರು? ಪ್ರಜೆಗಳಿಗೆ ಇವ್ವು , ಗದ್ದಲ, ಗೌಜು, ಮಾರೂಡು, ಬೇಡು ಇದ್ದರಾಯಿತು. ನನ್ನ ಪೋಷಾಕೇ ಅವರ ವಾತ್ಸಲ್ಯಕ್ಕೆ ಪಾತ್ರವಾಗಿದೆ. ಅದರೊಳಗೆ ಬೈಹುಲ್ಲು ತುಂಬಿಸಿದರೂ ಒಂದೇ, ಗರಿಗಸಿಕೆ ಹುಲ್ಲು ತುಂಬಿಸಿದರೂ ಸರಿಯೆ, ಅವರಿಗೆ ಸಂಕ್ಷಿಪ್ತ. ನನಗೇ ರಾಜಕುಮಾರನ ಸಾಹಾಗಿದೆ. ಈ ಪಟಾಟನ ನನಗೆ ಬೇಡ. ಆ ಗೊಂಬೆಯೇ ಇಲ್ಲಿದ್ದುಕೊಳ್ಳಲಿ. ನಮಗೂ ಆ ರಾಜರಿಗೂ ಈ ರೀತಿ ತೋರಲಾರದು,— ನನಗಂತೂ ಇದು ಬಿಡ್ರಾಗಿದೆ. ರಾಜ ಕುಮಾರನೆಂದರೆ ಸಕ್ಕವಾಗಿಯೂ ಒಂದು ಗೊಂಬೆಯೇ ಅಲ್ಲವೆ? ಕೈದುಸಬೇಕು, ಆದರೂ ಈ ಮಾತು ಸಕ್ಕ!" ಎಂದು ಗಂಭೀರನಾದನು.

ರಾಜನು (ಮರುಗಿದನೆ? ಬೆದರಿದನೆ? ಬೆಚ್ಚಿದನೆ? ಬೆರಗಾದನೆ!) ಇತ್ಯಾದಿ.

ರಾಜನು. ಕುಮಾರನ ಬೆನ್ನು ಕಟ್ಟಿ,—"ನೀನಿನ್ನೂ 28 ವರ್ಷ ಕೆಲವೇ ದಿನ. ಈ ಜಗತ್ತನ್ನು ನೋಡುತ್ತಿರುವೆ. ಜಗತ್ತಿನ ವಿಷಯ ಭಾವಿಸಿ, ನಾನೂ ಒಮ್ಮೆ ಸನ್ಯಾಸಿಯಾಗಬೇಕೆಂದಿದ್ದೆ, ನಿನ್ನಾಣೆ!" ಎಂದನು. ಮತ್ತೂ "ಎಲ್ಲಾ ರಾಜರೂ ಇಷ್ಟೇ ಅನುಭವನ್ನು ಒಂದಲ್ಲ ಮತ್ತೊಂದು ದಿನ ಪಡೆಯದೆ ಇಲ್ಲ. ನೀನ್ಯಾರೆಂಬ ಸತ್ಯವನ್ನು ನೀನೀಗ ಕಂಡು ಕೊಂಡೆ. ಆದರೆ ಜನರು ಮಾತ್ರ ನೀನ್ಯಾರೆಂಬುದನ್ನು ಕಂಡುಕೊಳ್ಳದಂತೆ ನಡೆ. ಇಷ್ಟೇ ರಾಜಲಕ್ಷಣ, ಅದೇ ರಾಜ ಲಕ್ಷಣ" ಎಂದು ಕೂಡಿಸಿದನು.

ರಾಜಕುಮಾರನ ಕೆಪ್ಪಟೆಯು ಕೆನ್ನೆಯಿಂದ ಮೈತುಂಬ ಹರಡಿ ಊದಿಕೊಂಡಷ್ಟು ಭಾರವಾಯಿತು. ಅವನು ಮುರು ಮಾತಿಲ್ಲದೆ, ಮುಹೂರ್ತ ಮಾತ್ರ ಇದ್ದನು. ತರುವಾಯ, "ಅಪ್ಪಾ, ಇರಬಹುದು. ಇದೇ ನೀತಿಯಾಗಿರಬಹುದು, ರೀತಿಯೂ ಆಗಿರಬಹುದು. ಆದರೆ ವಾಸ್ತವವಾಗಿ ನಮ್ಮ ಮೂವನೂ ಹೇಗೆಯೆ ಏನು? ನಂಬಲಾರೆನು. ಎಲ್ಲ ಅರಸು ಗಳೂ ಹೇಗೆಯೆ?" ಎಂದು ಕ್ಷೀಣ ಸ್ವರದಿಂದ ಕೇಳಿದನು.

ಅಪ್ಪರಲ್ಲಿ,—

ತೋಡೆಯ ಬಾಗಿಲಿನಾಡೆಯಿಂದ ಮೂವನ ಸವರಿಯು ಒಳಕ್ಕೆ ಕಾಲಿಟ್ಟಿತು. ಹಾಸಿಗೆಯ ಬಳಿನಿಂತು,— "ಮಹಾಶಯರೇ, ನೀವಿಬ್ಬರೂ ಸಂಭಾವಿತರು, ಗ್ರಹಸ್ಥರು, ಸತ್ಕರಂತರು. ನಮ್ಮ ಸಂಭಾವಿತತೆಯನ್ನೆಲ್ಲ ಮರೆಯಲ್ಲಿದ್ದು ಕೇಳುವ ಅವಕಾಶವು ನನಗುಂಟಾಗಿದ್ದಿತು. ಕೇಳಿದೆನು; ಇನ್ನು ಗ್ರಹಸ್ಥರಾದ ನಿಮ್ಮ ಬಳೆಯಲ್ಲಿ ಗ್ರಹಸ್ಥವಳಿಗೆ ಯಿಂದೇ ನುಡಿಯುನೆನು. ನಾನು ಹವಿಾರರಾಜನೇ ಅಲ್ಲ; ನಾನು ಜಾನಕೀಜೀವನ ನಾಟಕ ಕಂಪೆನಿಯ ನಟನು; ಏನೋ ಆ ರಾಜರಂತೆ ವೇಷಹಾಕಿಕೊಂಡರೆ ಕಾಣುತ್ತೇನೆ. ಆ ರಾಜರ ಆಜ್ಞಾನುಸಾರ ಅವರ ನೋಕರಿಯಲ್ಲಿದ್ದು, ಇಂತಹ ಸಂಚಾರಗಳಲ್ಲಿ ದಿನಕ್ಕೆ ಹತ್ತು ರೂಪಾಯಿ ಭತ್ತೆಯ ಬಗ್ಗೆ ನಾನು ರಾಜನಾಗುತ್ತೇನೆ" ಎಂದೇ ನುಡಿದುದಾಯಿತು.

ಮಾರನೆಯ ದಿನವೂ ಕೆಪ್ಪಟೆ ಇದೆ. ಬೆಳಗ್ಗೆ ಡಲಾಯಿತನನ್ನು ಕರೆದು, ರಾಜಕುಮಾರನು, "ಇದೋ, ನಾನು ವಿವಾಹ ನಿಶ್ಚಯವಾದುದಕ್ಕಾಗಿ, ಊರಲ್ಲಿ ಪ್ರಜೆಗಳ ಮುಂದೆ ಸುರಿದು, ಹೂಮಳೆಯಲ್ಲಿ ಮಿಂದು ಬರಬೇಕಾಗಿದೆ. ಇದೋ, ನನ್ನ ಉಡುಪು. ಇದೋ ನೂರು ರೂಪ್ಯಾಯ ಚೀಲ. ರಾಯ ಭಟ್ರಲ್ಲಿಗೆ ತೆರಳಿ, ಮುಂದಿನ ಕಾರ್ಯವನ್ನೆಲ್ಲ ಸಾಂಗ ವಾಗಿ ಜರುಗಿಸು" ಎಂದು ಗಂಭೀರವಾಗಿ ಅಪ್ಪಣೆ ಕೊಟ್ಟನು.

ಕುಮಾರನ ವಿವಾಹ ನಿಶ್ಚಯವಾಗಿದೆ ಎಂದು, ನಾವು ಕಾಫೀ ವಿಲಾಸಕ್ಕೆ ತೆರಳಿ, ಎಂದಿನಂತೆ "ಪಾಲೀಕಾಫಿ" ಕೇಳಿದೆ, "ಒಂದು ಕವ್ ಕೊ-ಕ್ಕೂ-ಕ್ಕೂಡಿ" ಎನ್ನುವನ್ನೆ ಗಂಭೀರವಾಗಿ ಹೇಗೆ ಅಪ್ಪಣೆ ಮಾಡಿದನಂತೆ, ಈ ಕೆಪ್ಪಟೆ—ರಾಯ!

ಮಾಯಾವಾದದ ಪುರೋಭೂಮಿಯು ಉತ್ತರ ಧ್ರುವವು.

ಲೇಖಕರು:—ಮುಂಬಾಯಿ ಬೊಂಬೈ ಕ್ರಾನಿಕಲ್, ಇಂಡಿಯನ್ ನೇಶನಲ್ ಹೆರಾಲ್ಡ್ ಪತ್ರಿಕೆಗಳ ಉವಸಂಪಾದಕರಾಗಿದ್ದ

ಶ್ರೀಯುತ ಆರ್. ಕೆ. ಪ್ರಭು.

"ಮಾಯೆ" ಎಂಬ ಪದವೂ ಅದರ ರೂಪಾಂತರಗಳೂ ನಾಲ್ಕು ವೇದಗಳಲ್ಲಿ ಬಹಳ ಬಾರಿ ಬರುತ್ತವೆ. ಆದರೆ ವೇದೋತ್ತರ ಕಾಲದ ತತ್ವಜ್ಞಾನದ ಗ್ರಂಥಗಳಲ್ಲಿ ತುಂಬಿ ಕಾಣಿಸುವ "ಮಾಯಾವಾದ"ವೆಂಬುದು ವೈದಿಕ ಯುಗಕ್ಕೆ ನವೀನವಾಗಿತ್ತು ಎಂಬುದು ತತ್ವಜ್ಞಾನಿಗಳ ಮತವು. ವೈದಿಕ ಯುಗದ ಗ್ರಂಥಗಳಲ್ಲಿ — ಅಂದರೆ, ಯಜ್ಞೋಪ, ಅಥರ್ವ ವೇದ, ಅಲ್ಲದೆ ಕೆಲವೊಂದು ಬ್ರಾಹ್ಮಣಗಳಲ್ಲಿ — ಮಾಯೆ ಎಂಬ ಮಾತಿಗೆ, ಇಂದ್ರಾದಿ ದೇವತೆಗಳಲ್ಲಿ ಕಂಡುಬರುವ ವಿಚಿತ್ರ ಇಲ್ಲವೆ ಅದ್ಭುತ ಶಕ್ತಿಗಳೆಂಬ ಅರ್ಥವಾಗುವುದು. ಕೆಲವೊಂದೆಡೆಯಲ್ಲಿ ಆ ಮಾತು ಕನಟ, ಕಾಯುಕ್ತೆ ಎಂಬ ಅರ್ಥದಲ್ಲೂ ಉಪಯೋಗಿಸಲ್ಪಟ್ಟಿದೆ. ಆದರೆ ವೈದಿಕ ಯುಗಕ್ಕೂ ಮುಂದೆ ಸರಿದಂತೆ, ಅದರಲ್ಲಿಯೂ ಕೊನೆಕೊನೆಗಾದ ಉಪನಿಷತ್ತುಗಳಲ್ಲಿ, ಮಾಯೆ ಎಂಬುದನ್ನು—ವಿಶ್ವವು ಸೃಷ್ಟಿಯಾದ ಬಗೆಯನ್ನು ವಿವರಿಸುವ ಅರ್ಥದಲ್ಲೂ, ಇದಕ್ಕೂ ಆತ್ಮನಿಗೂ ಇರುವ ಸಂಬಂಧವನ್ನು ವಿವರಿಸುವ ವಿಚಾರ ಧಲ್ಲೂ ಉಪಯೋಗಿಸಿದಂತೆ ಕಂಡುಬರುವುದು. ಅಂದರೆ, ವೈದಿಕ ಯುಗದಲ್ಲಿ ಮಾಯಾವಿಜ್ಞಾನವು ನಿಶ್ಚವನ್ನು ರೂಪಿಸಿರುವ ಸತ್‌ಮತ್ತು ಅಸತ್ ಇಲ್ಲವೆ ಪುರುಷ ಮತ್ತು ಪ್ರಕೃತಿ ಇವುಗಳ ವಿಚಿತ್ರ ಸಂಬಂಧವನ್ನು ಬಣ್ಣಿಸುವ ವಿಚಾರ ವಾಗಿದೆ. ಇದನ್ನು ಒಂದು ವೆಂಗಡದವರು ಪುರುಷನ ಆತ್ಮ ಶಕ್ತಿಯೆಂದು ತಿಳಿಯುವರು; ಇನ್ನೊಂದು ವಂಗಡದವರು ಇದೇ ಪ್ರಕೃತಿಯೆಂದು ಹೇಳುವರು. ಈ ಉಭಯ ವೆಂಗಡದವರೂ ಈ ಮಾಯಾವಾದಕ್ಕೆ ಶ್ರುತಿಗಳನ್ನು ಆಧಾರವಾಗಿ ತೋರುವರು.

ಸತ್ ಅಸತ್, ಪುರುಷ ಪ್ರಕೃತಿ ಎಂಬ ವಿರೋಧಾಭಾಸ ಗತೆಯಾಗಿರುವ ಈ ಮಾಯಾ ಸಿದ್ಧಾಂತದ ಒಟ್ಟಿಗೆನೇ ಸೃಷ್ಟಿ ವಾದ, ತ್ರಿಗುಣಗಳು, ನಾಮರೂಪಗಳು, ಕಲ್ಪಗಳು ಇವೇ ಮೊದಲಾದ ಇತರ ವಾದಗಳು ಸಹ ಇವೆಯೆಂಬುದು ಶ್ರುತ್ಯಭ್ಯಾಯಿಗೆ ಕಂಡುಬರಬಹುದು. ಆದರೆ ವೈದಿಕ ಯುಗದಲ್ಲಿ ಕಂಡುಬರುವ "ಮಾಯೆ"ಯು—ಕಲ್ಪನೆಗಳಿಗೂ, ಅನಂತರ ಕಂಡುಬರುವ ಮಾಯಾವಾದದ ತತ್ವಗಳಿಗೂ ಇರುವ ಅಂತರವನ್ನು ಯಾವ ಧಾರಣೆಯ ಅಭ್ಯಾಸವೂ ಬಿಡಿಸಲು ಶಕ್ತವಿಲ್ಲ. ಹಾಗೆಯೇ ಈ ತತ್ವ, ಅಂದರೆ ತ್ರಿಗುಣಗಳು, ನಾಮರೂಪ, ಕಲ್ಪ—ಇವೆಲ್ಲಗಳ ನಿಜವಾದ ಮೂಲವೇನಿದ್ದಿರಬಹುದು— ಎಂದು ತಿಳಿಯಲು ಯತ್ನಗಳು ನಡೆದಿಲ್ಲ.

ಈ ಸತ್ ಅಸತ್, ಪುರುಷ ಪ್ರಕೃತಿ ಇತ್ಯಾದಿಗಳನ್ನೊಳಗೊಂಡ ಮಾಯಾವಾದದ ಮೂಲಕಲ್ಪನೆಯು ನಮ್ಮ ಕೈಗೆ ಎಟಕಬೇಕಾದರೆ, ಶ್ರೀ ಕೃ. ಬಾಲಗಂಗಾಧರ ತಿಲಕರು ಹೇಳಿರುವ, ಆರ್ಯರ ಆದಿ ನಿವಾಸಸ್ಥಾನವಾದ ಧ್ರುವ ಪ್ರದೇಶದ ಅಸ್ಪುಟ ಇತಿಹಾಸದ ಕಡೆಗೆ ಮನಸ್ಸನ್ನು ತಿರುಗಿಸಬೇಕು. ಈ ನನ್ನ ಲೇಖನವಾದರೂ ಅದನ್ನೇ ತೋರಿಸಲಿರುವುದು. ನಾವು ಒಮ್ಮೆ ಧ್ರುವಪ್ರದೇಶದಲ್ಲಿನ ದೃಶ್ಯವಿಶೇಷವನ್ನು ಗ್ರಹಿಸಬಲ್ಲೆವಾದರೆ, ಮುಂದೆ ಅವು ಗಳಿಂದಲೇ ಇಲ್ಲವೇ ಅವುಗಳ ಸ್ಮರಣೆಯಿಂದಲೇ, ಮಾಯೆ, ಸತ್ ಅಸತ್, ಪುರುಷ ಪ್ರಕೃತಿ, ತ್ರಿಗುಣ ಇತ್ಯಾದಿಗಳು ತೊಡಗಿದುವೆಂಬುದು ತೀರ ಸ್ಪಷ್ಟವಾಗುವುದು. ಶ್ರೀ ತಿಲಕರೂ ಸೂಚಿಸಿದ ಸಿದ್ಧಾಂತವನ್ನು ಈ ಲೇಖನದಲ್ಲಿ ನಾನು ಪ್ರತಿಪಾದಿಸುವ ಗೋಜಿಗೆ ಹೋಗುವುದಿಲ್ಲ. ನನಗಂತು, ಈ ವಿಷಯದಲ್ಲಿ ನಾನು ಮಾಡಿದ ಇಪ್ಪತ್ತು ವರ್ಷಗಳ ಅಧ್ಯಯನವು ಇದೇ ನಿಜವೆಂದು ಧೃಡಪಡಿಸಿದೆ. ಓದುಗರಾದರೂ, ಅವರ ಮೂಲನಿವಾಸವು ಉತ್ತರಧ್ರುವ ಪ್ರಾಂತವಾಗಿತ್ತೆಂಬು ಸ್ಥೀಕರಿಸಿದ್ದಲ್ಲಿ ಮುಂದೆ ಅವರಿಗೆ, ಪರಿಶೀಲನೆಯಿಂದ ಈ ಮಾಯಾ ವಾದವೂ ಅದಕ್ಕೆ ಸಂಬಂಧಿಸಿದ ಸತ್ ಅಸತ್, ಪುರುಷ ಪ್ರಕೃತಿ ಮುಂತಾದ ವಿಷಯಗಳ ಬೇರೂ ಧ್ರುವಪ್ರದೇಶದ ಘಟನಾವಿಶೇಷಗಳಲ್ಲಿದೆಯೆಂಬುದು ಸ್ಪಷ್ಟವಾಗದಿರದು.

ಈಗ ನಾವು ಧ್ರುವಪ್ರದೇಶದ ವೈಚಿತ್ರ್ಯವಿಶೇಷಗಳೇ ನೆಂದು ವರ್ಣಿಸಿಲಿಸುವ. ಅಲ್ಲಿನ ದೀರ್ಘ ರಾತ್ರಿ, ದೀರ್ಘ ಉಷಃಕಾಲ, ದೀರ್ಘ ಹಗಲುಗಳೇ ಅವು. ಅಲ್ಲಿ ನಿವಾಸಿಸುವವರ ಪಾಲಿಗೆ ರಾತ್ರಿಯು ಎಷ್ಟೋ ತಿಂಗಳ ಕಾಲ ವಿಸ್ತರಿಸುವುದು. ಅದು ಸರಿಯುತ್ತ ಬರಲು, ದೂರದ ದಿಗಂತದಲ್ಲಿ ಸೂರ್ಯನು ಮೆಲ್ಲನೆ ಬರಲಿರುವನು ಎಂಬುದಕ್ಕೆ ಪೂರ್ವ ಸೂಚನೆಯಾಗಿ ಬೆಳಕಿನ ಛಾಯೆಯು ಕಾಣಿಸುವುದು. ಬೆಳಕಿನ ಛಾಯೆ, ಕತ್ತಲು, ತಿರುಗಿ ಬೆಳಕಿನ ಛಾಯೆ, ಕತ್ತಲು ಮೇಲಿಂದ ಮೇಲೆ ಏಳೇ ವಾರಗಳವರೆಗೆ ಕಾಯೆಸುವುವು. ಈ ಬೆಳಕಿನ ಛಾಯೆಯು ದಿಗಂತದ ಸುತ್ತು ಆಲಿಸುವುದು. ಇದಾಗಲು, ಮೂರು ನಾಲ್ಕು ವಾರಗಳ ವರೆಗೂ ವಿಸ್ತರಿಸುವ ಮುಂಜಾನೆ ಇಲ್ಲವೆ ಉಷಃಕಾಲ. ಈ ಮುಂಜಾನೆಯೂ ದಿಗಂತವನ್ನು ಸುತ್ತುವರಿಯುವುದು. ತರುವಾಯ ಹಾಗೆ ಸೂರ್ಯನ ಬಿಂಬದ ಅಂತರ್ಭಾಗವು ತೋರಿಕೊಳ್ಳುವುದು. ಹೀಗೆಯೇ ಕೆಲವು ಸಮಯ ಉಷೆಯೂ ಸೂರ್ಯನ ಬಿಂಬಾಂಶವೂ ಮೇಲಿಂದ ಮೇಲೆ ಸುತ್ತುವರಿದಬಳಿಕ, ಬಲು ದಿನಗಳ ವರೆಗೆ ಸೂರ್ಯನ ಪೂರ್ಣ ಬಿಂಬವು ಕಾಣಬರುವುದು. ಈ ಕಾಲವೂ ಹಲವು ತಿಂಗಳ ತನಕ ವ್ಯಾಸಿಸುವುದು. ಈ ಅವಧಿಯಲ್ಲಿ ಸೂರ್ಯನು ದಿನದ ೨೪ ತಾಸುಗಳಲ್ಲೂ ದಿಗಂತದ ಮೇಲೆಯೇ ಕಾಣಿಸುವನು. ಬಳಿಕ ಸೂರ್ಯನ ದಕ್ಷಿಣಾಯಣವು ತೊಡಗುವುದು. ನಂತರ ಸೂರ್ಯನು ಕಂತುವನು. ಆಗ ಮುಸ್ಸಂಜೆಯ ಬೆಳಕೂ ಕತ್ತಲೂ ಮೇಲಿಂದ ಮೇಲೆ ಆವರ್ತನಗೊಳ್ಳುವು. ದಿನ ಹೋಗುತ್ತ ಕತ್ತಲೆಯೇ ಅಧಿಕವಾಗಿ ದೀರ್ಘ ರಾತ್ರಿಯು ತೊಡಗುವುದು.

ಪ್ರತಿ ವರುಷವು ಇದೇ ವಿಚಿತ್ರ ದೃಶ್ಯವಿಶೇಷವು ಅಲ್ಲಿ ಕಾಣಿಸುವುದು. ಎಷ್ಟೋ ತಿಂಗಳುಗಳ ತನಕ ವಿಶ್ವವನ್ನು ತಮುಸ್ಸು ಮುಸುಕಿ ಬಿಡುವುದು. ಬಳಿಕ ಮೆಲ್ಲಗೆ ನಸು ಬೆಳಕಿನ ಛಾಯೆಯು ಬಂದು ಬೆಳೆಯುತ್ತ ಬೆಳೆಯುತ್ತ, ಒಂದು ತಿಂಗಳಿನಷ್ಟು ದೀರ್ಘವಾದ ಉಷಃಕಾಲವೆನಿಸಿ ದಿಗಂತವನ್ನು ಸುತ್ತುವುದು. ಅದೂ ಸರಿದು ಇದು ವರೆಗೆ ತನ್ನ ಕತ್ತಲೆಯಿಂದ ವಿಶ್ವದ ರೂಪ, ನಾಮ, ಆಕಾರಗಳನ್ನು ಮರೆಯಿಸಿದ ರಾತ್ರಿಯನ್ನೋಡಿಸುವ ತೇಜಃಪುಂಜನಾದ ಸೂರ್ಯದೇವತೆಯು ಅವತರಿಸುವನು. ನವನ ಅನಂತವಾದ ಬೆಳಕು ನವಜೀವನವನ್ನು ಪ್ರೇರಿಸುವುದು. ಈ ದೃಶ್ಯ ವಿಶೇಷವು ಇಂದಿಗೂ ಧ್ರುವ ಪ್ರದೇಶದಲ್ಲಿ ಆವರ್ತನೆಯಿಂದ ಬರುತ್ತಿದೆಯಷ್ಟೆ. ಆರ್ಯರ ಆದಿ ನಿಲಯವು ಈ ಧ್ರುವ ಪ್ರದೇಶವಾಗಿತ್ತೆಂದು ನಾವು ನಂಬಿದರೆ ಮುಂದಿನ ವಿಷಯವು ತಿಳಿನೀರಿನಂತೆ ಸ್ಪಷ್ಟವಾಗುವುದು. ಚಳಿಯ ಬೆಳೆಯುತ್ತ ಬರಲು ಆರ್ಯರು ಆ ಪ್ರಾಂತವನ್ನು ತ್ಯಜಿಸಿ ಕ್ರಮೇಣ ದಕ್ಷಿಣಕ್ಕೆ ಸಾಗಿಹೋದರು. ಅವರ ಮೂಲನಿವಾಸ ದಲ್ಲಿ, ಯುಗ ಯುಗಾಂತರದಲ್ಲಿಯೂ ವರುಷ ವರುಷವೂ ಕಾಣಿಸುತ್ತಿದ್ದುವ ಆ ದೀರ್ಘ ರಾತ್ರಿ, ಆ ದೀರ್ಘ ಉಷೆ, ಆ ದೀರ್ಘ ದಿನ-ಇವುಗಳು ಅವರ ಜೀವಭಾವಗಳನ್ನು ಆವರಿಸಿದುದರಲ್ಲಿ ಆಶ್ಚರ್ಯವಿಲ್ಲ. ಅವರಲ್ಲಿ ಬೇರೂರಿದ ಈ ಭಾವನೇ, ಮುಂದೆ ಧ್ರುವ ಪ್ರದೇಶದಿಂದ ಅವರು ಹೊರಟ ಬಳಿಕ ತಿಂಡುಕೊಂಡ, ವಿಶ್ವರಚನೆಯ ಕಲ್ಪನೆಗೆ ಆಧಾರವಾಗಿ ನಿಂತಿತು.

ಋಗ್ವೇದದ ಸೃಷ್ಟಿ ವಿಚಾರವನ್ನು ಬಣ್ಣಿಸುವ ಯಾವ ಋಕ್ಕನ್ನೇ ನಾವು ಆರಿಸಿದರೂ, ಧ್ರುವ ಪ್ರದೇಶದಲ್ಲಿರುವ

ಸೃಷ್ಟಿವಿಕೀರ್ತನೆಯ ತನ್ನ ತೆರೆದೃಷ್ಟಿವಿದ್ಯಾನಿರಿಸಿಕೊಂಡಂತೆ ಕಾಣುವುದು. ಪಾಸದೀಯ ಸೂಕ್ತ (ಋಗ್ವೇದದ ೧೦,೧೨೯) ದಲ್ಲಿ ಹೇಗಿದೆ.

"ಇರುವೆಂಥದೂ, ಇಲ್ಲದಿರುವಂಥದೂ ಎರಡೂ ಆಗ ಇಲ್ಲವಾಗಿತ್ತು. ಆಕಾಶವೂ ಇದ್ದಿರಲಿಲ್ಲ. ಅದರಾಚೆಗಿನ ನಭವೂ ಇದ್ದಿರಲಿಲ್ಲ. . . . ಹಗಲು ರಾತ್ರಿಗಳ ನಡುವೆ ಬೆಳಕು (ಸೂತ್ಯಾಸ) ಇದ್ದಿರಲಿಲ್ಲ. ಉಸಿರಿಲ್ಲದೆ ಉಸಿರಾಡಿದುಂತ್ತು. ಅದಕ್ಕೂ ಹೆಚ್ಚಿಗೆ ಏನೂ ಇದ್ದಿರಲಿಲ್ಲ. ಕತ್ತಲಿತ್ತು. ಆರಂಭದಲ್ಲಿ ಇದೆಲ್ಲ ಬೆಳಕಿಲ್ಲದೊಂದು ಸಾಗರವಾಗಿತ್ತು. ಸಿಪ್ಪೆಯಿಂದ ಮುಚ್ಚಿದ ಬೊಳಕೆಯಂತೆ ತಾವದಿಂದ ಮೇಲೆ ಬಂದಿತು."

ಈ ಮೇಲಿನ ಮಾತನ್ನು ಕತವಥ ಬ್ರಾಹ್ಮಣ (೧೧,೧,೬,೧·೭)ದಲ್ಲಿ ಸೃಷ್ಟಿವಿಚಾರವನ್ನೂ ಕುರಿತು ಹೇಳುವ ನುದಿಯೊಡನೆ ಹೋಲಿಸಿ ನೋಡಿರಿ.

"ಆದಿಯಲ್ಲಿ ಇದು (ವಿಶ್ವವು) ಜಲವಾಗಿತ್ತು, ಬರೀ ಸಾಗರವಾಗಿತ್ತು. ಥಳಗಳು ನನ್ನು ಉತ್ಪತ್ತಿ ಪೇಗಾ ದೀತೆಂದು ಆಶಿಸಿದುವು. ಅದಕ್ಕಾಗಿ ದಣಿದು ಅವು ತಪಸ್ಸನ್ನು ಮಾಡಿದುವು. ಅವುಗಳು ತಪಿಸುತ್ತಿರಲು ಸುವರ್ಣದ ತತ್ತಿ (ಹಿರಣ್ಯ ಗರ್ಭ)ಯು ಉಂಟಾಯಿತು. ಆಗ ವರುಷ ವೆಂಬುದು ಹುಟ್ಟಿರಲಿಲ್ಲ. ಈ ಸುವರ್ಣದ ತತ್ತಿಯು ಒಂದು ವರುಷದಷ್ಟು ದೀರ್ಘ ಸಮಯ ತೇಲಾಡಿತು. ಆ ಒಂದು ವರುಷದ ಅವಧಿಯಲ್ಲಿ ಪ್ರಜಾಪತಿಯು ಅದರಿಂದ ಸೃಷ್ಟಿಗೊಂದನು.''

ಈಗ ನಾವು ಋಗ್ವೇದದ ಪ್ರಸಿದ್ಧವಾದ ಅಘಮರ್ಷಣ (ಋಗ್ವೇದದ ೧೦–190) ಮಂತ್ರವನ್ನು ಪರಿಶೀಲಿಸುವ. ಈ ಮಂತ್ರವು ಗಾಯತ್ರಿಯನ್ನೆ ಪವಿತ್ರವೆನಿಸಿ ಅದರಂತೆ ದ್ವಿಜರ ನಿತ್ಯದ ಸಂಧ್ಯಾವಂದನೆಯಲ್ಲಿ ಸೇರಿಕೊಂಡಿರುವುದಷ್ಟೆ. ಬ್ರಹದ್ದೇವತೆ (೮, 91–92)ಯು ಹೇಳಿಕೆಯಂತೆ ಈ ಅಘಮರ್ಷಣ ಮಂತ್ರವು ಭಾವವೃತ್ತ (ಅಂದರೆ ವಿಕಾಸವನ್ನು ಸೂಚಿಸುವ) ಮಂತ್ರವು. ಭಾವವೃತವೇನೆಂದು ಬೃಹದ್ದೇವತದಲ್ಲಿ (೨,೧೨೦) ಹೇಗೆ ವರ್ಣನೆಯಿಹೆ. "ಈ ಪ್ರಸಂಚವು ಮೊದಲು ಹೇಗೆ–ಅಸತ್ ಆಗಲಿ, ಸತ್ ಆಗಲಿ ಆಗ ಇದ್ದಿರಲ್ಲಿಲ್ಲವೊ, ಮುಂದಿದು (ವಿಶ್ವಸರ್ವಸ್ವವು) ಹೇಗೆ ಉಂಟಾಯಿತೋ ಇದನ್ನೇ ಭಾವವೃತ್ತ ಎನ್ನುವರು.'' ಆ ಮಂತ್ರವು ಹೀಗಿದೆ.

ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಧ್ಯಜಾಯತ । ತತೊ ರಾತ್ರಿ ರಜಾಯತ ತತಃ ಸಮುದ್ರೊ ಅರ್ಣವಃ । ಸಮುದ್ರಾದರ್ಣವಾದಧಿ ಸಂವತ್ಸರೊ ಅಜಾಯತ । ಅಹೊರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೊವಶೀ । ಸೂಯಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್ । ದಿವಂ ಚ ಪೃಥಿವೀಂ ಚಾಂತರಿಕ್ಷಮಥೊಸುವಃ ॥

ಅದರ ಅರ್ಥವು ಹೀಗಿದೆ:–

"ಸತ್ಯ ಮತ್ತು ಋತಗಳು ತಪಸ್ಸಿನಿಂದ ಉಂಟಾದುವು. ಅಲ್ಲಿಂದ ರಾತ್ರಿಯೂ ಜಲಮಯ ಸಾಗರವೂ ಉಂಟಾದುವು. ಈ ಜಲಮಯ ಸಾಗರದಿಂದ ವರುಷವು ಉಂಟಾಯಿತು. ಮತ್ತು ಅದರಿಂದ ಚೇತನಾತ್ಮಕ ವಸ್ತುಗಳ ಸೃಭುವು ದಿನರಾತ್ರಿಗಳನ್ನು ಮಾಡಿದನು. ವಿಧಾತನು ಸೂರ್ಯ, ಚಂದ್ರ, ಆಕಾಶ, ನಭ, ಸೃಷ್ಟಿಗಳನ್ನೆಲ್ಲಾ ಮೊದಲಿನಂತೆ ರಚಿಸಿದನು.''

ಈ ಎಲ್ಲ ಹೇಳಿಕೆಗಳಲ್ಲಿ ಕಂಡು ಬರುವ– "ಸಮುದ್ರ'' "ಬೆಳಕಿಲ್ಲದ ಸಮುದ್ರ'' "ಜಲ ಸಾಗರ'' ಇದರಿಂದ ಉಂಟಾಗುವ ಮುಂದೆ ವರುಷಾಂತ್ಯದಲ್ಲಿ ದೃಶ್ಯಪ್ರಪಂಚವು ಕಾಣಿಸುವಂತೆ ಮಾಡುವ "ಸುವರ್ಣದ ಅಂಡ'', ಅರ್ಥಾತ್ "ಸಿಪ್ಪೆಯಿಂದಾವರಿಸಿದ ಬೊಳಕೆ'' ಇವೆಲ್ಲ ಮಾತುಗಳು ವಿಶೇಷವಾದ ಅಭಿಪ್ರಾಯಗಳನ್ನು ಕೊಡುವಂತಹವಾಗಿವೆ. ವಿಶ್ವದ ಸೃಷ್ಟಿಯನ್ನು ಕುರಿತಾಗಿ ಹೇಳುವ ಋ. ವೇದದ ಮಾತುಗಳಿಗೂ ಅದೇ ವಿಷಯವನ್ನು ಪ್ರತಿಪಾದಿಸುವ, ಇರಾನಿದ, ಏಥೋಪ್ಯದಲ್ಲಿನ ಆರ್ಯವಂತೀಯರ ಅಲ್ಲದೆ ಸೆಮಿತ, ಏಗುಪ್ತ, ಫಿನೀಷಿಯ, ಮಂಗೋಲಿಯ ಜನಾಂಗದವರ–ಪುರಾಣಗಳಲ್ಲಿನ ಮಾತುಗಳಿಗೂ ಸಾಮ್ಯತೆಯಿರುತ್ತದೆ. ಈ ಭಿನ್ನಭಿನ್ನ ಜನಾಂಗದವರ ಸಮಕಾಲೀನ ಪುರಾಣಗಳನ್ನು ವಶೀಲಿಸಿ, ಸವರಿಗೆ ಈ ಸಾಮ್ಯವೆ ಸೂಚಿಸದಿರಲಾರದು. ಹಿಂದೂ ಪುರಾಣಗಳ "ಚಿನ್ನದ ತತ್ತಿ'' (ಹಿರಣ್ಯ ಗರ್ಭ) "ತೇಜೋವೀನ ಸಮುದ್ರ'' ಕ್ರೈ ನಮಾನಾ ಗ್ರೀಕ್ ಪುರಾಣಗಳಲ್ಲಿ "ಹಳದಿಮೊಟ್ಟೆ'' "ಪ್ರಳಯ" ಎಂದು ಮಾತುಗಳಿವೆ. ಬಗುವ್ಯದ ಪುರಾಣಗಳಲ್ಲಿ "ಹೋರ'' ಸೆನ ತತ್ತಿ'' "ಉಕ್ಕಿನ (ಕಪ್ಪಾದ) ಸಾಗರ'' ಎಂಬ ಮಾತುಗಳಿವೆ. ಜಿಲ್ಲೂ ಪುರಾಣಗಳಲ್ಲಿ "ದೇವರೆ ಆತ್ಮ'' "ಆಕಾರ ರಹಿತ ಕನ್ನ ಆತ್ಮ'' ಎಂಬ ಮಾತುಗಳಿವೆ. ಏರಾಣದ ಪುರಾಣದಲ್ಲಿ ಹಾರ್ಮುಜ್ ಮತ್ತು ಅಜ್ರಮಾನರು ಎಲ್ಲ ವಸ್ತುಗಳ ಸೃಷ್ಟಿಯಾಗುವ ತನಕ "ಭುವನ ತತ್ತಿ'' ಗಾಗಿ ಹೋರಾಡಿದರೆಂದು ಕಾಣುತ್ತದೆ. ಈ ಯಾವತ್ತೂ ಪುರಾಣಗಳಲ್ಲಿ ಸೂಚಿತವಾಗುವ ಚಿಸ್ಪದ ಕತ್ತಿಯು ದಿಗಂತದಿಂದ ಸ್ವಲ್ಪಮಾತ್ರ ಎದ್ದು ಸುವರ್ಣ ಕಿರಣಗಳಿಂದ ಮಿಣುಗುವ ಸೂರ್ಯ ಬಿಂಬವಲ್ಲದೆ ಬೇರೆಯಲ್ಲ. ಕತ್ತಲಲ್ಲಿ ಮುಣುಗಿದ ಜಗವನ್ನು ಬೆಳಗುವ ಅನನೇ ಸೃಷ್ಟಿಯ ಶಕ್ತಿಯು ಎಂದು ಅವರು ತಿಳಿದಿದ್ದರು. ವೈದಿಕ ಯುಗದ ಮತ್ತು ಅನಂತರದ, ಸೃಷ್ಟಿ ಸ್ಥಿತಿಯ ವರ್ಣನೆಯು ಸೂರ್ಯನನ್ನು ಅನ್ವಯಿಸಿದ್ದಾಗಿದೆಯೆಂಬುದನ್ನು ಉದಹರಿಸಬಹುದು. ಋಗ್ವೇದದಲ್ಲಿ (೧೦–72–8) ಈ ವರ್ಣನೆಯಿದೆ.

ದೇಸತೆಗಳ ಅತಿ ಪ್ರಾಚೀನ ಕಾಲದಲ್ಲಿ ಅಸ್ತಿತ್ವವು ಅನಾಸ್ತಿತ್ವದಿಂದುಂಟಾಯಿತು. ಆ ಬಳಿಕ ಭೂಪ್ರದೇಶಗಳಾದುವು. ಇದು ಉತ್ಥಾನಪಾದದಿಂದಾಯಿತು. ವೃಥ್ವಿಯು ಉತ್ಥಾನಪಾದದಿಂದಾಯಿತು. ಪ್ರದೇಶಗಳು ಸೃಷ್ಟಿಯಿಂದಾಗಿ ಹುಟ್ಟಿದುವು. ಎಂದು, ಓ ದೇವತೆಗಳಿರಾ, ನೀವು ಯತಿಗಳಂತೆ ಎಲ್ಲ ವಸ್ತುಗಳನ್ನು ಬೆಳೆಯಿಸಿದಿರೋ ಅಂದು ಸಮುದ್ರದಲ್ಲಿ ಅಡಗಿದ ಸೂರ್ಯನನ್ನು ಮೇಲಕ್ಕೆ ತಂದಿರಿ.''

ಇದೇ ಬಗೆಯ ಇನ್ನೊಂದು ಸರಳಮಾತು ಭಾಂದೋಗ್ಯ ಉಪನಿಷತ್ತಿನಲ್ಲಿದೆ. (೩, 19)

ಆದಿತ್ಯೊ ಬ್ರಹ್ಮೇತ್ಯಾದೇಶಸ್ಯೋಪ ವ್ಯಾಖ್ಯಾನಮಸದೇವೇದ ಮಗ್ರ ಆಸೀತ್ತದ್ಧಸಾಸೀತ್ತತ್ಸಮ ಭವತ್ತದಾಂಡಂ ನಿರವರ್ತತ ತತ್ಸಂವತ್ಸರಸ್ಯ ಮಾತ್ರಾಮಶಯತ ತೆನ್ಯರಭಿದ್ಯತ ಕೇ ಅಂಡ ಕಪಾಲೆ ರಜತಂ ಚ ಸುವರ್ಣಂ ಚಾಭವತಾಂ । . . . . . ಅಥ ಯತ್ತದಜಾಯತೆ ಸೊಸಾವಾದಿತ್ಯಃ ।— ಅಂದರೆ,

"ಆದಿತ್ಯನೇ ಬ್ರಹ್ಮನು–ಇದೇ ಸಿದ್ಧಾಂತವು. ಅದರ ಕಥೆಯಾದರೂ ಹೇಗಿದೆ. ಆದಿಯಲ್ಲಿ ಇದು ಇದ್ದಿರಲಿಲ್ಲ. ಬಳಿಕ ಉಂಟಾಯಿತು. ಬೆಳೆಯುತ್ತು. ಅಂಡದ ರೂಪವನ್ನು ತಾಳಿತು. ಒಂದು ವರುಷ ಪರಿಯಂತ ಮೊಟ್ಟೆಯು ಹಾಗೆಯೇ ಇತ್ತು. ಅಂಡವು ಒಡೆಯಿತು..... ಅದರಿಂದ ಹುಟ್ಟಿದುದೇ ಆದಿತ್ಯನು. ಅವನು ಜನಿಸಲಾಗಿ ಎಲ್ಲೆಲ್ಲಿಯೂ ಆನಂದದ ಘೋಷಗಳೆದ್ದವು. ಎಲ್ಲಾ ಜೀವಿಗಳೂ ಉಂಟಾದುವು. ಅವುಗಳು ಕಾಮಿಸಿದ ವಸ್ತುಗಳೂ ಉಂಟಾದುವು. ಆದುದರಿಂದ ಎಂದೆಲ್ಲ ಸೂರ್ಯನು ಮೂಡುವನೊ, ಮುಣುಗುವನೊ ಆಗ ಉದ್ಘೋಷಗಳುಂಟಾಗುವುವು. ಜೀವಿಗಳು ಹುಟ್ಟುವವು. ಅವುಗಳ ಕಾಮಿತ ವಸ್ತುಗಳೂ ಹುಟ್ಟುವುವು.''

ಧ್ರುವಪ್ರದೇಶದ ಮೂಲ ದೃಶ್ಯವಿಶೇಷವನ್ನು ತಿಳಿದವನಿಗೆ, ವೇದಗಳಲ್ಲೂ ಬೇರೆ ಶ್ರುತಿಗಳಲ್ಲೂ ಮೇಲಿಂದ ಮೇಲೆ ಕಾಣಿಸುವ ಈ ದೃಶ್ಯವಿಶ್ವವು ಆದಿಯಲ್ಲಿ ಹೇಗೆ ಇದ್ದಿಲ್ಲ ವೆಂಬ ಮತ್ತು ವರುಷಾಂತ್ಯದಲ್ಲಿ ಹೇಗೆ ಉಂಟಾಯಿತೆಂಬ ಮಾತಿನ ಅಭಿಪ್ರಾಯವು ಸ್ಫಟವಾಗುವುದು. ಧ್ರುವಪ್ರದೇಶದ ದೀರ್ಘವಾದ ರಾತ್ರಿಯಲ್ಲಿ ಪ್ರಪಂಚೆದ ನಾಲ್ಕುಸುತ್ತು ಕತ್ತಲೇ. ಎಲ್ಲವೂ ಕಾಳಸಮುದ್ರದಂತೆ ಕಾಣಿಸುತಿತ್ತು. ಆದರೆ ತನ್ನ ಸ್ಪಿನ ಗರ್ಭದಲ್ಲಿ, ದರುಷಾಂತ್ಯದಲ್ಲಿ ಮೂರಿ ಜಗವನ್ನು ಬೆಗುನ ಸೂರ್ಯದೇವನು (ಪುರುಷನು) ಇದ್ದನೆಲ್ಲವೇ. ಈ ಜಗದ ಸೃಷ್ಟಿ ಹೇಗಾಯಿತೆಂದು ಹೋಡಿಸಿದ ವೈದಿಕ ಯುಗಗಳಿಗೆ ಸತ್ ಅಸತ್, ಇರುವುದು ಇಲ್ಲದಿರುವುದು– ಎಂಬಿವುಗಳ ಮೂಲ ಕಲ್ಪನೆಯು ಇದರಿಂದ ದೊರೆಯುತ್ತು. ಈ ದೃಶ್ಯವಿಶ್ವವು–ಸೂರ್ಯ ದೇವನದ್ದರಿ ಇರುವುದು, ಇಲ್ಲವಾದರೆ ಅದೂ ಇಲ್ಲವೆಂಬುದು ಅವರ ತೀರ್ಮಾನವಾಗಿತ್ತು. ಆದುದರಿಂದಲೇ ನಿಷ್ಕರ್ಮ ಇರುವ ಒಬ್ಬನೆಂದರೆ ಅವನೇ ಸೂರ್ಯದೇವನು. ಅವನಿಂದಾಗಿಯೇ ಸೃಷ್ಟಿಯಾಯಿತು. ಋಗ್ವೇದದ ನಾಸದೀಯ ಮೊದಲಾದ' ಸೂಕ್ತದಿಂದ–ಅಸ್ತಿತ್ವವು ಅನಾಸ್ತಿತ್ವದಿಂದಲಾಯಿತೆಂದೂ, ಸೃಷ್ಟಿಗೆ ಪೂರ್ವದಲ್ಲಿ ಕತ್ತಲು ಬೆಳಕು ಎರಡೂ ಒಂದೇ ಆಗಿತ್ತೆಂದು ತಿಳಿಯುವುದು. ಸ್ವಲ್ಪ ಹೆಚ್ಚು ಕದಿಮೆ ಅದೇ ಭಾವವು ಬ್ರಾಹ್ಮಣಗಳಲ್ಲೂ ಉಪನಿಷತ್ತುಗಳಲ್ಲೂ ಕಾಣುವುದು. ಆದರೆ–ವೈದಿಕ ಯುಗಾನಂತರದ ಜ್ಞಾನಿಗಳಿಗೆ–ಈ ಪ್ರಲಯದಿಂದ ಸೃಷ್ಟಿಯು ಏನು ಕಾರಣದಿಂದ ಆಯಿತೆಂಬುದು ಬಲು ಯೋಚನೆಗೆ ಗುರಿಮಾಡಿತೆಂದು ಕಾಣುವುದು. ಅದನ್ನು ಮಾಡಿದವನು ಪುರುಷನೇ, ಆದರೆ ಏಕೆ ಉಂಟುಮಾಡಿದನು?– ಸೃಷ್ಟಿಗೆ ಪೂರ್ವವಾಗಿ ತಮಸ್ಸಿನಲ್ಲಿ ಅಡಗಿದ್ದ ಅವನು ಮೇಲೆ ಬರಲು ಕಾರಣವೇನಾಯಿತು? ಅವನನ್ನು ಮುಂದೆ ತಳ್ಳಿದ ಶಕ್ತಿಯಾವುದು? ಆತನೂ ಸಹ, ವಿಶ್ವ (ಪ್ರಕೃತಿ)ದಂತೆ ವರಿವರ್ತನೆಗೆ ಕಾರಣನಾಗುವನೇ? ಪುರುಷ ಪ್ರಕೃತಿಯರು ಕೂಡಿಯೇ ಕಾಣಿಸಿಕೊಂಡರು, ತಿರುಗಿ ಕೂಡಿಯೇ ಅದೃಶ್ಯರಾದರೆನ್ನುವಾಗ, ಇನರನ್ನು ಕೂಡಿ ಹೆಡಿಯುವ ವಿಚಿತ್ರ ಶಕ್ತಿಯಾವುದಿರಬಹುದು?

ಋಗ್ವೇದದ ನಾಸದೀಯ ಸೂಕ್ತ ಮೊದಲಾದುವುಗಳಲ್ಲಿ ಈ ಬಗೆಯ ಉಹಾಪೋಹೆಗಳನ್ನು ಕಾಣುತ್ತೇವೆ. ಆದರೆ ಯಾವ ನಿರ್ಧಾರವು ಬಂದಂತೆ ಕಾಣುವುದಿಲ್ಲ. ಎಲ್ಲೋ ಒಂದೆಡೆಯಲ್ಲಿ, ಪ್ರಾಯಶಃ ಸೃಷ್ಟಿಗೆ–"ಕಾಮ''ವೇ ಕಾರಣವಾಗಿರಬೇಕೆಂದು ಹೇಳಿದೆ. ಕೆಲವು ಬಾರಿ ಪ್ರಜಾಪತಿಯ ಇಲ್ಲವೆ ಪುರುಷನ ತಪಸ್ಸೇ ಕಾರಣವು–ಎಂದೂ ಹೇಳಿದೆ. ಧ್ರುವಪ್ರದೇಶದ ದೀರ್ಘ ಉಷಃ ಕಾಲವನ್ನು ಕಂಡು ಅವರಿಗೆ, ಬೆಳೆಯುತ್ತ ಬರುವ ಸೆಕೆಯನ್ನು ವರಿಶೀಲಿಸಿ, ಈ ತಪಸ್ಸು ಕಾಮನೆ ಎಂಬ ಭಾವಗಳು ಉಂಟಾಗಿರಬೇಕು. ವೈದಿಕ ವಿಶ್ವ ವಿಜ್ಞಾನದಲ್ಲಿ "ಕಾಮ'' "ತಪಸ್'' ಗಳು ಮಾಡುವ ಕೆಲಸವನ್ನು, ಗ್ರೀಕರ ವಿಶ್ವ ವಿಜ್ಞಾನದಲ್ಲಿ– 'ಇರೊಸ' ಎಂಬ "ಜೀವ ಚಲನಗಳ ಉತ್ಪಾದಕನು''.ಮೂಡುವನು ಎಂಬುದಾಗಿ ಕಾಣುವುದು. ಈ ಎರಡು ವಿಷಯಗಳ ಹಿಂದೆ ಅವರ ಪೂರ್ವ ನೆಲೆಗಳನೆಯಾದ ಧ್ರುವಪ್ರದೇಶದ ಸ್ಮರಣೆಯೇ ಕಾಣಿಸುವುದು.

ಆದರೆ ಈ ರಹಸ್ಯವನ್ನು ಭೇದಿಸಿ ಹೊರಗೆಳೆಯುವ ನಿರ್ಧಾರವು ಉಪನಿಷತ್ತುಗಳಲ್ಲಿ ಚೆನ್ನಾಗಿ ಕಾಣಿಸುವುದು. ಉದ್ದಾಲಕ ಆರುಣಿಯು ತನ್ನ ಮಗ ಶ್ವೇತಕೇತುವಿನೊಡನೆ–ಅಸತಿನಿಂದ ಸತ್ ಹುಟ್ಟಲು ಸಾಧ್ಯವಿಲ್ಲೆಂದು ನುಡಿದುದನ್ನು ಛಾಂದೋಗ್ಯ ಉಪನಿಷತ್ತಿನಲ್ಲಿ (೬, ೭,) ಹೇಳುತ್ತದೆ.

"ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ ತದ್ಧೈಕ ಆಹುರಸದೇವೇದಮಗ್ರ ಆಸೀದೇಕಮೇವಾದ್ವಿತೀಯಂ। ತಸ್ಮಾದಸತಃ ಸಜ್ಜಾಯತ। ಕುತಸ್ತು ಖಲು ಸೋಮ್ಯೈವಸ್ಯಾದಿತಿ ಹೋವಾಚ ಕಥಮನುಸತಃ ಸಜ್ಜಾಯೇತೇತಿ ಸತ್ತ್ವೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ.''

ಆದರೆ ಆ ಯುಗದಲ್ಲಿ ಅವರನ್ನು ಧ್ರುವಪ್ರದೇಶದ ಸ್ಮರಣೆಯು ಪೂರ್ಣವಾಗಿ ಆವರಿಸಿತ್ತು. ಅಸತ್ತೇ ಆದಿಯಲ್ಲಿತ್ತೆಂಬ ಭಾವನೆಯು ಅವರಲ್ಲಿ ಬೇರೂರಿದ್ದಂತೆ ಕಾಣುವುದು. ಛಾಂದೋಗ್ಯ ಉಪನಿಷತ್ತಿನಲ್ಲಿ (೩, 19)ಹೀಗೆ ಹೇಳಿದೆ.

"ಆದಿಯಲ್ಲಿ ಇದೆಲ್ಲ ಇದ್ದಿಲ್ಲ. ಬಳಿಕ ಇದು ಉಂಟಾಯಿತು.'' ಬೃಹದಾರಣ್ಯಕೋಪನಿಷತ್ತಿನಲ್ಲೂ (೧,೨,೧,) ಹೀಗೆ ಹೇಳಿದೆ—

"ನೈವೇಹ ಕಿಂಚನಾಗ್ರ ಆಸೀನ್ಮೃತ್ಯುನೈವೇದ ಮಾವೃತಮಾಸೀತ್ ।''

ಅಂದರೆ:–"ಆದಿಯಲ್ಲಿ ಇಲ್ಲಿ ಏನೂ ಇದ್ದಿರಲಿಲ್ಲ. ಇದೆಲ್ಲ ಮೃತ್ಯುವಿನಿಂದ ಆವರಿತ್ತು.''

ತೈತ್ತೀಯ ಉಪನಿಷತ್ತಿನಲ್ಲಿ (೨,೪)

"ಅಸದ್ವಾ ಇದಮಗ್ರ ಆಸೀತ್ । ತತೊ ವೈ ಸದಜಾತದಾತ್ಮಾನಂ ಸ್ವಯಮಕುರುತ । ತಸ್ಮಾತ್ತತ್ಸುಕೃತಮುಚ್ಯತ ಇತಿ ।''

ಹಿಂದೂಸ್ಥಾನಕ್ಕೆ ಸಲ್ಲತಕ್ಕ ಇಂಗ್ಲೆಂಡಿನ ಋಣ.



ಗಾಂಧಿ (ಮಹಾತ್ಮಾಜಿ)—ಈ ಹುಂಡಿಗೆ ಪ್ರಳಯ ಬಾಕಾಯಿತಾ?

ಆರೋಗ್ಯವನ್ನೂ ಆಯುರ್ವೇದದ ಮಹಿಮೆಯನ್ನೂ ಗೌರವವನ್ನೂ ಕಾಪಾಡಲಾರಿರಾ?

ಇಲ್ಲಿ ನೋಡಿರಿ! ಬನ್ನಿ ನೋಡಿರಿ! ಒಮ್ಮೆ ಪರೀಕ್ಷಿಸಿರಿ!

ನಮ್ಮಲ್ಲಿ ಶಾಸ್ತ್ರೀಯವಾದ ರೀತಿಯಲ್ಲಿ ತಯಾರಿಸಿದ ಪುಡಿ ಆಸವ, ಅರಿಷ್ಟ, ಚೂರ್ಣ, ಮಾತ್ರೆ, ಲೇಹ ಮತ್ತು ಘೃತಗಳು ಯಾವಾಗಲೂ ಸ್ಟೋಕಿನಲ್ಲಿವೆ. ಅಲ್ಲದೆ ಯಾವತ್ತೂ ಔಷಧಿಗಳನ್ನು ತಯಾರಿಸಲು ಅತ್ಯವಶ್ಯವಿರುವ ಮೇಲೌಷಧಿಗಳು ರಸಾಯನಗಳು, ಕ್ಷಾರಗಳೂ, ಮಕರಧ್ವಜ, ಬಂಗಾರ, ಬೆಳ್ಳಿ, ಅಭ್ರಕ್, ಕಾಂತ, ಲೋಹ, ಭಸ್ಮಾದಿಗಳೂ ಮತ್ತು ಶೃಂಗ-ಔಷಧಿಗಳೂ ಬಹು ಕಡಿಮೆ ದರದಲ್ಲಿ ವಿಕ್ರಯಿಸಲ್ಪಡುತ್ತಿವೆ.

ಜೈವನ ಸ್ಪಾಶ್ಯನ ಲೇಹವು ಲೇಹಗಳಲ್ಲಿ ಅತ್ಯುತ್ತಮ. ನಾರಾಯಣ ತೈಲವು ತೈಲಗಳಲ್ಲಿ ಅಪ್ರತಿಮ.
ಗೋರೋಜನ ಮಾತ್ರೆಯಲ್ಲದ ಮನೆಯಿರದು. ಆಶೋಕಾರಿಷ್ಟವು ಪ್ರತಿಯೊಂದು ಯುವತಿಗೆ ಅಗತ್ಯವು.
ಸೂತಿಕ ರಸಾಯನವು ಬಾಣಂತಿ ವೇದನೆಗೆ ರಾಮಬಾಣ.

ಈ ಔಷಧಿಗಳನ್ನು ತಯಾರಿಸುವದರಲ್ಲಿ 25 ವರುಷದ ಅನುಭವವೂ ಉಪಯೋಗಿಸಲಾಗಿದೆ.

ಪರ ಊರಿನವರು ತಮ್ಮ ರೋಗ ಲಕ್ಷಣಗಳನ್ನು ಸರಿಯಾಗಿ ಬರೆದು ಕಳುಹಿಸಿದ್ದಲ್ಲಿ ಯೋಗ್ಯವಾದ ಔಷಧಿಯು ವಿ. ಪಿ. ದ್ವಾರಾ ಕಳುಹಿಸಲಾಗುವುದು.

ಪಥ್ಯೋಪಚಾರದ ವಿಷಯದ ಮಾಹಿತಿಯು ಧಮೂರ್ಚ್ಛವಾಗಿ ಕೊಡಲ್ಪಡುವುದು

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು:—

M. K. VAIDYA,
Proprietor:-The Dhanvantari Vaidyashala,
Car Street, Mangalore.

ESTD. 1913.

ಶ್ರೇಷ್ಠವಾದ ಮೈಸೂರು ಸ್ವದೇಶಿ ಸುಗಂಧ ದ್ರವ್ಯಗಳು!

ಬಹುಕಾಲದಿಂದಲೂ ಮೈಸೂರು ಅರಮನೆಗೂ ಇನ್ನೂ ಅನೇಕ ದೇಶದ ಮಹಾರಾಜರುಗಳಿಗೂ ಸರಬರಾಯಿ ಮಾಡಿ ಪ್ರಶಸ್ತಿ ಪಡೆದಿರುತ್ತೇವೆ.

ಅನೇಕ ದೇಶಗಳ ಮಹನೀಯರುಗಳು ತಮ್ಮ ಘನವಾದ ಮೆಚ್ಚಿಕೆಯ ಯೋಗ್ಯತಾ ಪತ್ರಗಳನ್ನು ದಯಪಾಲಿಸಿರುತ್ತಾರೆ.



ಯಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ, ಮೈಸೂರು.

ನಮ್ಮಲ್ಲಿ ತಯಾರಾಗುವ ಶ್ರೇಷ್ಠವಾದ ರಂಬಾನ್ ಊದುಬತ್ತಿಗಳು, ಗಂಧದ ಬಿಲ್ಲೆ, ಹಸೀ ಗಂಧ (ಅರಗಜ) ದಶಾಂಗ, ಹಾಲುಮುಡಿ, ಅತ್ತರ್ ಮುಂತಾದವುಗಳನ್ನು ನೀವು ಒಂದು ಸಾರಿ ತರಿಸಿ ಪರೀಕ್ಷಿಸಿದ್ದಲ್ಲಿ ಅದರ ಮಾಧುರ್ಯವೂ, ಬೆಲೆಯೂ, ಸಹ ನಿಮ್ಮ ಮನಸ್ಸಿಗೆ ತಿಳಿಯುತ್ತೆ. ತಪ್ಪದೇ ಕ್ಯಾಟಲಾಗಿಗೆ ಬರೆಯಿರಿ. ಖಂಡಿತ ನಿಮ್ಮ ಹ್ಯೋತ್ಸಾಹಕ್ಕೆ ಯೋಗ್ಯವಾದ ಸ್ಥಳವಾಗಿರುತ್ತೆ.

ಎಂಟಾಣೆಯ ಸ್ಟ್ಯಾಂಪನ್ನು ಕಳುಹಿಸಿದ್ದಲ್ಲಿ ಎಲ್ಲಾ ತರದ ಊದುಬತ್ತಿಯ ಸೆಂಪಲುಗಳನ್ನು ಕಳುಹಿಸಿ ಕೊಡಲ್ಪಡುತ್ತೇವೆ.

ಸ್ವದೇಶಾಭಿಮಾನೀಯರೇ! ಈ ಕಡೆಗೆ ಗಮನಿಸಿರಿ!

40 ವರ್ಷಗಳಿಂದಲೂ ತಯಾರಿಸಿ, ಪ್ರಖ್ಯಾತಿ ಪಡೆದು, ಲಂಡನ್ ಮೊದಲಾದ ಅನೇಕ ಸ್ಥಳಗಳಲ್ಲಿ ಮೆಡಲ್ ವಗೈರೆ ಬಹುಮಾನವನ್ನು ಪಡೆದಿರುವ

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಇವರಿಂದ ಶಾಸ್ತ್ರೀಯವಾಗಿ ತಯ್ಯಾರಾಗುವ ಅನೇಕ ಘನವಾದ ಊದುಬತ್ತಿಗಳು ಮತ್ತು ಇನ್ನೂ ಅನೇಕ ವಿಧವಾದ ಸುಗಂಧ ದ್ರವ್ಯಗಳು ವ್ಯಾಪಾರಸ್ಥರಿಗೂ ಮತ್ತು ಇತರ ಮಹನೀಯರುಗಳಿಗೂ ಮನವೊಪ್ಪುವಂತೆ ಖಾತ್ರಿಯಾಗಿ ಸಪ್ಲೈ ಮಾಡಲ್ಪಡುತ್ತವೆ.

ಬಾಲಗ್ರಹ ಧೂಪ

ಮಕ್ಕಳಿಗೆ ಬರುವ ಬಾಲಗ್ರಹ, ಚೇಷ್ಟೆ, ಅಥವಾ ನಾಯುರೋಗಕ್ಕೆ ಅತ್ಯುತ್ತಮವಾದದ್ದು.
ಕ್ಯಾಟಲಾಗಿಗೆ ಬರೆದಲ್ಲಿ ಉಚಿತವಾಗಿ ಕಳಿಸಿಕೊಡಲ್ಪಡುವದು.

ಇದರ ಅರ್ಥವು ಹೀಗಿದೆ:–

"ಆದಿಯಲ್ಲಿ ಇದೆಲ್ಲ ಅಸತ್ ಆಗಿತ್ತು. ಅದರಿಂದಲೇ ಇದು ಉಂಟಾಯಿತು. ಅದು ತನ್ನನ್ನು ತಾನು ರಚಿಸಿತು. ಆದುದರಿಂದಲೇ ಅದು ಸ್ವಯಂಭೂ ಎನ್ನುವುದು"

ಈ ಎಲ್ಲ ಮಾತುಗಳಲ್ಲಿ 'ಅಸತ್' ಏನಾಗಿತ್ತೆಂದು ಸ್ಪಷ್ಟವಾಗಿ ಹೊಳೆಯುವುದಿಲ್ಲ. ಯಾಕೆಂದರೆ ಪ್ಲುರುಷ (ಸೂಫ್ಟ) ಪ್ರಕೃತಿ (ವಿಶ್ವ) ಇವೆರಡೂ ಅಸತ್ ಆಗಿದ್ದವು ಎಂದು ಹೇಳಲಬಹುದು. ಕಾರಣ ಆದಿಯಲ್ಲಿ ಅವೆರಡೂ ಅವ್ಯಕ್ತವಾಗಿದ್ದು ಮುಂದೆ ವ್ಯಕ್ತವಾದುವು ಇನ್ನೊಂದು ರೀತಿಯಲ್ಲಿ ಲಕ್ಷಿಸುವುದಾದರೆ ಸೂರ್ಯನಿಂದಲೇ ಅಂದರೆ, ಪುರುಷನಿಂದಲೇ ಪ್ರಕೃತಿಯು ವ್ಯಕ್ತವಾಯಿತೆಂದು ಹೇಳಬಹುದು ಪ್ರಕೃತಿಯಿಂದ ಪುರುಷನು ಕಾಣಿಸಿದ್ದಲ್ಲ. ಈ ವಿಚಾರವು ಅಸ್ಪಷ್ಟವಾಗಿ ಬಂದುದರಿಂದಲೇ ವೈದಿಕಯುಗದ ನಂತರದ ಜ್ಞಾನಿಗಳು ತೊಡಕಿಗೆ ಬಿದ್ದರು. ಅದರಿಂದಲೇ ವೇದಾಂತ, ಸಾಂಖ್ಯ - ಎಂಬ ಎರಡು ಮಾರ್ಗಗಳು ಹೊರಡಲು ಕಾರಣವಾಯಿತು ಮೊದಲಿನ ಸಂಧಿದವರು–ಪ್ರಕೃತಿ ಇಲ್ಲವೆ ವ್ಯಕ್ತ ವಿಶ್ವವು ಪುರುಷನಿಂದ ಬೇರೆಲ್ಲವೆಂದೂ, ಎರಡನೆಯ ಸಂಧಿದವರು ಪ್ರಕೃತಿಯಲ್ಲಿ ಕಂಡುಬರುವ ವ್ಯಕ್ತವಾದಲ್ಲ ಚಿತ್ರಗಳು ಅದರಲ್ಲೆ ಅಡಕವಾಗಿರುವುದೆಂದೂ, ಪುರುಷನೇ ಕೇವಲ ಒಬ್ಬ ಪ್ರೇಕ್ಷಕನಂತೆ ಭಾಗವಹಿಸದವನೆಂದೂ ಸಾರಿದರು

ಅವ್ಯಕ್ತನಾದ ತಾನು ವ್ಯಕ್ತನಾಗುವ ಈ ವಿಚಿತ್ರ ಶಕ್ತಿಯನ್ನು ವೇದಾಂತಿಗಳು ಮಾಯೆಯೆನ್ನುವರು ಪುರುಷನನ್ನು ನಾವು ವಸ್ತುಗಳಲ್ಲಿರುವ ಆತ್ಮನೆಂದು ತಿಳಿಯುವುದಾದರೆ ಪುರುಷನು ಅವ್ಯಕ್ತನಿದ್ದರೂ ವ್ಯಕ್ತನಾಗಿ ತೋರುವ ಈ ಭ್ರಮೆಯನ್ನು ಅವಿದ್ಯೆಯೆಂದೂ ವೇದಾಂತಿಗಳು ಕರೆಯುವರು ಪುರುಷನನ್ನು ಸೃಷ್ಟಿಕರ್ತನಾದ ಈಶ್ವರನೆಂದು ತಿಳಿದಾಗ ಇದೆಲ್ಲ ದೈವಲೀಲೆಯೆಂದೂ ಹೇಳುವರು ಆದರೆ ಸಾಂಖ್ಯರ ಮತದಂತೆ–ಈ ವಿಚಿತ್ರ ಶಕ್ತಿಯು ಪ್ರಕೃತಿಯಲ್ಲಿ ಸ್ವಾಭಾವಿಕವಾಗಿರುವುದೆಂದೂ, ಅದು ಪುರುಷನ ಸಮೀಪವಿರುವಾಗ ವ್ಯಕ್ತವಾಗುವುದೆಂದೂ–ತೋರುವುದು ಆದರೆ ಆರ್ಯರ ಮೂಲನಿವಾಸವಾದ ಧ್ರುವ ಭೂಮಿಯನ್ನು ಸ್ಮರಿಸಿಕೊಂಡರೆ–ಧ್ರುವ ದೇಶದ ಕಗ್ಗತ್ತಲ ರಾತ್ರಿಯಿಂದ ಸೃಷ್ಟಿಯು ಕಾಣಿಸಿದ ಬಗೆಯನ್ನು ಸ್ಮರಿಸಿಕೊಂಡರೆ,–ಸಾಂಖ್ಯರು ಮತ್ತು ವೇದಾಂತಿಗಳ ಈ ಎರಡು ಸಿದ್ಧಾಂತಗಳಲ್ಲಿ ಹೆಚ್ಚು ಕಡಿಮೆಯಿರುವುದೆಂದೇ ತೋರುವುದಿಲ್ಲ ಎರಡು ಸಿದ್ಧಾಂತಗಳ ತೆಯೂ ಅಖಂಡವಾಗಿರುವವನು ಪುರುಷನು (ಸೂರ್ಯನು) ಇನ್ನು ತನ್ನ ವ್ಯಕ್ತತೆಗೆ ಪುರುಷನನ್ನು ಹೊಂದಿ ರೂಪಆಕಾರಗಳನ್ನು ಆಗಾಗ ಬದಲಿಸುತ್ತಿರುವುದು ಪ್ರಕೃತಿ (ವಿಶ್ವ) ಯೆಂದೇ ತೋರುವುದು ಇವೆರಡೂ ಒಂದೇ ಕಾಲದಲ್ಲಾಗುವುದೆಂಬುವಿಶೇಷವೇ ನಿಜ ಆದರೆ ಕೇವಲ ಧ್ರುವ ದೇಶದ ದೃಶ್ಯ ವಿಶೇಷವನ್ನು ಅದರಿಂ ಮೂತನಾಡುವುದಾದರೆ ಸಾಂಖ್ಯರ ವರ್ಣನೆಯು, ಮೂಲದೃಶ್ಯಕ್ಕೆ ತೀರ ಸಾಮ್ಯವುಳ್ಳದಾಗಿದೆ. ಆದರೆ ಈ ಮೂಲ ದೃಶ್ಯದ ಅಧಾರವು ವೇದಾಂತದ ಸಿದ್ಧಾಂತದಲ್ಲಿಲ್ಲ ಕಾರಣ, ಮೊದಲಿನಿಂದಲೂ ವೇದಾಂತನಾದವು, ಪೂರ್ವದ ಕಟ್ಟುಕಟ್ಟಳೆಗಳನ್ನು ವಿರೋಧಿಸಿ ಬರೇ ನ್ಯಾಯ ಸಿದ್ಧಾಂತಗಳ ಮೇಲೆಯೇ ತತ್ವಗಳನ್ನು ರಚಿಸುವುದರಲ್ಲಿಯೇ ನ್ಪೃತವಾಗಿದೆ

ವಿಶ್ವಸೃಷ್ಟಿಯನ್ನು ಕುರಿತಾದ ವೈದಿಕ ಯುಗದ ಮತ್ತು ಅನಂತರದ ಸಿದ್ಧಾಂತಗಳನ್ನು ಶೋಧಿಸಲು ನಾವು ಆರ್ಯರ ಮೂಲನಿವಾಸ ಪ್ರದೇಶವನ್ನು ಸ್ಮರಿಸಿ, ಅಲ್ಲಿನ ದೀರ್ಘರಾತ್ರಿ, ದೀರ್ಘ ಉಷಾ, ದೀರ್ಘ ಹಗಲು ಇವುಗಳನ್ನು ಎಣಿಸಬೇಕಾಗುವುದು. ಎಂದಾಯಿತು ಇದನ್ನು ಎಣಿಸಬಲ್ಲವಾದರೆ ತ್ರಿಗುಣ, ನಾಮ ರೂಪ, ಕಲ್ಪ ಇವುಗಳ ಮೂಲವನ್ನಾದರೂ ತಿಳಿಯುವುದು ಸುಲಭವಾಗುವುದು ಮೇಕ್ಷ ಮುಲ್ಲರನು ಹೇಗೆಂದಿದ್ದನು– "ವೇದಾಂತದಲ್ಲಿ ಮೂಲದಲ್ಲಿ ತ್ರಿಗುಣಗಳ ವಿಚಾರವೇ ಇಲ್ಲ ಅಂತು ಬರೇ ವೇದಾಂತಿಕ ಉಪನಿಷತ್ತುಗಳಲ್ಲಿ ಇಲ್ಲವೇ ಇಲ್ಲ. ಮೊದಲಿಗೆ ಅದು ಕಂಡುಬರುವುದೆಂದರೆ ಶ್ವೇತಾಶ್ವತಾರ ಉಪನಿಷತ್ತಿನಲ್ಲಿ"—ಎಂದು ಆದರೆ ಇದು ತಪ್ಪು ತಿಳುವಳಿಕೆಯೇ ಸರಿ. ಈ ವಿಷಯದ ಸೂಚನೆಯು ಛಾಂದೋಗ್ಯ ೬, 4–1

"ಯದಗ್ರೆ ರೋಹಿತಂ ರೂಪಂ ತೇಜಸಸ್ತದ್ರೂಪಂ ಯಚ್ಛುಕ್ಲಂ ತದಪಾಂ ಯತ್ಕೃಷ್ಣಂ ತದನ್ನಸ್ಯಾಪಾಗಾದಗ್ನೇರಗ್ನಿತ್ವಂ ವಾಚಾರಂಭಣಂ ವಿಕಾರೊ ನಾಮಧೇಯಂ ತ್ರೀಣಿ ರೂಪಾಣೀತ್ಯೇವ ಸತ್ಯಂ॥"

ಬೃಹದಾರಣ್ಯಕ ೧, ೨,

"ಆಪೊ ವಾ ಇದಮಗ್ರ ಆಸೀತ್ಸಲಿಲಮೇವ ಸ ಪ್ರಜಾಪತಿರಕಾಮಯತ ಪ್ರಜಾಯೇಯೇತಿ ಸೋಶ್ರಾಮ್ಯತ್ತಪೋತಪ್ಯತ ತಸ್ಯ ಶ್ರಾಂತಸ್ಯ ತಪ್ತಸ್ಯ ತೇಜೋರಸೋ ನಿರವರ್ತತಾಗ್ನಿಃ॥"

ಇಂತಹ ಹೇಳಿಕೆಗಳು ಮೊದಲಿನ ಉಪನಿಷತ್ತುಗಳಲ್ಲಿ ಇಲ್ಲವೆಂಬಲ್ಲ. ಅಥರ್ವ ವೇದಶಿಲಿಯೂ (೮—೩, 1, ೧೦, 8–43) ಸೂಚಿಸಿವಾಗಿವೆ. ಋಗ್ವೇದವೂ ಆಗಾಗ ವಿಶ್ವದ ಮೂರು ವಿಭಾಗಗಳಿಸುವ ಪೃಥ್ವಿ, ರಜಸ್, ದ್ಯು—ಗಳ ವಿಚಾರವಾಗಿ ಹೇಳುತ್ತದೆ. ಇವನ್ನು ಛಾಂದೋಗ್ಯ ಉಪನಿಷತ್ತು, ಬ್ರಹದಾರಣ್ಯಕವೂ–ಕೃಷ್ಣ, ರೋಹಿತ, ಶುಕ್ಲ ವೆಂದೂ ಇಲ್ಲವೆ ತಮಸ್, ರಜಸ್, ಸತ್ವವೆಂದೂ ಬಣ್ಣಿಸಿದ್ದಾಗಿರುತ್ತದೆ. ಆ ಪ್ರಾಚೀನ ಕಾಲದ ಪ್ರಸಿದ್ಧರೆನಿಸಿದ್ದ ಗಾರ್ಗ್ಯ ಸ್ಕೈರಲ್ಲೂ ತತ್ವಜ್ಞಾನಿಗಳಲ್ಲೂ ಇರುವ—ಪ್ರತಿಸ್ಥೂಲ ವಸ್ತುವು ತ್ರಿವರ್ಣ, ತ್ರಿಧಗಳಿಂದ ಕೂಡಿದ್ದೆಂಬ–ಭಾವನೆಯನ್ನೇ ಸೂಚಿಸುತ್ತದೆ. ಬ್ರಹದಾರಣ್ಯಕವೂ ಅನ್ನುವುದಾದರೂ ಅದನ್ನೆ—"ಆದಿಯಲ್ಲಿ ಇಲ್ಲಿ ಏನಿದ್ದಿಲ್ಲ"ನೆಂದು, ಬಳಿಕ ವಿಶ್ವದ ತ್ರಿವಿಧ ಅಂಗಗಳುಂಟಾದ ಬಗೆಯನ್ನು ಹೇಳುವುದು "ಬೀಜವೇ ವರುಷನಾಯಿತು ಅದರ ಮೊದಲು ವರುಷನಿದ್ದಿಲ್ಲ"—ಎನ್ನುವುದು ಈ ಎಲ್ಲ ಮಾತು ಅವರ ಅನಾದಿ ನಿವಾಸವಾದ ಧ್ರುವ ಭೂಮಿಯ ದೀರ್ಘವಾದ ಕವ್ಯ ಕವಿದ ರಾತ್ರಿ, ದೀರ್ಘವಾದ ಸುವರ್ಣದ ಉಷೆ, ದೀರ್ಘವಾದ ಬೆಳಗಿನ ಹಗಲುಗಳನ್ನು ಸೂಚಿಸುವುದೆಂದು ನನಗೆ ತೋರುವುದು ಅವರ ಸತ್ವ, ರಜಸ್, ತಮಸ್ಸುಗಳೆಂಬ ತ್ರಿಗುಣಗಳ ಮೂಲವು ಅವರ ಅನಿವಾಸದ ಸ್ಮರಣೆಯ ಪ್ರತಿಫಲವೆಂದು ಹೇಳುವುದರಲ್ಲಿ ಹೆಚ್ಚೇನು? ಇವೇ ತ್ರಿಗುಣಗಳ ಪುರೋಭೂಮಿಯು ಧ್ರುವಪ್ರದೇಶವನ್ನು ತೋರಿಸಲು ಇನ್ನೊಂದು ಉದಾಹರಣೆಯನ್ನು ಕೊಡುವೆನು. ಮೈತ್ರಾಯಣಬ್ರಾಹ್ಮಣೋಪನಿಷತ್ತಿನಲ್ಲಿ (೫–2) ಹೀಗಿದೆ "ಆದಿಯಲ್ಲಿ ಇದೆಲ್ಲ ತಮಸ್ಸೇ ಆಗಿತ್ತು ಶೀತ್ಯದಲ್ಲಿದ್ದು ಶೀತ್ಯದಿಂದ ಚಲಿಸಲ್ಪಟ್ಟು ಅದು ಅಸಮನಾಯಿತು ಹೇಗೆ ಅದು ರಜಸ್ಸೆನಿಸಿತು ಆಗ ಈ ರಜಸ್ಸು ಚಲಿಸಿ, ಅಸಮನಾಗಿ ಸತ್ವವಾಯಿತು ಈ ಸತ್ವವೇ ಚಲಿಸಿ ಅದರಿಂದ ರಸವು ಹರಿಯಿತು" ಧ್ರುವ ದೇಶದಲ್ಲಿ ದೀರ್ಘ ಕತ್ತಲಿನ ಬಳಿಕ ಸೂರ್ಯನು ಉದಯಿಸುವಾಗ ಆಗುವ ವಿಶಿಷ್ಟತೆಯು ಇದರಂತೆಯೇ ಇದೆ

ಹಾಗೆಯೇ ನಾಮ, ರೂಪ (ಹೆಸರು ಆಕಾರ) ಗಳ ಸಿದ್ಧಾಂತದ ಮೂಲವಾದರೂ ಧ್ರುವದೇಶದ ವರ್ಚಸ್ಸಿನಿಂದಲೇ ಉಂಟಾಯಿತು ಆ ಸಿದ್ಧಾಂತವನ್ನು ಕುರಿತು ಬೃಹದಾರಣ್ಯಕೋಪನಿಷತ್ತಿನಲ್ಲಿ (೧, 4, 7) ಹೀಗೆ ಬಣ್ಣಿಸಿದೆ

"ತದ್ಧೇದಂತರ್ಹ್ಯವ್ಯಾಕೃತಮಾಸೀತ್ತನ್ನಾಮರೂಪಾಭ್ಯಾಮೇವ ವ್ಯಾಕ್ರಿಯತೆ"

ಅಂದರೆ 'ಈಗ ಅವಿಕಸಿತ ಸ್ಥಿತಿಯಲ್ಲಿರುವ ಇದು ಮೆಲ್ಲಗೆ ರೂಪ ಆಕಾರಗಳಿಂದ ವಿಕಸಿತವಾಯಿತು' ಇದನ್ನು ಶತಪಥ ಬ್ರಾಹ್ಮಣದಲ್ಲೂ (೧೧ 2, 3) ಬಣ್ಣಿಸಿದೆ ಇದರ ಮೂಲವು ಋಗ್ವೇದದಲ್ಲೂ (೧ ೬, ೩) ಶುಕ್ಲ ಯಜುರ್ವೇದದಲ್ಲೂ (೨೯ 37) ಕಾಣಿಸುವುದು ಅಲ್ಲಿ ಹೇಗೆ ಹೇಳಿದೆ "ಬೆಳಕಿಲ್ಲದಲ್ಲಿಂದ ಬೆಳಕನ್ನು ಉಂಟುಮಾಡಿದ, ರೂಪವಿರದಲ್ಲಿಂದ ರೂಪವನ್ನುಂಟುಮಾಡಿದ ಓ ನೀನು, ಉಷೆಯ ಜತೆಯಲ್ಲಿಯೇ ಹುಟ್ಟಿದೆ" ಪಂಚದಶಿಯು ಈ ಪ್ರಾಚೀನ ವಾಣಿಯನ್ನು ಹೇಗೆ ಲೇಖಿಸಿದೆ "ಸೃಷ್ಟಿಗೆ ಪೂರ್ವದಲ್ಲಿ ಇದೆಲ್ಲ ಸತ್ ಆಗಿತ್ತು, ಒಂದೇ ಆಗಿ ಅದ್ವಿತೀಯವಾಗಿತ್ತು. ರೂಪ ಆಕಾರಗಳಿರಲ್ಲಿಲ್ಲವಿತ್ತು ಇದು ವರುಣ ಪುತ್ರನು ಆಡುವ ಮಾತುಗಳು" ಅಥರ್ವ ವೇದ (೧೦ 2, 12 ಮತ್ತು ೧೧, 7, 1) ದಲ್ಲೂ ನಾಮ ರೂಪದ ಪ್ರಸ್ತಾವವಿದೆ ದೀರ್ಘ ಉಷೆಯು ಬರಲು ಅದರ ಹಿಂದಿನಿಂದ ದೀರ್ಘ ಹಗಲು ಬರಲು, ಧ್ರುವದೇಶದ ದೀರ್ಘ ರಾತ್ರಿಯಿಂದ ರೂಪನಾಮಗಳನ್ನು ಕಳೆದುಕೊಂಡಿದ್ದ, ಇದು ವರೆಗೆ ಅಗೋಚರವಾಗಿದ್ದ ವಿಶ್ವದ ಯಾವತ್ತು ವಸ್ತುಗಳು ನಾಮರೂಪಗಳನ್ನು ಹೊಂದುವುವು ಈ ರೀತಿಯಲ್ಲಿ ನಾಮರೂಪಗಳಿಗೆ ಪುರುಷನು, ಅಂದರೆ ಈಶ್ವರನೆ ಕಾರಣನೆಂದು ತಿಳಿಯಲು ಹೇಗೆ ಕಾರಣವಾಯಿತೆಂದೂ ಸೃಷ್ಟಿಗೆ ಮೊದಲು ನಾಮರೂಪಗಳು ಏಕೆ ಇದ್ದಿಲ್ಲವೆಂದೂ ಸುಲಭವಾಗಿ ತಿಳಿಯಬಹುದು

ಅದರಂತೆಯೇ ಕಲ್ಪದ ಸಿದ್ಧಾಂತವು ಅಂದರೆ ವಿಶ್ವವು ವಿಕಸಿತವಾಗುವುದು ತಿರುಗಿ ಅವಿಕಸಿತವಾಗುವುದು ಎಂಬ ಭಾವನೆಗಳು ಧ್ರುವ ಭೂಮಿಯಲ್ಲಿನ ಆನರ್ತನೆಯಿಂದ ವಿಶ್ವವು ಬೆಳಕಿಗೆ ಬೀಳುವ, ತಿರುಗಿ ಅದು ದೀರ್ಘರಾತ್ರಿಯ ಕಗ್ಗತ್ತಲಲ್ಲಿ ಮುಣುಗುವ ದೃಶ್ಯವಿಶೇಷದಿಂದಲೇ ಹುಟ್ಟಿರಬೇಕು

'ಮೊಯ್, ಪದದ ಪೂರ್ವಾರ್ಥವೇನಿತ್ತು? ಇಂದ್ರಾದಿ ದೇವತೆಗಳಿಗೆ ಇರುವ ನವಸೃಷ್ಟಿಯ ಅಭಾವದಿಂದ ಭಾವವನ್ನು ತರುವ ವಿಚಿತ್ರ ತತ್ವಿಯೆಂಬ ತಾತ್ಪರ್ಯವಿದ್ದಿತಲ್ಲವೇ? ಮುಂದಿನ ಮಾಯಾವಾದಕ್ಕೂ ಮೊದಲಿನ ಮಾಯೆ—ವೆಡಕ್ಕೂ ಇರುವ ಅನೆಬಂಧತೆಯನ್ನು ಇದು ನಿವಾರಿಸುವುದಲ್ಲವೇ. ಮಾಯೆಯ ಜತೆಯಲ್ಲಿಯೇ ಸೂಚಿಸಲ್ಪಡುವ ಸತ್, ಅಸತ್, ಪುರುಷ, ಸೃಕೃತಿ, ತ್ರಿಗುಣಗಳು, ನಾಮ ರೂಪ, ಕಲ್ಪಗಳು ಎಂಬೀ ಎಲ್ಲಾ ವಾದಗಳು ಮತ್ತು ಅವ

1930ರಲ್ಲಿ
ಅಮೇರಿಕದ ಮೋಟರ ಕೈಗಾರಿಕೆ.

ಯುನೈಟೆಡ್ ಸ್ಟೇಟ್ಸ ಮತ್ತು ಕೆನಡಾದಲ್ಲಿ ತಯಾರಿಸಲ್ಪಟ್ಟ ಕಾರುಗಳು (cars, ವಿದು ಜನರು ಅಥವಾ ಕಡಿಮೆ ಸಂಖ್ಯೆ ಕೂತುಕೊಳ್ಳುವ ಗಾಡಿ) 2,910,187. ಟ್ರಕ್ಕುಗಳು (ಭಾರ ಹೊರುವ; ಸಾಧಾರಣ 4 ಖಂಡಿ ಮತ್ತು ಮೇಲ್ಪಟ್ಟ ಸಾಮಾನನ್ನೂ ವ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರನ್ನೂ ಹೊರುವ ಗಾಡಿಗಳು) 599,991 ರೂಂ ಮಾರಾಟದ ಮೌಲ್ಯ—ಕಾರುಗಳಿಗೆ 472 ಕೋಟಿ, ಟ್ರಕ್ಕುಗಳಿಗೆ 118 ಕೋಟಿ, ದುರುಸ್ತಿಯ ಭಾಗಗಳಿಗೆ ಕಾರು ವ ಟ್ರಕ್ಕು ತಯಾರಿಯವರಿಂದಲೇ 78 ಕೋಟಿ, ಇತರರಿಂದ ತಯಾರಿಸ್ಪಟ್ಟ, ದುರುಸ್ತಿಯ ಭಾಗಗಳಿಗೆ, ಉಪಕರಣಗಳಿಗೆ ಮತ್ತು ಟಾಯರುಗಳಿಗೆ 262 ಕೋಟಿ ರೂಪ್ಯಾಗಳು

* * * * *

ಯುನ್ಯಾಟೆಡ್ ಸ್ಟೇಟ್ಸಿನಲ್ಲಿಯೇ ವ್ಯವಹಾರಕ್ಕೆ ಉಪಯೋಗಿಸಲ್ಪಟ್ಟ ಕಾರು, ಟ್ರಕ್ಕು ಕೂಡಾ 2,950,270 ಹೊರಗಿನ ದೇಶಗಳಿಗೆ ಮಾರಾಟ ಮಾಡಿದ್ದು (ಕಾರೂ ಟ್ರಕ್ಕೂ ಕೂಡಾ) 405,716 ಅವರ ಸ್ವಂತ ಉಪಯೋಗದ ಸಂಖ್ಯೆಯನ್ನೂ ಬಾಕಿ ಉಳಿದ ಲೋಕಕ್ಕೆಲ್ಲಾ ಅವರು ಮಾರುವ ಸಂಖ್ಯೆಯನ್ನೂ ಸರಿಹೋಲಿಸಿರಿ

* * * * *

ಒಂದು ಕಾರಿನ ಸರಾಸರಿ ಜೀವಮಾನ ಏಳು ವರ್ಷಗಳಾಗಿರುತ್ತವೆ

* * * * *

ಹಳೆ ಗಾಡಿಗಳ ಬದಲಿಗೆಂದೇ ಮಾರಾಟವಾದ ಹೊಸ ಗಾಡಿಗಳ ಸಂಖ್ಯೆ 2,900,000 ಹೊಸದರ ಬಗ್ಗೆಯೇ ಮಾರಾಟವಾದ ಗಾಡಿಗಳ ಸಂಖ್ಯೆ 50,270

* * * * *

ಇಡೀ ಭೂಲೋಕದಲ್ಲಿರುವ ಮೋಟರ ಗಾಡಿಗಳ ಸಂಖ್ಯೆಯಲ್ಲಿ ಶೇಕಡಾ 77 4 ಯುನೈಟೆಡ್ ಸ್ಟೇಟ್ಸಿನಲ್ಲಿವೆ, 22·6 ಉಳಿದ ಲೋಕಕ್ಕೆ ಹ ಚಲ್ಪಟ್ಟಿವೆ

* * * * *

ಫ್ರಾನ್ಸಿನಲ್ಲಿ ಪ್ರತಿ 28 ಜನರಿಗೆ ಒಂದರಂತೆಯೂ, ಜರ್ಮನಿ 92, ಆಸ್ಟ್ರಿಯಾ 165 ಬೆಲ್ಜಿಯಮ್ 50, ಇಟಲಿ 140, ಸ್ವಿಜರ್ಲೆಂಡು 49, ಆಸ್ಟ್ರೆ ಡು 61, ಇಂಗ್ಲೆಂಡು 27, ಯುನೈಟೆಡ್ ಸ್ಟೇಟ್ಸ 4½ ಈ ರೀತಿ ಜನಸಂಖ್ಯೆಗೆ ಒಂದು ಗಾಡಿಯಂತೆ ಮೋಟರ ಗಾಡಿಗಳಿರುವಾಗ ಹಿಂದೂಸ್ಥಾನಕ್ಕೆ ಪ್ರತಿ 1,415 ಜನರಿಗೆ ಒ ದರಂತೆ ಇದೆ

ಗಳ ಮೇಲೆ ಹೊಂದಿರುವ ವಿಶ್ವಸೃಷ್ಟಿ, ಇವುಗಳಿಗೆಲ್ಲ ಧ್ರುವ ದೇಶವೇ ಕಾರಣವಾಗಿತ್ತೆಂದು ಸೂಚಿಸಿದಂತಾಗುವುದು ಪುರಾಣ ಪುರುಷನು ಕಾಳ ತಮಸ್ಸಿನ ಮರೆಯಲ್ಲಡಗಿದ್ದನು ಅವನ ರೂಪು ಆಕಾಶದಲ್ಲಿ ಕುರಿಯುವ ತೇಜದಂತಿತ್ತು ಅವನೇ ಕಾಲಕಾಲಕ್ಕೆ ವಿಶ್ವವನ್ನು ಪುನರ್ವಸ್ಯಗೊಳಿಸುವನು ಅದಕ್ಕೂ ಮೊದಲು ವಿಶ್ವವು ಅವಿಕಸಿತವಾಗಿದ್ದು, ಪ್ರಳಯದ ಕೋಲಾಹಲದಲ್ಲಿ ಅಂದರೆ ಧ್ರುವ ರಾತ್ರಿಯ ಕಗ್ಗತ್ತಲಲ್ಲಿ ನಾಮರೂಪ ರಹಿತವಾಗಿತ್ತು,—ಇವೇ ಸ್ಮರಣೆಗಳಿಂದ ನಮ್ಮ ಸಿದ್ಧಾಂತಗಳು ಹೊರಟುವಲ್ಲವೇ ಆದರೆ ಕಾಲವು ಸರಿಯುತ್ತ ಹೋಗಲು ಈ ಸ್ಮರಣೆಗಳು ಶಿಥಿಲವಾಗುತ್ತ ಬಂದುವು ಕಲ್ಪನೆಗಳು ಅಸ್ಪಷ್ಟವಾಗುತ್ತ ಬಂದುವು ಅದರಿಂದ ವಿಶ್ವಸೃಷ್ಟಿಯ ವಿಚಾರವಾದ ಸಿದ್ಧಾಂತವನ್ನು ತಿರುಗಿ ಶೋಧಿಸುವ ಆವಶ್ಯಕತೆಯುಂಟಾಯಿತು ಬ್ರಾಹ್ಮಣಗಳಲ್ಲಿ, ಆರಣ್ಯಕಗಳಲ್ಲೂ ಈ ಬಗ್ಗೆ ಮಾತಿದ ಹೋರಾಟವು ವ್ಯಕ್ತವಾಗುವುದು ಪ್ರಾಚೀನ ಸ್ಮರಣೆಗಳನ್ನು ಕಾಡಿರಿಸಿ, ಅವುಗಳ ಮೇಲೆಯೇ ಮನುಷ್ಯನಲ್ಲಿಂದ ಬಂದನು ಅವನ ಬಾಹ್ಯವ್ಯವಂಚನೆಯಲ್ಲಿಂದ ಬಂತು—ಎಂಬೀ ವಾದಗಳನ್ನು ಅದರಿಸಲು ಯತ್ನಿಸಿದರು ಸತ್ಯದ ಒಡಲು ಛೇದಿಸಲು ಆ ಯಜ್ಞವೈರ್ಯರು ಹೋರಾಡುತ್ತಿರಲು "ಇನ್ನೂ ಪ್ರಕಾಶವು ಬೇಕೆಂದು" ಬೇಡಿದರು' ಅವರ ಈ ಕರೆಯೂ ದೊರೂ ನವೀನವೇನು? ಅವರ ಪೂರ್ವಜರು, ಸೂರ್ಯ ದೇವನಿಗಾಗಿ ಮಾಡಿದ ಕರೆಯಲ್ಲವೇನದು? ಧ್ರುವರಾತ್ರಿಯ ದೀರ್ಘ ಕತ್ತಲೆಯಿಂದ, ಭೀಕರತೆಯಿಂದ ತಮ್ಮನ್ನುಳಿಸು! ಎಂದು ಅನಾದಿಯಿಂದ ಅವರು ಕೂಗುತ್ತ ಬಂದಿರಲಿಲ್ಲವೇ?

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಮೃತಂ ಗಮಯ!

"ಅಸತ್‌ನಿಂದ ಸತ್‌ಗೆ ನನ್ನನ್ನೆಯ್ದಿಸು; ಕತ್ತಲೆಯಿಂದ ಬೆಳಕಿಗೆ ನನ್ನೆಯ್ದಿಸಯ್ಯ, ಮರಣದಿಂದ ಶಾಶ್ವತ ತೀರವನ್ನೆಯ್ದಿಸಯ್ಯ" ಎಂಬ ಕರೆಯು ಅದೇಯಲ್ಲವೇನು?

ಲಿಂಗಾಯತರ (ವೀರ ಶೈವರ) ಗತ ವೈಭವ

ಲೇಖಕರು:—ಎಮ್. ಗಣಪತಿ ರಾವ್, ಬಿಗಳ್, ಬಂಟವಾಳ, ದ. ಕ.

ಕರ್ನಾಟಕ ದೇಶದ ಅತೀವ ಲಕ್ಷ ಜನ ಸಂಖ್ಯೆಯ ಧಾರ್ಮಿಕ, ನೈತಿಕ, ಸಾಮಾಜಿಕ ಜೀವನಕ್ಕೆ ಆಶ್ರಯಭೂತವಾಗಿರುವ ವೀರ ಶೈವ ಮತವು ಧಾರತ ದೇಶದ ಇತರ ಮತಗಳಂತೆಯೇ ಸುಪ್ರಸಿದ್ಧವೂ ಪುರಾತನದ್ದೂ ಆಗಿದೆ. ಈ ಮತವು ಕ್ರಿ—ಶ. ೧೦ನೇ ಎರಡನೇ ಶತಮಾನ ಗಳಿಂದಲೂ ಪ್ರಚಾತದಲ್ಲಿತ್ತೆಂದು ತೋರುತ್ತದೆ. ಉತ್ತರ ಭೆಂದೂ ದೇಶ ಕಮುಳು ದೇಶ ಮುಂತಾದ ದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿದ್ದ ಶಿವ ಶರಣರ ಚರಿತ್ರೆಗಳು ಅತೀ ಪ್ರಾಚೀನ ಕಾಲದಿಂದಲೂ ಈ ಮತವು ಇತ್ತೆಂಬುದಕ್ಕೆ ಆಧಾರವಾಗಿವೆ. ಆದರೆ ಈ ಮತವು 12ನೇ ಶತಮಾನದ ವರೆಗೆ ಅಷ್ಟೊಂದು ಪ್ರಸಿದ್ಧಿಯನ್ನು ಪಡೆದಿರಲಿಲ್ಲ.

ಯಾವುದೊಂದು ಮತವಾಗಲೀ ದೇಶವಾಗಲೀ ದೀನ ಸ್ಥಿತಿಗೆ ಬಂದಾಗ ಜಗತ್ತಿಗೆ ಸೂತ್ರಧಾರಿಯಾದ ಪರಮಾತ್ಮನು ಆಯಾ ಕೆಲಸಗಳನ್ನು ಆಯಾ ಕಾಲದಲ್ಲಿ ಬೇರೆ ಬೇರೆ ವ್ಯಕ್ತಿಗಳಿಂದ ಮಾಡಿಸುವನು.

ಮುಂದೆತ್ತ ಬರಲು ಎಡೆ ಇರಲಿಲ್ಲ. ದೇಶದ ಸ್ಥಿತಿಯು ಈ ರೀತಿಯಲ್ಲಿರುವಾಗ ಈ ಜನ ಸಾಮಾನ್ಯರಿಗೆ ಜ್ಞಾನೋ ದ್ಧಯನ್ನು ಕೊಟ್ಟು ಅವರನ್ನು ಮುಂದಕ್ಕೆ ತರುವ ಮಾರ್ಗ ವೆನ್ನು ತೋರಿಸಿ ಕೊಟ್ಟು ಉದ್ಧರಿಸಿದವರು ಮಹಾ ಪುರುಷ ರಾದ ಶ್ರೀ ಬಸವೇಶ್ವರರೇ ಎನ್ನಬಹುದು.

ಬಸವೇಶ್ವರರ ಜನನ ಮತ್ತು ಬಾಲ್ಯ. ಹಾಲು ಕ್ಯ ರಾಜ್ಯದಲ್ಲಿ ನಂತರದ ಬಿಜಾಪುರ ರಾಜ್ಯಕ್ಕೆ ಸೇರಿರುವ ಬಾಗೇವಾಡಿ ಎಂಬ ಅಗ್ರಹಾರವಿತ್ತು. ಈ ಗ್ರಾಮಕ್ಕೆ 6 ಮೈಲು ದೂರದಲ್ಲಿರುವ ಇಂಗಳೇಶ್ವರ ಗ್ರಾಮವು ದೊಡ್ಡ ಪಟ್ಟಣದಂತಿದ್ದು ಬಾಗೇವಾಡಿಯು ಅದಕ್ಕೆ ಸೇರಿದ ಶಾಖಾ ನಗರದಂತಿದ್ದು ಇಂಗಳೇಶ್ವರ ಬಾಗೇವಾಡಿ ಎಂದು ಕರೆಯ ಲ್ಪಡುತ್ತಿದ್ದಿತು. ಈ ಅಗ್ರಹಾರದಲ್ಲಿ ಮಂಡಗೀಲೀಗ ಭಟ್ಟ ನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನಿಗೆ ಮಹಾದೇವ ನೆಂಬ ಮಗನಿದ್ದನು. ಇವನನ್ನು ಮಾದನೆಂದು ಕರೆಯು ತ್ತಿದ್ದರು. ಇವನು ಮಹಾ ವಿದ್ವಾಂಸನಾದುದರಿಂದ ಮಾದ ರಸನೆಂದೂ ಇವನನ್ನು ಕರೆಯುತ್ತಿದ್ದರು. ಇವನ ಹೆಂಡತಿ ವೆರಮಾನಂದದಿಂದ ಅವರನ್ನು ಉಪಚರಿಸಿ ಒಳಗೆ ಕರತಂದು ಮಗುವನ್ನು ತೋರಿಸಿದನು. ಮಗುವನ್ನು ನೋಡಿದೊಡನೆ ಮುಕ್ತೇಶ್ವರರಿಗೆ ತನ್ನ ಆಸೆಯು ಕೈಗೂಡುವ ಸಮಯ ಬಂತೆಂದು ತಿಳಿದು, ತನ್ನ ಜೋಳಿಗೆಯಿಂದ ಸ್ವಲ್ಪ ವಿಭೂತಿ ತೆಗದು ಮಂತ್ರಿಸಿ ಅದನ್ನು ಮಗುವಿನ ಹಣೆಗಿಟ್ಟು ಸರ್ವಾಂಗ ವನ್ನೂ ಲೇಪಿಸಿದರು. ಕೂಡಲೇ ಮಗುವು ಕಣ್ಣುಬಿಟ್ಟು ಅಳ ಲಾರಂಭಿಸಿತು. ಅನಂತರ ನೃಪಭೇಶ್ವರನ ವರದಿಂದ ಹುಟ್ಟಿದ ಈ ಮಗುವಿಗೆ **ಬಸವನೆಂದು** ಹೆಸರಿಟ್ಟು ತಮ್ಮ ಇಷ್ಟಾರ್ಥ ಸಿದ್ಧಿಗಾಗಿಯೂ ಈ ಮಗುವಿನ ಇಷ್ಟಾರ್ಥ ಸಿದ್ಧಿಗಾಗಿಯೂ ಕನ್ನಲ್ಲಿದ್ದ ಇಷ್ಟಲಿಂಗ ವೊಂದನ್ನು ಆ ಮಗುವಿನ ಕುತ್ತಿಗೆಗೆ ಕಟ್ಟಿ, ಆಶೀರ್ವದಿಸಿ ಧೀಕ್ಷಾವಿಧಿಯನ್ನು ನೆರವೇರಿಸಿದರು. ಈ ರೀತಿಯಲ್ಲಿ ಸಣ್ಣ ಮಗುವಿಗೆ ವೀರಶೈವ ಧೀಕ್ಷೆಯಾಯಿತು. ಜಾತವೇದ ಮುನಿಗಳು ಸಂಗಮೇಶ್ವರಕ್ಕೆ ತೆರಳಿದರು.

ಬಸವೇಶ್ವರರಿಗೆ ಎಂಟುವರುಷಗಳಾಗಲು ಮಾದರ ಸನು ಉಪನಯನಕ್ಕೆ ಸಿದ್ಧಪಡಿಸಿದನು. ಆದರೆ ಬಸವೇಶ್ವರರು ತಾನು ಮಗುವಾಗಿರುವಾಗಲೇ ವೀರಶೈವ ಧೀಕ್ಷೆಯಾದುದ

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು.

(ಈಚೆಜ ಜೂನ್ ಮೊದಲಿನ ವಾರದಲ್ಲಿ ಶ್ರೀ ಸೇನಗುಪ್ತರ ಅಧ್ಯಕ್ಷತೆಯಲ್ಲಿ ಸೇರಿದುದು)

ಪ್ಲಾಟ್‌ಫಾರ್ಮಿನ ಮೇಲೆ ಕುಳಿತವರು (ಎಡದಿಂದ) ಶ್ರೀ. ಕಾರ್ನಾಡ ಸದಾಶಿವ ರಾವ್, ಸೇನಗುಪ್ತ, ಟಿ. ಪ್ರಕಾರಂ.
(ಹುಡುಗಿಯರು ಸ್ವಾಗತ ಗೀತವನ್ನು ಹಾಡುತ್ತಿದ್ದಾರೆ)

ವೀರ ಶೈವ ಮತವು ಬಹಳ ದೀನಾವಸ್ಥೆಗೆ ಬಂದ ಕಾಲದಲ್ಲಿ ಅಂದರೆ ಕ್ರಿ. ಶ. 12ನೇ ಶತಮಾನದಲ್ಲಿ ವೀರ ಶೈವ ಮತೋದ್ಧಾರಕರಾದ ಶ್ರೀ ಬಸವೇಶ್ವರರು ಜನ್ಮ ತಾಳಿ ದರು. ಈ ಮಹಾನುಭಾವರು ದೀನಾವಸ್ಥೆಗೆ ಬಂದ ಈ ವೀರ ಶೈವ ಮತವನ್ನು ವಿಶೇಷ ರೀತಿಯಲ್ಲಿ ಪ್ರಚಾರಕ್ಕೆ ತಂದರು. ಮತ್ತು ಅವರ ಕಾಲದಿಂದಲೇ ಕರ್ನಾಟಕದಲ್ಲಿ ವೀರ ಶೈವರು ಹಿಂದು ಪ್ರಬಲವಾದ ಜನಾಂಗವಾಗಲು ಆರಂಭವಾಯಿತು.

ಬಸವೇಶ್ವರರು ಹುಟ್ಟಿದ ಕಾಲದ ಸ್ಥಿತಿಯೂ ಸುಧಾ ರಕರೊಬ್ಬರನ್ನು ಅಪೇಕ್ಷಿಸುವಂತಿದ್ದಿತು. ಬೌದ್ಧ, ಜೈನ, ಧರ್ಮಗಳೂ, ಶ್ರೀ ಶಂಕರಾಚಾರ್ಯ ರಾಮಾನುಜಾಚಾ ರ್ಯರುಗಳ ವೈದಿಕ ಧರ್ಮಗಳೂ ಅವುಗಳ ಪ್ರಚಾರ ಕಾಲ ದಲ್ಲಿದ್ದಂತೆ ಇಲ್ಲದೆ ತಮ್ಮ ತೇಜಸ್ಸನ್ನು ಜನ ಸಾಮಾನ್ಯರಲ್ಲಿ ಪ್ರವೇಶಗೊಳಿಸಲಾರದೆ ದೀನಾವಸ್ಥೆಗೆ ಬಂದಿದ್ದವು. ಅದ ಲ್ಲದೆ ಈ ಆಚಾರ್ಯರು ಬೋಧಿಸಿದ ತತ್ವಗಳನ್ನನುಸರಿಸಿ ಕೆಲಸ ನಡಿಸುತ್ತಿದ್ದ ಅವರ ಅನುಯಾಯಿಗಳು ಎಲ್ಲಾ ವಿಧ ಗಳಲ್ಲಿಯೂ ಬ್ರಾಹ್ಮಣ ವೈಶ್ಯರಲ್ಲಿ ಮಾತ್ರವೇ ಸುಧಾರಣೆ ಕಾರ್ಯವನ್ನು ಅನುಸರಿಸಿದ್ದರಿಂದಲೂ, ಮತಬೋಧನೆಯು ಎಲ್ಲಾ ಗ್ರಂಥಗಳೂ ಸಂಸ್ಕೃತದಲ್ಲಿಯೇ ರಚಿಸಲ್ಪಟ್ಟಿದ್ದುದ ರಿಂದಲೂ ಸಾಮಾನ್ಯ ಜನರಿಗೆ ಧಾರ್ಮಿಕ ವಿಚಾರದಲ್ಲಿ ಮಾದಲಾಂಬಿಕೆ. ಇವರಿಗೆ ಎಲ್ಲಾ ತರದ ಸುಖಗಳಿದ್ದರೂ ಮಕ್ಕಳಿರಲಿಲ್ಲ. ಮಾದಲಾಂಬಿಕೆಯು ನಂದೀಶ್ವರ ವ್ರತವನ್ನು 8 ವರುಷಗಳ ವರೆಗೆ ಆಚರಿಸಿದ ಮೇಲೆ ಒಂದು ಗಂಡು ಮಗುವನ್ನು ಹೆತ್ತಳು. ಆದರೆ ಮಾಡುನದೇನು. ಹುಟ್ಟಿದ ಶಿಶುವು ಕಣ್ಣು ಬಿಡಲಿಲ್ಲ. ಅಳಲಿಲ್ಲ.

ಜಾತವೇದ ಮುನಿಗಳ ಆಗಮನ. ಜಾತವೇದ ಮುನಿಗಳು ವರಮವೀರ ಶೈವರಾಗಿದ್ದು ಈಗಿನ ಹನುಗುಂದ ತಾಲೂಕಿಗೆ ಸೇರಿದ ಕೃಷ್ಣಾಮಲಪಹಾರಿ ಸಂಗಮ ಸ್ಥಳದಲ್ಲಿ ರುವ ಕಪ್ಪಡೀ ಕ್ಷೇತ್ರದಲ್ಲಿದ್ದು ಸಂಗಮೇಶ್ವರನನ್ನು ಪೂಜಿ ಸುತ್ತಲಿದ್ದರು. ಇವರಿಗೆ ಬೇರೆ ಮತಗಳ ಹರಡುವಿಕೆ ಯಿಂದ ಕ್ಷಯಿಸುತ್ತಿದ್ದ ವೀರಶೈವ ಮತವನ್ನು ಪುನರುದ್ಧಾರ ಮಾಡಬೇಕೆಂಬ ಆಸೆಯು ಇದ್ದಿತು. ಅದಕ್ಕಾಗಿ ಇವರು ದೇಶದಲ್ಲೆಲ್ಲಾ ಸಂಚರಿಸುತ್ತಲೇ ಇದ್ದರು. ಇವರ ಆಸೆಯು ನೆರವೇರಲಿಕ್ಕೆ ಸಮಯವು ಸಮೀಪಿಸಿತ್ತು. ಈ ಸಾಧನ ರ್ಯರು ತಮ್ಮ ಅನುಚರರಾದ ಐದು ಮಂದಿ ಗಣಾಧೀಶ ರೊಂದಿಗೆ ಬಾಗೆವಾಡಿಯ ಶಿವಾಲಯಕ್ಕೆ ಬಂದರು. ಆಗ ಮಾದರಸನ ಮನೆಯವರೆಲ್ಲರೂ ಬಹಳ ಮುಃಖದಲ್ಲಿರುತ್ತಾ ರೆಂಬ ವಾರ್ತೆಯನ್ನು ಕೇಳಿ ಅವರು ಮಾದರಸನ ಮನೆಗೆ ಬಂದರು.

ಮನೆಗೆ ಬಂದ ಆ ತಪೋಧನರನ್ನು ಕಂಡು ಮಾದರಸನು ಇವರಿಂದ ಇನ್ನೊಂದು ಸಂಸ್ಕಾರವು ತನಗೆ ಬೇಡವೆಂದರು. ಚಿಕ್ಕ ವಯಸ್ಸಿನಲ್ಲಿಯೇ ತೋರಿಬಂದ ಇಂಥಾ ಪ್ರೌಢಿಮೆಯೂ, ಪ್ರಶ್ನೆಯೂ ಹೆಚ್ಚು ಕಡಿವೆ ಪ್ರತಿ ಒಬ್ಬ ಮತಾಚಾರ್ಯರ ಜೀವಿತದಲ್ಲಿಯೂ ತೋರಿಬರುತ್ತಿವೆ. ಶ್ರೀ ಶಂಕರಾಚಾರ್ಯ ಮಧ್ವಾಚಾರ್ಯ, ರಾಮಾನುಜಾಚಾರ್ಯ, ಯೇಸುಕ್ರಿಸ್ತ ಮುಂತಾದವರ ಸ್ಥಿತಿಯೂ ಹೀಗೆಯೇ ಇತ್ತು. ಸಾಮಾನ್ಯರ ಪ್ರಶ್ನೆಗೂ ಮಹಾ ವಿಭೂತಿಗಳ ಪ್ರಶ್ನೆಗೂ ಬಹಳ ವ್ಯತ್ಯಾಸ ವಿದೆ ಎಂಬುದರಲ್ಲಿ ಸಂಶಯವಿಲ್ಲ.

ಬಸವೇಶ್ವರರು ಮನೆಯಿಂದ ಹೊರಟು ಕಪ್ಪಡೀ ಕ್ಷೇತ್ರಕ್ಕೆ ಹೋಗಿ ತನ್ನ ಗುರುಗಳಾದ ಜಾತವೇದ ಮುನಿ ಗಳನ್ನು ಕಂಡರು. ಮಾದರಸನು ಮಗನ ಉಪಚಾರಕ್ಕೆಂದು ನಾಗಮ್ಮನೆಂಬಾಕೆಯನ್ನು ಅಲ್ಲಿಗೆ ಕರದೊಯ್ದು ಬಿಟ್ಟು ಬಂದನು. ಈಕೆಯನ್ನು ಬಸವೇಶ್ವರರು ಅಕ್ಕನೆಂದೇ ಕರೆ ಯುತ್ತಿದ್ದರು. ಇವರಿಬ್ಬರೂ 12 ವರುಷಗಳ ವರೆಗೆ ಜಾತ ವೇದ ಮುನೀಶ್ವರರಲ್ಲಿ ವೀರಶೈವ ಮತ ತತ್ವಗಳನ್ನು ಕಲಿ ತರು. ವೀರಶೈವ ಮತವನ್ನು ಸುಧಾರಿಸುವ ರೀತಿಯನ್ನೆಲ್ಲಾ ಈ ಮುನೀಶ್ವರರು ಕಲಿಸಿದರು.

ಜಾತವೇದ ಮುನಿಗಳ ಆಶ್ರಮಕ್ಕೆ ಸಾವಿರಾರು ಜನರು ಇವರ ಭೇಟಿಗಾಗಿ ಬರುತ್ತಿದ್ದರು. ಮಹಾ ವಿದ್ವಾಂಸರಾದ

ಬಸವೇಶ್ವರರ ವಾರ್ತೆಯು ಈ ಭಕ್ತಾದಿಗಳಿಂದ ಸುತ್ತಮುತ್ತಲಿನ ದೇಶದಲ್ಲೆಲ್ಲಾ ಹರಡಿತು.

ಬಸವೇಶ್ವರರ ವಿವಾಹ. ಈ ಸಮಯದಲ್ಲಿ ಚಾಲುಕ್ಯ ರಾಜ್ಯವನ್ನು ಬಿಜ್ಜಳನು 1156ರಲ್ಲಿ ಕಲ್ಯಾಣ ರಾಜಧಾನಿಯಲ್ಲಿ ಆಳಿಕೊಂಡಿದ್ದನು ಬಿಜ್ಜಳನ ಆಸ್ಥಾನದಲ್ಲಿ ಬಸವೇಶ್ವರರ ತಂದೆಯಾದ ಮಾದರಸನ ತಂಗಿಯ ಗಂಡನಾದ ಬಲದೇವನೆಂಬವನು ಮಂತ್ರಿಯಾಗಿದ್ದನು ಇವನಿಗೆ ಗಂಗಾಂಬಿಕೆ ಎಂಬ ಒಬ್ಬಳೇ ಮಗಳಿದ್ದಳು ಜಾತವೇದ ಮುನಿಗಳ ಆಶ್ರಮದಲ್ಲಿ ತನ್ನ ಅಳಿಯನಾದ ಬಸವೇಶ್ವರರು ಮಹಾ ವಿದ್ವಾಂಸನಾಗಿರುವುದನ್ನು ಬಲದೇವನು ಕೇಳಿ ತನ್ನ ಮಗಳನ್ನು ಅವರಿಗೆ ಹುಡುವೆ ಮಾಡಿಕೊಡ ಬೇಕೆಂದು ಆಲೋಚಿಸಿ ಹೇಳಿ ಕಳುಹಿಸಿದನು ಆದರೆ ಬಸವೇಶ್ವರರು ಮದುವೆಯಾದರೆ ಸಂಸಾರದಲ್ಲಿ ಬಿದ್ದು ಮತ ಪ್ರಚಾರಕಾರ್ಯ ಮಾಡಲು ಸಾಧ್ಯವಿಲ್ಲವೆಂದು ಗುರುಗಳ ಕೊಡನೆ ವಾದಿಸಿದರು ಮದುವೆಯಾದರೂ ಈ ಕೆಲಸ ಮಾಡಲು ಯಾವ ತರದ ದೋಷವು ಬರಲಾರದೆಂದು ಗುರುಗಳು ಸಮಾಧಾನ ಪಡಿಸಿದರು ಅನಂತರ ಅವರು ಕಲ್ಯಾಣಕ್ಕೆ ಬಂದು ಗಂಗಾಂಬಿಕೆಗೆ, ವೀರಶೈವಾಚಾರದಂತೆ ಶಿವಧೀಕ್ಷೆಯ ನ್ನಿತ್ತು ವಿವಾಹವಾದರು ವಿವಾಹವಾದ ನಂತರ ಪತ್ನಿಯಾದ ಗಂಗಾಂಬಿಕೆ, ಅಕ್ಕ ನಾಗಮ್ಮ (ನಂಗಾಂಬಿಕೆ) ಇವರೊಂದಿಗೆ ಬಸವೇಶ್ವರರು ಸಂಗಮೇಶ್ವರಕ್ಕೆ ಬಂದು ಉಪದೇಶ ಹೊಂದುತ್ತಲಿದ್ದರು.

ಈ ರೀತಿಯಲ್ಲಿ ಕೆಲವು ಕಾಲ ಕಳೆಯಲು ಮಂತ್ರಿಯಾದ ಬಲದೇವನು ಕಾಲವಾಗಲು ಬಸವೇಶ್ವರರನ್ನು ಮಂತ್ರಿಯಾಗಿ ನೇಮಿಸಿದರು ಜೈನ ರಾಜಸ್ಥಾನದಲ್ಲಿ ವೀರ ಶೈವ ಮಂತ್ರಿಯೊಬ್ಬರು ಮುಂದಕ್ಕೆ ಬಂದಂತಾಯಿತು ಬಸವೇಶ್ವರರಿಗೂ ರಾಜಾಶ್ರಯವು ದೊರಕಿ ವೀರ ಶೈವ ಮತ ಪ್ರಚಾರಕ್ಕೆ ಅಧಿಕಾರ ಬಲವೂ ಧನದ ಬಲವೂ ಸಿಕ್ಕಿದಂತಾಯಿತು

ಬಸವೇಶ್ವರರು ರಾಜಕಾರ್ಯವನ್ನು ನಡಿಸುತ್ತಾ ತನ್ನ ಮನೆಯಲ್ಲಿ ಜಂಗಮಾರ್ಚನೆ ನಿರತರಾಗಿದ್ದರು ಈ ಸಮಯದಲ್ಲಿ ಬಸವೇಶ್ವರರ ಸಹೋದರಿಯಾದ ನಾಗಲಾಂಬಿಕೆಯ ಗರ್ಭದಲ್ಲಿ ಈಶ್ವರನ ಚೈತನ್ಯಾಂಶವು ರೂಪುಗೊಳ್ಳುತ್ತಿತ್ತು ಚೆನ್ನ ಬಸವನೆಂಬ ಮಗುವು ಹುಟ್ಟಿತು ಅನಂತರ ಬಿಜ್ಜಳನ ಸಹೋದರಿಯಾದ ನೀಲಲೋಚನೆ ಎಂಬ ಜೈನ ಕನ್ನಿಕೆಗೆ ವೀರ ಶೈವ ದೀಕ್ಷೆಯನ್ನಿತ್ತು ಅವರು ನುಡುವೆ ಯಾದರು

ವೀರ ಶೈವ ಮತದ ತತ್ವಗಳೂ ಆಚಾರಗಳೂ. ವೀರಶೈವ ಮತಕ್ಕೆ ಶಕ್ತಿ, ವಿಶಿಷ್ಟಾದ್ವೈತ, ಶಿವಾದ್ವೈತ ಅಥವಾ ವಿಶೇಷಾದ್ವೈತ ಎಂಬ ಹೆಸರುಗಳು ಇವೆ ಈ ಮತವನ್ನು ಅನುಸರಿಸುವವರಿಗೆ ವೀರಶೈವರು, ಲಿಂಗಾಯತರು ಅಥವಾ ಅವ್ರಾಹ್ಮಣರು ಎಂಬ ಹೆಸರುಗಳಿವೆ ಇವರು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯನೆಂಬ 6 ಸ್ಥಳಗಳನ್ನೂ ಒಂದೊಂದಾಗಿ ದಾಟಿ, ಪ್ರಾಣ ಧರ್ಮ, ಮನೋ ಧರ್ಮ, ದೇಹ ಧರ್ಮ ಮುಂತಾದ ಧರ್ಮಗಳಿಂದ ಪಾರಾಗಬೇಕು ಜೀವನು, ಗುರು, ಲಿಂಗ ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷಿ ಮಂತ್ರಗಳೆಂಬ ಅಷ್ಟಾವರ್ಣಗಳು ಲಿಂಗಾಚಾರ, ಸದಾಚಾರ, ಭೃತ್ಯಾಚಾರ, ಶಿವಾಚಾರ ಮತ್ತು ಗಣಾಚಾರ ಎಂಬ ಪಂಚಾಚಾರಗಳನ್ನು ಆರಿಭುಬೇಕು ಇವುಗಳನ್ನು ಗುರುಮೂಲಕ ಧೀಕ್ಷಿತನಾದ ವೀರ ಶೈವನು ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯಗಳೆಂಬ ಚತುರ್ವಿಧ ಮುಕ್ತಿಗೂ ಅಧಿಕಾರಿಯಾಗುವನು

ಶಿವಭಕ್ತಿಯುಳ್ಳ ಯಾರಾದರೂ ಯಾವ ಕುಲದಲ್ಲಿ ಹುಟ್ಟಿದವರಾದರೂ ಈ ಮತದಲ್ಲಿ ಸೇರಿ ಮುಕ್ತನಾಗಬಹುದು ಈ ಮತವನ್ನು ಪ್ರವೇಶಿಸುವುದರಿಂದ ಅವನ ಹಿಂದಿನ ಕುಲಜನ್ಮಾದಿಗಳೆಲ್ಲವೂ ನಷ್ಟವಾಗುವುದರಿಂದ ಆ ಮತದಲ್ಲಿ ಯಾವ ಹಿನ್ನೆ ಭೇದಗಳನ್ನೂ ಎಣಿಸಲಾಗದು ಈ ನಿಯಮಗಳು ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಅನ್ವಯಿಸುವವು

ನಿತ್ಯಾಚರಣೆಯು ಸೂಕ್ಷ್ಮಾಗಮೆ ಮತ್ತು ಪಾರಮೇಶ್ವರಾಗಮಗಳಲ್ಲಿ ವಿವರವಾಗಿ ಹೇಳಿಯಿದೆ. ಮೇಲಿನ ತತ್ವಾಚಾರಗಳಿಂದ ವ್ಯಾಪ್ತವಾದ ಮತವನ್ನು ಬಸವೇಶ್ವರರು ಕರ್ನಾಟಕ ದೇಶದಲ್ಲಿ ಪ್ರಚಾರ ಮಾಡಿದರು. ಭಾರತ ದೇಶದಲ್ಲಿ ಧರ್ಮ ಪ್ರಚಾರ ಕಾರ್ಯವು ಒಬ್ಬೊಬ್ಬರಿಂದ ಒಂದೊಂದು ರೀತಿಯಲ್ಲಿ ನಡೆದಿದೆ. ಶ್ರೀ ಬುದ್ಧ, ಶ್ರೀ ಶಂಕರ, ಶ್ರೀ ಮಧ್ವ, ಶ್ರೀ ರಾಮಾನುಜಾಚಾರ್ಯರುಗಳು ದೇಶದ ಒಂದೊಂದು ಸ್ಥಳಕ್ಕಿ ಕಾಲುನಡೆಯಲ್ಲಿ ಸಂಚರಿಸಿ ತಮ್ಮ ತಮ್ಮ ಸಿದ್ಧಾಂತಗಳನ್ನು ಸ್ಥಾಪಿಸಿದರು ಆದರೆ ವೀರಶೈವ ಮತೋದ್ಧಾರಕರಾದ ಬಸವೇಶ್ವರರ ಕಾರ್ಯವು ಎಲ್ಲರಿಗಿಂತಲೂ ಬೇರೆ ವಿಧವಾಗಿತ್ತು ಇವರು ತಮ್ಮ ಮತ ಪ್ರಚಾರಕ್ಕಾಗಿ ಸನ್ಯಾಸವನ್ನು ಸ್ವೀಕರಿಸಲಿಲ್ಲ ದೇಶ ಸಂಚಾರ ಮಾಡಲಿಲ್ಲ ದೊಡ್ಡ ದೊಡ್ಡ ವರಮತವಾದಿಗಳೊಡನೆ ವಿಸಂಗಿಸಿ ಅವರ ಮತವನ್ನು ಖಂಡಿಸಲಿಲ್ಲ. ತನ್ನ ವಾಸಸ್ಥಳದಲ್ಲಿಯೇ ಗೃಹಸ್ಥ ಧರ್ಮದಲ್ಲಿಯೇ ಮಂತ್ರಿ ಪದವಿಯಲ್ಲಿದ್ದು ತನ್ನ ಕೆಲಸ ನಡಿಸಿದರು ಇವರ ಮತಪ್ರಚಾರಕ್ಕೆ ರಾಜಾಶ್ರಯವೂ ಇರಲಿಲ್ಲ ಯಾಕೆಂದರೆ ಅರಸನಾದ ಬಿಜ್ಜಳನು ಇವರಿಗೆ ಯಾವ ತರದ ಸಹಾಯವನ್ನೂ ಮಾತಲಿಲ್ಲ ಈ ರೀತಿಯಲ್ಲಿದ್ದರೂ ಇವರ ಮತಪ್ರಚಾರ ಕಾರ್ಯವು ಇವರ ಜೀವನ ಕಾಲದಲ್ಲಿಯೇ ಅತಿಶಯ ರೀತಿಯಿಂದ ಅಭಿವೃದ್ಧಿ ಸ್ಥಿತಿಗೆ ಬಂತು ಲಕ್ಷಾಂತರ ಜನರು ಅವರ ಈ ಮತವನ್ನು ಅವಲಂಬಿಸಲು ಹಲವು ಕಾರಣಗಳಿವೆ

1 ಬಸವೇಶ್ವರರು ಮಂತ್ರಿ ಪದವಿಯಲ್ಲಿದ್ದರೂ ಸಾಮಾನ್ಯ ಜನಸಮೂಹದಿಂದ ಬೇರೆಯೆಂದು ಭಾವಿಸದೆ ಈಶ್ವರಾಧೀನರಂತಿದ್ದು, ಭಗವದ್ಭಕ್ತಿ, ಈಶಪೂಜೆ, ಸಜ್ಜನ ಸೇವೆಗಳಲ್ಲಿಯೂ, ಸತ್ಕಥಾ ಪ್ರಸಂಗಗಳಲ್ಲಿಯೂ, ಕೇವಲ ರಾಜ ಋಷಿಗಳಂತಿದ್ದ ಅವರ ಆಚರಣೆಯೇ ಅನೇಕರಿಗೆ ಅವರಲ್ಲಿ ಪೂಜ್ಯಭಾವನೆಯನ್ನುಂಟು ಮಾಡಲು ಸಾಕಷ್ಟು ಸಾಧನಗಳಾಗಿದ್ದವು

2 ಬಸವೇಶ್ವರರು ಜನ್ಮವನ್ನಳ್ಳಿ, ಗುಣವನ್ನು ಭೂಷಿಸುತ್ತಿದ್ದರು ಯಾರು ಗುರು, ಲಿಂಗ, ಜಂಗಮಗಳಿಗೆ ಅಧೀನರಾಗಿ ಗುರುವಿಗೆ ತನುವನ್ನೂ ಲಿಂಗಕ್ಕೆ ಮನವನ್ನೂ ಅರ್ಪಿಸಲು ಸಿದ್ಧರಾಗಿದ್ದರೋ, ಅವರಿಗೆ ಬಸವೇಶ್ವರರು ಶಿವ ಧೀಕ್ಷೆಯನ್ನು ಕೊಟ್ಟು ತಮ್ಮ ಮತದಲ್ಲಿ ಸೇರಿಸಿಕೊಳ್ಳುತ್ತಿದ್ದರು ಇದರಿಂದ ಜಾತಿ ಸನ್ಮೂಢವಾಗಿ ಅನೇಕ ಕಷ್ಟಗಳಿಗೆ ಒಳಗಾಗಿದ್ದ ಅಸಂಖ್ಯಾತ ಜನರು ಆ ಬಾಧೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಈ ಮತವನ್ನು ಅವಲಂಬಿಸಿದರು

3 ಎಲ್ಲರೂ ಅನುಸರಿಸಬೇಕಾದ ಧರ್ಮಗಳು ಎಲ್ಲರಿಗೂ ತಿಳಿಯುವಂತೆ ಸುಲಭವಾದ ಕನ್ನಡ ಭಾಷೆಯಲ್ಲಿಯೇ ಬರೆದಿರುವರು ಇದರಿಂದ ವೀರಶೈವರಿಗೆ ತಮ್ಮ ಮತ ತತ್ವಗಳನ್ನು ಸುಲಭದಲ್ಲಿ ತಿಳಿಕೊಳ್ಳಲು ಸಾಧ್ಯವಾಯಿತು

4 ತಮ್ಮ ಮತಾನುಯಾಯಿಗಳಲ್ಲಿ ಸದ್ಭಾವ ಸದಾಚಾರಗಳು ನೆಲೆಗೊಳ್ಳುವಂತೆ ಮಾಡಿದರು ಮದ್ಯ ಮಾಂಸಾಹಾರಿಗಳು ತಮ್ಮ ಮತದವರಲ್ಲಿ ಇಲ್ಲದಂತೆ ಮಾಡಿದರು

ಈ ರೀತಿಯಲ್ಲಿ ಮಹಾತ್ಮರಾದ ಬಸವೇಶ್ವರರು, ಪೂರ್ವಕಾಲದಿಂದಲೂ ಇದ್ದು ಕಾಲಮಹಿಮೆಯಿಂದ ಕಳೆಗುಂದಿದ್ದ ವೀರಶೈವ ಮತವನ್ನು ದೇಶಕಾಲಗಳ ಅನುಕೂಲತೆಗೆ ಸರಿಯಾಗುವಂತೆ ಸುಧಾರಿಸಿ ಅದನ್ನು ಸಾಧ್ಯವಿದ್ದ ಸಕಲ ರೀತಿಗಳಿಂದಲೂ ಪ್ರಚಾರಗೊಳಿಸಿದರು

ಬಸವೇಶ್ವರರು ತಮ್ಮ ಮತ ಪ್ರಚಾರ ಮಾಡುತ್ತಿರುವಾಗ ಬ್ರಾಹ್ಮಣ, ಜೈನ ಮತಾವಲಂಬಿಗಳು ಇವರನ್ನು ಯಾವ ವಿಧದಿಂದಲಾದರೂ ನಾಶಗೊಳಿಸಬೇಕೆಂದು ಜೈನ ಮತಾವಲಂಬಿಯಾದ ಬಿಜ್ಜಳ ರಾಯನೊಡನೆ ಚಾಡಿ ಹೇಳಿ ದ್ವೇಷ ಭಾವನೆಯನ್ನು ಹುಟ್ಟಿಸಿದರು ಬಿಜ್ಜಳನು ವೀರ ಶೈವರಿಗೆ ಮರಣದಂಡನೆ ಮುಂತಾದ ಕ್ರೂರಶಿಕ್ಷೆಗಳನ್ನು ಮಾಡುವದು ಹೆಚ್ಚಾಗುತ್ತಾ ಬಂತು. ಇದಕ್ಕಾಗಿ ಬಸವೇಶ್ವರರು ಮಂತ್ರಿ ಪದವಿಯನ್ನು ಬಿಟ್ಟು ತಮ್ಮ ಇಬ್ಬರು ಸತ್ಪುತ್ರರು, ಮಗನಾದ ಬಾಲಸಂಗ, ಅಕ್ಕ ನಾಗಮ್ಮ, ಅವರ ಗಂಡನಾದ ಶಿವಸ್ವಾಮಿ, ಚೆನ್ನ ಬಸವ, ಅವರೊಂದಿಗೆ ಹೊರಟು ಸಂಗಮೇಶ್ವರಾಲಯವನ್ನು ಸೇರಿದರು

ತಮ್ಮ ಮತಾನುಯಾಯಿಗಳಾದ ಶಿವ ಶರಣರನ್ನು ಕೊಲ್ಲಿಸಿದ ಬಿಜ್ಜಳನನ್ನು ಬಸವೇಶ್ವರರು ಕೊಲ್ಲಿಸಿದರೆಂಬ ಅಪವಾದವು ಅವರ ಮೇಲಿದೆ ಆದರೆ ಸಿಂಗಿ ರಾಜಪುರಾಣದಲ್ಲಿ ಬಿಜ್ಜಳನನ್ನು ಕೊಲ್ಲಿಸಿದ ವಿಷಯವು ಕಾಣುವುದಿಲ್ಲ ಬಿಜ್ಜಳನು ಬಸವೇಶ್ವರರ ಹೇಳಿಕೆಯಂತೆ ಚೆನ್ನಬಸವನನ್ನು ಮಂತ್ರಿಯಾಗಿ ಮಾಡಿಕೊಂಡನೆಂದೂ ಬಿಜ್ಜಳನು ಬಸವೇಶ್ವರನ ಜತೆಯಲ್ಲಿಯೇ ಸುಖವಾಗಿದ್ದನೆಂದೂ ಸಿಂಗ ರಾಡಿಯು ಹೇಳುತ್ತಾನೆ ಜೈನ ಕೃತಿಗಳಾದ ಬಿಜ್ಜಳ ಚರಿತೆ ಮುತ್ತು, ಬಿಜ್ಜಣರಾಯ ಪುರಾಣಗಳಲ್ಲಿಯೂ ಅಭಿಪ್ರಾಯಗಳೂ ಒಂದೇ ಆಗಿರುವುದಿಲ್ಲ. ಬಸವೇಶ್ವರರು ಕಳುಹಿಸಿದ ವಿಷದ ಮಾವಿನ ಹಣ್ಣನ್ನು ತಿಂದು ಬಿಜ್ಜಳನು ಮರಣಹೊಂದಿದ ನೆಂದು ಬಿಜ್ಜಳ ಚರಿತೆ ಸಂಧಿ ೧೨ ಪದ್ಯಗಳು ೭೫-೭೮ರಲ್ಲಿದೆ. ಬಿಜ್ಜಳನು ಸನ್ಯಾಸವನ್ನು ಧರಿಸಿದನೆಂದೂ ಆಗ ಅವನ ಮಗ ನಾದ ಸದಾಶಿವ ಬಿಜ್ಜಳನಿಗೆ ೩ವರುಷ ವಯಸ್ಸಾಗಿದ್ದುದರಿಂದ ಬಸವೇಶ್ವರರೇ 12 ವರ್ಷಕಾಲ ರಾಜ್ಯಭಾರ ನಡಿಸಿದರೆಂದೂ ಕಡೆಯಲ್ಲಿ ಶಿವ ಬಿಜ್ಜಳನು ಬಸವೇಶ್ವರರನ್ನು ಕೊಂದನೆಂದೂ ಬಿಜ್ಜಳ ಪುರಾಣದಲ್ಲಿದೆ. ಕ್ರಿ ಶ. 1167ರ ಬಂದು ಶಿಲಾ ಶಾಸನವು ದೊರಕಿರುವದಾಗಿಯೂ ಆದರಲ್ಲಿ ಬಿಜ್ಜಳನು ಸನ್ಯಾಸ ಧೀಕ್ಷೆಯನ್ನು ತೆಗೆದುಕೊಂಡು ಸೋಮದೇವನೆಂಬನಿಗೆ ಪಟ್ಟಗಟ್ಟಿ ರಾಜ್ಯ ಪರಿತ್ಯಾಗ ಮಾಡಿದನೆಂದು ಇರುವ ದಾಗಿ ರಾ ಹಳಹಟ್ಟಿಯವರು ಶಿವಾನುಭವ ಸಂ ೨ ಪುಟ ೧೧೮ರಲ್ಲಿ ತಿಳಿಸುತ್ತಾರೆ. ಶಾಸನವೇ ನಿಜವಾದುದರಿಂದ ಬಸವೇಶ್ವರರ ಮೇಲಿದ್ದ ಅಪವಾದವು ಹೋದಂತಾಯಿತು ಬಸವೇಶ್ವರರು ಸಂಗಮೇಶ್ವರದಲ್ಲಿಯೇ ಕಾಲವಾದರು

ವೀರಶೈವ ರಾಜ್ಯಗಳು

ಬಸವೇಶ್ವರರ ಕಾಲದಲ್ಲಿ ವೀರಶೈವರಿಗೆ ರಾಜಾಶ್ರಯವು ಇಲ್ಲದೆ ಇದ್ದರೂ ಬಸವೇಶ್ವರರ ಕಾಲದ ನಂತರ ಜೈನ ರಾಜರುಗಳು ಜೈನ ಮತವನ್ನು ಬಿಟ್ಟು, ವೀರಶೈವಮತವನ್ನು ಅವಲಂಬಿಸಲಾರಂಭಿಸಿದರು ಬಸವೇಶ್ವರರ ಜನ್ಮ ಭೂಮಿಯು ಬಿಜಾಪುರ ರಾಜ್ಯದಲ್ಲಿ ಒಡಕವಾದುದರಿಂದ ಆ ಭಾಗದಲ್ಲಿ ವೀರಶೈವ ರಾಜರುಗಳು ಯಾರೂ ಇರಲಿಲ್ಲ ಉತ್ತರ ಕನ್ನಡ ಜಿಲ್ಲೆಯಲ್ಲಿದ್ದ ಸೋದೆ ಮತ್ತು ಬಿಳಿಗಿ ಜೈನ ರಾಜ ಮನೆತನಗಳು ಜೈನಮತವನ್ನು ಬಿಟ್ಟು ವೀರಶೈವ ಮತವನ್ನು 15ನೇ ಶತಮಾನದಲ್ಲಿ ಅವಲಂಬಿಸಿದರು ಮೈಸೂರು ದೇಶದ ಒಂದು ಭಾಗವನ್ನು ಆಳುತ್ತಿದ್ದ ಚಿಂಗಾಳ್ವರೂ ಜೈನ ಮತವನ್ನು ತ್ಯಜಿಸಿ ವೀರಶೈವರಾದರು ಇನ್ನು ಶಿವಮೊಗ್ಗಾ ಜಿಲ್ಲೆಯಲ್ಲಿ ಚಂದ್ರಗುತ್ತಿ, ಬ್ರಹ್ಮಾಪುರ, ಜಂಬೂರು, ಕುಂಬಿಸೆ, ಧಾನಿವಾಸ, ಆಡಿಗೆ, ಉದ್ರಿ, ಗುಡವೆ, ಗೆಂಡಲು, ತಲವೂರು, ಮಂಚೆ, ಸಾತಳ, ಬೆಳವಂಡೂರು, ಹೆಬ್ಬಿ ಮುಂಡಗದ್ದೆ, ಹೊನ್ನೂರು, ಹಾರನಹಳ್ಳಿ, ತರಿಕೆರೆ, ಬಾಣಾವರ, ಕೆಂಗೆಯ ಸಿಡುಗಲ್, ಬೆಳಗುತ್ತ, ಮದಗಿರಿ, ಮಾಸೂರು ವಸ್ತಾರದ ನಾಯಕರೆಲ್ಲರೂ ವೀರಶೈವರಾದರು ಅದಲ್ಲದೆ ಉಮ್ಮತ್ತೂರು, ನುಗ್ಗೆಹಳ್ಳಿ, ನುಗತ್ತೂರು, ಚಿಕ್ಕನಾಯಕನ ಹಳ್ಳಿ, ಬಿಜ್ಜಾವರ, ಅಜ್ಜಾವರ, ಎಡಕೊರೆ, ಚಿಂತಕಲಕ್ಕು, ಮೂಗುರು, ಕಳಲೆ, ಎತಕೊರೆ, ಬೆಳವಲ, ರಾಸಪಳ್ಳಿ ನಾಯಕರೂ ವೀರಶೈವರಾದರು ಒಟ್ಟಾರೆ ಉತ್ತರ ಕನ್ನಡ ಈಗಿನ ಮೈಸೂರು ರಾಜ್ಯ, ಕೊಡಗುದೇಶದ ರಾಜರೆಲ್ಲರೂ ವೀರಶೈವ ಮತಾವಲಂಬಿಗಳಾದರು

ಕೆಳದಿ ನಾಯಕರು 1568ರಿಂದ 1763ರ ವರೆಗೆ 200 ವರ್ಷ ಕಾಲ ರಾಜ್ಯಭಾರ ಮಾಡಿದರು ಮೇಲೆ ಹೇಳಿದ ಹೆಚ್ಚಿನ ನಾಯಕರು ಕೆಳದಿ ನಾಯಕರ ಒಳ ಅರಸರಾದರು ಕೆಳದಿ ರಾಜ್ಯವು 1763ರಲ್ಲಿ ಬಿದ್ದು ಹೋದರೂ ಕೊಡಗು ದೇಶವು 1834ರ ವರೆಗೆ ವೀರ ಶೈವ ರಾಜರ ಆಳ್ವಿಕೆಯಲ್ಲಿಯೇ ಇತ್ತು ಈ ಅರಸರ ಕಾಲದಲ್ಲಿ ಉತ್ತರ ಕನ್ನಡ, ಧಾರವಾಡ, ಬಿಜಾಪುರ, ಮೈಸೂರ ದೇಶ, ಕೊಡಗು ರಾಜ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾವಿರಾರು ಜಂಗಮ ಮಠಗಳು ಸ್ಥಾಪಿಸಲ್ಪಟ್ಟವು ಇವುಗಳಲ್ಲಿ ಶೃಂಗೇರಿ ಮಠಗಳಿಗೆ ಚರಂತಿ ಮಠಗಳೆಂದೂ ದೊಡ್ಡ ಮಠಗಳಿಗೆ ಮುಹತ್ತಿನ ಮಠಗಳೆಂದೂ ಇವುಗಳ ಮೇಲಧಿಕಾರಿ ನೋಡುವ ಮಠಗಳಿಗೆ ಸಿಂಹಾಸನ ಧರ್ಮಮಠಗಳೆಂದೂ ಹೆಸರಿತ್ತು ಇವುಗಳಿಗೆ ಹೆಚ್ಚು ವೀರಶೈವ ರಾಜರು ಉಂಬಳಿ ಬಿಟ್ಟಿರುವರು ಈ ರಾಜರುಗಳು ಹಿಂದೂ ದೇವಾಲಯಗಳಿಗೂ, ಇಗರ್ಜಿಗಳಿಗೂ, ಮುಸಲ್ಮಾನರಿಗೂ ಸಹ ಹೆಚ್ಚು ಉಂಬಳಿ ಬಿಟ್ಟಿರುತ್ತಾರೆ

ಈ ರಾಜರುಗಳ ರಾಜ್ಯಭಾರವು ಉತ್ತಮ ರೀತಿಯಲ್ಲಿ ನಡೆಯುತ್ತಿತ್ತು ನೌಕಾ ಸೈನ್ಯವೂ ಇತ್ತು ದೇಶದ ಎಲ್ಲಾ ಭಾಗಗಳಲ್ಲಿಯೂ ಇವರು ಕಟ್ಟಿಸಿದ ಹಲವು ಕೋಟೆಗಳು ಈಗಲೂ ಇವೆ

ವೀರ ಶೈವ ಕವಿಗಳು

ಕನ್ನಡ ಭಾಷೆಯಲ್ಲಿ ಗ್ರಂಥ ರಚನೆ ಮಾಡಿರುವ ಕವಿಗಳಲ್ಲಿ ಜೈನರು, ವೀರ ಶೈವರು, ವೈಷ್ಣವರು ಎಂಬ ಮೂರು ಪಂಗಡಗಳಾಗಿ ವಿಂಗಡಿಸಬಹುದು ಇವರಲ್ಲಿ ವೀರ ಶೈವ ಕವಿಗಳು 12ನೇ ಶತಮಾನದಿಂದ 18ನೇ ಶತಮಾನದ ವರೆಗೆ ಕನ್ನಡ ಭಾಷೆಯಲ್ಲಿ ವಿಶೇಷವಾಗಿ ಗ್ರಂಥಗಳನ್ನು ಬರೆದಿದ್ದಾರು ಬಸವೇಶ್ವರ ಕಾಲದಿಂದ 14ನೇ ಶತಮಾನದ ವರೆಗೆ ಬರೆದ ಗ್ರಂಥಗಳು ಮತಸಂಬಂಧ ಗ್ರಂಥಗಳಾಗಿದ್ದು ವಚನ ರೂಪದಲ್ಲಿಯೇ ಬರೆಯಲ್ಪಟ್ಟಿವೆ. ನಂತರ ಬರೆದ ಗ್ರಂಥಗಳು ರಗಳೆ, ಚಂಪೂ, ಷಟ್ಪದಿ, ತ್ರಿವದಿ, ಸಾಂಗತ್ಯ, ರೂಪದಲ್ಲಿ ಬರೆಯಲ್ಪಟ್ಟಿವೆ ಇವುಗಳಲ್ಲಿ ಹೆಚ್ಚಿನವು ವೀರ ಶೈವ ಮತಪ್ರಚಾರಕರಾದ ಬಸವೇಶ್ವರರು, ಚೆನ್ನ ಬಸವ, ಅಲ್ಲಮ ಪ್ರಭು, ಮಹಾದೇವಿಯಕ್ಕ ಇವರ ವಿಷಯ ಬರೆದ ದೊಡ್ಡ ದೊಡ್ಡ ಕಾವ್ಯಗಳಾಗಿವೆ. ಇವರು ಬರೆದ ಗ್ರಂಥ

(ಉಳಿದ ಭಾಗ ಮುಂದಿನಸಂಚಿಕೆಯಲ್ಲಿ)

ಲೋಕದ ಮಜೂರರ ಕ್ರಾಂತಿ

ಲೇಖಕರು—ಜಿ. ರಾಘವೇಂದ್ರ ಶೆಣೈ, M. A ಕೆನರಾ ಹೈಸ್ಕೂಲ, ಮಂಗಳೂರು

ಪಾಶ್ಚಾತ್ಯ ದೇಶಗಳಲ್ಲಿ ಸಮಾಜವು ನಂಗಡ್ಡಳಾಗಿ ಭೇದಿತವಾದುದು ಈಗಿನ ನವನಾಗರೀಕತೆಯ ಫಲವಾಗಿರುತ್ತದೆ ಬಂಡವಾಳಗಾರರ (Capitalist) ಭಾಗವು ಎಲ್ಲ ಕೈಗಾರಿಕೆಗಳನ್ನು ವಶೀಕರಿಸಿ ಹಣವೆನ್ನು ಜನಾಯಿಸಿ ಅದರಂತೆಯೇ ಖರ್ಚು ಮಾಡಿ ಭೋಗವಿಲಾಸಗಳಲ್ಲಿ ಮುಳುಗಿರುವದು ಅವರ-ಜೋತೆಯಲ್ಲಿಯೇ ಕಾರಖಾನೆಗಳಲ್ಲಿ ಹಗಲಿರುಳು ದುಡಿದು, ಬೆವರಿಳಿಸುವವರಿಂದಲೂ ದುರ್ಬಲತೆಯಿಂದಲೂ ಅಜ್ಞಾನದಿಂದಲೂ ಬೇಸತ್ತು ತಮ್ಮ ಸಾಹೇಬರ ಸಮಯ ಕಾದು ಅವರ ಮನಸ್ಸಿನಂತೆ ನಡೆಯುನಂತಹ ಒಂದು ವರ್ಗವು ಕಾಲಹರಣ ಮಾಡುತ್ತಲಿರುವದು ಈ ತರದ ಇಬ್ಬರೊಳಗಿರುವ ದೊಡ್ಡ ಭೇದವು ಈಗಿನ್ನ ಔದ್ಯೋಗಿಕ ಕ್ರಾಂತಿಯ ಫಲವಾಗಿದೆ ಕೈಗಾರಿಕೆಗಳು ಬೇರೆ ಬೇರೆ ಶೋಧನೆಗಳಿಂದ ಬೆಳೆದಿವೆ ಪ್ರಯಾಣ ಸೌಕರ್ಯಗಳು ಹೆಚ್ಚಿವೆ ಸಾಮಾನುಗಳು ಒಂದು ಊರಿನಿಂದ ಇನ್ನೊಂದಕ್ಕೆ ಸುಲಭವಾಗಿ ಹೋಗುವುದು ಜನರ ಬೇಡಿಕೆಗಳ ಹೆಚ್ಚಾಗಿವೆ ಇವರಿಂದ ಸಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕೆಗಳ ಕೆಲವು ಸ್ಥಳಗಳಲ್ಲಿ ಕೇಂದ್ರಿತವಾಗಿ ಸಾವಿರಗಟ್ಟಲೆಗಳಲ್ಲಿ ಕೆಲಸ ಮಾಡುವ ದೊಡ್ಡ ಗಿರಣಿಗಳಿಂದ ತಲೆ ಒಡೆದುಕೊಳ್ಳುವ ಜನರಿಗೆ ನಸ್ತುಗಳು ಹೇರಳವಾಗಿವೆ ಎಲ್ಲಿ ಆಗುವುದು ಎಂಬುದು ಕೂಡ ತಿಳಿಯಲ್ಲ. ಕೆಲಸಗಾರರಿಗೆ ತಮ್ಮ ಪಾಲಿಗೆ ಬಂದ ಕೆಲಸದ ಹೊರೆಯ ಪ್ರಮಾಣದ ಅರಿವೂ ಇರುವುದಿಲ್ಲ. ಅದರಿಂದ ಕೆಲಸದಲ್ಲಿ ಸಹಜವಾಗಿ ಯಾವ ತರದ ಪ್ರತಿಯೂ ಹುಟ್ಟುವಾರದು ಗಡಿಯಾರ ಮಾಡುವ ಗಿರಣಿಯಲ್ಲಿ ಒಬ್ಬನು ಮುಳ್ಳಿನ ಒಂದು ಭಾಗವನ್ನು ಮಾತ್ರ ಮಾಡುವವನಿದ್ದರೆ ಗಡಿಯಾರದಲ್ಲಿ ಅವನಿಗೆ ಹೇಗೆ ತಾನೆ ಪ್ರೀತಿಯು ಹುಟ್ಟುವದು?

ಈ ತರದ ಗಿರಣಿಗಳಿಂದ ಕೂಲಿಗಾರರಿಗೆ ಬಹಳ ಕಷ್ಟಗಳು ಬಂದವು ಅನೇಕರು ತಮ್ಮ ಹಳ್ಳಿಗಳಲ್ಲಿಯ ಮನೆಗಳನ್ನು ಬಿಟ್ಟು ಪಟ್ಟಣಗಳಿಗೆ ಬಂದು ಸಣ್ಣ ಸಣ್ಣ ಕಗ್ಗತ್ತಲೆಯ ಗುಡಿಸಲುಗಳಲ್ಲಿ ವಾಸಮಾಡಿ, ಬಿನ ಕೂಲಿಯನ್ನು ದುಡಿದು, ಜೀವನ ಮಾಡುವ ಸ್ಥಿತಿಯು ಬಹಳ ವಿಶಾದವಾಗಿದ್ದಿತು ಅವರಿಗೆ ಸ್ವಾತಂತ್ರ್ಯವೇ ಇಲ್ಲ, ಯಜಮಾನರು ಹೇಳಿದ ಹಾಗೆ ಅವರು ನಡೆಯಬೇಕು ರಾಜಕೀಯ ಸ್ವಾತಂತ್ರ್ಯ, ಜನರ ಸಮಾನತ್ವ ಮುಂತಾದ ವಿಷಯದ ಮಾತು ಕತೆ ನಡೆದು ಅದಕ್ಕಾಗಿ ಚಳವಳಿ ನಡೆಯುವ ಸಮಯದಲ್ಲಿ ಗಿರಣಿಗಳಲ್ಲಿ ಕೆಲಸ ಮಾಡುವ ಲಕ್ಷೋಪಲಕ್ಷ ಜನರು ಬಹಳ ಉಗ್ರವಾದ ಯಜಮಾನರ ನಿರಂಕುಶ ಪ್ರಭುತ್ವದಲ್ಲಿ ವಾಸಿಸುವರೆಂಬ ಆಲೋಚನೆಯೇ ಜನರಿಗೆ ಹುಟ್ಟಲಿಲ್ಲ

ಮಜೂರರ ಈ ತರದ ಸಂಕಷ್ಟಗಳನ್ನು ಮೊದಲು ಕಾರ್ಲ ಮಾರ್ಕ್ಸ (1818–88) ಎಂಬ ಜರ್ಮನ ತತ್ವಜ್ಞಾನಿಯು ಗೊತ್ತು ಹಿಡಿದು ಅವರಲ್ಲಿ ನವಚೇತನವನ್ನು ಹುಟ್ಟಿಸಿದನು "ಎಲೆ ಮಜೂರರೇ, ನೀವೆಲ್ಲರೂ ಒಟ್ಟಾಗಿರಿ ಇದರಿಂದ ನಿಮ್ಮ ಗುಲಾಮಗಿರಿಯ ಸಂಕೋಲೆಗಳು ನಷ್ಟವಾಗುವದಲ್ಲದೆ ಬೇರೆ ಏನೂ ಹೋಗಲಾರದು" ಎಂದು ಬೋಧಿಸಲು ಆರಂಭಿಸಿದನು ಈಗಿನ ಎಲ್ಲ ವಿಶ್ವರ್ಯವೂ ಮಜೂರರ ದುಡಿತದಿಂದಲೇ ಹುಟ್ಟಿದ್ದುದು ಅದರಿಂದ ಕೆಲಸ ಮಾಡದ ಬಡವಾಳಗಾರನಿಗೆ ಅದರ ಮೇಲೆ ಯಾವ ತರದ ಅಧಿಕಾರವೇ ಇಲ್ಲ ಅವರನ್ನು ಅವರ ಸ್ಥಾನಗಳಿಂದ ಕೂಲಿಗಾರರು ತಳ್ಳಿ ಎಲ್ಲ ಕೈಗಾರಿಕೆಗಳನ್ನೂ ತಮ್ಮ ವಶೀಕರಿಸಬೇಕು ಬಾದೇ ಆತನ ಮುಖ್ಯ ಹೇಳಿಕೆಯಾಗಿತ್ತು ಆತನ ಬೋಧನೆಯಿಂದ ಎಲ್ಲ ಮಜೂರರ ಕಣ್ತೆರೆದರು ತಾವು ಒಗಟ್ಟಿನಲ್ಲಿದ್ದರೆ ತಮ್ಮ ಮನಸ್ಸೋಚ್ಛೆಯು ಸುಲಭವಾಗಿ ಪೂರ್ತಿಗೊಳ್ಳುವುದು ಎಂಬ ಜ್ಞಾನವೂ ತಾವೆಲ್ಲರೂ ಒಂದೇ ಪಂಗಡಕ್ಕೆ (ಡಿಗ್ರಿ) ಸೇರಿದವರೆಂಬ ಜೀತನವೂ ಅವರಲ್ಲಿ ಹುಟ್ಟಿತ ಇದೇ ವಿಷಯದ ಮೇಲೆ ಇನ್ನನೇಕರು ಬೋಧಿಸಿ ಮಜೂರರ ಮನಸ್ಸಿನಲ್ಲಿ ತಮ್ಮ ಶಕ್ತಿಯನ್ನು ಅವರಿಗೆ ತೋರಿಸಿಕೊಟ್ಟರು ವಿಲಿಯಮ್ ಕಿಂಡವಿನ್ ಜಾರ್ಜ್ ಹಾಲ ವಿಲಿಯಮ್ ಟೋಮಸನ್ ಜೆಫರ್ಸನ್ ಥೊಮಸ್ ಹೋಡ್ಜ್ಸ್ ಮತ್ತು ರೋಬರ್ಟ ಒವೆನ್ ಇನ್ನೇರೇ ಮಜೂರರ ಹಿತಚಿಂತಕರು ವ್ಯಾಪಾರದಲ್ಲಿಯ ಹೆಣಗಾಟ (competition) ವನ್ನು ಎಲಿಸುವುದು ವ್ಯಕ್ತಿಪರ ವ್ಯಾಪಾರವನ್ನು ದೂರೀಕರಿಸುವುದ, ಬಡವಾಳಿಗರನ್ನು ಓಡಿಸುವುದು ನುತ್ತು ಜವಿನಾನುದಾರರಿಂದ ಆಸ್ತಿಗಳನ್ನು ಕಿತ್ತು ತೆಗೆದ ಕೆಲಸ ನೂಡುವವರಿಗೆ ಕೊಡುವುದು—ಇವೆಲ್ಲವನ್ನೂ ಗೂಡಿದುದರಿಂದ ಕೂಲಿಗಾರರ ನಜವಾದ ಹಕ್ಕು ಮತ್ತು ದ ದಿತೆದ ಫಲವು ಅವರಿಗೆ ದೊರೆಯುವುದು ಈಗಿನ ಸ್ಥಿತಿಯಲ್ಲಿ ಮಜೂರರ ಕೆಲಸವು ಬಹಳ ಅಸ್ಥಿರವಾಗಿದೆ ಸಿಗುವ ಸಂಬಳವು ಬಹಳ ಕವಿಮ್ಮಿ ಅವರ ಜೀವನವಾದ ಸ್ಥಿತಿಯು ಬಹಳ ಕಟ್ಟಿದ್ದು, ಮತ್ತು ಕೈಗಾರಿಕೆಗಳನ್ನು ನಡೆಸುವವರಲ್ಲಿ ಅವರಿಗೆ ಯಾವ ತರದ ಅಭಿಕಾರವೂ ಇರುವುದಿಲ್ಲ ಇದನ್ನೆಲ್ಲ ನೋಡಿ ನಿರ್ಮೂಲ ಮಾಡಿ ಮಜೂರರಿಗೆ ತಮ್ಮ ಕೆಲಸಕ್ಕೆ ತಕ್ಕದಾದ ಹಕ್ಕುಗಳನ್ನು ದೊರಕಿಸುವುದೇ ಈಗಿನ ಮಜೂರ ಪಕ್ಷಗಳ ಚಳವಳಿಯಾಗಿರುತ್ತದೆ

ಮಜೂರ ಪಕ್ಷದ ಸಂಘಟನೆಯನ್ನು ನಾವು ಎರಡು ರೀತಿಯಲ್ಲಿ ನೋಡಬಹುದು ಅವರು ಯಾವ ರೀತಿಯಲ್ಲಿ ಪ್ರತಿ ಕೈಗಾರಿಕೆಯನ್ನೂ ಗಿರಣಿಯನ್ನೂ ತಮ್ಮ ಕೈವಶದಲ್ಲಿರಬೇಕೆಂದು ಮಾಡಿದ ಪ್ರಯತ್ನ ಮತ್ತು ತಮ್ಮ ಬಾಳುವಿಗೆ ಅವಶ್ಯವಾದ ಕೆಲಸವನ್ನು ಯಾವ ರೀತಿಯಲ್ಲಿ ಉಚ್ಚತೆಗೆ ತರಬಹುದು ಎಂದು ಮಾಡಿದುದು ಅದಲ್ಲದೆ ಮಜೂರರೂ ಅವರ ಸಹಾಯಕರೂ ಸರಕಾರನನ್ನು ತಮ್ಮ ಪಕ್ಷ ಮಾಡಿಕೊಳ್ಳುವ ಪ್ರಯತ್ನ ಮಾಡಿದುದು ಎರಡನೆಯ ವಿಷಯ ಸರಕಾರವು ತಮ್ಮ ವಶದಲ್ಲಿದ್ದರೆ ಬಂಡವಾಳಗಾರರ ಕೈಯಲ್ಲಿದ್ದ ಅನೇಕ ಕೈಗಾರಿಕೆಗಳನ್ನು ಸರಕಾರದ ನರವಾಗಿ ನಡಿಸಬಹುದು ಮತ್ತು ಸರಕಾರದಿಂದ ತಮಗೆ ಬೇಕಾದ ಸೌಕರ್ಯಗಳನ್ನು ಪಡೆಯಬಹುದು—ಇವೇ ಅವರ ಮುಖ್ಯ ಪ್ರಯತ್ನಗಳಾಗಿವೆ ಇತ್ತೀಚೆರೆಗೆ ಸರಕಾರವು ವಿಶ್ವರ್ಯವನ ತರ ಕೈಯಲ್ಲಿತ್ತು ಈಗ ಅದನ್ನು ಮಜೂರರು ನಡೆಸಬೇಕ ಇದರಿಂದ ಚಳವಳಿಯ ಈ ಎರಡು ಭಾಗಗಳಿಗೆ ನಾವು—ಟ್ರೇಡ ಯುನಿಯನಿಸಮ ಎಂದು ಕರೆಯಬಹುದು

ಮಜೂರರಲ್ಲಿ ಒಬ್ಬನಿಗೆ ಇನ್ನೊಬ್ಬನ ಪರಿಚಯವಿಲ್ಲದುದರಿಂದ ಸಾಹುಕಾರರಿಗೆ ತಮಗೆ ಬೇಕಾದ ರೀತಿಯಲ್ಲಿ ಕೂಲಿಗಾರರ ಸಿಗುತ್ತಿದ್ದರು ಇದನ್ನು ಎವಾರಿಸಿ ಸಾಧಾ

ಜಿನೇವಾ (Geneva) ಪಟ್ಟಣದಲ್ಲಿ ಸೇರಿದ ಅಂತರ್ರಾಷ್ಟ್ರೀಯ ಮಜೂರ ಪರಿಷತ್ತು

ರಣ ಒಡೆ ತರದ ಸಂಘವನ್ನು ಸ್ಥಾಪಿಸಲಾಯಿತು ಇದರ ಎಲ್ಲ ಗಿರಣಿಗಳಲ್ಲಿ ಮಜೂರ ಸಭೆಗಳು (Trade Unions) ಸ್ಥಾಪಿತವಾದವು 1824 ಇಂಗ್ಲಾಂಡಿನಲ್ಲಿ ಅವುಗಳ ಎರೋಧವಿದ್ದ ಕಾನೂನುಗಳನ್ನು ತೆಗೆದು ಹಾಕಿದರು ಇದರಿಂದ ಇತರ ಸಭೆಗಳು ರಭಸದಿಂದ ಎಲ್ಲಾ ಕಡೆಗಳಲ್ಲಿ ವ್ಯಾಪ್ತವಾದವು ಯೂರೋಪದ ಉಳಿದ ದೇಶಗಳಲ್ಲಿಯೂ ಅವೇ ರೀತಿಯಲ್ಲಿ ಇತರ ಸಭೆಗಳು ಸ್ಥಾಪಿತವಾಗಿ ಕೂಲಿಗಾರರ ಅನೇಕ ಸಂಕಷ್ಟಗಳು ಹೋಗಲಾಡಿಸಿದವು

ಒಂದು ಗಿರಣಿಯಲ್ಲಿ ಕೆಲಸ ಮಾಡುವ ಕೂಲಿಗಾರರು ಕೂಡಿ ಮಾಡಿದ ಸಂಘಟನೆಗೆ ಮಜೂರ ಸಂಘಗಳೆಂದು ಕರೆಯಬಹುದ ಅವರು ತಮ್ಮ ಮುಖಂಡರನ್ನು ಆರಿಸುವರು ಸ್ವಲ್ಪ ಹಣವನ್ನೂ ಸೇರಿಸಿಡುವರು ಇಂತಹ ಸಂಘಗಳು ಎರಡು ರೀತಿಯ ಕೆಲಸಗಳನ್ನು ಮಾಡುವವು ಕೂಲಿಗಾರರ ಸೌಕರ್ಯಗಳ ಕಡೆಗೆ ಹೆಚ್ಚಿನ ಗಮನ ಕೊಟ್ಟು ಕೆಲಸ ಮಾಡುವುದು ಅಂದರೆ ಅವರಿಗೆ ವಾಚನಾಲಯಗಳನ್ನೂ, ಪುಸ್ತಕಾಲಯಗಳನ್ನೂ ಒದಗಿಸುವುದು, ಮನೆಗಳನ್ನು ಕಟ್ಟಿಸುವುದು, ಕೆಲಸವಿಲ್ಲದಾಗ ವೇತನವನ್ನು ಕೊಟ್ಟು ಕೆಲಸವನ್ನು ಒದಗಿಸಿಕೊಡುವುದು ಇವೇ ಮೊದಲಾದ ಸೌಕರ್ಯದ ಕೆಲಸಗಳನ್ನು ಮಾಡುವುದು ಗಿರಣಿಗಳ ಯಜಮಾನರು ಈಗ ಸಂಘದ ಬೇಡಿಕೆಗಳನ್ನು ಕೊಡುವಂತೆಯೂ ಈ ಮಜೂರರ ಸಂಘಗಳು ಕೆಲಸ ಮಾಡುತ್ತಿವೆ ಸಂಘದ ಅಪ್ಪಣೆ ಇಲ್ಲದೆ ಯಾವ ಸದಸ್ಯನನ್ನೂ ಕೆಲಸದಿಂದ ತೆಗೆದುಹಾಕ

ಬಾರದು ಸಂಘದವರು ಹೇಳಿದುದನ್ನು ಮಾಲಿಕರು ಮಾಡದೆ ಇದ್ದರೆ ಎಲ್ಲ ಸದಸ್ಯರೂ ಸೇರಿ ಮುಷ್ಕರ (strike) ಹಿಡಿಯುವರು ಬೇರೆಯವರಿಗೆ ಕೆಲಸ ಮಾಡಲು ಬಿಡುವುದಿಲ್ಲ ಹೀಗೆ ಯಜಮಾನರನ್ನು ಬಗ್ಗಿಯ ದ್ದಾರಿಗೆ ತರುವರು ಒಂದು ಕೈಗಾರಿಕೆಯ ಎಲ್ಲ ನಿರಕೆ ಮಜದೂರ ಸಂಘಗಳೂ ಒಟ್ಟಿಗೆ ಸೇರಿ ಒಂದು ದೊಡ್ಡ ಸಂಘವಾಗಿದೆ ಕೆಲವು ಸಲ ಒಂದು ಸಂಘದ ಕಡೆಯಿಂದ ಎಲ್ಲ ಸಂಘಗಳೂ ಮುಷ್ಕರ ಹಿಡಿಯುವರು ಒಂದು ಕೈಗಾರಿಕೆಯು ಇನ್ನೊಂದನ್ನು ಅಸಲಂಬಿಸಿರುವುದರಿಂದ ಎಲ್ಲ ಸಂಘಗಳೂ ಸೇರಿ ಒಂದು ಕೇಂದ್ರ ಸಂಘವಾಗುವುದು ಹೀಗೆ ಎಲ್ಲಾ ದೇಶಗಳಲ್ಲಿ ಮಜೂರ ಸಂಘಗಳ ಕೂಂಗ್ರೆಸ ಆಗುವುದು (Trade Union Congress) ಇಂತಹ ಮಜೂರ ಸಂಘಗಳ ಬೆಳವಣಿಗೆಯನ್ನು ಬಂಡವಾಳಿಗರು ನೋಡಿ ಬೆದರಿ ತಮ್ಮ ಸಂಘ (Employers Unio) ಗಳನ್ನು ಮಾಡಿರುವರು

ಮಜೂರ ಮುಷ್ಕರದಿಂದ ಪೂರಗಡ ಕ್ಷೀಣವು ಹೆಚ್ಚಾಗಿ ಸಂಗಡ ಯುದ್ಧವು ನಡೆಯುತ್ತಲಿದೆ (Class war). 1909ರಲ್ಲಿ ಪ್ರಾನ್ಸಿನಲ್ಲಿ ಟನ್ನೈಲು ಕೆಲಸಗಾರರ ಮುಷ್ಕರವು ಮುರಿಯಲ್ಪಟ್ಟಿತು 1910ರಲ್ಲಿ ರೈಲ್ವೆ ಜನರ ಮುಷ್ಕರವೂ ಮುರಿಯಲ್ಪಟ್ಟಿತು ಇಂಗ್ಲಾಂಡಿನಲ್ಲಿಯೂ ಮುಷ್ಕರಗಳು ಯಾವಾಗಲೂ ನಡೆಯುತ್ತಲಿವೆ 1919ನೇ ಜನವರಿಯಲ್ಲಿ ಶೇಕಡಾ 80ರಂತೆ ಹೆಚ್ಚಿಗೆ ಸಂಬಳವನ್ನು ಖಣಿಜದ ಕೆಲಸಗಾರರು ಬೇಡಿದರು ಮತ್ತು ಎಲ್ಲ ಖಣಿಜಗಳನ್ನೂ ಸರಕಾರದವರು ನಡೆಸಬೇಕೆಂದರು ಇವುಗಳಿಗೆ ಒಪ್ಪದುದರಿಂದ ಅವರ ಪ್ರಬಲವಾದ ಮುಷ್ಕರವು ಎದ್ದಿತು ಆದೇ ವರ್ಷ ರೈಲ್ವೆ ಜನರು ಕನಿಷ್ಠ ಪ್ರತಿಒಬ್ಬನಿಗೆ ವಾರಕ್ಕೆ £ 3 ಸಂಬಳ ಏಗಬೇಕೆಂದು ಬೇಡಿ ಮುಷ್ಕರ ಹಿಡಿದರು ಇದನ್ನು ಮುರಿಯ ಬೇಕಾದರೆ ಸರಕಾರಕ್ಕೆ £ 10,000,000 ಖರ್ಚು ಬಿದ್ದಿತು 1920ರಲ್ಲಿ ಖಣಿಜದ ಕೆಲಸಗಾರರು ಪುನಹ ಮುಷ್ಕರ ಹಿಡಿದರು ಇವರ ಸಹಾಯಕ್ಕೆಂದು ಇಂಗ್ಲಾಂಡಿನ ಎಲ್ಲ ಕೆಲಸಗಾರರು ಮುಷ್ಕರ ಹಿಡಿದರು ಸರಕಾರದವರು ಹೆಚ್ಚಿಗೆ ಅಧಿಕಾರವನ್ನು ಪಡೆದು ಅದನ್ನು ಮುರಿಯಬೇಕಾಯಿತು ಖಣಿಜ ಕೆಲಸಗಾರರಿಗೆ £ 14,000,000 ನಷ್ಟವಾಯಿತು

ಇಂತಹ ಸಂಘಗಳು ಯಜಮಾನ ಮತ್ತು ಕೂಲಿಗಾರ ರೊಳಗಿನ ಭೇದವನ್ನು ಇಟ್ಟು ಯಜಮಾನರಿಗೆ ಗಿರಣಿಯಲ್ಲಿ ಅಧಿಕಾರವಿದೆ ಎಂಬುದನ್ನು ಒಪ್ಪಿಕುತ್ತಾರೆ. ಆದರೆ ಕೆಲವು ಕೂಲಿಗಾರರ ಪಕ್ಷದವರು ಇದಕ್ಕೆ ಒಪ್ಪುವುದಿಲ್ಲ. ಆದ್ದರಿಂದ 1844ರಲ್ಲಿ ಇಂಗ್ಲಾಂಡಿನ ರೊಚಡೇಲಿನಲ್ಲಿಯ ಕೆಲ ಫ್ಲೆನೆಲ ಕೂಲಿಗಾರರು ಪರಸ್ಪರ ಸಂಘವನ್ನು ಸ್ಥಾಪಿಸಿದರು. ಇದರಲ್ಲಿ ಕೂಲಿಗಾರರೆ ಬಂಡವಾಳವನ್ನು ಪಾಲುಗಳ ಮುಖಾಂತರ ಕೂಟ್ಟು ಗಿರಣಿಗಳನ್ನು ಸ್ಥಾಪಿಸಿ ಅವುಗಳನ್ನು ತಮ್ಮ ಮುಖದರ ಮೂಲಕ ನಡೆಯಿಸಿದರು ಇಂತಹ ಕೂಲಿಗಾರರ ಪರಸ್ಪರ ಸಹಾಯಕ ಸಂಘಗಳ ಮೂಲಕ ಅನೇಕ ಗಿರಣಿಗಳು ಎಲ್ಲ ಭಾಗಗಳಲ್ಲಿಯೂ ಸ್ಥಾಪಿತವಾದವು ಆದರೆ ವ್ಯಾಪಾರ ಪಂದ್ಯಾಟ (competition) ದಿಂದ ಇಂತಹ ಅನೇಕ ಗಿರಣಿಗಳು ಸೋಯವಾದವು ಡೆನ್ ಮಾರ್ಕಿನಲ್ಲಿ ಮಾತ್ರ ಕೆಲವು ಕೈಗಾರಿಕೆಗಳು ಆ ರೀತಿಯಲ್ಲಿ ನಡೆಯುತ್ತಲಿವೆ

ಕೂಲಿಗಾರರಿಗೂ, ವ್ಯವಸ್ಥಾಪಕರಿಗೂ ಪಾಲಿನ ಮೇಲೆ ಅನೇಕ ಗಿರಣಿಗಳು ನಡೆಯುತ್ತಲಿವೆ ವ್ಯವಸ್ಥಾಪಕರು ಪಾಲುಗಳನ್ನು ಹುಟ್ಟುವಾಗ ಹೆಚ್ಚಾಗಿ ತಮ್ಮ ಕೂಲಿಗಾರರಿಗೆ ಕೊಟ್ಟು ಅವರಿಗೆ ಲಾಭಾಯದಲ್ಲಿ ಪಾಲನ್ನು ಕೊಡುವರು ಈ ವ್ಯವಸ್ಥೆಯು ಜರ್ಮನಿಯಲ್ಲಿ ಕಂಡುಬರುವುದು

ಅಮೆರಿಕದಲ್ಲಿ ಹೆನ್ರಿ ಫೋರ್ಡರು ಹೊಸ ರೀತಿಯ ವ್ಯವಸ್ಥೆಯನ್ನು ಇಟ್ಟಿರುವರು ತಮ್ಮ ಕೂಲಿಗಾರರಿಗೆ ಬೇಕಾದ ಎಲ್ಲ ಸೌಕರ್ಯಗಳನ್ನು ಒದಗಿಸಿ ಅವರ ಅನುರೆ ವರವಾಗಿ ಮಾತಾಡುವರು ಯುರೋಪಿನಲ್ಲಿಯ ಅಂತರಾಷ್ಟ್ರೀಯ ಮಜೂರ ವರಿಷತ್ತು (International Labour Conference) ಎಂಬುದು ಲೀಗ್ ಒಫ್ ನೇಶನ್ಸ ನಂತೆ ಜಗತ್ತಿನ ಕೂಲಿಗಾರರ ಸಭೆಯಾಗಿರುವುದು ಇದರ ಮಾದರಿಯ ಮೇಲೆ ಅಮೇರಿಕದಲ್ಲಿ 'Industrial Workers of the World' ಎಂಬ ಸಭೆ ಇರುವುದು.

ಈಗ ಕೂಲಿಗಾರರು ಸರಕಾರದ ಕಡೆಗೆ ತಮ್ಮ ದೃಷ್ಟಿಯನ್ನು ಹೇಗೆ ಇಟ್ಟು ಅದನ್ನು ಪರೀಕರಿಸಲು ಯಾವ ಯಾವ ಪ್ರಯತ್ನಗಳನ್ನು ಮಾಡಿದರೆಂದು ನೋಡಬಹುದು ಮಜೂರರು ಸರಕಾರವು ಹಣವಿದ್ದವರ ಪಕ್ಷ ಹಿಡಿದುಕೊಳ್ಳುವುದನ್ನು ನೋಡಲಾರರು ಪ್ರಜಾಪ್ರಭುತ್ವವನ್ನು ಎಲ್ಲರೂ ಒಪ್ಪುವಾಗ, ಕೈಗಾರಿಕೆಯಲ್ಲಿಯೂ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸುವಾಗ ಸರಕಾರವನ್ನು ಕೂಲಿಗಾರರ ಹಿತಕ್ಕಾಗಿ ಉಪಯೋಗಿಸಬೇಕೆಂದು ಪ್ರಯತ್ನಿಸುವುದು ಸಹಜವಾಗಿದೆ ಈ ಪಕ್ಷಕ್ಕೆ ಸೋಷಿಯಲಿಸ್ಟ ಪಕ್ಷವೆನ್ನುವರು 1 ಇವರುಅದಷ್ಟು ಕೈಗಾರಿಕೆಗಳನ್ನು ಸರಕಾರದವರು ನಡೆಸಬೇಕೆಂದು 2 ಮಜೂರರ ಕಷ್ಟಗಳನ್ನೆಲ್ಲ ದೂರ ಮಾಡಿ ಅವರಿಗೆ ಬೂಲೋಕದಲ್ಲಿ ವಾಸಮಾಡಲು ಸೌಕರ್ಯಗಳನ್ನು ಒದಗಿಸಬೇಕೆಂದು ಅವರು ಮುದ ಕರಿಗೆ

ಮೇ ದಿನಾಚರಣೆ

ಮೇ ದಿನಾಚರಣೆ (May Day) ಯು ಅಂತರಾಷ್ಟ್ರೀಯ ಮಜೂರ ಉತ್ಸವದ ದಿನವಾಗಿದೆ
ಲಂಡನಿನ ಹ್ಯಾಡ್ ಪಾರ್ಕಿನಲ್ಲಿ ಹೊಸ್ಮೆನ್ ಎಂಬವರು ಮಜೂರರಿಗೆ ಭಾಷಣ ಮಾಡುವುದು

ಮುಷ್ಕರಗಳನ್ನು ಅನೇಕ ವಿಷಯದಲ್ಲಿ ಪಡೆಕೊಂಡು ತಮ್ಮ ಗಿರಣಿಯನ್ನು ಒಂದು ದೊಡ್ಡ ಕುಟುಂಬದಂತೆ ನಡೆಸಿಕೊಳ್ಳುವರು

ನ್ಯೂಜಲೇಂಡ ತನ್ನೆಲೆಯ ಸಂತಾಪ ನೆಲೆಗಳಲ್ಲಿ ಮಾಲಿಕರಿಗೂ ಕೂಲಿಗಾರರಿಗೂ ಜಗಳವುಂಟಾದರೆ ಅದನ್ನು ಬಿಲ್ಲಿಸಲು ಕೋರ್ಟುಗಳನ್ನು ಸ್ಥಾಪಿಸಿರುವರು ಆ ಕೋರ್ಟಿಗೆ ಒಬ್ಬ ನ್ಯಾಯಾಧೀಶರೂ ಒಬ್ಬ ಕೂಲಿಗಾರರ ಪ್ರತಿನಿಧಿಯೂ, ಇನ್ನೊಬ್ಬ ಮಾಲಿಕರ ಪ್ರತಿನಿಧಿಯೂ ಇರುವರು ಅವರು ಎರಡು ಕಡೆಯ ವ್ಯವಹಾರಗಳನ್ನು ಕೇಳಿ ತೀರ್ಪನ್ನು ಕೊಡುವರು ಅದರಂತೆ ಎಲ್ಲರೂ ನಡೆಯ ತಕ್ಕದ್ದು. ಕೆಲವೆಡೆಯಲ್ಲಿ ಜಗಳವನ್ನು ಪಂಚಾತಿಕೆಯಲ್ಲಿ ನಿಲ್ಲಿಸಲು "conciliation board" ಗಳು ಸ್ಥಾಪಿಸಲ್ಪಟ್ಟಿವೆ

ಕೂಲಿಗಾರರ ಸಂಕಷ್ಟಗಳು ಎಲ್ಲ ದೇಶಗಳಲ್ಲಿಯೂ ಒಂದೇ ರೀತಿಯಾಗಿವೆ. ಆದ್ದರಿಂದ ಒಂದು ದೇಶದ ಕೂಲಿಗಾರರು ಸಂಕಷ್ಟದಲ್ಲಿ ಇದ್ದರೆ ಅದರ ಪರಿಣಾಮವು ಎಲ್ಲಾ ದೇಶದ ಕೂಲಿಗಾರರ ಮೇಲೆ ಬೀಳುವುದು. ಆದ್ದರಿಂದ ಎಲ್ಲ ದೇಶದ ಕೂಲಿಗಾರರು ಸೇರಿ ಒಂದು ದೊಡ್ಡ ಸಭೆಯನ್ನು ಮಾಡಿರುವರು. ಇವರು ಭೂಲೋಕದ ಕೂಲಿಗಾರರ ವರಮಾನವನ್ನು ಏರಿಸಲು ಪ್ರಯತ್ನಿಸುವರು ಯುರೋಪಿನಲ್ಲಿಯ ಅಂತರಾಷ್ಟ್ರೀಯ ಮಜೂರ ವರಿಷತ್ತು (International Labour Conference) ಎಂಬುದು ಲೀಗ್ ಒಫ್ ನೇಶನ್ಸ ನಂತೆ ಜಗತ್ತಿನ ಕೂಲಿಗಾರರ ಸಭೆಯಾಗಿರುವುದು ಇದರ ಮಾದರಿಯ ಮೇಲೆ ಅಮೇರಿಕದಲ್ಲಿ 'Industrial Workers of the World' ಎಂಬ ಸಭೆ ಇರುವುದು.

ಕೂಲಿಗಾರರ ಸೌಕರ್ಯಕ್ಕಾಗಿ ಸರಕಾರದವರು ಅನೇಕ ಕಾನೂನುಗಳನ್ನು ಮಾಡಿರುವರು ಮೊದಲನೆಯ ಪಕ್ಷದ ಆಕ್ಷೇಪವನ್ನು ಸರಕಾರದವರು ಇನ್ಶೂರೆನ್ಸಿನಲ್ಲಿ 1841ರಲ್ಲಿ ಜಾರಿಗೆ ತಂದರು ಆ ಸನ್ನಿಯಮದಿಂದ ಮಜೂರ ಸಂಘದವರು ಅನೇಕ ಸುಧಾರಣೆಗಳನ್ನು ಸರಕಾರದವರೊಡನೆ ಬೇಡುತ್ತಿದ್ದಾರೆ 1890ರಲ್ಲಿ ಇಂಗ್ಲಾಂಡಿನಲ್ಲಿ ಸೋಷಿಯಲಿಸಮ್ ಮತ್ತು ಮಜೂರ ಸಂಘದವರೂ ಒಟ್ಟಿಗೆ ಸೇರಿ ರಾಜಕೀಯ ಅಂಗ್ಲಾದಲ್ಲಿ ಕಾಲಿಟ್ಟರು ಇದೇ ಇಂಗ್ಲಾಂಡಿನ ಮಜೂರ ಪಕ್ಷದವರ ಮೊದಲನೆಯ ತುಟ್ಟಲು ಈ ಪಕ್ಷದಲ್ಲಿ ಮಜೂರಿ ಸಂಘದವರೂ, ಫೆಬಿಯನರೂ, ಸ್ವಾತಂತ್ರ್ಯ ಮಜೂರ ಪಕ್ಷಿಕರೂ (Independent Labour Party) ಸೇರಿರುತ್ತಾರೆ. ಸೋಷಿಯಲಿಸಮ್ ಅಂದರೆ ಸರಕಾರದವರು ಕೈಗಾರಿಕೆಗಳನ್ನು ನಡೆಸುವುದು, ಆರ್ಥಿಕ ಬೇಧಗಳನ್ನು ಕಿತ್ತುಹಾಕುವುದು—ಪಾರ್ಲಮೆಂಟಿನ

ಲೋಕದ ಮಜೂರರ ಕ್ರಾಂತಿ

ಲೇಖಕರು:– ಜಿ. ರಾಘವೇಂದ್ರ ಶೆಣೈ, M. A. ಕನರಾ ಹ್ಯಾಸ್ಕೂಲ್, ಮಂಗಳೂರು.

ಪಾಶ್ಚಾತ್ಯ ದೇಶಗಳಲ್ಲಿ ಸಮಾಜವು ಪಂಗಡಗಳಾಗಿ ಭೇದಿತವಾದುದು ಈಗಿನ ನವನಾಗರೀಕತೆಯ ಫಲವಾಗಿರುತ್ತದೆ. ಬಂಡವಾಳಗಾರರ (Capitalist) ಭಾಗವು ಎಲ್ಲ ಕೈಗಾರಿಕೆಗಳನ್ನು ವಶೀಕರಿಸಿ ಹಣವನ್ನು ಜಮಾಯಿಸಿ ಅದರಂತೆಯೇ ಖರ್ಚು ಮಾಡಿ ಭೋಗವಿಲಾಸಗಳಲ್ಲಿ ಮುಳಿಗಿರುವದು. ಅವರ ಜೋತೆಯಲ್ಲಿಯೇ ಕಾರಖಾನೆಗಳಲ್ಲಿ ಹಗಲಿರುಳು ದುಡಿದು, ಬೆನ್ನಿಉಸುವಾಸವಿಂದಲೂ ದುರ್ಬಲತೆಯಿಂದಲೂ ಅಜ್ಞಾನದಿಂದಲೂ ಬೇಸತ್ತು ತಮ್ಮ ಸಾಹೇಬರ ಸಮಯ ಕಾದು ಅವರ ಮನಸ್ಸಿನಂತೆ ನಡೆಯುವಂತಹ ಒಂದು ವರ್ಗವು ಕೌಲಹರಣ ಮಾಡುತ್ತಲಿರುವದು. ಈ ತರದ ಇಬ್ಬರೊಳಗಿರುವ ದೊಡ್ಡ ಭೇದವು ಈಗಿನ ಔದ್ಯೋಗಿಕ ಕ್ರಾಂತಿಯ ಫಲವಾಗಿದೆ. ಕೈಗಾರಿಕೆಗಳು ಬೇರೆ ಬೇರೆ ಶೋಧನೆಗಳಿಂದ ಬೆಳೆದಿವೆ. ಪ್ರಯಾಣ ಸೌಕರ್ಯಗಳು ಹೆಚ್ಚಿವೆ. ಸಾಮಾನುಗಳು ಒಂದು ಊರಿನಿಂದ ಇನ್ನೊಂದಕ್ಕೆ ಸುಲಭವಾಗಿ ಹೋಗುವವು. ಜನರ ಬೇಡಿಕೆಗಳು ಹೆಚ್ಚಾಗಿವೆ. ಇದರಿಂದ ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕೆಗಳು ಕೆಲವು ಸ್ಥಳಗಳಲ್ಲಿ ಕೇಂದ್ರಿತವಾಗಿ ಸಾವಿರಗಟ್ಟಲೆಗಳಲ್ಲಿ ಕೆಲಸ ಮಾಡುವ ದೊಡ್ಡ ಗಿರಣಿಗಳೆಂದ ತುಂಬಿವೆ. ಕೊಂಡುಕೊಳ್ಳುವ ಜನರಿಗೆ ವಸ್ತುಗಳು ಹೇಗೆ ಆಗುವವು, ಎಲ್ಲಿ ಆಗುವವು ಎಂಬುದು ಕೂಡ ಅರಿವಿಲ್ಲ. ಕೆಲಸಗಾರರಿಗೆ ತಮ್ಮ ಪಾಲಿಗೆ ಬಂದ ಕೆಲಸದ ಹೊರೆಯ ಮುಂದೆ ಯಾವದರ ಅರಿವೂ ಇರುವುದಿಲ್ಲ. ಅದರಿಂದ ಕೆಲಸದಲ್ಲಿ ಸಹಜವಾಗಿ ಯಾವ ತರದ ಪ್ರೀತಿಯೂ ಹುಟ್ಟಲಾರದು. ಗದಿಯಾರ ಮಾಡುವ ಗಿರಣಿಯಲ್ಲಿ ಒಬ್ಬನು ಮುಳ್ಳಿನ ಒಂದು ಭಾಗವನ್ನು ಮಾತ್ರ ಮಾಡುವನಿದ್ದರೆ ಗದಿಯಾರದಲ್ಲಿ ಅವನಿಗೆ ಹೇಗೆ ತಾನೆ ಪ್ರೀತಿಯು ಹುಟ್ಟುವದು?

ಈ ತರದ ಗಿರಣಿಗಳಿಂದ ಕೂಲಿಗಾರರಿಗೆ ಬಹಳ-ಕಷ್ಟಗಳು ಬಂದವು. ಅನೇಕರು ತಮ್ಮ ಹಳ್ಳಿಗಳಲ್ಲಿಯ ಮನೆಗಳನ್ನು ಬಿಟ್ಟು ಪಟ್ಟಣಗಳಿಗೆ ಬಂದು ಸಣ್ಣ ಸಣ್ಣ ಕಗ್ಗತ್ತಲೆಯ ಗುದಿಸಲುಗಳಲ್ಲಿ ವಾಸಮಾಡಿ, ದಿನ ಕೂಲಿಯನ್ನು ದುಡಿದು, ಜೀವನ ಮಾಡುವ ಸ್ಥಿತಿಯು ಬಹಳ ವಿಶಾದವಾಗಿದ್ದಿತು. ಅವರಿಗೆ ಸ್ವಾತಂತ್ರ್ಯವೇ ಇಲ್ಲ; ಯಜಮಾನರು ಹೇಳಿದ ಹಾಗೆ ಅವರು ನಡೆಯಬೇಕು. ರಾಜಕೀಯ ಸ್ವಾತಂತ್ರ್ಯ, ಜನರ ಸಮಾನತ್ವಮುಂತಾದ ವಿಷಯದ ಮಾತು ಕತೆ ನಡೆದು ಅದಕ್ಕಾಗಿ ಚಳವಳಿ ನಡೆಯುವ ಸಮಯದಲ್ಲಿ ಗಿರಣಿಗಳಲ್ಲಿ ಕೆಲಸ ಮಾಡುವ ಲಕ್ಷೋಪಲಕ್ಷ ಜನರು ಬಹಳ ಉಗ್ರವಾದ ಯಜಮಾನರ ನಿರಂಕುಶ ಪ್ರಭುತ್ವದಲ್ಲಿ ವಾಸಿಸುವರೆಂಬ ಆಲೋಚನೆಯೇ ಜನರಿಗೆ ಹುಟ್ಟಲಿಲ್ಲ.

ಮಜೂರರ ಈ ತರದ ಸಂಕಷ್ಟಗಳನ್ನು ಮೊದಲು ಕಾರ್ಲ ಮಾರ್ಕ್ಸ್ (1818–88) ಎಂಬ ಜರ್ಮನ್ ತತ್ವಜ್ಞಾನಿಯು ಗೊತ್ತು ಹಿಡಿದು ಅವರಲ್ಲಿ ನವಚೇತನವನ್ನು ಹುಟ್ಟಿಸಿದನು. "ಎಲೇ ಮಜೂರರೇ, ನೀವೆಲ್ಲರೂ ಒಟ್ಟಾಗಿರಿ. ಇದರಿಂದ ನಿಮ್ಮ ಗುಲಾಮಗಿರಿಯ ಸಂಕೋಲೆಗಳು ನಷ್ಟವಾಗುವದಲ್ಲದೆ ಬೇರೆ ಏನೂ ಹೋಗಲಾರದು" ಎಂದು ಬೋಧಿಸಲು ಆರಂಭಿಸಿದನು. ಈಗಿನ ಎಲ್ಲ ಏಕ್ಯರ್ಯವು ಮಜೂರರ ದುಡಿತದಿಂದಲೇ ಹುಟ್ಟಿದುದು. ಅದರಿಂದ ಕೆಲಸ ಮಾಡದ ಬಂಡವಾಳಗಾರರಿಗೆ ಅದರ ಮೇಲೆ ಯಾವ ತರದ ಅಧಿಕಾರವೇ ಇಲ್ಲ. ಅವರನ್ನು ಅವರ ಸ್ಥಾನಗಳಿಂದ ಕೂಲಿಗಾರರು ತಳ್ಳಿ ಎಲ್ಲ ಕೈಗಾರಿಕೆಗಳನ್ನೂ ತಮ್ಮ ವಶೀಕರಿಸಬೇಕೆಂಬುದೇ ಅವನ ಮುಖ್ಯ ಬೋಧನೆಯಾಗಿತ್ತು. ಅವನ ಬೋಧನೆಯಿಂದ ಎಲ್ಲ ಮಜೂರರು ಕಣ್ತೆರೆದರು. ತಾವು ಒಗ್ಗಟ್ಟಿನಲ್ಲಿದ್ದರೆ ತಮ್ಮ ಮನಸೇಚ್ಛೆಯು ಸುಲಭವಾಗಿ ಪೂರ್ತಿಗೊಳ್ಳುವುದು ಎಂಬ ಜ್ಞಾನವೂ ತಾವೆಲ್ಲರೂ ಒಂದೇ ಪಂಗಡಕ್ಕೆ (class) ಸೇರಿದವರೆಂಬ ಚೇತನವೂ ಅವರಲ್ಲಿ ಬಂದು ಯಾವ ರೀತಿಯಲ್ಲಿ ಉಚ್ಚತೆಗೆ ತರಬಹುದು ಎಂದು ಮಾಡಿದುದು. ಅದಲ್ಲದೆ ಮಜೂರರೂ ಅವರ ಸಹಾಯಕರೂ ಸರಕಾರವನ್ನು ತಮ್ಮ ಪಕ್ಷ ಮಾಡಿಕೊಳ್ಳುವ ಪ್ರಯತ್ನ ಮಾಡಿದುದು ಎರಡನೆಯ ವಿಷಯ. ಸರಕಾರವು ತಮ್ಮ ವಶದಲ್ಲಿದ್ದರೆ ಬಂಡವಾಳಗಾರರ ಕೈಯಲ್ಲಿದ್ದ ಅನೇಕ ಕೈಗಾರಿಕೆಗಳನ್ನು ಸರಕಾರದ ಪರವಾಗಿ ನಡಿಸಬಹುದು ಮತ್ತು ಸರಕಾರದಿಂದ ತಮಗೆ ಬೇಕಾದ ಸೌಕರ್ಯಗಳನ್ನು ಪಡೆಯಬಹುದು–ಇವೇ ಅವರ ಮುಖ್ಯ ಪ್ರಯತ್ನಗಳಾಗಿವೆ. ಇಪ್ಪರ ವರೆಗೆ ಸರಕಾರವು ಏಕ್ಯರ್ಯವಂತರ ಕೈಯಲ್ಲಿತ್ತು. ಈಗ ಅದನ್ನು ಮಜೂರರು ನಡೆಸಬೇಕು. ಇದರಿಂದ ಚಳವಳಿಯ ಈ ಎರಡು ಭಾಗಗಳಿಗೆ ನಾವು–ಟ್ರೇಡ್ ಯುನಿಯನಿಸಮ್ ಮತ್ತು ಸೊಸಿಯಲಿಸಮ್ ಎಂದು ಕರೆಯಬಹುದು.

ಮಜೂರರಲ್ಲಿ ಒಬ್ಬನಿಗೆ ಇನ್ನೊಬ್ಬನ ಪರಿಚಯವಿಲ್ಲದುದರಿಂದ ಸಾಹುಕಾರರಿಗೆ ತಮಗೆ ಬೇಕಾದ ರೀತಿಯಲ್ಲಿ ಕೂಲಿಗಾರರು ಸಿಗುತ್ತಿದ್ದರು. ಇದನ್ನು ನಿವಾರಿಸಿ ಸಾಧಾರಣ ಒಂದೇ ತರದ ಕೂಲಿಯನ್ನು ಸ್ಥಾಪಿಸುವ ಪ್ರಯತ್ನದಿಂದ ಎಲ್ಲ ಗಿರಣಿಗಳಲ್ಲಿ ಮಜೂರ ಸಂಘಗಳು (Trade Unions) ಸ್ಥಾಪಿತವಾದುವು. 1824ನಲ್ಲಿ ಇಂಗ್ಲಾಂಡಿನಲ್ಲಿ ಅವುಗಳ ವಿರೋಧವಿದ್ದ ಕಾನೂನುಗಳನ್ನು ತೆಗೆದು ಹಾಕಿದರು. ಇದರಿಂದ ಇಂತಹ ಸಂಘಗಳು ರಭಸದಿಂದ ಎಲ್ಲಾ ಕಡೆಗಳಲ್ಲಿಯೂ ಪಸರಿಸಿದವು. ಯುರೋಪದ ಉಳಿದ ದೇಶಗಳಲ್ಲಿಯೂ ಅಮೇರಿಕದಲ್ಲಿಯೂ ಇಂತಹ ಸಂಘಗಳು ಸ್ಥಾಪಿತವಾಗಿ ಕೂಲಿಗಾರರ ಅನೇಕ ಸಂಕಷ್ಟಗಳು ಹೋಗಲಾಡಿಸಿದವು.

ಒಂದು ಗಿರಣಿಯಲ್ಲಿ ಕೆಲಸ ಮಾಡುವ ಕೂಲಿಗಾರರು ಕೂಡಿ ಮಾಡಿದ ಸಂಘಟನೆಗೆ ಮಜೂರ ಸಂಘಗಳೆಂದು ಕರೆಯಬಹುದು. ಅವರು ತಮ್ಮ ಮುಖಂಡರನ್ನು ಆರಿಸುವರು. ಸ್ವಲ್ಪ ಹಣವನ್ನೂ ಸೇರಿಸಿಡುವರು. ಇಂತಹ ಸಂಘಗಳು ಎರಡು ರೀತಿಯ ಕೆಲಸಗಳನ್ನು ಮಾಡುವವು. ಕೂಲಿಗಾರರ ಸೌಕರ್ಯಗಳ ಕಡೆಗೆ ದೃಷ್ಟಿ ಇಟ್ಟು ಕೆಲಸ ಮಾಡುವುದು; ಅಂದರೆ ಅವರಿಗೆ ವಾಚನಾಲಯಗಳನ್ನೂ, ಪುಸ್ತಕಾಲಯಗಳನ್ನೂ ಒದಗಿಸುವುದು, ಮನೆಗಳನ್ನು ಕಟ್ಟಿಸುವುದು, ಕೆಲಸವಿಲ್ಲದಾಗ ವೇತನವನ್ನು ಕೊಟ್ಟು ಕೆಲಸವನ್ನು ಒದಗಿಸಿಕೊಡುವುದು ಇವೇ ಮೊದಲಾದ ಸೌಕರ್ಯದ ಕೆಲಸಗಳನ್ನು ಮಾಡುವುದು. ಗಿರಣಿಗಳ ಯಜಮಾನರು ಈಗ ಸಂಘದ ಬೇಡಿಕೆಗಳನ್ನು ಕೊಡುವಂತೆಯೂ ಈ ಮಜೂರರ ಸಂಘಗಳು ಕೆಲಸ ಮಾಡುತ್ತಿವೆ. ಸಂಘದ ಅಪ್ಪಣೆ ಇಲ್ಲದೆ ಯಾವ ಸದಸ್ಯನನ್ನೂ ಕೆಲಸದಿಂದ ತೆಗೆದುಹಾಕ

ಜಿನೇವಾ (Geneva) ಪ್ರಟ್ಟಣದಲ್ಲಿ ಸೇರಿದ ಆಂತರರಾಷ್ಟ್ರೀಯ ಮಜೂರ ಪರಿಷತ್ತು.

ಬಾರದು ಸಂಘದವರು ಹೇಳಿದುದನ್ನು ಮಾಲಿಕರು ಮಾಡಧೆ ಇದ್ದರೆ ಎಲ್ಲ ಸದಸ್ಯರೂ ಸೇರಿ ಮುಷ್ಕರ (strike) ಹಿಡಿಯುವರು ಬೇರೆಯವರಿಗೆ ಕೆಲಸ ಮಾಡಲು ಬಿಡುವುದಿಲ್ಲ ಹೀಗೆ ಯಜಮಾನರನ್ನು ಬುದ್ಧಿಯ ದಾರಿಗೆ ತರುವರು ಒಂದು ಕೈಗಾರಿಕೆಯ ಎಲ್ಲ ಗಿರಣಿ ಮಜೂರ ಸಂಘಗಳೂ ಒಟ್ಟಿಗೆ ಸೇರಿ ಒಂದು ದೊಡ್ಡ ಸಂಘವಾಗಿದೆ ಕೆಲವು ಸಲ ಒಂದು ಸಂಘದ ಕಡೆಯಿಂದ ಎಲ್ಲ ಸಂಘಗಳೂ ಮುಷ್ಕರ ಹಿಡಿಯುವರು ಒ ದ ಕೈಗಾರಿಕೆಯು ಇನ್ನೊಂದನ್ನು ಅವಲಂಬಿಸಿರುವುದರಿಂದ ಎಲ್ಲ ಸಂಘಗಳೂ ಸೇರಿ ಒಂದು ಕೇಂದ್ರ ಸಂಘವಾಗುವುದು ಹೀಗೆ ಎಲ್ಲಾ ದೇಶಗಳಲ್ಲಿ ಮಜೂರ ಸಂಘಗಳ ಕೊಂಗ್ರೆಸ ಆಗುವುದು (Trade Union Congress) ಇಂತಹ ಮಜೂರ ಸಂಘಗಳ ಬೆಳವಣಿಗೆಯನ್ನು ಬಡವಾಳಿಗರು ನೋಡಿ ಬೆದರಿ ತಮ್ಮ ಸಂಘ (Employers Union) ಗಳನ್ನು ಮಾಡಿರುವರು

ಮಜೂರ ಮುಷ್ಕರದಿಂದ ಸಂಗಡ ಕ್ಲೇಶವು ಹೆಚ್ಚಾಗಿ ಸಂಗಡ ಯುದ್ಧವು ನಡೆಯುತ್ತಲಿದೆ (Class war) 1909ರಲ್ಲಿ ವ್ಯಾಸ್ಸನಲ ಟಪ್ಪಾಲು ಕೆಲಸಗಾರರು ಮುಷ್ಕರವು ಮುರಿಯಲ್ಪಟ್ಟಿತು 1910ರಲ್ಲಿ ರೈಲ್ವೆ ಜನರ ಮುಷ್ಕರವೂ ರಲ್ಲಿ ಕೂಲಿಗಾರರೆ ಬಂಡವಾಳವನ್ನು ಪಾಲುಗಳ ಮುಪಾಂತರ ಕೊಟ್ಟು ಗಿರಣಿಗಳನ್ನು ಸ್ಥಾಪಿಸಿ ಅವುಗಳನ್ನು ತಮ್ಮ ಮುಖಂಡರ ಮೂಲಕ ನಡೆಯಿಸಿದರು ಇಂತಹ ಕೂಲಿಗಾರರ ಪರಸ್ಪರ ಸಹಾಯಕ ಸಂಘಗಳ ಮೂಲಕ ಅನೇಕ ಗಿರಣಿಗಳು ಎಲ್ಲ ಭಾಗಗಳಲ್ಲಿಯೂ ಸ್ಥಾಪಿತವಾದುವು ಆದರೆ ವ್ಯಾಪಾರ ಪಂದ್ಯಾಟ (competition) ದಿಂದ ಅಂತಹ ಅನೇಕ ಗಿರಣಿಗಳು ಗೂಯವಾದವು ಡೆನ್ ಮಾರ್ಕ್‌ನಲ್ಲಿ ಮಾತ್ರ ಕೆಲವು ಕೈಗಾರಿಕೆಗಳು ಆ ರೀತಿಯಲ್ಲಿ ನಡೆಯುತ್ತಲಿವೆ

ಕೂಲಿಗಾರರಿಗೂ, ವ್ಯವಸ್ಥಾಪಕರಿಗೂ ಪಾಲಿನ ಮೇಲೆ ಅನೇಕ ಗಿರಣಿಗಳು ನಡೆಯುತ್ತಲಿವೆ ವ್ಯವಸ್ಥಾಪಕರು ಪಾಲುಗಳನ್ನು ಹೆಚ್ಚುವಾಗ ಹೆಚ್ಚಾಗಿ ತಮ್ಮ ಕೂಲಿಗಾರರಿಗೆ ಕೊಟ್ಟು ಅವರಿಗೆ ಆದಾಯದಲ್ಲಿ ಪಾಲನ್ನು ಕೂಡಿರು ಈ ವ್ಯವಸ್ಥೆಯು ಜರ್ಮನಿಯಲ್ಲಿ ಕಂಡುಬರುವುದು

ಅಮೆರಿಕದಲ್ಲಿ ಹೆನ್ರಿ ಫೋರ್ಡರು ಹೊಸ ರೀತಿಯ ವ್ಯವಸ್ಥೆಯನ್ನು ಇಟ್ಟಿರುವರು ತಮ್ಮ ಕೂಲಿಗಾರರಿಗೆ ಬೇಕಾದ ಎಲ್ಲ ಸೌಕರ್ಯಗಳನ್ನು ಒದಗಿಸಿ ಅವರ ಆರ್ಥಿಕ ಪ್ರಗತಿಗಾಗಿ ಮಾತ್ರವಾಗಿ ಯುರೋಪಿನಲ್ಲಿಯ ಅಂತರಾಷ್ಟ್ರೀಯ ಮಜೂರ ಪರಿಷತ್ತು (International Labour Conference) ಎಂಬುದು ಲೀಗ್ ಆಫ್ ನೇಶನ್ಸ ನಂತೆ ಜಗತ್ತಿನ ಕೂಲಿಗಾರರ ಸಭೆಯಾಗಿರುವುದು ಇದರ ಮಾದರಿಯ ಮೇಲೆ ಅಮೆರಿಕದಲ್ಲಿ 'Industrial Workers of the World' ಎಂಬ ಸಭೆ ಇರುವುದು

ಈಗ ಕೂಲಿಗಾರರು ಸರಕಾರದ ಕಡೆಗೆ ತಮ್ಮ ದೃಷ್ಟಿಯನ್ನು ಹೇಗೆ ಇಟ್ಟು ಅದನ್ನು ವಶೀಕರಿಸಲು ಯಾವ ಯಾವ ಪ್ರಯತ್ನಗಳನ್ನು ಮಾಡಿದರೆಂದು ನೋಡಬಹುದು ಮಜೂರರು ಸರಕಾರವು ಹಣವಿದ್ದವರ ಪಕ್ಷ ಹಿಡಿದುಕೊಳ್ಳುವುದನ್ನು ನೋಡಲಾರರು ಪ್ರಜಾಪ್ರಭುತ್ವವನ್ನು ಎಲ್ಲರೂ ಒಪ್ಪಿರುವಾಗ, ಕೈಗಾರಿಕೆಯಲ್ಲಿಯೂ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸುವಾಗ ಸರಕಾರವನ್ನು ಕೂಲಿಗಾರರ ಹಿತಕ್ಕಾಗಿ ಉಪಯೋಗಿಸಬೇಕೆಂದು ಪ್ರಯತ್ನಿಸುವುದು ಸಹಜವಾಗಿದೆ ಈ ಪಕ್ಷಕ್ಕೆ ಸೋಷಿಯಲಿಸ್ಟ ಪಕ್ಷವೆನ್ನುವರು 1 ಇವರು ಆದಷ್ಟು ಕೈಗಾರಿಕೆಗಳನ್ನು ಸರಕಾರದ ವತಿಯಿಂದ ನಡೆಸಬೇಕು 2 ಮಜೂರರ ಕಷ್ಟಗಳೆಲ್ಲವನ್ನೂ ದೂರ ಮಾಡಿ ಅವರಿಗೆ ಭೂಲೋಕದಲ್ಲಿ ನಾಕವನ್ನಾಡಲು ಸೌಕರ್ಯಗಳನ್ನು ಒದಗಿಸಬೇಕು ಆದರೆ ಮುಂದೆ ಕರಿ

ಮೇ ದಿನಾಚರಣೆ

ಮೇ ದಿನಾಚರಣೆ (May Day) ಯು ಅಂತರಾಷ್ಟ್ರೀಯ ಮಜೂರ ಉತ್ಸವದ ದಿನವಾಗಿದೆ
ಲಂಡನಿನ ಹ್ಯಾಡ್ ಪಾರ್ಕಿನಲ್ಲಿ ಹೊಮ್ಫ್ಮನ್ ಎಂಬವರು ಮಜೂರರಿಗೆ ಭಾಷಣ ಮಾಡುವುದು.

ಬಿದ್ದು ಹೋಯಿತು ಇಂಗ್ಲಾಂಡಿನಲ್ಲಿಯೂ ವರ್ಷಗಳು ಯಾವಾಗಲೂ ನಡೆಯುತ್ತಲಿವೆ 1919ನೇ ಜನವರಿಯಲ್ಲಿ ಶೇಕಡಾ 80ರಂತೆ ಹೆಚ್ಚಿಗೆ ಸಂಬಳವನ್ನು ಖಾಣಿಜದ ಕೆಲಸಗಾರರು ಬೇಡಿದರು ಮತ್ತು ಎಲ್ಲ ಖಾಣಿಜಗಳನ್ನು ಸರಕಾರದವರು ನಡೆಸಬೇಕೆಂದರು ಇವುಗಳಿಗೆ ಒಪ್ಪದುದರಿಂದ ಅವರ ಪ್ರಬಲವಾದ ಮುಷ್ಕರವು ಎದ್ದಿತು ಅದೇ ವರ್ಷ ರೈಲ್ವೆ ಜನರು ಕನಿಷ್ಠ ಪ್ರತಿ ಒಬ್ಬನಿಗೆ ವಾರಕ್ಕೆ £ 3 ಸಂಬಳ ಸಿಗಬೇಕೆಂದು ಬೇಡಿ ಮುಷ್ಕರ ಹಿಡಿದರು ಇದನ್ನು ಮುರಿಯಬೇಕಾದರೆ ಸರಕಾರಕ್ಕೆ £ 10,000,000 ಖರ್ಚು ಬಿದ್ದಿತು 1920ರಲ್ಲಿ ಖಾಣಿಜದ ಕೆಲಸಗಾರರು ಪುನಹ ಮುಷ್ಕರ ಹಿಡಿದರು ಅವರ ಸಹಾಯಕ್ಕೆಂದು ಇಂಗ್ಲಾಂಡಿನ ಎಲ್ಲ ಕೆಲಸಗಾರರು ಮುಷ್ಕರ ಹಿಡಿದರು ಸರಕಾರದವರು ಹೆಚ್ಚಿಗೆ ಅಧಿಕಾರವನ್ನು ಪಡೆದು ಅದನ್ನು ಮುರಿಯಬೇಕಾಯಿತು ಖಾಣಿಜ ಕೆಲಸಗಾರರಿಗೆ £ 14,000,000 ನಷ್ಟವಾಯಿತು

ಇಂತಹ ಸಂಘಗಳು ಯಜಮಾನ ಮತ್ತು ಕೂಲಿಗಾರ ರೊಳಗಿನ ಭೇದವನ್ನು ಇಟ್ಟು ಯಜಮಾನರಿಗೆ ಗಿರಣಿಯಲ್ಲಿ ಅಧಿಕಾರವಿದೆ ಎಂಬುದನ್ನು ಒಪ್ಪಿರುತ್ತಾರೆ. ಆದರೆ ಕೆಲವು ಕೂಲಿಗಾರರ ಪಕ್ಷದವರು ಇಷ್ಟಕ್ಕೆ ಒಪ್ಪುವುದಿಲ್ಲ ಆದ್ದರಿಂದ 1844ರಲ್ಲಿ ಇಂಗ್ಲಾಂಡಿನ ರೊಚಡೇಲಿನಲ್ಲಿಯ ಕೆಲ ಪ್ರೆನೆಲ ಕೂಲಿಗಾರರು ಪರಸ್ಪರ ಸಂಘವನ್ನು ಸ್ಥಾಪಿಸಿದರು ಇದು ಮತಿಯನ್ನು ಅನೇಕ ವಿಷಯದಲ್ಲಿ ಪಡೆಕೊಂಡು ತಮ್ಮ ಗಿರಣಿಯನ್ನು ಒಂದು ದೊಡ್ಡ ಕುಟುಂಬದಂತೆ ನಡೆಸಿಕೊಳ್ಳುವರು

ನ್ಯೂಜಲೆಂಡ್ ಆಸ್ಟ್ರೇಲಿಯ ಮುಂತಾದ ದೇಶಗಳಲ್ಲಿ ಮಾಲಿಕರಿಗೂ ಕೂಲಿಗಾರರಿಗೂ ಜಗಳವುಂಟಾದರೆ ಅದನ್ನು ಬಗೆಹರಿಸಲು ಕೋರ್ಟುಗಳನ್ನು ಸ್ಥಾಪಿಸಿರುವರು ಆ ಕೋರ್ಟಿಗೆ ಒಬ್ಬ ನ್ಯಾಯಾಧೀಶನೂ ಒಬ್ಬ ಕೂಲಿಗಾರರ ಪ್ರತಿನಿಧಿಯೂ, ಇನ್ನೊಬ್ಬ ಮಾಲಿಕರ ಪ್ರತಿನಿಧಿಯೂ ಇರುವರು ಅವರು ಎರಡು ಕಡೆಯ ವ್ಯವಹಾರಣೆಯನ್ನು ಕೇಳಿ ತೀರ್ಪನ್ನು ಕೊಡುವರು ಅದರಂತೆ ಎಲ್ಲರೂ ನಡೆಯ ತಕ್ಕದ್ದು ಈ ಕೆಲವೆಡೆಯಲ್ಲಿ ಜಗಳವನ್ನು ಪಂಚಾತಿಕೆಯಲ್ಲಿ ನಿಲ್ಲಿಸಲು "conciliation board" ಗಳು ಸ್ಥಾಪಿಸಲ್ಪಟ್ಟವೆ

ಕೂಲಿಗಾರರ ಸಂಕಷ್ಟಗಳು ಎಲ್ಲ ದೇಶಗಳಲ್ಲಿಯೂ ಒಂದೇ ರೀತಿಯಾಗಿವೆ ಆದ್ದರಿಂದ ಒಂದು ದೇಶದ ಕೂಲಿಗಾರರು ಸಂಕಷ್ಟದಲ್ಲಿ ಇದ್ದರೆ ಅದರ ಪರಿಣಾಮವು ಎಲ್ಲಾ ದೇಶದ ಕೂಲಿಗಾರರ ಮೇಲೆ ಬೀಳುವುದು ಆದ್ದರಿಂದ ಎಲ್ಲ ದೇಶದ ಕೂಲಿಗಾರರು ಸೇರಿ ಒಂದು ದೊಡ್ಡ ಸಭೆಯನ್ನು ಮಾಡಿರುವರು ಇವರು ಭೂಲೋಕದ ಕೂಲಿಗಾರರ ಪ್ರತಿನಿಧಿಗಳಾಗಿ ಮಾತ್ರವಾಗಿ ಯುರೋಪಿನಲ್ಲಿಯ ಅಂತರಾಷ್ಟ್ರೀಯ ಮಜೂರ ಪರಿಷತ್ತು (International Labour Conference) ಎಂಬುದು ಲೀಗ್ ಆಫ್ ನೇಶನ್ಸ ನಂತೆ ಜಗತ್ತಿನ ಕೂಲಿಗಾರರ ಸಭೆಯಾಗಿರುವುದು ಇದರ ಮಾದರಿಯ ಮೇಲೆ ಅಮೆರಿಕದಲ್ಲಿ 'Industrial Workers of the World' ಎಂಬ ಸಭೆ ಇರುವುದು

ಈಗ ಕೂಲಿಗಾರರು ಸರಕಾರದ ಕಡೆಗೆ ತಮ್ಮ ದೃಷ್ಟಿಯನ್ನು ಹೇಗೆ ಇಟ್ಟು ಅದನ್ನು ವಶೀಕರಿಸಲು ಯಾವ ಯಾವ ಪ್ರಯತ್ನಗಳನ್ನು ಮಾಡಿದರೆಂದು ನೋಡಬಹುದು ಮಜೂರರು ಸರಕಾರವು ಹಣವಿದ್ದವರ ಪಕ್ಷ ಹಿಡಿದುಕೊಳ್ಳುವುದನ್ನು ನೋಡಲಾರರು ಪ್ರಜಾಪ್ರಭುತ್ವವನ್ನು ಎಲ್ಲರೂ ಒಪ್ಪಿರುವಾಗ, ಕೈಗಾರಿಕೆಯಲ್ಲಿಯೂ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸುವಾಗ ಸರಕಾರವನ್ನು ಕೂಲಿಗಾರರ ಹಿತಕ್ಕಾಗಿ ಉಪಯೋಗಿಸಬೇಕೆಂದು ಪ್ರಯತ್ನಿಸುವುದು ಸಹಜವಾಗಿದೆ ಈ ಪಕ್ಷಕ್ಕೆ ಸೋಷಿಯಲಿಸ್ಟ ಪಕ್ಷವೆನ್ನುವರು 1 ಇವರು ಆದಷ್ಟು ಕೈಗಾರಿಕೆಗಳನ್ನು ಸರಕಾರದ ವತಿಯಿಂದ ನಡೆಸಬೇಕು 2 ಮಜೂರರ ಕಷ್ಟಗಳೆಲ್ಲವನ್ನೂ ದೂರ ಮಾಡಿ ಅವರಿಗೆ ಭೂಲೋಕದಲ್ಲಿ ನಾಕವನ್ನಾಡಲು ಸೌಕರ್ಯಗಳನ್ನು ಒದಗಿಸಬೇಕು ಆದರೆ ಮುಂದೆ ಕರಿವೇತನ, ಕೆಲಸ ಇಲ್ಲದವರಿಗೆ ಕೆಲಸ, ಹಣವಿಲ್ಲದವರಿಗೆ ಸಲಹೆ ಮುಂತಾದುವುಗಳನ್ನು ಕೊಡುವಿಕೆ ಕೆಲವರು ವೈದ್ಯಕ ಸ್ಥಿರವಿರಸೊತ್ತಿಗಾರಿಕೆಯನ್ನುವರು ಕೆಲವರು ಎಲ್ಲರಿಗೂ ಒಂದೇ ತರದ ಆದಾಯವಿರಬೇಕೆನ್ನುವರು ಇವುಗಳನ್ನು ಯಾವ ರೀತಿಯಲ್ಲಿ ಸಾಧಿಸಿಕೊಳ್ಳಬೇಕೆಂಬುದರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ

ಕೂಲಿಗಾರರ ಸೌಕರ್ಯಕ್ಕಾಗಿ ಸರಕಾರದವರು ಅನೇಕ ಕಾನೂನುಗಳನ್ನು ಮಾಡಿರುವರು ಮೊದಲನೆಯ ಪಕ್ಷದವರ ಪಕ್ಷವನ್ನು ಸರಕಾರದವರು ಇಂಗ್ಲಾಂಡಿನಲ್ಲಿ 1841ರಲ್ಲಿ ಜಾರಿಗೆ ತಂದರು ಆ ಸಮಯದಿಂದ ಮಜೂರ ಸಂಘದವರು ಅನೇಕ ಸುಧಾರಣೆಗಳನ್ನು ಸರಕಾರದವರಿಂದನೆ ಬೇಡುತ್ತಿದ್ದಾರೆ 1890ರಲ್ಲಿ ಇಂಗ್ಲಾಂಡಿನಲ್ಲಿ ಸೋಷಿಯಲಿಸಮ್ ಮತ್ತು ಮಜೂರ ಸಂಘದವರು ಒಟ್ಟಿಗೆ ಸೇರಿ ರಾಜಕೀಯ ಅಂಗಣದಲ್ಲಿ ಕಾಲಿಟ್ಟರು ಇದೇ ಇಂಗ್ಲಾಂಡಿನ ಮಜೂರ ಪಕ್ಷದವರ ಮೊದಲನೆಯ ನೆಟ್ಟಲು ಈ ಪಕ್ಷದಲ್ಲಿ ಮಜೂರ ಸಂಘದವರೂ, ಪೆಬಿಯನರೂ, ಸ್ವಾತಂತ್ರ್ಯ ಮಜೂರ ಪಕ್ಷಿಕರೂ (Independent Labour Party) ಸೇರಿರುತ್ತಾರೆ ಸೋಷಿಯಲಿಸಮು ಅಂದರೆ ಸರಕಾರದವರು ಕೈಗಾರಿಕೆಗಳನ್ನು ನಡೆಸುವುದು, ಆರ್ಥಿಕ ಬೇಧಗಳನ್ನು ಕಿತ್ತುಹಾಕುವುದು—ಕಾರ್ಲ್‌ಮಾರ್ಕ್ಸ

ಪಾರುಂಟ ವಿಕಾರವಾಗಿ ಇಂಗ್ಲಾಂಡಿನಲ್ಲಿ ಜಾರಿಗೆ ರುವಂತೆ ಅವರ ಮುಖ್ಯ ಧ್ಯೇಯ. ಇವರ ಈ ವಿಚಾರವು ಸುರೋಪಿನ ಇತರ ಮಜೂರ ಪಕ್ಷದವರಿಗೆ ಸಿಂಹೋಗದು. 906ರಲ್ಲಿ ಪಾರ್ಲಮೆಂಟಿನಲ್ಲಿ ಇವರ 50 ಸದಸ್ಯರಿದ್ದರು. ಈ 906 ರಿಂದ ಇವರು ಮತ್ತು ನಿಷ್ಠೆಯವರೆಗೆ ಸರ ಕಾರವು ಇವರ ಕೈಯಲ್ಲಿತ್ತು. ಆದರೆ ಆ ಕಾಲದಲ್ಲಿ ಸ್ಪಷ್ಟ ಧ್ಯೇಯವನ್ನು ಜಾರಿಗೆ ತರಲು ಅವರಿಗೆ ಆಗಲಿಲ್ಲ.

ಮಜೂರ ಪಕ್ಷದ ಜ್ಞಾನಕೋಷವೆಂದರೆ ಫೇಬಿಯನ್ ಸೊಸೈಟಿ (Fabian Society). 1888ರಲ್ಲಿ ಸ್ಥಿತಿಪಟ್ಟ ಈಗ (Lord Passfield) ದಂಪತಿಗಳು ಅದನ್ನು ಸ್ಥಾಪಿಸಿ ದರು. ಬರ್ನಾರ್ಡ್ ಷಾ, ಹೆಚ್.ಜಿ. ವೆಲ್ಸ್ ಮುಂತಾ ದವರು ಅದರ ಸದಸ್ಯರು. ಇವರು ಇಂಗ್ಲಾಂಡಿನಲ್ಲಿ ಸೊಸಿ ಯಾಲಿಸಮಿನ ಧ್ಯೇಯಗಳನ್ನು ನಿಧಾನವಾಗಿ ಜಾರಿಗೆ ತರ ಬೇಕೆನ್ನುವರು. ಇದನ್ನು ಜನರಿಗೆ ಆ ತರದಲ್ಲಿ ವಿದ್ಯೆಯನ್ನು ಒಟ್ಟು ಅದರ ವಿಷಯ ಪುಸ್ತಕಗಳನ್ನು ಬರೆದು, ಅವರ ಬುದ್ಧಿಗೆ ಅದು ಚೆನ್ನಾಗಿ ಇದೆಯೆಂದು ತೋರುವುದೇ ಅವರ ಆಸೆ. "It appeals to the intellect of men" ಎಂದು ಅನೇಕ ಪುಸ್ತಕಗಳನ್ನೂ ಜಾಹಿರಾತುಗಳನ್ನೂ ಬರೆ ದಿರುವರು. ಸಿಡ್ನಿಬೆಬ್ಬರು ತನ್ನ ಪುಸ್ತಕದಲ್ಲಿ ಇಂಗ್ಲಾಂಡಿಗೆ ಇರುವ ಸಭೆಗಳಿರಬೇಕೆಂದು ಬರೆಯುತ್ತಾರೆ. ಈಗಿನ ಪಾರ್ಲಿಮೆಂಟಿನವರು ಬರೀ ರಾಜಕೀಯ ವಿಷಯಗಳನ್ನು ಮಾತ್ರ ಚರ್ಚಿಸಿ ಅದನ್ನು ಜ್ಯಾರಿಗೆ ತರಬೇಕು. ಆರ್ಥಿಕ ವಿಷಯಗಳನ್ನು ಚರ್ಚಿಸಲು ಮಜೂರ ಸಂಘ ಮುಂತಾದ ಆರ್ಥಿಕ ಸಂಘಟನೆಗಳ ಪ್ರತಿನಿಧಿಗಳ ಒಂದು ಆರ್ಥಿಕ ಸಭೆ ಇರಬೇಕು (Economic Parliament). ಸರಕಾರ ಮತ್ತು ಈ ಎರಡೂ ಸಭೆಗಳ ಹೇಳಿಕೆಯ ಪ್ರಕಾರ ನಡೆದು ಕೊಳ್ಳಬೇಕೆಂದು ವೆಬ್ಬರ ಅಭಿಪ್ರಾಯ.

ಇಂಗ್ಲಾಂಡಿನ ಮಜೂರ ಪಕ್ಷದವರು ಸರಕಾರವನ್ನು ಈಗಿನ ಸಂಘಟನೆಯ (constitution) ಪ್ರಕಾರ ನಡೆಯಿಸಿ ಸಿಂದು ಬೇಕಾಗಿರಬೇಕೆನ್ನುವರು. ಈ ದಾಸಿಯು ಬಹಳ ಸಭ್ಯದ ದಾರಿಯಾಗಿದೆ. ಜನರನ್ನು ಚರ್ಚೆಯ ಮುಖಾಂತರ ತಮ್ಮ ವಶಮಾಡಿಕೊಳ್ಳಬೇಕಾಗಿರುವುದು. ತಮ್ಮ ಧ್ಯೇಯ ಗಳನ್ನು ಪೂರೈಸಬೇಕಾದರೆ ಈ ರೀತಿಯಲ್ಲಿ ನಡೆದರೆ ಬಹಳ ಸಮಯವು ಹಿಡಿಯುವುದು. ಯುರೋಪಿನ ಇತರ ದೇಶ ಗಳ ಮಜೂರ ಪಕ್ಷದವರಿಗೆ ಇಷ್ಟು ತಾಳ್ಮೆ ಇರುವುದಿಲ್ಲ. ಪಾರ್ಲಿಮೆಂಟಿಗೆ ಹೋಗಿ ಕೆಲಸ ಮಾಡುವುದಕ್ಕಿಂತ ಅದನ್ನು ಸುರಿಯುವುದೇ ಒಳ್ಳೆಯದು. ಬಹುಮತಕ್ಕೆ ಒಪ್ಪಿಕೊಳ್ಳು ವುದು, ಓಟು ತೆಗೆಯುವುದು ಅವರಿಗೆ ಸರಿಹೋಗದು. ಸಾಮಾನ್ಯದಾಯರೊ ಒಳ್ಳೆ ಕೆಲಸವನ್ನು ಕೆಲವರು ಸೇರಿ ಮಾಡು ವುದು ವಿನಹ ಬಹು ಜನರ ಒಪ್ಪಿಗೆಯಿಂದಲ್ಲ. ಆದ್ದರಿಂದ ಈಗಿನ ಸಮಾಜದ ಧೋರಣವನ್ನು ಸುರಿದು ಹೊಸ ಸೂದರಿ ಯಲ್ಲಿ ಸಮಾಜವನ್ನು ಘಟಿಸಬೇಕೆನ್ನುವರು. ಇಂತಹ ಮತವಿದ್ದವರಲ್ಲಿ ಅನೇಕ ಪಂಗಡಗಳವೆ.

ಕೆಲವರು Anarchist ಎನ್ನುವ ಪಂಗಡದವರು ಪ್ರೊಪ್ಲಟೊಯಿ, ಪ್ರೌಧನ್, ಗೊಡ್ವಿನ್ ಇವರೆ ಅವರ ಮುಖ್ಯಸ್ಥರು. ಇವರ ಹೇಳಿಕೆಯ ಪ್ರಕಾರ ಯಾವ ದೇಶ ಕ್ಕಾದರೂ ಸರಕಾರವೇ ಇರಕೂಡದು. ಪ್ರತಿ ಒಬ್ಬನು ತನಗೆ ಸಂತೋಷದ ರೀತಿಯಲ್ಲಿ ನಡೆದುಕೊಳ್ಳಬೇಕು. ಸರ ಕಾರವನ್ನು ಸ್ಥಾಪಿಸಿ ನಡೆಯಿಸಿಕೊಳ್ಳಲು ವ್ಯಯತ್ನಪಡುವುದ ಕ್ಕಿಂತ ಪ್ರತಿ ಒಬ್ಬನ ನಡತೆಯನ್ನು ಸುಧಾರಿಸಲು ಪ್ರಯತ್ನ ಪಟ್ಟರೆ ಜನರಿಗೆ ಹೆಚ್ಚಿನ ಸೌಕರ್ಯವು ಬರುವುದು. ಕೊಪ್ಪಟಕಿನ ಎಂಬ ರಷ್ಯದ ವಿದ್ವಾಂಸನು ಪ್ರತಿ ಒಬ್ಬ ಮಾನವನಿಗೆ ತನಗೆ ಬೇಕಾದಷ್ಟು ದೊರೆಸುವ ವರೆಗೆ ಇರಬೇಕೆನ್ನುವನು. "If you are absolutely incapable of producing anything useful or if you refuse to do it, then live like an isolated man or like an invalid. You are a man & you have a right to live" ಇಂತಹ ವಿಚಾರಗಳು ವಸ್ತುಗಳಲ್ಲಿ ಸರಿತೋರುವುದಲ್ಲದೆ ದೇಶದಲ್ಲಿ ಇನ್ನೂ ಸ್ಥಾಪಿಸಲು ಸಮಯ ಬಂದಿಲ್ಲ.

ಫ್ರಾನ್ಸ ದೇಶದಲ್ಲಿಯ ಮಜೂರ ಪಕ್ಷದವರು ಸಿಂಡಿಕ ಲಿಸಮ್ (Syndicalism) ಎಂಬ ವಂತವನ್ನು ಸಾಧಿಸು ವರು. ಇದರ ಪ್ರಕಾರ ಪ್ರತಿ ಕೈಗಾರಿಕೆಯೂ ಕೂಲಿಗಾರರ (Producers) ಕೈಯಲ್ಲಿಯೇ ಇರಬೇಕು. 1884ರಿಂದ ಫ್ರಾನ್ಸಿನಲ್ಲಿ ಎರಡು ತರದ ಕೂಲಿಗಾರ ಸಂಘಗಳಿವೆ. 1. ಕಛೇರಿಟ್ಟಣಗಳಲ್ಲಿಯ ಸಂಘಗಳು. (Bourses du Travail) 2. ಎಲ್ಲ ಸಂಘಗಳನ್ನು ಸಿಕ್ಕಿಸಿ ದೇಶದ ಕೂಲಿಗಾರರ ಪ್ರತಿನಿಧಿ ಸಂಘ (Generale du Travail) ಇವರ ಮುಖ್ಯ ಧ್ಯೇಯವೆಂದರೆ ಬಂಡವಾಳತನವನ್ನು (Capitalism) ನುರಿದುಬಿಟ್ಟು ಕೂಲಿಗಾರರ ರಾಜ್ಯ ಸ್ಥಾಪಿಸಿ, ಕೈಗಾಲಿಕೆ, ವ್ಯಾಪಾರ ಮತ್ತು ಸರಕಾರ ಇವು ಗಳನ್ನು ಕೂಲಿಗಾರರು ನಡೆಯಿಸುವುದು. ಇದನ್ನು ಸಾಧಿ ಸಲು ಪಾರ್ಲಿಮೆಂಟಿನಲ್ಲಿ ಸೇರಿ ಪ್ರಯೋಜನವಿಲ್ಲ. ಹಾಗೆ ಮಾಡಿದರೆ ತಮ್ಮ ಕೆಲಸವು ಬೇಗನೆ ಆಗಲಾರದು. ಆದ್ದ ರಿಂದ ದೇಶದಲ್ಲಿ ಮುಷ್ಕರದಿಂದಲೂ, ಇನ್ನಿತರ ರೀತಿ ಯಿಂದಲೂ ಗಲಭೆಯನ್ನು ಎಬ್ಬಿಸಿಯೂ ಸರಕಾರ್ಕ್ಕೂ ಪಾರ್ಲಿಮೆಂಟಿಗೂ ಬೆದರಿಕೆಯನ್ನು ಹುಟ್ಟಿಸಿ ಅವರಿಂದ ತಮಗೆ ಬೇಕಾದ ಕೆಲಸವನ್ನು ವತ್ತಾಯದಿಂದ ನೂಡಿಸಿ ಕೊಳ್ಳುವುದು. 1919ರಲ್ಲಿ ಇವರು ದೇಶದ ಮುಖ್ಯ ಕೈಗಾ ರಿಕೆಗಳನ್ನು ಸರಕಾರದವರು ನಡೆಯಿಸಬೇಕೆಂದು ಅವು ಗಳನ್ನು ಕೂಲಿಗಾರರು, ಸಾಮಾನು ಕೊಂಡುಕೊಳ್ಳುವ ವರೂ (Consumers) ನಡೆಯಿಸಬೇಕೆಂದು ಕೇಳಿಕೊಂಡು ಗಲಭೆಮನ್ನೆಬ್ಬಿಸಿದರು. ಆದರೆ ಅದು ವ್ಯರ್ಥವಾಯಿತು. ಗಿರಣಿಗಳಲ್ಲಿ ಕೂಲಿಗಾರರ ಬೇಡಿಕೆಗೆ ವ್ಯವಸ್ಥಾಪಕರು ಒಪ್ಪದಿದ್ದರೆ ಅವರಿಗೆ ಹೊಸ ರೀತಿಯಲ್ಲಿ ಬೆದರಿಕೆಯನ್ನು ಇವರು ಹುಟ್ಟಿಸುವರು. ಇವರು ಮುಷ್ಕರ ಹಿಡಿದು ಗಿರಣಿಗಳನ್ನು ಬಿಟ್ಟುಹೋಗುವುದಲ್ಲ. ಗಿರಣಿಗಳಲ್ಲಿ ಇದ್ದು ಪ್ರಯತ್ನ ದಿಂದ ಯಂತ್ರಗಳನ್ನು ನುರಿಯುವುದು, ಅದಮ್ಮ ಮಟ್ಟಿಗೆ ಕಮ್ಮಿ ಕೆಲಸ ಮಾಡುವುದು, ಅಲಸ್ಯದಿಂದ ಹೊತ್ತು ಕಳೆದು ಮಾಲಿಕರ ಲಾಭವನ್ನು ಕಮ್ಮಿ ಮಾಡುವುದು. ಕೆಲವು ಸಲ ಅಗತ್ಯವಿಲ್ಲದ ರೀತಿಯಲ್ಲಿ ಮಾಲಿಕರು ಹೇಳಿದ ರೀತಿಯಲ್ಲಿ ನಡೆದುಕೊಳ್ಳುವುದು, ಅಥವಾ ತಾವು ಮಾಡಿದ ಸಾಮಾನು ನಲ್ಲಿ ಕೂರತೆಗಳಿದ್ದರೆ ಅದನ್ನು ಜನರಿಗೆ ತಿಳಿಸುವುದು. ಕಮ್ಮಿ ಸಂಬಳಕ್ಕೆ ಕಮ್ಮಿ ಕೆಲಸ—ಇವೇ ಅವರ ಮುಖ್ಯ ಖಡ್ಗಗಳು. ಇಂತಹ ಮಾನಸಿಕ ವಿಲಕ್ಷಣಗಳು ಈಗಿನ ಸಮಾಜಕ್ಕೆ ಬಹಳ ಹಾನಿಕರವಾಗಿವೆ.

ಕಲೆಕ್ಟಿವಿಸಮ್ (Collectivism) ಎಂಬುದು ಮಜೂರ ಪಕ್ಷದ ಇನ್ನೊಂದು ವಿಕಾಸ. ಇವರ ಹೇಳಿಕೆಯ ಪ್ರಕಾರ ಎಲ್ಲ ಆಸ್ತಿಗಳನ್ನೂ, ಕೈಗಾರಿಕೆಗಳನ್ನೂ, ವ್ಯಾಪಾರ ವನ್ನೂ ಬಬ್ಬೊಬ್ಬರು ನಡಿಸದೆ ಎಲ್ಲರೂ ಸೇರಿದ ಸಂಘಟನೆ ಗಳಿಂದ ಅಥವಾ ಸರಕಾರದವರಿಂದ ನಡೆಯಿಸತಕ್ಕದ್ದು. ಇಂತಹ ಘಟನೆಯಲ್ಲಿ ಕೂಲಿಗಾರರಿಗೆ ಅದಮ್ಮ ಮಟ್ಟಿಗೆ ಸ್ವಾತಂತ್ರ್ಯವು ದೊರೆಯಬೇಕು. ಇದು ನಿಜವಾಗಿ ಸಾಧಿಸ ಬೇಕಾದರೆ ಒಳ್ಳೆ ಕೆಲಸವಾದ ಸರಕಾರವಿರಬೇಕು. ಇದನ್ನು ನಾವು ಈಗ ಎಲ್ಲಿಯೂ ಕಾಣುವುದಿಲ್ಲ. ಇವರ ವ್ಯಾಪಾರ ದಿಯ ಕೆಲಸದಂದ ಎಲ್ಲಿಯೂ ಸರಕಾರದವರು ಹೆಚ್ಚಿಗು ಕೈಗಾರಿಕೆಗಳನ್ನು ನಡಿಯುವುದು.

ಈ ಎರಡು ಮತಗಳ ನಡುವೆ ಇರುವ ಮತಕ್ಕೆ ಗಿಲ್ಡ್ ಸೊಸಿಯಾಲಿಸಮ್ ಎನ್ನುವರು. (Guild Socialism) ಸರಕಾರವು ಎಲ್ಲ ಗಿರಣಿಗಳ ಮಾಲಿಕರಾಗಿರಬೇಕು. ಆದರೆ ಪ್ರತಿ ಒಂದು ಗಿರಣಿಯನ್ನು ಅದರಲ್ಲಿ ಕೆಲಸ ಮಾಡುವ ಕೂಲಿಗಾರರು ತಮ್ಮ ಪ್ರತಿನಿಧಿಗಳ ಮೂಲಕ ನಡಿಯಿಸಿ ಕೊಂಡು ಹೋಗಬೇಕು. ಗಿರಣಿಗಳ ಮೇಲ್ವಿಚಾರಕೆಗೆ 'ನೇಶನಲ್ ಗಿಲ್ಡ್' (National Guild) ಎಂಬ ಸಭೆ ಯೊಂದು ಇರಬೇಕು. ಇದರಲ್ಲಿ ಎಲ್ಲ ಗಿರಣಿಗಳ ಪ್ರತಿನಿಧಿ ಗಳಿರಬೇಕು. ಕೊಲ್ (Cole) ಎಂಬವರೆ ಇದರ ಮುಖ್ಯ ಉಪಾಧ್ಯಾಯರು. ಹೆಬ್ಬನ್ಸ್ ಎಂಬವರು ಸರಕಾರದ ಆರ್ಥಿಕ ಕೆಲಸವನ್ನು ಈ 'ನೇಶನಲ್ ಗಿಲ್ಡ್' ನಡೆಯಿಸಿ ಕೊಳ್ಳಬೇಕೆನ್ನುವರು.

ಈ ಮತದ ಪರಿಣಾಮವನ್ನು ನಾವು ಜರ್ಮನಿಯ ಈಗಿನ ನವರಾಜ್ಯ ಘಟನೆಯಲ್ಲಿ ನೋಡಬಹುದು. ಇದರ ಪ್ರಕಾರ ಪ್ರತಿ ಕೈಗಾರಿಕೆಯ ಮೇಲ್ವಿಚಾರಣೆಗೆ ಒಂದು ಆರ್ಥಿಕ ಸಭೆಯಿರುವುದು. ಇದರಲ್ಲಿ ಮಾಲಿಕರ ಮತ್ತು ಪೂಜಾರರ ಪ್ರತಿನಿಧಿಗಳಿರುವರು. ಇಲ್ಲಿ ಸಭೆಗಳನ್ನು ಸೇರಿಸಿ ರಷ್ಟ್ರೀಯ ಆರ್ಥಿಕ ಸಭೆಯೊಂದನ್ನು (Grand Economic Council) ಸ್ಥಾಪಿಸಿದ್ದಾರೆ. ಇದರಲ್ಲಿ ಎಲ್ಲ ಆರ್ಥಿಕ ವರ್ಗಗಳಿಗೆ ಪ್ರತಿನಿಧಿಗಳಿರುವರು. 70 ಮುಖ್ಯ ಆರ್ಥಿಕ ಗುಂಪುಗಳ ಪ್ರತಿನಿಧಿಗಳಿಂದ 826 ಸಭಿಕರಿರು ವರು. ಜರ್ಮನಿಯ ರೈಚ್ಸ್ಟಗ ಎಂಬ ಪಾರ್ಲಿಮೆಂಟಿಗೆ ಎಷ್ಟು ಅಧಿಕಾರವಿದೆಯೋ ಅಷ್ಟೆ ಅಧಿಕಾರವು ಕೆಲವು ವಿಷಯ ಗಳ ಮೇಲೆ ಈ ಸಭೆಗೆ ಇರುವುದು. ಪಾರ್ಲಿಮೆಂಟಿನವರು ಯಾವ ಕಾನೂನು ಮಾಡಬೇಕಾದರೂ ಈ ಆರ್ಥಿಕ ಸಭೆಯ ಅಭಿಪ್ರಾಯವನ್ನು ಪಡೆಯಬೇಕು. ಹೀಗೆ ಆರ್ಥಿಕ ಮತ್ತು ರಾಜಕೀಯ ಕೆಲಸಗಳಲ್ಲಿ ಭೇದವನ್ನು ಸರಕಾರ ದವರು ಮಾಡಿರುವರು.

ಆದರೆ ಮಜೂರರಿಗೆ ಅಧಿಕಾರ ಸಿಕ್ಕಿದರೆ ಎಷ್ಟು ಸ್ಪಬಲ ವಾದ ಸರಕಾರವಾಗುವದು ಎಂಬುದನ್ನು ನಾವು ತಿಳಿಯ ಬೇಕಾದರೆ ರಷ್ಯದ ಕಡೆಗೆ ನೋಡಬೇಕು. ಇಲ್ಲಿಯ ಸರ ಕಾರವು ಕೂಲಿಗಾರರ ಸರಕಾರವಾಗಿದೆ. ಎಲ್ಲ ಕೈಗಾರಿಕೆಗಳ ಮಾಲಿಕರು ಸರಕಾರದವರಾಗಿರುವರು. ಪ್ರತಿ ಗಿರಣಿಯ ಕೂಲಿ ಗಾರರಿಗೆ ಆ ಗಿರಣಿಯನ್ನು ನಡೆಯಿಸಲು ಪೂರ್ಣ ಸ್ವಾತಂತ್ರ್ಯ ವಿದೆ. ಇಂತಹ ಸಂಘಗಳಿಗೆ ಸೊವಿಯಟ್ ಎನ್ನುವರು. ಎಲ್ಲ ಸೊವಿಯಟ್‌ಗಳನ್ನು ಸೇರಿಸಿ ಅವುಗಳ ಒಂದು ರಾಷ್ಟ್ರೀಯ ಸೊವಿಯಟ್ ನಿರ್ಮಿತ ಮಾಡಿ ಅದರ ಮೂಲಕ ರಾಜ್ಯವು ನಡೆಯುವುದು. ಇಲ್ಲಿ ವಕ್ತರ್ಯವಂತರಿಲ್ಲವೆಂದೇ ಇಲ್ಲ. ಮೈಗಳ್ಳರ ಆಶ್ರಯಸ್ಥಾನವು ರಷ್ಯವಲ್ಲ. ಕೆಲಸ ಮಾಡದಿದ್ದರೇ ಎಲ್ಲಾರಿಗೂ ಆಹಾರ ದೊರಕುವುದು. ಮುಂಚಿನ ಮಾಲಿಕರ ಸರಕಾರವು (Capitalist Govt.) ಎಷ್ಟು ಸಿರಂಕುಶವಾ ಗಿದ್ದಿತೋ ಅಷ್ಟೇ ಸಿರಂಕುಶತ್ವದಲ್ಲಿ ಕೂಲಿಗಾರರು ವಿರೋಧ ವನ್ನು ಕುಗ್ಗಿಸಿಬಿಡುವರು. ಕಾರ್ಲ್ ಮಾರ್ಕ್ಸ್‌ರು ಆಶೋ ಚನೆ ಮಾಡಿದ ಕೂಲಿಗಾರರ ಸರಕಾರವು ರಷ್ಯದಲ್ಲಿಯಾದರೂ ಆದಂತಾಯಿತು. Here at least it seems that the dream of Karl Max to establish the "dictatorship of the Proletariat" is well nigh realized

ಮನುಷ್ಯನು ಮಂಗಗಳ ಮಾತ್ಸವಲ್ಲ ಮಿಾನಿನ ಸಂತತಿಯವನೂ ಆಗಿದ್ದಾನೆ.

ಮನುಷ್ಯನ ಪೂರ್ವಜರು ಮಂಗಗಳಾಗಿದ್ದಾರೆಂದು ಡಾರ್ವಿನ್ ಎಂಬ ದೊಡ್ಡ ಶಾಸ್ತ್ರಜ್ಞರು ಶೋಧ ಮಾಡಿ ಕಂಡು ಹಿಡಿದರು. ಶೋಧವು ಅಲ್ಲಿಗೇ ನಿಲ್ಲಲಿಲ್ಲ. ಡಾರ್ವಿ ನನ ನಂತರದ ವೈಜ್ಞಾನಿಕರು ಇನ್ನೂ ಶೋಧ ನಡೆಸಿ ಮಂಗನ ಪೂರ್ವಜರನ್ನು ಕಂಡು ಹಿಡಿದಿವ್ವಾರೆ. 800ರಿಂದ 500 ಮಿಲಿಯ ವರ್ಷಗಳ ಹಿಂದೆ ಮಿನುಗಳುಇದ್ದುವು; 100 ರಿಂದ 800 ಮಿಲಿಯ ವರ್ಷಗಳ ಹಿಂದೆ ಹಲ್ಲಿಗಳು (Lizards) ಇದ್ದಿದ್ದುವು; 50ರಿಂದ 100 ಮಿಲಿಯ ವರ್ಷ ಗಳ ಹಿಂದೆ ಸುರದ ಮೀರಿರುವ ಚಮತ್ಕಾರಿ (Opossum) ಗಳು ಇದ್ದಿದ್ದುವು; 30ರಿಂದ 50 ಮಿಲಿಯ ವರ್ಷಗಳ ಹಿಂದೆ ಪ್ರಥಮತೆ ಮಂಗಗಳು ಇದ್ದುವಿದವು; 10ರಿಂದ 30 ಮಿಲಿಯ ವರ್ಷಗಳ ಹಿಂದೆ ಮನುಷ್ಯ ರೂಪ ಮಂಗಗಳು ಜನಿಸಿದವು; ಆ ಮೇಲೆ ಮನುಷ್ಯನು ಉದ್ಭವಿಸಿದನು.

* * * * *

ಸಾವಿರಾರು ಮೈಲಿ ದೂರವಿದ್ದವರ ಮುಖ ಸಂಭಾಷಣೆ.

ಮಂಗಳೂರಿನಲ್ಲಿದ್ದ ನಾನು ಲಂಡನ್ನಿನಲ್ಲಿರುವ ಒಬ್ಬ ಸ್ನೇಹಿತನೊಡನೆ ಮುಖಮುಖವಾಗಿ ಕುಳಿತು ಸಂಭಾಷಣೆ ಮಾಡಬಹುದೇ? ಎಂದು ಹತ್ತು ವರ್ಷಗಳ ಹಿಂದೆ ಬರೀ ಪ್ರಶ್ನೆ ಮಾಡಿದ್ದಾದರೆ ನನಗೆ ಹುಚ್ಚು ತಾಗಿದೆ ಎನ್ನುತಿದ್ದರಿ, ಆದರೆ ಈಗಿನ ವಿಜ್ಞಾನದ ಬೆಳವಣಿಗೆಯು ಇಂತಹ ಅಸಾಧ್ಯ ವಿಷಯವನ್ನೂ ಸಾಧ್ಯವಾಗಿ ಮಾಡಿರುತ್ತದೆ. ಟೆಲಿವಿಯೊ ಎಂದರೆ ತಂತಿಯಲ್ಲದೆ ದೂರದಿಂದ ಸಂಭಾಷಣೆ ಮಾಡು ವುದು, ಅಥವಾ ಭಾಷಣ, ಶಬ್ದಗಳನ್ನು ಕೇಳುವುದು ನಮ್ಮ ದೇಶದಲ್ಲಿ ಅಪ್ಪಿಂದು ವ್ಯಕ್ತಿಯವಿಲ್ಲದಿದ್ದರೂ, ಸಾಧಾರಣ ಎಲ್ಲರ ತಿಳುವಳಿಕೆಗೆ ಬಂದಿರುತ್ತದೆ. ಯುರೋಪ ಅಮೇ ರಿಕಗಳಲ್ಲಿ ಸಾಧಾರಣ ಎಲ್ಲಾ ಮನೆಗಳಲ್ಲಿಯೂ ಈ ಭಾಷಣ ಗ್ರಾಹಕ ಯಂತ್ರವು ಇದೆ. ಈಗ ಇದೇ ರೀತಿಯ ಭಾಷಣ ಗ್ರಾಹಕ (Television) ಯಂತ್ರವು ಕೋಟಿಧನ ಮಿಾಮಾಂಸೆಯಲ್ಲಿದೆ. ಮುಕ್ಕಾಲು ಸಾಸಿ ಪೂರ್ಣತೆಗೆ ಬಂದಿರುತ್ತದೆ. ಇದರ ಮೂಲಕ ಸಾವಿರಾರು ಮೈಲಿ ದೂರದಿಂದ ಒಬ್ಬರ ಚಿತ್ರವನ್ನೂ ಅವರ ಭಾಷಣವನ್ನು ರೇಡಿಯೊ ಮೂಲಕ ಕಳುಹಿಸುವಂತೆಯೇ ಕಳುಹಿಸಬಹುದು. ಹೀಗೆ Television ಮತ್ತು Radio ಇವುಗಳನ್ನು ಒಟ್ಟು ಗೂಡಿಸಿದರೆ ಸಾವಿರಾರು ಮೈಲಿ ದೂರವಿದ್ದವರು ಒಂದೆ ಸಮಯದಲ್ಲಿ ತಮ್ಮ ಚಿತ್ರಗಳನ್ನು ಚಲಚಿತ್ರದೋಪಾದಿ ತಮ್ಮ ತಮ್ಮ ಕೋಣೆಗಳಲ್ಲಿ ಗೃಹಸ್ಥ, ಎದುರಿದುರು ಇದ್ದರಂತೆ ಅನುಭವ ಮಾಡಿ ಭಾಷಣ ಮಾಡುತ್ತಾ ಇರಬಹುದು. ನಾವು ರಾಮಾಯಣದ ಪಕ್ಷಿಕೆ ವಿಮಾನ ಅಥವಾ ಸಂಜಯನ ಅಂಗೈಯ ಅಥವಾನಂದಲೇ ಕೃಷ್ಣ ರಿರುವಾಗ ಮಾತ್ಸ್ಯಕ್ಕೆ ಅದರ ಅನುಭವದ ಸುಖದಲ್ಲಿದ್ದಾರೆ

ಆಸ್ತಿಕನೋ ನಾಸ್ತಿಕನೋ?

ಲೇಖಕ:—ಜಗನ್ನಾಥ

ನಾನು ತತ್ವವೇತ್ತನಲ್ಲ, ಶಾಸ್ತ್ರಗಳನ್ನು ಓದಿ ತಿಳಿದವನಲ್ಲ, ಈಗಿನ ಹೆಂದೂ ಮತದ ವಿಮರ್ಶಕರೂ ವ್ಯವಸ್ಥಾಪಕರೂ ಆಗಿರುವ ಶ್ರೀ। ಶಂಕರಾಚಾರ್ಯ, ಮಧ್ವಾಚಾರ್ಯ ರಾಮಾನುಜಾಚಾರ್ಯರ ವಿಚಾರಗಳನ್ನು ತಿಳಿದವನೂ ಅಲ್ಲ—ತಿಳಿಯುವಂತಹ ಬುದ್ಧಿಶಕ್ತಿಯೂ ಈಗಿನ ಹೆಂದೂಸ್ಥಿಗೆ ಕಡಿಮೆ ಸಾಮಾನ್ಯ ಜ್ಞಾನವೂ ಇವುಗಳನ್ನು ಬಲ್ಲವನಲ್ಲ, ಆ ಕಾರಣದಿಂದ ನನ್ನ ಅಭಿಪ್ರಾಯವೇನೆಂದು ಪರೀಕ್ಷಿಸುವ ಅಧಿಕಾರವು ನನಗಿಲ್ಲವೇ?

ಮತವೆಂದರೇನು? ವಿಶ್ವಾಸವೆಂದರೇನು? ಭಕ್ತಿಯೆಂದರೇನು? ಇವುಗಳನ್ನು ಸಾಂಸಾರಿಕನು ತನ್ನ ನಿತ್ಯದ ಅಡಚಣೆಗಳಿಂದ ಹೇಗೆ ಸೇರಿಸಿಕೊಳ್ಳುವನು? ಯಾವಾಗ? ಯಾವುದೊಂದು ವ್ಯಾಪಕವಾದ ದುಃಖ—ಕೇಳಿದ್ದೇನೆ ಅದರಿಂದ ತನ್ನ ನಿತ್ಯದ ಕೆಲಸಗಳ ನಡುವಿನಲ್ಲಿ ಆಸ್ತಿಕನಾಗಿ ವ್ಯವಹರಿಸುವುದು ಹೇಗೆ? ನಾನು ಆಸ್ತಿಕನೋ ನಾಸ್ತಿಕನೊ ಎಂಬುದು ಯಾವುದರಿಂದ ತಿಳಿಯಬೇಕು?

ಹೆಂದೂವಿಗೆ ದೇವಸ್ಥಾನಗಳಿವೆ, ಮಹಮ್ಮದೀಯರಿಗೆ ಮಸೀದಿಗಳಿವೆ, ಕ್ರೈಸ್ತರಿಗೆ ಚರ್ಚುಗಳಿವೆ ಇವು ಮತಗಳ ಅಸ್ತಿತ್ವವನ್ನು ಸ್ಥಾಪಿಸಲು ಯತ್ನಿಸುವ ಹೊರಗಿನ ಸಾಧನೆಗಳು ಮಾತ್ರ, ಆದರೆ ಅವು ಆ ಅಸ್ತಿತ್ವದ ಅಂತರಂಗದ ಸಾಕ್ಷಿಗಳಾಗಿವೆಯೆಂಬುದಕ್ಕೆ ಯಾವ ಆಧಾರವೂ ಇಲ್ಲ

ವಿಶ್ವಾಸ, ಭಕ್ತಿ, ಸ್ವಾರ್ಥವಿಲ್ಲದ ಸಾಂಸಾರಿಕನ ಮತವನ್ನು ಬಿಡಿಸಿದರೆ ತೋರುವ ಬರೀ ಎರಡು ವಿಷಯಗಳು ಕರ್ತವ್ಯದ ಗರ್ಭದಲ್ಲಿ, ತೂಕಡಿಸುವ ದೀಪ್ತಿಗೆಗಳ ಮಾಲೆಗಳ ಮಧ್ಯದಲ್ಲಿ ಮೂರ್ತಿಗಳು ಪ್ರತಿಷ್ಠಿತವಾಗಿವೆ ಅರ್ಚಕನು ಪವಿತ್ರ ಪುಷ್ಪಗಳಿಂದ ಅವುಗಳನ್ನು ಅಲಂಕರಿಸುವನು ಕಂಪಿಸುವ ಕೈಗಳಿಂದ ಅವುಗಳಿಗೆ ಅವನು ಆರತಿಯೆತ್ತುವನು ಇವುಗಳ ಮುಖದಲ್ಲಿ ಭಕ್ತವ್ಯಾದವೆಷ್ಟೋ ನಿಂತು ಹೋಗಿವೆ ವಿಶ್ವಾಸವನ್ನು ಅರ್ಪಿಸುವರು ಮುಗಿದಿದೆಯೇ ಇಲ್ಲಿ ಆಸ್ತಿಕ್ಯ? ಮುಗಿಯುತೇ ಇಲ್ಲಿ ಮತ? ಸಾಂಸಾರಿಕನ ಮಟ್ಟಿಗೆ ಮತದ ಅವಶ್ಯಕತೆಯು ಇಲ್ಲಿಗೆ ಕೊನೆಗಾಣಿತೇ?

ದೇಗುಲಗಳ ಪವಿತ್ರ ಅಂತರ್ಯದಲ್ಲಿ ನಾನು ಪ್ರವೇಶಿಸಿದ್ದೇನೆ, ಎದೆಯ ಶೇಷಪಾವಿತ್ರ್ಯವನ್ನು ಏಕೀಕರಿಸಿ ಆ ಮೂರ್ತಿಗಳಲ್ಲಿ ಕೇಂದ್ರೀಕರಿಸಿದ್ದೇನೆ, ಆದರೆ ನಮಸ್ಕಾರಕ್ಕಾಗಿ ಕೈಯೇಳುವುದಿಲ್ಲ, ಸ್ವಾರ್ಥನಿಗಾಗಿ ನಾಲಿಗೆ ಕಲಿಸುವುದಿಲ್ಲ ಯಾವುದಕ್ಕೆ ಕೈಮುಗಿಯಲಿ? ಯಾವುದಕ್ಕಾಗಿ ಸ್ವಾರ್ಥನೆಯನ್ನು ಬಯಸಲಿ?

ಲೆಜಿಸ್ಲೇಟಿವ್ ಎಸೆಂಬ್ಲಿಯ ಮಾಜಿ ಅಧ್ಯಕ್ಷರಾಗಿದ್ದ ಶ್ರೀ। ವಿಠಲಭಾಯಿ ಪಟೇಲರು ಬರ್ಲಿನ್ ಪಟ್ಟಣದಲ್ಲಿ ಇವರು ಅಸ್ವಸ್ಥವಿದ್ದವರು ಸೌಖ್ಯಹೊಂದಲು ಯುರೋಪಿನಲ್ಲಿದ್ದಾಗ.

ವಿಶ್ವನ್ಯಾಪಕನೆಂದು ಕಲ್ಪಿಸುವ ದೇವರ ಅನಂತ ಮೂರ್ತಿಯನ್ನು ಈ ಸಣ್ಣ ಆವರಣದಲ್ಲಿ ತುಂಬಿಸಲು ಯತ್ನಿಸಿ ಅಲಿಕ್ಕೆ ಈ ಎದೆಯ ಶಕ್ತಿಸಾಲದು "ದೇವ, ಸರ್ವತ್ರವಿರುವೆನೆಗಳನ್ನಭಿವೃದ್ಧಿ ಮಾಡು' ಎಂಬ ಈ ಕ್ಷುದ್ರಸ್ವಾರ್ಥವನ್ನು ಪೂರಲಿಕ್ಕೆ ಈ ಮನಸ್ಸಿನ ಧೈರ್ಯವು ಸಾಲದು ವಿಶ್ವವು ವಿಶಾಲವಿದೆ ಅತ್ಯಗಳು ಅಸಂಖ್ಯವಿವೆ ಅವುಗಳ ನಡುವಲ್ಲಿ ನಾನೊಬ್ಬ ಈಶ್ವರನು ವಿಶಾಲನಿರುವನು, ನಾನಾರು? ಕ್ಷುದ್ರವಾದೊಂದು ಸ್ಥಳದಲ್ಲಿ ಕ್ಷುದ್ರತರವಾದ ಮೂರ್ತಿಯನ್ನುದ್ಘೋಷಿಸಿ, ಕ್ಷುದ್ರತಮವಾದ ಸ್ವಾರ್ಥವನ್ನುಸುರಲಿಕ್ಕೆ ನಾನಿವ್ವೆರವನು?

ಭಕ್ತಿ, ವಿಶ್ವಾಸ, ವಿಶ್ವಾಸ, ಭಕ್ತಿ, ದಿನನಿತ್ಯದ ಅರ್ಥಹೀನವಾದ ಸಂದ್ಯಾವಂದನೆ, ಊರಿಗೆ ಬರುವ ಸ್ವಾಮಿ, ಸನ್ಯಾಸಿಗಳ ಪಾದ ಪೂಜೆ, ಆಗಾಗ ದೇವಸ್ಥಾನದ ಸಂದರ್ಶನ, ಕೃತ್ರಿಮವಾದ ತಾಳಗಳ ತಗಡುಗಳನ್ನು ಹೊಡೆಯುತ್ತ ಕುಣಿಯುತ್ತ "ವಿಟ್ಠಳ" ವೆಂಬ ಭಜನೆ; ಆಯಿತೇ ಭಕ್ತಿ? ಬಂದಿತೇ ಆಸ್ತಿಕ್ಯ? ಎಷ್ಟು ಮೌಢ್ಯ! ಮರಾಧಿವತಿಗಳು ಸಮಸ್ತ ಶಾಸ್ತ್ರಗಳ ಸಂಗ್ರಹಕಾರರು, ದೇವಸ್ಥಾನಗಳು ಸಮಸ್ತ ಕಲಹಗಳ ಕೇಂದ್ರಗಳು, ಭಜನೆಗಳು ಮೌಢ್ಯದ ವರ್ಧನೆಗಳು. ಇಲ್ಲಿಯೇ ದೇವರು? ಇಲ್ಲಿಯೇ ಮತ? ಇಲ್ಲಿಯೇ ಆಸ್ತಿಕ್ಯ? ಫುನಃ ಪ್ರಶ್ನೆ—ಮತವೇನು; ಆಸ್ತಿಕ್ಯ ವೇನು?

ನಾಲ್ಕಾಣೆಯ ಹರಿಕೆಗಾಗಿ ವ್ಯಕ್ತಿಯ ಸುಖದುಃಖಗಳನ್ನು ಕಾಪಾಡುವ ದೇವರು ಸಾವಿರಾರು ರೂಪ್ಯಾ ನಷ್ಟವಾಗಿ ಸಮಷ್ಟಿಜೀವಿತವು ನಾಶವಾಗುವ ತನ್ನ ಸ್ವಂತ ಧೇವಸ್ಥಾನಗಳನ್ನು ರಕ್ಷಿಸಲಾರನೇಕೆ? ಶಿಷ್ಯ ವ್ಯಂದದ ಪ್ರಾಪಂಚಿಕಾರಕೆಗಾಗಿ ಹಂಬಲಿಸುವ ಸ್ವಾಮಿಗಳು ತಮ್ಮ ಜೀವನವನ್ನು ಶುಚಿಯಾಗಿಟ್ಟುಕೊಳ್ಳಲಾರರೇಕೆ? ಸಾವಿರಾರು ಬಾರಿ ದೇವರನ್ನು ಕರೆಯುವ ಭಜನೆಗಳು ಮಾನುಷ ಮೊರೆಯನ್ನು ಕೇಳಲಾರದೇಕೆ?

ಮೌಢ್ಯ, ಮೌಢ್ಯ, ಮೌಢ್ಯ, ಮತವೆಂದರೆ ದೀರ್ಘವಾದ ಮೌಢ್ಯ, ಜನತೆಯ ಅಜ್ಞಾನವೇ ಅದರ ಆಧಾರ ಜನತೆಯ ಸ್ವಾರ್ಥವೇ ಅದರ ಶಕ್ತಿ ಇಲ್ಲಿವಾದರೆ ದೇವಸ್ಥಾನಗಳು ಸುಖ ಸೌಖ್ಯ ವಿಕ್ರಯದ ಅಂಗಡಿಗಳಾಗದೇಕೇಕೆ? ಮರಗಳು ಪುಣ್ಯವಿತರಣೆಯ ದಲ್ಲಾಳಿಗಳಾಗಬೇಕೇಕೆ? ಭಜನೆಗಳು ಪರಸ್ಪರ ಕಲಹ ಸಂಘಾಟಗಳ ಕಾರಣವಾಗಬೇಕೇಕೆ?

ಮತ ಮತವೆಂದರೇನು? ಸಾವಿರಾರು ರೂಪದಿಂದ ದೇವರನ್ನು ಭಜಿಸುತ್ತೇವೆ ಸಾವಿರಾರು ರೂಪದಿಂದ ದೇವರಿಗೆ ಕಾಣಿಕೆಯೊಪ್ಪಿಸುತ್ತೇವೆ ಮತವೆಂದರೆ ಸಹಸ್ರದ್ದು, ಹಾಗೆ ಶ್ರೀ ಶಂಕರಾಚಾರ್ಯರು ಹೇಳಿದ್ದಾರೆ, ಹಾಗೆ ಶ್ರೀ ಮನ್ಮಧ್ವಾಚಾರ್ಯರು ಹೇಳಿದ್ದಾರೆ, ಹಾಗೆ ಶ್ರೀ ರಾಮಾನುಜಾಚಾರ್ಯರು ಹೇಳಿದ್ದಾರೆ, ಹಾಗೆ ಎಲ್ಲಾ ಮತಸ್ಥಾಪಕರೂ ಹೇಳಿದ್ದಾರೆ ಆದರೆ ಅದು ಅವರ ಅಭಿಪ್ರಾಯ ಮಾತ್ರ ಮತಸ್ಥಾಪಕರು ಗತಿಸಿದ ಮರುದಿನ ಅವರ ಮತವು ಬದಲಿಸಿದೆ, ಇಲ್ಲ—ರೂಪವಲ್ಲದೆ ಅತ್ಯವಿಲ್ಲ, ಅದರ ಬದಲಿಗೆ ಕಾಣಬರುವುದೊಂದೇ ಒಂದು — ದುಡ್ಡು— ಮತದ ರೂಪ ಮತ್ತು ಮೌಢ್ಯದ ದುಡ್ಡು ಮತಸ್ಥಾಪಕರು ಹಲವು ಮತಗಳನ್ನು ರಚಿಸಿದರು—ಏಕೆ?—ಮತಕ್ಕಾಗಿ—ಅದರ ದುಡ್ಡಿನ ಆಧಾರ ತೆಗೆಯಿರಿ — ಮತವೆಲ್ಲಿದೆ? — ಇಲ್ಲ ಮತವೂ ಇಲ್ಲ, ಸನ್ಯಾಸಿಗಳೂ ಇಲ್ಲ

ಪ್ರಪಂಚದಲ್ಲಿ ನೂರಕ್ಕೆ ತೊಂಭತ್ತೊಂಭತ್ತು ಮತ್ತಿನ್ನೂ ಹೆಚ್ಚು ಮಂದಿ ಸಾಂಸಾರಿಗಳು ಮತವು ವಿರಕ್ತರಿಗಾಗಿಯೂ ಅದರೆ ಅದಕ್ಕಿಂತ ಸೌಸ್ಥಿಕ್ಯವೇ ಮೇಲು ಸಾಂಸಾರಿಗಳ ಮತವೇ ಲೋಕದ ಮತವು ಅದೇ ನಿಜವಾದುದು ಆದರೇನು?

ಮನುಷ್ಯನ ಧೈರ್ಯಕ್ಕೆ ಸೀಮೆಯಿದೆ. ಬೆಂಬಲವಿಲ್ಲದೆ ಮನುಷ್ಯನ ಶಕ್ತಿಯು ಹೆಚ್ಚು: ಆದುದರಿಂದಲೇ ಸಾರ್ವಜನಿಕ ಚಳವಳಿಗಳಲ್ಲಿ ಒಳ್ಳೆ ಧೈರ್ಯವಿಲ್ಲದ ಜನರು, ಯುದ್ಧದರಿಂದಲೇ ಸೈನ್ಯಕ್ಕೆ ಅಧಿಕಾರಿಯೊಬ್ಬ ಬೇಕು. "ಹೋಗು" ಎನ್ನಲಿಕ್ಕೊಬ್ಬ ಬೇಕು, "ನಾನಿದ್ದೇನೆ" ಸ್ಥಲಿಕ್ಕೂ ಒಬ್ಬ ಬೇಕು, ಅದು ಮನುಷ್ಯನ ಮಾನಸಿಕತೆ. ಇಹ ಯಾತ್ರೆಯು ಮುಗಿಯುತ್ತ ಬಂದಿತು, ವರದ ತಮಸ್ಸು ಕಣ್ಣನೆದುರಿಗೆ ಕಾಣಲಾಯಿತು, ನಾನೆಲ್ಲಿ ಹೋಗುತ್ತೇನೆ, ಅಲ್ಲಿ ಯಾರು? ನನಗೆ ಪರದಲ್ಲಿ ಯಾವ ಸುಖದುಃಖಗಳಿಗೆ? ಯಾರಿಗೆ ಗೊತ್ತು? ಇಹದ ಮಾನ (measure)ನೇ ಪರದ ಅಸ್ತಿತ್ವವನ್ನು ಅಳೆಯುವುದು ಅದುದರಿಂದಲೇ ಮೃತ್ಯುವು ಸನ್ನಿಹಿತವಾದಾಗ ಪರದ ಹೆದರಿಕೆಯುಂಟಾಗುವುದು ಆಗ ಬೇಕೊಬ್ಬ, ನಾವು ಮನಸ್ಸಿನೊಳಿಸಿಕೊಂಡೆವೆಂದು ನೆನಸಿರುವನ, ಅತ್ಯಂತ ಕರುಣಾರ್ದ್ರವೆಂದು ನೆನಸಿರುವವ್ನ ಆ ಇಹಪರಗಳ ಸಂಬಂಧವನ್ನುಂಟುಮಾಡಿ ಪರದ ತಮಸ್ಸಿನಲ್ಲಿ ದುಃಖಕಷ್ಟಗಳ ಬಾಧೆ ತಟ್ಟದಂತೆ ಕಾಯಲಿಕ್ಕೇನೆ ನಾವು ಕಲ್ಪಿಸಿರುವೆವು ಒಬ್ಬ ದೇವರನ್ನು ಒಂದು ದೇಶದಿಂದ ಇನ್ನೊಂದು ಕ್ರೂರದೇಶಕ್ಕೆ ಹೋಗಲಿಕ್ಕಿರುವಾಗ, ಆ ಕ್ರೂರ ದೇಶದ ದೊರೆಗೆ ಮೊದಲೇ ನನ್ನ ರಾಜಭಕ್ತಿ ವಿನೀತತೆಯನ್ನು ತೋರಿಸಿ ಅವನನ್ನು ಒಲಿಸಿಕೊಂಡಿರೆಂಬ ವಿಶ್ವಾಸ ನಮನಸ್ಸಿನಲ್ಲಾದರೆ, ಆ ಕ್ರೂರ ದೇಶಕ್ಕೆ ಹೋಗಲು ನನಗೆ ಸ್ವಲ್ಪ ಧೈರ್ಯ ಹೆಚ್ಚಾಗುವಂತೆ ಸಂಸಾರಿಯ ಮತದ ಕಲ್ಪನೆಯು ಇದಕ್ಕಿಂತ ಹೆಚ್ಚಾಗಿಲ್ಲ ಇದೇನೇ ಮತ?

ಮಕ್ಕಳಿಗೆ ತಾಯಿಯೊಂದು ಬೇಕು ಏಕೆ? ತಾನು ಬಿದ್ದರೆ, ತನ್ನನೋವಿನಿಂದಾಗಿ ಅವಳು ದುಃಖಿಸುತ್ತಾಳೆಬುದಕ್ಕಾಗಿ ತನಗೆ ಯಾರಾದರೂ ಹೊಡೆಯುವುದಕ್ಕೆ ಬಂದರೆ ಅವಳ ಕುಡಿಯಲ್ಲಿ ಆಶ್ರಯ ತೆಗೆದುಕೊಳ್ಳಲಿಕ್ಕಾಗಿ, ತನಗೇನಾದರು ಸಂದೇಹ ಬಂದರೆ ಅವಳ ಕೂರಳಲ್ಲಿ ಪ್ರಶ್ನಿಸಲಿಕ್ಕಾಗಿ, ಮಕ್ಕಳಿಗೆ ತಾಯೊಂದು ಬೇಕು ಮಗುವು ದೊಡ್ಡದಾದರೆ ಅಂತಹ ಆಶ್ರಯ ತೆಲ್ಲಿಂದ ಬರಬೇಕು? ಪ್ರತಿ ಒಬ್ಬರಿಗೂ ತನ್ನ ಶಮವೇ ಹೆಚ್ಚು ಮನುಷ್ಯನು ನಿರಾಧಾರಿಯು, ಸಂಸಾರಿದ ವ್ಯವಹಾರವು ಪ್ರಪಂಚದ ಕಷ್ಟಗಳು ನೋವುಗಳು, ಹೊಡೆತಗಳು, ಅಜ್ಞಾನ್ಯಗಳು, ಸಂದೇಹಗಳು ರಾತ್ರಿರಾತ್ರಿಯಾಗಿ ಮುಚ್ಚುತ್ತವೆ ಆ ಹೊಸ್ಸಿಗೆ ಮನುಷ್ಯನು ತನ್ನ ಶಕ್ತಿಯೆ, ಸಾಲದೆಂದು ನೆನಸುವನು ಆಗ ಬೇಕೊಂದು ಸಹಾಯ, ತನ್ನ ಶಕ್ತಿಯನ್ನು ಉದ್ದೀಪಿಸಲಿಕ್ಕೆ, ತನ್ನ ಶಕ್ತಿಯನ್ನು ಉತ್ತೇಜಿಸಲಿಕ್ಕೆ ಆ ಸಹಾಯದ ಆತಿಯೇ ದೇವರಾಗಿ ಉದ್ಭವಿಸಿತೇ? ದೇವರೆಂದರೆ ಮಾನವದೌರ್ಬಲ್ಯದ ರಚನೆಯೇ?

ನಾನು ಆಸ್ತಿಕನೊ? ನಾಸ್ತಿಕನೊ? ಈ ದಿನ ನನುಸ್ವನನ್ನೂ ಕಳಕೊಂಡು ನಾಳೆ ಭಿಕ್ಷುಕನಾಗುವ ಸಂದಿಗ್ಧ ಸ್ಥಿತಿಯಲ್ಲಿರುವ ಮನುಷ್ಯನು ತನ್ನ ದೇವರ ಮೂರ್ತಿಯನ್ನು ನೆನಸ್ಸಿನಲ್ಲಿಯೇ ಧ್ಯಾನಮಾಡುತ್ತ ಇಂದಿಗೆ ಉಳಿದರೆ ನಾಳೆ ಭಂಗಾರದ ವಲ್ಲಕ್ಕಿ ಕಟ್ಟಿಕೊಡುವೆನೆನ್ನುವನು, ಹರಿಯದ ಭಕ್ತನೊಬ್ಬನು ಒಂದೇ ವಿಶ್ವಾಸದಿಂದ ದೇವರ ಮುಂದೆ ನಿಂತು ಏಕಾಗ್ರಚಿತ್ತದಿಂದ ತನ್ನ ಪರಿವಾರದ ಸುಖ ಸೌಭಾಗ್ಯಕ್ಕಾಗಿ ಸ್ವಾರ್ಥಿಸುವನು, ಶಾಂತವೂ ಪವಿತ್ರವೂ ಆದ ಮೃತ್ಯು ಮಂದಿರದಲ್ಲಿ, ಚಂಚಲ ಜ್ಯೋತಿಯ ಪ್ರೇಕ್ಷಾಲೋಕದಲ್ಲಿ ಯುವತಿಯೊಬ್ಬಳು ಇಹಸ್ಮೃತಿಯನ್ನು ಕಳೆದ ತನ್ನ ನಂಬಿ ಬಂದ ದೇವರ ಕಡೆಗೆ ತನ್ನ ಇನಿಯನ ಬಗ್ಗೆ ಪ್ರಾರ್ಥನೆಯನ್ನು ಕಳುಹುವಳು ಆಗುವುದು ಆಗುತ್ತದೆ.

ಸಂಧ್ಯಾಕಾಲದ ಹೊತ್ತಿಗೆ ಅಭಿಮಾನಪೂರಿತರಾದ ಯುವಕ ಯುವತಿಯು ತನ್ನ ತೊದಲ್ನುಡಿ ಆಡುವ ಮಗುವಿನ ಸ್ಥಿತಿ ಪ್ರಶಾಂತ ದೇಗುಲದ ಸಮ್ಮುಖದಲ್ಲಿ ನಿಂತು "ನಮಸ್ಕರಿಸು, ಮಗು" ಎನ್ನುವರು; ಮಗುವು ಆ ತನ್ನ ಪುಟ್ಟ ಕೈಗಳನ್ನೆತ್ತಿ ಇದೀ ವಿಶ್ವನನ್ನೇ ಅಣಕಿಸುವಂತೆ ನಮಸ್ಕರಿಸಿ ನಗುವುದು. ಯುವಕಯುವತಿಯು ಆತ್ಮಾನಂದಪಟ್ಟು ಅರ್ಚಕನ ಆತೀರ್ವಾದಕ್ಕೆ ತಲೆಬಗ್ಗಿಸಿ ಹಿಂದಿರುಗುವರು; ಲಾಭಹೊಂದಿದ ಶ್ರೀಮಂತನು ವಾದ್ಯಗಳ್ಳಲಗಳಿಂದ ಪೂಜಾದಿಗಳನ್ನು ಮಾಡಲು ಬರುವನು—ಅರ್ಚಕನು ಫಸ್ಟ್ ಕ್ಲಾಸ್ಸೊ, ಸೆಕೆಂಡ್ ಕ್ಲಾಸೊ ಎನ್ನುವನು. ಮುದ್ದಿನ ಮೊಮ್ಮಯಿತಿಗೆ ಶ್ರೀಮಂತನು ಫಸ್ಟ್ ಕ್ಲಾಸೆನ್ನುವನು. ಅರ್ಚಕರಿಗೆ ಹೊಟ್ಟೆ

(ಇನ್ನೇ ಮುಂದೆ ಮುಂಬರಿಯುವುದು)

ಎಂ. ಎಸ್. ಶಿದ್ದಪ್ಪ & ಬ್ರದರ್ಸ್.

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.

ನಮ್ಮ ಕಂಪೆನಿಯಲ್ಲಿ ಉತ್ತಮವಾದ ಹಾರ್ಮೋನಿಯಂಗಳೂ, ಫ್ಲೂಟುಗಳೂ, ವೀಣೆಗಳೂ, ತಬಲಾಗಳೂ, ಕೊಳಲುಗಳೂ, ವಾಚುಗಳೂ, ಕ್ಲಾಕುಗಳೂ, ಪೌಂಟನ್‌ಪೆನ್‌ಗಳೂ, ಫೌಂಟಾರ್‌ಗಳೂ, ಪೇರಳೆಟ್ಟಿಂಗ್ ಮಿಷನ್‌ಗಳೂ, ಪೇಪಿಂಗ್ ಮತ್ತು ಸೇವ್ಸ್ ರೇಜರುಗಳೂ ರಿಯಾಯತಿ ದರದಿಂದ ಬಿಕ್ರಿಯಾಗುತ್ತವೆ.

ರೈಲ್ವೆ ಡಿಪಾರ್ಟ್‌ಮೆಂಟುಗಳನ್ನು ಅಂದವಾಗಿ ತಯಾರಿಸಿ ಗವರ್ನ್‌ಮೆಂಟ್ ಆಫೀಸುಗಳಿಗೂ, ಶೈಕ್ಷೀ ಡಿಪಾರ್ಟ್‌ಮೆಂಟಿಗೂ ಸಪ್ಲೈಮಾಡಿ ಒಳ್ಳೇ ಹೆಸರು ಪಡೆದಿದ್ದೇವೆ.

ಅಪೇಕ್ಷಿಸುವವರಿಗೆ ನಮ್ಮ ಕಂಪೆನಿಯ ಕ್ಯಾಟಲಾಗನ್ನು ಸಂತೋಷದಿಂದ ರವಾನಿಸುತ್ತೇವೆ.

ನಮ್ಮ ಟೂರ್ ಡಿಪೋನಲ್ಲಿ ಎಲ್ಲಾ ಜಾತಿಯ ನಾಟಾಗಳೂ, ಸ್ಯಾತ್ಕೆ ವಿಟ್ಟಾಗಿಯೂ ಚಿಲ್ಲರೆಯಾಗಿಯೂ ಸುಲಭ ದರದಿಂದ ಸಪ್ಲೈಮಾಡುತ್ತೇವೆ. ಗಿರಾಕಿಗಳು ಅಪೇಕ್ಷಿಸುವ ಸ್ಥಳಕ್ಕೆ ಬೇಕಾದರೂ ಕಾಯಿನ್ ಸಪ್ಲೈಮಾಡುತ್ತೇವೆ.

ನಮ್ಮ ಪಾತ್ರಯಾಗಿ ಗುಣವಿಶಿಷ್ಟ ಬೇಕಾದ ವಿಷಯ ಒಂದು ವ್ಯಾಳ್ಯವನ್ನು ತಿಳಿಸಿರಿ. [ಇಂದಾವರ್ತಿ ಆರ್ಡರು ಕೊಟ್ಟು ಪರೀಕ್ಷಿಸಿರಿ.

ಆರ್ಡರ್ ಕೊಡುವ ವಿಳಾಸ:— ಎಂ. ಎಸ್. ಶಿದ್ದಪ್ಪ ಅಂಡ್ ಬ್ರದರ್ಸ್, ಹಾರ್ಮೋನಿಯಮ್ ಮತ್ತು ಜಾಲಿನೆ ವ್ಯಾಪಾರಿಗಳು, ಮೈಸೂರು.

ಆರ್. ಎಸ್. ನಗರ್ಕಾರ್,

ಸ್ವದೇಶಿ ವಸ್ತ್ರ ವ್ಯಾಪಾರಿ ಮತ್ತು ಜನೆರ್ಲರ್, ಕೊಪ್ಪೋರೇಶನ್ ಬ್ಯಾಂಕ್ ಬಿಲ್ಡಿಂಗ್ಸ್,

ಮಂಗಳೂರು.

ಸರ್ವ ವಿಧದ ಉತ್ತಮ ಅಂಜಿನ ಹಾಗೂ ಕೇರಿಗಳು, ಜಂಪ್ಸ್, ಶರ್ಟಿಂಗ್ಸ್, ಧೋತಿ, ಕೋಟಿಂಗ್ ಇತ್ಯಾದಿಗಳು ಮಾರಲ್ಪಡುವ ಮಂದಿರ. ಮುಂಬಾಯಿ ಮತ್ತು ಅಹ್ಮದಾಬಾದಿನ ಮಿಲ್ಲುಗಳಲ್ಲಿ ತಯಾರಿಸಲ್ಪಟ್ಟ ಸರ್ವವ್ಯಾಮಾದಲ್ಲಿಟ್ಟ ಉತ್ತಮವಾದ ಬಟ್ಟೆಗಳೂ ದೊರಕುತ್ತವೆ.

ಶೃಂಗಾರದ ಒಡವೆಗಳು:—ಶುದ್ಧ ಶೃಂಗಾರದಿಂದ ಮಾಡಲ್ಪಟ್ಟ ಎಲ್ಲಾ ನಮೂನೆಗಳ ಕಂಠಿಸರಗಳೂ, ಮುತ್ತಿನ ಸರಗಳೂ, ಕಮಲಗಳೂ, ಮೂಗುತಿಗಳೂ, ಹೇರ್‌ಪಿನ್ನುಗಳೂ, ನಾಜೂಕು ನಮೂನೆಯ ಬ್ರಾಚುಗಳೂ, ವ್ರತ ನಮೂನೆಯ ಕೈಬಳೆಗಳೂ, ರೋಸ್‌ಜಾಸ್ಮಿನ್ ಪ್ಲವರ್ ಇನ್ನಿತರ ಶೃಂಗಾರದ ವಟ್ಟಿಗಳೂ, ಬೆಳ್ಳಿಯ ಬಟ್ಟಲು, ತಮಜೆ, ಕಪ್ಪ ಸೂಸರ್, ಟೀಟ್ಟರು ದ್ರೋಣಗಳು ವಜ್ರೀರು ಚಿಮಿಕಿಸುವ ಹೂಜಿಗಳೂ, ಬಹುಮಾನಾರ್ಥವಾಗಿ ಕೊಡುವ ಕಪ್‌ಗಳೂ, ಮೆಡಲುಗಳೂ, ಬೇಜುಗಳೂ ಮೊದಲಾದ ತರತರದ ಸಾಮಾನುಗಳು ಸಂತೃಪ್ತಿಕರವಾಗಿ ನನ್ನಲ್ಲಿ ದೊರೆಯುವುವು.

ಶೃಂಗಾರದ ಮಲ್ಲಿಗೆ ನೋಸ್ಸು ಎಂಬುದು ಸ್ತ್ರೀಯರ ತಲೆಶೃಂಗಾರಕ್ಕೆ ಬೇಕಾದ ಆಭರಣ,

ನಿಮಗೆ ಸಂತೃಪ್ತಿಕರವಾದ ಉತ್ತಮ ವಸ್ತುಗಳು ಬೇಕಾದ್ದಲ್ಲಿ, ನನ್ನ ಶೋಪಿಗೆ ಬಂದು ಲಾಭವನ್ನು ಹೊಂದಲಿಕ್ಕೆ ಮರೆಯಬೇಡಿರಿ.

ಜೆನಿತ್ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೆಡ್ ಆಫೀಸು – ಮುಂಬಾಯಿ.

ಚೀಯರ್‌ಮೆನ್:—ದಿ ಹೊನರೆಬಲ್ ಎಚ್. ಎಮ್. ಮೇಥಾ.

ನಮ್ಮ ಸ್ವರಾಜ್ಯ ಪೋಲೀಸಿಯನ್ನು ಪಡಕೊಳ್ಳುವುದರಿಂದ ನಿರುದ್ಯೋಗ, ರೋಗ ಅಥವಾ ಇನ್ನಿತರ ದ್ರವ್ಯಾಘಾತಗಳ ಉಪದ್ರವಗಳನ್ನು ತಪ್ಪಿಸಿಕೊಳ್ಳಲಾಗುವುದು. ನೀವು ನಿಮ್ಮ ಪ್ರೀಮಿಯಮ್ಮನ್ನು ಬರೇ ಮೂರು ವರ್ಷಗಳ ತನಕ ಕೊಟ್ಟು, ಮತ್ತೆ ಮುಂದಿನ ಕಂತುಗಳನ್ನು ಕೊಡಲು ನಿಮಗೆ ಅಸಾಧ್ಯವಾಗಿ ಬಿಟ್ಟರೆ, ನಿಮ್ಮ ಪೋಲೀಸಿಯನ್ನು ನಾಲ್ಕು ವರ್ಷಗಳ ತನಕ ಮುಂದಕ್ಕಿಟ್ಟು ಚಲಾವಣೆ ಮಾಡಲಾಗುತ್ತದೆ. ಮೊದಲನೆಯ ಏಳು ವರ್ಷಗಳೊಳಗೆ ಮೂರು ಪ್ರೀಮಿಯಮುಗಳನ್ನು ಕೊಟ್ಟು ಪೋಲೀಸಿದಾರನು ಮೃತನಾದರು ಕೂಡಾ ಅವನು ಪೋಲೀಸಿ ತೆಗೆದ ಸಂಪೂರ್ಣ ಮೊಬಲಗನ್ನು ಅವನಿಗೆ ಕೊಡುತ್ತೇವೆ. ಹಾಗೆಯೇ ನೀವು ಎಂಟು ವರ್ಷಗಳ ತನಕ ಕ್ರಮವ್ರಕಾರ ಪ್ರೀಮಿಯಮನ್ನು ಕೊಡುತ್ತಾ ಬಂದರೆ ನಿಮಗೆ ಹನ್ನೆರಡು ವರ್ಷಗಳ ಇನ್ಶೂರೆನ್ಸನ್ನು ಮಾಫಿ ಕೊಡುತ್ತೇವೆ. ಒಂದು ವೇಳೆ ಮಾಫಿ ಇನ್ಶೂರೆನ್ಸು ಸಮಯದಲ್ಲಿ ಪೋಲೀಸಿದಾರನು ಮೃತ ನಾದರೂ ಎತ್ತುರ ಮಾಡಿದ ಸಂಪೂರ್ಣ ಹಣವನ್ನು ಕೊಡಲಾಗುತ್ತದೆ. ನಮ್ಮ ಪೋಲೀಸಿಯು ಒಂದು ಸಾವಿರ ರೂಪಾಯಿಗಳ ಮೇಲೆ ವರ್ಷಕ್ಕೆ ಇಪ್ಪತ್ತು ರೂಪಾಯಿಯಂತೆ ಮುನಾಫೆಯನ್ನುಂಟು ಮಾಡುತ್ತದೆ.

ಎಲ್ಲಾ ವಿವರಗಳಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಬಹುದು:—

ವಿ. ಕೆ. ಕರ್ವಾರ್,
ಮೆನೇಜರ್,
121 ಆರ್ಮೀನಿಯನ್ ಸ್ಟ್ರೀಟ್,
ಮದ್ರಾಸ್.

ಮೆಸ್ಸರ್ಸ್. ಕರ್ವಾರ್, ಎಂಡ್ ಕೊ.
ಬಂದರ್,
ಮಂಗಳೂರು.

ಪ್ರತಿಜ್ಞೆಯ ವಿಸರ್ಜನೆ.

ಲೇಖಕರು:—ಜ ಗ ನ್ನಾ ಥ.

ಶಿವ ಮಂದಿರದ ಸನ್ನುಖದಲ್ಲಿ

(ಮಾಧವನು ಏಕಾಂಗಿ)

ಧವ (ಕರಿಣವಾದ ಕಂಠದಿಂದ)—

ನಾಥ! ಪ್ರಶಾಂತವಾದ ಈ ಹೃದಯದಲ್ಲಿ ಪ್ರೇಮದ ಪ್ರಚಂಡತರಂಗಗಳನ್ನೆಬ್ಬಿಸಿಯೂ ಅವನ್ನು ಪುನಃ ಶೂನ್ಯತೆಗೆ ವಿಸ್ತರಿಸಿದವಳು ನೀನಲ್ಲವೇ? ಹೃದಯದ ಸುಂದರವಾದ ವನದಲ್ಲಿ ಆಸೆಯ ಕುಸುಮಗಳನ್ನು ಪ್ರಸ್ಫುಟಿಸಿ ನಿರಾಶೆಯ ಬಿಸಿಲಿನಿಂದ ಒಣಗಿಸಿದವಳೂ ನೀನಲ್ಲವೆ? ವಿಚಾರದ ವಿಸ್ತಾರ ಸಾಮ್ರಾಜ್ಯದಲ್ಲಿ ಮೋಹದ ಆನಂದವನ್ನು ಬೀಸಿ, ಉನ್ಮಾದನೆಯ ಉತ್ಪಾತಗಳನ್ನು ಕಲ್ಪಿಸಿದವಳು ನೀನಲ್ಲವೇ? ನಾರಿ! ಹೃದಯಗಳನ್ನೇ ವಿನಾಶಿಸಿ ಲೋಲಿಸುವ ನಿನಗೆ ಧಿಕ್ಕಾರವಿರಲಿ!

ನ ಮೂರ್ತಿಯ ಕಡೆಗೆ ತ್ಯಾಗದ ಕಂಠದಿಂದ)

ಸ್ಮಶಾನಾಧಿಪ! ಸರ್ವವಿನಾಶಕರ್ತೃ! ಕಂದರ್ಪಹರ! ಭೂರಣದ ಭೂವಿಯಲ್ಲಿನ ನಿನ್ನ ಆ ಸುಖಪಾಸ್ಯವು ಎಷ್ಟು ಸುಂದರವಿದೆ! ಮನೆಯ ದ್ವಾರದಲ್ಲಿ ನಿಂತೆ ಪಾರ್ವತಿಯು ನಿನ್ನನ್ನು ನಿರೀಕ್ಷಿಸುತ್ತಿರುವಳು, ಹೊರಗಿನ ಜಗುಲಿಯಲ್ಲಿ ಗಣಪತಿಯು ಮೂಷಕನೊಡನೆ ಆಡುತ್ತ ನೀನು ತರುವ ಭಕ್ಷ್ಯಗಳಿಗಾಗಿ ಕಾದಿರುವನು, ಹಿಮಾಲಯದ ಧವಲ ಶಿಖರವು ನಿನ್ನ ಬರವಿಗಾಗಿ ಉತ್ಕಂಠಿತವಾಗಿರುವುದು! ಆದರೂ ತ್ಯಾಗಾಧ್ಯಕ್ಷ! ಸರ್ವಸಂಗ ಪರಿತ್ಯಕ್ತ! ನಿನಗೆ ಈ ಮರಣದ ತೊಪ್ಪಲೇ ಜೀವನದ ಸಾರವಾಗಿ ತೋರಿ ನಿನ್ನಿಂದ ಅದು ಆದೃತವಾಗಿರುವುದು ಮಹಾನ್ ರುದ್ರ ಯಾವ ಜ್ವಲಂತರಾಗಿ ರಾತ್ರಿಯು ಕ್ರೀಡಾಶೀಲನನ್ನು ಭಸ್ಮೀಕೃತವಾಗಿ ಮಾಡಿತೊ ಅದೆನ್ನ ಇಂದಿನ ಪ್ರೇರಕೆಯಾಗಿರಲಿ ಯಾವ ಶೂನ್ಯ ಹೃದಯವು ನಿನ್ನನ್ನು ಆ ಸುಂದರ ಸಮ್ಮೋಹಕ ಸೃಷ್ಟಿಗೃಹದಿಂದ ಹೊರಗೆಳೆಯಿತೊ ಅದೆನ್ನ ಇಂದಿನ ಆವಾಹನವಾಗಿರಲಿ! ಯಾವ ಅಚಲ ಮೌನೋ ನಿರ್ಧಾರವು ನಿನ್ನನ್ನು ಈ ಮರುಸ್ಥಾನದಲ್ಲಿ ಪ್ರತಿಷ್ಠಿಸಿತೊ ಅದೆನ್ನ ಪ್ರತಿಜ್ಞೆಯ ಆಧಾರವಾಗಿರಲಿ! ಸ್ಮಶಾನವಾಸಿ ನಾರೀ ಸಮ್ಮೋಹಕ್ಕೆ ನಾನಿನ್ನು ಒಳಗಾಗೆನು ನಾರೀ ಜಾಲಕ್ಕೆ ನಾನಿನ್ನು ಬಲಿ ಬೀಳೆನು, ನಾರೀ ಸಂಬಂಧಕ್ಕೆ ನಾನಿನ್ನು ಒಪ್ಪಿಗೆ ಕೊಡೆನು

ಜಯ ಶಂಭೊ ಶಿವಶಂಕರ ರುದ್ರ ಸ್ಮಶಾನಾಧಿಪ!

(ಪ್ರವೇಶ—ಪೂಜಾ ಸಾಹಿತ್ಯಗಳೊಡನೆ ಶಂಕರ)

ಕರಿ – ಪೂಜೆಯಾಯಿತೆ, ಮಾಧವ!

ಧವ—ಯಾರು? ಶಂಕರಿಯೇ! ನಾರೀ! ಅತ್ತ ಹೋಗು—ಪೂಜೆ! ಯಾವ ಪೂಜೆ? ಅಹುದು, ನನ್ನ ಪೂಜೆಯು ಪೂರ್ಣವಾಯಿತು ಇಹಕ್ಕಾಗಿ ಪೂರ್ಣವಾಯಿತು ಯಾವುದು ಹೃದಯದಲ್ಲಿದ್ದಿತೋ ಅದನ್ನು ಈ ಮಹಾನ್ ಮೂರ್ತಿಯ ನದತಲದಲ್ಲಿ ಸುರಿದೆ ಯಾವುದು ಜೀವನದಲ್ಲಿ ರಸವೆಂದು ಪರಿಗಣಿಸಲ್ಪಟ್ಟಿದೊ ಅದನ್ನು ಈ ತ್ಯಾಗಿಯ ಉತ್ಕೃಷ್ಟತೆಯಲ್ಲಿ ಒಣಗಿಸಿ ಬಿಟ್ಟೆ ನನ್ನ ಪೂಜೆಯು ಮುಗಿಯಿತು ಛಿ! ದೂರ ಹೋಗು ನೀನು ನಾರಿ! ನನ್ನ ಪೂಜೆಯು ಪೂರ್ಣವಾಯಿತು, ಅದನ್ನು ಕೆಡಿಸಬೇಡ ಹೋಗು! ಹೋಗುವುದಿಲ್ಲವೇ? ನಾನೇ ಹೋಗುತ್ತೇನೆ—(ಮಾಧವನು ಹೋಗುವನು)

ಕರಿ—ಹುಚ್ಚೇನು ಇವನಿಗೆ? ನಾನು ನಾರಿಯಾದರೆ ಅವನ ಪೂಜೆ ಕೆಡುವುದೇಕೆ?

(ಪ್ರವೇಶ—ವಿಜಯ)

ಯ —ಏನೇ, ಶಂಕರಿ?

ಕರಿ —ಏನಪ್ಪಾ, ಹುಚ್ಚಾಯಿತೇ, ಆ ಮಾಧವನಿಗೆ? ನಾನು ನಾರಿಯಂತೆ, ಅವನ ಪೂಜೆ ಕೆಡುವುದಂತೆ, ಛೋನದಿಂದ ಹೊರಟು ಹೋದ? ಏನು, ಅವನಿಗೆ?

ಯ —ಏನೋ, ಕೆಲವು ದಿನಗಳಿಂದ ಅವನು ಹಾಗೆಯೇ ಮೆಧಲು ಯಾವಾಗಲೂ ಅವನಿಗೆ ಹೂವೆಂದರೆ ಬಹಳ ಪ್ರೀತಿ ಈಗವನ್ನು ನೋಡಿದರೆ ಅವನಿಗಾಗುವುದಿಲ್ಲ. ಮೊದಲವನು ನಾಟಕಗಳಿಗೆ ಹೋಗುವುದೆಂದರೆ ಬ್ರೇಗೆ ಹೊರಡುತ್ತಿದ್ದ—ಈಗ ವತ್ತಾಯ ಮಾಡಿದರೂ ಬರುವುದಿಲ್ಲ. ಹುಡುಗನಿಗೆ ಮದುವೆಹುಚ್ಚಾದರೆ ಮಾಡಿ ಬಿಡೋಣವೆಂದೆ; ಕಡೆಗೆ ಅದೂ ಇಲ್ಲ. ಎಲ್ಲರಿಗೂ ಆಶ್ಚರ್ಯವಾಗಿದೆ. ಯಾರೋ ಹೇಳಿದರು—ಅವನು ಸನ್ಯಾಸಿಯಾಗುತ್ತಾನಂತ. ಏನೋ, ಲಕ್ಷಣಗಳು ಚೆನ್ನಾಗಿ ಕಾಣುವುದಿಲ್ಲ. ನನಗೆ ಕಡವಾಗುತ್ತದೆ, ಹೋಗುತ್ತೇನೆ.

ನಮೋ, ಕಂಭೊ ಪ್ರಾರ್ವತಿಪತೇ (ಪ್ರಸ್ಥಾನ)

ಶಂಕರಿ—ಈಗಿನ ಹುಡುಗರ ಆವಸ್ಥೆಯೆ ತಿಳಿಯುವುದಿಲ್ಲ.

(ಎಂದು ಪೂಜೆಯ ಸಾಹಿತ್ಯಗಳನ್ನಿಟ್ಟು ಹೋಗುವಳು)

— ೨ —

ರಾಜಮಾರ್ಗದಲ್ಲಿ.

ಇಬ್ಬರು ಮಾತನಾಡಿ ಹೋಗುತ್ತಾರೆ

ರಾಘವ:—ಈದಿನ ಅವನು ಚೆನ್ನಾಗಿ ಮಾತನಾಡಿದ, ಹೃದಯದ ಅಂತರ್ಯದಿಂದ ಮಾತನಾಡಿದ ಹಾಗೆ, ಅನಿರುದ್ಧ ತತ್ವಗಳ ಆಧಾರವಿದ್ದ ಹಾಗೆ ಚೆನ್ನಾಗಿ ಮಾತನಾಡಿದ

ಮಂಜುನಾಥ —ಎಲ್ಲರೂ ಫಟ್ಟಿಯಾಗಿ ಕೈ ತಟ್ಟಿದರು

ರಾಘವ —ಮಾತ್ರವಲ್ಲ, ಎಲ್ಲರಿಗೂ ಚೆನ್ನಾಗಿ ಮನವರಿಕೆಯಾಯಿತು ನಿಶ್ಚಯ, ಬ್ರಹ್ಮಚರ್ಯವು ಅತ್ಯಮೂಲ್ಯ

ಮಂಜುನಾಥ —ಅವನು ಹೇಳಿದ್ದು ಸರಿ

ರಾಘವ —ಮಾತ್ರವಲ್ಲ ಆದು ಅನುಕರಣೀಯ ಬ್ರಹ್ಮಚರ್ಯವು ಮಾನವನನ್ನು ಇತರ ಪ್ರಾಣಿಗಳಿಂದ ಪೃತ್ಯೇಕಿಸುವ ಏಕಮಾತ್ರ ಲಕ್ಷಣ ಮನುಷ್ಯನು ಪ್ರತಿ ಒಬ್ಬನೂ ಅದನ್ನು ಅನುಕರಿಸಲೇ ಬೇಕು

ಮಂಜುನಾಥ —ನನಗೂ ಹಾಗೆಯೇ ತೋರಿತು ನಾನು ಹಾಗೆಯೇ ಇರಬೇಕೆಂದು ಆಶೆಯಾಯಿತು

ರಾಘವ —ಕೂಡದೇಕೆ? ಮುಕ್ತಿಯ ಏಕಮಾತ್ರ ಸೋಪಾನ, ಐಹಿಕದ ಏಕಮಾತ್ರ ಸುಖಸಾಧನ,—

ಮಂಜುನಾಥ —ನನಗೆ ಮೊನ್ನೆ ನಿಶ್ಚಯವಾಗಿದೆ, ಅಷ್ಟೆ

ರಾಘವ —ವ್ಯರ್ಥ, ನಿನ್ನ ಜೀವವು ವ್ಯರ್ಥವಾಯಿತು, ನಿನ್ನ ಜೀವನವು ವ್ಯರ್ಥವಾಯಿತು

ಪ್ರವೇಶ ಮಾಧವ

ಮಾಧವ —ಮಂಜು ಏನಂತೆ?

ರಾಘವ —ನಿನ್ನ ಈಗಿನ ಭಾಷಣ, ಅದೇ ಅವನಿಗೆ ಹೇಳಿದೆ, ಅವನು ಇತರ ಪ್ರಾಣಿಗಳಿಂತೆ ಅಲ್ಲವಾಗಿರಬೇಕಾದರೆ ಬ್ರಹ್ಮಚರ್ಯವನ್ನು ಆಚರಿಸಬೇಕೆಂದು

ಮಾಧವ —ಚೆನ್ನಾಗಿ ಹೇಳಿದೆ

ರಾಘವ —ಆದರೆ ಅವನಿಗೆ ಮದುವೆ ನಿಶ್ಚಯವಾಗಿ ಮೂರು ದಿನಗಳಾದುವಂತೆ

ಮಾಧವ —ಪಾಪ!

ರಾಘವ —ಅವನ ಜೀವವು ವ್ಯರ್ಥವಾಯಿತೆಂದು ಹೇಳಿದೆ

ಮಾಧವ (ಶೂನ್ಯ ನೋಟದಿಂದ) — ವ್ಯರ್ಥವಾಯಿತು

ರಾಘವ —ಅದನ್ನು ಮುರಿದೇ ಬಿಡಬಹುದು, ಅವನು, ಈಗಲಾದರೂ

ಮಾಧವ —ಬಿಡಬಹುದು

ಮಂಜುನಾಥ —ನೀವೆಲ್ಲಾ ಏನು ಮಾಡುತ್ತಿರೆಂತ ನೋಡುತ್ತೇನೆ ನಾನು ನಿಮ್ಮಂತಹ ತಾತ್ಪಿಕರು ಎಷ್ಟೊ ಜನರು ಇದ್ದರು

ಮಾಧವ —ರುದ್ರಮೂರ್ತಿ ಶಿವನಿದ್ದಾನೆ, ನನಗೆ ಸಾಕ್ಷಿ

ರಾಘವ —ನಿನ್ನ ಭಾಷಣವೇ ಸಾಕು ಎಂತಹ ಪ್ರಚಂಡ ಭಾಷಣ! ಆವೇಶದ ಭಾಷಣವೆಂದರೆ ಏನೆಂದು ಆಗ ನನಗೆ ತಿಳಿಯಿತು

(ರಾಘವ, ಮಂಜುನಾಥರ ಪ್ರಸ್ಥಾನ)

ಮಾಧವ (ಒಬ್ಬಂಟಿಗ) —ರುದ್ರಮೂರ್ತಿ ಶಿವ, ಸಾಕ್ಷಿ ಆವೇಶದ ಭಾಷಣ ನನ್ನ ಹೃದಯವೇ, ಶಾಂತವಾಗು. ದಂಗೆಯೇಳ ಬೇಡ ಇಹದ ಸರ್ವಸ್ವವನ್ನು ಶಿವನ ಪದತಲದಲ್ಲಿಟ್ಟು ಬಂದಿದ್ದೇನೆ. ಅವನ ಹತ್ತಿರದ ಶೂನ್ಯತೆಯ ಕಪಾಲವನ್ನು ಕೈಯಲ್ಲಿ ಹಿಡಿದುಬಂದಿದ್ದೇನೆ. ಶೂನ್ಯವಾಗು

(ಎಡುರಿನಲ್ಲಿ ಒಂದು ಸ್ತ್ರೀಯು ಹೋಗುವಳು)

ಇಲ್ಲ, ನೋಡುವುದಿಲ್ಲ ಹೃದಯದ ಪ್ರೇಮ, ಹೃದಯದ ಮೋಹ, ಇವನ್ನು ಶಿವನ ಅಡಿದಾವರೆಯಲ್ಲಿಟ್ಟಿದ್ದೇನೆ. ನಾರಿಯು ಮುಡುವ ಹೂ ಕೂಡ ನನಗಿನ್ನೇನೂ ಆಗಿರಿಕಿಲ್ಲ. ಈ ವಿಚಿತ್ರ ಸಂಸಾರದಲ್ಲಿ ನಾನೊಬ್ಬನೇ ಹಾರಿ ಈಜುವೆನು. ನನಗೇಕೆ ಸಂಗಾತಿಗಳು?

(ಒಳಿದು ಬಾಲಿಕೆಯು ಎಮ್ಮಾಣಿಂದ ಹೊಡಿಹೋಗುವಳು)

ಹಾವ್ವ, ಬಾಲಿಕೆ, ದೊಡ್ಡವಳಾದ ಮೇಲೆ ಛಿ, ನಿನಗೇಕೆ ಆಡು, ಓಡೋಣ. ಬಾಲಿಕೆ, ಚಿಕ್ಕ ಮಗು, ತೆಲುವಾಗಿದ್ದಾಳೆ, ಮುದ್ದಿದಲೆಂದು ಕಾಣುತ್ತಿದೆ ಛಿ, ಇವನ್ನೂ ನಿವನಿಗೆ ಅರ್ಪಿಸಿದ್ದೇನೆಯೇ? ಬಾಲಿಕೆಯನ್ನು ನೋಡಿ ಆನಂದಿಸಬಾರದೇ? ಇಲ್ಲ. ಇನ್ನು ನೋಡೆನು ಹೃದಯವು ಇಂತಹ ಅಲ್ಪಕೃತ್ಯಗಳಿಂದಲೇ ವಿಕ್ಷಿಂಖಲವಾಗುವುದು. ಸಂಯಮವೆಂದರೇನೆಂದು ತೋರಿಸುವೆನು

(ಪ್ರವೇಶ ವಿಜಯ)

ವಿಜಯ:—ಏನೇ, ಮಾಧವ, ಎಲ್ಲಿಂದ?

ಮಾಧವ:—ಬ್ರಹ್ಮಚರ್ಯದ ವಿಷಯ ಒಂದು ಭಾಷಣ ವಿತ್ತು. .....

ವಿಜಯ:—ಹುಚ್ಚಿ, ಬಾ, ಮನೆಗೆ ಹೋಗೋಣ

— ೩ —

ಮಾಧವನ ಮನೆಯಲ್ಲಿ

(ಮಾಧವ ಮತ್ತು ಕೃಷ್ಣರಾಯರು)

ಮಾಧವ —ಇಲ್ಲ, ಆಗುವುದಿಲ್ಲವೆಂದೆನಲ್ಲವೇ? ಇನ್ನು ಹೋಗಿ

ಕೃಷ್ಣ —ಹಾಗೆ ಒಂದೇ ಮಾತಿನಲ್ಲಿ ತೀರಿಸಲಿಕ್ಕಾದೀತೇ?

ಮಾಧವ —ಮತ್ತೆಷ್ಟು? ನೂರು ಬೇಕೇ? ಹಾಗಾದರೆ ನಾಳೆ ಬನ್ನಿ ನಾಳೆಯೂ ಹೇಳುತ್ತೇನೆ

ಕೃಷ್ಣ —ಚೆನ್ನೆನಿಗಿ ಆಲೋಚನೆ ಮಾಡು, ಜೀವನದ ವಿಕೇಪ ವಿಷಯ. ಇದನ್ನು ಮುಹೂರ್ತದ ಉನ್ಮಾದನೆಯಿಂದ ತಿರಸ್ಕರಿಸಲಾಗುವುದಿಲ್ಲ

ಮಾಧವ —ನಾನು, ಮುಹೂರ್ತವಲ್ಲ, ವರ್ಷಗಳಿಂದ ಆಲೋಚಿಸಿ ನಿಶ್ಚಯಿಸಿದ್ದೇನೆ ನನ್ನ ಮನೋಧಾರ್ಢ್ಯವನ್ನು ಕೆಡಿಸಬೇಡಿ

ಕೃಷ್ಣ—ಮನುಷ್ಯನ ನಿಸರ್ಗವನ್ನು ತಿರಸ್ಕರಿಸಲಾಗುವುದಿಲ್ಲ, ಹೃದಯದ ಸ್ಪಂದನವನ್ನು ನಿಲ್ಲಿಸಲಾಗುವುದಿಲ್ಲ ನೀನು ಶುಕಯೋಗಿಯೆಂದು ತಿಳಿದೆಯೇ? ಹುಚ್ಚಾಗಬೇಡ ಏಕಾಂಗಿಯಾಗಿರುವುದು ಮನುಷ್ಯನಿಗೆ ಸಾಧ್ಯವಲ್ಲದುದು ಸಖಿ ಇಲ್ಲದ ಜೀವನವು ಅಪೂರ್ಣವಾದುದು ಅದು ತಂತಿಯಿಲ್ಲದ ತಂಬೂರಿನಂತೆ, ಅದರಲ್ಲಿ ಸ್ವರ ವಿರುವುದಿಲ್ಲ ಅದರಿಂದ ಹೊರಡುವುದು, ನಿತ್ಯವೂ ನಿರಾಶೆಯ ಸ್ವರ ಜೀವನವನ್ನು ಹಾಳು ಮಾಡಿಕೊಳ್ಳಬೇಡ ಸುಂದರವಾದ, ಕಲ್ಪನಾಮಯವಾದ ಈ ಯೌವನವನ್ನು ಹಾಳು ತತ್ವಗಳಿಂದ ಮೋಸಗೊಳಿಸಬೇಡ ನಿನ್ನ ಉನ್ನತೋದ್ದೇಶಗಳಿಗಾಗಿ ಬಂದ ಈ ಯೌವನವನ್ನು ತ್ಯಾಜ್ಯ ತ್ಯಾಗದಲ್ಲಿ ವ್ಯರ್ಥಮಾಡಬೇಡ ನಿನ್ನನು ನೀನು ತಿಳಿಯು

ಮಾಧವ—ನನ್ನ ನಿರ್ಧಾರವು ಶಿವನ ಕೈಲಾಸದಂತೆ ಅಚಲವಾದುದು ಆದು ನಿಮ್ಮಿಂದ ಅಲ್ಲಾಡಿಸಲಾಗದು ಇದು ತ್ಯಾಗವಲ್ಲ ಇದು ಮನುಷ್ಯತ್ವದ ರಕ್ಷಣೆ ಸುಮ್ಮನೆ ನನ್ನನ್ನು ಮೋಹದೊಳಗೆಳೆಯಲು ಯತ್ನಿಸಬೇಡಿ. ಸಂಸಾರದ ಆವರಣವನ್ನು ನಾನು ಹಾಕಿಕೊಂಡಿರುವೆನು ನಾರಿಯಿಂದ ಸಂಸಾರವು ಕ್ಷುದ್ರವಾಗುವುದು ಮಾತ್ರ ನಾನು ಅದನ್ನು ವಿಸ್ತರಿಸಿದ್ದೇನೆ ನನ್ನ ಕಾರ್ಯಕ್ಷೇತ್ರವು ಅಗಲವಾಗಿದೆ ನಾನು ಸ್ವಾರ್ಥಿಯಾಗಲಾರೆ ವಿಶ್ವವು ವಿಶಾಲವಿದೆ ಪ್ರೇಮಕ್ಕೆ ಸಾಹಿತ್ಯವು ಅನಂತವಿದೆ ನಾರಿಯಿಂದ ಅದನ್ನು ಕ್ಷುದ್ರವಾಗಿದಲೇ? ಅದೊಂದನ್ನು ಮಾತ್ರ ಹೇಳಬೇಡಿ

ಕೃಷ್ಣ —ಸೋಸ ಹೋಗಬೇಡ ನಾನು ನಿನ್ನನ್ನು ಚೆನ್ನಾಗಿ ಬಲ್ಲೆ ನಿನ್ನ ಹೃದಯದ ಮರ್ಮವನ್ನು ಇನ್ನೂ ಅರಿ ಹೋಗಿಲ್ಲ! ನಿನ್ನ ಮನಸ್ಸಿನ ಆಶಯವು ಇನ್ನೂ ಕೈಸ್ಪಷ್ಟ ಹೊಂದಿಲ್ಲ, ನಿನ್ನ ಪ್ರೇಮಮಯ ಅನುಭೂತಿಯು ಇನ್ನೂ ನಿವಾರಿಸಲ್ಪಟ್ಟಿಲ್ಲ. ಮಾಧವ! ಶೂನ್ಯ ಗೃಹವನ್ನು ಪ್ರವೇಶಿಸಿ "ನಾನಿಲ್ಲಿ ಸುಖಿ" ಎಂದು ಸತ್ಯ ಪೂರ್ವಕ ಹೇಳಿಬಲ್ಲೆಯಾ? ನಿನ್ನ ಪ್ರೇಕೆಯ ಭಗಿನಿಯು "ನನಗೊಂದು ಅತ್ತಿಗೆಯನ್ನು ಕೊಡು!" ಎನ್ನುವಾಗ ನೀನು ಅದನ್ನು ನಿರಾಕರಿಸುವೆಯಾ? ನಾರಿಯ ಮೋಹದಿಂದ ಪೃಥ್ವಿಯು ಈ ರೂಪರಾಶಿಯನ್ನು ಹೊಂದಿತು, ನಾರಿಯ ಪ್ರೇರಕೆಯಿಂದ ಈ ನಿಸರ್ಗವು ಚೇತನಾತ್ಮಕವಾಯಿತು; ನಾರಿಯ ಅನುಜ್ಞೆಯಿಂದ ಕಾರುಣ್ಯವು ಅತ್ಯಂತ ಸುಂದರವೂ ಸುಮಧುರವೂ ಆಯಿತು. ನಿನ್ನಲ್ಲಿಂದ ನಿನ್ನ ಹೃದಯವನ್ನು ಬಚಿಸಿಕೊಳ್ಳಬೇಡ.

ಮಾಧವ—ಹೋಗಿ ನೀವು ಮೋಹದ ಮೊಸಳೆಗಳಿಂದ ನನ್ನನ್ನು ಮುಂಚುಗೊಳಿಸಲಾರಿ. ನಿವನ ಪ್ರಭಾವವು ನನ್ನ ಹೃದಯವನ್ನು ಬರಿದು ಮಾಡಿದೆನು.

ತಾಯಿಯಲ್ಲಾ ನಾನು? ನಾನಿರುವಷ್ಟು ದಿವಸ ನಿನಗೆ ಯಾವ ಕಷ್ಟವೂ ಬರದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುವೆನು. ಆದರೆ ನಾನು ಮುಂದೆ ಇರುವುದಿಲ್ಲವಲ್ಲಾ! ನಾನು ವಿಷ ತಿಂದು ಸತ್ತುಹೋದರೆ ನಿನ್ನ ಗತಿಯೇನು? ಹೇಳು ಮಗು, ಹೇಳು.

ಕೃಷ್ಣ:—ನಿಮ್ಮ ನಾಲಿಗೆಯಲ್ಲಿ ಸರಸ್ವತಿಯು ಕುಳಿತಿರುವಳು. ನಿಮ್ಮ ಮಾತು ಸತ್ಯವಾಗುತ್ತದೆ. ಕೃಷ್ಣನಿದ್ದ ಎಲ್ಲಾ ಮಾತ್ರ ರಕ್ಷಿಸುವನು ನಿಮ್ಮಂದಿಗೆ ನಾನಿರುತ್ತೇನೆ. ನೀನು ತಪ್ಪಾಗಿ ಇಷ್ಟನ್ನು ಮಾತನಾಡಿದೆ. ಮತ್ತೆ ಹೀಗೆ ಮಾತನಾಡಬೇಡ. ನಾನು ಹೋಗುತ್ತೇನೆ. (ಶ್ರೀಕೃ)

ಮಾಧವ:—ಹೋಗಿ, ಸಂತಸ ಮಾಡು! ನಿನ್ನ ಹೃದಯದಲ್ಲಿ ಇನ್ನು ಕಳಂಕವೇ? ನಿನಗೆ ಮಂದಿರದಲ್ಲಿ ನಿನ್ನ ಪ್ರೇಮ. ನಿನಗೆ ಜೀವನವು ನಿನ್ನ ಪ್ರೇರಣೆ. ಆದರೂ ಈ ಹೃದಯದಲ್ಲಿ ಇದೆಂತಹ ಉನ್ಮಾದ! ದಾರ್ಢ್ಯವೇ! ದೂರವಾಗು. ವಿಶ್ವವಿಜಯಿಯೆಂಗಬಲ್ಲ ಮಾನವ ಹೃದಯವು ನಾರಿಯ ಚಂಚಲತೆಗೆ ಬಲಿಬೀಳದಿರಲಿ. ಸ್ವಾಮಿದ್ರೋಹ! ನನಗೆ ಬಲಹೊಟ್ಟು ನಿನ್ನ ಪದತಲದಲ್ಲಿ ಮಾಡಿದ ಪ್ರತಿಜ್ಞೆಯನ್ನು ಕಾಪಾಡು!

— ೪ —

ತಿವ ಮಂ ದಿ ರ.

(ತಂಕರಿಯು ಸಮುದ್ರತೀರದಲ್ಲಿ ನಡೆಸಿದ ಮಾಧವನು)

ತಂಕರಿ:—ಉಪಾಯವು ಉದಿಸಿ ಉದ್ಯಾನವನ್ನು ಮೊದಲೇ ನಾನು ಗ್ರಾಮವನ್ನೆಲ್ಲಾ ಅಲೆದು ಹೂವನ್ನು ಸಂಗ್ರಹಿಸಿ ಮಾಲೆಯನ್ನು ಕಟ್ಟಿದೆನು. ಮನಸಿನ ಒಂದೇ ಒಂದು ಆಶಯವನ್ನು ಹೊಂದಲೆಂದು ಈ ತಿವನ ಕಂಠದಲ್ಲಿ ತೂಗಹಾಕಿದೆನು. ಆದರೆ ಪ್ರೇಮದ ಪಾರ್ವತಿಯನ್ನು ಕೃಷ್ಣ ಸ್ವಾಮಿನ ಭಕ್ತಿಯ ರಾತಿಯಲ್ಲಿ ಮುನೆ ಮಾಡಿಕೊಂಡ ಇವನು ಇದಕ್ಕೆ ಅರ್ಹನಲ್ಲವೆಂದು ನನಗೆ ತೋರಿತು. ತನ್ನ ಹೃದಯದ ಪ್ರೇಮವನ್ನು ಪೂರ್ತಿಗೊಳಿಸಲಾರದೆ ಬಳಲುವ ಇವನು ನನ್ನ ಹೃದಯ ವನ್ನೇನು ಬಲ್ಲನು? ಮಾಧವ! ತಿವನ ಕೊರಳಿನಿಂದ ಕಿತ್ತು ಈ ಮಾಲೆಯನ್ನು ನಿನಗಾಗಿ ನಾನು ತಂದಿರುವೆನು. ಸ್ವೀಕರಿಸುವೆಯಾ?

ಮಾಧವ:—ದೂರ ಸಾರು. ಒಂದು ಸಮಯವಿತ್ತು. ಆಗ ನಾರಿಯ ಸಂದರ್ಶನವು ಪೂರ್ಣಮೆಯ ಶಾಮುಲತೆಯಲ್ಲಿ ಇಳಿದು ಬರುವ ಸುಂದರವಾದ ಜ್ಯೋತ್ಸ್ನೆಯಂತೆ ಮಾಧುರ್ಯದ ಮೂರ್ತಿಮಂತ ರಚನೆಯಾಗಿ ಭಾಸವಾಗುತ್ತಿದ್ದಿತು. ಈಗ ಅದೇನೋ ತಿರಿಯದು. ನಾರಿಯ ದರ್ಶನವು ವೈಶಾಖ ಮಾಸದ ಮಧ್ಯಾಹ್ನದ ಪ್ರಭಾಕರನ ದಾರುಣವಾದ ಬಿಸಿಲಿನಿಂತೆ ಬೋಧೆಯಾಗುತ್ತಿದೆ. ನನ್ನ ಪ್ರತಿಜ್ಞೆಗೆ ಬಾಧೆಗೊಳಿಬೇಡ, ಅತ್ತ ಸಾರು.

ತಂಕರಿ:—ಸುಂದರವಾದ ಯೌವನವು ನಿನ್ನಲ್ಲಿ ಅವಿಶ್ರಾಂತ ಚೇತನವನ್ನು ಉಸುರುತ್ತಿದೆ ಮಾತ್ರ. ಇಷ್ಟರೊಳಗೆ ಎಲ್ಲಿಂದ ಈ ನಿರಾತಿಯ ಕಾಣಿಕ್ಕೆಯು ನಿನ್ನ ಹೃದಯದಲ್ಲಿ ಬಂದು ಸೇರಿತು? ಮಾಧವ! ಪ್ರಗಲ್ಭ ಕಲ್ಪನೆಯು ನಿನ್ನನ್ನು ಮೋಹಪರವಶನಾಗಿ ಮಾಡುವುದೇ ಪ್ರಕೃತಿಗೆ ಸಹಜವಿತ್ತು. ಸುಂದರವಾದ ಉದ್ಯಾನವನ್ನು ಹಠಾತ್ ವಾಲುಕಾನುಯವಾಗಿ ಯಾರು ಮಾಡಿದರು? ನಿನ್ನ ಛಲವನ್ನು ಬಿಡು.

ಮಾಧವ:—ಈ ಹೃದಯವು ಮೇಣದಿಂದ ಮಾಡಲ್ಪಟ್ಟಿಲ್ಲ. ನಾರಿಯ. ಅನುಜ್ಞೆಗೆ ಅನುಸಾರವಾಗಿ ಅದನ್ನು ಆ ಗಿಂದಾಗ್ಗೆ ಪುನಃ ಪುನಃ ರೂಪಿಸಲಾರೆನು. ಸಮ್ಮುಖ ದಲ್ಲಿ ತಿವನಿದ್ದಾನೆ. ನನ್ನ ನಿರ್ಧಾರವು ಅವನ ಪ್ರೇರಣೆ.

ತಂಕರಿ:—ಸ್ವತಾನ ರಕ್ಷಣೆಯೇ ನಿನ್ನ ಪ್ರೇರಣೆ? ಪ್ರೇಮಳ ಪಾರ್ವತಿಯನ್ನು ಬಿಟ್ಟು ಬಂಡುಬಿಳ್ಳೆ ಇನ್ನೂ ಅವನು ಕೃಷ್ಣಿಸಲ್ಪಟ್ಟಿಲ್ಲ. ಕೃಷ್ಣಾಸದ ಅಂತರ್ಯದಲ್ಲಿ ನಿರಂತರವೂ ವಿರಹದಿಂದ ತೋಕಿಸುತ್ತಿರುವ ಪಾರ್ವತಿಯ ಕಣ್ಣೀರ ಬಿಂದುಗಳು ಜಗತ್ತಿನಲ್ಲಿ ಜಲೋತ್ಪಾತಗಳ ಸೃಷ್ಟಿಮಾಡುತ್ತಿವೆ. ಅವಳ ಹೃದಯದ ಆಳದಿಂದ ಹೊರ ಸೂಸಿದ ದುಃಖದ ನಿಟ್ಟುಸಿರು ದುರಂತ ಭಿರುಗಾಳಿಯನ್ನೆಬ್ಬಿಸುತ್ತಿದೆ. ಅವಳ ಮನಸಿನ ಉದ್ವೇಗದಿಂದ ಹೊರಡುವ ಸಂತಾಪದ ವಾತ್ಯೆಯು ಕಷ್ಟೋತ್ಪಾತ ಗುಡುಗಾಗಿ ಕರ್ಣ ಭೈರವನ್ನು ಧ್ವೇಧಿಸುತ್ತಿದೆ. ಅವಳು ನಿನ್ನ ಪ್ರೇರಣೆಯಾಗಿರಲಾರದು. ಯಾರ ಹೃದಯದ ಕಾಣಿಕೆಯು ಚಿರಕಾಲವಾಗಿ ನಿರಾತವನ್ನು ತೋರಿದರೋ ಅವರು ನಿನ್ನ ಪ್ರಶ್ನೆಯನ್ನು ಸ್ವೀಕರಿಸಿ ಉತ್ತರ ನೋಡು, ಆ ಕಡಿಲ ಲೀಲೆಗಳು, ಆ ಬಿಳಿದ ತಿಳ್ಳುಗಳು, ಆ ಸ್ವಾಗದ ಕೋಲಾಹಲ—ಬರೀ ಮನಸಿನ ನಿರಾತಿಯ ಸೂಚನೆಗಳು ಮಾತ್ರ. ತಿಳಿದ ಅನಂತಾನಂದವೇ!

ಮಾಧವ:—ಬಿಡು ಅವನ ಪ್ರಶಂಸೆಯನ್ನು ನಾನು ರೂಪಿಸುವಾಗ ಮನಸಿಲ್ಲಿ ಬಿಡು ಅವನ ಪ್ರತಿಮೆಯನ್ನು? ಇಷ್ಟಕ್ಕೆ ಕಾರಣವೇನು? ನಿನಗೆ ಕೃಷ್ಣನಲ್ಲಿ ಭಕ್ತಿಯಿಲ್ಲವೆ? ಅವನಿಗೆ ಅವಮಾನವಾಗಿದೆ ಎಂದು ನೀನೇ ಅವನಲ್ಲಿ ಕ್ಷಮೆಯಾಚಿಸಬೇಕಿತ್ತು? ಹೇಳು, ಬಿಡಿಸಬೇಡ. ನಿನ್ನ ಪ್ರಶ್ನೆಯು ಅತಿಯಾಗಿದೆ.

ತಂಕರಿ:—ನನ್ನ ಪ್ರಶ್ನೆಯೇ? ಎಂತಹ ಪ್ರಶ್ನೆ? ನಿನಾ ಯೌವನದ ಉನ್ಮತ್ತ ಹೃದಯದಲ್ಲಿ ಪ್ರೇಮವನ್ನು ಖರ್ಚಾಗಿ ಬಿಂಗಡಸಿರುವೆನೆಂಬ ಪ್ರಶ್ನೆಯೇ? ಸುಳ್ಳು ಪೂರ್ಣಮೆಯ ಅಳಂತ ಚಿಕ್ಕತ್ತಿಯಲ್ಲಿ ಬಿಂದು, ತಂಗಾದ ಕೃಷ್ಣಾಗಳಕ್ಕಿಬ್ಬಿಸುವ ಮುದುಮುಧುರ ಕೈಗಳಿರವನ್ನು ಪಿಡಿದು, ವಿಧ್ವದ ಸರವನ್ನು ಮರೆಯಿಸುವ ಚಂಚಲ ನಯನವಧ್ವಯಗಳನ್ನು ನೋಡುತ್ತ ಈ ಪ್ರಶ್ನೆಯನ್ನು ಮಾಡಿದೆಯೇ? ಹಾಗೆ ಮಾಡಬಲ್ಲೆ ಯಾದರೆ ನಿನ್ನ ಪ್ರಶ್ನೆಯು ಸತ್ಯ.

ಮಾಧವ:—ನಾನು ನಾರಿಯ ಮುಖಾವಲೋಕನವನ್ನು ಸಹ ಮಾಡಿಸು.

ತಂಕರಿ:—ಅದಿಗ ನಿನ್ನ ಕಾರುಣ್ಯ. ಇದಕ್ಕೆ ವೀರ ತಿವನ ಪ್ರೇರಣೆಯೆನ್ನದಿರು. ಯಾವುದು ಲಕ್ಷ್ಮಿ ಕಾವುರುವ ತನವೋ ಅದೇಗ ನಿನ್ನಲ್ಲಿ ಅವೇತಗೊಂಡು ನಿನ್ನನ್ನು ನಾಶಮಾಡುತ್ತಿದೆ. ನಿಜಕ್ಕೆ ಪ್ರೇಮಭ ಅಭಾವವಿಲ್ಲ; ವೀರತೆಯ ಅಭಾವವು ನಿನಗಾಗಿ ತಾನ್ಯತೆಯನ್ನು ರಚಿಸುತ್ತಿದೆ. ನೀನದಕ್ಕೆ ಬಲಿಯಾಗದಿರು.

ಮಾಧವ:—ನೀನು ಕ್ರೂರಳು. ನೀನೆನಗೆ ಎಷ್ಟು ವೇದನೆ ಯನ್ನು ಕೊಡುತ್ತಿರುವೆಯೆಂದು ನೀನು ತಿಳಿದಿಲ್ಲ. ನನ್ನ ಮಾರ್ಗವನ್ನು ನಾನು ರಚಿಸಿದ್ದೇನೆ. ಅದಕ್ಕೆ ನೀನು ಅಡ್ಡಿಯಾಗಬೇಡ. ಪ್ರೇಮವನ್ನು ಹೃದಯದಿಂದ ತೀಳಿ ಬಿಟ್ಟಿದ್ದೇನೆ. ಅರಳುವ ಮೊದಲೇ ಮೊಗ್ಗೆಯನ್ನು ತೀಳಿದ್ದೇನೆ. ವಿಚಾರದ ಸಮಯದಲ್ಲಿ ನನಗೆ ನಾನೇ ಧನ್ಯನೆಂದು ತೋರುತ್ತಿದೆ.

ತಂಕರಿ:—ನೀನು ನಿನ್ನ ಹೃದಯದಿಂದ ಆ ಪ್ರೇಮದ ರಾತಿಯನ್ನು ತೀಳಿಲಿಲ್ಲ; ಅದನ್ನು ಕಿತ್ತೊಗೆಯಲಾರಿ. ಯಾರ ದೃಷ್ಟಿಯು ನಾರಿಯ ದರ್ಶನದಿಂದ ವಿಕಾರವನ್ನುಹೊಂದು ವುದೋ ಅವನಲ್ಲಿ ಪ್ರೇಮಳ್ಳ ಅಭಾವವಿಲ್ಲ. ಯಾರು ಸಣ್ಣ ತಿಳುವನ್ನು ಎತ್ತಿ ಉನ್ಮತ್ತ ಆನಂದದಿಂದ ಮುದ್ದಾಡ ಬಲ್ಲರೋ ಅವರ ಮಾರ್ದವಕ್ಕೆ ಕಡಿಮೆಯಿಲ್ಲ; ಯಾರಿಗೆ ಸಂಯಮಕ್ಕಾಗಿ ಮುಹೂರ್ತ ಮುಹೂರ್ತವೂ ಪ್ರತಿಜ್ಞೆಯ ನೆನಪಿಕೆಯನ್ನು ನೂಡಬೇಕಾಗುತ್ತದೊ ಅವರಲ್ಲಿ ಅದಕ್ಕೆ ಆಧಾರವಿಲ್ಲ. ನಿನ್ನನ್ನೇ ನೀನು ಮೋಸ ಗೊಳಿಸುತ್ತಿರುವೆ.

ಮಾಧವ:—ಅತ್ತ ಹೋಗು, ತಂಕರಿ. ಎಷ್ಟೇ ಕಷ್ಟವಾದರೂ ನಾನು ನನ್ನ ಪ್ರತಿಜ್ಞೆಯನ್ನು ಪಾಲಿಸುತ್ತೇನೆ. ನನಗೇಕೆ ಇದರಲ್ಲಿ ಇಷ್ಟು ಯೋಚನೆ?

ತಂಕರಿ:—ನನಗೇಕೆ ಯೋಚನೆಯೇ? ಶೈತವಂದಿಂದಲೂ ನೀನೆನ್ನ ಪ್ರೇಮದ ಅಧಿಷ್ಠಾತ್ರೀ ದೇವ. ಸಣ್ಣದಿರುವಾಗ ಮನೆಯಲ್ಲಿ ಎರಡು ಗುಬ್ಬಿಗಳು ಕೂಡಿ ಆಡುವಾಗ ನಾನು ನಿನ್ನ ನೆನವರಿಕೆ ಮಾಡಿದ್ದೇನೆ. ಅರ್ಜುನಿಯು ನನ್ನ ಕಲ್ಪನೆಯು ಮಿತಿಮೀರಿ ತರಿಯುತ್ತಿದ್ದಾಗ, ನಿನ್ನ ನೆನ ವರಿಕೆಯಿಂದ ಅದಕ್ಕೆ ಮೇರೆಗಟ್ಟಿದ್ದೇನೆ. ಶನಿವಾರದ ಮಧ್ಯಾಹ್ನ ಸಂಜೆಯಲ್ಲಿ ಊರಿನ ದೇವ ಮಂದಿರಕ್ಕೆ ಪೂಜೆಯನ್ನು ಸಲ್ಲಿಸುವಾಗ, ನಿನ್ನನ್ನು ಅಲ್ಲಿ ಆವಾಹಿಸಿ ಆ ಪೂಜೆಯನ್ನು ಪೂರ್ಣ ಪಡಿಸಿದ್ದೇನೆ. ತಿಳಿಯಿತೇ ನನ್ನ ಯೋಚನೆಯ ಕಾರಣ?

ಮಾಧವ:—ಕಾನನ ತುಸುವದಂತೆ, ನೀನು ನಿನ್ನ ಪ್ರೇಮವನ್ನು ತೂನ್ಯ ಹೃದಯಳ್ಳೆ ಕೊಟ್ಟು ವೈರ್ಥಮಾಡಿದೆ.

ತಂಕರಿ:—(ತಿವನನ್ನು ನೋಡಿ)—ನಿರ್ವಿಕಾರ ತಿವ! ನಿನ್ನದಿ

(೪೬ನೇ ಪುಟದಿಂದ ಮುಂದುವರಿದಿದ್ದು.)

ಆಸ್ತಿಕರೋ ನಾಸ್ತಿಕರೋ?

ನಂದವಾಗುವುದು; ಬಹಳ ಆಡಂಭರದಿಂದ ದೇವಮೂರ್ತಿಯ ಮೆರವಣಿಗೆಯಾಗುವುದು. ಶ್ರೀಮಂತನು ತನ್ನ ಫಸ್ಟ್ ಕ್ಲಾಸ್ ಫೈಟ್ಟನ್ನು ಪರದು ಹೊರಟುಹೋಗುವನು.

ಆದರೆ ಭೂಮಿಯು ಸುತ್ತುತ್ತಲೇ ಇದೆ; ಸೂರ್ಯ ಮಂಡಲದ ಗ್ರಹನುಂಡವು ನಡೆಯುತ್ತಲೇ ಇದೆ; ವಿಶ್ವವ್ಯಾಪಾರವು ಪ್ರವಹಿಸುತ್ತಲೇ ಇದೆ; ಮತವೆಲ್ಲಿದೆ? ದೇವರೆಲ್ಲಿ?

ಬಾನನೆ ಉರಿಯಾರವಾಗಿಯೆ ಉತವಾಸದ ಸಂತಾಪದಿಂದ ಬೆಂಬಿದೆ: ಹೂವಿನ ಸಂತಸಗಳು ಹಾಗೆಯೇ ಎಡವಿದೆ ನಡೆಯುತ್ತಿದೆ; ಧಾತ್ರಿಕಾಗ್ನಿಗಳಿಂಗಿನ ಲಂಪಟಗಳು ಹಾಗೆಯೇ ಎಂದಿನಂತೆಯೇ ಇವೆ. ದೇವರು ದೇವರೆಂಬ ಸತ್ಯ ಅಸ್ತಿತ್ವಗಳು ಅನಾಸ್ತಿಗಳು ನಡೆಯುತ್ತಿವೆ.

ಮತ್ತೆ? ಮತ್ತೆ? ಮತವು ಸತ್ಯ! ಮತವು ಸತ್ಯ!

ಪ್ರೀತಿಯ ವೈರ್ಯವೆ! ವೈರ್ಯವಾದೆ, ನಾನು ನಿಂತಿರುವುದು ಸಾಮಾನ್ಯವಾಗದು. ಮಾಧವ! ನಾನು ಹೋಗುತ್ತೇನೆ. (ಹೋಗುವಳು).

ಮಾಧವ:—ಹೋಗು. ಸ್ವಲ್ಪ ಸುಖಿಯಾದೆ. ಆದರೆ, ತಂಕರಿ ತಂಕರಿಯು ಮಹಾ ಸಮರ್ಥಳು. ನನಗಿಂತಲೂ ನನ್ನ ಹೃದಯವನ್ನು ಅವಳೇ ಹೆಚ್ಚಾಗಿ ಬಲ್ಲಳು. ನನ್ನ ಹೃದಯವು ಖಾಲಿಯೆ? ನಕ್ಷತ್ರಿಯು ಪ್ರೇಮವು ಅಕರ್ಮಿಯಾಯಿತೆ? ನನಗೇನೇ ಗೊತ್ತಿಲ್ಲ. ಆದರೆ ಹೃದಯದಲ್ಲಿ ಈ ಉತ್ಪಾತಗಳೇಕೆ? ಮತಾಸನ ನನಗೆ ಶಕ್ತಿ ಕೊಡು. ನಾರಿಯ ಮಾಯೆಯನ್ನು ನಾನು ತರಿದು ತಾಳುವೆನು.

ನಮೋ—ಹರಹರಾ (ಶ್ರೀಕೃ)

— ೫ —

ಕೃಷ್ಣರಾಯರ ಮನೆ.

ಶಂಕರಿ ಮತ್ತು ಕೃಷ್ಣ.

ಕೃಷ್ಣ:—ಶಂಕರಿ!

ಶಂಕರಿ:—ಅಪ್ಪಾ!

ಕೃಷ್ಣ:—ನಿನಗೆ ಪ್ರಾಯ ಬಹಳವಾಯಿತು.

ಶಂಕರಿ:—(ನಿರುತ್ತರ)-

ಕೃಷ್ಣ:—ಇಷ್ಟರೊಳಗೇನೇ ನಿನಗೆ ವಿವಾಹವಾಗಬೇಕಿತ್ತು.

ತಂಕರಿ:—(ನಿರುತ್ತರ).

ಕೃಷ್ಣ:—ನನ್ನ ಎದೆಯು ನಿನಗಾಗಿ ದಾರುಣ ವ್ಯಥೆಯನ್ನು ಹೊಂದುತ್ತಿದೆ.

ತಂಕರಿ:—ನನಗಾಗಿ ಚಿಂತಿಸ ಬೇಡಪ್ಪಾ.

ಕೃಷ್ಣ:—ಹಾಗೆನ್ನ ಬೇಡ ಮಗೂ. ನೀನು ಭೂಲೋಕಕ್ಕೆ ಹೊಸಬಳಾಗಿದ್ದಾಗಲೇ ನಿನ್ನ ತಾಯಿಯು ನಿನ್ನನ್ನು ಬಿಟ್ಟು ಹೋದಳು. ನಿನ್ನಲ್ಲಿ ನಿನ್ನ ತಾಯಿಯ ಪ್ರತಿಬಿಂಬ ವನ್ನು ನೋಡುತ್ತ ನಿನ್ನ ಸ್ನೇಹದಲ್ಲಿ ನಾನು ಸುಖಿಯಾ ದೆನು. ಹೃದಯವು ವಿರಹದಿಂದ ಪರತಪಿಸುತ್ತಿದ್ದಾಗ, ನಿನ್ನ ತೀತಲವಾದ ನಗುವಿನ ಲಹರಿಯಿಂದ ಅದನ್ನು ತಣ್ಣಗೆ ಮಾಡಿದೆನು. ಜೀವನವು ಪ್ರೇಮತ್ಯಾಗಿ ಕೊಗುತ್ತಿದ್ದಾಗ ನಿನ್ನ ಮೇಲಿನ ಪ್ರೀತಿಯಿಂದ ಅದನ್ನು ಕಾಂತ ಪಡಿಸಿದೆನು. ಈಗೆನ್ನ ಹೃದಯದ ತಾರುಣ್ಯವು ಹೋಯಿತು. ಆ ಪ್ರೇಮ ಪಿವಾಸೆಯು ಏರಿ ಬರುತ್ತಿರುವ ಪ್ರಾಯದ ಜ್ವಲಂತ ಸ್ಪರ್ಧದಲ್ಲಿ ನಾಶವನ್ನು ಹೊಂದಿತು. ಭೂಲೋಕವು ನನಗೀಗ ಅರ್ಥಹೀನ, ತೃಜಸಲಾಗದ ವಿಷಯವಾಗಿದೆ. ಆದರೆ ಪ್ರಕೃತಿಯು ನನ್ನಲ್ಲಿ ರಚಿಸು ತ್ತಿರುವ ಈ ಮರುಭೂಮಿಯಲ್ಲಿ ನಿನ್ನನ್ನು ವೈರ್ಥಪಡಿಸ ಲಾರೆ. ನಿನ್ನ ಸುಖದ ಸುಖ; ನಿನ್ನ ಭಾಗ್ಯದ ಭಾಗ್ಯ; ನಿನ್ನ ಪ್ರಣಯದೆ ಪ್ರಣಯ; ಇವೇ ಈಗ ನನ್ನ ತಾರುಣ್ಯದ ಸುಖ ಸೃತಿಯನ್ನು ಕೊಡಬಲ್ಲ ವಿಷಯಗಳು. ಇವುಗಳಿಂದ-ನನ್ನನ್ನು ನಾನು ವಂಚಿಸಲಾರೆ.

(ಶ್ರೀಕೃ—ಬಾಳ)

ರಾಘವ:—ತಂಕರಿ.

ಕೃಷ್ಣ:—ಯಾರು? ರಾಘವನೆ? ಬಾ. ಏನು ಬಂದೆ?

ರಾಘವ:—ತಂಕರಿ ಎಲ್ಲಿ? ನನಗವಳೊಡನೆ ಕೆಲಬೇಳು. ಈಗ ಆರು ತಿಂಗಳಿಂದ, ಬೆಳಿಗ್ಗೆ ಸಾಯಂಕಾಲ ಮೈ ಬೆವರಿ ನಾನು ಆ ಸಣ್ಣ ತೋಟವನ್ನು ಮಾಡಿದೆವು. ತಾಯಿಯ ತಂಬಿಗೆಯನ್ನು ಕಳವು ಮಾಡಿ ಅದಕ್ಕೆ ನೀರಿರಿದ್ದೇನೆ. ದೂರ ದೂರ ಅಲೆದು ಸುಂದರವಾದ ಗಿಡಗಳನ್ನು ತಂದಿದ್ದೇನೆ. ಈಗ ಪ್ರಥಮದ ಉಷ್ಣ ಯನ್ನು ಕಳೆದ ನನವಧುವಿನಂತೆ ನನ್ನ ತೋಟವು ಅರಿನಗುವನ್ನು ತೋರಿಸುತ್ತಿದೆ. ಆದರೆ ನಿನ್ನ ಈ ತುಂಟ ತಂಕರಿಯು ನನ್ನ ಆ ಎಲ್ಲ ಕತ್ಯಗಳನ್ನು ವಿಫಲ ವಾಗಿ ಮಾಡುತ್ತಾಳೆ.

ಕೃಷ್ಣ:—ಏನು, ಏನಾಯಿತು?

ರಾಘವ:—ಕಳೆದ ಎರಡು ತಿಂಗಳಿಂದ ಪ್ರಯಾಸ ಪಟ್ಟು ಆ ನನ್ನ ಗುಲಾಬಿ ಗಿಡವನ್ನು ನೆಟ್ಟಿದ್ದೇನೆ. ನಿನ್ನೆಯೇ ಬರೇ ಎರಡು ಮೊಗ್ಗೆಗಳು ತಮ್ಮ ಕೆಂದುಟಿಯನ್ನು ತೆರೆದು ನನ್ನನ್ನು ಕರೆಯುವಂತೆ ತೋರಿದ್ದುವು. ಈ ದಿನ ಅವು ಅಲ್ಲಿ ಇಲ್ಲವೇ ಇಲ್ಲ. ನನ್ನ ತೋಟವನ್ನು ನನಗೆ ಕೊಡು, ತಂಕರಿ.

ತಂಕರಿ:—ಅವು ತಿವನ ಕಂಠದಲ್ಲಿ ಸುಖಿಯಾಗುವ.

ರಾಘವ:—ಸುಳ್ಳು ಅವು ಮಾಧವನ ವಕ್ಷದಲ್ಲಿ ಬಾಡುತ್ತವೆ. ಅವನ್ನು ನನಗೆ ತೊಟ್ಟಾರದಿತ್ತೇ, ತಂಕರಿ?

ತಂಕರಿ:—(ನಿರುತ್ತರ)

ಕೃಷ್ಣ:—ತುಟ್ಟು ಕುಡುಗಿ! ಮಾರನನು ಹೃದಯದ ತಾನವ ಬಿಲ್ಲಿ ಕೃಷ್ಣತ್ವೆಯು. ಏನವನ ತಪ್ಪಿರಿ ಹೋಗದಿರು. ಅಕ್ಷಯಾಗ್ನಿಗಳ ಸ್ಪರ್ಶವು ಹೋಗಲಿಲ್ಲಿ!

ರಾಘವ:—ಹೃದಯದ ತಾಸನವೇ! ಎಂತಹ ತಾಸನ? ನಿನ್ನೆ ಹೇಳಿದ್ದ, ಹೂವನ್ನು ಮುಟ್ಟುವುದಿಲ್ಲವೆಂದು, ನಾನು ಯಜ್ಞಸ್ವರ್ಗದ ವಿಷಯಗಳನ್ನು ಮುಟ್ಟುವುದಿಲ್ಲವೆಂದು ಈ ದಿನ ಶಂಕರಿಯ ಕೈಯ ಹೂವನ್ನು ಎತ್ತಿಬಿಟ್ಟಿದ್ದಾನೆ

ಶಂಕರಿ:—ಅದವೆನ ದೋಷವಲ್ಲ, ನಾನವುಗಳನ್ನು ನೆಟ್ಟು ಬಂದೆ. ಶಿವನೊಡನೆ ನಾನು ರಾತ್ರಿದಿನ ಪ್ರಾರ್ಥಿಸುತ್ತಾ ಇದ್ದೇನೆ ಶಿವನ ಪದತಲದಲ್ಲಿ ನಾನಿಟ್ಟ ಪ್ರಾರ್ಥನೆಯು ವ್ಯರ್ಥವಾಗದು

ಕೃಷ್ಣ:—ಶಂಕರಿ! ಎಚ್ಚರವಿರು ಪುರುಷ ಹೃದಯವು ಸ್ತ್ರೀಯರ ನಯನಗಳಿಚ್ಛೆಗೆ ಚಂಚಲವಿದೆ.

ರಾಘವ:—ಈ ದಿನ ಸಂಜೆಗೆ ಶಿವನ ಪೂಜೆಗಾಗಿ ಹೂ ಕೊಯ್ತು ತ್ತೇನೆ, ಬಾ, ಶಂಕರಿ.

(ರಾಘವನು ಹೋಗುವನು)

ಕೃಷ್ಣ:—ಒಳ್ಳೆಯ ಹುಡುಗ.

— ೬ —

ಮಾಧವನ ಮನೆಯಲ್ಲಿ

ಮಾಧವ:—ಮನೆ ಇಡೀ ನನ್ನ ಮೇಲೆ ದಂಗೆ ಎದ್ದಂತೆ ಕಾಣುತ್ತದೆ ತಂಗಿಯ್ಯಬಂದು 'ಅಣ್ಣಾ' ಎಲ್ಲಿ ಹೋಗಿದ್ದೆ?' ಎನ್ನುವಾಗ, ಏಕೋ, ನನಗೆ ತಿಳಿಯದು, ಅಪರಾಧಿಯಂತೆ ನನಗೆ ಅನುಭವವಾಗಿ ತಲೆತಗ್ಗುತ್ತಿದೆ ಮನೆಯ ಚಿತ್ರಹೀನ ಗೋಡೆಗಳು- ನಿನ್ನ ಹೃದಯದಂತೆಯೇ ನಾವೂ ಶೂನ್ಯತೆಯನ್ನು ಸೇರಿದ್ದೇವೆ-ಎಂದು ಮೊದಲಿಸುವಂತೆ ತೋರುತ್ತಿದೆ ನನ್ನ ಅನೇಕ ಪುಸ್ತಕಗಳಿಂದ, ಮೇಜು ಕುರ್ಚಿಗಳಿಂದ ತುಂಬಿದ ಕೋಣೆಯು ಯಾವುದೋ ಒಂದು ಅಭಾವದಿಂದ ಅಸಹನೀಯವಾಗಿ ಭಾಸವಾಗುತ್ತಿದೆ ಶ್ರುತಿಇಲ್ಲದ ಸಂಗೀತದಂತೆ ಜೀವನದ ಭಿನ್ನಸ್ವರಗಳು ತಾಳಲಯಹೀನವಾಗಿ ಹೋಗಿವೆ. ಎಂತಹ ಮಾರ್ಪಾಟು! ಕೆಲವೇ ವರ್ಷಗಳ ಹಿಂದೆ ಶೂನ್ಯತೆಯಲ್ಲಿ ಸರ್ವಸ್ವವನ್ನು ಕಾಣುತ್ತಿದ್ದೆನು ಬಾಲ್ಯದ ಅನಜ್ಞತೆಯಲ್ಲಿ ಇದೇ ನನ್ನ ಕೋಣೆಯಲ್ಲಿ ಯಾವುದೊಂದು ವಿಷಯವೂ ಇರದಿದ್ದರೂ ಇಲ್ಲಿ ಸಾಮ್ರಾಜ್ಯಗಳನ್ನು ರಚಿಸಿ ರಾಜರಾಣಿಯರ ಆಟವನ್ನು ಆಡುತ್ತಿದ್ದೆನು ಈಗ ಇಲ್ಲಿ ಸಂಸಾರದ ಸಾಮಾನ್ಯತೆಗಳನ್ನೂ ರಚಿಸಲಾರೆ

(ಪ್ರವೇಶ ಮಾಧವನ ತಂಗಿ)

ಮಾಧವನ ತಂಗಿ —ಅಣ್ಣಾ

ಮಾಧವ —ಏನೇ?

ತಂಗಿ —ಶಂಕರಿ ಬಂದಿದ್ದಾಳೆ

ಮಾಧವ —ನಾನಿಲ್ಲಿ ಇಲ್ಲವೆಂದು ಹೇಳು.

ತಂಗಿ —ಏಕಣ್ಣಾ? ಅವಳು ಶಿವನ ಪ್ರಸಾದವನ್ನು ತಂದಿದ್ದಾಳೆ

ಮಾಧವ —ನನ್ನದೆಲ್ಲವನ್ನೂ ಶಿವನಿಗೆ ಕೊಟ್ಟಿದ್ದೇನೆ, ಶಿವನ ದನ್ನು ನಾನು ತೆಗೆದುಕೊಳ್ಳಲಾರೆ ಅವಳನ್ನು ಕಳುಹಿಸು

ತಂಗಿ —ಅವಳು ಒಂದೇ ಒಂದು ಹೂವನ್ನು ತಂದಿದ್ದಾಳೆ— ನಿನ್ನ ವಕ್ಷದಲ್ಲಿ ನೆಟ್ಟು ಹೋಗಲೆಂದು ಬರಲೇ?

ಮಾಧವ —ತೊಂದರೆ ಕೊಡಬೇಡ

ತಂಗಿ —ಅರಸಿಕ! ನನ್ನ ಜೀವನದ ಸುಂದರವಾದೊಂದು ಅನುಭೂತಿಯನ್ನು ನೀನು ಅವಹರಿಸುತ್ತಿರುವೆ ಇದರಿಂದ ನೀನು ಸುಖಿಯಾಗಲಾರೆ ನಾನು ಶಂಕರಿಯನ್ನು ಕಳುಹಿಸಿಕೊಡುತ್ತೇನೆ ನೈರಾಶೆಯ ಉದ್ವಿಗ್ನತೆಯಲ್ಲಿ ನೀನವಳನ್ನು ದೂಡಿರುವೆ ಅವಳ ಕಡೆಯ ಪ್ರಣಾಮಗಳನ್ನು ನಾನೇ ನಿನಗೆ ಸಲ್ಲಿಸುತ್ತೇನೆ (ಪ್ರಸ್ಥಾನ)

ಮಾಧವ —ಅಃ! ಎಂತಹ ಜ್ವಾಲೆ? ಇದವಳ ಮಾತಿನ ಜ್ವಾಲೆಯೊ, ನನ್ನ ವೈರಾಗ್ಯದ ಜ್ವಾಲೆಯೊ? ವೈರಾಗ್ಯವು ಇಷ್ಟು ತಪ್ತಗುಣ ಉಳ್ಳದಾಗಿದೆಂದು ನನಗೆ ತಿಳಿದಿರಲಿಲ್ಲ ಇರಲಿ ಶಿವನಿದ್ದಾನೆ.

— ೭ —

(ಶಿಥಿಲ ಮಂದಿರದಲ್ಲಿ ಶಂಕರಿ)

ಶಂಕರಿ—ನನ್ನ ಎದೆಯು ಆಶ್ಚಾಧಿಲಾಷಿಯು ಅದನ್ನು ತುಂಬಿಸಿ ಬಿಟ್ಟರಾಯಿತು ಅದರ ತೃಪ್ತಿ. ಒಬ್ಬನೇ ಒಬ್ಬನು ಅದನ್ನು ಅಧಿಕರಿಸಿ ನನ್ನನ್ನು ಸುಖಿಸುವನಾಗಿ ಆತಿಯದ್ದಿತ್ತು. ಪ್ರಾತಃಕಾಲದ ಸುಷ್ಮಸಂಚಯವೂ, ಸಾಯಂಕಾಲದ ಶಿವಪೂಜೆಯೂ, ಶಿವಭೂಮಿಯಂತೆಯೇ ತೂಷ್ಣವಾದುವು. ಹೃದಯವನ್ನು ನಿರಾಶೆಯಿಂದ ಏಕಿನಲೇ?

(ವಿಜಯನ ಪ್ರವೇಶ)

ವಿಜಯ:—ಶಂಕರಿ! ಏಂತಿಸುವೆಯೇನು?

ಶಂಕರಿ.—ನನ್ನ ಇಚ್ಛೆಯನ್ನು ನನಗೆ ಕೊಡು ಎಂದು ಈ ಶಿವ ನನ್ನು ಪ್ರಾರ್ಥಿಸಿದೆ ತನ್ನ ಇಚ್ಛೆಯನ್ನೇ ಅವನು ನನಗೆ ಕೊಡುವನೆಂತೆ!

ವಿಜಯ:—ಅದೇನು?

ಶಂಕರಿ:—ಪ್ರಕೃತಿಯಂತೆ ಜೀವನವುಳ್ಳ ಸಂಸಾರಕ್ಕಾಗಿ ಪ್ರಾರ್ಥಿಸಿದೆನು ಸ್ಮಶಾನದಂತೆ ಜಡತೆಯುಳ್ಳ ಕೊನ್ನತೆಯನ್ನು ಕೊಡಲು ಅವನು ಕೈಯೆತ್ತಿರುವನು!

ವಿಜಯ.—ನೀನು ಉತ್ತೇಜಿತಳಾಗಿದ್ದಂತೆ ತೋರುತ್ತಿದೆ ನಿನ್ನ ಮಾತಿನ ಅರ್ಥವು ನನಗಾಗುವುದಿಲ್ಲ

ಶಂಕರಿ —ಈ ಶಿವನು ನನ್ನ ಜೀವನದ ಅರ್ಥವನ್ನೇ ಸೂರೆ ಮಾಡಿದ್ದಾನೆ ನಾನು ಮಾಡಿದ ಪೂಜೆಯು ಅವನು ಮಾಡಿದ ಪ್ರತಿಜ್ಞೆಗಿಂತಲೂ ಹೀನವೆಂದು ಈ ವೈರಾಗಿಗೆ ಬೋಧೆಯಾಯಿತು!

ವಿಜಯ:—ಮಾಧವನ ಮಾತೇ? ಅವನಿಗಾಗಿ ನೀನು ಇಷ್ಟು ಉದ್ವಿಗ್ನಳಿರಬೇಕೇ?

ಶಂಕರಿ—ಮತ್ತೆ? ಎರಡು ವರ್ಷಗಳಿಂದ ನಾನೀ ಹೃದಯದ ಆಸನವನ್ನು ಸಿದ್ಧವಡಿಸುತ್ತಲಿದ್ದೆನೆ ಆಸನವು ಸಿದ್ಧವಾದಾಗ ರಾಜನು ವೈರಾಗ್ಯದ ಛೀತ್ಕೆಯನ್ನು ತಾಳಿದನು!

ವಿಜಯ —ಪ್ರೇಮವನ್ನು ಅಷ್ಟು ಕ್ಷುದ್ರವಾಗಿ ಮಾಡಬೇಡ ಎಲ್ಲಿ ಪ್ರೇಮಿಸಿ ಇಚ್ಛಿಸುವೆಯೋ, ಆ ಇಚ್ಛೆಯಲ್ಲೂ ಪ್ರೇಮದಲ್ಲೂ ಯಾವ ಮಹತ್ವವೂ ಇರುವುದಿಲ್ಲ ಬರೀ ಕರಿಣವಾದ ಸಂಸಾರದ ಸ್ವಾರ್ಥವು ಅದರಲ್ಲಿ ಅಧೀಕೃತವಾಗುತ್ತದೆ ಎಲ್ಲಿ ಇಚ್ಛಿಸಿ ಆ ಮೇಲೆ ಪ್ರೇಮಿಸುವೆಯೋ, ಆ ಇಚ್ಛೆಯೂ, ಆ ಪ್ರೇಮವೂ ಮಹತ್ವದ್ದು ಅದರಲ್ಲಿ ತ್ಯಾಗವಿದೆ, ಅದರಲ್ಲಿ ಔದಾರ್ಯವಿದೆ, ಯಾರೊ ಒಬ್ಬನು, ಏಕೊ ನಿನ್ನ ಪ್ರೇಮಕ್ಕೆ ಕಾರಣನಾದನೆಂದು ಅವನಪ್ಪೇ ಇಚ್ಛಿಸಿದಲ್ಲಿ —ನಿನ್ನ ಪ್ರೇಮದ ದೈವೀಕತೆಯು ಕಾಣಲಾರದು ನೀನು ಬರೀ ಮೋಹದ ಬಲೆಯಲ್ಲಿ ಬೀಳುತ್ತಿ ಮಾತ್ರ ಅಂತಹ ಸ್ವಾರ್ಥಮಯ ಪ್ರೇಮಕ್ಕಾಗಿ ನೀನು ನಿನ್ನ ಜೀವನವನ್ನು ಉದ್ವಿಗ್ನತೆಗೆ ಪಾಲುಮಾಡಬೇಡ. ಅಂತಹ ಪ್ರೇಮವನ್ನು ಅಂತರ್ಹಿತವಾಗಿ ಮಾಡು ಜೀವನದ ಆದರ್ಶವು ಈ ಪ್ರೇಮವಲ್ಲ

ಶಂಕರಿ —ನಿನ್ನ ಭಾವವು ನನಗೆ ಮನಸ್ಸಿಗೆ ಹೋಗುವುದಿಲ್ಲ

(ಪ್ರವೇಶ—ರಾಘವ, ಕೈಯಲ್ಲಿ ಕೆಲವು ಹೂಗಳನ್ನು ಹಿಡಿದುಕೊಂಡು)

ರಾಘವ —ಶಂಕರಿ! ಶಂಕರಿ ಎಲ್ಲಿ?

ವಿಜಯ —ಏನು? ಅವಳಿಲ್ಲಿಯೇ ಇದ್ದಾಳೆ

ರಾಘವ —ಸಾಯಂಕಾಲದ ಹೊತ್ತಿಗೆ ಶಿವ ಪೂಜೆಗೆ ಹೂ ಕೊಡುತ್ತೇನೆಂದು ಹೇಳಿದ್ದೆ ನೀನು ಬರಲಿಲ್ಲವೇಕೆ?

ಶಂಕರಿ —ನಾನೊಂದನ್ನು ಕಿತ್ತು ತಂದೆ

ರಾಘವ —ಪುನಃ ಕಳ್ಳತನವೇ? ನಾನೇ ಕಡಿದು ನಿನ್ನ ಕೈಯಲ್ಲಿ ಕೊಡುವೆನೆಂದು ಹೇಳಿದ್ದೆನಲ್ಲ?

ಶಂಕರಿ —ನಿನ್ನ ಕೈಯಿಂದ ತೆಗೆದುಕೊಳ್ಳಲಿಕ್ಕೆ ನನಗೆ ಧೈರ್ಯವಾಗಲಿಲ್ಲ

ರಾಘವ —ನಿನ್ನ ಕೈಯಲ್ಲಿ ಅದೇನು?

ಶಂಕರಿ —ನಾನಾಗಿ ನಿನ್ನ ಹೂದೋಟದಿಂದ ಕದ್ದು ತಂದ ಒಂದೇ ಒಂದು ಹೂ

ರಾಘವ —ನಾನು ತಂದ ಈ ಎಲ್ಲಾ ಹೂವನ್ನು ನಿನಗೆ ಕೊಡುತ್ತೇನೆ ಪ್ರತಿಯಾಗಿ ನನಗದೊಂದನ್ನು ಕೊಟ್ಟುಬಿಡು

ಶಂಕರಿ (ಉತ್ತೇಜಿತಳಾಗಿ) —ತಿರಸ್ಕಾರದ ಭಯಂಕರವಾದ ಅವಮಾನದಿಂದ ಈ ಹೂವು ನನ್ನ ಕೈಯಲ್ಲಿ ತಳಮಳಿಸುತ್ತಿದೆ ಅಂತಹದನ್ನು ನೀನು ಸ್ವೀಕರಿಸುವೆಯಾ?

ರಾಘವ.—ನನ್ನ ಹೂವಿಗೆ ತಿರಸ್ಕಾರದ ಅವಮಾನವಿಲ್ಲ ಯಾವಾಗ ಅದು ನಿನ್ನಿಂದ ಅಪಹೃತವಾಯಿತೊ ಆಗಲೇ ಅದು ಗೌರವದ ಶಿಖರವನ್ನು ಕಂಡಿತು

ಶಂಕರಿ —ಅದನ್ನು ಮಾಧವನು ತಿರಸ್ಕರಿಸಿದನು

ರಾಘವ —ಮಾಧವನು ಅದನ್ನು ತಿರಸ್ಕರಿಸಿಲ್ಲ ಅದರ ಧಾರಣೆಯ ಗೌರವವನ್ನು ಶಿವನು ಅವನಿಂದ ಅವಹರಿಸಿದ್ದಾನೆ, ಅಷ್ಟೆ.

ವಿಜಯ:—ಶಂಕರಿ! ಶಿವಪೂಜೆಯು ವ್ಯರ್ಥವಾಗದು

ಶಂಕರಿ —ಧನ್ಯ ಶಿವ! ನಾನು ನಿನ್ನನ್ನು ತಪ್ಪಾಗಿ ಗ್ರಹಿಸಿ ದೋಷಯುಕ್ತನನ್ನಾಗಿ ಮಾಡಿದೆ ಆದರೂ ನೀನೆನ್ನ ಪೂಜೆಯನ್ನು ಸ್ವೀಕರಿಸಿದಿ. ಈ ದಿನದಿಂದ ನನ್ನ ಬಾಲ್ಯವನ್ನು ವಿಸ್ಮರಣೆಗೆ ಸೇರಿಸುವೆನು- ಈ ದಿನದಿಂದ ಮಾಧವನನ್ನು ನನ್ನೆದೆಯಿಂದ ದೂಷ್ಪಿ ಬಿಟ್ಟಿನು. ಈ ವೃಷ್ಣವನ್ನು ಅವನ ನಕ್ಷದಲ್ಲಿಡಲು ಹೋಗಿದ್ದೆ. ಅದನ್ನು (ರಾಘವ! ಈಗ ನಿನ್ನ ಪದತಲದ ಶಿಖರಕ್ಕಾಗಿ ಕಾಪೆ

ಯೋಗಿಸುವೆನು ಧನ್ಯ ಪಾರ್ವತೀಪತೇ!

— ೮ —

ಮಾಧವನ ಮನೆ.

(ಮಾಧವನ ತಂಗಿ)

ಮಾಧವನ ತಂಗಿ:—ಓಡಿ ಬರುವ ರಾತ್ರಿಯನ್ನು ಅಂಜಿಸುವ ಸಂಜೆಯಂತೆ ಅಣ್ಣನ ಮುಖವು ಮುಸುಕುಗೊಂಡಿದೆ ಒಂದು ಸಮಯದಲ್ಲಿ ಸಲಿಗೆಯ ಸಲ್ಲಾಪದಿಂದ ಕೂಡಿದ್ದ ಅವನ ಮಾತುಗಳು ಈಗ ವಿರಕ್ತಿಯ ಜಡತೆಯಿಂದ ಕೂಡಿವೆ ಮನೆಯಲ್ಲಿ ಅವನಿಗೆ ಉತ್ಸಾಹವಿಲ್ಲ ಒಳಗೆ ಬಂದ ಕೂಡಲೆ ಮನೆಯ ಮೂಲೆಯೆಲ್ಲವನ್ನೂ ಶೋಧಿಸುತ್ತಾನೆ ಏನೋ ಒಂದು ವಸ್ತುವನ್ನು ಹುಡುಕುವ ಆತುರದಲ್ಲಿರುವಂತೆ ತೋರುತ್ತಿದೆ ಏಕೆ ಹೇಗಾದನೋ, ತಿಳಿಯದು

(ಮಾಧವನ ಪ್ರವೇಶ)

ಅಣ್ಣಾ!

ಮಾಧವ—ಏನೆ?

ತಂಗಿ—ಶಂಕರಿಯು ಇಲ್ಲಿ ಬಂದಿದ್ದಳು

ಮಾಧವ (ಉತ್ಸುಕತೆಯಿಂದ):—ಎಲ್ಲಿದ್ದಾಳೆ?

ತಂಗಿ—ಅವಳು ನಿನಗೆ ತನ್ನ ಕಡೆಯ ಪ್ರೇಮನೈವೇದ್ಯವನ್ನು ಕೊಟ್ಟು ಹೋದೆನೆಂದು ತಿಳಿಸಲು ಹೇಳಿದಳು ಹೃದಯದಲ್ಲಿ ಹಲವು ವರ್ಷಗಳಿಂದ ರಕ್ಷಿಸಿಟ್ಟ ಮೂರ್ತಿಯನ್ನು ಈ ದಿನ ಅವಳು ವಿಸರ್ಜಿಸಿದಳಂತೆ

ಮಾಧವ —ಬಹಳ ಸಂತಾಪ ಪಟ್ಟಳೇ?

ತಂಗಿ —ಸಂತಾಪವೇಕೆ? ಬಹಳ ಶಾಂತವಾಗಿದ್ದಳು ಮುಖದಲ್ಲಿ ನಗುವಿದ್ದಿತು ಅವಳ ಹೃದಯವನ್ನು ಕಾಡುತ್ತಿದ್ದ ಬಹಳ ದೊಡ್ಡ ಭಾರವೊಂದು ಇಳಿದ ಹೋದಂತೆ ಅವಳು ತೋರುತ್ತಿದ್ದಳು

ಮಾಧವ —ನನಗೆ ಹೂವನ್ನಾಗಲೀ ಕೊಟ್ಟಿರುವಳೇ?

ತಂಗಿ —ನಿನಗಿನ್ನೆಲ್ಲಿಂದ? ಇದ್ದುದನ್ನು ರಾಘವನಿಗೆ ಕೊಟ್ಟು ಬಿಟ್ಟಳಂತೆ

ಮಾಧವ (ಕಷ್ಟದಿಂದ) —ರಾಘವನಿಗೆ?

ತಂಗಿ —ಅಹುದು, ಅವನು ಅವಳಿಗಾಗಿ ಬಹಳ ದಿನಗಳಿಂದ ಹಲುಬುತ್ತಿದ್ದನು

ಮಾಧವ —ಅವನೂ ಒಬ್ಬ ಬ್ರಹ್ಮಚರ್ಯವ್ರತಧಾರಿಯಲ್ಲ

ತಂಗಿ —ಅದು ನಿನ್ನ ಹುಚ್ಚು ಮಾತ್ರ

ಮಾಧವ.—ಯಾವುದು ಹುಚ್ಚು? ಸಂಸಾರದ ಅತ್ಯಂತ ಕ್ಷುದ್ರವಾದ ಸ್ವಾರ್ಥವನ್ನು ಹೃದಯದ ಪ್ರಚಂಡ ನಿಸರ್ಗದ ಯಜ್ಞದಿಂದ ನಿವಾರಿಸುವುದು ಹುಚ್ಚೇ? ಬ್ರಹ್ಮಚರ್ಯ ಹುಚ್ಚು' ಸಂಸಾರಿಯ ಅತ್ಯಂತ ಹೀನ ಸ್ವಾರ್ಥವೇ ಅದನ್ನು ಹುಚ್ಚೆನ್ನಬಲ್ಲುದು. ಗೃಹಸಂಸಾರವನ್ನು ಛಿದ್ರಿಸಿ ವಿಶ್ವಸಂಸಾರದೊಡನೆ ಸಮ್ಮಿಲಿಸಲೆಸಗುವ ಆ ಮಹಾನ್ ವ್ರತವು ಹುಚ್ಚು? ಯಾರು ಹೇಳಿದರು? ಜಗತ್ತಿನಲ್ಲಿ ಅಸಂಖ್ಯ ಪ್ರಾಣಿಗಳ ಸಮುಚ್ಚಯವಿದೆ, ಜಗತ್ತಿನಲ್ಲಿ ಆತ್ಮಸಂರಕ್ಷಣೆಯ ತತ್ವವೇ ಹೇಯಕೃತ್ಯಗಳಿವೆ, ಜಗತ್ತಿನಲ್ಲಿ ಭೋಗದ ಲಾಲಸೆಯ ಉನ್ಮತ್ತತೆಯಿದೆ ಭಸ್ಮಧಾರಿಯು ಸಮ್ಮುಖದಲ್ಲಿ ನಿಂತು ಇವುಗಳಿಗೆ ಅವನತಿಯಲ್ಲಿ ಜಲಾಂಜಲಿಯನ್ನಿತ್ತಿದ್ದು ಹುಚ್ಚೇ? ಲೋಕದ ಬಹ್ಯಂಶ ದುಃಖವು ಈ ನೀಚ ಸ್ವಾರ್ಥದಿಂದ ಹುಟ್ಟಿದೆ, ಮಾನವ ದೌರ್ಬಲ್ಯಗಳಿದೊಂದೇ ಕಾರಣವಾಗಿದೆ, ಈಶನ ವಿಸ್ಮೃತಿಗೆ ಇದೇ ಮೂಲ ಹೇತುವಾಗಿದೆ

ತಂಗಿ —ನಾನು ಹೋಗುತ್ತೇನೆ (ಪ್ರಸ್ಥಾನ)

ಮಾಧವ.—ಆದರೆ ಮನಸ್ಸಿನೊಳಗಿನ ಯುದ್ಧವು ಇನ್ನೂ ಶಾಂತವಾಗಿಲ್ಲ ಶಂಕರಿಯು ನನಗೆ ಕಡೆಯ ಪ್ರಣಾಮವನ್ನು ಕಳುಹಿಸಿದಳು ಅವಳಲ್ಲಿ ಇಷ್ಟು ಬೇಗ ಈ ಪರಿಣಾಮವಾಗಿದ್ದೀತೇ? ನನಗೇನು? ಅತಳು ಸುಖವಾಗಿ ಬಾಳಲಿ ಆದರೆ ಮನಸ್ಸಿನಲ್ಲಿ ವೇದನೆಯು ಹೆಚ್ಚುತಿದೆ ನಾನು ಛೀಕ್ಕಾಬಡ್ಡನು ನನಗೇಕೆ ಇದರಲ್ಲಿ ಸಂತಾಪ? ಸಂಸಾರವು ಕೆಟ್ಟುದು, ಅದು ಸ್ವಾರ್ಥಮಯ. ಕೇವಲ ಸ್ವಪ್ನವಿದೆ. ಆದರೆ, ಆದರೂ ಮನಸ್ಸಿನ ಕಳವಳವು ಹೋಗಿಲ್ಲ-

(ಪ್ರವೇಶ—ವಿಜಯ)

ವಿಜಯ!

ವಿಜಯ:—ನಿನಗೊಂದು ಉತ್ತಮ ವರ್ತಮಾನ ಕೊಡಲೇ ಬಂದಿದ್ದೇನೆ.

ಮಾಧವ —ಅದೇನು?

ವಿಜಯ:—ನಿನಗಿನ್ನೆ ಶಂಕರಿಯ ತೊಂದರೆಯಿಲ್ಲ. ಅವಳ

ಕೆಲವು ದಿವಸಗಳಲ್ಲಿ ಗಳಾದಮೇಲೆ ವಿವಾಹವಾಗು ವರು.

ಬಾಧವ:—ಅಕ್ಕ ಹೇಗಿರಬೇಕು ಎಂದಿದ್ದೆ!?

ವಿಜಯ:—ನನಗೆ ಹುಳವೆಂದು ಕಾಣಬಹುದೆಂದು ಹೇಳ ಬೇಕು ಎಂದೆ ಅಷ್ಟೇ!

ಮಾಧವ:—ನಿನ್ನನ್ನು ಮೂದಲಿಸುವೆಯಾ?

ವಿಜಯ:—ಹಾಗೆ ಹೇಳಬೇಡ. ತಿವಣಾಕಯೂ ನಾನು ಎಂದೆಷ್ಟು ಅಕ್ಕರ್ಗಾಗಿ.

ಮಾಧವ:—ನಿನ್ನ ಪ್ರೇಮಯು ವ್ಯರ್ಥವಾಗುವುದೆಂದು ನೆನಸ ಬೇಡ. ಪ್ರೇಮವು ವಿಶಾಲವಾದುದು: ನನ್ನ ಅಕ್ಕ ವನ್ನೂ ಅಷ್ಟೇ ವಿಶಾಲತೆಗೆ ವಿಸ್ತರಿಸುತ್ತೇನೆ.

ವಿಜಯ:—ಆದರೆ ನಿನ್ನ ಹೃದಯದ ಶ್ಯಾಮವಿನ್ನೂ ನನಗಾಗಿಲ್ಲ. ಇದಲ್ಲವೇ ಅಕ್ಕರ್ಯ?

— ೯ —

ಮೂಧವ ವಿಜಯರು

ಮಾಧವ:—ದೇಹಕ್ಕೆ ಪ್ರಾಣವು ಹೇಗೊ, ಪ್ರಾಣಕ್ಕೆ ಪ್ರೇಮವೂ ಹಾಗೆಯೇ: ಸಹಜವಾಗಿ ನಿನಗರ್ಗವು ರಚಿಸಿಯದಾಗಿ ನನಗೆ ತೀರಿರಲಿಲ್ಲ. ಎಷ್ಟೋ ಬಾರಿ ಪ್ರೇಮಿಸಿದ್ದೇನೆ. ಪೂಜೆಯು ಪ್ರತಿದಿನವೂ ಬೇಕಾದಾಗ ಆವಾಹಿಸಿಯೂ ಬೇಡಾದಾಗ ವಿಸರ್ಜಿಸಿಯೂ ಹೃದಯದ ಸ್ಥೈರ್ಯ ಯಂತೆ ಈ ಪ್ರೇಮದೊಡನೆ ಆಟವಾಡಿದ್ದೇನೆ. ಆದರೆ ಮಹಾಶಕ್ತಿಯನ್ನು ತಿಳಿಯುವ ಮೊದಲೇ ನಾನು ಸ್ವತಿಷ್ಟಯನ್ನು ಕೈಕೊಂಡೆನು: ಸಂಸಾರವು ಕೆಟ್ಟುದು; ಸಂಸಾರವು ಸ್ವಾರ್ಥಮಯವು. ಆದರೆ ಅಂತಹ ಕ್ಷುದ್ರ ಸ್ವಾರ್ಥಗಳು ಜಮೆಗೊಂಡೇ ಈ ವಿಶ್ವವು ರಚನ ವಾಯಿತ್ತಿದೆ. ಅದನ್ನು ಮುರಿಯುವೆನೆಂದು ವಿಶ್ವಸೂತ್ರ ವನ್ನು ಹರಿಯಲು ಹವಣಿಸಿದೆನು. ನನಗಿಂತ ಹುಚ್ಚರು ಇನ್ನಾರು?

(ಪ್ರಥಮ ವಿಜಯ)

ವಿಜಯ:—ಏನನ್ನು ಅಡಿಕೊಳ್ಳುತ್ತಿರುವೆ, ಮಾಧವ?

ಮಾಧವ:—ಚಿಕ್ಕಂದಿನಲ್ಲಿ ತಾಯಿಯ ಮಗ್ಗುಲಲ್ಲಿ ಮಲಗಿ ತಾಯಿಯನ್ನು ಪೀಡಿಸುತ್ತಿದ್ದಾಗ, ನನ್ನನ್ನು ಸಂತವಿಸಲಿ ಕ್ಕೆಂದು ತಾಯಿಯು ನನಗೊಂದು ಕಥೆ ಹೇಳಿದ್ದಳು.

ವಿಜಯ:—ಅದರ ತಿನಪಾಮುಖ ಏನಿತ್ತು?

ವಿಜಯ:—ಎಂತಹ ಕಥೆ!

ಮಾಧವ:—ಒಂದಾನಂದಲ್ಲಿ ಒಬ್ಬ ಅರಸಿದ್ದನು. ಅವನು ತನ್ನ ಪ್ರತಿಜೆಗಳನ್ನು ತೆನ್ನಾಗಿ ಪಟ್ಟಾಳಿಸುತ್ತಿದ್ದನು. ಪ್ರತಿ ಯಾಗಿ ಕಡೆಗೆ ಪ್ರತಿಜೆಗಳೆಲ್ಲರೂ ಅವನ ಮೇಲೆ ಪಂಗೆ ಯೆದ್ದರು.

ವಿಜಯ:—ಆ ಮೇಲೆ?

ಮಾಧವ:—ಕಥೆ ಅಷ್ಟೆ.

ವಿಜಯ:—ಅದರಲ್ಲಿ ವಿಶೇಷವೇನಿದೆ?

ಮಾಧವ:—ವಿಶೇಷವಿದೆಯೋ ಇಲ್ಲವೋ, ಗೊತ್ತಿಲ್ಲ. ಆದರೆ ಅದು ನನ್ನ ನೆನಸಿಗೆ ಬಂತು.

ವಿಜಯ:—ಬಾ, ಸಾಯಂಕಾಲವಾಯಿತು. ಶಿವ ಪೂಜೆಯ ಸಮಯವಾಯಿತು.

ಮಾಧವ:—ಶಿವಪೂಜೆಯೇ? ನಾನು ಶಿವಪೂಜೆಯನ್ನು ಬಿಟ್ಟು ಹಲವು ಸಮಯವಾಯಿತು. ಅವನ ನಿರಾತಿಯ ಆವ ರಣವನ್ನು ನಾನು ಹೊದ್ದುಕೊಂಡಿದ್ದೇನೆ; ಅವನ ಕಾಂತಿಯನ್ನು ನಾನು ನನ್ನ ಹೃದಯದಲ್ಲಿ ಪ್ರತಿಷ್ಠಿಸಿ ದ್ದೇನೆ; ಮತ್ತು ಅವನ ಸ್ವಶಾನವನ್ನು ನನ್ನ ಸುತ್ತಲೂ ರಚಿಸಿ ನನ್ನ ಹತ ಆಕಿಗಳ ಪ್ರೇತಗಳನ್ನಾವಾಹಿಸಿದ್ದೇನೆ. ಇಲ್ಲಿರುವನು ಶಿವ, ನಾನೇಕೆ ಅಲ್ಲಿ ಹೋಗಲಿ?

ವಿಜಯ:—ನೀನೇನಾಗಿದ್ದಿ? ಹೀಗೇಕೆ ಆಡುವಿ?

ಮಾಧವ:—ವಿಕೃ, ನನಗೇನೇ ತಿಳಿಯದು, ಹೃದಯದಲ್ಲಿ ಪ್ರಚಂಡ ಪ್ರಪಾತವಾಗಿ ಅನರೋಹಿಸುತ್ತಿದ್ದ ಪ್ರೇಮ ವನ್ನು ಅಡ್ಡಕಟ್ಟೆ ಬಂಧ ಹಾದಿಗೆ ಹಿಂದಿರುಗಿಸುವೆನೆಂದು ನೆನಸಿದೆ. ಅದು ದಂಡೆಗಳನ್ನೊಡೆದು, ನೆರೆ ಹೊಂದಿ ಹರಿದಿದೆ. ಸಹಜವಾಗಿ ಇಳಿದು ಹರಿದು ಹೋಗಬೇಕಾದುದನ್ನು ಸಂಯಮಿಸುವೆನೆಂದು ತಡೆಗಟ್ಟಿ ಇಲ್ಲದ ಹಾವಳಿಯನ್ನುಂಟುಮಾಡಿಸಿದೆ.

ವಿಜಯ:—ಎಂತಹ ಹಾನಿ!

ಮಾಧವ:—ಎಂತಹ ಹಾನಿಯೆ? ಯಾವುದನ್ನು ಪವಿತ್ರ ವಾಗಿರಿಸುವೆನೆಂದು ಆತಿಸಿ ಹೃದಯವನ್ನು ಶಾಸಿಸಲು ಆರಂಭಿಸಿದನೊ ಅದು ವಸಂತದ ಭ್ರಮರದಂತೆ ಉದ್ದೇಶ ಹೀನವಾಗಿ ವಿಶ್ವವನ್ನು ತೃಷಿತ ನಯನಗಳಿಂದ ಅವ ಲೋಕಿಸುತ್ತಿದೆ. ಯಾವುದನ್ನು ತುಚ್ಛರನ ಮಳುಬದಲ್ಲಿ ನಮೆರ್ಸಿ ಬೆಳಗಿಸುವೆನೆಂದು ನಿರ್ಧರಿಸಿಹನೋ ಅದು ನಾರಿಯ ಕಣಕಲದಲ್ಲಿ ತರಸ್ಕೃತವಾಗಿ ಅಲೆದಾಡು ತ್ತಿದೆ.

ವಿಜಯ:—ನೀನಡಕ್ಕಾಗಿ ಇಷ್ಟು ಉದ್ವಿಗ್ನನಾಗಿರಬೇಕೆ? ನಿನ್ನ ಪ್ರತಿಜ್ಞೆಯನ್ನು ಬಿಟ್ಟುಬಿಡು. ತಿವನು ನಿನಗರ್ಪಿಸಿದ್ದ ವಲ್ಲದುದನ್ನು ಸ್ವೀಕರಿಸನು.

ಮಾಧವ:—ಪ್ರತಿಜ್ಞೆಯನ್ನು ಮರೆಯಬಹುದು. ಆದರೆ ಕಳ ಕೊಂಡುದನ್ನು ಪಡೆಯಲ್ಹಾದೀತೇ? ಒಂದು ಸಮಯ ವಿದ್ದಿತು. ಆಗ ಹೃದಯದ ಪಾವಿತ್ರ್ಯವು ಜೀವನದ ಮೂಲಸೂತ್ರವಾಗಿದ್ದಿತು. ಆಗ ಪ್ರೇಮದ ದುರ್ಬ್ಯಯವು ಜೀವನದ ಹೇಯ ಕೃತ್ಯವಾಗಿ ತೋರುತ್ತಿದ್ದಿತು. ಈಗ, ಹಾಗಿಲ್ಲ. ಪ್ರತಿಬಂಧಿಸುವೆನೆಂದು ಪ್ರೇಮದ ಆಶಯ ವನ್ನು ವಿಕೃಂಖಲ ಮಾಡಿದೆನು. ಅಷ್ಟೆ.

ವಿಜಯ:—ಹತಾತನಾಗಬೇಡ. ಜೀವನವು ಅನಂತವಾಹಿನಿ ಯಾಗಿದೆ. ಅದರ ಗತಿರಚನೆಯು ನಮ್ಮ ಕೈಯಲ್ಲಿದೆ. ಒಂದು ಸಮಯದಲ್ಲಿ ಒಂದು ಬಾರಿ ಅದು ನಕ್ರಗತಿಯ ಸ್ಪೆದರೆ ಅದನ್ನು ಪುನಃ ಸರಿಯಾದ ಪಥಕ್ಕೆ ತಂದಿರಿ ಸುವ ಶಕ್ತಿಯು ನಮ್ಮಲ್ಲಿದೆ. ನಿನ್ನ ಜೀವನವು ಅಪೂರ್ವ ವಾದುದು. ಅದರಲ್ಲಿ ದುಃಖಿಸಿತಕ್ಕದ್ದೇನೂ ಇರುವು ವುದಿಲ್ಲ. ಯಾವುದು ಮಹೋನ್ನತವೊ ಅದನ್ನಾರೋ ಹಿಸಲೆತ್ನಿಸಿದೆ. ನೀನು ಈಗ ಪರಾಜಯಿಯಾದರೂ ಪ್ರಯತ್ನದ ಗೌರವವು ನಿನ್ನಲ್ಲಿದೆ. ಬಾ, ಶಿವನಲ್ಲಿ ಪೂಜೆಯನ್ನು ಸಲ್ಲಿಸಿ ಅವನಡಿಯಲ್ಲಿನ ಪ್ರತಿಜ್ಞೆಯನ್ನು ಹಿಂದೆ ತೆಗೆದುಕೊಳ್ಳುವ.

(ಮಾಧವನ ತಂಗಿ ಪೂಜಾಸಾಹಿತ್ಯಗಳೊಡನೆ ಪ್ರವೇಶ)

ಮಾಧವನ ತಂಗಿ:—ಬರುವೆಯಾ, ಅಣ್ಣಾ.

ಮಾಧವ:—ಎಲ್ಲಿ ಹೊರಟೆ?

ಮಾಧವನ ತಂಗಿ:—ತಿವನ ಮುಂದಿರಕ್ಕೆ ಹೋಗಿ—ನನಗೊಂದು ಅತ್ತಿಗೆಯನ್ನು ಕೊಡು—ಎಂದು ಪ್ರಾರ್ಥಿಸುತ್ತೇನೆ.

ವಿಜಯ:—ಅವನು ಈ ಬಾರಿ "ತಥಾಸ್ತು" ಎನ್ನುವನು: ಮಗು. ಮಾಧವ, ಬಾ.

(ಎಲ್ಲರೂ ಪ್ರಸ್ಥಾನ)

ಹಳ್ಳಿಗಳ ಜೀರ್ಣೋದ್ಧಾರ.

ಲೇಖಕರು:—ಉಳ್ಳಾಲ ಮಂಗೇಶ ರಾವ್, B. A. L. T.

ನ್ಮ ದೇಶದಲ್ಲಿ ಹಳ್ಳಿಗಳೇ ಹೆಚ್ಚು. ಹಳ್ಳಿ ಗಳು ನಿಕೃಷ್ಟತಾವಸ್ಥೆಯಲ್ಲಿವೆ. ಅವುಗಳ ಜೀರ್ಣೋದ್ಧಾರವೇ ನಮ್ಮ ದೇಶದ ಪುರೋ ಭಿವೃದ್ಧಿಗೆ ಕಾರಣವಾಗುವುದು ಎಂದು ಭಾಷಣಗಳು ಲೇಖನಗಳು ಊಟಿಗೆ ಕೆಲವು ವರ್ಷಗಳಿಂದ ಪದೇ ಪದೇ ಎಚ್ಚರಿಸುತ್ತವೆ. ಹಳ್ಳಿಗಳ ನಿಕೃಷ್ಟತಾವಸ್ಥೆಗೆ ಜನಗಳ ಬಡತನವೇ ಕಾರಣವೆಂದು ಹಲ ವರೂ, ಶಿಕ್ಷಣದ ಅಭಾವವೇ ಕಾರಣವೆಂದು ಇನ್ನು ಹಲ ವರೂ, ಕೃಷಿಯ ಹೀನಾವಸ್ಥೆಯೇ ಕಾರಣವೆಂದು ಮತ್ತೆ ಕೆಲವರೂ, ಹಳ್ಳಿ ಕೈಗಾರಿಕೆಗಳ ಪ್ರಳಯವೇ ಕಾರಣವೆಂದು ಇನ್ನು ಕೆಲವರೂ ಪ್ರತಿಪಾದಿಸಿ ಸಪ್ರಮಾಣವಾಗಿ ವಾದಿಸಿ, ಅವಕ್ಕೆ ಪರಿಹಾರವನ್ನು ಸೂಚಿಸಿದ್ದಾರೆ; ಮಾತ್ರವಲ್ಲ, ಅಂಥ ಕುಂದುಕಗಳನ್ನು ನೀಗಿಸುವುದಕ್ಕೆ ಹೃತ್ಪೂರ್ವಕವಾಗಿ ಪ್ರಯತ್ನಿಸುತ್ತಿಲೂ ಇದ್ದಾರೆ. ಆದರೆ ಈ ದುಸ್ಥಿತಿಯ ರಥವು ಇದ್ದಲ್ಲಿಂದ ನುಂದೆ ಕದಲುವುದೇ ಇಲ್ಲ. ರಥ ಎಳೆಯು ವವರೆ "ಹರಹರ ಮಹಾದೇವ" ಅಥವಾ "ಗೋವಿಂದಾ" "ಗೋವಿಂದಾ" ಘೋಷವು ಮಾತ್ರ ಕೇಳುತ್ತದೆ.

ಇದನ್ನೆಲ್ಲ ನೋಡುವಾಗ ಹಲವು ಸನುಗಾ ರರು ಕೂಡಿದ್ದಂದೆ ಚರ್ಮದ ಪದ ಕಟ್ಟಿತೇ ಅಥವಾ ಅವರ ಸಾಹಸವು ಆನೆಯನ್ನು ಸರ್ಸಲು ಯತ್ನಿ ಸಿದ ಕುರುಡರ ಸಾಲಿಗೆ ಬಂತೇ ಎಂಬ ಶಂಕೆ ಬರು ತ್ತದೆ. ಬಾಯಿ ಬಾರದ ಮಗುವಿನ ಅಳುವನ್ನು ನಿಲ್ಲಿಸ ಲಿಕ್ಕೆ ಒಬ್ಬನು ದೃಷ್ಟಿದೋಷ ಪರಿಹಾರಕ್ಕಾಗಿ ವಿಭೂತಿ ಮಂತ್ರಿಸಿಕೊಟ್ಟನು; ಇನ್ನೊಬ್ಬನು ಹೊಟ್ಟೆ ತುಂಬಿನ ಬಾಧೆ ತಗ್ಗಿಸಲೆಂದು ಕ್ಷುದ್ರಮಾದ ರಕ್ತದೋಷವನ್ನು ಕುಡಿಸಿ ಪಟ್ಟು ಮಗದೊಬನು ಮಗುವಿನ ತಿಂಥಿಣಿ ತೀರ್ಥದಿಂದ ಹುಷ್ಟಿದ್ದಾರೆ ಎಂದು ಏಸು ಎಳ್ಳಷ್ಟನ್ನು ಕಾಸು ಕುರುವು; ಮತ್ತೊಬ್ಬನು ಗೃಹದೋಷ ಪರಿಹಾರಕ್ಕೆಂದು ತಾಯಿತ ಮತ್ತು ಸೊಂಟಕ್ಕೆ ಕಟ್ಟಲು ಕಪ್ಪಡವು, ಅಷ್ಟರಲ್ಲಿ ಮಗುವಿನ ಅಳುವು ನಿಲ್ಲಲಿಲ್ಲ. ಮಗು ಸಕಾಲದಲ್ಲಿ ತಾಯಿಯ ಹಾಲು ಸಿಗದ್ದರಿಂದ ರೇಗಿ ಸಹಿಸಲಾರದೆ ಚಿಂಡಿ ಹಿಡಿದು ಅಳುತಿತ್ತು ಎಂಬುದನ್ನು ತಾಯಿಯು ಕಳ್ಳನೆ ಕಂಡು ಹಿಡಿದ ಳಂತೆ. ಹೀಗೆ ಹಳ್ಳಿಗಳ ನಿಜವಾದ ನಿಕೃಷ್ಟತಾವಸ್ಥೆಗೆ ಮೇಲಿನ ಕಾರಣಗಳು ಒಂದೊಂದಾಗಿಯೇ ಸಪ್ರಮಾಣ ಗಳೇ ಆಥವಾ ಎಲ್ಲವುಗಳೂ ಕೂಡಿದ್ದು ಅವುಗಳ ಜತೆಯಲ್ಲಿ ಇದು ವರೆಗೆ ಅವ್ಯಕ್ತ ಸ್ವರೂಪದಲ್ಲಿರುವ ಮತ್ತೊಂದು ಬಲ ವಾದ ಕಾರಣವಿದೆಯೇ ಎಂದು ಹುಡುಕಬೇಕಾಗಿದೆ. ಅದಕ್ಕೆ ಹಿಂದಿನ ಪರಿಹಾರಗಳ ಫಲಿತಾಂತವೇನಾಯಿತು ಎಂದು ಟೀಕಿಸೋಣ.

ಬಡತನವು ಕೃಷಿಯ ಹೀನಾವಸ್ಥೆಯಿಂದಾಯಿತೆಂದು ನವಕುಧಾರಕೆಗಳನ್ನು ಬೋಧಿಸುವುದಲ್ಲದೆ ಸರಕಾರವು ಹೇರಳ ಖರ್ಚು ಮುಟ್ಟುಸು ವಂಕೋಧನ ಕ್ಷೇತ್ರಗಳನ್ನೊ ಬೇಕುಬೇಕಾದ ತಜ್ಞ ನಿಬಂಧಿಯನ್ನೊ ನರ್ವದಿಸಿದರು. ಆದರೂ ಕೃಷಿಯಲ್ಲಿ ವಿಶೇಷ ಸುಧಾರಣೆ ಸರ್ವ ವ್ಯಾಪಿ ಯಾಗಿ ಕಂಡುಬರಲಿಲ್ಲ. ಶಿಕ್ಷಣದ ಅಭಾವವನ್ನು ಹೋಗ ಲಾಡಿಸುವುದಕ್ಕೆ ವ್ಯಾಪ್ತಿಮಿಕ ಶಾಲೆಗಳ ಸಂಖ್ಯೆ ಹೇರಳ ಖರ್ಚು ಮುಟ್ಟುಸು ಹೆಚ್ಚಿಸಲಾಯಿತು. ಆದರೂ ಇನ್ನೂ ಬರೇ ಸೇಕಡಾ 7ರಷ್ಟು ಮಂದಿ ಗಂಡು ಮಕ್ಕಳು ಕಾಲೆ ಯೊಳಕ್ಕೆ ಕಾಲಿಡುತ್ತಲಿದ್ದಾರೆ. ಈಳಿದ 93 ಮಂದಿಗೆ ಅಂಥಾ ಸೌಕರ್ಯಗಳನ್ನೇ ಹೆಚ್ಚಿಸಲು ಹೋದರೆ ಇನ್ನೆಷ್ಟೊ ಕಾಲ ಬೇಕಾದೀತು. ಅದಕ್ಕೆ ಬೇಕಾದ ಅಸಂಖ್ಯಾತ ದ್ರವ್ಯ ವೆಚ್ಚದಿಂದ ಸರಕಾರವು ದಿವಾಳಿಯಾದೀತು. ಈಗಿನ ಸ್ಥಿತಿ ಯಲ್ಲಿಯೂ ಕಾಲೆಗೆ ಹೋಗುವವರ ಪೈಕಿ ಸೇಕಡಾ 60ಕ್ಕೆ ಮಿಕ್ಕಿದವರು ಎರಡೇ ವರ್ಷಗಳೊಳಗೆ ಶಾಲೆಯನ್ನು ಬಿಟ್ಟು ಬಿಡುತ್ತಾರೆ. ತೊಲೆಬುಗಳಿಗೆ ಹೋಗುವ ಸಂಖ್ಯೆ ಅಂತೂ ತೀರಾ ಕಡಿಮೆ. ತೊಲೆಬುಗಳ ಮುಪ್ರಾಧಾರಣೆ ಮಾಡಿ ಪದವಿ ಕಡಾ ನಿರುದ್ಯೋಗಿಗಳ ಸಂಖ್ಯೆಯನ್ನು ಮಾತ್ರವೇ ಹೆಚ್ಚಿಸುತ್ತಿದ್ದಾರೆ.

ಪ್ರವ್ಯಾಭಾವನ್ನು ಹೋಗಲಾತಿಸಲಿಕ್ಕೆ ಸಹಕಾರ ಸಂಘಗಳು ಎದ್ದುವು. ಹವಗಾತಲದ ಹಿಮ ಕರಗಿದಾಗ ಗಂಗಾ ನದಿಯಲ್ಲಿ ಉಕ್ಕಿ ಬರುವ ಪ್ರವಾಹದ ಬದಲಾಗಿ ಬೇಸುಗೆಯಲ್ಲಿ ಅರೆ ಬತ್ತಿದ ಹೊಳೆಗಳಲ್ಲಿ ಪಟ್ಟಿನ ಭಟ್ಟಗಳ ಬದಿಯಲ್ಲಿ ಬಿದ್ದ ಮಳೆಯಿಂದ ನೆರೆ ನೀರು ಉಕ್ಕಿದಂತೆ ದ್ರವ್ಯ ಸಹಾಯವು ಪ್ರವಹಿಸಿತು. ನೆರೆ ನೀರಿಗೆ ತೇಲ ಬಂದ ಕಟ್ಟಿಗೆ ಚೂರುಗಳು ಮರಮುಟ್ಟುಗಳು ಇವು ಗಳಿಂದ ಕೆಲವರಿಗೆ ಪ್ರಯೋಜನ ಸಿಕ್ಕಿದ್ದೇನೊ ನಿಜ. ಆದರೆ ಅದರೊಂದಿಗೆ ತೇಲ ಬಂದ ಮೃಗಪಶುಗಳ ಹೆಣಗಳಿಂದ ದುರ್ವಾಸನೆ ಹೊರಟು ಸಾಂಕ್ರಾಮಿಕ ರೋಗಗಳಿಗೆ ಎಡೆ ಕೊಟ್ಟುದಲ್ಲದೆ ಬಿದ್ದು ಹೋದ ಮನೆ ಮಾರುಗಳಿಗೆ ಮಿತಿಯೇ ಇಲ್ಲ. ಹಳ್ಳಿ ಕೈಗಾರಿಕೆಗಳು ನಿರ್ನಾಮವಾದುವು ಎಂಬ ದರಿಂದ ಅವನ್ನು ಚೇತರಿಸುವುದಕ್ಕೆ ಒಂದು ಕಡೆ ಮಹಾತ್ಮಾ ಗಾಂಧಿಗಳೂ ಅವರ ಅನುಯಾಯಿಗಳೂ ತದೇಕ ಚಿತ್ತ ದಿಂದ ಸಾಹಸಗೈಯ್ಯುತ್ತಿದ್ದಾರೆ. ಇನ್ನೊಂದು ಕಡೆ ಸರ ಕಾರವು ಚಿಕ್ಕ ಪುಟ್ಟ ಕೈಗಾರಿಕೆಗಳಿಗೆ ಸಹಾಯಮಾಡಲು ಶಿಕ್ಷಣ ಶಾಲೆಗಳನ್ನೂ, ದ್ರವ್ಯ ಸಹಾಯವನ್ನೂ ನರ್ವದಿ ಸುತ್ತಿದೆ. ಆದರೆ ದರಿದ್ರ ನಾರಾಯಣನು ಬೆನ್ನು ಬಿಟ್ಟದ್ದೇ ಇಲ್ಲ. ಹೀಗಿದ್ದರೆ ನಮ್ಮ ದೇಶಕ್ಕೆ ಸುವರ್ಣ ಯುಗವು ಇನ್ನೂ ಬರಲಾರದೇ? ಜನಗಳು ಸುಖಜೀವನವನ್ನು ಹೊಂದುವ ಕಾಲವು ಬರಲಾರದೇ ಎಂಬ ಪ್ರಶ್ನೆಯು ಸಹಜ ವಾಗಿ ಹುಟ್ಟುತ್ತದೆ. ನಾವು ನಿರಾಶಾವಾದಿಗಳಲ್ಲ. ನಮ್ಮಲ್ಲಿ ಯೋಗ್ಯತೆ ಬಂದರೆ ಸುವರ್ಣ ಯುಗವು ಬಂದೇ ಬರುತ್ತು ದೆಂದು ನಮ್ಮ ಅಭಿಪ್ರಾಯ. ಹಾಗಿದ್ದರೆ ಅಂಥಾ ಯೋಗ್ಯತೆ ಬರಲು ನವುನಾಡುಬೇಕೆಂದು ಇನ್ನೊಂದು ಪ್ರಶ್ನೆ. ಯಾವ ದೊಂದು ಮಹತ್ಕಾರ್ಯವು ಫಲಿಸಬೇಕಾದರೆ ಮೂರು ಸಹಾಯ ಸೌಕರ್ಯಗಳು ಬೇಕು—ಮನ, ಜನ, ಧನ. ಮೊದ ಲಿನವು ಎರಡು ಇದ್ದರೆ ಮೂರನೆಯದನ್ನು ಸಂಪಾದಿಸುವುದು ಕಷ್ಟವಲ್ಲ. ಮನ ಇನ್ನೂನೆಗೆ ಬಿಟ್ಟಿಯಾಗಿದೆ. ರಾಜ್ಯಗಳ

ಮೂರು ಅಂಗಗಳು–ರಾಜನು, ಪ್ರಜೆಗಳು, ಕೋಶ. ರಾಜನಿಗೆ ಮೊದಲನೆ ಸ್ಥಾನ ಸಲ್ಲುತ್ತಿದೆ. ಯಾಕೆಂದರೆ ಆತನನ್ನೇ ಇನ್ನೆರಡನ್ನು ವ್ಯವಸ್ಥಿತ ರೀತಿಯಿಂದ ಇಟ್ಟು ಪಾಲಿಸುವ ಕರ್ತವ್ಯವು. ಹಾಗೆಯೇ ಹಳ್ಳಿಯ ಸುಧಾರಣೆಗೆ ತಿಂವಾ ಸಮಾಜವನ್ನೆಗೆ ಮನಸ್ಸೇ ರಾಜನು, ಅವನ ನಿರೂಪವನ್ನೆ ಜಾರಿಗೆ ತರಲುಳ್ಳ ಸಾಹಸಿಗಳಾದ ನಿಷ್ಕಾಮ ಪ್ರೇಮಿ ಜನಗಳೇ ಪ್ರಜೆಗಳು, ಧನವು ಕಾರ್ಯಸಾಧನೆಗೆ ಬೆಂಬಲ

ಮನಸ್ಸಿಗೆ ಇಲ್ಲಿ ವಾಶಸ್ಯ ಕೊಟ್ಟ ಮೇಲೆ ಅದು ಏನು ಮಾಡಬೇಕು ಎಂಬುದನ್ನು ವಿಚಾರಿಸೋಣ ಸಮಾಜ ವ್ಯವಸ್ಥೆಗೆ ಏನು ಬೇಕು ಎಂದು ಮನಸ್ಸು ಇನ್ನೂ ಸರಿಯಾಗಿ ವಿಚಾರಿಸಲು ತೊಡಗಿಲ್ಲ. ಆದರೆ ಜನಸಾಮಾನ್ಯರು ತಮ್ಮ ಸುಖ ಜೀವನವು ಏತರಿಂದಾಗಬೇಕೆಂದು ಇನ್ನೂ ಚಿಂತಿಸಲು ತೊಡಗಲ್ಲ ಅರಿತವರು ಹೇಳಿದ್ದಾರೆ, ಆದ್ದರಿಂದ ಅದು ಅನುಸರಣೆಗೆ ಯೋಗ್ಯ ಎಂಬ ಅಂಧಭಕ್ತಿಯು ಈ ಕಾಲಕ್ಕೆ ವ್ಯಯೋಪಯುಕ್ತವಿಲ್ಲ ವ್ಯಕ್ತಿಯೊಬ್ಬನು ತನ್ನ ಪ್ರಜ್ಞೆಗೆ ವಿಚಾರಮಾಡಿ ಯೋಗ್ಯಾಯೋಗ್ಯತೆಯ ತುಲನೆ ಮಾಡಲು ಶಕ್ತನಿರಬೇಕು, ತನ್ನತಾನಿರತೆರೆ ತಾನಾದಾನು, ತನ್ನ ತಾ ಮರಿತರೆ ತಾ ಹೋದಾನು—ಎಂಬದನ್ನು ಆತನಿ ತಿಳಿದುಕೊಳ್ಳಬೇಕು ಇದಕ್ಕೆ ಸ್ವಾಕಪ್ಪ ಬುದ್ಧಿ ವಿಕಾಸವಾಗಬೇಕು ಮನಸ್ಸಿಗೆ ಸರಿಯಾದ ಶಿಕ್ಷಣವಾಗಬೇಕು ಇಂಥ ಶಿಕ್ಷಣವೇನು? ಅದನ್ನು ಹೇಗೆ ಕೊಡಬೇಕು? ಎಂದು ತಿಳಿಯಲು ಅಸಕ್ತಿಯುಳ್ಳ ಜನರಿದ್ದರೂ ಅವರಿಗೆ ತಕ್ಕ ಟ್ರೈನಿಂಗ್ ಶಾಲೆಗಳು ಬೇಕು ಇವು ನಿಶ್ಚಿತವಾದ ಮೇಲೆ ಅವುಗಳ ಹಿಂದೆಯೇ ದ್ರವ್ಯಸೌಕರ್ಯವು ಸಿಗಲಿಕ್ಕೆ ಏನೇನೂ ತೊದಕಾಗಲಾರದು

ಸಾಮಾನ್ಯ ಈಗಿನ ಶಿಕ್ಷಣದಲ್ಲಿ ಈ ಬಗೆಯ ಉದ್ದೇಶವೇ ಇಲ್ಲ ಅದು ಬರಿಯ ಅನುಕರಣಶಕ್ತಿಯ ಬಲದಿಂದಲೇ ನಡಿಯುತ್ತಿದೆ ಅಂದರೆ ಸ್ಥಿಮಾಯಿತ ಜವಾನು ಅಮೇರಿಕಗಳಲ್ಲಿ ಏನು ಮಾಡಿದ್ದಾರೆ ಅದೇ ನಮಗೆ ಆದರ್ಶ, ಅದೇ ನನ್ನ ಮುಕ್ತಿಯ ಸೋಪಾನವೆಂದು ಭಾವಿಸುತ್ತೇವೆ ಮತ್ತು ಅದನ್ನೇ ಎಾಲ್ಯದಿಂದಲೇ ಅಂದರೆ ಸಕ್ಕರೆ ನೀರಿನ ಬತ್ತಿಯೊಡನೆ ಕುಡಿಸಲು ಯತ್ನಿಸುತ್ತೇವೆ ಇದರಿಂದ ವರಾನಾವೇನು? ತೀರಾ ಅಜ್ಞಾನದ ಅಂಧಕಾರವನ್ನು ಕಳೆದುಕೊಂಡು ಶಿಕ್ಷಣದ ಬೆಳಕಿಗೆ ಬರುವಷ್ಟರಲ್ಲಿಯೇ ಅಂಧವರಿಗೆ ತಾಲೂಕು ಬೋರ್ಡುಗಳಲ್ಲಿ ರಾಜಕೀಯ ಸಭೆಗಳಲ್ಲಿ ಇಂತಿಷ್ಟು ಸ್ಥಾನಗಳು ಸಿಗಬೇಕು, ಪ್ರಾಂತಿಕ ಮತ್ತು ವರಿಷ್ಠ ಎಗ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಇಂತಿಷ್ಟು ಸ್ಥಾನಗಳಿಗೆ ತನ್ನ ಹೆಸರುಪಟ್ಟಿ ಹಚ್ಚಬೇಕು ಎಂಬದೇ ಜಪ ಇದರಿಂದಲೇ ಅವರು ಜೀವನ್ಮುಕ್ತರಾಗುವರೆಂಬ ಮಾಯೆಯ ಭ್ರಮೆಯು ಸಕ್ಕರೆ ನೀರಿನ ಬತ್ತಿಯಲ್ಲಿ ಚಿಮುಕಿಸಿದ ಅಫೀಮಿನ ಬಿಂದುಗಳ ವಿಷದಂತೆ ಸೇರಿ ನರನಾಡಿಗಳಲ್ಲಿಯೂ ಪಸರಿಸ ತೊಡಗಿದೆ ಆಹಾರದ ಬದಲಾಗಿ ಎಾಲ್ಯದಲ್ಲಿ ತಾಯಿತ ದಿಗಳು ತಮ್ಮ ಮುಡಿತದ ಕೆಲಸಕ್ಕೆ ಮಗುವಿನ ಅಳುವಿನಿಂದ ಅಡ್ಡಿಯಾಗದಂತೆ ಚಿಮಿಕಿಸಿದ ಅಫೀಮೇ ಈಗ ತನ್ನ ವಿಕಾರ ಸ್ವರೂಪವನ್ನು ತೋರಿಸಿಕೊಳ್ಳಹತ್ತಿದೆ ತನಗೆ ತೃಪ್ತಿವಾದಿರೆಂದು ಬೆದರಿಸುತ್ತಿದೆ ಇದೇ ಸುಖಜೀವನದ ನರಾಕಾಷ್ಠೆಯೆಂದು ಅವರ ಮತ ಬೋಧಿಸುವವರೂ ಅದನ್ನೇ ಬೋಧಿಸುತ್ತಿದ್ದಾರೆ

ರಾಷ್ಟ್ರಹಿತಕ್ಕೆ ಜನಾಂಗದ ಶಾಂತಿ ಸುಖಗಳಿಗೆ ಅಧಿಕಾರಗಳ ಬರೀ ದ್ರವ್ಯಾ ಕಾಂಕ್ಷೆಯೇ ಹಿತವಾದದ್ದೋ ಅಥವಾ ಬೇರೆ ವಿಧಾನಗಳುಂಟೆ? ಇದ್ದರೆ ಅವು ಏನು ಎಂಬುದೇ ನ್ಯಾಯವಾದ ಶಿಕ್ಷಣದ ವಿಚಾರವಿರಬೇಕು 'ದಖ್ಖನ್ನಿನ ಇತಿಹಾಸ'ವೆಂಬ ತನ್ನ ಗ್ರಂಥದಲ್ಲಿ ಜೆ ಡಿ ಗ್ರಿಬ್ಬಲ್ ಎಂಬಾತನು ಹೀಗೆ ಅಂದಿದ್ದಾನೆ—"ಹಿಂದೂ ಮುಸಲ್ಮಾನರ ರಾಜ್ಯ ಸಂಪಾದನೆಯ ಜಗಳದ ವರಾನಾಮದಲ್ಲಿ ಒಂದು ವಿಚಿತ್ರ ಲಕ್ಷಣವಿದೆ ಹಿಂದೂ ರಾಜ್ಯ ಸ್ಥಾಪನೆ ಯಾದೊಡನೆ ಕೆಲವು ವರ್ಷಗಳಲ್ಲಿಯೇ ಅಲ್ಲಿ ಧನ ಲಕ್ಷ್ಮಿಯು ನಲಿಯತೊಡಗುತ್ತಾಳೆ ಈ ಧನಕಾಂಕ್ಷೆಯಿಂದ ಮುಸಲರ ದಂಡು ಒಮ್ಮೆ ಪ್ರವೇಶಿಸಿದೊಡನೆ ಕಾದ್ಗಿಚ್ಚು ಬಡಿದಂತಾಗಿ ಸಂಪತ್ತೆಲ್ಲವೂ ಸುಟ್ಟು ಬೂದಿಯಾಗುತ್ತದೆ ಅನಂತರ ಪುನಃ ಹಿಂದೂ ರಾಜ್ಯಸ್ಥಾಪನೆ ಯಾದೊಡನೆ ಯಥಾಪೂರ್ವಕವಾಗಿ ಧನಲಕ್ಷ್ಮಿಯು ಪ್ರವೇಶವಾಗುತ್ತದೆ" ಇದಕ್ಕೆ ಅತನು ಕಾರಣಗಳನ್ನು ಕೊಡುತ್ತಾನೆ. "ಹಿಂದೂ ರಾಜರ ಕಾಲದಲ್ಲಿ ಕೃಷಿ ಕೈಗಾರಿಕೆಗಳಿಗೆ ಧಾರಾಳವಾದ ಪ್ರೋತ್ಸಾಹ ಸಿಕ್ಕಿ ದೇಶದಲ್ಲಿ ಶಾಂತಿ ಇದ್ದುದರಿಂದಲೇ ಧನಲಕ್ಷ್ಮಿಗೆ ಒಳಕ್ಕೆ ಪ್ರವೇಶಮಾಡಲು ಅವಕಾಶ ದೊರೆಯುತ್ತಿತ್ತು. ಮುಸಲ್ಮಾನರು ಎಲ ವನ್ನೂ ದೋಚಿಕೊಳ್ಳುವುದು ತಮ್ಮ ಧ್ಯೇಯವಾಗಿಟ್ಟುಕೊಂಡದ್ದರಿಂದ ಶಾಂತಿಕಾಲದಲ್ಲಿ ಹುಲುಸಾಗಿ ಬೆಳೆಯತಕ್ಕ ಕೃಷಿ ಕೈಗಾರಿಕೆಗಳಿಗೆ ನೆಡೆ ಸಿಗುತ್ತಿರಲ್ಲ."

ಇವು ಬಹಳ ಅರ್ಥಪೂರಿತವಾದ ಮಾತುಗಳು ಕ್ರಮತಪ್ಪಿ ವರ್ತನೆ ಕೈಕೊಂಡ ಹಿಂದು ರಾಜ್ಯಗಳು ಮಣ್ಣು ಮುಕ್ಕುವುದಕ್ಕೂ ಇದೇ ಕಾರಣ ದೇಶದಲ್ಲಿ ಶಾಂತಿ ನೆಲೆಸಬೇಕಾದರೆ ದ್ರವ್ಯಕಾಂಕ್ಷೆಗೆ ಮಿತಿ ಇರಬೇಕು ಲಲಿತ ಕಲೆಗಳಿಗೆ ಅವಕಾಶ ಸಿಗಬೇಕು ಮನಸ್ಸು ಇತರರ ದ್ರವ್ಯಾಪಹಾರ ಕ್ಷಿತರ ಸುಖಾಪಹಾರದ ಕಡೆಗೆ ಇಣುಕಿ ನೋಡಬಾರದು ಆದರೆ ಈಗಿನ ಶಿಕ್ಷಣ ಕ್ರಮವು ಹೇಗೆ ದ್ರವ್ಯಸಂಪಾದನೆ ಹೆಚ್ಚಿಸಬೇಕು, ಹೇಗೆ ಅಧಿಕಾರವನ್ನು ತನ್ನ ಕೈವಶಮಾಡಿಕೊಳ್ಳಬೇಕು ಎಂಬ ದುರಾಶಾಜ್ವಾಲೆಗೆ ಒಣಗಿದ ಕಟ್ಟಿಗೆಯನ್ನು ಒಟ್ಟುವಂತಿದೆ ಹೀಗಾಗಿ ಹಳ್ಳಿಯಿಂದ ಅಲ್ಪ ಸ್ವಲ್ಪ ಸುಶಿಕ್ಷಿತರೆನ್ನಿಸುವವರು ಈ ದ್ರವ್ಯಸಂಪಾದನೆಯ ಜಾಲಸೆಯಿಂದ ಹಳ್ಳಿಗಳನ್ನು ತೊರೆದುಬಿಟ್ಟು ಪೇಟೆಪಟ್ಟಣಗಳಲ್ಲಿ ನೆಲೆಕೊಳ್ಳುತ್ತಿರೆ ಇದರಿಂದ ಹಳ್ಳಿಗಳಲ್ಲಿ ವಿದ್ಯೆ ಇಲ್ಲದ ಬಡಜನರೆಂಬ ಹೊಟ್ಟು ಮಾತ್ರ ಉಳಿಯುತ್ತಿದೆ ಪೇಟೆಗೆ ಬಂದ ಸುಶಿಕ್ಷಿತರೆಂಬ ಧಾನ್ಯವು ಇಲಿ ಹೆಗ್ಗಣಗಳ ಪಾಲಾಗಿ ರೂಪಗೆಟ್ಟು ಸುರಳಿಹೋಗುತ್ತದೆ ಈ ನಷ್ಟವನ್ನು ತಡೆಗಟ್ಟಿ ಹಳ್ಳಿಯ ಧಾನ್ಯವು ಹಳ್ಳಿಯಲ್ಲೆ ಉಳಿದು ಅಲ್ಲಿ ಉಂಡು ತಿಂದು ಉಳಿದುದು ಮಾತ್ರವೇ ಪೇಟೆಗಳಿಗೆ ಬಂದಿದ್ದರೆ ಆ ಧಾನ್ಯಕ್ಕೆ ಬೆಲೆಯೂ ಚೆನ್ನಾಗಿ ಬರುತ್ತಿತ್ತು. ಹಳ್ಳಿಯಲ್ಲಿ ಆಹಾರದ ಬಡತನವಿರುತ್ತಿದ್ದಿಲ್ಲ

ಇಂಥ ಶಿಕ್ಷಣವು ಒಂದು ಕಾಲದಲ್ಲಿ ನಮ್ಮ ದೇವಸ್ಥಾನ ಮಠಗಳಲ್ಲಿ ದೊರೆಯುತ್ತಿತ್ತು. ಈಗ ಅಂಥ ಕ್ಷೇತ್ರಗಳಲ್ಲಿ ದುರಳಮಾನ ದುರ್ವಿಚಾರದ ಕಾಡು ಬೆಳೆದು ಒಂದು ಕಾಲದಲ್ಲಿ ಅವು ವ್ಯವಸ್ಥೆಯ ಭೂಮಿಯಾಗಿದ್ದುವೋ ಎಂಬ ಸಂದೇಹ ಬರುತ್ತಿದೆ. ಅದಕ್ಕಾಗಿ ಜನರು ಅವುಗಳ ಬಳಿಯಲ್ಲಿ ನವಶಿಕ್ಷಣದ ಹೊಸಗದ್ದೆಗಳನ್ನು ಬಹಳ ಸಾಹಸದಿಂದ ಮಾಡಿಕೊಂಡಿದ್ದಾರೆ ಅದಕ್ಕೆ ಮೊದಲು ಈ ಕಾಡನ್ನು ಸವರಿ ಹಿರಿಯರ ಆಸ್ತಿ ಏನಿತ್ತು ಎಂಬದನ್ನು ಶೋಧಮಾಡುವ ಪ್ರಸ್ತಾವನೆಗೆ ಹೋಗಲೇ ಇಲ್ಲ ಈ ಕಾಡು ದುಷ್ಟ ಮೃಗಗಳ ಆವಾಸದ ಮನೆಯಾಗಿ ಮೊದ ಮೊದಲು ಆ ಮೃಗಗಳಿಂದ ಈ ಹೊಸ ಪೈರು ಕೈಗೆ ಸೇರುತ್ತಿದ್ದೇ ಇಲ್ಲ. ಆದರೆ ಕಾಡಿನ ಕಟ್ಟಿಗೆಯಾದರೂ ಮರಮಟ್ಟಾದರೂ ಸಿಗುತ್ತಿತ್ತು ಅದು ಬಾಧಕರವೆಂದು ಅದನ್ನೆ ಸುಟ್ಟುಬಿಡುವ ತವಕವು ಉತ್ಸಾಹಿಗಳಿಗೆ ಉಂಟಾಯಿತು ಆ ಕಾಡಿನಲ್ಲಿ ನಾಚಿಕೆಯುಳ್ಳ ನಾತದ ಗಿಡ ಇದ್ದುದು ಗೊತ್ತಾದುದೇ ಇಲ್ಲ ಮರಮಟ್ಟಿನ ಮರಗಳೂ ಗಂಧದ ಮರಗಳೂ ಸುಟ್ಟು ಭಸ್ಮವಾದುವು ಆದರೆ ಗೊಬ್ಬರ ವಿಟ್ಟಂತಾಗಿ ಆ ನಾಚಿಕೆಯುಳ್ಳ ನಾತದ ಗಿಡಗಳು ಈಗ ದಿಗಂತದ ವರೆಗೆ ವ್ಯಾಪಿಸಿ ಸರ್ವನಾಶಕ್ಕೆ ಕಾರಣವಾಗಿವೆ ಮರಮಟ್ಟು ಸೊಪ್ಪು ಗೊಬ್ಬರಕ್ಕೆ ಆಗುವ ಮರಗಳನ್ನು ಕಾಡಿಟ್ಟು ಉಳಿದುವುಗಳನ್ನು ಸಮೂಲವಾಗಿ ಕಿತ್ತುಬಿಟ್ಟು ಭೂರಿ ಹಿರಿಯರ ಆಸ್ತಿ ಚೆನ್ನಾಗಿ ಫಸಲು ಕೊಡುತಿತ್ತು ಆದರೊಂದಿಗೆ ಹೊಸಾಗಮೆ ಭೂಮಿಯನ್ನು ರೂಪಿತಕ್ಕೆ ತರಬಹುದಿತ್ತು ಈಗ ನಮ್ಮ ದೇಶದ ವಾಂಙ್ಮಯ ವಿಜ್ಞಾನ ಶಾಸ್ತ್ರಗಳಲ್ಲಿ ಉತ್ಕೃಷ್ಟವಾದುದೊಂದಿಗೆ ಪಾಶ್ಚಾತ್ಯ ಉತ್ಕೃಷ್ಟ ವಿಚಾರಗಳನ್ನು ಕಾಲಾ ಪರೀಕ್ಷೆಗಳ ನಿರ್ಬಂಧ ವಿಲ್ಲದೆ ಕಲಿಸುವ ವ್ಯವಸ್ಥೆಯು ಡಾ। ರವೀಂದ್ರನಾಥರ ಬೊಲ್ಪುರ ಆಶ್ರಮದಲ್ಲಿ ಮಾತ್ರ ನಡೆಯುತ್ತಿದೆ ಅಲ್ಲಿಂದ ಸುಶಿಕ್ಷಿತರಾದ ವಿದ್ಯಾರ್ಥಿಗಳು ಹಳ್ಳಿಹಳ್ಳಿಗಳಲ್ಲಿ ವಾಸ ಮಾಡತೊಡಗಿ ಇನ್ನಸಾಮಾನ್ಯರಿಗೆ ಮಾರ್ಗದರ್ಶಕರಾದರೆ ಹಳ್ಳಿಯ ಚಿತ್ರೋದ್ಧಾರವಾಗುವುದು ನಿಸ್ಸಂದೇಹ. ಆದರೆ ಈ ಕಾಲವು ಬೇರೆಯೇ ಬಂದಿತೆ!

ಹಿಂದೂ-ಮುಸಲ್ಮಾನ ಭೇದಗಳು.

ಲೇಖಕರು.–"ಹಿಂದೀಯನು."

ಹಿಂದೂ ಮುಸಲ್ಮಾನ ಭೇದಗಳು ಇಂದಿನವುಗಳಲ್ಲ ಮುಸಲ್ಮಾನರು ಹಿಂದೂ ಸ್ಥಾನಕ್ಕೆ ದಂಡೆತ್ತಿ ಬಂದಂದಿನಿಂದಲೂ ಈ ಸಮಸ್ಯೆಯು ಇತ್ತು. ಆದರೆ ಪೂರ್ವದ ಆ ಸಮಸ್ಯೆಗೂ ಇಂದಿನ ಸಮಸ್ಯೆಗೂ ಬಹಳ ವ್ಯತ್ಯಾಸವಿದೆ ಪೂರ್ವದಲ್ಲಿ ಅದು ಸ್ವತಂತ್ರ ಸಂಗಡಗಳೊಳಗಿನ ಜಗಳವಾಗಿತ್ತು ಅದು, ಒಂದು ಬಾರಿ ಮುಸಲ್ಮಾನರ ಪಟಬೇ ಗೆದ್ದತೆಂದರೆ ಒಂದು ಬಾರಿ ಹಿಂದೂಗಳೂ ತಮ್ಮ ಶಕ್ತಿಯನ್ನು ತೋರಿಸಬಲ್ಲರಾಗುತ್ತಿದ್ದರು ಆದರೆ ಒಂದು ಖಂಡಿತ—ಹಿಂದೂಗಳೊಳಗಿನ ಮತಾಂತರ ಸಂಬಂಧವಾದ ಬರೇ ಕ್ಷುದ್ರವೂ ಸಂಕುಚಿತವೂ ಆದ ನಿಷೇಧವು ಸಾಂಪ್ರದಾಯಿಕವಾದಿಗಳ (Orthodox) ಕಣ್ಣು ಮುಚ್ಚಿಬಿಟ್ಟಿದ್ದಲ್ಲಿವಾದರೆ ಹಿಂದೂ–ಮುಸಲ್ಮಾನ ಸಮಸ್ಯೆಯು ಇಂದಿಗೆ ಇಷ್ಟು ಬಿಗುವಿರುತ್ತಿರಲಿಲ್ಲ—ಕಾಫರಕ, ಮೂರೂ ಎಂಬ ಉದ್ಗಾರದಿಂದ ಈಗ ಮುಂದೆ ಬರುವವರೆಲ್ಲಿಸ್ಲೊ ಮುಂದಿ ತನ್ನ ಪೂರ್ವಜರ ಮತವಿದು, ಇದನ್ನು ರಕ್ಷಿಸಲು ಯಾವತ್ತನ್ನೂ ತಾನು ಬಲಿಯೀಯುವೆನೆಂದು ಅದೇ ವಾಕ್ಯವನ್ನು ನಿರೋಧಿಸಲು ಮುಂದಾಗುತ್ತಿದರು

ಇಂದಿನ ಸಮಸ್ಯೆಯಲ್ಲಿ ಆ ಪೂರ್ವದ ಹಿಂದೂ ಮತವನ್ನು ರಕ್ಷಿಸುವೆನೆಂಬ ಶಿವಾಜಿಯಂತಹ ವೀರ ಸ್ವತಂತ್ರಯೋದ್ಧರಿಲ್ಲ, ಹಾಗೆಂದು ಮುಸಲ್ಮಾನ ಮತವನ್ನು ದ್ವೇಕ ಟಿಸಬೇಕೆಂಬ ಲವಲವಿಕೆಯುಳ್ಳ ಅವರಂಗಜೇಬನಂತಹ ಸಾಮ್ರಾಜ್ಯಾಧಿಕಾರಿಗಳೂ ಇಲ್ಲ ಇಂಗ್ಲೆಂಡಿನ ಕೈಯೊಳಗೆ ಶಕ್ತಿಹೀನವಾದ ವಂಗಡಗಳೆರಡು ದೇವರನ್ನುಳಿಸಲಿಕ್ಕೆ ಮನುಷ್ಯರನ್ನು ಕೊಲ್ಲುತ್ತಾ ಬರುವ ವಿಚಿತ್ರವೂ ಹೃದಯದ್ರಾವಕವೂ ಆದ ದೃಶ್ಯಗಳು ಮಾತ್ರ ಆಗಿಂದಾಗ್ಗೆ ಅಭಿನೀತವಾಗುತ್ತವೆ

ಹಿಂದೂ ಮುಸಲ್ಮಾನ ಜಗಳಗಳನ್ನು ಪರಿಣಾಮವಾಗಿ ಉಂಟು ಮಾಡುವ ಈ ಸಮಸ್ಯೆಯೇನು? ಎಂಬುದನ್ನು ವಿಚಾರಿಸುವುದು ಅಗತ್ಯವಾಗಿದೆ ಈಗಿನ ಸಾಮಾನ್ಯ ರಾಜಕೀಯ ಧುರೀಣನು ಇದರಲ್ಲಿ ಬರೇ ರಾಜಕೀಯ ಭೇದಗಳನ್ನಷ್ಟೆ ಕಾಣುವನು "ಮುಸಲ್ಮಾನರು ಅಲ್ಪ ಸಂಖ್ಯಾಕರು, ಅವರ ಹಿತಗಳು ಹಿಂದೂ ಬಹು ಸಂಖ್ಯಾಕರ ಕಾರಣದಿಂದ ತಿರಸ್ಕೃತವಾಗುತ್ತವೆ, ಅವುಗಳ ರಕ್ಷಣೆಯಾಗಬೇಕು, ರಾಜಕೀಯ ಸಂಸ್ಥೆಗಳಲ್ಲಿ ಅವರಿಗೆ ಪ್ರಾತಿನಿಧ್ಯವು ಹೆಚ್ಚು ಬೇಕು, ರಾಜಕೀಯ ವ್ಯವಸ್ಥೆಗಳಲ್ಲಿ ಅವರಿಗೆ ಹೆಚ್ಚಿನ ಪ್ರಾಧಾನ್ಯವು ಬೇಕು" ಅಥವಾ ಈ ಅಭಿಪ್ರಾಯ



ಮೌಲಾನಾ ಶೌಕತಾಲಿಯವರು.

ಮುಸಲ್ಮಾನರ ಬೇಡಿಕೆಗಳೂ ಹಿಂದೂಗಳ ವಿರೋಧಗಳೂ ವ್ಯಕ್ತವಾದುವು. ಈ ಮೂಲಕ ಸಮಸ್ಯೆಯು ದಿನದಿಂದ ದಿನಕ್ಕೆ ಮತ್ತಷ್ಟು ಬಿಗುವಾಗಿಯೇ ಬಂದಿತಲ್ಲದೆ ಸಡಲಿಸಲಿಲ್ಲ

ಮೊಂಟೆಗ್ಯು ಚೆಲ್ಮ್ಸ್‌ಫೋರ್ಡ್ ಸುಧಾರಣಾ ಸರಕಾರವು ಹಿಂದೂ ಮುಸಲ್ಮಾನರನ್ನು ರಾಜಕೀಯ ವಾತಾವರಣದಲ್ಲಿ ಪ್ರತ್ಯೇಕ ಮತದಾರ ವರ್ಗ (Separate electorate)ದ ಮೂಲಕ ಸಂಪೂರ್ಣವಾಗಿ ವಿಂಗಡಿಸಿಬಿಟ್ಟಿತು ಹಿಂದೂ ಸ್ಥಾನದ ಜನಾಂಗತ್ವದ ರಕ್ಷಣೆಗೆ ಯಾವುದೊಂದು ವ್ಯಕ್ತಂದ ಆಶಾತವು ಉಂಟಾಗಿರುವುದಾದರೆ ಅದು ಇದೇ

1920ನೇ ಇಸವಿಯ ಅಸಹಕಾರ ಚಳವಳಿವು ಹಿಂದೂ ಮುಸಲ್ಮಾನರನ್ನು ಒಂದುಗೂಡಿಸಿತಾಗಿ ತತ್ಕಾಲದ ಮಟ್ಟಿಗೆ ತೋರಿತು ಆದರೆ ಯಾವ ಉಪಾಯದಿಂದ ಮಹಾತ್ಮಾಜೀಯನೆರು ಈ ತೋರಿಕೆಯು ಐಕ್ಯವನ್ನು ಹೊಂದಿರುವೆವೆಂದು

(ಮುಂದಿನ ಪುಟಕ್ಕೆ ಮುಂದರಿಸಿಯದೆ)

ಮಸಲ್ಮಾನ ಸಮಸ್ಯೆಗೆ ಈ ತರದ ರಾಜಕೀಯ ರೂಪವು ಲಕ್ನೋ ಪ್ಯಾಕ್ಟ್ (Lucknow Pact)ನಲ್ಲಿ ಉಂಟಾಯಿತು. ಆಗಲೇ ಈ ಸಮಸ್ಯೆಯ ಮೂಲ ಹೇತುವು ಮರೆಯಲ್ಪಟ್ಟಿತು ಆ ನೀಲೆ ಒಂದರ ಹಿಂದೆ ಒಂದಾಗಿ

ಸಮಾನಾವಕಾಶವಿರಲಿ ಎಂಬ ಉದ್ದೇಶದಿಂದ ಮುಸಲ್ಮಾನರಿಗೆ ಪ್ರತ್ಯೇಕ ಮತದಾರ ಸಂಘ (Separate electorate) ಏರ್ಪಡಿಸಿ, ಹಿಂದೂ ಜನಾಂಗ ರಕ್ಷಿಸಿದ ಮೇಲೆ ಬಹು ತ್ಯಾಗಿಯಾಗಿದ್ದೆ. ಏಕೆಂದರೆ, ಹಿಂದೂ ಪ್ರೇಮವನ್ನು ಮುಸಲ್ಮಾನರೊಳಗೆ ಸಾಧ್ಯವಿದ್ದ ಸಂದರ್ಭದಲ್ಲಿಯೇ ಏಲಾಫತ್ ಪ್ರೇಮವನ್ನು ಇವರಲ್ಲಿ ನೆಡಲಾಯಿತು—ಏಲಾಫತ್ತಿನಲ್ಲಿ ಮುಸಲ್ಮಾನರಿಗೆ ಅಭಿಮಾನವಿರಬಾರದೆಂದು ನಾವು ಅನ್ನುವುದಲ್ಲ—ಆದರೆ ಅದು ಸ್ವದೇಶ ಪ್ರೇಮವನ್ನು ಬಡಿಸಿಕೊಳ್ಳುವುದು. ಫಲವೇನೆಂದರೆ, ಏಲಾಫತ್ತಿನ ಜನ್ಮ ಸ್ಥಾನವಾದ ಟರ್ಕಿಯು ತನ್ನ ಹೊಸ ರಾಷ್ಟ್ರಾವರಣಕ್ಕೆ ಸರಿಯಾಗಿ ಏಲಾಫತ್ತಿಗಿಂತಲೂ ದೇಶವೇ ಮೇಲೆಂದು ದೇಶದ ಮನಸ್ಸಿಗೆ ತಿಳಿದಿದ್ದರೂ ಹಿಂದೂ ಮುಸಲ್ಮಾನರು ಏಲಾಫತ್ತಿನಲ್ಲಿಯೇ ಮಗ್ನರಾದರು. ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಿಂತಲೂ ಹೊರದೇಶಗಳ ಮುಸಲ್ಮಾನರ ಪ್ರೀತಿಯು ಅವರಲ್ಲಿ ಹೆಚ್ಚಿತು. ಸ್ವಂತ ದೇಶದಲ್ಲಿ ಮುಸಲ್ಮಾನರೂ ಹಿಂದೂಗಳೂ ಕ್ಷಾಮದು ನಿರಿಗಂಜಿ ಒಬ್ಬರಿಗೊಬ್ಬರು ಸಂಕಷ್ಟಗಳಿಗೆ ಗುರಿಯಾದರೂ ಮುಸಲ್ಮಾನ ಚಳವಳಗಳಿಗೆ ಅವುಗಳ ಗಣ್ಯರಿರಲಿ, ದೂರದ ದೇಶದಲ್ಲಿ ಓಡು ಹಿಡಿ ಮುಸಲ್ಮಾನರಿಗೆ ಕಷ್ಟಗಳುಂಟಾದರೆ ಅವರಿಗೆ ಸಹಾಯವು ಕೊಪ್ಪಿಯುತ್ತಿದೆ.

ಈಜಿಪ್ತಿನಾದ ಚಳವಳದ ನಂತರ ಮುಸಲ್ಮಾನ ಮುಖಂಡರಲ್ಲಿ ಬಹಳ ಬದಲಾವಣೆಗಳಾದುವು. ಸ್ವರಾಜ್ಯ ಪ್ರೇರಣೆಯು ಕಾಣಿಸಿಕೊಂಡಾಗಿನಿಂದ ಎಂದು ಹೇಳಿದೆ: ಅಜವಾಗಿ ನೋಡಿದರೆ, ಸುಳ್ಳಾದ ಜನಕಾವಾಕ್ಯವನ್ನು ಹೊಂದಬೇಕಾದರೆ ಮುಸಲ್ಮಾನ ಧುರೀಣರಿಗೆ ಮುಸಲ್ಮಾನ ಜನತೆಯು ಆತಯುವಕ್ಕೆ ಅಭಿಲಿಸಬೇಕಾಗುತ್ತದೆ. ಮುಸಲ್ಮಾನ ಜನತೆಯು ಆತಯುವ ಮತ ಭ್ರಾಮಕವಾಗಿದೆ. ಮತ್ತು ಮುಸಲ್ಮಾನ ಜನತೆಯು ನಿಜವಾದ ಧುರೀಣರು ರಾಜಕೀಯ ಆಕಾಶದಲ್ಲಿ ಸ್ಫುರಿಸುವ ಈ ಧುರೀಣರಲ್ಲ. ಮುಸಲ್ಮಾನರಿಗೆ ಅವರ ನಿಷ್ಠೆಯ ಮತಾಚಾರ್ಯರೇ ಧುರೀಣರಾಗಿರುತ್ತಾರೆ.

ಹೆಚ್ಚಿನ ಮಟ್ಟಿನ ಅವಿಶ್ವಾಸವು, ವರ ಮತ ಅಸಹಿಷ್ಣುತೆಯು ಮುಸಲ್ಮಾನರೊಳಗೆ ಅವರ ಮತ ತತ್ವದಿಂದಲೇ ಉಂಟಾಗಿರುತ್ತದೆ. ಹಾಗೆಂದು ಮುಸಲ್ಮಾನ ಮತದಲ್ಲಿ ಪ್ರೀತಿಯೂ ಉದಾರವೂ ಆದ ತತ್ವಗಳಿಲ್ಲವೆಂದಿಲ್ಲ. ಆದರೆ ಮತ ತತ್ವಗಳ ಅಂತರ್ಯವು ಹೇಗಿದ್ದರೂ ಮನುಷ್ಯನು ಸ್ವಾರ್ಥ ಅಂಕಗಳನ್ನು ಹೆಕ್ಕುವುದು ಹೆಚ್ಚು. ಉದಾಹರಣಾರ್ಥವಾಗಿ ಪರಮತೀಯರನ್ನು ಮುಸಲ್ಮಾನರು ಕರೆಯುವ ಹೆಸರನ್ನು ನೋಡಿ. ಮುಸಲ್ಮಾನರು "ಕಾಫರ್" ಅನ್ನುತ್ತಾರೆ; ಇಂಗ್ಲೀಷರು (ಕ್ರಿಸ್ತೀಯರು) ಹೀದನ್ (Heathen) ಅನ್ನುತ್ತಾರೆ; ಹಿಂದೂಗಳು "ಯವನರು" ಅನ್ನುತ್ತಾರೆ. ಆದರೆ ಆ "ಕಾಫರ್" ಶಬ್ದದಲ್ಲಿ ತೋರುವ ತಿರಸ್ಕಾರ, ದ್ವೇಷ, ಅಸಹಿಷ್ಣುತೆ, ಇವು ಇತರ ಯಾವ ಜಾತಿಯವರ ಪರಮತೀಯರನ್ನು ಸಂಬೋಧಿಸುವ ಶಬ್ದದಲ್ಲಿಯೂ ಇಲ್ಲ.



ಕಾಂಗ್ರೆಸ್ ವಿರೋಧಿಗಳು:—ಮೌಲಾಲಿ ಆಲಿ ಮತ್ತು ಮಹಮ್ಮದ್ ಕಾಫಿ ದೌಲಿ



ಕಾಂಗ್ರೆಸ್ ವಿರೋಧಿಗಳು:—ಸರ್. ಮಹಮ್ಮದ್ ಕಾಫಿ ಮತ್ತು ಫಜ್ಲೆ ಹುಸೇನ್.

ಲೋಕದ ಎಲ್ಲಾ ಮತಗಳಲ್ಲಿ ಹಿಂದೂ ಮತದಂತಿಗೆ ಮಾತ್ರವೇ ಸ್ವಮತಕ್ಕೆ ಜನರನ್ನು ಮತಾಂತರಗೊಳಿಸುವ ವಧ್ಧತಿ ಇರುವುದಿಲ್ಲ. ಈ ಒಂದೇ ಕಾರಣದಿಂದಲೇ ಹಿಂದೂ ಮತದ ಪರಮತ ಸಹಿಷ್ಣುತೆಯು ವ್ಯಕ್ತವಾಗುವುದು. ಇತಿಹಾಸವಾದರೂ ಹಿಂದೂಗಳು ಅನ್ಯ ಮತೀಯರಿಗೆ ಪ್ರೋತ್ಸಾಹನನ್ನು ಕೊಟ್ಟದ್ದೇ ತೋರಿಸುತ್ತಿದೆಯಲ್ಲದೆ ಇತರರನ್ನು ದಂಡಿಸಿದುದರ ಉದಾಹರಣೆಯನ್ನು ಕೊಡುವುದಿಲ್ಲ. ಅಂದ ಮೇಲೆ ಈ ಮುಸಲ್ಮಾನ ಸಮಸ್ಯೆಯು ಮುಸಲ್ಮಾನರ ಮೇಲೆಯೇ ಹೊಂದಿರುತ್ತದೆ. ಇದರ ವಿರೋಧವಾದ ಹಿಂದೂ ಚಳವಳವು ಬರೇ ಆತ್ಮರಕ್ಷಣೆಯನ್ನುದ್ದೇಶಿಸುವಂತಹದುದಾಗಿದೆ.

ಆದರೆ ಕೆಲವರು ಆರ್ಯಸಮಾಜದ ಕಾರ್ಯಕಲಾಪಗಳನ್ನು ತೋರಿಸಬಹುದು. ಆದರೆ ಆರ್ಯ ಸಮಾಜದ ಚಳವಳವು ಸ್ವಯಂರಕ್ಷಣಾರ್ಥವಾಗಿ ಎಂದು ಹೇಳಿದೆ. ಏಕೆಂದರೆ, ಆರ್ಯ ಸಮಾಜದ ಮೂಲತತ್ವಗಳಲ್ಲಿ ಪರಮತ ಸಹಿಷ್ಣುತೆಯು ಒಂದು ಮುಖ್ಯ ಅಂಶವಾಗಿದೆ. ಆರ್ಯ ಸಮಾಜದ ಸಂಸ್ಥಾಪಕರಾದ ದಯಾನಂದ ಸರಸ್ವತಿಯವರು ಸಾಧಾರಣ ಹಿಂದೂ ಸಂಸ್ಕಾರಕ್ಕಿಂತ ಹೆಚ್ಚಿನ ಸಂಸ್ಕಾರವನ್ನು ಪಡೆದವರಾಗಿದ್ದರು. ಅವರು ಸಂಸ್ಕೃತ ಪಂಡಿತರಾಗಿದ್ದರು. ಅವರು ಸಂಸ್ಕೃತ ಭಾಷೆಯಲ್ಲಿ ಅಪಾರ ಪಾಂಡಿತ್ಯವನ್ನು ಪಡೆದ

ನನ್ನ ಊರಿನ ಸೊಗಸುಗಳು.

ಲೇಖಕರು—ತ್ರಿವಿಕ್ರಮ. ಕಾರಂತ.

ನನ್ನ ಊರು ಮಸಣದ ನಾಡಾದರೂ ಸೊಗಸಿನ ಬೀಡು—ಎನ್ನುವುದು ಅಭಿಮಾನದ ಸ್ವಭಾವ. ಆದರೆ ನನ್ನ ಊರನ್ನು ಕುರಿತು ನುಡಿಯುವಾಗ ನನ್ನ ಅಭಿಮಾನವನ್ನು ಒತ್ತಟ್ಟಿಗಿರಿಸಿ ಬರೆಯುವೆನು. ನನ್ನ ದೇಶ, ನಾಡು, (ಪ್ರಾಂತ)ಗಳನ್ನು ನಾನು ಕೊಂಡಾಡಿದಷ್ಟು ಸಾಲದು. ಆದರೆ, ನನ್ನವರೆಲ್ಲ ಇದಿ ಎಂದುಸ್ವಾನವನ್ನಾಗಲಿ, ಕನ್ನಡ ನಾಡನ್ನಾಗಲಿ ಸೆಂಚರಿಸಲಾರರು. ಇತ್ತ 'ನನ್ನ ಊರೆಂದು' ಯಾವ ದಕ್ಷಿಣ ಕನ್ನಡಕ್ಕೆ ಕರೆತ್ತುವೆನೋ ಅದನ್ನು ನನ್ನೂರಿನವರು ಬ್ರಹುವುಟ್ಟಿಗೆ ಕ್ಯಾಡಿಯವರು. ಅದರ ಸೊಗಸನ್ನು ಬಣ್ಣಿಸುವುದು ನನ್ನ ಲೇಖನದ ಉದ್ದೇಶ. ಕಂಡವರಲ್ಲಿ, ಬಣ್ಣಿಸುವುದೇನುಳಿದಿದೆ—ಎಂದು ನೀವು ನನ್ನನ್ನು ಕೇಳ ಬಹುದು. ಆದರೆ ನನ್ನ ಅಭಿಮತವಿದು. ಕಂಡದ್ದನ್ನೆಲ್ಲ ನಾವು ಉಣ್ಣು ನವಿದುವುದಿಲ್ಲ. ಕಾರಣ—ನಮ್ಮಲ್ಲಿ ಹಲವರಿಗೆ "ಸೊಗಸಿದು" ಎಂದರೂ ಅದೇನೆಂದು ತಿಳಿಯದು ಸೊಗಸೇನೆಂದು ತಿಳಿದುದ ಅವರ ಜೀವನವೇ ಅದರ ರಹಸ್ಯ. ಸೊಗಸನ್ನು ಅರಿಸಿ ಉಣ್ಣುವವನು ರಸಿಕನು. ಸಮುದ್ರದ ತಳದಲ್ಲಿ ಮುತ್ತಿದೆಯಂದಷ್ಟಕ್ಕೆ ಬೆಸ್ತರನೆಲ್ಲಿ ಶ್ರೀಮಂತರಲ್ಲ.

ಸೊಗಸು ಎನ್ನುವ ನುಡಿಯನ್ನು ನಾನು "ಕಲಾ" ದೃಷ್ಟಿಯಿಂದ ಆಡುತ್ತಿರುವೆ. ಕೇವಲ ಬಾಹ್ಯೇಂದ್ರಿಯಗಳಿಗೆ ಮನೋಹರವಾದ ವಸ್ತುಗಳನ್ನು ನಾನು ಸೊಗಸೆಂದು ತಿಳಿಯುವುದಿಲ್ಲ. ಆ ಸೊಗಸಿನ ಹಿಂದೆ, ಶ್ರದ್ಧೆಯಿರಬೇಕು; ಅಂದರೆ ಕವಟವಿರಬಾರದು. ತಿರುಗಿ ಆ ಸೊಗಸಿನ ಹಿಂದೆ ಆನಂದವಿರಬೇಕು, ಯತಾರ್ಥವಿರಬೇಕು, ಸತ್ಯವಿರಬೇಕು—ಅಸತ್ಯವಿರಬಾರದು.

ನನ್ನ ಊರು ಎಲ್ಲೆಲ್ಲಿಯೂ ಚೆಲುವಿನಿಂದ ತುಂಬಿದ ಊರು. ಭಟ್ಟಳದಿಂದ ತೊಡಗಿದರೆ ನೀಲೇಶ್ವರದ ತನಕ, ಸಮುದ್ರದಿಂದ ತೊಡಗಿದರೆ ಪಶ್ಚಿಮ ಘಟ್ಟಗಳ ತನಕ ಸೊಗಸು ತುಂಬಿ ಸೂಸುತ್ತಿರುವುದು. ಎಲ್ಲಿ ನೋಡಿದರಲ್ಲಿ ನದಿಗಳು, ತೋಡುಗಳು, ಗುಡ್ಡಗಳು, ಬೆಟ್ಟಗಳು, ಕಾಡುಗಳು. ಅನಂತವಾಗಿ ಪಸರಿಸಿರುವ ಸಮುದ್ರಬೇರೆ. ಬೆಳಗಾಯಿತೆಂದರೆ ನೀಲ ಪರ್ವತರಾಜನಿಂದ ಉದಯಿಸುವ ಸೂರ್ಯ; ಸಂಜೆಯಾಯಿತೆಂದರೆ ಪಡುಕಡಲಿನಲ್ಲಿ ಮುಣುಗುವ ದಿನಪ; ತಿರುಗಿ ಕತ್ತಲಾಯಿತೆಂದರೆ ತವಸಿಯ ಗಾಂಭೀರ್ಯದಿಂದ ಕುಳಿತಂತಿರುವ ಬಯಲು ಗುಡ್ಡಗಳು—ಅದರ ಮೇಲೆ ಮೃದು ನಗೆಯಿಂದ ಓಡುವ ತಿಂಗಳು. ಮುಂಜಾನೆ ಬಂದಿತೆಂದರೆ, ಕಲರವದಿಂದ ತುಂಬುವ ತಳಿರು ತೋಟಗಳು. ಪ್ರತಿ ಹೊಲದ ಬಳಿ, ಪ್ರತಿ ನದಿಯ ಬಳಿ, ಪ್ರತಿ ಗುಡ್ಡದ ಬಳಿ—ಒಬ್ಬೊಬ್ಬ ಕವಿಯಾದರೂ ನಿಮಗೆ ಕಾಣಿಸುತ್ತಿರಬೇಕು. ನಿಜವಾಗಿಯೂ ನನ್ನ ಊರು ಕವಿಗಳಿಗೆ ಮಾಸನ ಮನೆ. ಆದರೆ ನಾಡಮಾವನ ಕುವರಿಯರನ್ನು ಮೋಹಿಸಿ ಬರುವ ಅಳಿಯಂದಿರಲ್ಲ. ಸ್ವಯಂವರದಲ್ಲಿ ತಾನು ಮೇಲು ತಾನು ಮೇಲು ಎಂದು ಬರುವ ಅಳಿಯಂದಿರು ಬೇಡ—"ದಮ್ಮಯ್ಯ, ನನ್ನ ಚೆಲುವಿನ ಕೂಸನ್ನು ಬೇಡಿದ ಅಳಿಯನಿಗೆ ಕೊಡುವೆ" ನೆಂದರೂ—ಓಡಿಬರುವ ಅಳಿಯಂದಿರಿಲ್ಲ!

ಹಚ್ಚನಿನ ಹೊಲದಲ್ಲಿ ಕಾಣುವಿರಿ—ಹಗಲೆಲ್ಲ ದನಿದು ಹಸಿದ ಹೊಟ್ಟೆಯಿಂದ, ಉಸ್ಸೆಂದು ಚಲಿಸುವ ರೈತನನ್ನು. ಅವನ ಬಳಿಯಿರುವ ಕೋಣಗಳಾದರೂ ಅವನಿಗಿಂತ ಸುಧಾಮರು.

ನದಿಯ ಬಳಿಗೆ ಹೋಗಿ ನಿಂತರೆ, ಅದರ ಚೆಲುವನ್ನು, ಇತ್ತಡಿಗಿರುವ ತೆಂಗುಗಳನ್ನೂ, ನಡುಗಡ್ಡೆಯ ಛನವನ್ನೂ ಕಾಣಲು ನಿಂತ ನರಹುಳುವು ಸಿಗದು, ಬಿಸಿಲಿನಲ್ಲಿ ಕಾದು ಕರ್ರಗಾದ ದೇಹಗಳು. ಎಲುಬು ಚರ್ಮುಗಳಿಂದಾದ ಬೆಸ್ತರ ತೀರ್ಥಗಳು. ಅಜ್ಞಾನದಿಂದ ತುಂಬಿ ಕುರುಡಾಗಿ ಕಾಣಿಸುವ ಅವರ ಕಣ್ಣುಗಳು.

ಕಾಡಿಗೆ ಹೋದರೆ ಅದೇ ಹಾಡು. ಕತ್ತಿ ಪಿಡಿದು ಸೊಪ್ಪಿಗಾಗಿ ಸೌಂದರ್ಯವನ್ನು ಕಡಿಯುವ ಕುಡುಬಿಯರು. ಹೊಟ್ಟೆಗಾಗಿ ಬಲೆಯನ್ನು ಪಿಡಿದೋಡುವ ಬೇಡರು. ಸೌಂದರ್ಯವೆಂದರೆ ಅವರ ಕಾಲಳಸು.

ತಿರುಗಿ ಅದನ್ನು ಜೇಡಿ ಫಲವಿಲ್ಲ. ಅಲಸಿಯಂತೆ ಸಿರಿತಗಳನ್ನು, ತಾನುಗಳನ್ನು ದಿನಗಳನ್ನು ಮಾಸಗಳನ್ನು ನನ್ನ ನಾಡ ಸೌಭಾಗ್ಯ ನೋಡಲೆಂದು ಅಲ್ಲಿ ಇಲ್ಲಿ ಎಲ್ಲೆಲ್ಲಿಯೂ ಕಳೆದಿರುವೆ. ಬಂಟಯಾಗಿ ಕಳೆದಿರುವೆ, ಗೆಳೆಯರನ್ನು ಕೂಡಿ ಕಳೆದಿರುವೆ. ಆ ಕುಟಜಾದ್ರಿ, ಆ ಕುದುರೆಮುಖ, ಆ ನೂರಾರು ಹಳ್ಳ ಕೊಳ್ಳಗಳ ಚಿಕ್ಕ ಪುಟ್ಟ ಜೋಗ, ಜಲಪಾತಗಳು—ಎಲ್ಲವನ್ನೂ ಹುಡುಕಿ ಜೋಗಿರುವೆ. ಭ್ರಮೆಯಿಂದ ಮೈಮರೆತು ಕುಳಿತುಧ್ಯಾನಿಸಿರುವೆ. ಆದರೆ ನನ್ನ ಒಡಲನ್ನು ಚುಂಬಿಸಿದ ಆನಂದವು, ನನ್ನ ಗೆಳೆಯರ, ಅದಕ್ಕಾಗಿಯೇ ಬಂದ ನನ್ನ ಗೆಳೆಯರ, ಒಡಲನ್ನು ಚುಂಬಿಸಿಲಿಲ್ಲೆಂದು ದೃಢಮಾಡಿ ಹೇಳುವೆ. ಕುದುರೆಮುಖದ ಉನ್ನತ ಶಿಖರವು, ಕುಭ್ರ ಮೋದಗಳ ಸಮುದ್ರದಲ್ಲಿ ಸ್ವರ್ಗದಂತೆ ಸ್ಥಿರವಾಗಿ ನಿಂತಾಗ, ದಿವ್ಯಲೋಕದ ಮಾರುತವು ನಮ್ಮ ಬಟ್ಟೆಗಳನ್ನು ಹಾರಿಸುತ್ತಿದ್ದಾಗ, ಜಮೋಲಗದದಂಥ ಎತ್ತರವಾದ ಬೆಟ್ಟವು ಕೆಳಕ್ಕೆ—ಮರ್ತ್ಯಲೋಕದಲ್ಲಿನ ಚಿಕ್ಕ ಮಗುವಿನಂತೆ ನಿಂತಾಗ—"ಸುಖ ನಾನು, ಸುಖ ನಾನು"—ಎಂದು ಕುಣಿಯಬೇಕಿತ್ತು. ಅನಂತನ ಅಗಾಧ ಸೊಗಸಿನ ದಿವ್ಯ ಕಲ್ಪನೆಯಲ್ಲಿ ದಣಿಯಬೇಕಿತ್ತು! ಆದರೆ ಹಸಿವೆಂದು, ಛಳಿಯೆಂದು ಅಂಜಿ, ಹೆಂಜರಿದ, ಕೆಂಬಳಿಯ ಕೊಟ್ಟೆಯಲ್ಲಿ ಮುದುಡಿ ಮುದ್ದೆಯಾದರೆಲ್ಲ.

ಛಳಿಗಾಳಿಯಿಲ್ಲದ ಸೊಗಸಿನಲ್ಲಿ ಕೆಲವರಿಗೆ ದಣಿವಾಯಿತು, ಕೆಲವರಿಗೆ ಹಸಿವಾಯಿತು—ಸೊಗಸೆಂಬುದೊಂದು ಹೊರೆಯಾಯಿತು! ನಿಜವಾಗಿಯೂ ಕವಿಯೊಬ್ಬ ಸೋಮೂರಿಯಾಗಿ ಕಾಣಿಸಿದನು.

ಸ್ಥಳೀಕ ಸ್ವರಾಜ್ಯದ ಸುಖಸೌಕರ್ಯಗಳು.

ತೆಂಗಿದಾರೆ—ಇನ್ನಾದರೂ ಇದನ್ನಿಳಿಸುವರೇ?

ದಿನನಿತ್ಯವೂ ಹಸಿದವರನ್ನು ಬಿಡಿರಿ. ಒಂದು ಹೊತ್ತು ಹಸಿದವರಿಗೂ ಸಹ—ಕುಟಜಾದ್ರಿಯ ಅಗಾಧ, ಕಣಿವೆ, ರಂಜಿಸುವ ನೋಡಗಳು, ಕಿರಣ ರಾಜಿಯಿಂದ ಮಿರುಗುವ ಸಂಜೆಯ ಸೂರ್ಯ—ಇವಕ್ಕೆ ಭೇದನನ್ನು ಮರೆಯಿಸಲು ಶಕ್ತಿಯಿಲ್ಲ ದಾಯತೆ! ನಿಜಕ್ಕೂ ಇಂದು ನಮಗೆ ಹೊಟ್ಟೆಯೇ ಕಣ್ಣಾಗಿದೆ. ಕಣ್ಣು ನಿನಾಗಿದೆಯೆ?

ಆದರೆ ನಮ್ಮ ಹಿರಿಯರೂ ನಮ್ಮಂತೆ ಇದ್ದರೇನು? ಹಾಗಿದ್ದರೆ—ಕುಟಜಾದ್ರಿಯ ಶಿಖರ, ಕೊಲ್ಲೂರು ಸುಬ್ರಹ್ಮಣ್ಯ, ಕಾರ್ಕಳ, ಧರ್ಮಸ್ಥಳ—ಇತ್ಯಾದಿ ಊರುಗಳು ಬಹಿರ್ ಹುಲಿಕರಡಿಗಳ ನೆಲೆಯಾಗುತ್ತಿತ್ತು. ಮನುಷ್ಯರಿಗೆಲ್ಲ ಕೆಲಸವೇ ಇದ್ದಿರುತ್ತಿರಲಿಲ್ಲ, ನಡೆನಡೆನಡೆದು, ಎತ್ತರವಾದ ಬೆಟ್ಟಗಳ ಕಿಬ್ಬದಿಯಲ್ಲಿ ಏರುತ್ತ ಹೋಗಿ, ಜಿಗಜಿಗಿಗಳ ಅಂಜಿಕೆಯಿಂದ ಹಾರುತ್ತ ಹೋಗಿ, ಕೊನೆಗೆ ಛಳಿಯಿಂದ ತುಂಬಿರುವ ಕುಟಜಾದ್ರಿಯಲ್ಲಿ ದೇವರ ಗುಡಿಯೊಂದನ್ನು ಕಟ್ಟುತ್ತಿದ್ದರೇ? ಕಾಡಿನೆಡೆಯಲ್ಲಿ ಹಾದಿಯನ್ನು ಹುಡುಕಿ ಸುಬ್ರಹ್ಮಣ್ಯನನ್ನು ಕಾಣಬೇಕಿತ್ತೇ? ಕಾರ್ಕಳದ ಆ ಸ್ವಸ್ಥ ಸರಸ್ಸಿಂದಲ್ಲದಿದ್ದರೆ, ವೇಣೂರಿನ ನದಿಯೊಂದಲ್ಲದಿದ್ದರೆ—ಆ ಗುಮ್ಮಟರು ಅಲ್ಲಿ ನಮ್ಮಳತ್ತುಗಳ ಮೇಲೆ ತಮ್ಮ ತಲೆಯನ್ನಿತ್ತಿ ಪಿಡಿಯುತ್ತಿದ್ದರೇ?

ಆದರೆ ನಮ್ಮದೊಂದು ಉಪಕಾರಂ ಹಿರಿಯದೆಂದು ಒಂದು ಗೌರವನ್ನಿಟ್ಟುಕೊಂಡಿರುವೆವು. ಅದರಿಂದಲೇ ಅವರು ತೋಂದ ಕಾಡುಮೂಲೆಗಳಿಗೆ ಯಾತ್ರೆ ಹೋಗುತ್ತಿರುವೆವು. ಮೋಟಾರು ಬಂದುದರಿಂದ ಯಾತ್ರಿಕರ ಸಂಖ್ಯೆ ಇನ್ನಷ್ಟು ಹೆಚ್ಚಿರುವುದು. ಆದರೆ ಮೊದಲಿನ ಯಾತ್ರೆ ಒಂದು ವಾರದ ವ್ಯಾಪಾರವಾಗಿದ್ದರೆ ಇಂದಿನ ಯಾತ್ರೆ ಕಾಸಿನದು. ಸುಬ್ರಮಣ್ಯವನ್ನಿಳಿದು ಛಂದಿಯ ಸಲಾಮು, ಉಡುಪಿನಲ್ಲಿ ನಾಲ್ಕು ಛಂಟೆಯ ಸಲಾಮು. ಧರ್ಮಸ್ಥಳದ ಮಂಜುನಾಥನಿಗೆ ಹೆಚ್ಚಿನ ಕಾಣಿಕೆಯಿಲ್ಲ. ಕಾರ್ಕಳದ ಗೋಮಟೇಶ್ವರನಿಗೆ ದೂರದಿಂದಲೇ ಸಲಾಮು. ಕುಟಜಾದ್ರಿಯ ಗುಡಿಯಲ್ಲದ ಗಿದವನಿಗೆ—ಅದೂ ಇಲ್ಲ. ಇನ್ನು ವಿಮಾನಗಳು ಬಂದ ಬಳಿಕ ನೋಡಬೇಕು ಅವನ ಅದೃಷ್ಟ. ಬದಲಿಗೆ ಬಂದರು, ಹಣ್ಣು ಕಾಯಿಗಳನ್ನು ತಿಂದರು! ಆಯತವರ ಕೆಲಸ. ನಿಜಕ್ಕೂ ಪೇಟೆಗಳ ನಡುವೆ ಗುಡಿಯನ್ನು ಕಟ್ಟಿದ ನಮ್ಮ ಹಿರಿಯರು ಸುಮ್ಮಾರು. ದೇವರ ದರ್ಶನವೆಂದರೆ ತಿಂದರೆ ಎಷ್ಟು ಕೊಡುತ್ತಿರುವರು. ಎಂಥ ಪ್ರಯಾಸವೆ ಕೆಲಸವಾಗಿದೆ.

ನನ್ನೂರಿನ ಅನಸ್ಥೆ ಹೇಗಾಗಬೇಕೆ? ನನ್ನ ಹಿರಿಯರು ಜೀವನದ ಸುಖವನ್ನು ಕಂಡನರೇ ಅಲ್ಲವೇನು? ಅವರ ಸಂಸಾರದ ಹಾಸುಗೆಯು ಕೇವಲ ಹೂವುಗಳಿಂದಲೇ ರಚಿಸಲ್ಪಡುತ್ತಿತ್ತೇನು? ಆಗ ಒಬ್ಬರಾದರೂ ಹಸಿದವರಿರಲಿಲ್ಲವೆ?

ಅವರ ಕಾಲವು ಈ ದಿನದಷ್ಟು ದುರ್ಗಮವಾಗಿರಲಿಕ್ಕಿಲ್ಲ. ನಿಜ. ಆದರೆ, ಈ ಕಾಲವು ಸೊಗಸನ್ನುಣ್ಣುವ ಬಾಯಿಗೆ ಬೀಗವನ್ನು ಹಾಕುವಷ್ಟು ಕ್ರೂರವಾಗಿಯೂ ಇಲ್ಲ. ನಿಜ ಸಂಗತಿಯೆಂದರೆ—ನಮ್ಮಗೆ ಸೊಗಸುಗಳ ಅರಿವಿಲ್ಲ. ನಾವು ಕಲೆಗಳ ಕುಲವೈರಿಗಳಾಗಿರುವೆವು. ಹೀಗೇದರೆ ಹಾರ್ಮೋನಿಯಮ್ ಒತ್ತುವ ಪ್ರತಿ ಗವಾಯಿಯೂ, ಪತ್ತೇದಾರಿ ಕಾದಂಬರಿ ಓದುವ ಪ್ರತಿ ತರುಣನೂ ಕಿಡಿಕಿಡಿ ಕೆಂಡವನ್ನು ಕಾರಬಹುದು. ನಿಜ, ಅವರ ತಿಳುವಿನಂತೆ ಅವರು ಸಂಗೀತ ಕಲಾಸ್ಪರಿಯರು! ಸಾಹಿತ್ಯ ವಿಕಾರದರು—ಅವರಿಗೆ ನನ್ನ ವಂದನೆಗಳು. (ದೂರದ)

ನಮ್ಮ ಜನರನ್ನು ಅವರ ಸಂಸ್ಕೃತಿಗೆ ಸರಿಯಾಗಿ ವಿಂಗಡಿಸುವುದಾದರೆ, ಪಟ್ಟಣಿಗರು ಹಳ್ಳಿಗರೆಂದು ವಿಂಗಡಿಸಬಹುದು. ಪಟ್ಟಣಗರು ಸಂಸ್ಕೃತರು, ಹಳ್ಳಿಗರು ಅಸಂಸ್ಕೃತರು—ಎಂಬುದು ಎಲ್ಲರ ತಿಳಿವು. ಯಾರೂ ಇದನ್ನು ಅಕ್ಷೇಪಿಸಲಿಲ್ಲ. ಆದುದರಿಂದ ಇದು ನಿಜವಿರಬಹುದು. ಆದರೆ ನಗರವಾಸಿಗಳನ್ನು ಸಂಸ್ಕೃತರೆನ್ನುವ ಬದಲು ನಾಗರಿಕರೆನ್ನಬಹುದು.

ಈಗಿನ ನಾಗರಿಕತೆಯ ಚೆಲುಚ್ಚತ್ರವಿದೆ. ಹೊಸ ಹೊಸ ನರ್ತನಗಳನ್ನು ಕಾಣುತ್ತಿರುವರು! ಇಲೆಕ್ಟ್ರಿಕ್ ನಾಟಕಗಳಿವೆ. ಹಲವರು ಹಲವೊಂದು ಪುಸ್ತಕಗಳನ್ನುತಿರುವುತ್ತಿರುವರು. ಆದರೆ ಹಳ್ಳಿಗರಲ್ಲಿ ಇದೊಂದೂ ಇಲ್ಲ. ಅವರ ಹಾಡೆಂದರೆ ಯಕ್ಷಗಾನ, ಪಾಡ್ದನಗಳು, ನಾಟಕವೂ ಅವೇ. ನರ್ತನವು ಕೋಲದ ಕುಣಿತ. ಕಾವ್ಯಗಳು ಭಾರತರಾಮಾಯಣಗಳು!

ಈಗ ನಾವು ನಾಗರಿಕವರ ಕಲಾಪ್ರೇಮವನ್ನು, ಸೌಂದರ್ಯ ಪ್ರಿಯತೆಯನ್ನು ಅಳೆಯೋಣವೇ? ಅವರ ಚಲಚ್ಚಿತ್ರಗಳೆಂದರೆ—ಅಶ್ಲೀಲತೆ, ನಗ್ನ ಸೌಂದರ್ಯವಿಲ್ಲದಿದ್ದರೆ ಅವರಿಗೇ ಬೇಡವಾಗಿದೆ! ನಾಟಕಗಳು—ವಿದ್ಯುತ್ ದೀಪಗಳು, ಟ್ರಾನ್ಸ್ಫರ್ ನರದಿಗೆಳು, ಇವುಗಳಿಂದ ತುಂಬಿವೆ ಇವರ ಬಾಹ್ಯೇಂದ್ರಿಯಗಳನ್ನು ಅವು ರಮಿಸುವುದರಿಂದ ಅವುಗಳೇ ಆದರ್ಶವೆಂದು ಅವರ ತಿಳಿವು. ನರ್ತನವು ಈಗೀಗ ಬಲವಾಗಿ ಕಾಲೂರತೊಡಗಿದೆ. ಎಂಥ ಅಶ್ಲೀಲ. ಕುಡಿಗೆ, ಹಾವಭಾವಗಳೂ ಸಲ್ಲುವುವು. ತಲೆಯ ಮೇಲೆ ಹತ್ತು ದೀಪಗಳನ್ನುರಿಸಿಕೊಂಡು ಕುಣಿದರೆ ಅತಿ ದೊಡ್ಡ ನರ್ತಕಿಯವಳು! ನೋಡುವ ರಸಿಕರೆಷ್ಟು ಮಂದಿ ಬೇಕು! ಆದರೆ ನೋಡಿದವರಲ್ಲಿ—ಆ ಕುಣತವೆಂಥದು? ಆ ಹಾಡಿನ ಅರ್ಥವೇನು? ಕುಣಿತವು ಯಾವ ಭಾವನೆಯನ್ನು ಸೂಚಿಸಿತು?—ಎಂದು ಕೇಳಿದರೆ—ಅದರಲ್ಲೇನು ಅರ್ಥ? ನೋಡುವುದಕ್ಕೆ ಸೊಗಸುತ್ತಪ್ಪ—ಇದಕ್ಕೂ ಏನು ಬೇಕು? ಎಂದುತ್ತರ ಬರುವುದು. ಓದುವ ಗ್ರಂಥಗಳ 'ಪಾಡೂ ಇದೆ. ನಗರದ ಗಲ್ಲಿಗಲ್ಲಿಗಳಲ್ಲಿಯೂ ಹಾರ್ಮೋನಿಯಂಗಳು ಚೀರುತ್ತಿರುವುವು. ಒಂದು ಬದಿಯಿಂದ ತ್ಯಾಗರಾಜನ ಹಾಡು, ಇನ್ನೊಂದು ಬದಿಯಿಂದ ಸೂರದಾಸನ ಹಾಡು. ಉತ್ತರಾದಿ ಬೇರೆ, ದಕ್ಷಿಣಾದಿ ಬೇರೆ,—ಎರಡೂ ಇವೆ. ತ್ಯಾಗರಾಜನ ತೆಲುಗಿನ ಹಾಡಿನ ಸಾಹಿತ್ಯದ ಅರ್ಥವೇನು?, ಆ ಭಾವಕ್ಕೂ ಹಾಡಿನ ರಚನೆಗೂ ಸಂಬಂಧವೇನು?—ಎಂಬುದನ್ನಷ್ಟೆ ಗಮನಿಸದೆ ತಾಸುಗಳ ತನಕ ಹಾಡಿ ಕೋರಿಸುವ ವಂದಿತರೂ ಇರುವರು. ಉಂಡು ಆಲಸ್ಯವಾದಾಗ—"ಕಂಡು ಕೆಂಡು ನೀಯೆನ್ನ ಕೈ ಬಿಡುವರೇ ರಂಗ"!, ಎಂದು ತುರಂದರದಾಸನನ್ನು ಹಾಕ್ಕಿಗೆ ಎಳೆದುತರುವ ಸಂಗೀತಗಾರರೂ ಇರುವರು. ಸೂರದಾಸನನ್ನು ಅದೇ ರೀತಿ ತಮ್ಮ ಮನೆ ಆಳನ್ನಾಗಿ ಇರಿಸಿಕೊಂಡಿರುವರು.

(ಮುಂದೆ ಮುಂದುವರಿಯುವುದು)

M. Padmanabha Raghunath Pai & Co.

AGENTS, BURMAH-SHELL,

MANGALORE.

Telegrams: Apcoil. **Codes: Bentleys & Private.** **Telephone: 45.**

Expert Information on & Prompt Supply of Every Requirement in Fuels & Lubricants.



Run Your Home on Shell.

Shell Motor Oils.

Whether for Aeroplanes or Motor Cars or Motor Ships. They have assured Reliability and Long Life.

The C. P. C. Co., Ltd.
And
The Hanuman Transport Co., Ltd.
are exclusively using them —
Than which no better evidence of quality is necessary.

"SHELL"

The Hall Mark of Purity.
Shell Petrol
for
The Indian Market.

Kerosene Oils.

A quality for every need.
See that your Kerosene Tin bears one of the following marks:
Rising Sun, Anchor, Lion, Owl.
Water-Lily 150

Shell Industrial Oils.

The conditions are various in Industries.
The Requirements are difficult to decide.
The breakdowns are very costly.
Don't use Quack Oils.
They are as dangerous to the machine,
As the Quack Medicines to human body.
We give Free advice.

Greases.

Shell cup grease, a very superior quality.
Burmoline Grease, superior but at a lower price.
Also cheaper varieties are available.

Wax.

We always stock a very superior quality of pure Wax.

Turpentine.

Excellent for Painting
And
Other Purposes.

Colas.

For Iron it is rust preventive
For timber it is preservative.
For flooring it gives good finish.
Protects–Preserves–Decorates.

Motor Industrial Lubricating Oils.

Quality with moderation in price.
Make your choice from the Huge varieties of
1 M. C. C. Motor Oils.
2 A. P. C. industrial Oils.
3 Burmah-Shell Bus Oils.
4 B. O. C. Industrial Oils.

Shell-Tox.

Destroy those Fleas else.
They destroy you.
Buy A Shell-Tox
And
Spray.
They vanish
And
You are saved from Disease.

Selberling Tyres.

We do not sell cheap tyre.
We give you a tyre that is cheap in service.
A High quality product Tried under Vigorous tests.
They give you more miles per tyre.
And
Less cost per mile.

Always at the Service of Our Patrons.

(೫೫ನೇ ಪುಟದಿಂದ ಮುಂದುವರಿಸಿದೆ)

ಆದರೆ ಹಳ್ಳಿಯಲ್ಲಿ ಅದಿಲ್ಲ. ಅರಿಯದ ಜನರು ಅಸಂಸ್ಕೃತ ರೀತಿಯಿಂದ ಉರುಚಿಂಡಿ ಮದ್ದಳೆಗಳನ್ನು ಬಡಿದು ಕುಣಿಯುವರು. ಯಕ್ಷಗಾನವೆಂಬುದು ಗಾನ ವನ್ನು ಹಾಡುವರು. ಅನಕಾಶ ದೊರೆತರೆ ಹಳ್ಳಿಯ ಗೊಡ್ಡರು ಸೇರಿ ಯಕ್ಷಗಾನ ಕಾಲಕ್ಷೇಪ ಮಾಡುವರು. ಹೊಲಗೇರಿಯ ಬಳಿಗೆ ಹೋದರೆ–ಕುಡಿದಾಗಲೋ, ಕೆಲಸ ವಿಲ್ಲದಾಗಲೋ ದೊಲನ್ನು ಬಡಿದು ಮೈಮುರಿದು ದೂಳೆಬ್ಬಿ ಸುವ ಕುಣಿತವೂ ಕಾಣಿಸುವುದು.

ಇವೆರಡನ್ನು ಕಂಡವರು ಒಂದನ್ನೊಂದಕ್ಕೆ ಹೋಲಿಸು ವುದೇ ಇಲ್ಲ. ಹೋಲಿಸುವುದೂ ತಪ್ಪು. ಆದರೆ ಈ ಹಳ್ಳಿ ಗರ ಆನಂದದ ಸಾಧನೆಗಳಲ್ಲಿ ಹುರುಳಿದೆಯೇ ಎಂದಾದರೂ ವಿಚಾರಿಸುವುದು ಅವಶ್ಯ. ಅವರಲ್ಲಿ, ಹಳ್ಳಿಯಿಂದ ಪೇಟೆಗೆ ಬಂದವರು–ಬಯಲಾಟಕ್ಕೆ ಆರ್ಥವಿಲ್ಲ–ಎನ್ನುವ ದುಂಟು. ಭಯಲಿನಲ್ಲಿದ್ದ ಬ್ರಾಹ್ಮಣರು, ಕುಣಿಯುವ ಕೊರಗರನ್ನು ಕಂಡು–"ಇವಕ್ಕೆ ಬೇರೇನು ಕೆಲಸ?" ಎಂದುದೂ ಉಂಟು.

ಆದರೆ ಸೊಗಸಿನ ಗುರುತು ಪಡಿಯಬಲ್ಲವನು ಅವರ ಆಟಪಾಠಗಳ ಸವಿಯನ್ನು ಉಣ್ಣಲು ಶಕ್ತನಾಗುವನು. ಅವರಿಗೇ ಅದರ ಅಪಾರ ಶಕ್ತಿಯು ಅರಿವಿಲ್ಲದೆ ಅಂದಿದು ಮೂಲೆ ಗುಂಪಾಗುತ್ತ ಬಂದಿದೆಯಾದರೂ, ಉಳಿದೊಂದೆರಡು ಅವಶೇಷಗಳನ್ನು ಕಂಡರೂ ಆನಂದದ ಕುರುಹು ಕಾಣಿಸು ವುದು.

ಮಳಿಗಾಲ ಕಳೆಯಿತೆಂದರೆ ನಮ್ಮಲ್ಲಿ ಬಯಲಾಟಕ್ಕೆ ಮೊದಲು. ಕತ್ತಲಾಗಲು ಸೂಟಿಗಳನ್ನು ಪಡೆದು ಹತ್ತೆಂಟು ಮೈಲು ನಡೆದು ಬಯಲಾಟವೊಂದನ್ನು ಕಾಣಲು ಹೋಗು ವವರುಂಟು. ಇಂಥ ಆಟಗಳನ್ನು ನೋಡಲು ಇಷ್ಟವಿಲ್ಲ ದವರು, ನಾಗರಿಕತೆಯಿಂದ ಬಂದಿಷ್ಟೂ ಕೆದರ ಹಳ್ಳಿಯ ಹುಡುಗರು, ಈ ಆಟಗಳನ್ನು ನೋಡುತ್ತಿರುವುದನ್ನು ಕಂಡರೆ ತಿಳಿಯುವುದು.

ಈಗ ಬರುತ್ತಿರುವನು–ಮೈರಾವಣ ದೂರದ ಕೇಕೇ–ಕೇಳಿಯೇ ನಿದ್ದೆ ಬಂದ ಬಾಲಕನೊಬ್ಬನಿಗೆ ಎಚ್ಚರ ವಾಗುವುದು. ಬಳಿಯಲ್ಲಿ ತೂಕಡಿಸುತ್ತಿರುವ ತನ್ನಮ್ಮನನ್ನು ಕಂಡವನು "ಬಾಬು, (ಬೇಬಿಯಲ್ಲ) ಏಳೇಳು, ಮೈರಾವಣ ಬಂದ" ಎನ್ನುವನು ಬಾಲಕನು ತಡೆಯಲಾರದ ನಿದ್ದೆ ಯನ್ನು ಎಡದು ಅಣ್ಣನ ಮೇಲೆ ಒರಗಿ ಕುಳಿತುಕೊಳ್ಳುವನು. ತೆರೆಯ ಹಿಂದೆ ಮೈರಾವಣನ ಕೂಗು ಕೇಳಿಸಿತು ಮುಚ್ಚಿದ ಕಣ್ಣು ತೆರೆಯಿತು ಮೈರಾವಣನ ಕೈ ಕಾಣಿಸಿತು ತೆರೆ ಚಲಿಸಲಾಯಿತು. ಕಾಲು ಕುಣಿಯಿತು. ಮುಖ ತೋರಿತು–ಎಲ್ಲಿಗೆ ನಿದ್ದೆ ಸಂಪೂರ್ಣ ಬಿಟ್ಟಿತು

ಮೋಕೆ ಕಾಣುತ್ತಲೇ, ಅದರ ಮೇಲಿನ ಚಿಟ್ಟೆಗಳು ಕಾಣುತ್ತಲೇ, ಆ ಕೀಟ ಕಾಣುತ್ತಲೇ–ಮಗುವಿನ ಸ್ವಪ್ನ ರಾಜ್ಯದ ರಾಕ್ಷಸನು ಗೋಚರಿಸಿದನು ಅಜ್ಜರಿಗೊಂದನು ರಾಮ ರಾವಣರ ಯುದ್ಧದ ಕಥೆ ಕೇಳಿರುವನವನು ರಾವ ಣನ ಚಿತ್ರನನ್ನೊಂದು ಬಗೆಯಾಗಿ ತನ್ನ ಪುಟ್ಟ ಬಿಡುಗಲ್ಲಿ ಕಲ್ಪಿಸಿಕೊಂಡಿದ್ದನು ಇದನ್ನು ಕಂಡೂ ಅದಕ್ಕೂ ಭಯಂಕರ ವ್ಯಾಣಿ–ರಾವಣನೆಂದು ತಿಳಿದನು

ರಾವಣನು ಮೋರೆಯುಜ್ಜುವನು, ಶಿವಪೂಜೆ ಮಾಡು ವನು. ಹಾಗಾದರೆ ಅವನು–ದೈವದ್ರೋಹಿಯಲ್ಲ ಶಿವ ಭಕ್ತ! ಒತ್ತಟ್ಟು ನಗು, ಒತ್ತಟ್ಟು ಅಚ್ಚರಿ! ಇನ್ನೊತ್ತಟ್ಟು ಅವನ ದುರ್ಬುದ್ಧಿಗಾಗಿ ಸಿಟ್ಟು.

ಈಗ ನಡೆಯುತ್ತಿದೆ ರಾಮ ರಾವಣರ ಯುದ್ಧ. ಆ ಕುಣಿತ! ಅದರ ಗತಿ, ಆ ಹೆಜ್ಜೆ, ಆ ಚಲನ, ಆ ಚಿಂಡೆ, ಆ ಕೇಕೆ! ಅದೆಲ್ಲವು ಅವನನ್ನು ಮೋ�ಹಿಸಿಬಿಟ್ಟಿವೆ. ಬಾಬುವು ಬಾಬುವಾಗಿಲ್ಲ! ಬಾಬುವು ರಾಮನ ಸೇನೆಯ ಕಪಿಯಾ ಗಿದ್ದನು. ಆಂಜನೇಯನ ಚಿಕ್ಕ ಮರಿಯಾಗಿದ್ದನು! ಅಯ್ಯೋ, ರಾಮನಿಗಿಂತ ಅವನು ಹೊಡ್ಡುತ್ತಿರುವ ಸಮರವು ಅಧಿಕ. ಇನ್ನೂ ರಾವಣನು ಸೋಲನಲ್ಲ.

ಇನ್ನೊಂದು ದಿನ ಬಯಲಾಟ. ಬಾಬುವು ತಪ್ಪದೆ ಅಣ್ಣನ ಜತೆಯಲ್ಲಿ ಬಂದಿರುವನು. ತಿರುಗಿ ಬಾಬುವಿಗೆ ನಿದ್ರೆ. ಬೆಳಗಿನ ಝಾವದ ಸಮಯ. ಕರ್ಣನು ಬರುವ ವೇಳೆ! ಬಾಬುವಿಗೆ ನಿದ್ದೆ. ಚಂಡೆ ಬಡಿಯಿತು! ಪಡಕ್ಕನೆ ತಪ್ಪಂತೆ ಬಾಬುಗೆಚ್ಚರವಾಯಿತು. ಶರ್ಜಾರ್ಜುನರ ಕಾಳಗ. ಹಾಸದ ಬಾಬುವು ಯಾರು ಪ್ರಶ್ನೆಸನ್ನು ನಡೆಸಲಿ! ಕರ್ಣ ನದೇ, ಅರ್ಜುನದೇ! ಧೂರು ಅವರಿಂಗಳು! ದೂರು ಪರಾಕ್ರಮಿಗಳು! ಒಮ್ಮೆ ಒಲವೆನ್ನು, ಅರ್ಜುನನಗೊಪ್ಪಿಸು ವನು. ಇನ್ನೊಮ್ಮೆ ಕರ್ಣನನ್ನು ಎತ್ತಿ ಪಿಡಿಯುವನು! ಅವರ ಪಾಳಿಯನ್ನು, ಅವನ ಒಡಲು, ಈ ಸಂದೇಹದಿಂದ ಸೀರ ಪಾಯಿತು. ಪ್ರೇಕ್ಷಕನಾಗಿ ನಿಂತನು. ಗೆದ್ದ ಅರ್ಜುನನಿ ಗಾಗಿ ಬೆಗ್ಗಲಿಲ್ಲ. ಸೋತ ಕರ್ಣನಿಗಾಗಿ ಮರುಗಲಿಲ್ಲ!

ಬಾಬುವು ಆನಂದದ ನವೀನ ರಾಜ್ಯದಲ್ಲಿ ವಿಹರಿಸು ತ್ತಿರುವನು!

ಆದೇ ಬಾಬು ತುಸು ದೊಡ್ಡವನಾಗಲು ಅಣ್ಣನ ಜತೆ ಯಲ್ಲಿ–ದನಕಾಯಲು ಹೊರಟನು. ಅಣ್ಣನಂತೆ ಓಟಿನಲ್ಲಿ ಗೆಯ ಕೊಳಲನ್ನು ಮಾಡಿ, ಊದ ತೊಡಗಿದನು! ಒಮ್ಮೊಮ್ಮೆ ಕೋಣವನ್ನೇರಿ ಸವಾರಿ ಮಾಡಿದನು. ಆಗಲೂ ಅದನ್ನು ಊದಿದನು

ಕುದುರೆ ಮುಖಕ್ಕೆ ಹೋಗುವ ಹಾದಿಯಲ್ಲಿ ಹೇವಳ ವೆಂಬೊಂದು ತಗ್ಗು ಪ್ರದೇಶವಿದೆ. ತಗ್ಗೆಂದರೆ ಕುದುರೆ ಮುಖಕ್ಕಿಂತ ೨೦೦೦ ಅಡಿ ತಗ್ಗಿರಬಹುದು ಬಯಲಿಗಿಂತ ೫೦೦ ಅಡಿ ಏರಿರಬಹುದು. ಹೇವಳವು ದೊಡ್ಡ ಊರು. ಒಂದೇ ಒಂದು ಮನೆ. ಆದರೆ ಮನೆಯಲ್ಲಿ ದನಕರುಗಳು ತುಂಬ. ಸುತ್ತ ಗಗನಚುಂಬಕ ಬೆಟ್ಟಗಳು ವೃತ ತೋಡವೂ ಬಂದು ಅವನ್ನು ಚುಂಬಿಸಿ, ಅವುಗಳ ಅನುಮತಿ ಪಡೆದೇ ಮುಂದೊತ್ತುತಿದ್ದವು.

ನಾನು ಅಲ್ಲಿಗೆ ಹೋದುದು ಅದೊಂದು ಸಂಜೆ ಗೆಳೆ ಯರು ಕೆಲವರಿದ್ದರು. ಬೆಟ್ಟವನ್ನು ಏರಿ ಏರಿ ಬೆಟ್ಟದ ಮಹಾ ದ್ವಾರಕ್ಕೆ ಬಂದೆವು. "ಪಿರಿಮರಿಗುಸ್ಸೆ"ಯ ಇಳಿ ಮೈಯದು. ಗುಸ್ಸೆಯ ತುದಿಯು ಕರಿಮೋಡವೊಂದರೊ ಡನೆ ಗುಟ್ಟಿನ ಮಾತಾಡುತ್ತಿತ್ತು ಸಂಜೆಯ ಸೂರ್ಯನು ಮುಣುಗುತಿದ್ದನು. ಆ ಕ್ರಶಾಂತ ವಾತಾವರಣದಲ್ಲಿ—ಬೇರೆದನಿಯೊಂದಿಲ್ಲ ಒಂದೇ ಒಂದು ನಿನಾದವೆಂದರೆ—ಕೊಳಲ ದನಿ. ಅದರಲ್ಲಿ ಚಮತ್ಕೃತಿಯಿದ್ದಿರಲಿಲ್ಲ! ಪಾಂಡಿತ್ಯವಿದ್ದಿರಲಿಲ್ಲ. ಆದರೆ ಅದು ನೇರಾಗಿ ನನ್ನ ಒಡ ಲನ್ನು ಸೇರಿ ಕಲುಕಿಬಿಟ್ಟಿತು. ನಡೆನಡೆದು ನೊಂದ ನನ್ನ ಕಾಲುಗಳ ಮರವೆಯನ್ನುಂಟುಮಾಡಿತು. ದಿವ್ಯಗಾನವದು. ಆ ಗೋಪಕನ್ನೆಯರೆಷ್ಟು ಭಾಗ್ಯಶಾಲಿಗಳೋ ಎಂದು ಮುಂದೆ ಸರಿದೆ ಕಣ್ಣಿಗೆ ನಿಜಕ್ಕೂ ನನ್ನ ಕೃಷ್ಣನು ಕಾಣಿಸಿದನು. ಮೇವನ್ನುಂಡು—ಉದಾಸೀನ ಭಾವದಿಂದ ಅತ್ತಿತ್ತ ನೋಡು ತ್ತಿದ್ದ ದನಕರುಗಳು ಈ ಕೊಳಲನುಡಿಯನ್ನು ಕೇಳಿ ಮನೆಯ ಹಾದಿ ಪಿಡಿದುವು. ಬಾಲಕನೂ ಅವನ ಚಿಕ್ಕ ಸೋದರಿಯೂ ಹೀಗೆಯೇ ನಲವಿಂದ ,ಗಾನಮಾಡುತ್ತ ಮನೆಯನ್ನು ಸೇರಿ ದರು!

ಈ ಊರಿನ ಹತ್ತು ಮೈಲಿಗೆ ಬೇರೆ ಮನೆಗಳಿಲ್ಲ. ಹತ್ತು ದಿನಕ್ಕೊಮ್ಮೆ ಆ ದಾರಿಯಾಗಿ ಹಾಯುವ ವ್ಯಯಾ ನಿಕವಿಲ್ಲ ಆದರೂ ಆ ಕೊಂಪೆಯಲ್ಲಿ ಸೊಗಸು ಸೃಷ್ಟಿ ಯಲ್ಲಿ ತುಂಬಿದ್ದಂತೆ, ಆ ಬಾಲಕನ ಗಾನದಲ್ಲಿ ತುಂಬಿತ್ತು. ತನಗೇ ತಿಳಿಯದೆಂಬಂತೆ ಅವನು ಸೊಗಸುಣ್ಣುತ್ತಿದ್ದನು.

ಅದೇ ಬಾಲಕನು ಸಾಲೆಗೆ ಹೋದರೆ, ಅವನು ಈ ಆನಂದವನ್ನು ಬಹುದಿನಗಳ ವರಗೆ ಉಣ್ಣುವುದಿಲ್ಲವೆಂಬುದು ಖಂಡಿತ. ಇಲ್ಲವೆ, ಇನ್ನಾವ ಬಗೆಯ ನಾಗರಿಕ ಸಂಪರ್ಕ ವಾಗಿದ್ದರೂ ಅದು ನಾಶವಾಗದಿರುತ್ತಿದ್ದಿಲ್ಲ.

ಇನ್ನೊಂದು ದಿನ ಹೊಲಗೇರಿಯೊಂದರ ಬಳಿ ಹೋಗಿ ನಿತ್ಯ ಮದ್ದಳೆಯ ಬಡಿತವನ್ನು ಕೇಳಿ ಇವರ ಆ ಸುಖದ ಸಾಧನೆ ಯೇನೆಂದು ತಿಳಿಯುವ ಕುತೂಹಲವಾಯಿತು ಉಪಾ ಯಾಂತರದಿಂದ ಅವರ ಸುಖ ಸಾಧನವಾದ ನರ್ತನವನ್ನು ಕಾಣುವ ಅವಕಾಶ ಕಲ್ಪಿಸಿಕೊಂಡೆ ಹತ್ತೆಂಟು ಚಲ್ಲಿಪಿಲ್ಲಿ ಗಳು—ಹರಿಕಿರಿಯರು ಸೇರಿದ್ದರು. ಒಬ್ಬನು ತುತ್ತೂರಿ ಹಿಡಿದನು, ಒಬ್ಬನು ತಾಳ, ಇನ್ನೊಬ್ಬನು ದೋಲು. ಕುಣಿಯಲು ತೊಡಗಿದರು. ಹೆಜ್ಜೆ ಹರಿಯಿತು, ಹುಬ್ಬು ಹಾರಿತು, ಮೈ ಬೆವರಿತು. ನೋಡುತ್ತ ನಿಂತೆ. ಕುಣಿ ಯಲು ತೊಡಗಿದವನ್ನೊಬ್ಬನೇ. ಅಂತ್ಯವಾಗುವಾಗ ಅವರ ಗುಂಪಿನಲ್ಲಿ ಕುಣಿಯದವರಿಲ್ಲದಾಯಿತು. ನೆರೆಯಲ್ಲಿ ಸಿಲು ಕಿದ ಕಸಕಡ್ಡಿಗಳಂತೆ, ಎಲ್ಲರೂ ತನ್ನಂತೆ ಸೆಳೆದೊಯ್ಕಲ್ಪ ಟ್ಟಿದ್ದರು.

ಶರೀರವು ಧನಿದರೂ ಅವರ ಮನವು ಧನಿಯಲ್ಲಿಲ್ಲ. ಹಾವಭಾವಗಳಲ್ಲಿ ಲಾಲಿತ್ಯವಿದ್ದಿರಲಿಲ್ಲ. ಸತ್ಯದ ಮಾತು. ದೊಪಳಾವಷ್ಟಿರಿದ್ದರಲ್ಲಿ. ವಿದ್ಯುತ್ ಬೆಳಕಿನ ಬದಲು ಗಾಳಿಗೆ ಆಗಾಗ ಚಿಕ್ಕದೊಡ್ಡದಾಗುವ ದೀಪಕ್ಕೆ ಇತ್ತು. ಇಷ್ಟು ಅಲ್ಪ ಉಪಕರಣದಿಂದ ಆನಂದದ ಮಾರುತನನ್ನು ಎಬ್ಬಿಸಿದರವರು.

ತಾಮಸಿಕವಾದ ನರ್ತನವು ಇಷ್ಟು ಶಕ್ತಯುತವಾಗಿ ದ್ದರೆ, ಭಾವವಾಹಕವಾಗಿದ್ದರೆ, ಸಾತ್ವಿಕವಾದ ಭರತ ನಾಟ್ಯವು ಹೇಗಿರಬೇಕು? ಅದಿಂದು ಕಾಮುಕರ ಕಾಸಿಗೆ ಮರುಳಾದ ವೇಶ್ಯೆಯರ ಕೈಯಲ್ಲಿ ಸಿಲುಕಿದೆ. 'ಜಿಗ್ಸ್' 'ದೊಲಕ್' ಜಾದಾ' 'ವಹಾವ್ವಾ'ಗಳು ಆ ನರ್ತನದ ಅಧಿ ದೇವತೆಗಳಾಗಿವೆ. ಅದನ್ನು ನೋಹಿಸಿ ಹೋಗುವ ನೆಮ ಗೆಲ್ಲಿಯ ಆನಂದವು ಸಿಗಬೇಕು?

ಹಳ್ಳಿಗರು ತಮ್ಮ ಕಲೆಗಳನ್ನು ಶ್ರದ್ಧೆಯಿಂದ ಹೇಗೂ ಹೇಗೂ ಉಳಿಸಿಬಂದಿರುವರು. ಪೂರ್ಣ ಉಳಿಸದಿದ್ದರೂ, ಕೆದಿಸಲಿಲ್ಲ. ಆದರೆ ನಾಗರಿಕರ ಭರತ ನಾಟ್ಯವು ನಾಗರಿಕ ರಿಗೆ ಸಿಕ್ಕಿ– ಕುಲಗೆಟ್ಟಿದೆ.

ನಾಗರಿಕರೀಗ ತಮ್ಮ ಸುಧಾರಣೆಯ ಕೆಲಸವನ್ನು ದಯೆಯಿಂದ ಯಕ್ಷಗಾನ ಬಯಲಾಟಗಳ ಮೇಲೂ ತೋರಿ ರುವರು. ಹಾಸ್ಯಗಾರನ ಹಾಸ್ಯವು ಭಂಡಾಗಿ ಬಂದಿದೆ ಬಯಲಾಟದ ಜೀವವಾದ ನರ್ತನವು ನಿಂತು, ಉಡುಗೆಯು ಬದಲಿಸಿ ಫರದೆ, ಚಮಕಿ, ಡ್ರೆಸ್ಸುಗಳು ಬಂದಿವೆ. ಯಕ್ಷ ಗಾನ ವೈಯರ ಕವಿಯ ಸ್ನೇಹವು ಹೋಗಿ ತಾಳಮದ್ದಳೆಯು ಚತುರ ವಾಗ್ಜಾಲಿಗಳ, ತಾರ್ಕಿಕ ಸಭೆಯಾಗಿದೆ. ಇದೇ ಸುಧಾರಣೆಯೆಂದು ತಿಳಿಯತಕ್ಕದಿರುವಿವು. ಒಂದು ದಿನ ಇದೂ ಭರತನಾಟ್ಯದ ಹಿಂದೆ ಸರಿಯುವುದೋ ಏನೋ? ಬಯಲಾಟದ ನಿರ್ದೋಷ ಹಾಸ್ಯದಲ್ಲಿ ವ್ಯಂಗಮಾತುಗಳೂ ಭಂಡುಗಳೂ ಬಂದಿವೆ!

ದೇವರ ದಯೆಯಿಂದ, ಹೊಲೆಯರ ನರ್ತನವು, ಇನ್ನೂ ನಾಗರಿಕವೆಂದು ತಿಳಿಯಲ್ಪಡಲಿಲ್ಲವಾದುದರಿಂದ ಎನೋ, ಅಥವಾ ಹೊಲೆಯರು ನಾಗರಿಕರಾಗಿದ್ದುದ ರಿಂದಲೋ ಏನೋ, ತಪ್ಪು ಉಳಿದಿದೆ. ಅದೂ ಸುಧಾರಿತ ವಾದರೆ ಕಲೆಯು ಕೊಲೆಯಾಯಿತು, ಸೊಗಸಿನ ಕೊನೆ ಯಾಯಿತು.

ಇನ್ನು ಕವಿತೆಯ ಸುದ್ದಿ. ನನ್ನ ಅನುಭವ ಕಡಿಮೆ ಆದುದರಿಂದ ಏನೂ ಹೇಳುವುದಿಲ್ಲ, ಆದರೆ ಕಲ್ಲಿನ ಕವಿತೆ ಗಳಾದ ಗುಡಿಗೋಪುರಗಳ ಸುದ್ದಿ ಚೆನ್ನಾಗಿ ಬಲ್ಲೆ. ಕಲ್ಲಿನ ಗುಡಿಗಳಿಗೆ ಹುಲ್ಲಿನ ಮಾಡಾಯಿತು. ಹುಲ್ಲಿನ ಮಾಡು ಹೋಗಿ ಹೆಂಚಿನ ಮಾಡಾಯಿತು. ಗೋಡೆಗಳ ಕೆತ್ತನೆ ಕೆಲಸದ ಅಸಹ್ಯ ಚಿತ್ರ ಕಾಣಲಾರದೆ, ಗೋಡೆಗಳನ್ನು ಕಿತ್ತು, ಜೀರ್ಣೋದ್ಧಾರ ಮಾಡಿದರು. ಈಗೀಗ ನಮ್ಮ ದೇವರು ಬಂಗ್ಲೆಗಳಲ್ಲಿರ ತೊಡಗಿರುವನು.

ಗುಡಿಯ ಗತಿ ಆದಾದರೆ ಗುಡಿಯ ಒಡೆಯನ ಗತಿ? ಅವನನ್ನು ಸುಧಾರಿಸದೆ ಬಿಡುವರೇ! ಕಾಂಚನವನ್ನು ಮುಟ್ಟಿದ ಸನ್ಯಾಸಿಗಳು ಸಹ ಸೊಗಸಿರುವುದು ಚಿನ್ನ ಬೆಳ್ಳಿ ಯ ಆಭರಣಗಳಲ್ಲಿ–ಎಂದು ತಿಳಿದರು. ಅದರಿಂದಲೇ ಉಡುಪಿ ಕೃಷ್ಣನ ಅಸಹ್ಯ ನಗ್ನ ರೂಪವನ್ನು ಕಾಣಲಾರದೆ ತಗಡು ಜರತಾರಿಗಳನ್ನು ತೆರತೆರನಾಗಿ ತೊಡಿಸಿ ಅವನನ್ನು ನಾಗರಿಕನನ್ನಾಗಿ ಮಾಡಿದರು. ಈಗ ಕೃಷ್ಣನು "ಕೃಷ್ಣ" (ಕವ್ಣು) ನಲ್ಲ 'ಮಂಚರಂಗೀ' ಗೋಪಾಲ. ಗೋಪಾ ಲನೂ ಅಲ್ಲ ಶ್ರೀ ಪಾಲ ತಿರಿಯನ್ನು ಪಾಲಿಸುವುದೆಂತು? ಹೊತ್ತಿರುವುದು ಅವನ ಕೆಲಸ. ಆದುದರಿಂದ ಶ್ರೀಧರ ನವನು.

ಕೊಲ್ಲೂರು ಮುಕಾಂಬಿಕೆಯೊಬ್ಬಳಿರುವಳು. ಅವ ಳನ್ನು ತೀರ ಸುಧಾರಿಸಿದರು ಕಣ್ಣನ್ನು ಕಿತ್ತು ಮಚ್ಚೆ ಕಲ್ಲು ಗಳನ್ನು ತುರುಕಿರುವರು. ಹಳೆ ಹಲ್ಲುಗಳನ್ನು ಕಿತ್ತು ಕೃತ್ರಿ ಹಲ್ಲುಗಳನ್ನು ಇರಿಸುವಂತೆ! ಕೆಲವು ದೇವರಿಗೆ ಇದ್ದ ಕಣ್ಣನ್ನು ಕಿತ್ತು ಬೆಳ್ಳಿಯ ಕಣ್ಣನ್ನು ಕೊಟ್ಟರು. ಎಂಥ ಭಕ್ತಿ! ಎಂಥ ಸೌಂದರ್ಯೋಪಾಸನೆ.

ಬರೆದರೆ ಎಷ್ಟೂ ಬರೆಯಬಹುದು. ಆದರಿಂದ ನಿಮ ಗಾದರೂ ಬೇಸರ, ಕೊನೆಯ ಮಾತೆಂದು ಇಷ್ಟನ್ನು ಹೇಳುವೆ ಹೊಟ್ಟೆಗಿಂತ ಒಡಲು ದೊಡ್ಡದು, ಚಿನ್ನಕ್ಕಿಂತ ಕಲೆಯ ದೊಡ್ಡದು–ಎಂಬುದನ್ನು ಎಂದಿನ ತನಕ ನಾವು ತಿಳಿಯುವ ದಿಲ್ಲವೋ—ಅಂದಿನ ತನಕ ನನ್ನ ಊರಿನ ಸೊಗಸು ಮಂಗ ಕೈಯ್ಯ ಮಾಣಿಕ್ಯವು.

ಸೆಕುಂಡಿಗೆ 60,000 ಚಿತ್ರ! ಒಂದು ಸೆಕುಂಡೆಂದರೆ ಒಂದು ನಿಮಿಷದ 60ನೆಯ ಒಂದಂಶ. ಇಷ್ಟನ್ನು "ಒಂದು ಎರಡು" ಎನ್ನುವಷ್ಟು ಸಮಯ. ಈ ಸಮಯದ 60,000 ಪಾಲು ಮಾಡಿದರೆಷ್ಟು? ಊಹಿಸಲಿಕ್ಕೆ ಸ್ವಲ್ಪ ಕಷ್ಟವಾಗುವುದಲ್ಲವೇ? ಆದರೂ ಹಾಗಾಗಿನ ಬೆರಗಿನ ವಿಚಾರವೆಂದರೆ ಇಂಜಿನಿಯರರು ಸೆಕುಂಡಿಗೆ 40,500 ಚಿತ್ರಗಳನ್ನು ತೆಗೆಯುವ ಕೆಮರ (Camera)ವನ್ನು ತಯಾರಿಸಿದ್ದಾರೆ; ಜಾಣ್ಮಾನ ವಿಜ್ಞಾನ ಸಂಘವು ಸೆಕುಂಡಿಗೆ 60,000 ಚಿತ್ರ ತೆಗೆಯುವ ಕೆಮರಾವನ್ನು ತಯಾರಿಸಿದ್ದಾರೆಂದರೆ ಈ ಕೆಮರಾ ಯಂತ್ರವು ಎಷ್ಟು ವೇಗ ಚಲನವುಳ್ಳದ್ದಾಗಿರಬೇಕೆಂದು ತಿಳಿಯುವುದು.

ಒಂದಿಷ್ಟು ನಗು.

ಬುದ್ಧಿವಂತರು.

ಗಂಡ್ಲು ಬಾಯಿ ತೊಳೆಯೋಕೆ ಬಚ್ಚಲು ಮನೆಯಲ್ಲಿ ಬಚ್ಚಲ ಕಲ್ಲಿಗೆ ಬಿಳಿಯಾದ ಸುಣ್ಣದ ಪುಡಿ ಹಾಕಿದ್ದರು. ಅದನ್ನು ತಿಂದು ಮೂರು ಜನ ಹುಡುಗರು ಅಲ್ಲೇ ಕೊಚ್ಚಿಯನ್ನು ಹತ್ತಿದರು. ನೀರಿನಲ್ಲಿದ್ದ ಮೀನುಗಳನ್ನು ಕಂಡು ಒಬ್ಬ ಹುಡುಗ ಬಹಳ ಆಸೆಪಟ್ಟನು. ಅವುಗಳನ್ನು ಹಿಡಿಯಲು ಅವನು ಕೊಚ್ಚಿಯಿಂದ ಕೆಳಕ್ಕೆ ಜಿಗಿದನು. ಆಗ ಅವನಿಗೆ ಬಹಳ ಆಳವಾಗಿ ಬಾವಿ ಇರುವುದು ಕಂಡಿತು. ಅವನು ಮೇಲಕ್ಕೆ ಬರಲು ಪ್ರಯತ್ನಪಟ್ಟನು. ಆದರೆ ಅವನಿಗೆ ಈಜು ಬರುತ್ತಿರಲಿಲ್ಲ. ಆಗ ಅವನು ಕೂಗಿಕೊಂಡನು. ಆಗ ಮೇಲಿದ್ದ ಇಬ್ಬರು ಹುಡುಗರು ಕೆಳಕ್ಕೆ ಜಿಗಿದರು. ಅವರಿಗೂ ಈಜು ಬರುತ್ತಿರಲಿಲ್ಲ. ಆಗ ಅವರು ಮೂವರೂ ಕೂಗಿಕೊಂಡರು. ಆಗ ಒಬ್ಬ ಹುಡುಗ ಮೇಲಿನಿಂದ ಕೂಗಿ ಹೇಳಿದನು. "ಮತ್ತೆ ಬಂದ ನಾಲ್ಕನೆ ದೊಡ್ಡ ಮನುಷ್ಯರೂ ಸುಣ್ಣವಾಗಿ ತೊಚ್ಚಿಯನ್ನು ಸ್ವಾಧೀನ ಪಡಿಸಿಕೊಂಡರು."

ಗಾಣಿ ಹೊರಗೆ ಮೇಲೆ ನಾಲ್ಕರಲ್ಲಿ ಇನ್ನೊಬ್ಬನು ಗಾಣವನ್ನು ಕಟ್ಟಿದವನನ್ನು—ಅವನು ಮುಂಜಾನೆ ತಡಗಡ ಎಂದು ಹೇಗೆ ತಿಳಿದೆ—ಎಂದು ಆಶ್ಚರ್ಯ ಪಟ್ಟು ಕೇಳಿದನು.

"ಅವನು ತಿಂದ ಬಗ್ಗೆ ಒಬ್ಬನಿಗೆ ದುಡ್ಡು ಕೊಡುವಾಗ ಪಾಕೀಟಿನಲ್ಲಿ ಅವನ ಬೀಳಿಟಿನ ಒಂದು ಸಣ್ಣ ಮುಳಿಯು ಹೊರ ಬಿದ್ದುದು ನೋಡಿದೆನು. ಆದರ ಬ್ಲಾಕಿನ ಸಣ್ಣ ಬೀಳಿಟಿನ ಬ್ಲಾಡಿಂತೆಯೇ ಇತ್ತು" ಎಂದು ಅವನು ಉತ್ತರ ಕೊಟ್ಟನು.

ನಷ್ಟದ ಗಣ್ಣಿಲ್ಲ.

ತಿಕ್ಕ ರಾಮುವು ತನ್ನ ತಂದೆಗೆ ಉಡುಪನ್ನು ಕೊಟ್ಟು ಪಾಂಶಾತ್ಯರನ್ನು ಹಿಡಿದು ಬರುತ್ತಿದ್ದನು. ಜಾರಿನ ಮಹಾ ಪೋಕರಿ ಭೀಮುವು ಪಾಡಿಯಲ್ಲಿ ಅಡ್ಡವಾದನು.

"ಲೊ, ರಾಮು, ನಾನು ಆ ಪಾತ್ರೆಯನ್ನು ಒಡೆದು ತುಂಡು ಮಾಡಿದರೆ ಹೇಗೆ?" ಎಂದನು. "ಹಂತಿಲ್ಲ" ಎಂದು ರಾಮುವು ಉತ್ತರ ಕೊಟ್ಟನು. ರಾಮುವಿನ ಮುಸ್ಸುಗೆ ನೋವಾಗದಿದ್ದುದನ್ನು ಕಂಡು ಬಹಳ ಬೇಸರಪಟ್ಟು—"ಹಾಗಾದರೆ ಇದನ್ನು ಹೊರು ಮಾಡಿದರೆ ನಿನಗೇನೂ ದುಃಖವಿಲ್ಲವಲ್ಲ?" ಎಂದು ಭೀಮುವು ಅಂದನು.

"ಇಲ್ಲ; ಆದನ್ನು ನೀನು ಒಡೆಯಬೇಕೆಂದೇ ನನ್ನ ಆಸೆ"

"ಹಾಗೋ! ಹಾಗಾದರೆ ನೋಡು" ಎಂದು ಭೀಮುವು ಪಾತ್ರವನ್ನು ಜೋರು ದೂಡಿ ಬಿಟ್ಟನು. ಮತ್ತು "ಈಗ ಹ್ಯಾಗೆ?" ಎಂದನು.

"ನೀನು ಈ ಪಾತ್ರವನ್ನು ನನ್ನ ತಾಯಿ ನನ್ನ ತಾಯಿಯಿಂದ ಏರತಂದಿದ್ದಳು. ಮನೆಗೆ ಹೋದ ಮೇಲೆ ತಿಳಿದೀತು." ಎಂದು ರಾಮುವು ಅಂದು ಹೋಗಿ ಬಿಟ್ಟನು.

× × × × ×

ಅಮಕರದ ವಿದ್ಯಾರ್ಥಿಗೆ ಗುರು—ಯಾವುದನ್ನು ಕಲಿಯುವುದಾದರೂ ಬುಡದಿಂದ ಪ್ರಾರಂಭಿಸಬೇಕು.

ವಿದ್ಯಾರ್ಥಿ (ಸ್ವಗತವಾಗಿ)—ಈಜುವುದನ್ನು ಕಲಿಯಬೇಕಾದರೆ, ಗುರುಗಳೇ?

× × × × ×

ಹುಚ್ಚು ತಪಸಿ ನೆನಪಿಗೆ ಕೊಟ್ಟರುವ ಒಂದು ಕೊಲೆಯ ವಿಚಾರಣೆಯ ಆಫೀರಿಯಲ್ಲಿ ಜಡ್ಜರು—ಜೂರಿಯ ಗೃಹಸ್ಥರೇ! ಆರೋಪಿತನು ಅಕ ರಾಧಿಯಲ್ಲವೆಂದು ಹೇಳಿದರಲ್ಲ, ಯಾವ ಕಾರಣದ ಮೇಲೆ?

ಊದಾರ ಮುಸ್ಸುನ ಜೂರಿಗಳ ಮುಖಂಡ—ಹುಚ್ಚು ತನ ಸಾಕ್ಷ್ಯವನ್ನು ಟೆನ್ನಾಗಿ ಪರಿಶೀಲಿಸಿದ ಜಡ್ಜರು (ಆಶ್ಚರ್ಯದಿಂದ)—ಏನು ನಿನಗೆಲ್ಲಿ ಬಿಗುವ?

× × × × ×

ತಪಸಿನ ಮೇಲೆ ವಿಶ್ವಾಸವಿದ್ದವ—ಭಟ್ರೇ, ಪ್ರಯಾಣಕ್ಕೆ ಹೊರಟಾಗ ಹಾವು ಆಡ್ಡ ಬಂದರೆ ಒಳ್ಳೆಯದೊ ಕೆಟ್ಟದೊ.

ಕಂಡುಪನ್ನು ಕಂಡ ಹಾಗೆಯೇ ಹೇಳುವ ಭಟ್ಟು—ಳ್ಳದಿದ್ದರೆ ಒಳ್ಳೆದು.

× × × × ×

"ಎಂತಹ ಶತ್ರೆಗಳು ನಾವು?"

"ದಯವಾಗಿ ಏಳನಿಷಗಳಲ್ಲಿ ಮಾತನಾಡಿ."

"ಎಂತಹ ಶತ್ರೆ ನೀನು?"

× × × × ×

ಆತ್ಮಶ್ಲಾಘಿ—ನನ್ನೆದೊಂದು ಆಭ್ಯಾಸ. ನಾನೊಂದು ಕೆಲಸ ಕೈಕೊಂಡೆ ನೆಂದರೆ ಆದರಲ್ಲಿ ಯೇ ಜಿದ್ದು ತೊಡಿರುತ್ತೇನೆ.

ಕೇ. ಬೇಸರ ಪಟ್ಟುನೆ—ಒಂದು ಬಾವಿಯನ್ನಾದರೂ ನೀನು ತೋಡುವ ಪಟ್ಟು?

× × × × ×

ದೀಕ್ಷಾ ಕಾಲಿಂದ ತಡಕುವ ರೋಗ (ನಿರಾತಂಕದಿಂದ)—ರೋಗ ಗುಣ ಮಾಡೋದೇ ಹಾಸ್ಯಾಸ್ಪದ!

ಹಾಸ್ಯಾಸ್ಪದ:—ನಾನಾದೊಡನೆ ಬೇಕು ಈ ತಡಕು ರೋಗದಿಂದ ತಡಕು ಪದರಲ್ಲಿ ಜಡ್ಡರ್ಲ್ಲಿ ಒಳ್ಳೆಯ ಮಂದಿ ನ್ಯಾಯಾಸ್ಥಾನದಿಂದು ಮ್ಮು ಜಿಲ್ಲೆಯಲ್ಲಿ ಕೂಡ ಬರಿದು.

ಕೇಳಿ—ನಿಮ್ಮ ಮಾತು ಕೇಳಿದ್ದೇ ಈ ಜಡ್ಡಿ ಮುಲ್ಲ ತೆಳ್ಳಿದೀರಾ?

ಹಾಸ್ಯಾಸ್ಪದ—ಜಡ್ಡಿ ಈ ರೋಗ ಒಳ್ಳೆಯ ಜಡ್ಡಿಗೆ ಮುಲ್ಲ ತೆಳ್ಳಿ [illegible]

ಗುರುತು ಹಿಡಿಯುವುದು.

ಕ್ಯಾಮ್ಮಾಡಿಯ ರಾಮಣ್ಣನೂ ಒಂದು ನಡೇ ತೀರದಲ್ಲಿ ಹೋಗುತ್ತಿದ್ದರು. ತಾವಿಬ್ಬರಲ್ಲಿ ಯಾರೋ ಇಬ್ಬರು ಆಮಲಿಗಂದ ಬಿದ್ದು ಕೆಲಂಡಿದ್ದರು. ಕಾಲವೂ ರಾತ್ರಿಯಾಗಿತ್ತು. ಲಾಂದ್ರದ ಬೆಳಕಿನಲ್ಲಿ ಅವನ ಮುಖ ನೋಡಿ, ಅಲ್ಲಿಯೇ ಸ್ವಲ್ಪ ದೂರದ ಮನೆಯ ಲಿಂಗನಾ ಗಿದುಬಹುದೆಂದು ಊಹಿಸಿ, ಅವನ ಮನೆಗೆ ಹೇಳಿಬಿಡಲೆಂದು ಆಲ್ಲಿಗೆ ಹೋದರು. ಬಾಗಿಲು ಕರೆದರೆ ಸ್ವತಹಾ ಲಿಂಗನೇ ತೆರೆದನು.

"ಅಲೆ, ಲಿಂಗಣ್ಣಾ, ನೀನೀ ಪಡದಲ್ಲಿ ಒಬ್ಬ ಬಿದ್ದೊಂದಿದ್ದ; ಏನೇ ಎಂದೆನ್ನಿದ್ದ" ಎಂದು ಕ್ಯಾಮ್ಮಾನು ಹೇಳಿದಾ

"ಹೌದೋ! ಅವನು ಹೇಗಿದ್ದ" ಎಂದು ಲಿಂಗ ಕೇಳಿದ

"ಗಟ್ಟಿದೇ ಮೈಕಟ್ಟುವನಾಗಿದ್ದ"

"ಕಪ್ಪು ಗೀಟಿನ ಅಂಗಿ ಹಾತಿದ್ದನೋ!"

"ಹೌದು"

"ಕಾಲಿಗೆ ಚೋಡಿತ್ತೋ ಇಲ್ಲ ಪೌ!"

"ಇತ್ತು."

"ಹೊಸದೊ ಹಳತೊ?"

"ನಲ್ಲು, ನೆನಪಿಲ್ಲ; ರಾಮಣ್ಣಾ! ನಿನಗೆ ನೆನಪಿದೆಯೇ? ಸರಿ, ಹೌದು, ಹೊಸ ಚೋಡಿತ್ತು." ಎಂದು ಕ್ಯಾಮ್ಮಾನು ಕೇಳಿದ

"ಹಾಗಾದರೆ ಅದು ನಾನೆಲ್ಲ" ಎಂದು ಲಿಂಗನು ಹೇಳಿ ಬಾಗಿಲು ಮುಚ್ಚಿದ

ಕೃದ್ಯಾಳು.

ಮೂಂಸಾಹಾರಿ ಹೊಟೇಲಿನಲ್ಲಿ ತನ್ನ ಹತ್ತಿರ ಕೂಡ್ರುಸಿನ್ನು ಕೂತುಕೊಳ್ಳಲು ಬಿಡದ ಕೃದ್ಯಾವಂತ ಬ್ರಾಹ್ಮಣ

ಸ್ನೇಹಿತನ ಕಕಾರಿ.

ಮಿಕೆನಿಕನು (Mechanic) ದುರುಸ್ತಿಗೆ ಬಂದ ಹಳೇ ಮೋಟಾರುಕಾರನ್ನು ಪರೀಕ್ಷಿಸುತ್ತಾ:—ಯಾವಾಗ ಕೊಂಡುಕೊಂಡಿರಿ ಸ್ವಾಮಿ, ಈ ಕಾರನ್ನ?

ವ್ಯಾಲಿಕರು (ಹೆಗ್ಗಳಿಕೆ ಬಿಟ್ಟು):—ಎರಡೇ ದಿನದ ಹಿಂದೆ

ಮಿಕೆನಿಕರು:—ಏನು ಕೊಟ್ಟರಿ ಕ್ರಯ?

ವ್ಯಾಲಿಕರು (ಗುಟ್ಟಿನಲ್ಲಿ):—ನಿಜವಾಗಿ ಹೇಳಲೋ! ನನ್ನ ಸ್ನೇಹಿತ ರೊಬ್ಬರು ಇದನ್ನು ಧರ್ಮಾರ್ಥವಾಗಿ ಕೊಟ್ಟು.

ಮಿಕೆನಿಕರು (ಗಟ್ಟಿಯಾಗಿ):—ನಿನ್ನು ಸ್ನೇಹಿತರು ಧರ್ಮಕ್ಕೆ ಕೊಟ್ಟದ್ದೆನ್ನ? ಕಕಾಯಿಸಿದರು ಸ್ವಾಮಿ, ನಿನ್ನುನ್ನು ಕಕಾಯಿಸಿದರು

× × × × ×

ಭಾಷಣ ಕರ್ತ (ಕಾಲಿದಾಸನ ಜೀವನವನ್ನು ವರ್ಣಿಸಿ)—ಕಾಳಿದಾಸನು ಈ ಕಾಲದಲ್ಲಿದ್ದವ್ವಾದರೆ ಹೇಗಿರುತ್ತಿದ್ದ?

ಕೇಳುವವರೆಲ್ಲೂ ಬ್ಬ—ಬಹಳ ಮುದುಕನಾಗಿರುತ್ತಿದ್ದ.

× × × × ×

ದಿಪ್ಪಿಕ್ಷ ನುಚ್ಚುಗುಟ್ಟಿರಿಪಡಿಸಿ ಮೂತಾಡಿ ಹಿಂದಿರುಗುವ ದೊಡ್ಡ ಮನುಷ್ಯ ರೊಡನೆ ಬಂಗಲೇ ಬೇದಿಯು ಕೈಮಿಂದೆ ಮಾಡಿ "ನನ್ನನ್ನು ಮರೆತಿರಾ?"

ದೊಡ್ಡ ಮನುಷ್ಯ—ಎಂದಿಗೂ ಇಲ್ಲ; ನಿನ್ನ ಹೆಸರನ್ನು ಬರೆದುಕೊಂಡಿದ್ದೇನೆ ಎಂದು ತನ್ನ ನೋಟು ಬುಕ್ಕು ತೋರಿಸಿ ಹೋಗುವರು.

× × × × ×

ತಾನು ಕೆಲಸಕ್ಕೆ ನೇಮಿಸಿದ ಕೂಲಿಯವನನ್ನು ಕರೆದು ಆಶ್ಚರ್ಯದಿಂದ—ಇಷ್ಟು ದಿನ ಇತ್ತೇನೇ ನಿನ್ನ ಕೆಲಸ!

ಕೂಲಿ—ಜಿಜ್ಞು ಮಾಡುವುದಿತ್ತು, ಸ್ವಾಮಿ! ಆದರೆ ನಾನು ಅಷ್ಟು ತೊಂದರೆಯ ಮನುಷ್ಯನಲ್ಲ.

× × × × ×

ಒಬ್ಬನು—ಈ ವಿಷ ಕೇಳ್ದಿದೆ ನೀವು? ಕೇಳಿದೆ ನಿಜ ಸಾಯಬೇಕು.

ಇನ್ನೊಬ್ಬನು—ಚ್ಚ ಅತ್ತೆ ಬರುವುದು ಅವರಿಗೆ ಚೋ ಯಿ

ವೃತ್ತಿ ನಿಯಮ.

ಒಬ್ಬ ಶ್ರಮುಖ ವಕೀಲರು ಒಬ್ಬ ಬಡವನ ವ್ಯಾಜ್ಯವನ್ನು ವಹಿಸಿ ತೊಂಡರು. ಆ ಬಡವನಿಷನ ನಿಷಯ ಇಲ್ಲವೆಂದು ತೀರ್ಮಾನ ಧರ್ಮಾ ಧರ್ಮವಾಗಿ ವ್ಯವಹರಿಸುವುದಾಗಿ ಒಪ್ಪಿದರು. ವಕೀಲರ ಜಾತ್ಕ ಯಿಂದ ವ್ಯಾಜ್ಯವು ಗೆಲುವಾಯಿತು. ಬಡವನು ಕೈಯಲ್ಲಿ ಕಾಸಿಲ್ಲ ದಿದ್ದರೂ ಉಪಕಾರವನ್ನು ಮರೆಯಲಾರದೆ ವಕೀಲರಿಗೆ ಎರಡು ರೂಪ್ಯಾ ಗಳನ್ನು ಕೊಟ್ಟನು. ಆ ಬಡವನ ಮೊಗವನ್ನು ನೋಡಿಯಿಸುವುದು ಬೇಡ ವೆಂದು ವಕೀಲರು ಆ ಎರಡು ರೂಪ್ಯಾಗಳನ್ನು ಸ್ವೀಕರಿಸಿದರು.

ಇದನ್ನು ತಿಂದ ಇನ್ನೊಬ್ಬ ವಕೀಲರು ಅವರನ್ನು ಕರೆದು "ಇಷ್ಟು ಕಡಮೆ ರುಸುಮನ್ನು ತೆಗೆದುಕೊಳ್ಳುವುದು ವೃತ್ತಿ ನಿಯಮಕ್ಕೆ ವಿರೋಧವಲ್ಲವೇನ?" ಎಂದು ಅವರು ಕೇಳಿದರು.

ಅದಕ್ಕೆ ಮೊದಲಿನ ವಕೀಲರು "ಹೇಳಬಹುದು—ಆತನೊಡನಿದ್ದ ಹೆಣ್ಣಲ್ಲ ವನ್ನೂ ನಾನು ತೆಗೆದುಕೊಂಡು ಬಿಟ್ಟಿದ್ದೇನೆ. ಇದಾದರೂ ನಮ್ಮ ವೃತ್ತಿ ನಿಯಮಕ್ಕೆ ಸಂಬಂಧಿಸಿದಷ್ಟೂ ಸೃಷ್ಟಿವಿಲ್ಲವೇನ?"

ಕರುಣೆಯ ದೃಷ್ಟಿ.

ರಂಗೇ ಗೌಡರು ತೀರ್ಪ್ಪಾ ವಿಚಾರಿಗಳು. ಅಡಚಣೆಯ ಜನರ ಮೂಲದ ಲಿಖ್ಖ ಹಾಕಿಯೇ ಸಾಲ ಕೊಡುವಂತಹರು. ಬಡಾವ್ಯಕ್ತ ರಿಂದ ಅವರ ಎಡಕಲ್ಲಿನಲ್ಲಿ ತೀವ್ರ ಬಂದು ಅವನ್ನು ತೀರಬೇಕಾಯಿತು. ಈ ಒಂದು ಬಾರಿ ಉದಾರಿಗಳಾಗಿ ಹೊಸ ವ್ಯಯಿ ಬಲಗಳ್ಳಿಗೆ ಅನುರೂಪ ವಾಗಿಯೇ ಕೃತ್ರಿಮ ಎಡಗಣ್ಣನ್ನಿಡಿಸಿದರು. ನೋಡುವವರಿಗೆ ಈ ಎರಡು ಕಣ್ಣುಗಳೊಳಗೆ ಯಾವ ಭೇದವೂ ಕಂಡು ಬರುತ್ತಿರಲಿಲ್ಲ.

ಒಬ್ಬ ಬಡವನು ಒಂದು ದಿನ ರಂಗೇ ಗೌಡರಲ್ಲಿ ಸಾಲ ಕೇಳಲು ಬಂದನು. ರಂಗೇ ಗೌಡರು ಸಾಲ ಕೊಡಲು ನಿರಾಕರಿಸಿದರು. ಬಡವನು ಬಹಳ ದೈನ್ಯಪಟ್ಟು ಹಿಂದಿರುಗಿದನು.

ರಂಗೇ ಗೌಡರಲ್ಲಿ ಏನೋ ಒಂದು ರಸಿಕತೆಯ ಭಾವ ವುಂಟಾಯಿತು; ಆ ಬಡವನನ್ನು ಪುನಃ ಕರೆದು—"ಕಳದ ವಾರ ನಾನು ಒಂದು ಕೃತ್ರಿಮ ಕಣ್ಣನ್ನಿಡಿಸಿದ್ದೇನೆ. ಯಾವುದೆಂದು ನೀನು ತೀರ್ಮಾನ ಪಡಿಸಿದರೆ ನಿನಗೆ ಸಾಲಕೊಡುತ್ತೇನೆ" ಎಂದರು.

ಬಡವನು ಅವರ ಕಣ್ಣುಗಳನ್ನೊಂದು ಬಾರಿ ನೋಡಿದವನು ಮತ್ತು "ನಿಮ್ಮ ಎದೆಗಣ್ಣು ತೊಪ್ಪಡಾಗಿರಲ್ಲಪ್ಪ ಟ್ಟದ್ದು" ಎಂದು ಹೇಳಿದನು.

ರಂಗೇ ಗೌಡರು ಆಶ್ಚರ್ಯದಿಂದ "ನನಗೆ ಹೇಗೆ ತಿಳಿಯಿತು" ಎಂದರು.

ಬಡವನು—"ಸುಲಭವಾಗಿ ಗೊತ್ತು ಹಟ್ಟಿದೆ; ನಿಮ್ಮ ಎಡ ಗಣ್ಣಿನಲ್ಲಿ ಕರುಣೆಯ ದೃಷ್ಟಿ ಇದೆ" ಎಂದನು.

× × × × ×

ಉಪದೇಶಿ—ದಾನ ಧರ್ಮವೆಂದರೆ ನಿಷ್ಪ ವೆಂದೆನಿಸಬೇಡಿ; ಆದರಲ್ಲಿ ದೇವರ ಆಕರ್ಷಣವಿದೆ; ಕೊಡುವವನು ಧನ್ಯವಂತನು ದೇವರು ಅವನಿಗೆ ಅವನು ಕೊಟ್ಟುದರ ದುಬಾರಿ ಲಾಭವನ್ನು ಸೇರಿಸುವನು.

ಅಮಲಧನ್ಯ ಗೃಹಸ್ಥ—ಆಯಿತು ಸ್ವಾಮಿ; ನಾನು ಮೊನ್ನೆತಾನೇ ನನ್ನ ದುಡುಗಿಯೊಬ್ಬಳನ್ನು ಕನ್ಯಾದಾನ ಮಾಡಿ ಕೊಟ್ಟಿದ್ದೆ; ಈಗ ಗಂಡ ಕೂಡಾ ಇಬ್ಬರೂ ನನ್ನನ್ನು ಸೇರಿದ್ದಾರೆ.

× × × × ×

ಮಗು (ನೆರೆಮನೆಗೆ ಹೋಗಿ):—ತಮ್ಮ ಗೈಮಪ್ಪೀನು ಸ್ವಲ್ಪ ಕೊಡುವಿರಾ ನೆರೆಮನೆಯವಳು—ಒಳ್ಳೇದು ನಿನು, ತಮ್ಮುಲ್ಲಿ ಅತಿಥಿಗಳು ಬಂದಿದ್ದಾರೆಯೇ?

ಮಗು—ಅದೇನೂ ಇಲ್ಲ; ಅಪ್ಪನಿಗೆ ಈ ದಿನ ಮಧ್ಯಾಹ್ನ ನಿದ್ದೆ ತೆಗೆಯಬೇಕಂತೆ; ಗೈಮಪ್ಪೀನು ನಮ್ಮಲ್ಲಿ ತಂದಿಟ್ಟರೆ ಮತ್ತೆ ನಿದ್ದೆ ತೊಂದರೆ ಇಲ್ಲವಂತೆ.

× × × × ×

ನಿನೆಮಾ ಮಂದಿರದ ಶತ್ರಚಿಲಯಲ್ಲಿ ಒಬ್ಬ ಪ್ರೇಕ್ಷಕ (ಅತ್ಯಂತ ಭಾವ ಯಿಂದ)—ಓ, ಓ, ಅಯಿತಲ್ಲ, ಪುನಃ ತೋರಿಸಿ ಮಾಡಲಿ?

ಅವನ ಎಡದಲ್ಲಿದ್ದ ಇನ್ನೊಬ್ಬ ಪ್ರೇಕ್ಷಕ—ನೀನ್ಯಾ?

ಪ್ರಥಮ ಪ್ರೇಕ್ಷಕ—ನೋಯಿತು ಸ್ವಾಮಿ; ನನಗೊಂದು ವಾತದ ದೋಷ ಈಗ ಪ್ರಥಮ ಪ್ರಾರಂಭವಾಯಿತು; ನಿನ್ನ ಎಚ್ಚರಾಲಿಗೆ ಎಷ್ಟು ಚಿಮುಸಿದರೂ ನೋವಾಗುವುದಿಲ್ಲ.

ದ್ವಿತೀಯ ಪ್ರೇಕ್ಷಕ (ರೋಷದಿಂದ ವ್ಯಂಗವಾಗಿ)—ನೋವು ನೋವಾದೀತ ಬೆಳಕಾಗಲೆಂದು ಕಾದಿದ್ದೆ; ಈಗ ತೀರಿಯಿತು ನೀವು ಚಿಮುಸಿದ ನಮ್ಮ ಕಾಲನ್ನಲ್ಲ ಸ್ವಾಮಿ, ನನ್ನ ನೆತ್ತಿಯ ಕಾಲನ್ನು—ಬೇಕಾದರೆ ಮನೆ ನಡೆದುಕೊಂಡು ಹೋಗಿ ನೋಡಿ.

× × × × ×

ದಿವಾಕಯ್ಯನ ಸಾಹುಕಾರನನ್ನು ಸಂಧ್ಯೆಸಿ ಅವನ ಮಿತ್ರನು—ಹಾಗೆ ಚಿಂತೆಯಲ್ಲಿ ರುವಾರಲು ಇದನ್ನು ಆಯಿತು ಇನ್ನೇ ಇದನ್ನು ಸಂತೋಷಪಡಿಸಿ.

ಸಾಹುಕಾರ—ಸಂತೋಷವೆ! ಒಬ್ಬರಿಗೂ ಕಾಲು ಕೊಡಲಿಕ್ಕಾಗದೆ ಆ ಮಗ ಸಂತೋಷ! ಯಾವುದಕ್ಕಾಗಿ ಮಗ ಸಂತೋಷ!

ಮಿತ್ರ—ಏನು ನಿಮಗೆ ಸಾಲಕೊಟ್ಟವರೆಲ್ಲರೂ ಕೆಲಸಕ್ಕೆ

ರೇಡಿಯೋ
ಅಥವಾ
ಆಕಾಶವಾಣಿ

ಲೇಖಕರು.—ಹೊಸಬೆಟ್ಟು ರಾಮರಾವ್, M A, L T.
ಸ್ಟಾಯಸ್ಸ್ ಮಾಸ್ಟರ್, ಗವರ್ನಮೆಂಟ್ ಕೋಲೇಜು, ಮಂಗಳೂರು



1. Water Waves.
ನೀರಿನ ಅಲೆಗಳು.

ಒಂದು ಕೆರೆಯ ದಡದ ಮೇಲೆ ನಿಂತುಕೊಂಡು, ನೀರಿನ ಮೇಲ್ಭಾಗವು ಅಲ್ಲಾಡದಿರುವಾಗ, ಒಂದು ಚಿಕ್ಕ ಕಲ್ಲನ್ನು ಕೆರೆಯ ಮಧ್ಯಕ್ಕೆ ಎಸೆದು ನೋಡಿದರೆ, ಕಲ್ಲು ಬಿದ್ದಲ್ಲಿಂದ ಅನೇಕ ಅಲೆಗಳು ಉಂಟಾಗಿ, ಒಂದರ ಮೇಲೊಂದು ಹೊರಡುವವು ಪ್ರತಿಯೊಂದು ಅಲೆಯೂ ಹುಟ್ಟುವಾಗ ಸಣ್ಣ ವೃತ್ತವಾಗಿದ್ದು, ದೂರದೂರ ಹೋದಂತೆ ದೊಡ್ಡ ದೊಡ್ಡದಾಗಿ ದಡಕ್ಕೆ ಬಂದು ಹೊಡೆಯುತ್ತದೆ

2. Sound Waves.
ಧ್ವನಿಯ ಅಲೆಗಳು.

ಧ್ವನಿ ಕೇಳಿಸುವ ವಿಧಾನವನ್ನು ಮೊದಲು ಇಲ್ಲಿ ವಿವರಿಸಬೇಕಾಗಿದೆ:— ಗಂಟೆಯ ಅಂಚಿಗೆ ಬಡಿದರೆ, ಅದರಲ್ಲಿ ಒಂದು ಬಗೆಯ ನಡುಕವು ಉಂಟಾಗುತ್ತದೆ ಇದೇ ರೀತಿಯಲ್ಲಿ ತಬಲೆಯ ಮೇಲೆ ಹೊಡೆದಾಗಲೂ, ಅದರ ಚರ್ಮವು ಸೂಕ್ಷ್ಮವಾಗಿ ನಡುಗುತ್ತಿರುವುದನ್ನು ಕಾಣಬಹುದು ಹಾಗೆಯೇ ವೀಣೆಯನ್ನು ಬಾರಿಸಿದಾಗಲೂ, ಅದರ ತಂತಿಯಲ್ಲಿ ನಡುಕವುಂಟಾಗಿ ಧ್ವನಿಯು ಹೊರಡುತ್ತದೆ ಜಾಗಂಟೆಯ ಮೇಲೆ ಕೋಲಿನಿಂದ ಬಡಿದಾಗ ಉಂಟಾಗುವ ಇಂತಹ ನಡುಕವು ಸ್ಪಷ್ಟವಾಗಿ ಕಾಣಿಸುತ್ತದೆ ಪ್ರತಿಯೊಂದು ಧ್ವನಿಯು ಹೊರಟೊಡನೆ, ಆ ಸ್ಥಳದ ಹತ್ತಿರವಿರುವ ವಾಯುವಿನಲ್ಲಿ ಕೂಡಾ ಶಬ್ದಕ್ಕೆ ತಕ್ಕಂತೆ ನಡುಕವುಂಟಾಗುತ್ತದೆ ಈ ನಡುಕದ ದೆಸೆಯಿಂದ ವಾಯುವಿನಲ್ಲಿ ಅಲೆಗಳು ಉಂಟಾಗಿ ವಾತಾವರಣದ ದಶದಿಕ್ಕುಗಳಿಗೂ ವ್ಯಾಪಿಸುತ್ತಾ ಹೋಗುತ್ತವೆ

ವಾಯುವು ಕಣ್ಣಿಗೆ ಕಾಣಿಸುವುದಿಲ್ಲ ಈ ಕಾರಣದಿಂದ ಇಂತಹ ಅಲೆಗಳನ್ನು ನಾವು ಕಾಣಲಾರೆವು ಆದರೆ, ಇಂತಹ ಅಲೆಗಳು ಉಂಟಾಗುತ್ತವೆ ಎಂಬುದನ್ನು ಬೇರೆ ವಿಧದಿಂದ ತೋರಿಸಲು ಸಾಧ್ಯವಿದೆ; ಎಂದಿಷ್ಟೇ ಇಲ್ಲಿ ಹೇಳಿದರೆ ಸಾಕು

ಗಂಟೆಯನ್ನು ಬಾರಿಸುವುದರಿಂದುಂಟಾದ ಅಲೆಗಳು, ನೀರಿನ ಅಲೆಗಳಂತೆಯೇ, ದೂರದೂರ ಹೋದಂತೆ ದೊಡ್ಡ ದೊಡ್ಡವಾಗುತ್ತವೆ ಹೀಗೆ ಚಲಿಸಿ ಬಂದ ಅಲೆಗಳು ನಮ್ಮ ಕಿವಿಯೊಳಗೆ ಪ್ರವೇಶಿಸಿ, ನೀರಿನ ಅಲೆಗಳು ದಡಕ್ಕೆ ಹೊಡೆದಂತೆ, ಕಿವಿಯೊಳಗಿನ ತಬಲೆಯಂತಿರುವ ಒಂದು ಪರೆಗೆ ಬಡಿಯುತ್ತವೆ ಆಗ ಗಂಟೆಯಲ್ಲಾದ ಧ್ವನಿ ನಮಗೆ ಕೇಳಿಸುತ್ತದೆ ಹೀಗೆಯೇ ಪ್ರತಿಯೊಂದು ಧ್ವನಿಯೂ, ವಾತಾವರಣದಲ್ಲಿ ಅಲೆಗಳನ್ನು ಹೊರಡಿಸಿ, ಅವುಗಳ ಮೂಲಕ ನಮಗೆ ಕೇಳಿಸುತ್ತದೆ ಈ ಅಲೆಗಳನ್ನು "ಧ್ವನಿಯ ಅಲೆ"ಗಳೆಂದು ಕರೆಯುವೆವು

ನೀರಲ್ಲೇಳುವ ಅಲೆಗಳಿಗೂ ಧ್ವನಿಯ ಅಲೆಗಳಿಗೂ ಸ್ವಲ್ಪಮಟ್ಟಿಗೆ ವೃತ್ತಾಸವಿದೆ ನೀರಿನ ಅಲೆಗಳು ತಾವು ಉದ್ಭವಿಸಿದೆಡೆಯಿಂದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಮೊದಲಾದ ಎಂಟು ದಿಕ್ಕುಗಳಿಗೆ ಮಾತ್ರ ವ್ಯಾಪಿಸುತ್ತಾ ಹೋಗುತ್ತವೆ. ಧ್ವನಿಯ ಅಲೆಗಳು ಅಷ್ಟೇ ದಿಕ್ಕುಗಳಿಗಲ್ಲ, ಹತ್ತು ದಿಕ್ಕುಗಳಿಗೂ ಹೋಗುತ್ತವೆ ಗಂಟೆ ಬಾರಿಸುವಾಗ ಉಂಟಾದ ಅಲೆಗಳ ಮೂಲಕ್ ಎಂಟು ದಿಕ್ಕುಗಳಲ್ಲಿರುವ ಜನರು ಆ ಶಬ್ದವನ್ನು ಕೇಳುವುದು ಮಾತ್ರವಲ್ಲ, ಕೆಳಗಡೆ ಮೇಲ್ಮಡಿಯುರುವವರಿಗೂ ಆ ಶಬ್ದವು ಕೇಳಿಸುತ್ತದೆ.

ಇನ್ನೊಂದು ವೃತ್ತಾಸವಿದೆ: ವೇಗದಲ್ಲಿ. ಧ್ವನಿಯ ಅಲೆಗಳು ನೀರಿನ ಅಲೆಗಳಿಗಿಂತ ಬಹುವೇಗವಾಗಿ ಚಲಿಸುತ್ತವೆ. ಮಧ್ಯಾಹ್ನ 12 ಗಂಟೆಗೆ ಮಂಗಳೂರಿನ ಮೈದಾನ ಪಲ್ಲಾಗುವ ಗುಂಡಿನ ಶಬ್ದವು ಏದೇ ಸೆಕುಂಡಿನೊಳಗೆ ಒಂದು ಮೈಲು ದೂರದಲ್ಲಿರುವವರಿಗೆ ಕೇಳಿಸುತ್ತದೆ. ಒಂದು ಮಿನಿಟಿಲ್ಲಿ 13 ಮೈಲು ದೂರದವರಿಗೆ ಕೇಳಿಸುತ್ತದೆ.

"ಕಲ್ಲನ್ನು ಎಸದು ನೀರಿನ ಮೇಲೆ ಅಲೆಗಳನ್ನು ಹೊರಡಿಸಬಹುದು ಗಂಟೆಯನ್ನು ಬಾರಿಸಿ ವಾತಾವರಣದಲ್ಲಿ ಧ್ವನಿಯ ಅಲೆಗಳನ್ನು ಹೊರಡಿಸಬಹುದು" ಎಂದು ಹೇಗೆ ಎರಡು ವಿಧವಾದ ಅಲೆಗಳು, ಹುಟ್ಟಿದಲ್ಲಿಂದ ಇನ್ನೊಂದೆಡೆಗೆ ಹೋಗಿ ಬಡಿಯುವುದನ್ನು ವಿವರಿಸಿದೆವು.

3. Radio Waves.
ರೇಡಿಯೋ ಅಲೆಗಳು.

ಈ ಎರಡು ವಿಧದ ಅಲೆಗಳು ಸಾಮಾನ್ಯವಾದವುಗಳು ಇವುಗಳಿಗಿಂತಲೂ ಚಮತ್ಕಾರವನ್ನು ತೋರಿಸುವ ಇನ್ನೊಂದು ರೀತಿಯ ಅಲೆಗಳನ್ನು ಹೊರಡಿಸುವ ವಿಧಾನವನ್ನು ಸಂಶಸ್ತ ಕಲಿತವರು ಕಂಡುಹಿಡಿದಿದ್ದಾರೆ. ಇದಕ್ಕೆ ಇಲೆಕ್ಟ್ರಿಸಿಟಿ, (Electricity) ಎಂದರೆ, ವಿದ್ಯುತ್ ಎಂಬ ಒಂದು ಶಕ್ತಿ ಬೇಕು ಇಂತಹ ಅಲೆಗಳಿಗೆ ಸಾಮಾನ್ಯವಾಗಿ (Radio) "ರೇಡಿಯೋ" ಅಲೆಗಳೆಂಬ ಹೆಸರನ್ನು ಕೊಟ್ಟಿದ್ದಾರೆ ರೇಡಿಯೊ ಅಲೆಗಳು ಉತ್ಪನ್ನವಾಗುವುದಕ್ಕೆ ನೀರೂ ಬೇಡ, ವಾಯುವೂ ಬೇಡ, ಯಾವ ಪದಾರ್ಥವೂ ಇಲ್ಲದ (ಪಾಲಿ ಸ್ಥಳ ಅಂದರೆ,) ಆಕಾಶವೇ ಸಾಕು ರೇಡಿಯೊ ಅಲೆಗಳು ಆಕಾಶದಲ್ಲೇ ಸಂಚರಿಸುತ್ತಾ ಹೋಗುತ್ತವೆ

ರೇಡಿಯೊ ಅಲೆಗಳು ಹತ್ತು ದಿಕ್ಕುಗಳಿಗೂ ಚಲಿಸುತ್ತವೆ ಅವುಗಳು ಹೋಗುವ ವೇಗವು ಶಬ್ದಕ್ಕಿಂತಲೂ ಹೆಚ್ಚು ಬೆಳಕಿನ ಓಟವಿದ್ದಂತೆ ರೇಡಿಯೊ ಅಲೆಗಳ ವೇಗವು ಬಹಳ ಹೆಚ್ಚು ಅವು ಒಂದೇ ಒಂದು ಸೆಕುಂಡಿಗೆ 186 ಸಾವಿರ ಮೈಲು ದೂರ ಓಡುತ್ತವೆ ಭೂಭಾಗದ ಒಂದೂರಿನಿಂದ ಹೊರಟ ಇಂತಹ ಅಲೆಗಳು ಇನ್ನೊಂದೂರಿಗೆ ಹೋಗಿ ಬಡಿಯಬೇಕಾದರೆ ಒಂದು ಸೆಕುಂಡು ಕೂಡಾ ಬೇಕಾಗಿಲ್ಲ ಏಕೆಂದರೆ, ಭೂಮಿಯು ಇಡೀ ಸುತ್ತಳತೆಯೇ ಇಪ್ಪತ್ತೈದು ಸಾವಿರ ಮೈಲುಗಳು

4. An Alternating Current.
ರೇಡಿಯೊ ಅಲೆಗಳು ಉದ್ಭವಿಸುವ ವಿಧಾನ.

ನೀರು ಮೇಲಿಂದ ಕೆಳಕ್ಕೆನೇ ಹರಿದುಹೋಗುತ್ತದೆ ಹಾಗೆಯೇ ಇಲೆಕ್ಟ್ರಿಸಿಟಿ ಅಥವಾ ವಿದ್ಯುಚ್ಛಕ್ತಿಯು ಸಾಮಾನ್ಯವಾಗಿ ಒಂದೇ ಮುಖವಾಗಿ ಹರಿದುಕೊಂಡು ಹೋಗುವ ವಾಡಿಕೆ ರೇಡಿಯೊ ಅಲೆಗಳನ್ನುಂಟುಮಾಡುವುದಕ್ಕೆ ವಿದ್ಯುಚ್ಛಕ್ತಿಯೇ ಮೂಲ. ಆದರೆ ಆ ವಿದ್ಯುಚ್ಛಕ್ತಿಯು ಒಂದೇ ಮುಖವಾಗಿ ಹರಿದುಕೊಂಡು ಹೋಗುತ್ತಿರಬಾರದು. ಒಂದೇ ದಾರಿಯಲ್ಲಿ, ಒಮ್ಮೆ ಮುಂದೆ ಹಾರುತ್ತದೆ, ಮತ್ತೊಮ್ಮೆ ಹಿಂದಕ್ಕೆ ಹಾರುತ್ತದೆ, ತಿರುಗಿ ಮುಂದಕ್ಕೂ, ಪುನಃ ಹಿಂದಕ್ಕೂ ಹೀಗೆ ಅತ್ಯತ್ತ ರಭಸದಿಂದ ಹಾರಾಡುತ್ತ ಇರಬೇಕು. ಇದಕ್ಕೆ (Alternating Current) ಅಲ್ಟರ್‌ನೇಟಿಂಗ್ ಕರೆಂಟ್, ಅಂದರೆ "ಹಿಂದೂ ಮುಂದೂ ಹರಿಯುವ ಪ್ರವಾಹ" ಎಂದು ಹೆಸರು

ಈಗ ಉದಾಹರಣೆಗಾಗಿ ರೇಡಿಯೊ ಅಲೆಗಳನ್ನು ಹೊರಡಿಸುವ ವಿಧಾನಗಳಲ್ಲಿ ಒಂದನ್ನು ಇಲ್ಲಿ ವಿವರಿಸುವೆ — ನಮ್ಮೆರ ಹಳ್ಳಿಗಳಲ್ಲಿ, ಒಕ್ಕಲಿಗರ ಚಿಕ್ಕ ಮಕ್ಕಳು ಗದ್ದೆಗಳಿಗೆ ಹರಿಯುವ ನೀರಿನ ಚಿಕ್ಕ ತೋಡುಗಳಲ್ಲಿದ್ದಲ್ಲಿ ಆಡುವ ಒಂದು ಆಟವಿದೆ ತೋಡಿನ ಅಗಲವು ಒಂದೆರಡು ಗಜ ವಿದ್ದರೆ, ಮಕ್ಕಳು ಈಚೆದಡದಿಂದ ಆಚೆದಡಕ್ಕೆ, ಆಚೆದಡದಿಂದ ಈಚೆದಡಕ್ಕೆ ಜಿಗಿದ ಹೆಂಡ್ತಕ್ಕೂ ಮುಂದಕ್ಕೂ ಹಾರಾಡುತ್ತಾ ಪಂಥ ಕಟ್ಟುತ್ತಾರೆ. ರೇಡಿಯೊ ಅಲೆಗಳನ್ನು ಹೊರಡಿಸುವ ವಿದ್ಯುಚ್ಛಕ್ತಿಯೂ ಹೀಗೆ ಹಾರಾಡುತ್ತದೆ.

ರೇಡಿಯೊ ಅಲೆಗಳನ್ನು ಹೊರಡಿಸುವ ಒಂದು ಸಾಧನಕ್ಕೆ (Spark-gap) ಸ್ಪಾರ್ಕ್ ಗ್ಯಾಪ್ ಎಂದು ಕರೆಯುತ್ತಾರೆ. ಇದರಲ್ಲಿ ಎರಡು ಗಿಡ್ಡ ಸರಳುಗಳ ಮಧ್ಯದಲ್ಲಿ ಸ್ವಲ್ಪ "ಗ್ಯಾಪ್" ಅಂದರೆ, ಎಡೆ ಇದೆ. 1ನೇ ಚಿತ್ರವೆನ್ನು ನೋಡಿರಿ (ಪುಟ ೬೧). "ಬ್ಯಾಟರಿ ದೀಪ"ವನ್ನು ನೋಡಿದ್ದೀರಷ್ಟೆ ಅದರಲ್ಲಿ ಬ್ಯಾಟರಿಯಿಂದ ವಿದ್ಯುಚ್ಛಕ್ತಿಯು ಹೊರಟು ಬೆಳಕಿನ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ ಇದೇ ರೀತಿಯ ಕೆಲವು ಬ್ಯಾಟರಿಗಳಿಂದ ಹರಿಯುವ ವಿದ್ಯುಚ್ಛಕ್ತಿಯನ್ನು "ಸ್ಪಾರ್ಕ್‌ಗ್ಯಾಪ್" ಮೂಲಕ ಹರಿಯುವಂತೆ ಏರ್ಪಡಿಸುತ್ತಾರೆ. ಇತರ ಕೆಲವು ಉಪಕರಣಗಳ ಸಹಾಯದಿಂದ ಇದರಲ್ಲಿ ಹರಿಯುವ ವಿದ್ಯುಚ್ಛಕ್ತಿಯು, ಹಳ್ಳಿಯ ಮಕ್ಕಳು ತೋಡಿನಲ್ಲಾಡಿದಂತೆ, "ಗ್ಯಾಪ್" ನಲ್ಲಿ ಮುಂದಕ್ಕೂ ಹಿಂದಕ್ಕೂ ಹಾರಾಡುತ್ತಿರುತ್ತದೆ.

"ಗ್ಯಾಪ್"ನಲ್ಲಿ ಹೀಗೆ ಹಾರುವಾಗ ಈ ವಿದ್ಯುಚ್ಛಕ್ತಿಯು ಒಂದು (Spark) ಸ್ಪಾರ್ಕ್ ಅಂದರೆ, ಬೆಂಕಿಕಡಿಯ ರೂಪದಲ್ಲಿದೆ ಆ ಕಿಡಿಯು ಸ್ಪಾರ್ಕ್ ಗ್ಯಾಪಿನಲ್ಲಿ ಅತ್ಯಿತ್ತ ಹಾರಾಡುವುದು ಪ್ರತ್ಯಕ್ಷ ಕಾಣುತ್ತದೆ. ಇದಕ್ಕೆ "ಪುಟ್ಟ ಮಿಂಚು" ಎನ್ನುವರು ಏಕೆಂದರೆ, ಒಂದು ಮೋಡದಿಂದ ಇನ್ನೊಂದು ಮೋಡಕ್ಕೆ ನೆಗೆದು ಹಾರುವ ವಿದ್ಯುಚ್ಛಕ್ತಿಯೇ ಮಿಂಚು. ಸ್ಪಾರ್ಕ್ ಗ್ಯಾಪಿನಲ್ಲೂ ಕೂಡಾ ಇದೇ ರೀತಿಯ ಸಣ್ಣ ಮಿಂಚು ಕಾಣಿಸುತ್ತದೆ ಸ್ಪಾರ್ಕ್ ಗ್ಯಾಪಿನ ಅಂಕರವು ನಾಲ್ಕಾರು ಅಡಿಗಳಿರಬಹುದು, ಹೆಚ್ಚಸಲು ಕಷ್ಟಸಾಧ್ಯ ಅಂದರೆ, ಒಂದು ಮೋಡದಿಂದ ಹೊರಟ ಮಿಂಚು ಎರಡು ಮೂರು ಫರ್ಲಾಂಗ್ ದೂರವಿರುವ ಇನ್ನೊಂದು ಮೋಡಕ್ಕೆ ನೆಗೆದು ಹಾರಬಲ್ಲುದು ಇದರಿಂದಾಗಿಯೇ ಸ್ಪಾರ್ಕ್ ಗ್ಯಾಪಿನಲ್ಲಿ ಕಾಣುವ ಸ್ಪಾರ್ಕಿಗೆ "ಪುಟ್ಟ ಮಿಂಚು" ಎಂಬ ಹೆಸರು

ಒಂದೇ ಕ್ಷಣದಲ್ಲಿ ಹಲವು ಮಿಂಚಿನ ಕಿಡಿಗಳು ಸ್ಪಾರ್ಕ್ ಗ್ಯಾಪಿನ ಅತ್ತಿತ್ತ ಹಾರಾಡುತ್ತಾ ಇರುತ್ತವೆ ಈ ಶಕ್ತಿಯು ಒಂದು ಸಾರಿ ಮುಂದೆ ಹಾರಿ, ಪುನಃ ಹಿಂದೆ ಹಾರಿಬರುವ ಈ ಒಂದು ಕಾರ್ಯಕ್ಕೆ, ಒಂದು (Cycle) ಸೈಕಲ್ ಅಥವಾ ಒಂದು "ಪ್ರಯಾಣ" ಎಂಬ ಹೆಸರು ಒಂದು ಸೆಕುಂಡಿನಲ್ಲಾಗುವ ಇಂತಹ "ಸೈಕಲ್" ಎಂಬ ಪ್ರಯಾಣಗಳ ಸಂಖ್ಯೆಯು ಇಪ್ಪತ್ತು ಸಾವಿರದಿಂದ ಅರು ಮಿಲಿಯದ ವರೆಗೂ ಇರಬಹುದು

ಈ ರೀತಿಯಲ್ಲಿ ಹಿಂದುಮುಂದಕ್ಕೆ ಹಾರಾಡುತ್ತಿರುವ ವಿದ್ಯುಚ್ಛಕ್ತಿಯೇ ರೇಡಿಯೊ ಅಲೆಗಳ ಹುಟ್ಟು ಸ್ಥಾನ ಹೀಗೆ ಹುಟ್ಟಿದ ರೇಡಿಯೊ ಅಲೆಗಳು ಆಕಾಶದ ಹಕ್ಕು ದಿಕ್ಕುಗಳಿಗೂ ಓಡಾಡುತ್ತಾ ಹೋಗುತ್ತವೆ ಬೇಕಾದೆಡೆಗಳಿಳ್ಳಿ ಇಂತಹ ಅಲೆಗಳನ್ನು ಗ್ರಹಣಮಾಡಿಕೊಳ್ಳುತ್ತಾರೆ

5. Wave Length.
ರೇಡಿಯೊ ಅಲೆಯ "ಉದ್ದ".

ಅಂತಹ ಒಂದು ಸ್ಪಾರ್ಕ್ ಗ್ಯಾಪಿನಲ್ಲಾಗುವ ಕಾರ್ಯವನ್ನು ಸ್ವಲ್ಪ ಗಮನಿಸುವ ನಾವು ಆಲೋಚಿಸುವ ಸ್ಪಾರ್ಕ್ ಗ್ಯಾಪಿನಲ್ಲಿ, 872 ಸಾವಿರ ಅಲೆಗಳು ಪ್ರತಿಯೊಂದು ಸೆಕುಂಡಿನಲ್ಲುಂಟಾಗುತ್ತವೆ ಎಂದು ಭಾವಿಸುವ. ಆ ಸ್ಪಾರ್ಕ್ ಗ್ಯಾಪ್ ಬೊಂಬಾಯಿಯಲ್ಲಿದೆ ಎಂದೂ ಭಾವಿಸುವ.

ಪ್ರಾರಂಭದಲ್ಲಿ ಹೊರಡಿಸಿದ ಒಂದನೆಯ ಅಲೆಯು ಬೊಂಬಾಯಿಯಿಂದ 186 ಸಾವಿರ ಮೈಲು ದೂರವಿರುವ ಸ್ಥಳಕ್ಕೆ, ಒಂದು ಸೆಕುಂಡಿನ ಅತ್ಯೆದಲ್ಲಿ ತಲಪುತ್ತದೆ ಈ ಒಂದನೆಯ ಅಲೆಯು ತಲಪಿದ ಸ್ಥಳಕ್ಕೂ ಬೊಂಬಾಯಿಗೂ ಮಧ್ಯದಲ್ಲಿ 872 ಸಾವಿರ ಅಲೆಗಳಿರುತ್ತವೆ.

ಹಾಗಾದರೆ, 186 ಸಾವಿರ ಮೈಲುಗಳ ಅಂತರದಲ್ಲಿ 872 ಸಾವಿರ ಅಲೆಗಳು ಹರಡಿರುತ್ತವೆ. ಇಂತಹ ಒಂದು ಅಲೆಯ ಪರಿಮಾಣ ಅಥವಾ ಉದ್ದವೆಷ್ಟು ಎಷ್ಟು ಮೈಲು? ನಮ್ಮ ಉದಾಹರಣೆಯಲ್ಲಿ ಒಂದಲೆಯ ಉದ್ದವನ್ನು ಕಂಡು ಹಿಡಿಯುವುದು ಬಹು ಸುಲಭ: 186 ಸಾವಿರ ಮೈಲುಗಳನ್ನು 872 ಸಾವಿರ ಭಾಗಗಳನ್ನಾಗಿ ವಿಭಾಗಿಸಿ; ಬಂದ ಉತ್ತರ ಅರ್ಧ ಮೈಲು; ಒಂದು ಅಲೆಯು ಈ ಅರ್ಧ

(ಬಾಕಿ ಮುಂದಿನ ಪುಟದಲ್ಲಿ)

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸಂಸ್ಥಾಪನೆ 1908.

ಬೋರ್ಡ್ ಆಫ್ ಡೈರೆಕ್ಟರ್ಸ್:—

ಶ್ರೀಗಳಾದ ಸರ್ ಲಲ್ಲುಭಾಯ್ ಸಮಲ್‌ದಾಸ್
Kt. C. I. E., J. P., (ಚೇರ್‌ಮನ್.)
ಫಿರೋಜ್ ಜೆ. ಬಲ್‌ಸಾರಿಯಾ.
ಅಬ್ದುಲಾಲಿ ಎಂ. ಕಾಜೀಜಿ.
ಮುಂಬಾಯಿ ಹೈಕೋರ್ಟಿನ ರಿಟಾಯರ್ಡ್ ಜಡ್ಜ್.

ಶ್ರೀಗಳಾದ
ಭಾಸ್ಕರ ರಾವ್ ವಿ. ಮೇಥಾ,
ಎಂ. ಎ. ಎಲ್. ಎಲ್. ಬಿ. (ಎಡ್ವೊಕೇಟ್.)
ರಾಮೇಶ್ವರ್ ದಾಸ್ ಬಿರ್ಲಾ.

ಮೆನೇಜರ್:—

ಶ್ರೀಯುತ ಜ್ಯೋತೀಂದ್ರ ಎಲ್. ಮೇಥಾ, ಬಿ. ಎಸ್ ಸಿ,

ಮುಂಬಾಯಿ ಸಿಟಿ ಮತ್ತು ಉಪ ನಗರಗಳಿಗೆ ಚೀಫ್ ಏಜಂಟರುಗಳೂ ಮದ್ರಾಸ್ ಸಂಸ್ಥಾನ ಮತ್ತು ಆಶ್ರಿತ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನಕ್ಕೆ ಬ್ರೇಂಚ್ ಸೆಕ್ರೆಟರಿಗಳೂ

ಕೊಚ್ಚಿಕಾರ್ ಬ್ರದರ್ಸ್

ಸಂಸ್ಥಾಪನೆ 1910.

ಕೆ. ಪದ್ಮನಾಭ ಪೈ, ಬಿ. ಎ., ಮೆನೇಜಿಂಗ್ ಪ್ರೊಪ್ರೈಟರ್.

ಹೆಡ್ ಆಫೀಸು—ಉಡುಪಿ, ದ. ಕ.

— ಬ್ರೇಂಚುಗಳು —

ಮದ್ರಾಸ್.	ಬೆಂಗಳೂರು.	ಮಂಗಳೂರು.	ಮುಂಬಾಯಿ.
ಪೋಸ್ಟ್ ಬೊಕ್ಸ 487, ನೌಂಟ್ ರೋಡ್.	ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ.	ಕೊರ್ಪೊರೇಶನ್ ಬಿಲ್ಡಿಂಗ್, ರಥಬೀದಿ.	ಇಸ್ಮಾಯಿಲ್ ಬಿಲ್ಡಿಂಗ್, ಲೋಹಾರ ಚಾಲ್ ಮುಂಬಯಿ 2.

ತಂತಿ ವಿಳಾಸ:— { "ಕೊಚ್ಚಿಕಾರ" ಉಡುಪಿ, ಮಂಗಳೂರು, ಬೆಂಗಳೂರು ಮತ್ತು ಮದ್ರಾಸ್.
"ಪ್ರೇಮಲತಾ" ಮುಂಬಾಯಿ.

ಹೊಸ ವಹಿವಾಟಿನ ಬೆಳವಣಿಗೆಯಿಂದ ಪ್ರಸಿದ್ಧಿಯು ತಿಳಿದು ಬರುವುದು.

ವರುಷ	ಮಾಡಿದ ವಹಿವಾಟು	ಪ್ರೀಮಿಯಮಿನಿಂದ ಒಟ್ಟು ಆದಾಯ	ಒಟ್ಟು ಆದಾಯ
1928	ರೂ. 42,62,000	ರೂ. 7,88,529	ರೂ. 8,51,140
1929	51,22,500	8,68,916	9,98,799
1930	59,97,500	9,83,368	11,83,908

ಒಟ್ಟು ಫಂಡುಗಳು	...	...	ರೂ. 33,00,000
ಜೀವವಿಮೆ ಫಂಡ್	...	...	28,00,000
ವಿಮಾ ಮೊಬಲಗು ಕೊಟ್ಟದ್ದು	...	...	15,00,000
ವರುಷದ ಆದಾಯ	...	...	12,00,000
ಚಲಾವಣೆಯಲ್ಲಿರುವ ಪೊಲಿಸಿಯ ಮೊಬಲಗು	...	....	2,20,00,000

ವಿಮಾದಾರರಿಗೆ ತುಂಬಾ ಭದ್ರತೆಯೂ, ಯೋಗ್ಯವಾದ ಮತ್ತು ಅಭಿವೃದ್ಧಿಗೊಳ್ಳುವ ಲಾಭ ಹಂಚುವಿಕೆಯೂ ಇರುವುದು.

ಆಧುನಿಕ ಸ್ಥಿತಿ, ಕಾಲಕ್ಕೊಪ್ಪುವಂತೆ ಸ್ತ್ರೀ ಜೀವವಿಮೆ ಮತ್ತು ಹೋಲ್ ಲೈಫ್ ಎಶ್ಯೂರೆನ್ಸುಗಳ

ಹೊಸ ಮತ್ತು ಆಕರ್ಷಕವಾದ ಎಶ್ಯೂರೆನ್ಸ್ ಸ್ಕೀಮುಗಳು

(ಆಂದರೆ ವಹಿವಾಟಿಯರ ಅಥವಾ ಪಾಲುಗಾರಿಕೆಯ ವ್ಯಾಪಾರಸ್ಥರ ಜೀವವಿಮೆಗಳು) ಸ್ವೀಕರಿಸಲ್ಪಡುತ್ತವೆ.

— ನಮ್ಮ ಪ್ರಸಿದ್ಧಿಗೆ ಸಕಾಲಕ್ಕೊದಗುವ ನಮ್ಮ ಸೇವೆಯೇ ಕಾರಣವು. —

ಮಿತ್ರರ ಉದಾರಪೋಷಕ ಸಹಕಾರದಿಂದಲೂ, ಪಕ್ಷಿಸಗಳ ಅಕಳಂಕತೆಯಿಂದಲೂ, ಡೈರೆಕ್ಟರರ ಸಹಾನುಭೂತಿಯುಕ್ತವಾದ ಧೋರಣೆಯಿಂದಲೂ, ಇದು ಮತ್ತು ಕಂಪೆನಿಯ ಅಭಿವೃದ್ಧಿಯು ಹೆಚ್ಚುತ್ತಲಿರುವುದು.

(ಜಾನೇ ಪುಟದಿಂದ ಮುಂದುವರಿದುದು)

ಮೈಲಿನೊಳಗೆ ವಿನ್ಯಸಿಸಿಕೊಂಡಿದೆ. ಅಥವಾ, ಒಂದು ಲಕ್ಷೆಯು ಹೊರಟು ಅರ್ಧ ಮೈಲು ಹೋದ ಮೇಲೆ ಅದರ ಬೆನ್ನಿಗೆ ಇನ್ನೊಂದು ಅಲೆಯು ಹೊರಡುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಬಹುದು:–ಒಂದು ಅಲೆಗೂ ಅದರ ಪಕ್ಕದ ಅಲೆಗೂ ಮಧ್ಯದಲ್ಲಿರುವ ಅಂತರ ಅರ್ಧ ಮೈಲು. ಈ ಅಂತರಕ್ಕೆ ಅಲೆಯ ಪರಿಮಾಣ (Wave-length), ಅಥವಾ "ಉದ್ದ" ಎಂಬ ಹೆಸರು.

ಇದೆ ರೀತಿಯಲ್ಲಿ ಯಾವುದೇ ಒಂದು ಸ್ಪಾರ್ಕ್ ಗ್ಯಾಪಿನಲ್ಲಿ ಒಂದು ಸೆಕುಂಡಿನಲ್ಲುಂಟಾಗುವ ತೆರೆಗಳ ಸಂಖ್ಯೆ ಇಷ್ಟೇ ಎಂದು ತಿಳಿದರೆ, ಅದರಿಂದ ಹೊರಡುವ ಅಲೆಯ ಉದ್ದವನ್ನು ಕಂಡುಹಿಡಿಯಬಹುದು

ರೇಡಿಯೋ ಅಲೆಗಳನ್ನು ಹೊರಡಿಸುವ ಮಂದಿರಕ್ಕೆ (Broad-casting Station) "ಬ್ರಾಡ್ ಕಾಸ್ಟಿಂಗ್ ಸ್ಟೇಶನ್" ಎನ್ನುತ್ತಾರೆ. ಒಂದೊಂದು ಸ್ಟೇಶನಿನಲ್ಲಿ ಹೊರಡಿಸುವ ರೇಡಿಯೊ ಅಲೆಗಳ ಉದ್ದ ಇಷ್ಟೇ ಮೈಲು ಎಂದು ಖಚಿತವಾಗಿ ಕೆಂಬ ನಿಯಮವಿದೆ. ಬೊಂಬಾಯಿಯಲ್ಲಿರುವ ಬ್ರಾಡ್ ಕಾಸ್ಟಿಂಗ್ ಸ್ಟೇಶನಿನಿಂದ ಹೊರಡುವ ರೇಡಿಯೊ ಅಲೆಗಳ ಉದ್ದ ೫೯೭.1 ಮೀಟರ್ ಅಥವಾ ಸುಮಾರು 889 ಗಜಗಳು.



ಸ್ಪಾರ್ಕ್ ಗ್ಯಾಪ್

6. At the Broad-Casting Station.

ಬ್ರಾಡ್ ಕಾಸ್ಟಿಂಗ್ ಸ್ಟೇಶನಿನಲ್ಲಿ.

ಬೊಂಬಾಯಿಯ ಬ್ರಾಡ್ ಕಾಸ್ಟಿಂಗ್ ಸ್ಟೇಶನಿನಲ್ಲಿ ಹಾಡುವ ಗಾಯನವನ್ನು ರೇಡಿಯೊ ಮೂಲಕ ಮಂಗಳೂರಿನ ಗವರ್ನ್‌ಮೆಂಟ್ ಕೊಲೇಜಿನಲ್ಲಿ ಕೂತುಕೊಂಡು ನಾವು ಕೇಳುವ ವಿಧಾನವನ್ನು ಈಗ ವಿವರಿಸುವ -- ಬ್ರಾಡ್ ಕಾಸ್ಟಿಂಗ್ ಸ್ಟೇಷನ್ ಎಂದರೆ, ವರ್ತಮಾನವನ್ನೂ ಗಾಯನವನ್ನೂ ವಸರಿಸುವ ಮಂದಿರ ಅಲ್ಲಿಯ ವಿಚಾರವನ್ನು ಹೇಳುತ್ತೇನೆ –ಈ ಸ್ಟೇಶನಿನಲ್ಲಿ ಕೂತುಕೊಂಡು, ಗಾಯಕನು (Microphone) "ಮೈಕ್ರೊಫೋನ್" ಎಂಬ ಕಿವಿಯಂತಿರುವ ಉಪಕರಣದ ಎದುರಿಗೆ ಮುಖನುಮಾಡಿ ಹಾಡುತ್ತಾನೆ ಹಾಡುವಿಕೆಯಿಂದುಂಟಾದ ಧ್ವನಿಯ ಅಲೆಗಳು 'ಮೈಕ್ರೋಫೋನಿ'ನ ಒಂದು ಪರೆಯಂತಿರುವ ತಗಡು ಅಥವಾ ತಬಲೆಗೆ ಬಡಿಯುತ್ತದೆ ಆಗ ಆ ತಬಲೆಯಲ್ಲಿ ನಡುಕವುಂಟಾಗುತ್ತದೆ

ಈ ಮೈಕ್ರೋಫೋನನ್ನು ರೇಡಿಯೊ ಅಲೆಗಳನ್ನುಂಟುಮಾಡುವ ಸಾಧನಗಳಿಗೆ ತಕ್ಕರೀತಿಯಲ್ಲಿ ಸಂಬಂಧಿಸಿರುತ್ತಾರೆ ಮೈಕ್ರೋಫೋನಿನ ತಗಡಿನಲ್ಲುಂಟಾದ ನಡುಕದಿಂದಾಗಿ ಆ ತಗಡಿನ ಹಿಂದಿರುವ (Carbon) ಕಾರ್ಬನ್ ಪುಡಿಯಲ್ಲಿ ಒತ್ತುವಿಕೆಯುಂಟಾಗುತ್ತದೆ. ಈ ಕಾರ್ಬನ್‌ಪುಡಿಯ ಮೂಲಕ ಹರಿಯುತ್ತಿರುವ ವಿದ್ಯುಚ್ಛಕ್ತಿಯಲ್ಲೂ ಧ್ವನಿಗೆ ತಕ್ಕಂತೆ ಮಾರ್ಪಾಟಗಳು ಸಂಭವಿಸುತ್ತವೆ.

ಹೀಗೆ ಧ್ವನಿಯ ಅಲೆಗಳನ್ನು ಅನುಸರಿಸಿಕೊಂಡು ಮಾರ್ಪಾಟಾದ ರೇಡಿಯೊ ಅಲೆಗಳೆಂಬ ಶಕ್ತಿಯನ್ನು ಒಂದು ತಂತಿಯ ಮೂಲಕ, ಎತ್ತರವಾದ ಕಂಬಗಳಲ್ಲಿ ತೂಗಹಾಕಿದ (Aerial) ಏರಿಯಲ್ ಎಂಬ ತಂತಿಗಳಿಗೆ ತಳ್ಳುಹಿಸಿಕೊಡುತ್ತಾರೆ. ಈ ಕಂಬಗಳು 200–300 ಅಡಿಗಳಿಗಿಂತಲೂ ಎತ್ತರವಿರುವುದುಂಟು. ರೇಡಿಯೊ ವರ್ತಮಾನ ಇನ್ನಷ್ಟು ದೂರ ಹೋಗಬೇಕೆಂದಿದ್ದರೆ, ಈ ಕಂಬಗಳು ಇನ್ನಷ್ಟೂ ಎತ್ತರಕ್ಕಿರಬೇಕು.

ಏರಿಯಲ್‌ನಿಂದ ಹೊರಟ ರೇಡಿಯೊ ಅಲೆಗಳು ಎಲ್ಲಾ ದಿಕ್ಕುಗಳಿಗೂ ಓಡುತ್ತಾ ಇರುತ್ತವೆ. ಅವು ನನ್ನು ಮಂಗಳೂರಿಗೂ ಬರುತ್ತವೆ. ಬರುವುದಕ್ಕೆ ಒಂದು ನೆಕ್ಕಂಡುಕೂಡಾ ಬೇಕಾಗಿಲ್ಲ. ಇಲ್ಲಿಯ ನೆರೆಗೆ ಆ ತಕ್ಕಿಯು ಚಲಿಸಬೇಕಾದರೆ ಯಾವ ತಂತಿಯ ಆಧಾರವೂ ಬೇಕಾಗಿಲ್ಲ. ಆಕಾಶದಲ್ಲೇ ಓಡಿಬರುತ್ತದೆ. ಗಾಯನಗಳೂ ವರ್ತಮಾನಗಳೂ ತಂತಿಯಿಲ್ಲದೆ ಈ ಹೊಸ ಕ್ರಮದಲ್ಲಿ ಬರುವುದರಿಂದ ಈ ವಿಚಿತ್ರ ವಿಧಾನಕ್ಕೆ 'ತಂತಿಯಿಲ್ಲದ ಟೆಲಿಫೋನ್' ಅಥವಾ ಆಕಾಶದಿಂದ ಬರುವುದರಿಂದ ಆಕಾಶವಾಣಿ ಎನ್ನುವುದು ವಾಡಿಕೆ.

ಇತ್ತೀಚೆಗೆ ಮಾಡಿದ ಬ್ರಾಡ್ ಕಾಸ್ಟಿಂಗ್ ಸ್ಟೇಶನುಗಳಲ್ಲಿ, ಸ್ಪಾರ್ಕ್ ಗ್ಯಾಪಿಗಿಂತಲೂ ಅನುಕೂಲವಾದ ಇನ್ನೊಂದು ಸಲಕರಣೆಯಿಂದ ರೇಡಿಯೊ ಅಲೆಗಳನ್ನು ಹೊರಡಿಸುತ್ತಾರೆ. ಇದಕ್ಕೆ 'ವ್ಯಾಕುವಮ್' (Vacuum Tube) ಎಂಬ ಹೆಸರಿಟ್ಟಿದ್ದಾರೆ ಇದರ ಚಿತ್ರವನ್ನು ಇಲ್ಲಿ ಕೊಟ್ಟಿದೆ

ಈ ಚಿತ್ರಗಳಲ್ಲಿ ಎಷ್ಟು ವಿಧದ ವ್ಯಾಕುವಮ್ ಟ್ಯೂಬ್ ಗಳನ್ನು ತೋರಿಸಿರುತ್ತೇವೆ ದೊಡ್ಡ ಪಟ್ಟಣಗಳಲ್ಲಿ ಅಥವಾ ಸಿನೆಮಾ ಥಿಯೇಟರಿನಲ್ಲಿ ಉಪಯೋಗಿಸುತ್ತಿರುವ ವಿದ್ಯುಚ್ಛಕ್ತಿಯ ದೀಪದ ಬುರುಡೆಗಳಂತೆ, ಈ ವ್ಯಾಕುವಮ್ ಟ್ಯೂಬುಗಳು ಕಾಣುತ್ತಿವೆ

ಇದೂ ಒಂದು ಗಾಜಿನ ಬುರುಡೆ ಒಳಗಿದ್ದ ವಾಯುವನ್ನು ಹೊರಕ್ಕೆ ತೆಗೆದುಬಿಟ್ಟು ಖಾಲಿ ಮಾಡಿಯದೆ ಬುರುಡೆಯೊಳಗೆ ವ್ಯಾಕುವಮ್, ಎಂದರೆ, 'ಖಾಲಿ ಸ್ಥಳ'ವಿರುವುದರಿಂದ ಇದಕ್ಕೆ ವ್ಯಾಕುವಮ್ ಟ್ಯೂಬ್ ಎಂಬ ಹೆಸರು ಬಂತು ಇದರೊಳಗೆ ಸಪೂರವಾದ ಸರಿಗೆಯೊಂದನ್ನು ಬಾಗಿಸಿಟ್ಟಿದ್ದಾರೆ ಇದಕ್ಕೆ ಫಿಲಾಮೆಂಟ್ (Filament) ಎನ್ನುವರು 'ಟಂಗ್ ಸ್ಟೆನ್' (Tungsten) ಎಂಬ ಲೋಹವನ್ನು "ಥೋರಿಯಮ್ ಆಕ್ಸೈಡ್" (Thorium Oxide) ಎಂಬ ಭಸ್ಮವನ್ನೂ ಬೆರಸಿ, ಈ ಫಿಲಾಮೆಂಟನ್ನು ತಯಾರಿಸಿರುತ್ತಾರೆ.

ಈ ಫಿಲಾಮೆಂಟನ್ನು ಆವರಿಸಿಕೊಂಡಿರುವ ತಂತಿಗಳ ಬಲೆಯನ್ನು ನೋಡಿರಿ ಇದನ್ನು 'ಗ್ರಿಡ್' (Grid) ಎನ್ನುವರು. ಗ್ರಿಡ್ಡನ್ನು ಆವರಿಸಿಕೊಂಡು, ನಿಕ್ಕಿಲ್ ಲೋಹದ ಒಂದು ಪ್ಲೇಟ್ (Plate) ಅಥವಾ ತಟ್ಟೆಯಿದೆ

ಹೀಗೆ ತಯಾರುಮಾಡಿದ ವ್ಯಾಕುವಮ್ ಟ್ಯೂಬುಗಳನ್ನು ಬ್ಯಾಟರಿಗಳೊಡನೆ ಜೋಡಿಸಿಕೊಂಡು, ಈಗಿನ ಅನೇಕ ಬ್ರಾಡ್ ಕಾಸ್ಟಿಂಗ್ ಸ್ಟೇಶನುಗಳಲ್ಲಿ ರೇಡಿಯೋ ಅಲೆಗಳನ್ನು ಹೊರಡಿಸಿ, ಅವುಗಳ ಮೂಲಕ ವರ್ತಮಾನಗಳನ್ನು ಊರಿಂದೂರಿಗೆ ಕಳುಹಿಸುತ್ತಾರೆ

7. At the Receiving Station.

ರಿಸೀವಿಂಗ್ ಸ್ಟೇಶನಿನಲ್ಲಿ.

ಬೊಂಬಾಯಿಯಿಂದ ಹೊರಟುಬಂದಿರುವ ರೇಡಿಯೊ

ಅಲೆಗಳು ದೂರಕ್ಕೆ ಹೋದಂತೆ ದೊಡ್ಡದಾಗುತ್ತವೆ

ಅಲೆಗಳನ್ನು ಮಂಗಳೂರಿನಲ್ಲಿ ಹಿಡಿದಿರುವ ಬಗೆ ಹೇಗೆ? ಇದಕ್ಕಾಗಿ ಮಂಗಳೂರಲ್ಲಿ ನಾವು 2 ಉಪಕರಣಗಳನ್ನು ಉಪಯೋಗಿಸುತ್ತೇವೆ. (receiving aerial) ರಿಸೀವಿಂಗ್ ಏರಿಯಲ್ ಮತ್ತು (receiving set) ರಿಸೀವಿಂಗ್ ಸೆಟ್, ಅಂದರೆ, ಸುದ್ದಿಯನ್ನು ಗ್ರಹಣ ಮಾಡುವ ಸಲಕರಣೆಗಳು ಎಂದು ಇವುಗಳ ಹೆಸರು. ಬಹು ಮಂದಿ ಇವುಗಳನ್ನು ರೇಡಿಯೊ ಸೆಟ್ (radio set) ಎಂದೇ ಕರೆಯುವರು. ಚಲೋದಾದ ಒಂದು ರೇಡಿಯೊ ಸೆಟ್ಟಿನ ಬೆಲೆ ಸುಮಾರು 500 ರೂಪಾಯಿ. ಜರ್ಮನಿಯಲ್ಲಿ ಬರೀ ಎರಡೇ ತಾಸಿನ ಬೆಳೆಯಾಗುವ ಸೆಟ್ಟನ್ನು ತಯಾರು ಮಾಡಿ ಬಡವರಿಗೂ ಇದರ ಉಪಯೋಗ ದೊರಕುವಂತೆ ಮಾಡುವ ದರಲ್ಲಿದ್ದಾರಂತೆ.

ಆಕಾಶದಲ್ಲಿ ರೇಡಿಯೊ ಅಲೆಗಳು ಇಲ್ಲಿಗೆ ಬಂದಿವೆ ಎನ್ನೋಣ. ಅವುಗಳನ್ನು ಹಿಡಿದು ನಾವು ಕೂತಲ್ಲಿಗೆ ಕರ ಬೇಕಾದರೆ, ಒಂದು ಸಣ್ಣ ರಿಸೀವಿಂಗ್ ಏರಿಯಲ್ ಬೇಕು. ಈ ರಿಸೀವಿಂಗ್ ಏರಿಯಲ್ ಚಿಕ್ಕದು. ಎರಡು ಎತ್ತರವಾದ ಗಾಳಿಮರಗಳಿಂದ ತೂಗಹಾಕಿದ ತಂತಿಯನ್ನೇ ಉಪಯೋಗಿಸುತ್ತೇವೆ. ಅಥವಾ ಕೊಲೇಜಿನ ಮಾಡಿಗೆ ಕಟ್ಟಿದ ಎರಡು ಬಿದಿರುಗಳನ್ನು ಕಂಬಗಳಾಗಿ ಮಾಡಿಕೊಂಡರೆ, ಒಂದು ಬಿದಿರಿನ ಕೊನೆಯಿಂದ ಇನ್ನೊಂದಕ್ಕೆ ಕಟ್ಟಿದ ಸರಿಗೆಯೇ ಸಾಕಾಗುತ್ತದೆ.

ವ್ಯಾಕುವಮ್ ಟ್ಯೂಬು

ಏರಿಯಲ್‌ನಲ್ಲಿ ಹೀರಿಕೊಂಡ ರೇಡಿಯೊ ಶಕ್ತಿಯು ಒಂದು ತಂತಿಯ ಮೂಲಕ ಹರಿದು, ಕೆಳಗಿಳಿದು, ನಾವು ಕೂತಿರುವ ಕೋಣೆಯೊಳಗೆ ಬರುತ್ತದೆ ಅಲ್ಲಿ ಈ ತಂತಿಯು ರೇಡಿಯೊ ಸೆಟ್ ಪೆಟ್ಟಿಗೆಯೊಳಕ್ಕೆ ಹೋಗುತ್ತದೆ

ಹಿಂದು ಮುಂದಕ್ಕೆ ಹಾರಾಡುತ್ತಿದ್ದ ವಿದ್ಯುಚ್ಛಕ್ತಿಯೇ ರೇಡಿಯೋ ಅಲೆಗಳ ಹುಟ್ಟುಸ್ಥಾನ ಎಂಬುದನ್ನು ಬಲ್ಲೆವು ಈಗ ರೇಡಿಯೋ ಸೆಟ್ ಪೆಟ್ಟಿಗೆಯೊಳಗೆ ಹಿಡಿದಿಟ್ಟುಕೊಂಡಿರುವ ಅದೇ ವಿದ್ಯುಚ್ಛಕ್ತಿಯು ಹಿಂದು ಮುಂದಕ್ಕೆ ಓಡಾಡುತ್ತಿದೆ. ನೀರ ಪ್ರವಾಹದಂತೆ ಒಂದೇ ಕಡೆಗೆ ಹರಿಯುತ್ತಾ ಇರುವುದಿಲ್ಲ ಇಂಥಾ ವಿದ್ಯುಚ್ಛಕ್ತಿಯನ್ನು ಒಂದೇ ಕಡೆಗೆ ಹರಿಯುವಂತೆ ಮಾಡಬೇಕು ಇದೇ ನಾವೀಗ ಮಾಡಬೇಕಾದ ಕೆಲಸ ಅಂದರೆ (Alternating current) 'ಹಿಂದು ಮುಂದಕ್ಕೆ ಹಾರ್ವುತ್ತಿದ್ದ' ವಿದ್ಯುಚ್ಛಕ್ತಿಯನ್ನು 'ಏಕಮುಖವಾಗಿ ಹರಿಯುವ' ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಾಟಮಾಡುವ ಕೆಲಸ. ಅದನ್ನೀಗ ವಿವರಿಸುವ.

ಈ ಕೆಲಸವನ್ನು ಕೂಡಾ ಮೇಲೆ ಹೇಳಿದ ವ್ಯಾಕುವಮ್ ಟ್ಯೂಬೇ ನಿರವೇರಿಸಬಲ್ಲುದು ವ್ಯಾಕುವಮ್ ಟ್ಯೂಬನ್ನು ಇಲಿಯ ಬೋನಿನ ಬಾಗಿಲಿಗೆ ಸರಿಹೋಲಿಸಬಹುದು. ಬೋನಿನ ಬಾಗಿಲ ಮೂಲಕ ಇಲಿಗೆ ಒಂದೇ ಕಡೆಗೆ ಹೋಗಲು ಸಾಧ್ಯ ಹಾಗೆಯೇ ಒಂದೇ ಕಡೆಗೆ ಹರಿಯುವ ವಿದ್ಯುಚ್ಛಕ್ತಿಯನ್ನು ಮಾತ್ರ ವ್ಯಾಕುವಮ್ ಟ್ಯೂಬ್ ಹಿಡಿದಿಟ್ಟುಕೊಳ್ಳುತ್ತದೆ ಆದುದರಿಂದಲೇ ಇದಕ್ಕೆ (Valve) "ವಾಲ್ವ್" ಅಂದರೆ "ಬೋನಿನ ಬಾಗಿಲು" ಎಂಬ ಇನ್ನೊಂದು ಹೆಸರು ಬಂದಿದೆ ವಾಲ್ವ್‌ನೊಳಗಿಂದ ಹೊರಗೆ ಹೊರಟು ಬರುವ ವಿದ್ಯುಚ್ಛಕ್ತಿಯು ಒಂದೇ ಕಡೆಗೆ ಹರಿಯುತ್ತದೆ

ಆ ಮೇಲೆ ಇನ್ನೊಂದು ಕೆಲಸವಿದೆ ಹೀಗೆ ದೊರೆತ ವಿದ್ಯುಚ್ಛಕ್ತಿಯನ್ನು ಧ್ವನೀರೂಪಕ್ಕೆ ಮಾರ್ಪಾಟ ಮಾಡುವ ಕಾರ್ಯ. ಇದಕ್ಕಾಗಿ ರೇಡಿಯೋ ಸೆಟ್ಟಿಗೆ ಸಂಬಂಧಿಸಿದ 'ಟೆಲಿಫೋನ್' ರಿಸೀವರ್' ಎಂಬ ಸಾಧನವನ್ನು ಕಿವಿಯ ಮೇಲೆ ಇಟ್ಟುಕೊಳ್ಳಬೇಕು. ಟೆಲಿಫೋನಿನೊಳಗಿರುವ ವರೆಯಂತಿರುವ ಕಬ್ಬಿಣದ ತಗಡಿನಲ್ಲಿ ವಿದ್ಯುಚ್ಛಕ್ತಿಯ ದೆಸೆಯಿಂದ ನಡುಕವುಂಟಾಗುತ್ತದೆ. ಈ ನಡುಕವೇ ಧ್ವನಿ. ಈ ಧ್ವನಿಯೇ ಟೋಬಾಯಿಯಲ್ಲಿ ಹಾಡಿದ ಗಾಯನವು 'ನಮ್ಮ'ವಕ್ಕೆ ಇದ್ದಲ್ಲೇ ಗಾಯನವನ್ನಾಡುತ್ತಿರುವಂತೆ ಕೇಳಿಸುತ್ತದೆ.

ಟೆಲಿಫೋನು ರಿಸೀವರುಗಳನ್ನು ಜತೆಯಾಗಿ ಉಪಯೋಗಿಸಿದರೆ ಎರಡೂ ಕಿವಿಗಳಿಗೆ ಅನುಕೂಲವಾಗಿ ಕೇಳಿಸುತ್ತದೆ. ಈ ಸ್ಥಳದಲ್ಲಿ ಒಂದು ಪೂರ್ತಿ ರೇಡಿಯೋ ರಿಸೀವರು

ಳು ಕಿವಿಯ ಮೇಲಿಂದ ತೊಗಿಸುತ್ತಾರೆ. ಅದರ ಜೆ ಇತಗೆಗೆ (Head pone) (ಹೆಡ್ ಫೋನ್) ಹೆಡ್ ನ್ ಎಂದು ಹೆಸರು.

ಮೊದಲು ಬೊಂಬಾಯಿಯಲ್ಲಿ ಗಾಯನವನ್ನು ರೇಡಿ ಲೆಗಳಾಗಿ ಮಾಡಿದರು. ಅದೇ ಶಕ್ತಿಯನ್ನು ಪುನಃ ಂಗಳೂರಿನಲ್ಲಿ ಗಾಯನ ರೂಪಕ್ಕೆ ತಂದಿತು. ಇದೇ



ವ್ಯಾಕುಯಮ್ ಟ್ಯೂಬ್ ಮತ್ತು ಮಿರಾಯೊಡನೆ ಆಪನ್ನು ಸೇರಿಸುವುದು.

ವಿಜ್ಞಾನದಿಂದ ದೊರಕಿದ ವರಪ್ರಸಾದಗಳಲ್ಲಿ ಅದ್ಭುತಕರವಾದ ಚಮತ್ಕಾರ. ಗಾಯಕನು ಪಾಶ್ಚಾತ್ಯದೇಶದಲ್ಲಿರುವಾಗಲೇ ಇಷ್ಟು ದೂರ ಕುಳಿತಿರುವ ನಾವು ಕೇಳುತ್ತೇವೆ.

8. ರೇಡಿಯೊ ಸೆಟ್‌ನಲ್ಲಿರುವ ಇತರ ಸಲಕರಣೆಗಳು.

ರೇಡಿಯೊ ಅಲೆಗಳನ್ನು ಹೊರಡಿಸಿ ಆಕಾಶದಲ್ಲಿ ಬಿಟ್ಟು ಬಿಡುವ ಬ್ರಾಡ್ ಕಾಸ್ಟಿಂಗ್ ಸ್ಟೇಶನ್ ಬೊಂಬಾಯಿಯಲ್ಲಿ ಮಾತ್ರವಲ್ಲ, ಕಲ್ಕತ್ತಾ, ಕೊಲಂಬೋ ಮೊದಲಾದ ಅನೇಕ ಪಟ್ಟಣಗಳಲ್ಲಿವೆ. ಒಂದೇ ಸಮಯದಲ್ಲಿ ಎಲ್ಲಾ ಸ್ಟೇಶನುಗಳಿಂದ ಬಂದಿರುವ ರೇಡಿಯೊ ವರ್ತಮಾನಗಳಲ್ಲಿ ಬಂದು ಇನ್ನೊಂದನ್ನು ತಡೆದರೆ, ನಮಗೆ ಕೇಳುವುದಕ್ಕೆ ಅಡ್ಡಿಯಾಗುವುದಿಲ್ಲವೋ ಎಂಬ ಶಂಕೆ ಬರುವುದು ಸಹಜ. ಇದಕ್ಕಾಗಿಯೇ ಎಲ್ಲಾ ಜನಾಂಗದವರೂ ಸೇರಿ ಒಂದು ಒಪ್ಪಂದ ಮಾಡಿಟ್ಟುಕೊಂಡಿದ್ದಾರೆ. ಬೊಂಬಾಯಿ ಬ್ರಾಡ್ ಕಾಸ್ಟಿಂಗ್ ಸ್ಟೇಶನಿನಿಂದ ಹೊರಡಿಸುವ ರೇಡಿಯೊ ಅಲೆಗಳ ಉದ್ದ 857.1 ಮಿಟರ್‌ಗಳೇ (889 ಗಜಗಳು) ಇರಬೇಕೆಂಬ ನಿಯಮವನ್ನಿಟ್ಟಿದ್ದಾರೆ. ಕಲ್ಕತ್ತಾ ಸ್ಟೇಶನಿನ ರೇಡಿಯೊ ಅಲೆಗಳ ಉದ್ದ 370.4 ಮಿಟರುಗಳೇ (440 ಗಜಗಳೇ) ಇರಬೇಕು. ಕೊಲಂಬೊ ಸ್ಟೇಶನಿನ ರೇಡಿಯೊ ಅಲೆಗಳ ಉದ್ದ 428.5 ಮಿಟರ್ (467 ಗಜಗಳು). ಹೀಗೆಯೇ ಲಂಡನ್ನಿನಿಂದ 75 ಮೈಲು ದೂರವಿರುವ (Davantry) ಡೇವೆಂಟ್ರಿ ಎಂಬಲ್ಲಿ 1600 ಮಿಟರುಗಳು (1744 ಗಜಗಳು.) ಅಮೇರಿಕದ ಶೆನೆಕ್ಟಾಡಿ (Schenectady) ಎಂಬ ಅತ್ಯಂತ ದೊಡ್ಡ ಸ್ಟೇಶನಿನಲ್ಲಿ 880 ಮಿಟರುಗಳು (414 ಗಜಗಳು). ಈ ತೆರದ ನಿರ್ಧಾರವನ್ನು ಮಾಡಿಟ್ಟುಕೊಂಡಿದ್ದಾರೆ.

ಹೀಗೆ ಅನೇಕ ತರದ ರೇಡಿಯೊ ಅಲೆಗಳು ಆಕಾಶದಲ್ಲಿರುವಾಗ್ಯ ಬೊಂಬಾಯಿಯಿಂದ ಕಳುಹಿಸಿದ ಗಾಯನವೇ ಮಂಗಳೂರಿನಲ್ಲಿರುವ ನಮಗೆ ಕೇಳಬೇಕೆಂದಿದ್ದಲ್ಲಿ ಏನು ಮಾಡಬೇಕು? ಇದಕ್ಕಾಗಿ ರೇಡಿಯೊ ಸೆಟ್ಟಿನಲ್ಲಿ (Variometer) ವೇರಿಯೊಮಿಟರ್ ಅಥವಾ (Tuning Coil) ಟ್ಯೂನಿಂಗ್ ಕೊಯಿಲ್ ಎಂಬ ಸಾಧನವಿದೆ. ಆಕಾಶದಲ್ಲಿರುವ ರೇಡಿಯೊ ಅಲೆಗಳ ವೈಕ್ಯ ನಮಗೆ ಯಾವುದು ಬೇಕೋ ಅದನ್ನೇ ಈ ಸಾಧನವು ಆರಿಸಿ ತೆಗೆಯಬಲ್ಲುದು. ಮಿಕ್ಕವು ಗಳನ್ನು ಬಿಟ್ಟುಬಿಡುತ್ತದೆ. ಆಗ ಬೊಂಬಾಯಿಯ ಗಾಯನವು ಮಾತ್ರ ನಮಗೆ ಹೆಡ್ ಫೋನಿನಲ್ಲಿ ಕೇಳಿಸುತ್ತದೆ.

9. Loud Speaker (ಲೌಡ್ ಸ್ಪೀಕರ್) ಧ್ವನಿಯನ್ನು ಬಲಪಡಿಸುವ ವಿಧಾನ.

ಹೆಡ್ ಫೋನನ್ನು ಇಟ್ಟುಕೊಂಡು ಕೇಳಿದರೆ ಈ ಗಾಯನವನ್ನು ಒಬ್ಬನೇ ಕೇಳಲು ಸಾಧ್ಯ. ಇಪ್ಪತ್ತು ಮೂವತ್ತು ಜನರಿಗೆ ಇದೇ ಗಾಯನವನ್ನು ಕೇಳುವ ಅವಶ್ಯಕತೆಯಿದ್ದರೆ, ಆಗ ಧ್ವನಿಯನ್ನು ಬಲಪಡಿಸುವ (Loud Speaker) ಲೌಡ್ ಸ್ಪೀಕರ್ ಎಂಬ ಸಾಧನವನ್ನು ಹೆಡ್ ಫೋನಿಗೆ ಬದಲಾಗಿ ಉಪಯೋಗಿಸುತ್ತೇವೆ. ಲೌಡ್ ಸ್ಪೀಕರನ್ನು ಮೇಜಿನ ಮೇಲೆ ಇಟ್ಟರೆ, ಆ ಕೋಣೆಯೊಳಗೆ ಕೂತವರೆಲ್ಲರೂ ಬೊಂಬಾಯಿಯಲ್ಲಾಗುವ ಗಾಯನವನ್ನು ಕೇಳುತ್ತಾ ಸಂತೋಷಪಡಬಹುದು. ಧ್ವನಿಯನ್ನು ಬಲಪಡಿಸುವುದಕ್ಕೆ ಕೆಲವು ವಾಲ್ವ್‌ಗಳನ್ನು ಉಪಯೋಗಿಸುತ್ತೇವೆ. ಹೆಚ್ಚು ವಾಲ್ವ್‌ಗಳಿದ್ದಲ್ಲಿ ಧ್ವನಿಯು ಇನ್ನಷ್ಟು ಬಲವಾಗಿ ಕೇಳಿಸುತ್ತದೆ. ಸಾಧಾರಣವಾಗಿ ಉಪಯೋಗಿಸುವ ರೇಡಿಯೊ ಸೆಟ್‌ಗಳಲ್ಲಿ ಮೂರು, ನಾಲ್ಕು, ಯಾ ಏಳು ವಾಲ್ವ್‌ಗಳು ಇರುತ್ತವೆ. ಇಲ್ಲಿಗೆ ನಮ್ಮ ಅದ್ಭುತಕರ್ತೃತ್ವವು ಕೊನೆಗೊಂದಿತು.

10. ಪ್ರಯೋಜನಗಳು.

ಇನ್ನು ಪ್ರಯೋಜನದ ವಿಷಯವಾಗಿ ಒಂದೆರಡು ಮಾತು. ಬೊಂಬಾಯಿ, ಕಲ್ಕತ್ತ, ಕೊಲಂಬೋ ಸ್ಟೇಶನುಗಳಿಂದ ಪ್ರತಿನಿತ್ಯವೂ ಗಾಯನಗಳನ್ನೂ, ಸುದ್ದಿಗಳನ್ನೂ, ಇತರಉಪನ್ಯಾಸಗಳನ್ನೂ, ವ್ಯಾಪಾರದವರಿಗೆ ಬೇಕಾದ ಪದವನ್ನು, ಚಿನ್ನ, ಬೆಳ್ಳಿ, ಕಾಫಿ, ಹತ್ತಿ ಮೊದಲಾದವುಗಳ ಆಯಾ ಸಾಯಂಕಾಲದ ಬೆಲೆಯನ್ನೂ, ರೇಡಿಯೊ ಮೂಲಕ ನಿಯಮಿತ ಕಾಲಗಳಲ್ಲಿ 'ಬ್ರಾಡ್ ಕಾಸ್ಟ್' ಮಾಡುತ್ತಾರೆ. ಈ ಫೋಟೋಗ್ರಾಮುಗಳನ್ನು ಮುಖ ಮುಖ ದೈನಿಕ ಇಂಗ್ಲಿಷ್ ಪತ್ರಿಕೆಗಳಲ್ಲಿ ಮುಂದಾಗಿಯೇ ಸೂಚಿಸುತ್ತಾರೆ. ಆ ಸಮಯದಲ್ಲಿ ಒಂದು ರೇಡಿಯೊ ಸೆಟ್ಟನ್ನು ಉಪಯೋಗಿಸಿಕೊಂಡು ಯಾವ ಹಳ್ಳಿಯಲ್ಲೂ ಕೇಳಬಹುದು. ಗ್ರಾಮಫೋನು ಇಟ್ಟುಕೊಂಡು ಗಾಯನ ಕೇಳುವವರಿಗೆ ಕೆಲವು ಸಮಯದ ಮೇಲೆ ಹಳೆ ರಿಕಾರ್ಡುಗಳ ಮೇಲೆ ಬೇಸರ ಹುಟ್ಟಬಹುದು. ಆದರೆ ರೇಡಿಯೊ ಸೆಟ್ಟನ್ನು ಇಟ್ಟು ಕೇಳುವ ಗಾಯನವು ದಿನ ದಿನಕ್ಕೆ ಹೊಸ ಹೊಸವು. ಅಲ್ಲದೆ



ರೇಡಿಯೊ ಅಲೆಗಳನ್ನು ಗ್ರಹಣಮಾಡುವ ಒಂದು ಸಾದಾ ವಿಧಾನ.

ಖರ್ಚು ಹೆಚ್ಚುಕಡಿಮೆ ಒಂದೇ ರೀತಿ. ಇದೂ ಅಲ್ಲದೆ ಪ್ರತಿದಿನವೂ ಒಂದು ವರ್ತಮಾನ ಪತ್ರಿಕೆಯನ್ನು ಓದಿದಂತೆಯೇ ಸರಿ. ಬ್ರಾಡ್ ಕಾಸ್ಟಿಂಗ್ ಸ್ಟೇಷನಿನಿಂದ ಮಾತನಾಡುವಾಗ ಇಂಗ್ಲಿಷನ್ನೇ ಮಾತ್ರವಲ್ಲದೆ ಹಿಂದೀಯನ್ನೂ ಉಪಯೋಗಿಸುವುದರಿಂದ ಇಂಗ್ಲಿಷ್ ಅರಿಯದೆ ಹಿಂದೀಯನ್ನರಿತ ಹಳ್ಳಿಯ ನಿವಾಸಿಗೂ, ವ್ಯಾಪಾರಸ್ಥರಿಗೂ, ಇತರರಿಗೂ ಅರ್ಥವಾಗುತ್ತದೆ. ಆದುದರಿಂದ ರೇಡಿಯೊ ಸೆಟ್ ಎಂಬುದು ಸುಶಿಕ್ಷಿತರೂ ಸಾಮಾನ್ಯರೂ ವಿನೋದಕ್ಕಾಗಿ ಉಪಯೋಗಿಸುವ ಒಂದು ಹೊಸ ವಸ್ತು.

ಈಗ ಪ್ರಪಂಚದ ಎಲ್ಲೆಯೆಗಳಲ್ಲಿ ಪ್ರಯಾಣ ಮಾಡುವ ಹಡಗುಗಳಲ್ಲಿ ಕೆಲವು ಕೆಂಟ ಕಳುಹಿಸುವ ಮತ್ತು ಪಡೆಯುವ ಸಾಧನಗಳನ್ನು ಇಟ್ಟುಕೊಂಡಿದ್ದಾರೆ. ಅಪಾಯಗಳ ಸೂಚನೆ ಬಂದಾಗ ಇತರ ಸ್ಟೀಮರುಗಳಿಗೆ ಒದನೆಯೇ ತಿಳಿಸಿ, ಅನೇಕ ವೇಳೆ ಸಹಾಯವನ್ನು ಹೊಂದುತ್ತಾರೆ.

ವಾಯು ವಿಮಾನಗಳಲ್ಲೂ ಈ ಅನುಕೂಲತೆಗಳಿವೆ. ಈ ದೈರ್ಯಂದಲೇ ವಾಯು ವಿಮಾನಗಳಲ್ಲಿ ಈಗ ಸ್ಥೇಮೈಯಾಗಿ ತಿರುಗಲು ಸಾಧ್ಯ.



ಹೆಡ್ ಫೋನ್.

ಇದೂ ಅಲ್ಲದೆ ಕೆಲವು ತಿಂಗಳುಗಳಿಂದ ರೇಡಿಯೊ ಮೂಲಕ ಫೋಟೋಗ್ರಾಮುಗಳನ್ನು 'ಕಳುಹಿಸುವ' ವ್ಯವಸ್ಥೆಗಳನ್ನು ಮಾಡಿದ್ದಾರೆ. ಎಂದರೆ, ವಾರ್ಸೆಲ್ ಮಾಡಿ ಕಳುಹಿಸುವುದಲ್ಲ. ಫೋಟೋಗ್ರಾಫನ್ನು ಒಂದು ದೀವದ ಅದ್ದಕ್ಕೆ ಇಡುತ್ತಾರೆ. ಹಾಗೆ ದೂರಕಿದ ಛಾಯೆಯನ್ನು ರೇಡಿಯೊ ಅಲೆಗಳನ್ನಾಗಿ ಮಾರ್ಪಾಟು ಮಾಡಿ, ಏರಿಯಲ್ ನಿಂದ ಮೊದಲು ಕಳುಹಿಸುತ್ತಾರೆ. ರಿಸೀವಿಂಗ್ ಸೆಟ್ಟಿನಲ್ಲಿ ಪುನಃ ರೇಡಿಯೊ ಶಕ್ತಿಯನ್ನು ಛಾಯಾ ರೂಪಕ್ಕೆ ಮಾರ್ಪಡಿಸಿ, ಚಿತ್ರವನ್ನಾಗಿ ಮಾಡಿಕೊಳ್ಳುತ್ತಾರೆ. ಹೀಗಾಗಿ ಅಲ್ಪ ಕಾಲದಲ್ಲೇ ಒಂದು ಊರಲ್ಲಿ ನಡೆಯುವ ಕಾರ್ಯಕಲಾಪಗಳನ್ನು ಫೋಟೋ ತೆಗೆದು ಸಾವಿರಾರು ಮೈಲು ದೂರವಿರುವ ಊರುಗಳಿಗೆ ಕಳುಹಿಸಲು ಸಾಧ್ಯವಿದೆ.

ಇದಕ್ಕಿಂತಲೂ ಹೆಚ್ಚು ಸೋಜಿಗವನ್ನು ಹುಟ್ಟಿಸುವ ಇನ್ನೊಂದು ಹೊಸ ಸಂಗತಿ. ರೇಡಿಯೊಮೂಲಕ, ಮನುಷ್ಯರು ಚಲಿಸುತ್ತಿರುವ ಸಿನೆಮಾ ಚಿತ್ರಗಳನ್ನೂ, ಅವರ ಮಾತು ಕತೆಗಳನ್ನೂ, ನಡೆಯುವ ಶಬ್ದವನ್ನೂ ಕೂಡ ರೇಡಿಯೊ ಮೂಲಕ ಒಂದೂರಿನಿಂದ ಇನ್ನೊಂದೂರಿಗೆ ಕಳುಹಿಸುವ ಕ್ರಮವನ್ನು ಕಂಡು ಹಿಡಿದಿದ್ದಾರೆ. ಆದುದರಿಂದ ಇನ್ನು ಮೇಲೆ ಒಬ್ಬ ಉಪಾಧ್ಯಾಯನು ಸಾವಿರಾರು ಶಾಲೆಗಳಲ್ಲಿ ಕೂತಿರುವ ಲಕ್ಷೋಪಲಕ್ಷ ವಿದ್ಯಾರ್ಥಿಗಳಿಗೆ ಒಂದೇ ಬ್ರಾಡ್ ಕಾಸ್ಟಿಂಗ್ ಸ್ಟೇಷನ್ನಿನಿಂದ ಹೇಳಿಕೊಡಬಹುದು. ಒಬ್ಬ ಉಪಾಧ್ಯಾಯನು ನವೀನವಾದ ಇಂಥಾ ಬ್ರಾಡ್ ಕಾಸ್ಟಿಂಗ್ ಸ್ಟೇಷನ್ನಿನಲ್ಲಿ ನಿಂತುಕೊಂಡು ಮಾತನಾಡುತ್ತಾ ಬೋರ್ಡಿನ ಮೇಲೆ ಗಣಿತವನ್ನು ಬರೆದು ಕಲಿಸುತ್ತಿರುವುದನ್ನು ರಿಸೀವಿಂಗ್ ಸ್ಟೇಶನ್ ಎಂಬ ಸಿನೆಮಾ ಥಿಯೇಟರಿನಲ್ಲಿ ಕೂತುಕೊಂಡು ವಿದ್ಯಾರ್ಥಿಗಳು ಶಾಲೆ ನಾತನವನ್ನು ಕಲಿಯಬಹುದು.

11. ಸಮಾಪ್ತಿ.

ರೇಡಿಯೊ ಅಲೆಗಳನ್ನು ಕಂಡುಹಿಡಿದ ವಿಜ್ಞಾನ ತೋಧಕರ ಚಮತ್ಕಾರವೆಷ್ಟು? ಆ ರೇಡಿಯೊ ಅಲೆಯಲ್ಲಿರುವ ಆ ವರವಾತ್ಮನ ಮಹಿಮೆಯೆಷ್ಟು? ಇದಕ್ಕಿಂತಲೂ ವಿಸ್ಮಯವನ್ನುಂಟುಮಾಡುವ ಇನ್ನೆಷ್ಟು ಶಕ್ತಿ ಆ ಪರಮಾತ್ಮನಲ್ಲಿದೆಯೋ? ಸರ್ವ ಪ್ರೇರಕನಾದ ಅವನೇ ಬಲ್ಲ!

ಯಾಂತ್ರಿಕ ಮನುಷ್ಯನು. ರೊಬೊಟ್ ಎಂಬ ಇಲೆಕ್ಟ್ರಿಕ್ ಮನುಷ್ಯನನ್ನು ಇತ್ತೀಚೆಗೆ ಮಾಡಿದ್ದಾರೆ. ಇಲೆಕ್ಟ್ರಿಕ್ ಮನುಷ್ಯನೆಂದರೆ, ಮನುಷ್ಯಾಕೃತಿಯ ಒಂದು ಯಂತ್ರ. ಈ ಯಂತ್ರವು ಒಳಗಿನ ಅತಿ ಸೂಕ್ಷ್ಮವಾದ ಇಲೆಕ್ಟ್ರಿಕ್ ಉಪಕರಣಗಳ ಮೂಲಕ ಶಬ್ದವನ್ನು, ಬೆಳಕನ್ನೂ, ಇಲೆಕ್ಟ್ರಿಸಿಟಿಯನ್ನು ವರ್ಗೀಕರಿಸಬಲ್ಲುದು ಮತ್ತು ಈ ನೂರಂ ಮನುಷ್ಯರಿಂದಲೇ ಆಗಬೇಕಾಗಿದ್ದ ಕೆಲಸಗಳನ್ನು ಈ ಯಂತ್ರವು ಮಾಡಬಲ್ಲುದು. ಈ ರೊಬೊಟ್ ಅಥವಾ ಇಲೆಕ್ಟ್ರಿಕ್ ಮನುಷ್ಯನ ರಚನೆಯು ಎಷ್ಟು ಪೂರ್ಣತೆಗೆ ಬಂದಿರುವುದೆಂದರೆ ಬೇರು ಮತ್ತು ಇತರ ಆಟೋಸೆಗಳಲ್ಲಿ, ನಿಶ್ಚಿತ ಪಲವು ನಿರ್ದಿಷ್ಟ ಸೂತ್ರಗಳ ಮೇಲೆ ಕೆಲಸಮಾಡುವ ಕ್ಯಾಲ್ಕ್ಯುಲೇಟಿಂಗ್ ಕೆಲಸಗಳನ್ನು ಇದರಿಂದಲೇ ಮಾಡಬಹುದಾಗಿದೆ. ಇದು ಪ್ರಪಂಚದ ಬರಲು ಅಂಕಿಅಂಶಗಳನ್ನು ಸಾವಿರಾರು ಕ್ಯಾಲ್ಕುಲೇಟರುಗಳು ತಮ್ಮ ಕೆಲಸಗಳನ್ನು ಕಳೆದುಕೊಳ್ಳುವ ಸಂದರ್ಭವನ್ನು ಉಂಟುಮಾಡಬಹುದಾಗಿ ಹೆದರಿಕೆಯಿದೆ. ಹಲವು ಕೈಗಾರಿಕೆಗಳಲ್ಲಿ, ಸಣ್ಣ ಕೆಲಸಗಳನ್ನು ಈ ಯಾಂತ್ರಿಕ ಮನುಷ್ಯರೇ ಮಾಡುವುದಕ್ಕೆ ಒಪ್ಪುತ್ತಾರೆ.

ನಿಜವಾದ ಮನುಷ್ಯರು ನಡೆದುಮಾಡುವಾಗ ಅವನ ತಲೆಯಲ್ಲಿ ಮತ್ತು ಅಕ್ಕಪಕ್ಕದಲ್ಲಿ ಉಂಟಾಗಬಹುದಾದ ಮೋಹಗಳಿಗೆ

...ಯಾಂತ್ರಿಕ ಮನುಷ್ಯನಲ್ಲಿ ಎಡೆಯಿಲ್ಲ.

ಸೋಷಿಯಲಿಸಮ್.

ಲೇಖಕರು:— ಶ್ರೀ. ಜ. ವಿ. ರಾಮಾಚಾರ್ಯ, ಬಿ. ಎ

ಮನುಷ್ಯನು ಅನಾದಿಯಾಗಿ ವಿಕ್ಷದಲ್ಲಿದ್ದರೂ ಕೂಡ ಅದರ ಸುಖವನ್ನೆಗೆ ಹೆಚ್ಚು ಗಮನ ಕೊಟ್ಟಿಲ್ಲ. ಏಕೆಂದರೆ, ಜೀವನದಲ್ಲಿ ಸ್ವಾಭಾವಿಕವಾದ ಪಶುಗುಣಗಳು ಸಾಮಾನ್ಯವಾಗಿ ಜನರನ್ನು ಆವರಿಸಿವೆ. ಸ್ವಾರ್ಥವು ಅತಿ ಜೀವನವೆಂದು ಹೇಳಿದರೂ, ಪಾಶ್ಚಾತ್ಯ ಸಂಸ್ಕೃತಿಯಲ್ಲಿ, ಕಳೆದ ಶತಮಾನದಲ್ಲಿ ಅದು ಮಹದುಪಕಾರವನ್ನು ಮಾಡಿದೆ. ಸ್ವಾರ್ಥವು ಆರ್ಥಿಕ ಸಂಪತ್ತಿಯನ್ನು ವೃದ್ಧಿಪಡಿಸಿತು ಆದ್ದರಿಂದ ವಿಜ್ಞಾನ ಪ್ರಸರಣೆಯಾಯಿತು. ಆದರೆ, ಸನಾಜದ ಸಮಷ್ಟಿ ಸಂಪತ್ತಿಯು ಪ್ರತಿ ವ್ಯಕ್ತಿಯ ಸೌಖ್ಯಕ್ಕಿಂದ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಒಂದು ಕಡೆ ಸಂಪತ್ತಿನ ವೃದ್ಧಿಯೂ ಮತ್ತೊಂದು ಕಡೆ ಅಸಂತುಷ್ಟಿಯೂ ತಲೆದೋರಿದವು

ಹೇಗೆ ಈ ನಿಜಗುಣವು ಮಾನವನ ಜೀವನವನ್ನು ಬದಲಾಯಿಸಿತೋ, ಹಾಗೆಯೇ ಅಮೃತವಾದ ಕೆಲವು ಭಾವನೆಗಳು ಜೀವನಾದರ್ಶವನ್ನು ಬಧಲಾಯಿಸಿವೆ. ಅಂದರೆ, ಭಾವನೆಗಳು ಮನುಜನ ನಿಜಗುಣಗಳನ್ನು ಸನಾಜದ ಸುಖದ ಹಾದಿಗೆಳೆದು ಒಂದು ತೆರನ ವ್ಯವಸ್ಥೆಯನ್ನು ಕಲ್ಪಿಸಿವೆ. ನೈಜಗುಣಗಳೆಂಬ ಮೋಹಾಶ್ವಕ್ಕೆ ಧ್ಯೇಯಗಳು ಎದಿರುವ ಹಗ್ಗ. ಅದರಾವೇಶವನ್ನು ಬದಿಗೊತ್ತುವ ಅಸ್ತ್ರ ಭಾವನೆಗಳ ಮತ್ತು ಧ್ಯೇಯಗಳ ಭಾಗಕ್ಕೆ ಒಬ್ಬೆ ಸಿಕ್ಕಿದ ಮೇಲೆ ಪ್ರತಿ ಒಬ್ಬ ವ್ಯಕ್ತಿಯೂ ಅದರ ದಾಸಾನುದಾಸನಾಗುವನು ಸರ್ವಕಾಲದಲ್ಲಿಯೂ ತನ್ನ ಧ್ಯೇಯವನ್ನು ಕಾರ್ಯರಂಗಕ್ಕಿಳಿಸುವ ಪ್ರಯತ್ನವೇ ಅವನ ಹಂಬಲವಾಗುವುದು ವಾಲ್ಟರ್ ರೂಸೂ ಎಂಬ ತಾತ್ವಿಕರು ತಮ್ಮ ಕ್ರಾಂತಿವಾದದ ಅರಿವನ್ನು ಪ್ರಾನ್ಸ ದೇಶದಲ್ಲಿ ಹರಡಿದ ಮೇಲೆ, ಆ ಧ್ಯೇಯದ ಪಾಶಕ್ಕೆ ಬಿದ್ದಿದ್ದ ಆ ದೇಶವು ವಿಶ್ವವನ್ನೇ ತನ್ನ ಧ್ಯೇಯಕ್ಕೆ ಅಹುತಿ ಕೊಡಬೇಕೆಂದು ಪ್ರಯತ್ನಿಸಿ ಪಡಲಿಲ್ಲವೇ? ಈ ಶತಮಾನದಲ್ಲಿಯೂ ಕೂಡ ರಷ್ಯವು ತನ್ನ ಧ್ಯೇಯವನ್ನು ಪ್ರಪಂಚದಲ್ಲೆಲ್ಲಾ ಹರಡುವುದಕ್ಕೆ ಪ್ರಯತ್ನಪಡುತ್ತಿಲ್ಲವೇ ಅರಿವಿನ ಪ್ರಸರಣೆಯ ವೇಗವನ್ನು ಇಪ್ಪೆಂದು ಅಳೆಯುವದಕ್ಕೆ ಆಗುವುದಿಲ್ಲ. ಆ ಧ್ಯೇಯದ ಅಂತರ್ಶಕ್ತಿಯು ಹೆಚ್ಚಿದ ಹಾಗೆಲ್ಲಾ ಅದರ ಪ್ರಸರಣೆಯ ವೇಗವು ಹೆಚ್ಚುತ್ತದೆ. ಹಾಗೆಯೇ ಈಗ ವಿಶ್ವದಲ್ಲಿ ನಲಿದಾಡುತ್ತಿರುವ ಅಸಂತುಷ್ಟಿಗೂ, ಅಜ್ಞಾನಕ್ಕೂ, ಮತ್ತು ಜನ ಜಾಲತೆ ದಾರಿದ್ರ್ಯಕ್ಕೂ ಮೂಲಕಾರಣವಾದ ಬಂಡವಾಳ ತತ್ವವನ್ನು ನಿರ್ಮೂಲಮಾಡಬೇಕೆಂಬ ಧ್ಯೇಯವು ಹರಡುತ್ತಿದೆ. ಭಂಡವಾಳ ತತ್ವವನ್ನು ನಿರ್ಮೂಲ ಮಾಡಿ, ಅದರ ಸ್ಥಳದಲ್ಲಿ ಸನಾಜ ಸರ್ವಾಂಗಕ್ಕೂ ಸೌಖ್ಯ ಕೊಡುವ ಸೋಷಿಯಲಿಸಂ ತತ್ವವನ್ನು ಹರಡುವುದು ಈ ಶತಮಾನದ ಸಾಂಸ್ಕೃತಿಕ ವಿಭೂತಿಗಳ ಧ್ಯೇಯವಾಗಿದೆ **ಈ ಶತಮಾನದ ಜೆಟ್ಟು ಕೂಗೆಂದರೆ, ಮಾನವನ ಸಾಂಸ್ಕೃತಿಕ ವ್ಯಕ್ತಿತ್ವೋದ್ಧಾರ** ಹಿಂದಿನ ೧೯ನೆಯ ಶತಮಾನದಲ್ಲಿ ಮಾಲ್ಥಸನು ತನ್ನ ಜೀವನವನ್ನು ಗುರಿಯಿಲ್ಲದ ಕುರಿಯಂತೆ ಕಳೆದನು. ಏಕೆಂದರೆ ಅವನ ಸಂಸಾರದಲ್ಲಿ ಪಶುಸಂಬಂಧವಾದ ಸೈಜಗುಣಗಳೇ ಉನ್ನತ ಸ್ಥಾನವನ್ನು ಪಡೆದಿದ್ದವು ಆದರೆ, ಅವನು ಅದರ ಅವ್ಯೋಜನವನ್ನು ಅರಿತು ವ್ಯಕ್ತಿಯ ಸೌಖ್ಯವು ಸಮಷ್ಟಿ ಸಾಮಾಜ ಸೌಖ್ಯದಿಂದ ಆಗುತ್ತದೆ ಎಂಬುದನ್ನು ಅರಿತಿದ್ದಾನೆ ಡಾರ್ವಿನ್ನನ "ಸಮರ್ಥರ ಉಳಿಕೆ" (Survival of the fittest) ಯ ತತ್ವವನ್ನು ವರಿತ್ಯಾಗ ಮಾಡಿ ಉಳಿದವರೆಲ್ಲರೂ ಜೀವನ ಸಾಮರ್ಥ್ಯವನ್ನು ಸಂಪಾದಿಸಬೇಕೆಂಬುದೇ ಅವನ ಧ್ಯೇಯವಾಗಿದೆ ವ್ಯಕ್ತಿಗಳ ಸಂಚಯಕ್ಕೆ ಸಮಾಜವೆಂಬುದನ್ನು ವಿಶ್ಲೇಷಿಸಿದು, ವ್ಯಕ್ತಿಗಳ ಸಮಷ್ಟಿಜ್ಞಾನಕ್ಕೆ ಸಮಾಜವೆಂದು ಅರಿಯುತ್ತಿದ್ದಾನೆ. ವ್ಯಕ್ತಿ ಜ್ಞಾನವು ಸಮಾಜದಲ್ಲಿ ಹೇಗೆ ಅಡಕವಾಗಿದೆಯೋ ಹಾಗೆಯೇ ಸಮಾಜಜ್ಞಾನವು ವ್ಯಕ್ತಿಯಲ್ಲಿ ಅಡಕವಾಗಿರಬೇಕೆಂದು ತಿಳಿಯುತ್ತಿದ್ದಾನೆ ವ್ಯಕ್ತಿ-ಸಮಾಜದ ವರ್ಧಸ್ಪರ ಸೌಖ್ಯಜ್ಞಾನವೇ-ಸೋಷಿಯಲಿಸಂ ಎನ್ನಬಹುದು ಈ ಧ್ಯೇಯವನ್ನು ಎಳೆಳೆ ಅನುಸರಿಸಬೇಕು. ಇದಕ್ಕೆ ಆಧಾರವೇನು ಎಂದು ಕೇಳಬಹುದು.

ಈ ತತ್ವಕ್ಕೆ ಎರಡು ಆಧಾರಗಳಿವೆ. ಒಂದು ಚಾರಿತ್ರಿಕ ಆಧಾರ, ಮತ್ತೊಂದು ಆರ್ಥಿಕ ಶಾಸ್ತ್ರದ ಆಧಾರ. ದೇಶಗಳ ಮತ್ತು ಜನಾಂಗಗಳ ಉತ್ಪತ್ತಿ ಮತ್ತು ಅವನತಿಗಳಿಗೆ ಪ್ರಕೃತಿಯ ವರಿಸ್ಥಿತಿಯೇ ಮೂಲಕಾರಣವೆಂದು ಚಾರಿತ್ರಿಕಾಧಾರವು ಸಾರುತ್ತಿದೆ. ಅಂದರೆ ಮಾನವನ ಮನೋನಿಕಾಸವು ಆಯಾ ದೇಶದ ಪ್ರಕೃತಿಸಂಪತ್ತಿಯು ವರಿಣಾಮವಾಗಿಯೇ ಇರುತ್ತದೆ ಈ ತತ್ವವನ್ನು ಫೇರಬಾಂಕ್ ಎಂಬ ಜರ್ಮನ ತಾತ್ವಿಕ ವಿದ್ವಾಂಸನು ಸೋಷಿಯಲಿಸಮಿಗೆ ಮುಖ್ಯ ಆಧಾರವೆಂದು ಹೇಳುತ್ತಾನೆ. ಈ ವಿದ್ವಾಂಸನ ನ್ಯಕಾರ ಹಂದೂ ಸ್ಥಾನದಲ್ಲಿ ಏತಕ್ಕೆ ಅದ್ಭುತ ವೇದಾಂತಕಾರರು ಪುಟ್ಟಿದರೆಂದರೆ, ಅದರ ಪ್ರಕೃತಿಯ ವರಿಸ್ಥಿತಿಯೇ ಕಾರಣವೆಂದು ಹೇಳುತ್ತಾನೆ ಹಾಗೆಯೇ ಒಂದು ಜನಾಂಗದ ರಾಜಕೀಯ ಸಂಸ್ಥೆಗಳಿಗೂ ಕೂಡ ವರಿಸ್ಥಿತಿಯೇ ಕಾರಣವೆಂದು ಹೇಳುತ್ತಾನೆ. Plekhenar ಎಂಬ ರಷ್ಯದ ಲೇಖಕನು ಈ ರೀತಿ ಬರೆಯುತ್ತಾನೆ "The Primary thesis of Materialism is that History is made up of human beings Now if it is made by human beings it most obtvously is made by great men among the rest Our Problem is then to find out by what the activity of these men is determined' ಸಾರಾಂಶವೇನೆಂದರೆ, ಚರಿತ್ರೆಯು ಮಾನವನಿಂದ ನಿರ್ಮಾಣವಾಗಿದೆ ಮಾನವರಲ್ಲಿಯೂ ವ್ಯಕ್ತಿಭಾಸಂಪನ್ನರಿಂದ ನಿರ್ಮಾಣವಾಗಿದೆಯೆಂದು ಹೇಳಬೇಕು ಆದರೆ ಈ ಪ್ರತಿಭಾಸಂಪನ್ನರ ಕಾರ್ಯಕಲಾಪಗಳು ಯಾವುದರಿಂದ ನಿರ್ಧಾರವಾಗುತ್ತವೆ ಎಂಬುದೆ ನಮ್ಮ ಸಮಸ್ಯೆ" ಈ ಸಮಸ್ಯೆಗೆ ಉತ್ತರ ಕೊಡುವಾಗ ಪ್ರಕೃತಿಯ ವರಿಸ್ಥಿತಿಯಿಂದ ಆವರ ಧ್ಯೇಯಗಳು ನಿರ್ಧಾರವಾಗುತ್ತದೆಂದು ಹೇಳುತ್ತಾನೆ ವಾಸ್ತವಿಕ ಪ್ರಪಂಚದ ಕಾರ್ಯಗಳಿಗೆ ಧ್ಯೇಯವೇ ಮೂಲಾಧಾರ ಅಂದರೆ ಸೋಷಿಯಲಿಸಂ ತತ್ವಕ್ಕೆ ನೈಜವಾದ ಪ್ರಕೃತಿಯ ವರಿಸ್ಥಿತಿಯೇ ಒಂದು ಆಧಾರವೆಂದು ಅರಿಯಬೇಕು ಆರ್ಥಿಕ ಶಾಸ್ತ್ರದ ಆಧಾರವೂ ಕೂಡ ಈ ಆಧಾರವನ್ನೇ ಅನುಸರಿಸಿದೆ ವರಿಸ್ಥಿತಿ ಪ್ರಭಾವದಿಂದುಂಟಾದ ಅನುಕೂಲತೆಗಳನ್ನು ಕೆಲವು ವ್ಯಕ್ತಿಗಳು ತಮಗಿದ್ದ ಅಧಿಕ ಶಕ್ತಿಯಿಂದಲೋ ಅಥವಾ ಜನಸಾಮಾನ್ಯದ ಔದಾಸೀನ್ಯದಿಂದಲೊ ಸ್ವಾರ್ಥಾರ್ಪಣ ಮಾಡಿದಿಟ್ಟರು ಈ ಕೇವಲ ಸ್ವಲ್ಪ ಜನ ಸೌಖ್ಯಕ್ಕೆ ಬಂಡವಾಳವು ಅಡಿನೂಡಿತು ಆದ್ದರಿಂದ ಬಂಡವಾಳಗಾರರನ್ನು ವಿಶ್ವದಿಂದ ನಿರ್ಮೂಲಮಾಡುವುದೇ ಸೋಷಿಯಲಿಸಂನ ಒಂದು ಮುಖ್ಯ ಅಂಗ ಆದರೆ, ಈ ತತ್ವವು ಕೇವಲ ವಿನಾಶದ ಧ್ಯೇಯವನ್ನು ಅನುಸರಿಸುತ್ತದೆಂದು ಭಾವಿಸಬಾರದು, ಸೃಷ್ಟಿಯು ಹಿಂದೆ ವಿನಾಶವಿರಲೇ ಇರಬೇಕು ವಿನಾಶದ ಭವಿಷ್ಯತ್ತಿನಲ್ಲಿ ಸೃಷ್ಟಿಯು ಇದ್ದೇ ಇರುತ್ತದೆ ಉದಾಹರಣೆಗಾಗಿ ರಷ್ಯ ಮತ್ತು ಜರ್ಮನಿ ದೇಶಗಳನ್ನು ನೋಡಿ ಜರ್ಮನಿಯು ಮಹಾಯುದ್ಧವಾದ ಮೇಲೆ ನಾಶದ ವರಮಾವಧಿಯನ್ನು ಮುಟ್ಟುವರೆಗಿತ್ತು ಆದರೆ, ಆ ದೇಶದ ರಾಜನೀತಿಜ್ಞರ ನಿಪುಣತೆಯಿಂದಲೂ ಮತ್ತು ಪ್ರಜಾಸಹಕಾರದಿಂದಲೂ ಹತ್ತು ವರ್ಷಗಳಲ್ಲಿ ಪತಿತ ರಾಷ್ಟ್ರವು ಸರ್ವಾಂಗ ಪ್ರೌಢತ್ವದಿಂದ ತುಂಬಿತು. ಆ ದೇಶದ ವ್ಯಾಪಾರವು ಹೆಚ್ಚಿತು. ಜನರು ಸಂತುಷ್ಟರಾಗುತ್ತಾ ಬಂದರು ಆ ದೇಶದ ಆರ್ಥಿಕ ವರಿಸ್ಥಿತಿಯು ಇತರ ದೇಶಗಳಲ್ಲಿ ವಿಶ್ವಾಸದ ಬೀಜಗಳನ್ನು ಹೂಡಿತು ಮಹಾಯುದ್ಧದ ಅನಾಹುತಗಳನ್ನು ಮರೆಯುತ್ತಾ ಬಂದರು.

ರಷ್ಯದಲ್ಲಿಯೂ ಕೂಡ ಇದೇ ರೀತಿಯ ವರಿವರ್ತನವಾಯಿತು ಆದ್ದರಿಂದ ಬಂಡವಾಳದ ದಬ್ಬಾಳಿಕೆಯನ್ನು ನಾಶಮಾಡಬೇಕೆಂದರೆ ಭಯವಡಬಾರದು ಮನುಷ್ಯ ಜೀವನಕ್ಕೆ ಯಾವ ಯಾವ ವಶಾರ್ಥಗಳು ಆತ್ಯಾವಶ್ಯಕವೋ ಅಂತಹ ಕಾರ್ಖಾನೆಗಳನ್ನು ಮತ್ತು ಅವುಗಳನ್ನು ಸೃಷ್ಟಿ ಮಾಡತಕ್ಕ ಸಲಕರಣಗಳನ್ನು, ಸರ್ವಜನಿಕ ಸಂಸ್ಥೆಗಳ ಅಧೀನದಲ್ಲಿಡಬೇಕು. ಸಲಕರಣಗಳನ್ನು ಅಧೀನದಲ್ಲಿಟ್ಟುಕೊಂಡರೆ ಸರಕುಗಳನ್ನು ಅವಶ್ಯಕತೆಯ ಮೇರೆಯನ್ನು ಮೀರಿಯನ್ನು ವಿಂರಿ ಸೃಷ್ಟಿಸುವುದಕ್ಕೆ ಅಸಾಧ್ಯವಾಗುವುದು. ಸ್ಪರ್ಧೆಯ ಜೀವನವು ಹೋಗಿ,ಸಹಕಾರ ಜೀವನವು ಉದ್ಭವಿಸುವುದು. ಬರೀ ಸ್ವಾರ್ಥ ಸಂಪತ್ತಿಗೆ ಮರ್ಯಾದೆ ತಪ್ಪಿ, ಯೋಗ್ಯತೆಗೆ ಮರ್ಯಾದೆ ಹೊರಳುವುದು. ವರದೇಶದ ಸಾಂಸ್ಕೃತಿಕ ಮತ್ತು ಆರ್ಥಿಕ ದಾಸ್ಯವು ಅಳಿಯುವುದು ಆತ್ಮಗೌರವವು ಹೆಚ್ಚುವುದು ದೇಶವು ಸುಭಿಕ್ಷವಾಗುವುದು; ಮತ್ತು ಮೌಲ್ಯವಾಗುವುದು

ಆದರೆ ಈ ಸೌಖ್ಯ ದೊರೆಯಬೇಕಾದರೆ, ಸಾರ್ವಜನಿಕ ಸಂಸ್ಥೆಗಳು ಸಾಂಗವಾಗಿ ಕಾರ್ಯನಿರ್ವಾಹ ಮಾಡಬೇಕಲ್ಲವೆ? ಆ ಸಂಸ್ಥೆಗೆ ಸದಸ್ಯರು ಉಚ್ಚ ಧ್ಯೇಯಗಳಿಂದ ಸ್ಫೂರ್ತಿವಂತರಾಗಬೇಕಲ್ಲವೆ. ಈಗಿರುವ ಸಾರ್ವಜನಿಕ ಸಂಸ್ಥೆಗಳಲ್ಲಿ ಈ ಯಾವ ಗುಣಗಳೂ ಕಾಣಬರುವುದಿಲ್ಲ ಮುಂದೆ ಆ ಸದ್ಗುಣಗಳು ಕಂಡುಬರುತ್ತವೆ ಎಂಬ ಆಶೆ ಎಲ್ಲಿದೆ ಎಂದು ಪ್ರಶ್ನೆಮಾಡಬಹುದು ಸಾರ್ವಜನಿಕ ಸಂಸ್ಥೆಗಳು ಈಗ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂಬುದೇನೋ ಸತ್ಯ. ಆದರೆ ಅದಕ್ಕೆ ಕಾರಣವೇನೆಂದು ವಿಚಿರ್ಸಿ ಮಾಡಿದರೆ ಕಾರ್ಯ ಅಸಮರ್ಪಕತೆಯು, ಸಂಸ್ಥೆಗಳಲ್ಲಿರುವ ಅಂತರ್ಯ ಕುಂದುಗಳಿಂದಲ್ಲ, ಆದರೆ, ಬಂಡವಾಳ ತತ್ವ ಪ್ರಚಾರದಿಂದಾದ ಸ್ವಾರ್ಥ ಶಕ್ತಿಯ ವಿರ್ಚಸ್ಸು ಆ ಸಂಸ್ಥೆಗಳ ಮೇಲೆ ಬಿದ್ದಿದೆ ಸಂಸ್ಥೆಗಳು ವ್ಯಕ್ತಿಗಳ ಮನೋಭಾವನೆಗಳನ್ನು ಕಾರ್ಯರಂಗಕ್ಕಿಳಿಸುವುದಕ್ಕೆ ಒಂದು ಹಾದಿಯೇ ಹೊರತು ವ್ಯಕ್ತಿಗಳ ಅಂತರ್ಯವನ್ನು ಶುದ್ಧಿಮಾಡಲಾರದು ಉಚ್ಚ ಸಂಸ್ಥೆಗಳಿಗೆ ನಾವು ನನ್ನಲ್ಲಿ ಬೆಳೆಯುವುದಕ್ಕೆ ಅವಕಾಶವಿತ್ತು ಅವುಗಳಲ್ಲಿ ಕಾರ್ಯಭಾಗ ನಡೆಸುವವರನ್ನು ಅಂತಹ ಉಚ್ಚ ಧ್ಯೇಯಗಳಿಂದ ಸ್ಫೂರ್ತಿವಂತರನ್ನಾಗಿ ಮಾಡಿದ್ದರೆ ಅದು ಸಂಸ್ಥೆಗಳ ತಪ್ಪಲ್ಲ, ವ್ಯಕ್ತಿಗಳ ತಪ್ಪು ಪ್ರಜಾ ಪ್ರಭುತ್ವದಲ್ಲಿ ಕುಂದಿದೆಯೆಂದು ಹೇಳಿವರೆಲು, ಅದಕ್ಕೆ ಸಮಾನವಾದ ಇನ್ನಿಂದು ವ್ಯವಸ್ಥೆಯನ್ನು ಸೂಚಿಸಬೇಕು ಹದಿನೇಳು ಶತಮಾನಗಳೂ ಚಕ್ರಾಧಿವತ್ಯಗಳಿಗೂ ಮತ್ತು ರಾಜ ಪ್ರಭುತ್ವಗಳಿಗೂ ಅವಕಾಶವಿತ್ತಿದ್ದಕ್ಕೆ ಮಾನವ ವ್ಯಕ್ತಿತ್ವವನ್ನು ಅಶನವಸನಗಳಲ್ಲಿದ ಪಾಮರನನ್ನಾಗಿ ಮಾಡಿತು ಅಧುನಿಕ ಪ್ರಜಾಪ್ರಭುತ್ವದ ತತ್ವವು ಹುಟ್ಟಿ ಇನ್ನೂ ಎರಡು ಶತಮಾನಗಳಾಗಿಲ್ಲ ಅದು ಸಮರ್ಪಕವಾಗಿ ಕಾರ್ಯಮಾಡುವುದಕ್ಕೆ ತಕ್ಕ ವರಿಸ್ಥಿತಿ ಮತ್ತು ಸಲಕರಣಗಳೂ ಉತ್ಪನ್ನವಾಗಿಲ್ಲ ಆದ್ದರಿಂದ ಆದರ ಪ್ರಯೋಜಕ, ಅಪ್ರಯೋಜಕ ವಿಷಯಗಳಲ್ಲಿ ಯಾರೂ ಅಭಿಪ್ರಾಯ ಕೊಡಲಾರರು ಆದರೂ ಪ್ರಜಾ ಪ್ರಭುತ್ವವು ರಾಜನೀತಿಜ್ಞರು ಕಲ್ಪಿಸಿರುವ ಸಂಸ್ಥೆಗಳಲ್ಲಿ ಅತ್ಯುತ್ತಮವಾದದ್ದು ಪ್ರಭುತ್ವ ಸಂಸ್ಥೆಗಳಿಗೆ ಪ್ರಜಾ ಪ್ರಭುತ್ವವು ತಿರೋಮನೆಯಂತಿದೆ ಪ್ರಜಾ ಪ್ರಭುತ್ವವು ಸಮಾಜ ಸಹಕಾರ ಜೀವನದ ದೀವಟಿಗೆ

ಆದುದರಿಂದ ಸೋಷಿಯಲಿಸಂ ತತ್ವವನ್ನು ಕಾರ್ಯರಂಗಕ್ಕಿಳಿಸುವುದು ಅಸಾಧ್ಯವೆಂದು ಹೇಳಲಾಗದು ಅಸಾಧ್ಯವೆಂದು ಉದ್ಗಾರ ತೆಗೆದು ವರಿತ್ಯಾಗ ಮಾಡಿದರೆ, ಮಾನವ ಸಂಸ್ಕೃತಿ ಪ್ರಸರಣೆಗೆ ತಿಲೋದಕ ಬಿಟ್ಟಂತಾಗುತ್ತದೆ. ನಮ್ಮ ದೇಶದ ದಾರಿದ್ರ್ಯದ ಮತ್ತು ಅಸಂತುಷ್ಟಿಯ ರೋಗಕ್ಕೆ ಸೋಷಿಯಲಿಸಂ ತತ್ವವೇ ಪರಮೌಷಧ

ಸೋಷಿಯಲಿಸಂ ತತ್ವವನ್ನು ಅನುಸರಿಸುವ ಪ್ರಭುತ್ವದಲ್ಲಿ ಮತಗಳ ಸ್ಥಾನವೇನು, ಮಹಾಧಿಪತಿಗಳ ಗತಿಯೇನು ಎಂಬುದನ್ನು ಯೋಚಿಸುವ ಈ ತತ್ವವು ನೈಜ ಧರ್ಮಕ್ಕೂ ಮತ್ತು ಮತಗಳಿಗೂ ವಿರುದ್ಧವೆಂದು ತಿಳಿಯುವುದು ಶುದ್ಧ ಅಜ್ಞಾನ ಈ ತತ್ವವು ಮತಗಳ ತತ್ವಗಳನ್ನು ವಿರೋಧಿಸುವುದಿಲ್ಲ ಅನೇಕ ಮತಗಳ ಆಧಾರವಾಗಿರುವ ಧರ್ಮ ಗುಣಗಳನ್ನು ಅನುಮೋದಿಸುತ್ತದೆ ಆದರೆ ಮತಗಳ ಹೆಸರಿನಲ್ಲಿ ಸಂಸ್ಥೆಗಳನ್ನು ಕಟ್ಟಿ ಧನಾರ್ಜನೆ ಮಾಡುವ ಪ್ರಯತ್ನಗಳಿಗೆ ಸ್ಥಳ ದೊರೆಯಲಾರದು ಏಕೆಂದರೆ, ಪ್ರಜಾ ಪ್ರಭುತ್ವದಲ್ಲಿ, ಪ್ರಜೆಗಳೇ ಅರ್ಥಾತ್ ಆವರ ಪ್ರತಿನಿಧಿಗಳೇ ಸರ್ವಾಧಿಕಾರಿಗಳು ಮಹಾಧಿಪತಿಗಳು ಪ್ರಜಾಧೀನವಾಗುವರು ಹಾಗೂ, ಮಹಾಧಿಪತಿಗಳು ಮಹಾಧಿಪತಿಗಳೆಂದು ಹೇಳಲಿಕ್ಕಾಗುವುದಿಲ್ಲ **ಮತಗಳು ಅಳಿದರೂ ಮತಗಳು ಅಳಿಯುವುದಿಲ್ಲ.** ಆದುದರಿಂದ ಸೋಷಿಯಲಿಸಂ ತತ್ವವನ್ನು ಅನುಸರಿಸುವ ಪ್ರಭುತ್ವದಲ್ಲಿ ಧರ್ಮಾಭಿವೃದ್ಧಿಗೆ ಅವಕಾಶ ಕೊಡುವ ಯಾವ ಸಂಸ್ಥೆಗೂ ಸ್ಥಾನವಿಲ್ಲ ಆದರೆ ಧರ್ಮ ಪ್ರಚಾರ ಮಾಡುವುದಕ್ಕೆ ಅಡ್ಡಿ ಯಾವುದೂ ಕಂಡು ಬರುವುದಿಲ್ಲ.

ಈಗ ನಮಗೆ ಬೇಕಾದ ಖಾದಿಯನ್ನು ಒದಗಿಸಿಕೊಳ್ಳುವುದು ಏನೂ ವ್ಯಯಸಾಧ್ಯವಾಗಿಲ್ಲ.
ಸತ್ಯ ನಮಗೆ ಬೇಕಾಗಿರುವವರು ನೂಲುವವರಾಗಿ ಕ್ಷಣ ಕೆಲಸ ಮಾಡುವವರು ಬೇಕಾಗಿದ್ದಾರೆ.

ನಿಜ ಸ್ವದೇಶಿಯೆಂದರೆ ಖಾದಿಯಾಗಿದೆ; ನಿಜ ಬಹಿಷ್ಕಾರವೆಂದರೆ ವಿದೇಶಿ ವಸ್ತ್ರ ಬಹಿಷ್ಕಾರವಾಗಿದೆ.
ಖಾದಿಯೆಂದರೆ ತಳಿ ಮತ್ತು ಶರಕ್ಕೆಂದರ್ಥವಾಗುತ್ತದೆ; ಅದು ಹತ್ತಿಗಳ ಜೀವನಾಧಾರವಾಗಿದೆ; ಅದು ಅವರ ಅಕ್ಷಯವಾದ ಧಾನ್ಯಾಗಾರವಾಗಿದೆ.

ಒಂದೇ ಒಂದು ವಸ್ತುವಿನ ಬಹಿಷ್ಕಾರವೆ ಸ್ವಾತಂತ್ರ್ಯವಾಗಿದೆ; ಅದು ವಿದೇಶೀ ವಸ್ತ್ರಬಹಿಷ್ಕಾರವಾಗಿದೆ; ಅದು ಖಾದಿಯಿಂದ ಮಾತ್ರವೇ ಸಾಧ್ಯವಿದೆ.

55 ವರುಷಗಳ ಅನುಭವಸಿದ್ಧ ಔಷಧಗಳು.

ಧಾತುಪುಷ್ಟಿ ಲೇಹ. ಬ್ಯಾಟ್ಕನದ ದುರಭ್ಯಾಸಗಳ ವರಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ಮೇಹ ವಿಕೃತವಾಧೆ, ರಕ್ತವಿತ್ತ, ಒಳಜ್ವರ, ಮೂಲಬದ್ಧತೆ, ಕೈಕಾಲು ಬಡ್ಡುವುದು ಮೊದಲಾದುವುಗಳು. ಹೊಗೆ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿ ತೊಳ್ಳುವುದು. ಡಬ್ಬಿ 1ಕ್ಕೆ ರೂ. 2-8-0. 3ಕ್ಕೆ 7-0-0

೨. **ಆರೋಗ್ಯಾಮೃತ ಮತ್ತು ದಾತ್ರಿ.** ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಡಿಯಾಗುವುದು, ಹೊಟ್ಟನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮೂಲಬದ್ಧತೆ ಚರಜ್ವರ, ರಕ್ತವಾತ, ಕೈಕಾಲು ಸೆಳೆತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣವಡಿಸುವುದು. ಬಾಟ್ಲಿ 1ರ 1-2-0, 1 ಡಬ್ಬಿ ಮಾತ್ರೆಗೆ 1-2-0, 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗೂ 4-4-0.

೩. **ಕಂಪನಾಸವ ಮತ್ತು ಮಾತ್ರೆಗಳು.** ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತುಹೋಗುವುದು, ಮೂತ್ರವು ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳನ್ನು, ಬಾಯಾರಿಕೆ, ಮಲಬದ್ಧತೆ, ಸ್ವಪ್ನಾವಸ್ಥೆ ಇವುಗಳ ಮೇಲೆ ಸಿದ್ಧೌಷಧ. ಬಾಟ್ಲಿ 1ರ 1-2-0, 1 ಡಬ್ಬಿ ಮಾತ್ರೆಗೆ 1-6-0, 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗೂ 4-12-0.

೪. **ಸಾರಿವಾದ್ಯಸವ.** ಕೆಟ್ಟುಹೋದ ರಕ್ತವನ್ನು ಕೋಧಿಸಿ, ಮೈಯಲ್ಲಿ ಇರಬಹುದಾದ ಖಜ್ಜಿ, ದ್ರವ್ಯ, ಗಂಟು, ಕಲೆ ಇತ್ಯಾದಿಗಳನ್ನು ಗುಣಮಾಡಿ ದೇಹಕ್ಕೆ ಆರೋಗ್ಯವನ್ನುಂಟುಮಾಡುತ್ತದೆ. ಇದು ಉಪದಂಶ (ಫರಂಗಿ) ರೋಗಕ್ಕೂ ಬಹಳ ಉತ್ತಮ. ಬೆಲೆ ಬಾಟ್ಲಿ 1ಕ್ಕೆ 1-2-0, 3ಕ್ಕೆ 3-4-0.

೫. (ಕಸ್ತೂರಿ ಮಿಶ್ರಣ) **ದಶಮೂಲಾರಿಷ್ಟ.** ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆ ಕುಂಚಿಸಿ ಪ್ರಸವದ ಅಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆದುಕು ರಕ್ತವು ನಿಲ್ಲದಂತೆ ಮಾಡಿ ಗರ್ಭಕೋಶದ ವೇದನೆಗಳನ್ನು ಸಮಾಧಾನ ಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿಹೊಂದುವರು. ಮಗುವಿನ ಆರೋಗ್ಯವು ನಿರಾತಂಕವಾಗುವುದು. ಪ್ರಸವಿಸಿದ ತರುವಾಯ 8 ದಿನಗಳ ಮಾತ್ರೆಗೆ ಆ. ತಿ. 4ನೇ ದಿನಸಂದಿಂದ ದಶಮೂಲ ಬೆಲೆ ಬಾಟ್ಲಿ 1ರ 1-8-0, 2 ಬಾಟ್ಲಿಗಳಿಗೆ ರೂ. 3.

೬. **ಮಲೇರಿಯಾ ನಿವಾರಿಣಿ.** ಇದರ ಸೇವನೆಯಿಂದ ಮಲೇರಿಯಾ, ೧ ದಿನ ಪೂ ೨ ದಿನ ಏಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಛಳಿಜ್ವರ, ಜ್ವರ ಗಡ್ಡೆ ಮೊಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ. ಬಾಟ್ಲಿ 1ಕ್ಕೆ ರೂ. 1-8-0. 2 ಬಾಟ್ಲಿಗಳಿಗೆ ಕ್ರಯ ರೂ. 2-12-0.

೭. **ಬಾಲಗ್ರಹ ಗುಟಿಕೆ.** ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ, ಇವುಗಳ ಮೇಲೆ ದಿವ್ಯ ಔಷಧಿ. ಬಾಟ್ಲಿ 1ರ ಕ್ರಯ 0-10-0. 3ಕ್ಕೆ 1-12-0.

೮. **ಇಚ್ಛಾಭೇದಿ ಗುಟಿಕೆ.** ಆಘಾತವನ್ನುಂಟುಮಾಡದ ಸುಖವಿರೇಚಕ. ಬಾಟ್ಲಿ 1ರ 0-12-0. 3ಕ್ಕೆ 2-2-0.

೯. **ಮಹಾಜ್ವರಾಂಕುಶ.** ಇನ್ಫ್ಲೂಯೆಂಜಾ, ನಿವೋನಿಯಾ, ಶೀತಜ್ವರ ಇವುಗಳ ಮೇಲೆ ದಿವ್ಯ ಔಷಧಿ. ಬಾಟ್ಲಿ 1ಕ್ಕೆ 10 ಆ. 3ಕ್ಕೆ 1-12-0.

೧೦. **ಪಾಷಕುಠಾರ ಗುಟಿಕೆ.** ಎಲ್ಲಾ ವಿಧದ ಕಫ, ಕೆಮ್ಮು, ಪಾಶಕ್ಕಾಸಕ್ಕೆ. ಬಾಟ್ಲಿ 1ರ 10 ಆ. 3ಕ್ಕೆ 1-12-0.

೧೧. **ಸೈಂಜವ ವಟಿ.** ಜ್ವರ ನಿಂತು ಜ್ವರಗಡ್ಡೆ ಕರಗಿ ಮಲವಿಸರ್ಜನೆ ಆಗುವುದು. ಬಾಟ್ಲಿ 1ರ 1-0-0. 3ಕ್ಕೆ 2-12-0.

ಕೆಟಲಾಗನ್ನು ನೋಡಿರಿ. **ಎಮ್. ಗಣಪಯ್ಯ ಎಂಡ್ ಸನ್ಸ್,** ಆಯುರ್ವೇದಿಕ್, ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮಲ್ಲೇ ಸಂಸ್ಥೆಗೆ ಉತ್ತೇಜನ ಕೊಡಿ!

ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ—:ಮಂಗಳೂರು.

ಮಿತ ವ್ಯಯವೂ, ಸುವ್ಯವಸ್ಥಿತ ಆಡಳಿತವೂ ಉಳ್ಳ ದೇಶೀಯ ವಿಮಾ ಸಂಘ.

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರಗಳಲ್ಲಿ ಒದಗಿಸಿಕೊಡುವ ಈ ಕಂಪೆನಿಗೆ ಮುಕ್ತಹಸ್ತರಾಗಿ ಸಹಕರಿಸಿರಿ!!

ಪ್ರತಿಯೊಂದು ತಾಲೂಕಿನಲ್ಲೂ, ಜಿಲ್ಲೆಯಲ್ಲಿ ಮತ್ತು ನಗರದಲ್ಲಿ ಪರಿಚಕರೂ ದಕ್ಷರೂ ಆದ ಯೋಗ್ಯ ಗೃಹಸ್ಥರಿಂದ ವಿಜ್ಞಾಪಿಯ ಶಾಖೆ ಅರ್ಜಿಗಳು ಅಪೇಕ್ಷಿಸಲ್ಪಟ್ಟಿವೆ. ಮನಸ್ಸಿಟ್ಟು ಕೆಲಸಮಾಡುವವರಿಗೆ ಧಾರಾಳವಾದ ಕಮಿಷನ್ ಇದೆ. ಯಾವತ್ತೂ ಮಾಹಿತಿಗೂ, ವಿವರದ ಪತ್ರಗಳನ್ನು ಬರೆಯಿರಿ.

ಸಂಸ್ಕೃತದ ಒಂದು ಹೊಸ ಗದ್ಯ ಕಾವ್ಯ

ಲೇಖಕರು:—ಎಸ್. ಎಸ್. ಹೈನ್, ನೆಲ್ಲಿಕಾರವೇಟಿ.

ಸಂಸ್ಕೃತ ಸಾಹಿತ್ಯವು ಒಂದು ವಿಶಾಲ ವಟವೃಕ್ಷಕ್ಕೆ ಸಮಾನವಾಗಿದೆ. ಇದಕ್ಕೆ ವೇದ, ಸಂಹಿತೆ, ಬ್ರಾಹ್ಮಣ, ಆರಣ್ಯಕ, ಪ್ರಾತಿಶಾಖ್ಯ, ಉಪನಿಷತ್, ವೇದಾಂಗ, ಕಾವ್ಯ, ನಾಟಕ, ಕಥೆ, ಆಖ್ಯಾಯಿಕೆ, ಚಂಪೂ, ಅಲಂಕಾರಶಾಸ್ತ್ರ, ದರ್ಶನಶಾಸ್ತ್ರ, ನೀತಿ-ಅರ್ಥಶಾಸ್ತ್ರ, ಸ್ಮೃತಿಶಾಸ್ತ್ರ, ಕಾಮಶಾಸ್ತ್ರ, ಪುರಾಣ, ಇತಿಹಾಸ ಇತ್ಯಾದಿ ಅನೇಕ ಶಾಖೆಗಳಿವೆ. ಇವುಗಳ ಮೇಲೆ ಅನೇಕ ದೊಡ್ಡ ದೊಡ್ಡ ಸ್ವತಂತ್ರ ಗ್ರಂಥಗಳು ಬರೆಯಲ್ಪಟ್ಟಿವೆ.

ಇತಿಹಾಸ ದೃಷ್ಟಿಯಿಂದ ನೋಡಿದರೆ, ಬೇರೆ ಜಾತಿಗಳ ಸಾಹಿತ್ಯಕ್ಕಿಂತ ಸಂಸ್ಕೃತ ಸಾಹಿತ್ಯದ ಅಸ್ತಿತ್ವ ಕಾಲವು ಬಹಳ ದೀರ್ಘವಾಗಿದೆ ಪಾಶ್ಚಿಮಾತ್ಯ ವಿದ್ವಾಂಸರ ಅಭಿಪ್ರಾಯವನ್ನು ಒಪ್ಪಿಕೊಂಡರೂ, ಸಂಸ್ಕೃತ ಸಾಹಿತ್ಯದ ಅಸ್ತಿತ್ವ ಕಾಲವು ಕ್ರಿಸ್ತ ಪೂರ್ವ ಎರಡು ಸಾವಿರ ವರ್ಷಗಳಿಂದ ಕ್ರಿಸ್ತ ಹದಿನೇಳನೆಯ ಶತಮಾನದ ವರೆಗೆಂದು ಗೊತ್ತಾಗಿದೆ ಜಗನ್ನಾಥ ಪಂಡಿತನು ಸಂಸ್ಕೃತದ ಕೊನೆಯ ಸುಪ್ರಸಿದ್ಧ ಲೇಖಕನೆಂದು ತಿಳಿಯಲ್ಪಟ್ಟಿದೆ ಈ ಗಣನೆಯಿಂದಲೂ ಸಂಸ್ಕೃತ ಸಾಹಿತ್ಯವು ಸುಮಾರು 3700 ವರ್ಷಗಳ ವರೆಗೆ ಜಾಗ್ರತಾವಸ್ಥೆಯಲ್ಲಿದ್ದಿತೆಂದು ತಿಳಿದುಬರುತ್ತದೆ ಪ್ರಾಚೀನ ಯೂನಾನಿ ಸಾಹಿತ್ಯವು ಕ್ರಿಸ್ತ ಪೂರ್ವ 700 ವರ್ಷಗಳಿಂದ ಪ್ರಾರಂಭವಾಗಿ ಕ್ರಿಸ್ತ ಒಂದನೇ ಶತಮಾನದಲ್ಲಿ ಸಮಾಪ್ತವಾಗುತ್ತದೆ ಯೂನಾನಿ ಸಾಹಿತ್ಯದ ಅಸ್ತಿತ್ವ ಕಾಲವಾದರೂ ಸುಮಾರು 800 ವರ್ಷಗಳೇ ಆಗಿವೆ ಲೆಟಿನ್ ಸಾಹಿತ್ಯವು ಕ್ರಿಸ್ತಪೂರ್ವ 2ನೇ ಶತಮಾನದಲ್ಲಿ ಪ್ರಾರಂಭವಾಗಿ ಕ್ರಿಸ್ತ 6ನೇ ಶತಮಾನದಲ್ಲಿ ಸಮಾಪ್ತಿಯಾಗುತ್ತದೆ ಇಂಗ್ಲಿಷ್, ಫ್ರಾಸ್ಸು, ಜರ್ಮನಿ, ಇಟಾಲಿ, ರುಷ್ಯ, ಸ್ಕೆಂಡಿನೆವಿಯ, ಜಪಾನಿ ಸಾಹಿತ್ಯಗಳಲ್ಲಿ ಯಾವುದೊಂದರ ಅಸ್ತಿತ್ವಕಾಲವು 800 ವರ್ಷಗಳಿಗಿಂತ ಹೆಚ್ಚಿಗೆಯಾಗಿಲ್ಲ ಅರಬಿ ಮತ್ತು ಫಾರಸಿ ಸಾಹಿತ್ಯಗಳ ಅಸ್ತಿತ್ವಕಾಲವು 8ನೇ ಶತಮಾನದಿಂದ ಪ್ರಾರಂಭವಾಗುತ್ತದೆ ಯಹೂದ್ಯರ ಹಾಗೂ ಫಾರಸಿಗಳ ಸಾಹಿತ್ಯವು ಕ್ರಿಸ್ತ ಪೂರ್ವ 800 ವರ್ಷಗಳಲ್ಲಿ ಪ್ರಾರಂಭವಾಗುವುದಾದರೂ ಅವು ಉನ್ನತ ಸಾಹಿತ್ಯವಲ್ಲ ಚೀನಿಯರ ಸಾಹಿತ್ಯದಲ್ಲಿ ಕ್ರಿಸ್ತ ಪೂರ್ವ 10ನೇ ಶತಮಾನದಲ್ಲಿ ಬರೆಯಲ್ಪಟ್ಟ 'ಶೀಕಿಂಗ್' ಎಂಬ ಹಳೆ ಗ್ರಂಥವನ್ನು ಕ್ರಿಸ್ತಪೂರ್ವ 3ನೆಯ ಶತಮಾನದಲ್ಲಿ ಮೊದಲನೆಯ ಅವ್ಯಕ್ತಿಯಾಗಿ ಕನ್ಫ್ಯೂಶಿಯಸ್ ಪ್ರಕಟ ಮಾಡಿದ್ದನು ಅಂತು ಜಗತ್ತಿನ ಸಾಹಿತ್ಯ ಪರಿಶೋಧನೆಯಲ್ಲಿ ಸಂಸ್ಕೃತ ಸಾಹಿತ್ಯದ ಅಸ್ತಿತ್ವಕಾಲವು ಇತರ ಸಾಹಿತ್ಯಗಳಿಂದ ಎಷ್ಟೋ ಪ್ರಾಚೀನವೆಂದು ಗೊತ್ತಾಗುತ್ತದೆ

ಸಂಸ್ಕೃತ ಸಾಹಿತ್ಯದ ವಿಸ್ತಾರ ಹಾಗೂ ಅಸ್ತಿತ್ವ ಕಾಲವೇ ಅಧಿಕವಲ್ಲ, ಮತ್ತೇನೆಂದರೆ, ಇದರ ವಿಷಯ ಬಾಹುಲ್ಯ, ವಿಚಾರ ಗಾಂಭೀರ್ಯ, ಶ್ರೀಮತ್ತತೆಯಾದರೂ ಅದ್ಭುತವಾಗಿದೆ ಏಷ್ಯದ ಬಹು ದೊಡ್ಡ ಭಾಗವು ಭಾರತೀಯ ವಿಚಾರಗಳಿಂದ ಕೂಡಿದೆ ಇನ್ನು ಸಂಸ್ಕೃತ ಸಾಹಿತ್ಯವು ಯುರೋಪಿನ ಮೇಲೆ ಹೆಚ್ಚು ಪ್ರಭಾವವನ್ನುಂಟು ಮಾಡಿದೆ ಕಾವ್ಯದ ಲಕ್ಷಣ, ಗುಣ-ದೋಷ, ರಸ, ಭಾವ ಮೊದಲಾದ ವಿಷಯಗಳಲ್ಲಿ ಸಂಸ್ಕೃತ-ಅಲಂಕಾರ-ಶಾಸ್ತ್ರದಲ್ಲಿ ವಿಶದವಾಗಿ ವ್ಯಾಪ್ತಾನುಸಿರುವಂತೆ, ಅವುಗಳಿಗೆ ಸಮಾನವಾದ ಗ್ರಂಥವು ಈಗಲೂ ಅಧುನಿಕ ಯುರೋಪಿನ ಸಾಹಿತ್ಯದಲ್ಲಿ ಸಿಕ್ಕುವುದಿಲ್ಲ. ವಿಸ್ತಾರದ ದೃಷ್ಟಿಯಿಂದಾಗಲೀ, ಇತಿಹಾಸ ದೃಷ್ಟಿಯಿಂದಾಗಲೀ, ಸಂಸಾರದ ಸಾಹಿತ್ಯದಲ್ಲಿ ಸಂಸ್ಕೃತ ಸಾಹಿತ್ಯವೇ ಶ್ರೇಷ್ಠವಾಗಿದೆ. ಆದುದರಿಂದ ಇದನ್ನು ರಕ್ಷಣೆ ಮಾಡುವುದು ಭಾರತಕ್ಕೆ ಮಾತ್ರ ಲಾಭವಲ್ಲ, ಸಮಗ್ರ ಸಂಸಾರಕ್ಕೆ ಲಾಭದಾಯಕವಾಗಿದೆ. ಸಂಸ್ಕೃತ ಸಾಹಿತ್ಯದ ಅನೇಕ ಗ್ರಂಥ ರತ್ನಗಳು ನಷ್ಟವಾಗಿ ಹೋಗಿವೆ. ಸಾವಿರಾರು ಗ್ರಂಥಗಳು ಇಂದಿಗೂ ಕ್ರಿಮಿಕೀಟಗಳ ಪಾಲಾಗುತ್ತಿವೆ. ಇನ್ನೆಷ್ಟೊ ಕಡೆಗಳಲ್ಲಿ ಓಲೆಯ ಗ್ರಂಥಗಳು—ಶೈಬರಹದ ವುಸ್ತಕಗಳು ಓದುನವರಿಲ್ಲದೆ ಮೂಲೆ ಪಾಲಾಗಿವೆ. ಆದುದರಿಂದ ಯಾವ ಭಾಷೆಯ ಸಾಹಿತ್ಯವೇ ಆಗಿರಲಿ, ಅದನ್ನು ರಕ್ಷಣೆ ಮಾಡುವುದು ಪ್ರತಿಯೊಬ್ಬ ಭಾರತೀಯನ ಮೊದಲನೆಯ ಕರ್ತವ್ಯವಾಗಿದೆ. ಅಂತಹ ಗ್ರಂಥಗಳಲ್ಲಿ ಕರ್ನಾಟಕ ಇತಿಹಾಸಕ್ಕೆ ಸಂಬಂಧಪಟ್ಟು, ಅದರಲ್ಲಿಯೂ ಕರ್ನಾಟಕದ ಮಹಾರಾಜನಿಂದ ರಚಿಸಲ್ಪಟ್ಟಿರುವ ಒಂದು ಅಪೂರ್ವನಾದ ಗದ್ಯ ಕಾವ್ಯದ ಪರಿಚಯವನ್ನು ಬರೆಯುವೆನು.

ಈ ಕಾವ್ಯದ ಹೆಸರು 'ವರದಾಂಬಿಕಾ ಪರಿಣಯ' ಅಥವಾ 'ಅಂಬಿಕಾ ಪರಿಣಯ'ವೆಂದು. ಲೇಖಕನು ಉಚ್ಚಕೋಟಿಯ ಶಿಕ್ಷಣವನ್ನು ಪಡೆದ ವಿದುಷಿಯಾಗಿದ್ದಳು. ಇವಳು ವೇದ, ವೇದಾಂಗ, ವ್ಯಾಕರಣ, ದರ್ಶನ, ಛಂದಸ್ಸು, ಅಲಂಕಾರ, ಕಾವ್ಯ, ನಾಟಕ ಹಾಗೂ ಸಂಗೀತದಲ್ಲಿ ನಿಪುಣೆಯಾಗಿದ್ದಳು ಇವಳು ಅನೇಕ ಭಾಷೆಗಳನ್ನೂ, ಲಿಪಿಗಳನ್ನೂ ತಿಳಿದಿದ್ದಳು. ಇವಳಲ್ಲಿ ಸೈಸರ್ಗಿಕವಾದ ಪ್ರತಿಭೆಯಿದ್ದಿತು ಇವಳು ವಿದ್ವಾಂಸರಾದ ಎಷ್ಟೋ ಬ್ರಾಹ್ಮಣರಿಗೆ ಆಶ್ರಯವನ್ನು ಕೊಟ್ಟಿದ್ದಳು ಸಂಸ್ಕೃತದಲ್ಲಿ ಕ್ಲಿಷ್ಟತರವಾದ ಛಂದಸ್ಸುಗಳನ್ನು ಸುಲಭವಾಗಿ ಮಾಡುತ್ತಿದ್ದಳು. ಸುಬಂಧುವಿನಂತೆ ಇವಳ ರಚನೆಯಲ್ಲಿ ಶ್ಲೇಷದ ಪ್ರಚುರತೆಯಿದೆ ಬಾಣನಂತೆ ಇವಳ ಭಾಷೆಯು ಓಜಸ್ಸಿನಿಂದ ಹಾಗೂ ರಸಮಯವಾಗಿದೆ ಸಂಸ್ಕೃತ / ಸಾಹಿತ್ಯದಲ್ಲಿ ಅತ್ಯಂತ ದೀರ್ಘಸಮಾಸವು 'ಅಂಬಿಕಾ ಪರಿಣಯ'ದಲ್ಲಿ ದೊರೆಯುತ್ತದೆ ಲೇಖಕಿಯ ಹೆಸರು ತಿರುಮಲಾಂಬೆಯೆಂದು. ಇವಳು ವಿಜಯನಗರದ ಮಹಾರಾಜ ಅಚ್ಚುತರಾಯನ ಹಿರಿಯ ಮಹಾರಾಣಿಯಾಗಿದ್ದಳು ಇವಳ ಕಾವ್ಯದಲ್ಲಿ ಅಂಬಿಕೆ ಮತ್ತು ಅಚ್ಚುತರಾಯನ ವಿವಾಹದ ಕತೆಯಿದೆ

ರಾಜವಂಶದ ಉತ್ಪತ್ತಿಯಿಂದ ಈ ಕಾವ್ಯವು ಪ್ರಾರಂಭವಾಗುತ್ತದೆ ವಿಜಯನಗರದ ರಾಜರು ಚಂದ್ರವಂಶಿಗರಾಗಿದ್ದರು ಭಗವಾನ್ ಚಂದ್ರನಿಗೆ ಬುಧನು ರುಗನಾದನು ಅವನಿಗೆ ಪುರೂರವಸ್ ಎಂಬ ಮಗನಿದ್ದನು ಅವನಿಗೆ ಊರ್ವಶಿಯೊಡನೆ ವಿವಾಹವಾಯಿತು. ಇವರಿಗೆ ಆಯು ಎಂಬ ಮಗನಿದ್ದನು ಇವನಿಗೆ ನಹುಷ ಎಂಬ ಹೆಸರಿನ ಮಗನಾದನು ಇವನು ೧೦೦ ಅಶ್ವಮೇಧ ಯಜ್ಞಗಳನ್ನು ಮಾಡಿದನು ನಹುಷನಿಗೆ ಯಯಾತಿಯು ಮಗನಾದನು ಇವನಿಗೆ ತುರ್ವಸು ಎಂಬ ಮಗನು ಹುಟ್ಟಿದನು ಸಮಸ್ತ ವೃಥ್ವಿಯು ಇವರ ರಾಜ್ಯವಾಗಿತ್ತು ಹೀಗೆ ಚಂದ್ರವಂಶವು ಬಹಳ ಅಭಿವೃದ್ಧಿಯಲ್ಲಿತ್ತು. ಈ ವಂಶದ ರಾಜರೆಲ್ಲರೂ ಪರಾಕ್ರಮಿಗಳೂ, ಶೂರವೀರರೂ, ದಾನಶೀಲರೂ ಆಗಿದ್ದರು ಕಾಲಾಂತರದಲ್ಲಿ ಈ ವಂಶದಲ್ಲಿ ರಾಜಾ ತಿಮ್ಮನು ಜನ್ಮವೆತ್ತಿದನು ಅವನಿಗೆ ದೇವಕಿಯೊಡನೆ ವಿವಾಹವಾಯಿತು ಉಚಿತ ಸಮಯದಲ್ಲಿ ನೃಸಿಂಹ ಕುಮಾರನು ಜನ್ಮವೆತ್ತಿದನು ಇವನು ತನ್ನ ಬಾಹುಬಲದಿಂದ ಸಮಸ್ತ ಪೃಥ್ವಿಯನ್ನು ಜಯಿಸಿದನು. ಇವನು ರಣಭೂಮಿಯಲ್ಲಿ ಅಜೇಯನಾಗಿದ್ದನು ಭಾರತದ ಸಮಸ್ತ ರಾಜರು ಇವನ ಅಧೀನರಾದರು ಇಲ್ಲಿ ದಿಗ್ವಿಜಯದ ವರ್ಣನೆಯುದೆ—ಇವನು ಮೊದಲು ಪೂರ್ವದಿಕ್ಕಿಗೆ ಹೋದನು ಅನಂತರ ದಕ್ಷಿಣಕ್ಕೆ ಹೋಗಿ ಚೋಳದೇಶವನ್ನು ಜಯಿಸಿದನು ಚೋಳದೇಶದ ಬಹಳ ಒಳ್ಳೆಯ ವರ್ಣನೆಯುಂಟು ಕಾವೇರಿನದಿಯ ವರ್ಣನೆಯೂ ಉಂಟು ನದಿಯನ್ನು ದಾಟಿ ಯುದ್ಧಕ್ಕೆ ಸಿದ್ಧನಾದ ಚೋಳ ರಾಜನೊಡನೆ ಘೋರ ಯುದ್ಧವಾಯಿತು ನರಸಿಂಹನು ಜಯಶಾಲಿಯಾದನು ಅನಂತರ ಅವನು ರಾಮೇಶ್ವರದತ್ತ ನಡೆದನು ಮಾರ್ಗದಲ್ಲಿ ಸಮುದ್ರವನ್ನು ನೋಡಿದನು. ಸಮುದ್ರದ ವರ್ಣನೆಯು ಕೋಷಕವಾಗಿದೆ ಈ ಸಂದರ್ಭದಲ್ಲಿ ನಾಲ್ಕು ವಾಕ್ಯಗಳು ಹೀಗಿವೆ—"ಗಗನವಿವ ಗ್ರಾಹವಿಹಾರಕಾರಣಂ ಕಿರಣಮಾಲಿನಿವಿನ ಸಂತತ ಸ್ಯಂದನದೀಪ್ರವಾಹಂ ಗಿರೀಶಮಿವ ತಮಾಲ ಶ್ಯಾಮತೋಪಕಂಠಂ ಕೇತಕಮಿವ ಪ್ರಕಾಶಿತ ಶಂಖಚಕ್ರಂ ...ಸಮುದ್ರಮದ್ರಾಕ್ಷೀತ್।" ಇವುಗಳಲ್ಲಿ ಪ್ರತಿಯೊಂದು ವಾಕ್ಯವು ಶ್ಲೇಷಪೂರ್ಣವಾಗಿದೆ ಸಮುದ್ರ ತಟದಲ್ಲಿ ಕುಳಿತು ನರಸಿಂಹನು ಮಹಾರಾಜ ನಸರನೆ ಉಪಾಖ್ಯಾನವನ್ನು ಕೇಳಿದನು. ಅನಂತರ ಅವನು ರಾಮೇಶ್ವರದ ದರ್ಶನ ಮಾಡಿದನು ರಾಮೇಶ್ವರದ ಬಹು ವಿಸ್ತಾರವಾದ ವರ್ಣನೆಯಿದೆ ಅದರ ಸ್ಥಲ್ಪಾಂಶವು ಹೀಗಿದೆ—"ಲಂಕಾವರ ವೆಂಕೇರುಹ ನಿಶ್ಯಂಕೋನ್ಮೂಲನಾಹಂಕರಣಸಂಕಲರಳುಕುಲ ತಿಲಕಭೂಜ ಶೌಂಡೀರ್ಯ ವೇತಂಡ ಕ್ಷುಂಡಾದಂಡ ಸಮುದ್ರಂ ಕಕುಸ್ಥವಂಶ ಪ್ರಶಸ್ತಕೇತುಂ ಕೌಸಲ್ಯಾಲೋಕಪ್ರೆಯಂ ಧೂಮಕೇತುಂ ಜಾನಕೀತೋಕಕಲ್ಮೋದ್ಧರಣಹೇತುಂ ಸರ್ವಸ್ಮಿತಿ ಸಂಹರಣ ಮೈಕ್ಷ ಗುಣತ್ರಯಮಯಿ ನಿರ್ಗುಣ ಇತಿ ಸಮುದ್ಭೋಷಯಂತಂ. . ...ಸಕಲ ನಿಗಮಾಗಮಾ ಗೋಚರಮಸಿ ಸಾಗರಶಿಗ್ಗಿಗೋಚರಂ ರಾಮೇಶ್ವರಮಿಶ್ವರ ನಂದನೋನವಂದೇ।"

ಅನಂತರ ನರಸಿಂಹನು ಶ್ರೀರಂಗವಟ್ಟಣದ ಕಡೆಗೆ ಪ್ರಸ್ಥಾನ ಮಾಡಿದನು. ನದಿಗೆ ಒಂದು ಸೇತುವನ್ನು ಮಾಡಿಸಿ, ನಗರವನ್ನು ಜಯಿಸಿದನು. ಆ ಮೇಲೆ ಮಹಾದುರ್ಗವನ್ನು ವಶಮಾಡಿಕೊಂಡು, ಉತ್ತರಕ್ಕೆ ಪ್ರಯಾಣ ಮಾಡಿದನು. ಕಾಂಬೋಜ, ಬಾಹ್ಲೀಕ, ತುರುಷ್ಕ ಮೊದಲಾದ ರಾಜರುಗಳನ್ನು ವರಾಸ್ತ್ರ ನೂತಿ, ಸುಲ್ತಾನನನ್ನು ಬಂದಿಯನ್ನಾಗಿ ಮಾಡಿದನು. ಈ ರೀತಿಯಾಗಿ ದಿಗ್ವಿಜಯವನ್ನು ಮುಗಿಸಿ, ಮಹಾರಾಜ ನರಸಿಂಹನು ತನ್ನ ರಾಜಧಾನಿಯಾದ ವಿದ್ಯಾಪುರಿ (ವಿಜಯನಗರ) ಕ್ಕೆ ಬಂದನು. ರಾಮೇಶ್ವರದಿಂದ ಹಿಮಾಲಯದ ವರೆಗೆ ಅವನ ರಾಜ್ಯದ ವಿಸ್ತಾರವಾಯಿತು

ಮಹಾರಾಜ ನರಸಿಂಹನು ಸೂರ್ಯ ಕುಲದ ರಾಮಾಂಬೆಯ ಕನ್ಯೆ ಓಮಾಂಬೆಯನ್ನು ಮದುವೆಯಾದನು ಭಗವಾನ್ ಅಚ್ಯುತನ ಕೃಪೆಯಿಂದ ಅವರಿಗೆ ಒಬ್ಬ ಪುತ್ರನು ಹುಟ್ಟಿದನು. ಅವನಿಗೆ ಅಚ್ಯುತರಾಯನೆಂದೇ ಹೆಸರಿಟ್ಟರು ರಾಜ್ಯದಲ್ಲಿ ಮಂಗಲೋತ್ಸವಗಳು ಜರಗಿದವು ಬಾಲಕನು ಕುಕ್ಷಪಕ್ಷದ ಚಂದ್ರನಂತೆ ವೃದ್ಧಿಯಾಗುತ್ತಿದ್ದನು ಅವನ ಶಿಕ್ಷಣಕ್ಕೆ ಯೋಗ್ಯ ವ್ಯವಸ್ಥೆಯು ಮಾಡಲ್ಪಟ್ಟಿತು ಕೃಷ್ಣದೇವ ಮಹಾರಾಜ ನರಸಿಂಹನು ಸ್ವರ್ಗಸ್ಥನಾದನು ಅಚ್ಯುತರಾಯನು ಸಿಂಹಾಸನಸ್ಥನಾದನು ತಂದೆಯ ಮರಣಕಾಲದಲ್ಲಿ ಅವನು ಚಿಕ್ಕ ವಯಸ್ಸಿನವನಾಗಿದ್ದನು ಕ್ರಮಶಃ ಯೌವನಾವಸ್ಥೆಗೆ ಕಾಲಿಟ್ಟನು ಅವನ ಯೌವನದ ವರ್ಣನೆಯು ಬಹಳ ಚೆನ್ನಾಗಿದೆ—ನಂದನಮಿವವಸಂತೋ ನಯಮಿವ ವಿನಯೋ ನಾಲೀಕಮುಕುಲಮಿವ ವಿಕಾಸೋ ನದೀನಾಯಕಮಿವ ವಿಧೂದಯೋ ನಕ್ಷತ್ರತ್ರಕಮಿವ ಶರದಾಗಮೋ ನಾಗೇಂದ್ರಮಿವೈ ಮಹೋದಯೋ ನಾರಾಯಣಭುಜಮಧ್ಯಮಿವ ಕೌಸ್ತುಭಮಣಿ .. ಯೌವನಃ ಪ್ರಾಪ್ತ.। ಒಂದು ದಿನ ಅಚ್ಯುತರಾಯನು ಅಶ್ವಶಾಲೆಗೆ ಹೋಗಿ ಒಂದು ದೊಡ್ಡ ಕುದುರೆಯನ್ನು ನೋಡಿದನು ಕುದುರೆಯ ವಿಸ್ತಾರವಾದ ವರ್ಣನೆಯುಂಟು—ವಪುಶ್ಯಂತಮಿವ ವೈಹಾಸಂ ವೇಗಮಿವ ತುರಗವೇಷಂ ಸಾಹಸಮಿವ ದೇಹ ಸಂಗತಂ. .

. ರಾಘವಾನೀಕಮಿವ ಸುಗ್ರೀವಮುಖಂ .
ಮಹಾಂತಮಕ್ಷವರ್ಯಮುಪಕ್ಷ್ಯತ್।

ಕುದುರೆಯನ್ನೇರಿ ಅಚ್ಯುತರಾಯನು ಚತುರಂಗ ಸೇನೆಯೊಡನೆ ಬೇಟೆಯಾಡಲಿಕ್ಕೆ ಹೋದನು ಇಲ್ಲಿ ವನವಿಹಾರದ ವರ್ಣನೆಯುಂಟು ಮರಳಿ ಬರುವಾಗ ಅಚ್ಯುತರಾಯನು ಒಂದು ಉದ್ಯಾನದ ಸವಿಧಪದಲ್ಲಿ ಬಂದನು ಮಂತ್ರಿಗಳ ಸ್ವಾರ್ಥನೆಯಂತೆ ಉದ್ಯಾನದಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು ಅವನು ಅಲ್ಲಿಯೇ ತೋಟದಲ್ಲಿ ತಿರುಗುತ್ತಿದ್ದನು ಪೂರ್ವ ದಿಕ್ಕಿನಲ್ಲಿ ಜೇನು ನೊಣಗಳು ಸಾಲು ಕಟ್ಟಿ ಹಾರುತ್ತಿರುವುದನ್ನು ಕಂಡು ಅವುಗಳ ಹಿಂದೆ ನಡೆದನು ಸ್ವಲ್ಪ ದೂರದಲ್ಲಿ ಅವನಿಗೆ ಕಲರವವು ಕೇಳಿಸಿತು ವಿದೂಷಕನು ನಕ್ಕಿಗಳ ಕೂಗು ಎಂದು ಹೇಳಿದನು. ಆದರೆ ರಾಜನು ಬಹುಮಂದಿ ಕನ್ಯೆಯರು ಹಾರ್ದಾಬಾವ ಮಾಡುತ್ತಿರುವರೆಂದು ಹೇಳಿದನು ಸ್ವಲ್ಪ ಮುಂದೆ ಹೋಗುವಾಗ ಗೌರಿಯ ಮಂದಿರವು ಕಾಣಿಸಿತು ಮಂದಿರದ ವರ್ಣನೆಯು ಚೆನ್ನಾಗಿದೆ ಮಂದಿರದಲ್ಲಿ ಬಹು ಸುಂದರಿಯಾದೊಬ್ಬ ಕನ್ಯೆಯು ದೇವಿಯ ಪೂಜೆ ಮಾಡುತ್ತಿದ್ದಳು ಕನ್ಯಾ ವರ್ಣನೆಯ ನಾಲ್ಕಾರು ವಾಕ್ಯಗಳು ಹೀಗಿವೆ—ವಿಷಮಶರರಾಜಯ ಕ್ಷೇತುನೈಜಯಂತೀಮಿವ ವಿಸ್ಮರಂತೀಂ ಚಕ್ಷುರಿಂದ್ರಿಯ ಸಂವನನಮಂತ್ರದೇವತಾಮಿವ ಸನ್ನಿಹಿತಾಂ ಲಾವಣ್ಯರಾಜ್ಯ ಲಕ್ಷ್ಮೀಮಿವ .ಶೃಂಗಾರಸಿಂಧು ಕಂದಲಿತಾಮಿವ ಸೀಮಂತಿ ಮಯೂಖರೇಖಾಂ . ... ಏಕತ್ರಪುಂಜೀಭೂಯಸಂಚರಂತೀಮಿವ ಮದನಸಂಜೀವನಕಲಾಮವರ್ಣನೀಯಲಾವಣ್ಯ ಮಯಾಮಸ್ಮಾದೃಶೀಂ ಕಾಮಯ ರಾಜಕನ್ಯಾಮ್ ।

ಕನ್ಯೆಯ ಲಾವಣ್ಯವನ್ನು ನೋಡಿ ಅಚ್ಯುತರಾಯನು ವಿಸ್ಮಯದಿಂದ ತನ್ನನ್ನು ತಾನು ಮರೆತುಬಿಟ್ಟನು ಆಗಿನ ಅವನ ಸ್ಥಿತಿಯನ್ನು ಮುಂದಿನ ವಾಕ್ಯಗಳಿಂದ ಅನುಮಾನಿಸಬಹುದು—ವಿಸ್ಮಯವಿಧೇಯ ತಯಾನಿಯಂತ್ರಿತ ಇವ ನಿಯಮಿತ ಇವ ನಿರರ್ಗಲ ರಾಗಾಧಿಯೋಗವಿಷ್ಟೆ ಇವೆ ನಿಶ್ಚಲ ಧ್ಯಾನಶೀಲ ಇವ ನಿರವಧಿಕಾನಂದಾನುಸಂಧಾನ ಇವ ನಿರುದ್ಧ ಮನೋವೃತ್ತಿನಿಷ್ಪಂದೀಭವದಿಂದ್ರಿಯವೈಚಿತ್ಯೆಷ್ಟಿಣೀ ನಿರ್ನಿಮೇಷವೀಕ್ಷಣಃ ಸುಚಿರಮುತಿಷ್ಠತ್ ।

ಪುಷ್ಕರಿಯಲ್ಲಿ ಮಿಗ್ಗಿಳಾದ ರಾಜಕನ್ಯೆಯು ಕರಜಾವ ಹೀನನಾದ, ಎರಡನೆಯ ಕಾಮುದೇವನಿಗೆ ಸಮಾನನಾದ ರಾಜಸನ್ನು ಅಕಸ್ಮಾತ್ ತನ್ನೆದುರಿಗೆ ಕಂಡಳು. ಅವಳ ವಿಕಾಲವಾದ ನೇತ್ರಗಳು ಆಶ್ಚರ್ಯ ಕುತೂಹಲಗಳಿಂದ ಇನ್ನೂ ಹೆಚ್ಚು ವಿಕಾಲವಾದುವು. ಅವಳು ಪೂಜೆಯನ್ನೇ ಮರೆತಳು. ಅವಳ ತೀರ್ಥ ಕಂಸವಾಯಿತು. ತೀರ್ಥದ ಮೇಲೆಲ್ಲಾ ಸ್ವೇದಬಿಂದುಗಳು ಹೊರಟವು. ರೋಮಾಂಚವಾಯಿತು. ಅವಳು ತನ್ನನ್ನು ತಾನು ಅರಿಯದಿ

ಕಾಲದ ಕಥೆಯು ಎಲ್ಲರಿಗೂ ತಿಳಿದಿರುವಂಥದು. ಅವನು ಮಹಾರಾಜನು ಅವನಿಗೆ ಹಲವಾರು ಹೆಂಡತಿಯರು. ಅವರಲ್ಲಿ ಪಟ್ಟಮಹಿಷಿಯಾದ ಚಂದ್ರಮತಿಯು ಅವನಿಗೆ ಅತ್ಯಂತ ಪ್ರಿಯಳು. ಅವಳ ಮೇಲೆ ಕೃಷ್ಣನಿಗೆ ಅಷ್ಟು ಪ್ರೀತಿಯಿರಲು ಕಾರಣವೇನೆಂದು ತಿಳಿಯದು. ಅವಳು ಸುಂದರಿಯಾಗಿದ್ದಳೆಂದು ಹೇಳಲಾಗದು. ಅವಳ ಸೌಂದರ್ಯವನ್ನು ಹೊಗಳಿದ ಕವಿಗಳಿಲ್ಲ. ಅವಳು ಸಂಗೀತ ಸಾಹಿತ್ಯಗಳಲ್ಲಿ ಪರಿಣತಳೆಂದು ಹೇಳಲಾಗದು. ಅವಳ ಸ್ವಭಾವವು ಅತ್ಯಂತ ಸಾಧಾರಣವಾಗಿತ್ತು. ಆದರೆ ಅವಳ ಹೃದಯವು ಮಾತ್ರ ಅತ್ಯಂತ ಸುಕೋಮಲವಾಗಿತ್ತು. ಅವಳು ಸಾಧುಸ್ವಭಾವದವಳಾಗಿದ್ದಳು. ಅವಳಿಗೆ ಯಾರಲ್ಲಿಯೂ ದ್ವೇಷವಿರಲಿಲ್ಲ. ಅವಳು ಎಲ್ಲರಲ್ಲಿಯೂ ಪ್ರೀತಿಯಿಂದಿರುತ್ತಿದ್ದಳು. ಅವಳ ಹೃದಯವು ಸದಾ ಪ್ರೇಮಪೂರ್ಣವಾಗಿರುತ್ತಿತ್ತು. ಅವಳ ಹೃದಯವು ಪ್ರೇಮಪೂರ್ಣವಾಗಿರುವುದರಿಂದಲೇ ಅವಳು ಕೃಷ್ಣನಿಗೆ ಅಷ್ಟು ಪ್ರಿಯಳಾಗಿದ್ದಳೆಂದು ತೋರುತ್ತದೆ

(ಕಳೆದ ಭಾನುವಾರದ ಮುಂದರಿಸಿದ್ದು)

ಹಾಗಾದರೆ ಈ ಹಿಂದೂ-ಮುಸಲ್ಮಾನ- ಸಮಸ್ಯೆಯೇನು? ಎರಡು ಮುಸಲ್ಮಾನ ಪ್ರತಿನಿಧಿಗಳನ್ನು ಹೆಚ್ಚಿಸಿದ ಮಾತ್ರಕ್ಕೆ, ಒಂದು ಮುಸಲ್ಮಾನ ಪ್ರಾಂತ್ಯವನ್ನು ವಿಂಗಡಿಸಿದ ಮಾತ್ರಕ್ಕೆ ಇವು ಕಾಂತವಾಗುವುವೇ?

ಪ್ರಥಮತಃ ಮುಸಲ್ಮಾನ ಮತಪ್ರಚಾರಕರೊಳಗೆ ವರಿವರ್ತನೆಯಾಗಬೇಕು ಮತವೆಂದರೆ ಹಿಂದೀ ಮುಸಲ್ಮಾನರಿಗೆ ಮಾತ್ರವೇ ಇರುವುದೇ? ತುರ್ಕಿಯನ್ನರಿಗಿಲ್ಲವೇ? ಅವರದೇ ಆದ ವಿಲಾಪತ್ತನ್ನು ಅವರು ಅಂತ್ಯವಡಿಸಿದರು; ವಿಧೇಯನ್ನು ಪ್ರಸಾರವಡಿಸಿದರು; ಹಲವು ಸಮಾಜ ಸುಧಾರಣೆಗಳನ್ನು ಜ್ಯಾರಿಗೆ ತಂದರು, ಮತ ಮತ್ತು ಸಾಂಪ್ರದಾಯಗಳನ್ನು ವಿಂಗಡಿಸಿ, ಸಾಂಪ್ರದಾಯಗಳಿಗಿಂತಲೂ ದೇಶವೇ ಮೇಲೆಂದು ಮುಂದೆ ಬಂದರು ತುರ್ಕಿಯ ಅಡಿಗಳಲ್ಲಿ ಹಿಂದೀಯ ಮುಸಲ್ಮಾನರು ಅಡಿಯಿಟ್ಟರೆ ಸಾಕಿತ್ತು ಬದಲಿಗೆ ತುರ್ಕಿಗೆ ಬೇಡವಾದ ವಿಲಾಪತ್ತು ಹಿಂದೀಯ ಮುಸಲ್ಮಾನರಿಗೆ ಬೇಕು ಸ್ವದೇಶಕ್ಕಿಂತಲೂ ವರದೇಶೀಯ ಮುಸಲ್ಮಾನರ ಮೇಲೆ ಅಭಿಮಾನ ಹೆಚ್ಚು ಹಾಗೆಂದು ವರದೇಶೀಯ ಮುಸಲ್ಮಾನರು ಹಿಂದೀಯ ಮುಸಲ್ಮಾನರಿಗೆ ಯಾವ ಉಪಕಾರವನ್ನು ಮಾಡಿದ್ದಾರೆ?

ಈ ತರದ ಕಲಹಗಳು ಹಿಂದೀಯ ಜನಾಂಗದ ಸರ್ವ ಶಕ್ತಿಯನ್ನು ವ್ಯಯಿಸಿ ಹಿಂದೂಸ್ಥಾನವನ್ನು ದುರ್ಬಲ ಮಾಡುತ್ತಿದೆ ಆದರೆ ಈ ದುರ್ಬಲತೆಯಲ್ಲಿ ಮುಸಲ್ಮಾನರು ಹಿಂದೂಗಳಿಗಿಂತ ಒಂದಿಷ್ಟು ಹೆಚ್ಚಿನ ಶಕ್ತಿ ಇರುವರೆನ್ನಬಹುದು ಅವರ ಚಳವಳಿಗಳಲ್ಲಿ ತೀಕ್ಷ್ಣತೆ ಹೆಚ್ಚು, ಚೇತನ ಹೆಚ್ಚು, ಒಂದೊಂದು ಕಡೆಯಲ್ಲಿ ಅವರಿಗೆ ಕೆಲವು ಅಧಿಕಾರಿಗಳ ನೀರವ ಪ್ರೋತ್ಸಾಹವೂ ಇದೆ ಕಾನಪೂರಿನಲ್ಲಿ ಹಿಂದೂಗಳೇ ಬಹಳ ನಷ್ಟಪಟ್ಟರೂ ಮುಸಲ್ಮಾನ ಧುರೀಣರ ಗಂಟಲೇ ದೊಡ್ಡದು. ಕಾಶ್ಮೀರದಲ್ಲಿ ಮುಸಲ್ಮಾನರ ಚಳವಳಿ ಶಾಂತತೆಯನ್ನು ನೋರಿ ಮೇರೆ ಹರಿದರೂ ಬ್ರಿಟಿಷ ಹಿಂದೂಸ್ಥಾನದಲ್ಲಿ ಅವರಿಗೆ ಪ್ರೋತ್ಸಾಹ-ಹೆಚ್ಚು; ಅವರ ಪರವಾದ ಚಳವಳಿದ ಪ್ರಾಬಲ್ಯವೂ ಹೆಚ್ಚು ಒಂದು ಹಿಡಿ ಹಿಂದೂಗಳನ್ನು ಕೇಳುವವರಿಲ್ಲ ಚಿತ್ತಗೊಂಗಿನಲ್ಲಿ ರಾಜಕೀಯ ಕಾರಣಗಳಿಂದ ಅರಾಜಕೀಯರು ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ಕೊಂದುದಕ್ಕೆ, ಅವನ ಜಾತಿಯು ಮುಸಲ್ಮಾನವಾದುದಕ್ಕಾಗಿ ಭಯಂಕರ ಕೊಲೆ ಸುಲಿಗೆ ಅಗ್ನಿ ಶಿಬೆಗಳುಂಟಾದುವು

ಹಾಗೆಂದು, ಹಿ ದೂಗಳ ಸ್ಥಿತಿಯೇನು ಆರ್ಯ ಸಮಾಜದ ಚೇತನವು ಇತ್ತೀಚಿಗೆ ಇಳಿತವನ್ನು ಸೇರಿದೆಂತೆ ತೋರುತ್ತಿದೆ ಹಿಂದೂ ಮಹಾಸಭೆಯು, ಉತ್ಸಾಹವಾಗಲಿ ಶಕ್ತಿಯಾಗಲಿ ಇಲ್ಲದ ವಾರ್ಷಿಕ ವ್ಯವಹಾರನವಾಗಿದೆ. ಅದರ ಮುಖಂಡರಾದ ಜಯಕರ, ಮುಂಜೆ, ಮೊದಲಾದವರು ಜಾತೀಯ ತತ್ವಗಳಲ್ಲೂ ರಾಷ್ಟ್ರೀಯ ತತ್ವಗಳಲ್ಲೂ ಸಿಲುಕಿ ಗೊಂದಲಗೊಂದಿದ್ದಾರೆ ಮೇಲಾಗಿ ಮಹಾತ್ಮಾಜೀಯವರ ಅಹಿಂಸಾ ವಾದವು ಘೋರಣವಾಗಿ ಸ್ವೀಕರಿಸಲ್ಪಡುವ ಬದಲಾಗಿ ಜೀವನದ ತತ್ವ(Creed)ವಾಗಿ ಹೆಚ್ಚು ಹೆಚ್ಚಾಗಿ ಸ್ವೀಕರಿಸಲ್ಪಡಲು ಆರಂಭವಾಗಿದೆ ಈ ತತ್ವವು ಇಡೀ ಜನಾಂಗಕ್ಕೇನೇ ಸಾರಲ್ಪಟ್ಟರೂ ಅದು ಹಿಂದೂಗಳಲ್ಲಿ ಮಾತ್ರವೇ ಸೇರಿಯದ ಲ್ಲದೆ ಇತರರನ್ನು ಸೇರಿಲ್ಲ ಇಂತಹ ತತ್ವಗಳು ಮೊದಲು ವೀರತೆಯ ಬಗ್ಗೆ ರಚಿಸಲ್ಪಟ್ಟರೂ ಕಟ್ಟಕಡೆಗೆ ಭಯಂಕರವಾದ ಕಾಪುರುಷತನದಲ್ಲಿ ನರ್ಯವಸಾನನನ್ನು ಹೊಂದುವುವು ಬುದ್ಧನ ಅಹಿಂಸಾ ತತ್ವದಿಂದ ಹೇಗೆ ಹಿಂದೂ ಭಾರತವರ್ಷವು ಶಕ್ತಿಯನ್ನು ಳೆಗೊಂಡು ದಂಡಗಾರರ ವಾಲಾಯಿತೊ, ಗಾಂಧಿಗಳ ಈಗಿನ ತತ್ವಗಳು ಕ್ರಮೇಣ ಸಮಸ್ತ ಹಿಂದೂ ವರ್ಗವನ್ನು ತೇಜೋಹೀನ ಜನಾಂಗವಾಗಿ ಮಾಡಬಹುದೆಂಬ ಹೆದರಿಕೆಯುಂಟಾಗುತ್ತಿದೆ

ಇವೆಲ್ಲ ವಿಷಯಗಳನ್ನು ಪರ್ಯಾಲೋಚಿಸುವಾಗ ಹಿಂದೂ ಮುಸಲ್ಮಾನ ಸಮಸ್ಯೆಯು ರಾಜಕೀಯವಲ್ಲವೆಂದು ಸ್ಪಷ್ಟವಾಗದಿರದು ಈ ಸಮಸ್ಯೆಯ ತಿರ್ಮಾನಕ್ಕೆ ಕೆಲವೇ ಸಾಧನೆಗಳಿವೆ—(1) ಇಬ್ಬರ ನ್ಯಾಯದಿಂದ ತನಗೆ ಲಾಭವನ್ನುಂಟುಮಾಡಿಕೊಳ್ಳುವವರಿರದಂತೆ ಹಿಂದೂಸ್ಥಾನವು ಸ್ವರಾಜ್ಯವನ್ನು ಹೊಂದುವುದು. (2) ಹಿಂದೂ ಸಮಾಜವನ್ನು ಬಲಗೊಳಿಸಿ ವ್ಯವಸ್ಥೆಪಡಿಸುವುದು (3) ಮುಸಲ್ಮಾನ ಮತಪ್ರಚಾರಕರನ್ನು ಹಿಂದೂ ಮತಪ್ರಚಾರಕರ ಹೆಚ್ಚಿನ ಸಂಸರ್ಗದಲ್ಲಿ ತಂದು ಪರಸ್ಪರ ವಿಶ್ವಾಸಗಳನ್ನು ಬೆಳೆಸಿ ಪರಮತ ಸಹಿಷ್ಣುತೆಯನ್ನು ಬೆಳೆಸುವುದು (4) ಮತಾಂತರ ಪ್ರಚಾರಕಾರ್ಯಗಳನ್ನು ಎಲ್ಲಾ ಜಾತಿಗಳಲ್ಲಿಯೂ ನಿಷ್ಪವಡಿಸುವುದು.

ಹೀಗೆ ಯಾವುದೊಂದು ರೀತಿಯಲ್ಲಿ ಹಿಂದೂಗಳೂ ಮುಸಲ್ಮಾನರೂ ತಮ್ಮ ಮನೋ ವೈಷಮ್ಯಗಳನ್ನು ನಿವಾರಿಸಿದ್ದರೆ ಎರಡೂ ಜಾತಿಗಳೂ ಬಹಳ ನಷ್ಟಕ್ಕೆ ಕಾರಣವಾಗುವುದು ನಿಶ್ಚಯ.

ಇಂದೇಟಿಗೆ ಸ್ವರಾಜ್ಯದಿಂದ ಸ್ವಸಾರವನ್ನು ಪಡೆದು ಈಗಿನ ಹಿಂತಾತ್ಕಳಕೊಡನೆ ಸಮಾನಸ್ಥಂದನವಾಗಿ ನಿಲ್ಲುವುದೇ? ಹಾಗೆ ಮಾರ್ಪಡುವದಿಲ್ಲವಾದರೆ, ಮಹಾತ್ಮರು ವಿವರಿಸಿದ ಸ್ವರಾಜ್ಯಕ್ಕೆ "ನಾವು! ಯೋಗ್ಯರೋ?" ಸ್ವರಾಜ್ಯ ಬಂದ ಮೇಲೆ ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕೋ? ಅಥವಾ ಇಂದೇ ಕೇಳಿ ವಿವೇಚನೆ ಮಾಡಕಕ್ಕದ್ದನ್ನು ಮಾಡಬೇಕೋ?

"ನಾವು ಯೋಗ್ಯರೋ?"

ಲೇಖಕರು—**ತಾರಾನಾಥ,** ಸಂಪಾದಕ "ಪ್ರೇಮ", ಪ್ರೇಮಾಯತನ, ತುಂಗಭದ್ರ

ಈ ವಿಚಾರವು ಉದಯಿಸಿದ ಕಡೆ ಜಗಳವಿಲ್ಲ. ಅದಿದ್ದರೂ ತನ್ನೊಡನೆಯೇ. ಅದು ತನ್ನ, ಚಿತ್ತ, ಮನ, ಬುದ್ಧಿ, ಅಹಂಕಾರಗಳೊಳಗೆಯೇ ನಡೆಯುತ್ತಿರುತ್ತದೆ, ಹೊರತಾಗಿ ಅದರ ಕಾಟವು ಬೇರೆಯವರಿಗಿರುವುದಿಲ್ಲ ಈ ಜಗಳದ ವರಣಾಮ ತನ್ನ ಚಿತ್ತಶುದ್ಧಿ. ಅಂಥ ಶುದ್ಧಿಯು ಅಲ್ಲಿಯೇ ಅಡಗುಹೋಗುವುದಿಲ್ಲ ತನ್ನ ಪ್ರಭಾವನವನ್ನು ಅದು ತಾನಿದ್ದಲ್ಲೆಲ್ಲ ಬೀರುತ್ತಲೇ ಇರುತ್ತದೆ ದೌರ್ಬಲ್ಯವೇ ಆಗಲಿ ಸೌಜನ್ಯವೇ ಆಗಲಿ— ತನ್ನ ಮುದ್ರಿಕೆಯನ್ನು ತಮ್ಮ ವರಿಸ್ಥಿತಿ ವಾತಾವರಣಗಳ ಮೇಲೆ ಹಾಕಿಯೇ ಬಿಡುತ್ತವೆ

"ನಾವು ಯೋಗ್ಯರೋ?" ಎಂಬ ಪ್ರಶ್ನೆಯ ಉತ್ತರವನ್ನು ಇತರರಿಗೆ ಕೊಡಬೇಕಾಗಿಲ್ಲ. ಅದರಿಂದ ಬೇಕಾಗಿಲ್ಲ ನಾವು ನಮಗೇ ಅದನ್ನು ಕೇಳಬೇಕಾಗಿದೆ ಆಗ ತಾನೇ ಅದರ ಪ್ರಯೋಜನ ನುಷ್ಯನು ತನ್ನ ಪರೀಕ್ಷೆಯನ್ನೇ ಮಾಡದೆ ಆಡುವುದಕ್ಕೆ ಹೊರಟಲ್ಲಿ, ಅದು ಬೇರೆ ಸನಾಯದ ಪೋಲು ವೆಚ್ಚ ಆದರಲ್ಲಿ ಅಧಿಕವಾಗಿರುವದು ಹರಟೆ, ಇತರರ ನಿಂದೆ, ಇಲ್ಲಸಲ್ಲದ ಕಲ್ಪನೆಗಳು, ಕೂರುತ್ತ ನಂಬಿಕೆಗಳು ಇತ್ಯಾದಿ ಈ ಪ್ರಶ್ನೆಯನ್ನು ತಮಗೆ ತಾವೇ ಹಾಕಿ ನೋಡದವರು ತಮ್ಮನ್ನು ತಾವೇ ನೋಡದವರು, ಅರಿಯಲಿಚ್ಛಿಸದವರು ಇವರಿಗೆ ಇತರರ ತಪ್ಪೇ ಹೆಚ್ಚಾಗಿ ಕಾಣುವದು, ಹೊರತಾಗಿ ತಮ್ಮೊಳಗಣ ದೋಷಗಳು ತೋರುವದಿಲ್ಲ ಅದರೂ ಏನೋ ನೂತನವಾಡಬೇಕು, ತಾವೂ ದೊಡ್ಡವರೆನಿಸಿಕೊಳ್ಳಬೇಕು ಒಳಗಿನಿಂದ ಹೊಳೆಯುವದಕ್ಕೆ ಅಲ್ಲಿ ಏನೂ ಇಲ್ಲ ಆದುದರಿಂದ ಇತರರನ್ನು ನಿಂದಿಸಿ ಅದರೂ, ಅಂಥ ನಿಂದೆಯ ಮೂಲಕ ತಾವು ಮೆರೆಯ ಯತ್ನಿಸುವರು ಇದಲ್ಲಿ ಅಧಿಕತನಾಗಿದೆಯೋ ಅಲ್ಲಿ ಜನರಿಗೆ ಪ್ರಗತಿಯಿಲ್ಲ ಗೊದ್ದು ಆಚಾರಕ್ಕೆ ಗುತಿ ಕಟ್ಟುವದೇ ಅಂಥವರ ಧರ್ಮ

ಸ್ವರಾಜ್ಯಕ್ಕಾಗಿ ನಾವು ಕಾದಾಡುತ್ತಿದ್ದೇವೆ ಹಾಗೆಂದರೆ ಬ್ರಿಟಿಷ್ ರಾಜ್ಯವನ್ನು ಕಿತ್ತೊಗೆಯುವದೊಂದೇ ಅರ್ಥವೋ? ಮಹಾತ್ಮಾ ಗಾಂಧಿಯವರು ಹೂಡಿದ ಸಂಗ್ರಾಮತತ್ವದಲ್ಲಿ ಈ ಕೇವಲ ಬಾಹ್ಯ ಸಂಗ್ರಾಮಕ್ಕೆ ಹೆಚ್ಚಿನ ಜಾಗೆಯಿದ್ದಂತೆ ನನಗೆ ತೋರುವುದಿಲ್ಲ **ಆವೆರ ನೀತಿಯು ನಿಸರ್ಗದ ಸಾಮಾನ್ಯ ರೀತಿ** ಮರಕ್ಕೆ ಬಂದಣಿಕೆ ಬೇರೂರ ಬೇಕಾದರೆ ಅದನ್ನು ವಿರೋಧಿಸಿ ಕೊಲ್ಲುವ ಶಕ್ತಿಯು ಆ ಮರದಲ್ಲಿಯೇ ಕಡಿಮೆಯಾಗಿರಬೇಕು ಬಂದಣಿಕೆಯು ಮುದಿ ಮತ್ತು ಬಲಹೀನ ಕೊಂಬೆಗಳ ಮೇಲೆಯ ಲ್ಲವೇ ಹೆಚ್ಚಾಗಿ ಬೆಳೆಯುವದು? **ಮರಕ್ಕೆ ಬಲ ಬಂದಂತೆ ಬಂದಣಿಕೆಗೆ ವೈತ್ಯವೂ ಬಂದೇ ತೀರಬೇಕು** ಹಾಗೆಯೇ ಸಮಾಜವು, ದೇಶದ ಸರ್ವಶಕ್ತಿಗಳು ಒಂದಾಗಿ, ಅದರಿಂದುಂಟಾದ ಸಶಕ್ತ ದೇಶದ ಯಾವ ಕೊಂಬೆಗೂ ವರರಾಜ್ಯವು ಹಿಡಿದು ಬೇರೂರಿ ಬೆಳೆಯಲಾರದು ಪ್ರಕೃತಿಯ ಈ ನಾರವನ್ನೇ ಗಾಂಧಿಜಿ ಸಹ ಹೇಳುತ್ತಿರುವದು ಎಂದು ನನ್ನ ಮತ ಇದೇ ಹಿಂದೆ ಶ್ರೀ ಕೃಷ್ಣನೂ ಹೇಳಿದ "ಉದ್ಧರೇದಾತ್ಮನಾತ್ಮಾನಂ" ಎಂಬುದರ ತತ್ವವೂ ಸತ್ಯಶೋಧನೆಯಿಲ್ಲದೆ ನಿಜವಾದ ಸ್ವರಾಜ್ಯವಿಲ್ಲ, ನಮಗೆ ಬೇಕಾದುದು ಬರೀ ಸಾಮ್ರಾಜ್ಯವಲ್ಲ, ಸರ್ವಾಂಗ ಸುಂದರ ಸ್ವರಾಜ್ಯವೇ— ಎಂದು ಮಹಾತ್ಮಾಜಿಯವರು ಪದೇ ಪದೇ ಘೋಷಿಸುವುದಿಲ್ಲವೋ?

ಈ ಸತ್ಯಶೋಧನೆಯ ಮೊದಲನೆಯ ಪ್ರಶ್ನೆಯೇ "ನಾವು ಯೋಗ್ಯರೋ?" ಎಂಬುದು ನಮ್ಮ ಸಮಾಜದ ಗುಣಾವಗುಣಗಳನ್ನು ಇದರ ಪೂರ್ಣಕ್ಕಿದಬೇಕು ಹಾಗಿಟ್ಟರೆ ಏನು ಕಾಣುತ್ತದೆ ಎಂಬದನ್ನು ನೋಡಬೇಕು **ಸ್ವರಾಜ್ಯ ಮೂಲವು ಸಂಘ ಬುದ್ಧಿ ಜೀವನಗಳಲ್ಲಿದೆ** ಎಂಬುದು ಸರ್ವಸಮ್ಮತ ವಿಷಯವೇ ಅಲ್ಲವೇ? ಹೀಗಿರುವಾಗ—1 ಅಂಥ ಸಂಘದ ಸರ್ವ ಸ್ವಾತಂತ್ರ್ಯಹಿತಗಳಿಗಾಗಿ ನಾವು ಕಾದಾಡುತ್ತಿದ್ದೇವೋ? 2. ನಾವು ಯೋಧರೆಂದೆನಿಸಿಕೊಳ್ಳುವದಕ್ಕಾಗಿ ಮಾತ್ರ ರಣರಂಗಕ್ಕಿಳಿದುತ್ತೇವೋ? 3. ಅಥವಾ ಹತ್ತು ಮುಂದಿ ನಡೆದಂತೆಯೇ ನಾವೂ—ಎಂಬ ಮೂಢಭಕ್ತಿಯಿಂದ ಹೊರಟಿರುತ್ತೇವೋ?

ಸಾರಾಂಶ—ನಮ್ಮ ಧ್ಯೇಯವು ಜನಹಿತವೋ, ಕೀರ್ತಿ ಯಲಾಲಸೆಯೋ, ಅಥವಾ ಕುರುಡು ನಂಬಿಕೆಯ ಕಗ್ಗತ್ತಲೆಯೋ? ಎಂಬದನ್ನು ಎಲ್ಲ ಯುನಕ ಯುವತಿಯರೂ ವಿವೇಚಿಸಿ ನೋಡುವದೊಳ್ಳೆಯದಲ್ಲವೇ? ಯಾಕೆಂದರೆ ಸ್ವರಾಜ್ಯ ಸಂಗ್ರಾಮದಲ್ಲಿ ಮಹಾತ್ಮರು ಎತ್ತಿಟ್ಟ ಸೂತ್ರವು ಒಂದೇ:—ಅದು 1ನೇದು. ಹೀಗಿರುವಾಗ ಇದನ್ನು ವಿವೇಚಿಸದೆ ಕೆಲಸಕ್ಕೆ ಕೈಹಾಕಿ ತಾವೂ ಮೋಸಹೋಗಿ ಇತರರನ್ನು ಮೋಸಗೊಳಿಸಿದರೆ ಮುಂದೆ ಕಷ್ಟವಲ್ಲವೇ?

ಮೊದಲನೆಯ ಸೂತ್ರವೆಂದರೆ, ಸಂಘ ಬುದ್ಧಿ ಅದು ನಮ್ಮಲ್ಲಿ ಎಷ್ಟರಮಟ್ಟಿಗಿದೆ ಎಂದು ನೋಡೋಣ. ಅದಕ್ಕಾಗಿ ಕೆಲವು ದೃಷ್ಟಾಂತಗಳನ್ನು ಎತ್ತಿ ತೋರಿಸಬೇಕಾಗುತ್ತದೆ ಈಗಿರುವ ಸರಕಾರಕ್ಕೆ ಎಷ್ಟೋ ಖಾತೆಗಳೂ ಇಲಾಖೆಗಳೂ ಸೇರಿವೆಯಷ್ಟೆ? ಅವುಗಳಲ್ಲಿ ಲಕ್ಷಗಟ್ಟಲೆ ಕೆಲಸಗಾರರಿದ್ದಾರೆ ನಾಳೆಯೂ ಇವರೇ ಇರುವರು ಯಾರಿಗೂ ಲಂಚತಕ್ಕೂಳ್ಳುವುದಕ್ಕೆ ಈಗಿನ ಸರಕಾರದಿಂದಲೂ ಅನುಮತಿಯಿಲ್ಲವಷ್ಟೆ? ಆದರೆ ಇಂದಿಲ್ಲಿನ್ನೊಂದು ರೀತಿಯಿಂದಲಾಗಲೀ ಹೆಸರಿನಿಂದಲಾಗಲೀ ಲಂಚವನ್ನು ವಸೂಲು ಸೂಡದಿರುವವರು ಎಷ್ಟು ಮಂದಿ ಇದ್ದಾರೆ? ಕಾಯಾ ವಾಚಾ ಮನಸಾ ತಕ್ಕೈಳ್ಳದಿರುವವರು ಅವರೂವಾಗಿ ಹುಳಕಿಲವರು ಇರಲಹುದು ಆದರೆ ಅಂಥವರು ಅವಸಾದಗಳೇ ದೃಷ್ಟಾಂತಕ್ಕೆ—ಆಸ್ಪತ್ರೆಗಳ ಔಷಧ ಸಾಮಗ್ರಿಗಳ ಉಪಯೋಗವು ಹೆಚ್ಚಾಗಿ ಡಾಕ್ಟರರ ಮನೆಯಲ್ಲಿಯೇ ಮುಸಿಪಾಲಿಟಿಯ ಉತ್ತಮ ಬೀದಿ, ಲಾ ದರಂಗಳ ಕೌನ್ಸಿಲರ್‌ಗಳ ಮನೆಯ ಹಿಂದೆ ಮುಂದೆ ಆಫೀಸಿನ ಕಾಗದ, ಲೇಖನಿಕೆ, ಪೆನ್ಸಿಲ್, ಸಿವ, ಸಿನ ಇತ್ಯಾದಿಗಳ ಹಬ್ಬು ಆಫೀಸರುಗಳ ಮನೆಯಲ್ಲಿ ಸಪ್ಲೈಕ ವರ್ಕ್ಸ್‌ಗಳ ಗುತ್ತಿಗೆ ಆಯಾ ಕಾಲದ ಸದಸ್ಯರ ಇಸ್ಪಮಿತ್ರ ಸಂಬಂಧಿಕರಿಗೆ ಹಾಗೆಯೇ ಆವರ ಕೈಯೊಳಗೆ ಇರುವ ನೌಕರಿಗಳು ಈ ಲೂಟಿಯ ಸೃಷ್ಟಿಯಲ್ಲಿಯೂ ಹುದ್ದೆಯ ಪೆಟ್ಟಿಗೆಸ್ಸನ್ನವಲಂಬಿಸಿದೆ ಕೆಳಗಿನ ಕ್ಲಾರ್ಕನು ಎನ್, ಸಿವ ಕಾಗದಗಳಿಂದ ಮೊದಲು ಮಾಡುತ್ತಾನೆ ನಂತ್ತು ಆಫೀಸರವರೆಗೆ ಹೇಗೆ ಹೆಚ್ಚುತ್ತದೋ, ಹಾಗೆಯೇ ಅದರ ಆರೋಪ ಆಪವಾದಗಳಿಂದ ತನ್ನನ್ನು ಕಾಪಾಡಿಕೊಳ್ಳುವ ಶಕ್ತಿಯೂ ಹೆಚ್ಚುತ್ತದೆ ಒಬ್ಬೆ ನಾನು ಸಾಯನ್ಸ್ ಮಾಸ್ಟರನಾಗಿ ದುತಿಯುತ್ತಿದ್ದ ಒಂದು ಸರಕಾರಿ ಶಾಲೆಯಲ್ಲಿ ಒಬ್ಬ ಮಾಸ್ಟರನ. ಹೆಡ್ ಮಾಸ್ಟರರ ಪೆಟ್ಟಿಗೆಯಿಂದ ರಾತ್ರೆ ಹೊತ್ತ ಪ್ರಶ್ನೆಯ ಕಾಗದಗಳನ್ನು ಕದ್ದು ಹುಡುಗರಿಗೆ ಮಾರಿದನು ಅವನ ದುಷ್ಕೃತ್ಯವನ್ನು ನಾನು ಹೆಡ್ ಮಾಸ್ಟರರಿಗೆ ತೋರಿಸಿಕೊಟ್ಟಾಗ ವಿಚಾರಣೆಯಾಯಿತ. ತೀರ್ಮಾನವೇನಾಯಿತೆ-ದರೆ— ಅವನಿಗೆ ಬರೇ ತಾಕೀದು ಮುಂದೆ ಹಾಗೆ ನೂಡಕೂಡದು. ಎಂದು ಆದರೆ ಆ ದೊಡ್ಡ ಶಾಲೆಯ ಎಲ್ಲಿಯೇ ಒಂದ ಮೂಲೆಯಲ್ಲಿ ಬಿದ್ದಿರುವ ಮುದುಕ ಕಾವಲುಗಾರನನ್ನು **ಕೆಲಸದಿಂದಲೇ ಕತ್ತೊಗೆದರು** ಇತ್ತೀಚೆಗೆ ಒಬ್ಬ ಸ್ಟೇಷನ್ ಮಾಸ್ಟರ್ ಸ್ಟೇಶನ್ನಿನಿಂದ ಎತ್ತಿಯ ದಬ್ಬೆಯನ್ನು ತನ್ನ ಮನೆಗೆ ಕಳ್ಳತನದಿಂದ ಸಾಗಿಸುವಾಗ ಪೋಲೀಸನು ಹಿಡಿದುಬಿಟ್ಟನು ನಾನೂ ಒಬ್ಬ ಸಾಕ್ಷಿ ಆದಕ್ಕೆ ವಿಚಾರಣೆಯಾಯಿತು. ಸ್ಟೇಷನ್ ಮಾಸ್ಟರ್ ಬದ.ಕಿದನು **ಪೋಲೀಸ್ ಜವಾನನಿಗೆ ವರ್ಗವಾಯಿತು!** ಇನೊಮ್ಮೆ ಹೀಗೇ ಸ್ಟೇಷನ್ ಮಾಸ್ಟರನಿಗೂ, ಎಸ್ಸೈಟ್‌ನಿಗೂ ಜಗಳವಾಗಿ ಮಾರಾಮಾರಿಯಾಯಿತ.—ನಾನು ಹೋಗಿ ಬಿಡಿಸಿದೆ. ಮುಂದೆ ಏನೋರ್ಟ್ ಆಯಿತು ಡ್ರೈವಿಕ್ ಇನ್ಸ್‌ಪೆಕ್ಟರನ್ ಬಂದು ನನ್ನವರಿನಲ್ಲಿಯೇ ಹೇಳುತ್ತಾನೆ—"ತಲೆ ತಲೆ ಬಡಕೊಳ್ಳಬೇಡಿ, ನಿಮ್ಮೊಳಗೆ ರಾಜಿಯಂದಲೇ ಎಲ್ಲೆ ಹಂಚೋಣವನ್ನು ನಿರ್ಣಯಿಸಿರಿ, ಇಂತಹುದಲ್ಲಾ ಬೆಳಕಿಗೆ ಬರಕೂಡದು"—ಎಂದನು ಹೇಗಿದೆ ಮಾಮೂಲು ಮತ್ತು ಈ ಮಾಮೂಲಿನಿಂದ ಪ್ರಯಾಣಿಕರ ಅನುಕೂಲತೆಗಾಗಿ ಸ್ಟೇಷನ್ ಲಾದಿರುಗಳಿಗೆ ಬೀಳಬೇಕಾದ ಎಣ್ಣೆ ಪಾಲುಪಾಲಾಗಿ ಸ್ಟೇಷನ್ ಮಾಸ್ಟರನಿಂದ ಚಕ್ಕ ಪೋರ್ಟರ್‌ನ ವರೆಗೆ ಹಂಚಲ್ಪಡುತ್ತದೆ ತರಕಾರಿ ಮಾರಲಿಕ್ಕೆ ಸಂತೆ ಸಂತೆಗೆ ತಿರುಗುವ ಬಡ ಹೆಂಗಸರ ಕಾಯಿ ಪಲ್ಲೆಗಳ ಒಂದು ಭಾಗವಂತೂ ಸ್ಟೇಷನ್ ಸ್ಟಾಫಿನ ಹಕ್ಕೇ ಆಗಿ ಕೂತಿದೆ

ಪೆಟ್ಟು ಎಲ್ಲಿ ನೋಡಿದರೂ ಬಡ ಬಗ್ಗರಿಗೇ! ಸ್ವಾಮಿಗಳು ಸಂತಾರಕ್ಕೆ ಹೊರಟಲ್ಲಿ ತಿಂಗಳ ಸಂಬಳ ಮಾಮೂಲು. ಇನ್ನು ಹೆಚ್ಚು ದುಡ್ಡು ಎಳೆಯಬೇಕಾದರೆ ಯಾವದಾದರೊಂದು ಕಾರಣಕ್ಕಾಗಿ ಬಹಿಷ್ಕಾರ ಮಾಮೂಲು. ಅಸಹಕಾರಕ್ಕಾಗಿ ಜೈಲಿಗೆ ಹೋಗಿ ಬಂದವರಿಗೆ ಸಹ ಎಷ್ಟೋ ಕಡೆ ಬಹಿಷ್ಕಾರವಾಗಿದೆ! ಆದರೆ ಸರಕಾರದೊಡನೆ ಸತ್ಯಾಗ್ರಹ ಮಾಡಿದವರು ಈ ರಕ್ತಚೋಷಕ ಸ್ವನಿರ್ಮಿತ ಧರ್ಮಸಂರಕ್ಷಕರೊಡನೆ ಸತ್ಯಾಗ್ರಹ ಮಾಡಿದುದ್ದನ್ನು ಎಲ್ಲಿಯೂ ಅಷ್ಟಾಗಿ ಕೇಳಲಿಲ್ಲ! ಲೋಕಲ್ ಬೋರ್ಡು, ಡಿಸ್ಟ್ರಿಕ್ಟ್‌ಬೋರ್ಡು ಬಾವಿಗಳಲ್ಲಿದ್ದಲ್ಲಿ ಹತ್ತರ ಹೋಗುವ ಅಧಿಕಾರವು ಸಹ ಅಸ್ಪೃಶ್ಯರೆಂದೆನಿಸಿಕೊಳ್ಳುವವರಿಗಿಲ್ಲ- ಇಂಥ ಎಷ್ಟೋದುಷ್ಠಾಚಾರಗಳು ಸಂಘಬದ್ಧವಾಗಿ ಶುಭ್ರನಾಮದಿಂದ ಮೆರೆಯುತ್ತಿವೆ. ನಾಳೆ ಸ್ವರಾಜ್ಯವು ಬಂದೊಡನೆಯೇ ಈ ಮಾಮೂಲಿನ ಮಹಾ ಪುರುಷರಾಗಿರುವ ಹುದ್ದೆದಾರರು, ಗುರುಗಳು, ಜಮಾಸುದಾರರು ಇತ್ಯಾದಿ ಇಂದೇಟಿಗೆ ಮಾರ್ಪಡುವರೋ? ಅವರ ದೌರ್ಜನ್ಯಕ್ಕೆ ಬಗ್ಗಿ ಬಗ್ಗಿ ನಲುಕುವಿರಿ ಜನಸಮುದಾಯವು

ಸೋವಿಯಟ್ ಪ್ರಭುತ್ವದಲ್ಲಿ ಸ್ತ್ರೀಸ್ವಾತಂತ್ರ್ಯ.

ಲೇಖಕರು:—ಆರ್. ಕಲ್ಯಾಣಮ್ಮನವರು, ಸಂಪಾದಕಿ, "ಸರಸ್ವತಿ", ಬೆಂಗಳೂರು.

ಹದ್ದೆನೆಯ ಶತಮಾನದ ಮಧ್ಯಭಾಗವು ಸ್ವಾತಂತ್ರ್ಯಯುಗ, ಯಂತ್ರಯುಗ, ಮುಂತಾದವಿಂದ ಯುಗವೆಂದು ಹೇಳಬಹುದು. ಜನರಲ್ಲಿ ಜಾಗ್ರತಿಯುಂಟಾಗುತ್ತಿದೆ. ಸ್ವಾತಂತ್ರ್ಯಪ್ರಾಪ್ತಿಯ ಹೆಚ್ಚುತ್ತಿದೆ. ಸ್ತ್ರೀಯರೂ ಪುರುಷರೂ ಎಲ್ಲದ್ದಕ್ಕಿಂತ ಹೆಚ್ಚಾಗಿ ಸ್ವಾತಂತ್ರ್ಯವನ್ನೇ ಬಯಸುತ್ತಿರುವರು. ಎಲ್ಲೋ ಮೂಲೆಯಲ್ಲಿ ಮುಗ್ಗುತ್ತಿದ್ದ ಮಹಿಳಾ ಗಣವು ಸ್ವಾತಂತ್ರ್ಯ ಸಾಧನೆಯ ಸಲುವಾಗಿ ಸ್ವಪ್ರಯತ್ನದಿಂದ, ಸ್ವಸಾಮರ್ಥ್ಯದಿಂದ ಎಲ್ಲ ಕ್ಷೇತ್ರಗಳಲ್ಲಿಯೂ ಮುಂದರಿಯ ತೊಡಗಿದೆ. ಇದನ್ನು ನೋಡಿ ಅನೇಕರು ಕಾಲವನ್ನೂ, ಯುಗವನ್ನೂ, ಶಿಕ್ಷಣವನ್ನೂ ವರಿ ವರಿ ದೂಷಿಸಲು ತೊಡಗಿರುವುದು ವಿಷಾದಕರವಾದ ವೃತ್ತಾಂತವು. ಈ ಮಹಿಳಾ ಜಾಗೃತಿಯು ಯುಗಪ್ರಭಾವದ ಕುರುಹಲ್ಲ—ಧರ್ಮನಾತದ ಕುರುಹಲ್ಲ—ದೇಶ ನಾತದ ಚಿನ್ಹೆಯಲ್ಲ. ಇದು ವಾತಾವರಣದಲ್ಲಿ, ನೈಕತ್ಯ ಆತ್ಮದಲ್ಲಿ ಅಧಿಗಿರತಳ್ಳ ಆತ್ಮಶಕ್ತಿ ಅಧವಾ ತೇಜಸ್ಸು. ಬಿಗಿದವರ ಬೆನ್ನ ಮೇಲೆ ಗುದ್ದುವಂತೆ ಈ ಶಕ್ತಿಯು ಉದ್ದಿಶ್ಯವನ್ನು ಸಾಧಿಸೆಂದಂತೆ ಮೇಲಿಂದ ಮೇಲೆ ವಿಶೋಧ ನಿಬೇಧಗಳೇರ್ಪಡುತ್ತಲೇ ಬಂದುದರಿಂದಲೂ ನಮ್ಮ ಸೋದರರ ಸಂಕುಚಿತ ಸ್ವಭಾವದಿಂದಲೂ ಅಭ್ಯುದಯಕ್ಕೆ ಚ್ಯುತಿಯುಂಟಾಗುತ್ತಿದ್ದುದು ನಿಶ್ಚಯವು ಜಗದ್ವಂದ್ಯ ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ರಣಕಹಳೆಯನ್ನೂದಿ ಭಾರತ ನಾರೀವೃಂದವನ್ನು ರಣಕ್ಷೇತ್ರಕ್ಕೆ ಆಮಂತ್ರಿಸಿದಾಗ, ಕುಂದವನದಲ್ಲಿಯ ಶ್ರೀ ಕೃಷ್ಣನು ವೇಣುವನ್ನು ನುದಿಸತೊಡಗಿದೊಡನೆ ಗೋಪಸ್ತ್ರೀಯರು ಅಳುತ್ತಿದ್ದ ಮಗುವನ್ನೂ, ಸೇದುತ್ತಿದ್ದ ಬೆಂದಿಗೆಯನ್ನೂ, ಕುದಿಯುತ್ತಿದ್ದ ಅನ್ನವನ್ನೂ, ಅರ್ಧಭಾಗದಲ್ಲಿದ್ದ ಪತಿಯನ್ನೂ, ಅರ್ಧ ಕರೆಯುತ್ತಿದ್ದ ಹಸುವನ್ನೂ ಬಿಟ್ಟು ವೇಣುಗಾನವನ್ನಾಲಿಸಲು ಹೇಗೆ ಬಂದರೋ, ಹಾಗೆಯೇ ಸಾಂಸಾರಿಕ ಕಾರ್ಯಗಳನ್ನು—ಗೃಹ ತಾವತ್ಯಯವನ್ನೂ—ಮನೆಯ ಸುಖಸಂವತ್ಸನ್ನೂ ಬಿಟ್ಟು ಸ್ವಾತಂತ್ರ್ಯಸಮರಾಂಗಣದಲ್ಲಿ ಳಿದು ಕೃಷ್ಣಜನ್ಮಗೃಹವನ್ನು ಹಾಲಹಸುಳೆಗಳಿಂದನೆಯೂ—ಪತಿಪುತ್ರರೊಡನೆಯೂ ಪ್ರವೇಶಿಸಿದ ದೃಶ್ಯವು—ಸಂಭವವು—ಭರತಖಂಡದ ಭಾವೀ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಲ್ಲಿ ಬರೆದಿಡಬೇಕಾದವುಗಳು ಈ ಅಪೂರ್ವ ಸಂಭವವು ನಮ್ಮ ಭಾರತ ನಾರೀಮಣಿಗಳಲ್ಲಡಗಿದ್ದ ಅಪೂರ್ವಶಕ್ತಿಯನ್ನು ಬಯಲಿಗೆ ತಂದು "ಅವರು ಹೇಗೆಸರು—ಅವರ ಕೈಲಿ ಏನಾಗುತ್ತೆ" ಎಂದು ಅಲ್ಲಗಳೆಯುವವರಿಗೆ ಆಶ್ಚರ್ಯಪಸ್ಸುಂಟುಮಾಡದಿರದು ಸ್ವಾತಂತ್ರ್ಯವನ್ನು ಗಳಿಸಲು ಭರತಖಂಡದ ಮಹಿಳೆಯರು ಹೇಗೆ ಪ್ರಯತ್ನಿಸಿ ಸ್ವಲ್ಪಮಟ್ಟಿಗಾದರೂ ವಿಜಯಿಗಳಾದರೋ ಹಾಗೆಯೇ ಪಾಶ್ಚಾತ್ಯ ದೇಶಗಳಲ್ಲೂ ರಕ್ಯಾ ಇಟಲಿ ಮೊದಲಾದ ಕಡೆಯಲ್ಲೂ ಮಹಿಳೆಯರು ವಿಶ್ವಪ್ರಯತ್ನಮಾಡಿ ಜಯಶೀಲರಾಗುತ್ತಿರುವರು. ಈ ದೇಶಗಳಲ್ಲಿ "ರಕ್ಯಾ" ದೇಶವು ಮೊದಲನೆಯದೆನ್ನಬಹುದು ಈಗ ಅಲ್ಲಿ ಪ್ರಚಾರದಲ್ಲಿರುವುದು "ಸೋವಿಯಟ್ ಪ್ರಭುತ್ವ." ಹಿಂದಿದ್ದ ಝಾರ ಚಕ್ರವರ್ತಿಯ ಕಾಲದಲ್ಲಿದ್ದ ಅನೇಕ ದುಷ್ಟ ದುರಾಚಾರ ಪದ್ಧತಿಗಳನ್ನು ಮೂಲೆಗೊತ್ತಿ ದೇಶಹಿತಕ್ಕನುಕೂಲಿಸುವ ಅನೇಕ ಅತ್ಯುತ್ತಮ ಪದ್ಧತಿಗಳು ಇಂದು ಪ್ರಚಾರಕ್ಕೆ ಬರುವ ಪ್ರಯತ್ನವನ್ನು ಈ ಪ್ರಭುತ್ವದವರು ಮಾಡುತ್ತಿರುವರು. ಈ ಪ್ರಭುತ್ವದಲ್ಲಿ ಸ್ತ್ರೀಯರ ಉನ್ನತಿಗಾಗಿ ಪ್ರಚಾರಕ್ಕೆ ತರಲ್ಪಟ್ಟಿರುವ ಕೆಲವು ವಿಷಯಗಳನ್ನು ತಿಳಿಸುವುದೇ ಈ ಲೇಖನದ ಉದ್ದೇಶವು.

ಈಗ ರಕ್ಯಾ ದೇಶದಲ್ಲಿ "ಸೋವಿಯಟ್ ಪ್ರಭುತ್ವ" ವು ಪ್ರಚಾರದಲ್ಲಿರುವುದು ಎಲ್ಲರೂ ಅರಿತ ವಿಷಯವಸ್ಪೆ. ಈ ಪ್ರಭುತ್ವದವರು ಪುರಾತನವಾದ "ಝಾರ್" ಪ್ರಭುತ್ವವನ್ನು, ಕಾಯುದೆಗಳನ್ನೂ, ಸಂಪೂರ್ಣವಾಗಿ ತೆಗೆದುಹಾಕಿರುವರು. ಧನಿಕರು—ದರಿದ್ರರು—ದೊಡ್ಡವರು—ಚಿಕ್ಕವರು—ಎಂಬ ದರ್ಜಿಗಳನ್ನೆಲ್ಲಾ ತೆಗೆದುಹಾಕಿ ಎಲ್ಲರೂ ಸಮಾನ ಹಕ್ಕುಳ್ಳವರೆಂದು ಸಾರಿರುವರು. ಧನಿಕರು, ದರಿದ್ರರು, ಯಜಮಾನರು, ಸೇವಕರು ಎಂಬ ಭೇದವಿಲ್ಲದೆ ದೇಶದಲ್ಲಿರುವ ಸಂಪತ್ತನ್ನೆಲ್ಲಾ ಹಂಚುಗೂಡಿಸಿ ಆ ವಿಷಯದಲ್ಲಲ್ಲಾ ಎಲ್ಲರೂ ಸಮ ಅಂತಸ್ತಿನವರೆಂದು ನಿರ್ಧರಿಸುವ ವಿಷಯದಲ್ಲಲ್ಲಾ ಬಹು ಮಟ್ಟಿಗೆ ವಿಜಯಿಗಳಾಗ್ಗಿರುವರು. ಪ್ರಭುತ್ವದವರು ಯಾವ ಮತವನ್ನೂ ಪ್ರಾಮುಖ್ಯವಾಗಿ ಗಣಿಸದೆ ಪ್ರಜೆಗಳನುಮತಿಯಂತೆ ನಡೆಯಲು ಬಿಟ್ಟರೂ ಅವರು ಮತಭೇದವೇ ಇರಕೂಡದೆಂದು ಪ್ರಬಲ ಚಳವಳಿಯನ್ನೆಬ್ಬಿಸಿರುವರು. ಈ ರೀತಿ ಧರ್ಮ ಜೀವನಾನದ ವ್ಯವಹಾರಂಶ ಕ್ಷೇತ್ರಗಳಲ್ಲಿಯೂ ಸಂಪೂರ್ಣ ವಿಪ್ಲವಾತಕವೆಬ್ಬಿಸಿರುವುದಾಗಿ ಇದುವರೆಗೂ ಯಾವ ರಾಜ್ಯವೂ ಕಾಣದಂತಹ ಒಂದು ವಿಧವಾದ ನೂತನ ಪದ್ಧತಿಯನ್ನು ಜಾರಿಗೆ ತಂದಿರುವಾಗ ಸ್ತ್ರೀಯರ ವಿಷಯದಲ್ಲಿ ಅನಘು ವಿಧಿಸಿರುವ ಕಟ್ಟಳೆಗಳನ್ನೂ ಆ ನಾಡಿನಲ್ಲಿ ಪ್ರಚಾರದಲ್ಲಿರುವ ಪದ್ಧತಿಗಳನ್ನೂ ತಿಳಿಯಬೇಕಾದುದು ಅತ್ಯಾವಶ್ಯಕವು.

ಸ್ತ್ರೀಯರಿಗೆ ಮತಕೊಡುವ ಅಧಿಕಾರ.

ಯುರೋಪ್ ಖಂಡದ ಯುದ್ಧವು ಪ್ರಾರಂಭವಾಗುವ ಮೊದಲು ಯುರೋಪ್ ಖಂಡದ ಇತರ ಭಾಗಗಳಂತೆ ರಕ್ಯಾ ದೇಶದ ಮಹಿಳೆಯರೂ ಮತಕೊಡುವ ಹಕ್ಕನ್ನು ಪಡೆಯುವುದಕ್ಕಾಗಿ ವಿಶ್ವಪ್ರಯತ್ನ ಮಾಡಿದರು. ಯುರೋಪ್ ಖಂಡದ ಇತರ ಭಾಗಗಳ ಮಹಿಳೆಯರಂತೆಯೇ ಆ ಕಾಲದಲ್ಲಿ ರಕ್ಯಾ ಸ್ತ್ರೀಯರಿಗೆ ಯಾವ ವಿಧವಾದ ಹಕ್ಕೂ ಇರಲಿಲ್ಲ, ಯುದ್ಧಾರಂಭದ ನಂತರ ಎಲ್ಲ ದೇಶಗಳಲ್ಲಿಯೂ ಸ್ತ್ರೀಯರ ಚಳವಳಿಯು ತೀವ್ರವಾಗಾಯಿತು. ಏಕೆಂದರೆ ಎಲ್ಲರೂ ಒಂದಾಗಿ ಶತ್ರುವನ್ನೆದುರಿಸಬೇಕಾದ ಅವಶ್ಯಕತೆಯು ಅಲ್ಲಿಯವರಿಗೆ ಹೆಚ್ಚಾಗಿದ್ದುದರಿಂದ ಇತರ ವಿಷಯಗಳ ಕಡೆಗೆ ಅವರ ಲಕ್ಷ್ಯವು ಹೋಗಲಿಲ್ಲ. ಳುದ್ಧವು ಪೂರ್ಕೈಸಿದ ನಂತರ ಪೂರ್ವಸ್ಥಿತಿಯು ಬದಲಾಯಿಸಿತು. ಸ್ತ್ರೀಯರ ಜನಸಂಖ್ಯೆಯು ಹೆಚ್ಚಿದ್ದರಿಂದಲೂ ಯುದ್ಧಕಾಲದ ಪ್ರತಿಯೊಂದು ದೇಶದಲ್ಲಿಯೂ ಅಪೂರ್ವವಾದ ಸೇವೆ ಮಾಡಿದ್ದರಿಂದಲೂ ಸ್ತ್ರೀಯರ ಗೌರವವು ಹೆಚ್ಚಿತು ಯುರೋಪ್ ಖಂಡದ ಎಲ್ಲಾ ಭಾಗಗಳಲ್ಲಿಯೂ ಅವರಿಗೆ ಎಲ್ಲಾ ಹಕ್ಕುಗಳೂ ತಾವೇ ತಾವಾಗಿ ದೊರೆತವು ಈ ಸ್ಥಿತಿಯಲ್ಲಿ ರಕ್ಯಾ ದೇಶದಲ್ಲಿ ಏನು ನಡೆಯಿತೆಂಬ ವಿಷಯವನ್ನಿಲ್ಲಿ ಯೋಚಿಸಬೇಕಾಗಿದೆ.

ಉತ್ತಮ ವರ್ಗದವರ ಸ್ಥಿತಿ.

ಯುರೋಪ್ ಖಂಡದ ಯುದ್ಧವು ಸಿಲ್ಲುವ ಮೊದಲೇ ರಕ್ಯಾ ದೇಶದ ಸ್ತ್ರೀಯರೂ ಯುದ್ಧವಿದ್ಯೆಯಲ್ಲಿ ಪ್ರವೀಣರಾಗಿ ಚಳುವಳಿಗೆ ಬೆಂಬಲವಿತ್ತರು ಮೊದಲನೆಯ ಸಲ ಚಳುವಳಿ ಎದ್ದಾಗ ಹೊಸದಾಗಿ ಸ್ಥಾಪಿತವಾದ ಸೈನ್ಯದಲ್ಲಿ ಅನೇಕ ಮಂದಿ ಮಹಿಳೆಯರು ಇದ್ದರು. ಎರಡನೆಯ ಸಲದ "ಬೋಲ್‌ಷೆವಿಕ್" ಚಳುವಳಿ ಎದ್ದಾಗ ರಕ್ಯಾ ದೇಶದಲ್ಲಿದ್ದ ಉತ್ತಮ ವರ್ಗದ ಕುಟುಂಬಸ್ಥರೆಲ್ಲರೂ ತಮಗುಂಟಾದ ವಿಪತ್ತನ್ನೆದುರಿಸಲು ಅಸಮರ್ಥರಾಗಿ ಇತರ ದೇಶಗಳಿಗೆ ಓಡಿದರು. ಈ ರೀತಿಯಾಗಿ ಮನೆಮಠಗಳನ್ನೂ, ಆಸ್ತಿಪಾಸ್ತಿಗಳನ್ನೂ, ಉದ್ಯೋಗ ವಡವಿಗಳನ್ನೂ, ಬಿಟ್ಟು ವರದೇಶಕ್ಕೆ ಹೋಗಿ ಹೊಟ್ಟೆಯ ಪಾಡಿಗಾಗಿ ಪಟ್ಟು ಪಾಡನ್ನು ಇಲ್ಲಿ ವಿವರಿಸುವುದು ದುಸ್ತರವು. ಈ ಕಷ್ಟ ಸಮಯದಲ್ಲಿ ಇವರ ಸ್ತ್ರೀಯರು ನಾನಾ ವಿಧವಾದ ಕೈಕಸಬುಗಳನ್ನಾಶ್ರಯಿಸಿ ತಮ್ಮ ತಮ್ಮ ಕುಟುಂಬಗಳನ್ನು ರಕ್ಷಿಸಲು ಮುಂದಾದರು. ಅನೇಕ ಅಳುಕಾಳುಗಳ ಸಹಾಯದಿಂದ ಸುಖಜೀವನ ನಡೆಸುತ್ತಿದ್ದ ಸುಖಜೀವಿಗಳಾದೀ ಶ್ರೀಮಂತ ಮಹಿಳೆಯರು ತಮ್ಮ ಕುಟುಂಬ ರಕ್ಷಣೆಯ ಸಲುವಾಗಿ ವರದೇಶಗಳಲ್ಲಿ ಹೀನ ಕೆಲಸಗಳನ್ನೂ, ಕಷ್ಟ ಕೆಲಸಗಳನ್ನೂ ಮಾಡಬೇಕಾಗಿ ಬಂತು. ಸಂಗೀತ—ನರ್ತನ ಮೊದಲಾದ ವಿದ್ಯೆಗಳನ್ನಭ್ಯಾಸಿಸಿದ್ದ ಪ್ರಭುಸ್ತ್ರೀಯರು ರಂಗುಮಂಚವನ್ನೇರಿ ತಮ್ಮ ಸಂಗೀತದಿಂದಲೂ ನರ್ತನದಿಂದಲೂ ಹಣಗಳಿಸ ತೊಡಗಿದರು ಅನೇಕರು ಇಂಗ್ಲೆಂಡ್—ಫ್ರಾನ್ಸ್—ಅಮೇರಿಕಾ ಮೊದಲಾದ ದೇಶಗಳಿಗೆ ಹೋಗಿ ಅಲ್ಲಿನ ಶ್ರೀಮಂತ ಕುಟುಂಬಗಳಲ್ಲಿ ದಾಸಿಯರಾಗಿ ಜೀವನ ತೊಡಗಿದರು ಕೆಲವರು ಫಲಹಾರ ಮಂದಿರಗಳಶ್ಟಿ ತಮ್ಮೊಳಕ ಜೀವನ ಸಾಗಿಸ ತೊಡಗಿದರು ಕೆಲವರು ಬಟ್ಟೆ ಹೊಲಿಯುವ ಅಂಗಡಿಗಳನ್ನಿಟ್ಟರು ಕೆಲವರು ತಮ್ಮಲ್ಲಿದ್ದ ಅಭರಣಗಳನ್ನೂ ವಾತ್ರೆವಡಾರ್ಥಗಳನ್ನೂ ಮಾರಿ ಆ ಹಣದಿಂದ ಸ್ವಲ್ಪ ಕಾಲತಳ್ಳಿ ನಂತರ ಹೊಟ್ಟೆಗಿಲ್ಲದೆ ಕುಸವಾಸದ ದಾರುಣ ಹೊಂದಿದರು ಮೇಲೆ ಹೇಳಿದುದೆಲ್ಲವೂ ರಕ್ಯಾ

ಶ್ರೀಮತಿ ಸರೋಜಿನಿ ದೇವಿಯವರ ಧುರೀಣತೆ.

ಸತ್ಯಾಗ್ರಹ ಸಮರದ ಮಹಿಳಾ ದಂಡು

ನಾಟಕದಲ್ಲಿನ ಒಂದು ದೃಶ್ಯ ಮಾತ್ರ ರಕ್ಯದ ಸ್ತ್ರೀಯರ ಗತಿ ಏನಾಯಿತೆಂಬುದನ್ನು ಈಗ ನಾವು ನೋಡೋಣ

ಚಳುವಳಿಗಾರರ ಧ್ಯೇಯ.

ತಳುವಳಿಯು ಪ್ರಾರಂಭವಾದೊಡನೆಯೇ ಸ್ತ್ರೀಪುರುಷರು ಸಮಾನರೆಂಬ ಭಾವನೆಯು ಸರ್ವಾನುಮತವಾಗಿ ಜೀಗಳಿಕೆ ಪಟ್ಟಿತು. ಪ್ರಭುತ್ವದವರು "ನೂತನ ಪ್ರಭುತ್ವವು ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದೆ, ಈ ಪ್ರಭುತ್ವವು ಸ್ವಾತಂತ್ರ್ಯ ರಕ್ಷಣೆಗಾಗಿ ಸದಾ ಸಿದ್ಧವಾಗಿರುವುದು ಈಗ ಪ್ರಚಾರಕ್ಕೆ ಬರುವ ನೂತನ ಶಿಕ್ಷಣಕ್ರಮವು ಸ್ವಾತಂತ್ರ್ಯ ರಕ್ಷಣೆಯ ವಿಷಯದಲ್ಲಿ ಮಹಿಳೆಯರಿಗೆ ಪೂರ್ಣ ಜ್ಞಾನವನ್ನುಂಟುಮಾಡಿ ಕೊಡುವುದು" ಎಂದು ಜಾಹೀರು ಮಾಡಿದರು ಈ ನೂತನ ಪ್ರಭುತ್ವದ ಧ್ಯೇಯವನ್ನು ಕುರಿತು "ಲೆನಿನ್" ಎಂಬ ಮಹಾಪುರುಷನು, "ದೇಶದಲ್ಲಿರುವ ಪ್ರತಿಯೊಂದು ಸ್ತ್ರೀವ್ಯಕ್ತಿಯೂ ಅಂದರೆ ಅಡಿಗೆಯವಳೋ—ಕೆಲಸದವಳೋ—ಯಾರೇ ಆಗಲಿ ಎಲ್ಲರೂ ರಾಜ್ಯಸೂತ್ರವನ್ನು ನಡೆಸುವ ಶಕ್ತಿಯನ್ನು ಹೊಂದಿರಬೇಕು" ಎಂದು ಹೇಳಿದನು—ಹದಿನೆಂಟು ವರ್ಷಗಳ ನಂತರ ಪ್ರತಿಯೊಬ್ಬ ಮಹಿಳೆಗೂ ಮತಕೊಡುವ ಅಧಿಕಾರವುಂಟಾಗುತ್ತದೆ ಅಂದಿನಿಂದ ಸರಕಾರದಲ್ಲಿ ಯಾವ ಉದ್ಯೋಗವನ್ನು ವಹಿಸಲೂ ಅವಳು ಅರ್ಹಳಾಗುತ್ತಾಳೆ

ಸ್ತ್ರೀಯರೂ ಪ್ರಭುತ್ವವೂ.

೧೯೧೪ನೆಯ ವರ್ಷದಲ್ಲಿ ರಷ್ಯದಲ್ಲಿ ಸ್ತ್ರೀಯರ ಸಂಘವು ಮೊಟ್ಟಮೊದಲು ಸ್ಥಾಪಿಸಲ್ಪಟ್ಟಿತು. ಈ ಸಂಘದ ಶಾಖೆಗಳು ದೇಶಗಳೆಲ್ಲೆಲ್ಲಾ ಹಬ್ಬಿ ಸ್ತ್ರೀಯರಿಗೆ ರಾಜಕೀಯ ವ್ಯವಹಾರವನ್ನು ತಿಳಿಸಲಾರಂಭಿಸಿತು. ಗಿರಣಿಗಳಲ್ಲಿ ಕೂಲಿ ಕೆಲಸ ಮಾಡತಕ್ಕ ಮಹಿಳೆಯರು ಕೂಲಿ ಕೆಲಸಕ್ಕೆ ಸಂಬಂಧವಿಟ್ಟ ಎಲ್ಲ ವಿಷಯಗಳನ್ನೂ ಕಲಿತರು. ಹಳ್ಳಿಗಳಲ್ಲಿ ವ್ಯವಸಾಯ ಕ್ಷೇತ್ರಗಳಲ್ಲಿರತಕ್ಕವರು ವ್ಯವಸಾಯ ಸಂಬಂಧವಾದ ಎಲ್ಲ ವಿಷಯಗಳನ್ನೂ ಅರಿತರು. ಕ್ರಮೇಣ ಇವರೆಲ್ಲರೂ ರಾಜಕೀಯ ವಿಷಯಗಳಲ್ಲಿ ಸಂಪೂರ್ಣ ಪರಿಚಯವನ್ನು ಪಡೆದು ಹೆಚ್ಚು ಶ್ರದ್ಧೆ ವಹಿಸಲಾರಂಭಿಸಿದರು. ೧೯೧೫ನೆಯ ಇಸವಿಯಲ್ಲಿ ನೆರೆದ ಅನೇಕ ಸಮ್ಮೇಳನಗಳಲ್ಲಿ ಸುಮಾರು ೫ ಲಕ್ಷ ಸ್ತ್ರೀಯರಿಗಿಂತ ಹೆಚ್ಚಾಗಿ ಪ್ರತಿನಿಧಿಗಳಾಗಿ

ಅರಿಸಲ್ಪಟ್ಟರು. ಅವರಲ್ಲಿ ತೀಕಡ ಅರಪತ್ತ ನಾಲ್ಕು ಭಾಗ ವೈದ್ಯರಾಯಿ ಮಾಡತಕ್ಕ ಸ್ತ್ರೀಯರು—ತೀಕಡ ಇಪ್ಪತ್ತೆರಪ್ಪು ಭಾಗ ಕೂಲಿ ಕೆಲಸ ಮಾಡತಕ್ಕ ಸ್ತ್ರೀಯರು. ಉಳಿದವರು ಮನೆ ಕೆಲಸ ಮಾಡುವವರು ಮತ್ತು ಅಂಗಡಿ ಮುಂಗಟ್ಟುಗಳಲ್ಲಿ ಗುಮಾಸ್ತೆ ಕೆಲಸ ಮಾಡತಕ್ಕವರಾಗಿದ್ದರು. ಇವರಲ್ಲಿ ಬಾಲ್ಯ ವಯಸ್ಸಿನವರೇ ಹೆಚ್ಚುಮಂದಿ ಇದ್ದರು.



ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು.

ಇವರು ಮಂಗಳೂರಿನ ಸಾರಸ್ವತ ಮಹಿಳೆಯರು; ಶ್ರೀ. ಸರೋಜಿನಿಯ ಸಹೋದರರಾದ ಹರೀಂದ್ರನಾಥ ಚಟ್ಟೋಪಾಧ್ಯಾಯರ ಪತ್ನಿ. ಸತ್ಕಾರ್ಯಗಳಲ್ಲಿ ಇವರು ತೋರಿಸಿದ ಚಟುವಟಿಕೆಯು ಎಲ್ಲರನ್ನೂ ವಿಸ್ಮಯಗೊಳಿಸಿದೆ. ಮೇಲಿನ ಚಿತ್ರವು ಅವರು ಸಾರ್ವಜನಿಕ ಭಾಷಣ ಕೊಡುವುದನ್ನು ತೋರಿಸುತ್ತಿದೆ.

ಸ್ತ್ರೀಯರೂ ವೈದ್ಯಕೀಯವೂ.

ಸ್ತ್ರೀಯರು ಒಲೆಯ ಮುಂದಿರುವುದಕ್ಕೂ ಪುರುಷನಿಗೆ ತಗ್ಗಿ ಬಗ್ಗಿ ನಡೆಯುವುದಕ್ಕೂ, ಮನೆಗೆಲಸ ಮಾಡುವುದಕ್ಕೂ, ಮಕ್ಕಳನ್ನು ಹೆರುವುದಕ್ಕೂ, ಜೀವನವಿಡಿ ದಾಸ್ಯವೃತ್ತಿಯಲ್ಲಿರುವುದಕ್ಕೂ, ಅರ್ಹರಾದರೆಂಬ ಭಾವನೆಯನ್ನು ಸೋವಿಯೆಟ್ ಪ್ರಭುತ್ವದವರು ಸಂಪೂರ್ಣವಾಗಿ ಹೋಗಲಾಡಿಸಿರುವರು. ಅದಿಗೆ ಕೋನೆಯಿಂದ ಅವರನ್ನು ಹೊರಗೆಳೆದು ಇತರ ಎಲ್ಲ ಕಾರ್ಯಗಳಲ್ಲಿಯೂ ಅವರು ಪರಿಚಯವನ್ನು ಪಡೆಯುವಂತೆ ಮಾಡಬೇಕೆಂಬುದೇ ಅವರ ಅಭಿಪ್ರಾಯ. ಆದರೆ ಸ್ತ್ರೀಯರ ಪ್ರಕೃತಿಗೂ, ಅವರ ಆರೋಗ್ಯಕ್ಕೂ ಅವರು ಮಾಡತಕ್ಕ ಕೆಲಸಗಳು ಸರಿ ಹೋಗುವುದೇ ಎಂಬ ವಿಷಯದ ಕಡೆಗೆ ಅವರು ಸಂಪೂರ್ಣ ಲಕ್ಷ್ಯ ಕೊಡುವರು. ಭಾರ ಎತ್ತುವುದು, ಸುರಂಗಗಳಲ್ಲಿ ಕೆಲಸ ಮಾಡುವುದು, ಗಿರಣಿಗಳಲ್ಲಿ ಹೆಚ್ಚು ಹೊತ್ತು ಕೆಲಸ ಮಾಡುವುದು, ಇತರ ಕಷ್ಟ ಕೆಲಸಗಳನ್ನು ಮಾಡುವುದು. ಇವುಗಳಿಂದ ಸ್ತ್ರೀಯರ ದೇಹ ಸ್ಥಿತಿಯು ಕೆಡುವುದೇ—ಅವರು ಗರ್ಭವನ್ನು ಧರಿಸಿ ಸುಖಪ್ರಸವಿಗಳಾಗಲು ಬಾಧೆಯಾಗುವುದೇ ಎಂಬ ವಿಷಯದ ಕಡೆಗೆ ಹೆಚ್ಚು ಶ್ರದ್ಧೆಯಿಂದ ನೋಡುವರು. ಕಾರ್ಯರಂಗಕ್ಕೆಳೆಯುವ ಪ್ರತಿಯೊಬ್ಬ ಸ್ತ್ರೀಯೂ, ಆ ಕಾರ್ಯಕರ್ಹಳೆಂಬುದಕ್ಕೂ, ಆಯಾ ದೇಹಸ್ಥಿತಿಯು ಅನುಕೂಲಿಸುವುದೆಂಬುದಕ್ಕೂ ನಿಪುಣಕಾದ ವೈದ್ಯರಿಂದ ಪರಿಶೋಧಿಸಲ್ಪಟ್ಟು ಯೋಗ್ಯತಾ ಪತ್ರವನ್ನು ಪಡೆದ ನಂತರವೇ ಸೇರಿಸಿಕೊಳ್ಳಲ್ಪಡುವಳು. ದೇಶದ ಸ್ತ್ರೀಯರು ಎಲ್ಲಾ ವಿಷಯಗಳಲ್ಲಿಯೂ ಪೂರ್ಣಜ್ಞಾನವನ್ನು ಪಡೆದು ದೇಶೋನ್ನತಿಗೆ ಸಹಕಾರಿಗಳಾಗಿರಬೇಕೆಂಬ ಭಾವನೆಯುನ್ನು ಪಡೆದ ಸೋವಿಯೆಟ್ ಪ್ರಭುತ್ವದವರು ತಿನಂದ ದೇಶದ ಆರೋಗ್ಯವಂತ ಪ್ರಜಾಭಿವೃದ್ಧಿಯಾಗಬೇಕೆಂಬ ನಿಯಮವನ್ನೂ ಪಾಲಿಸುವರು.

ವಿವಾಹದ ಉದ್ದೇಶ.

ಸೋವಿಯೆಟ್ ಪ್ರಭುತ್ವದವರು ಜಾರಿಗೆ ತಂದಿರುವ ಇತರ ಎಲ್ಲಾ ವಿಷಯಗಳಿಗಿಂತಲೂ ವಿವಾಹದ ಉದ್ದೇಶವು ಬಹು ಗಣನೀಯವಾದುದು. ಸ್ತ್ರೀಪುರುಷರಿಬ್ಬರಲ್ಲೂ ಉಂಟಾಗುವ ಪರಸ್ಪರ ಪ್ರೇಮಕ್ಕೆ ಇವರು ಬಹಳ ಬೆಲೆಕಟ್ಟುವರು. ಆದರೆ "ಪ್ರೇಮ" ವೆಂಬುದು ಎಲ್ಲಕ್ಕಿಂತಲೂ ಶ್ರೇಷ್ಠವಾದುದೆಂದೂ, ಇದೇ ಜೀವನದ ತಳಹದಿಯೆಂದೂ ಇದೇ ವಿವಾಹದ ಮುಖ್ಯ ಉದ್ದೇಶವೆಂದೂ, ಎಲ್ಲಕ್ಕೂ, ಮುಖ್ಯವಾದ ಆಧಾರವು ಪ್ರೀಮವೇ ಎಂದೂ, ಇದೇ ಪದೇ ಪದೇ ಹೇಳುವುದನ್ನು ಇವರು ಸಂಪೂರ್ಣವಾಗಿ ಖಂಡಿಸುವರೆಲ್ಲದೆ ಬಹಳ ಕುಚ್ಛರಾದುದೆಂದೂ ಭಾವಿಸುವರು. ವಿವಾಹದ ಉದ್ದೇಶವು ಪ್ರತಿಯೊಬ್ಬ ಪ್ರಜೆಯೂ ವಿವಾಹದ ಸಮಯದಲ್ಲಿ ದೇಶೋನ್ನತಿಗಾಗಿ, ದೇಶದ ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ಧೃಢಗಾತ್ರರಾದ ಮಕ್ಕಳನ್ನು ಪಡೆಯುವುದೇ ವಿವಾಹದ ಧ್ಯೇಯವೆಂದು ಪ್ರಭುತ್ವದವರು ಬೋಧಿಸಿರುವರು. ಈ ವಿಷಯವು ಅಲ್ಲಿನ ಶಾಲೆಗಳಲ್ಲಿಯೂ ಬೋಧಿಸಲ್ಪಡುವುದು.

ವಿವಾಹದ ಪದ್ಧತಿ.

ಪ್ರಭುತ್ವದ ರಿಜಿಸ್ಟರ ಕಚೇರಿಯಲ್ಲಿಯೇ ವಿವಾಹವು ನಡೆಸಲ್ಪಡುವುದು. ಪುರುಷನಿಗೆ ೧೮ ವರ್ಷ ವಯಸ್ಸು ಸ್ತ್ರೀಗೆ ೧೬ ವರ್ಷ ವಯಸ್ಸು ಆಗಿರಬೇಕು. ತಾವೀರ್ವರೂ ವಿವಾಹವಾಗಲು ಸಮ್ಮತಿಸುವುದಾಗಿ ಬರೆದು ಕೊಡಬೇಕು. ಇದಕ್ಕೆ ಒಂದು ರೂಪಾಯಿ ಕೊಡಬೇಕು. ಮದುವೆ ಮುಗಿಯಿತು. ಮತಸಂಬಂಧವಾದ ಕ್ರಿಯೆಗಳೊಂದೂ ಅವಶ್ಯಕವಿಲ್ಲ. ಅವರವರಿಗಿಷ್ಟವಾದ ಹೆಸರುಗಳಿಟ್ಟುಕೊಳ್ಳಬಹುದು. ಗಂಡನ ಮನೆಯ ಹೆಸರನ್ನೊ ಅಥವಾ ಚಿಕ್ಕಂದಿನ ಹೆಸರನ್ನೊ ಇಟ್ಟುಕೊಳ್ಳಬಹುದು. ಒಬ್ಬರನ್ನೊಬ್ಬರು ಜೀವಾವಧಿ ರಕ್ಷಿಸತಕ್ಕದ್ದು ಅವರ ಕರ್ತವ್ಯ. ಈ ನಿಬಂಧನೆಯು ವಿವಾಹವುರದ್ದಾದ ಮೇಲೆಯೂ ಕೂಡ ಇಬ್ಬರಲ್ಲೊಬ್ಬರು ಪುನರ್ವಿವಾಹವಾಗುವವರೆಗೂ ಜಾರಿಯಲ್ಲಿರುವುದು—ಗಂಡು ಮಗುವು ಹುಟ್ಟಿದರೆ ಆ ಮಗುವಿಗೆಂಟು ವರ್ಷಗಳಾಗುವ ವರೆಗೂ ಪೋಷಿಸುವ ಭಾರವು ತಂದೆಯನ್ನೇ ಸೇರಿದ್ದು. ನಮ್ಮಂತೆ ಹೆಂಡತಿ ಬೇಡವಾಗಿ, ಜೀವನಕ್ಕೇನೂ ವಾರ್ಗವಿಲ್ಲದೆ ಬಿಡುವ ಹಕ್ಕು ಅವರಿಗಿಲ್ಲ. ಹೆಂಡತಿಯನ್ನು ಬಿಟ್ಟರೂ ಮಗನ ರಕ್ಷಣೆಗೆ ದ್ರವ್ಯಸಹಾಯ ಮಾಡಿಯೇ ತೀರಬೇಕು.

ವಿವಾಹ ವಿಚ್ಛೇದನ.

ಇವರಲ್ಲಿ ವಿವಾಹ ವಿಚ್ಛೇದನವು ಅತಿ ಸುಲಭವಾದ ಕೆಲಸ—ಇದಕ್ಕೆ ಒಂದು ರೂಪಾಯಿ ಕೂಡ ಖರ್ಚಿಲ್ಲ. ಇದರಲ್ಲಿ ಮೂರರಲ್ಲೊಂದು ಪಾಲು ಖರ್ಚು ಮಾಡಿದರೆ ಸಾಕಾಗಿದೆ. ಇಬ್ಬರಲ್ಲೊಬ್ಬರು ತಮಗೆ ವಿವಾಹ ವಿಚ್ಛೇದನದಲ್ಲಿಚ್ಛೆಯುದೆಯೆಂದರಾಯಿತು. ಇಬ್ಬರೂ ಪ್ರತ್ಯಕ್ಷ ಹಾಜರಾಗಬೇಕಾದುದಿಲ್ಲ. ಕೋರ್ಟಿಗೆ ಹಾಜರಾಗದೆ ಪತ್ರಮುಖಾಂತರ ತಿಳಿಸಬಹುದು.

ಗರ್ಭಿಣಿ ಸ್ತ್ರೀಯರು.

ಗರ್ಭಿಣಿಯರ ವಿಷಯದಲ್ಲಿ ಪ್ರಭುತ್ವದವರು

ಟೆನ್ನಿಸ್ 'ನಕ್ಷತ್ರಗಳು' (Tennis Stars).

ಶ್ರೀಮತಿ ಲೀಲಾ ರೌಲ್ (ಹಾ ಆರ್. ರಾವ್, M. D. ಇವರ ಪತ್ನಿ) ಮತ್ತು ಅವರ ತಾಯಿ ಶ್ರೀಮತಿ ಕ್ಷಮಾ ರಾವ್, ಸಾರಸ್ವತ ಮಹಿಳೆಯರು. ಇವರು ಒಂದು ಫ್ರೆಂಚ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಭಾಗ ವಹಿಸಿದ್ದಾರೆ.

ತ್ರಕ್ಕೆಯನ್ನು ವಹಿಸುವರು. ಗರ್ಭಿಣಿ ಸ್ತ್ರೀಯರಿಗೆ ೫ನೆಯ ತಿಂಗಳ ನಂತರ ಪೂರ್ತಿ ಸಂಬಳದೊಡನೆ ನಾಲ್ಕು ತಿಂಗಳ ವಿರಾಮವು ಕೊಡಲ್ಪಡುವುದು. ಪ್ರಸವವಾದ ನಂತರ ತಾಯಿಗೂ ಕುಟ್ಟಿದ ಮಗುವಿಗೂ ಅವಶ್ಯವಾದ ಬಟ್ಟೆ ಬರೆಯೆ ಮೊದಲಾದ ವಸ್ತುಗಳಿಗಾಗಿ (ಸರಕಾರದಿಂದ ನಲವತ್ತು ರೂಪಾಯಿಗಳು ಕೊಡಲ್ಪಡುವುದು. ಚಿಕ್ಕ ಮಗುವಿನ ತಾಯಿಗೆ ಕೆಲಸಮಾಡುವಾಗ ತಿಂಗಳೊಂದಕ್ಕೆ ಹನ್ನೆರಡು ರೂಪಾಯಿಗಳು ಹೆಚ್ಚು ಸಂಬಳವೂ ದಿನವೊಂದಕ್ಕೆ ಎರಡು ಘಂಟೆಗಳ ವಿರಾಮವೂ ಕೊಡಲ್ಪಡುವುದು. ನಮ್ಮ ದೇಶದ ಕೂಲಿ ಹೆಂಗಸರ ವಿಷಯದಲ್ಲಿ ಗಿರಣಿಯ ಸೂಪರೀಕರೂ ಪ್ರಜೆಗಳೂ ಪ್ರಭುತ್ವದವರೂ ತೋರಿಸುತ್ತಿರುವ ದಯೆ—ನಿಷ್ಠುರತೆ—ಕಾರ್ಪಣ್ಯ—ನಿರ್ದಾಕ್ಷಿಣ್ಯತೆ—ಇವುಗಳನ್ನೂ ಆ ಪ್ರಭುತ್ವದವರ ವಿನಯ—ಸೌಜನ್ಯ—ಧಾರಾಳತೆ—ದಯೆ ಇವುಗಳನ್ನೂ ಹೋಲಿಸಿ ನಾವು ಮೊದಲು ನೋಡಿಕೊಳ್ಳಬೇಕು. ಶಿಕ್ಷಿತ ಸ್ತ್ರೀವರ್ಗವು ಈ ಮಹಿಳೆಯರುನ್ನತಿಕೆಯ ಸಲುವಾಗಿ ಪಾಡುಪಡಲು ಮುಂದಾಗಬೇಕು.

ಅಕ್ರಮ ಪ್ರಜೆಗಳು.

ರಶ್ಯಾ ದೇಶದಲ್ಲಿ ಅಕ್ರಮ ಪ್ರಜೆಗಳೂ (ವಿವಾಹವಿಲ್ಲದೆ

ದಕ್ಷಿಣ ಹಿಂದೂಸ್ಥಾನದ ಒಂದು ಗೃಹಚಿತ್ರ.

ಹೆಣ್ಣಗಲ್ಲಿ ಹಾಳುಬಿದ್ದ

ಜನಿಸತಕ್ಕ ಮಕ್ಕಳು) ಇರುವರು. ಪ್ರಭುತ್ವದವರು ಇವರನ್ನು ಬೇರೆಯೆಂದೂ, ನ್ಯಾಯವಾಗಿ ಹುಟ್ಟಿದವರನ್ನು ಬೇರೆಯೆಂದೂ ಭಾವಿಸದೆ ಎಲ್ಲರಿಗೂ ಸಮನಾದ ಹಕ್ಕನ್ನು ದಯಪಾಲಿಸಿದೆ. ವಿವಾಹವಿಲ್ಲದೆ ಮಗು ಹುಟ್ಟಿದರೆ ತಾಯಿಯು ಮಗುವಿನ ತಂದೆ ಇಂಥವನೆಂಬುದನ್ನು ಸರಕಾರಕ್ಕೆ ತಿಳಿಯಪಡಿಸಿ ಮಗುವಿನ ಪೋಷಣೆಗೆ ಬೇಕಾಗುವ ಧನವನ್ನು ಪಡೆಯಬಹುದು. ಒಂದು ವೇಳೆ ಮಗುವಿನ ತಂದೆಯು ತಾನು ತಂದೆಯಲ್ಲವೆಂಬುದನ್ನು ರುಜುಪಡಿಸದೆ ಹೋದರೂ ಎಂಟು ವರ್ಷಗಳ ವರೆಗಾದರೂ ಜೀವನಾಂಶವನ್ನು ಕೊಟ್ಟೇ ತೀರಬೇಕು. ನಮ್ಮಲ್ಲಿ ಈ ರೀತಿಯಾದರೆ ಸ್ತ್ರೀಯತ್ವನ್ನು ಸಮಾಜದ ನಿಷ್ಪುರುತೆಗೆದೆಮೂಡಿ ತಾವು ಸಭ್ಯರೆಂದು ಜಾರಿಕೊಳ್ಳುವರು. ಆ ಸ್ತ್ರೀಯ ಗತಿಯನ್ನು ಕಲ್ಪಿಸುವುದು ಅಸಾಧ್ಯ. ಸಮಾನ ಹಕ್ಕನ್ನು ಪಡೆದಿರುವ ದೇಶದಲ್ಲಿ ಪುರುಷರು ಸ್ತ್ರೀಯರನ್ನು ವಂಚಿಸಲಾಗದಂತೆ ತಡೆಯುವ ಇದೊಂದಿಸ್ತ್ರವು.

ಉಪಸಂಹಾರ.

ಇಷ್ಟೊಂದು ಕಾಯಿದೆ ಕಟ್ಟಳೆಗಳು ಪ್ರಚಾರದಲ್ಲಿದ್ದರೂ ಸ್ತ್ರೀ ಪುರುಷನ ಸಂಬಂಧವಾದ ಪಡೆವಳಿಕೆಗಳನ್ನು ಒಂದು ಸ್ಥಿಮಿತಕ್ಕೆ ಬಂದಿಲ್ಲ. ಹಳೆಯ ಪದ್ಧತಿಗಳೂ ಕಾಯಿದೆಗಳೂ ಸಂಪೂರ್ಣವಾಗಿ ನಿರ್ಮೂಲವಾದವು. ಹೊಸ ಪದ್ಧತಿಗಳನ್ನೂ ಜನರ ಮನಸ್ಸಿಸೆ ಅಂಟಿಲ್ಲ. ಅನೇಕವಾಗಿ ಸ್ತ್ರೀಪುರುಷರಿಬ್ಬರೂ ತಮ್ಮ ತಮ್ಮ ಇಷ್ಟ ಪ್ರಕಾರ ನಡೆಯುವರು. ಇದರ ಪರಿಣಾಮವು ಹೀಗೆಯೇ ಆಗುವುದೆಂದು ಹೇಳಲಾಗುವುದಿಲ್ಲ. ಇದೇ ವದ್ಧತಿಯು ಕೆಲಕಾಲ ನೆಲಸಬಹುದು. ಅಥವಾ ಮತ್ತಾವುದಾದರೊಂದು ಪ್ರಭುತ್ವವು ನೆಲಸಬಹುದು:— ಈ ವಿಷಯವು ಹೇಗೇ ಇರಲಿ—ನೇ ಆಗಲಿ; ಸ್ತ್ರೀಯರು ದೇಶದ ಏಳಿಗೆಗೂ ಸ್ತ್ರೀವರ್ಗದುನ್ನತಿಗೂ ಜನ್ಮಾಂತರ ಮೇಲ್ಗೆಗಾಗಿ ಮಾಡುತಿರುವ ಮಹತ್ಕಾರ್ಯಗಳನ್ನು ನಮ್ಮ ದೇಶದ ಮಹಿಳಾಸಂಘಗಳೂ ಮಾನ್ಯ ಸೋಕಿರಯರೂ ಅನುಕರಿಸಬೇಕಾದುದು ಅತ್ಯಾವಶ್ಯಕವಿದೆ.

ಸೋವಿಯಟ್ ಪ್ರಭುತ್ವದಲ್ಲಿ ಸ್ತ್ರೀಸ್ವಾತಂತ್ರ್ಯ.

ಲೇಖಕರು:—ಆರ್. ಕಲ್ಯಾಣಮ್ಮನವರು, ಸಂಪಾದಕಿ, "ಸರಸ್ವತಿ", ಬೆಂಗಳೂರು.

ಚರಿತ್ರೆಯು ತನಮಾನದ ಮಧ್ಯಭಾಗವು ಸ್ವಾತಂತ್ರ್ಯಯುಗ, ಯಂತ್ರಯುಗ, ಮುಂದಿರಿದ ಯುಗವೆಂದು ಹೇಳಿ ಬಹುದು. ಜನರಲ್ಲಿ ಜಾಗ್ರತಿಯುಂಟಾಗುತ್ತಿದೆ. ಸ್ವಾತಂತ್ರ್ಯಪ್ರಿಯವು ಹೆಚ್ಚುತ್ತಿದೆ. ಸ್ತ್ರೀಯರೂ ಪುರುಷರೂ ಎಲ್ಲದ್ದಕ್ಕಿಂತ ಹೆಚ್ಚಾಗಿ ಸ್ವಾತಂತ್ರ್ಯವನ್ನೇ ಬಯಸುತ್ತಿರುವರು. ಎಲ್ಲೋ ಮೂಲೆಯಲ್ಲಿ ಮುಗ್ಗುತ್ತಿದ್ದ ಮಹಿಳಾ ಗಣವು ಸ್ವಾತಂತ್ರ್ಯ ಸಾಧನೆಯ ಸಲುವಾಗಿ ಸ್ವಪ್ರಯತ್ನದಿಂದ, ಸ್ವಸಾಮರ್ಥ್ಯದಿಂದ ಎಲ್ಲ ಕ್ಷೇತ್ರಗಳಲ್ಲಿಯೂ ಮುಂದರಿಯ ತೊಡಗಿದೆ. ಇದನ್ನು ನೋಡಿ ಅನೇಕರು ಕಾಲವನ್ನೂ, ಯುಗವನ್ನೂ, ಶಿಕ್ಷಣವನ್ನೂ ತರಿ ವರಿ ದೂಷಿಸಲು ತೊಡಗಿರುವುದು ವಿಷಾದಕರವಾದ ವೃತ್ತಾಂತವು. ಈ ಮಹಿಳಾ ಜಾಗೃತಿಯು ಯುಗಪ್ರಳಯದ ಕುರುಹಲ್ಲ—ಧರ್ಮನಾಶದ ಕುರುಹಲ್ಲ—ದೇಶ ನಾಶದ ಚಿನ್ಹೆಯಲ್ಲ. ಇದು ವಾತಾವರಣದಲ್ಲಿ, ವ್ಯಕ್ತಿಯ ಆತ್ಮದಲ್ಲಿ ಅಡಗಿರತಕ್ಕ ಆತ್ಮಶಕ್ತಿ ಅಥವಾ ತೇಜಸ್ಸು. ಬಗ್ಗಿದವರ ಬೆನ್ನ ಮೇಲೆ ಗುದ್ದುವಂತೆ ಈ ಶಕ್ತಿಯು ಉದ್ದಿಶ್ಯವನ್ನು ಸಾಧಿಸದಂಕೆ ಮೇಲಿಂದ ಮೇಲೆ ವಿರೋಧ ಸಿಸೇಧಗಳೇರ್ಪಡುತ್ತಲೇ ಬಂದುದರಿಂದಲೂ, ನಮ್ಮ ಸೋದರರ ಸಂಕುಚಿತ ಸ್ವಭಾವದಿಂದಲೂ ಅಭ್ಯುದಯಕ್ಕೆ ಚ್ಯುತಿಯುಂಟಾಗುತ್ತಿದ್ದುದು ನಿಶ್ಚಯವು. ಜಗದ್ವಂದ್ಯ ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ರಣಕಹಳೆಯನ್ನೂದಿದ ಭಾರತ ನಾರೀವೃಂದವನ್ನು ರಣಕ್ಷೇತ್ರಕ್ಕೆ ಆಮಂತ್ರಿಸಿದಾಗ, ಕುಂಜವನದಲ್ಲಿಯೆ ಶ್ರೀ ಕೃಷ್ಣನು ವೇಣುವನ್ನು ನುಡಿಸತೊಡಗಿದೊಡನೆ ಗೋಪಸ್ತ್ರೀಯರು ಅಳುತ್ತಿದ್ದ ಮಗುವನ್ನೂ, ಸೇದುತ್ತಿದ್ದ ಬಿಂದಿಗೆಯನ್ನೂ, ಕುದಿಯುತ್ತಿದ್ದ ಅನ್ನವನ್ನೂ, ಅರ್ಧಭಾಗದಲ್ಲಿದ್ದ ಪತಿಯನ್ನೂ, ಅರ್ಧ ಕರೆಯುತ್ತಿದ್ದ ಹಸುವನ್ನೂ ಬಿಟ್ಟು ವೇಣುಗಾನವನ್ನಾಲೈಸಲು ಹೇಗೆ ಬಂದರೋ, ಹಾಗೆಯೇ ಸಾಂಸಾರಿಕ ಕಾರ್ಯಗಳನ್ನೂ—ಗೃಹ ತಾಪತ್ರಯವನ್ನೂ—ಮನೆಯ ಸುಖಸಂವರ್ತನ್ನೂ ಬಿಟ್ಟು ಸ್ವಾತಂತ್ರ್ಯಸಮರಾಂಗಣದಲ್ಲಿಳಿದು ಕೃಷ್ಣಜನ್ಮಗೃಹವನ್ನು ಹಾಲಹಸುಳೆಗಳೊಡನೆಯೂ— ಪತಿಪುತ್ರರೊಡನೆಯೂ ಪ್ರವೇಶಿಸಿದ ಧೃಶ್ಯವು—ಸಂಭವನವು—ಭರತಖಂಡದ ಭಾವೀ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಲ್ಲಿ ಬರೆದಿಡಬೇಕಾದವುಗಳು. ಈ ಅಪೂರ್ವ ಸಂಭವವು ನಮ್ಮ ಭಾರತ ನಾರೀಮಣಿಗಳಲ್ಲಡಗಿದ್ದ ಅಪೂರ್ವಶಕ್ತಿಯನ್ನು ಬಯಲಿಗೆ ತಂದು "ಅವರು ಹೆಂಜನರು—ಅವರ ಕೈಲಿ ಏನಾಗುತ್ತೆ!" ಎಂದು ಅಲ್ಲಗಳೆಯುವವರಿಗೆ ಆಶ್ಚರ್ಯವನ್ನುಂಟುಮಾಡದಿರದು. ಸ್ವಾತಂತ್ರ್ಯವನ್ನು ಗಳಿಸಲು ಭರತಖಂಡದ ಮಹಿಳೆಯರು ಹೇಗೆ ಪ್ರಯತ್ನಿಸಿ ಸ್ವಲ್ಪಮಟ್ಟಿಗಾದರೂ ವಿಜಯಿಗಳಾದರೋ ಹಾಗೆಯೇ ಪಾಶ್ಚಾತ್ಯ ದೇಶಗಳಲ್ಲೂ ರಶ್ಯಾ ಇಟಲಿ ಮೊದಲಾದ ಕಡೆಯಲ್ಲೂ ಮಹಿಳೆಯರು ನಿಶ್ಚಪ್ರಯತ್ನಮಾಡಿ ಜಯಶೀಲರಾಗುತ್ತಿರುವರು. ಈ ದೇಶಗಳಲ್ಲಿ "ರಶ್ಯಾ" ದೇಶವು ಮೊದಲನೆಯದೆನ್ನಬಹುದು. ಈಗ ಅಲ್ಲಿ ಪ್ರಜಾರಾಜ್ಯದಲ್ಲಿರುವುದು "ಸೋವಿಯಟ್ ಪ್ರಭುತ್ವ". ಹಿಂದಿದ್ದ ಝಾರ ಚಕ್ರವರ್ತಿಯ ಕಾಲದಲ್ಲಿದ್ದ ಅನೇಕ ದುಷ್ಟ ದುರಾಚಾರ ವೆದ್ಧತಿಗಳನ್ನು ನೂಲೆಗೊತ್ತಿ ದೇಶಹಿತಕ್ಕನುಕೂಲಿಸುವ ಅನೇಕ ಅತ್ಯುತ್ತಮ ಪದ್ಧತಿಗಳು ಇಂದು ಪ್ರಚಾರಕ್ಕೆ ಬರುವ ಪ್ರಯತ್ನವನ್ನು ಈ ಪ್ರಭುತ್ವದವರು ಮಾಡುತ್ತಿರುವರು. ಈ ಪ್ರಭುತ್ವದಲ್ಲಿ ಸ್ತ್ರೀಯರ ಉನ್ನತಿಗಾಗಿ ಪ್ರಚಾರಕ್ಕೆ ತರಲ್ಪಟ್ಟಿರುವ ಕೆಲವು ವಿಷಯಗಳನ್ನು ತಿಳಿಸುವುದೇ ಈ ಲೇಖನದ ಉದ್ದೇಶವು.

ಈಗ ರಶ್ಯಾ ದೇಶದಲ್ಲಿ "ಸೋವಿಯಟ್ ಪ್ರಭುತ್ವ"ವು ಪ್ರಚಾರದಲ್ಲಿರುವುದು ಎಲ್ಲರೂ ಅರಿತ ವಿಷಯವಷ್ಟೆ. ಈ ಪ್ರಭುತ್ವದವರು ಪೂರಾತನವಾದ "ಝಾರ್" ಪ್ರಭುತ್ವವನ್ನೂ, ಕಾಯಿದೆಗಳನ್ನೂ, ಸಂಪೂರ್ಣವಾಗಿ ತೆಜಸಿರುವರು. ಧನಿಕರು—ದರಿದ್ರರು—ದೊಡ್ಡವರು—ಚಿಕ್ಕವರು—ಎಂಬ ದೆರ್ಜೆಗಳನ್ನೆಲ್ಲಾ ತೆಗೆದುಹಾಕಿ ಎಲ್ಲರೂ ಸಮಾನ ಹಕ್ಕುಳ್ಳವರೆಂದು ಸಾರಿರುವರು. ಧನಿಕರು, ದರಿದ್ರರು, ಯಜಮಾನರು, ಸೇವಕರು ಎಂಬ ಭೇದವಿಲ್ಲದೆ ದೇಶದಲ್ಲಿರುವ ಸಂಪತ್ತನ್ನೆಲ್ಲಾ ಒಂದುಗೂಡಿಸಿ ಆ ವಿಷಯದಲ್ಲಿ ಎಲ್ಲರೂ ಸಮಾನ ಅನುಭವ್ತಿನವರೆಂದು, ನಿರ್ಧರಿಸುವ ವಿಷಯದಲ್ಲಿ ಬಹು ಮಟ್ಟಿಗೆ ವಿಜಯಿಗಳಾಗಿರುವರು. ಪ್ರಭುತ್ವದವರು ಯಾವ ಮನುಷ್ಯನನ್ನೂ ಸ್ವಾಮುಖ್ಯವಾಗಿ ಗಣಿಸದೆ ಪ್ರಜೆಗಳನುಮತಿಯಂತೆ ನಡೆಯಲು ಬಿಟ್ಟರೂ ಅವರು ಮತಭೇದವೇ ಇರಕೂಡದೆಂದು ಸ್ಪಷ್ಟ ಚಳವಳಿಯನ್ನೆಬ್ಬಿಸಿರುವರು. ಈ ರೀತಿಯಲ್ಲಿ ಜೀವಮಾನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಂಪೂರ್ಣ ಬದಲಾವಣೆಯನ್ನುಂಟುಮಾಡಿ ಇದುವರೆಗೂ ಯಾವ ರಾಜ್ಯವೂ ಕಾಣದಂತಹ ಒಂದು ವಿಧವಾದ ನೂತನ ವೆದ್ಧತಿಯನ್ನು ಜಾರಿಗೆ ತಂದಿರುವಾಗ ಸ್ತ್ರೀಯರ ವಿಷಯದಲ್ಲಿ ಅವರು ವಿಧಿಸಿರುವ ಕಟ್ಟಳೆಗಳನ್ನೂ ಆ ನಾಡಿನಲ್ಲಿ ಪ್ರಚಾರದಲ್ಲಿರುವ ಪದ್ಧತಿಗಳನ್ನೂ ತಿಳಿಯಬೇಕಾದುದು ಅತ್ಯಾವಶ್ಯಕವು.

ಸ್ತ್ರೀಯರಿಗೆ ಮತಕೊಡುವ ಅಧಿಕಾರ.

ಯುರೋಪ್ ಖಂಡದ ಯುದ್ಧವು ಪ್ರಾರಂಭವಾಗುವ ಮೊದಲು ಯುರೋಪ್ ಖಂಡದ ಇತರ ಭಾಗಗಳಂತೆ ರಶ್ಯಾ ದೇಶದ ಮಹಿಳೆಯರೂ ಮತಕೊಡುವ ಹಕ್ಕನ್ನು ಪಡೆಯುವುದಕ್ಕಾಗಿ ವಿಶ್ವಪ್ರಯತ್ನ ಮಾಡಿದರು. ಯುರೋಪ್ ಖಂಡದ ಇತರ ಭಾಗಗಳ ಮಹಿಳೆಯರಂತೆಯೇ ಆ ಕಾಲದಲ್ಲಿ ರಶ್ಯಾ ಸ್ತ್ರೀಯರಿಗೆ ಯಾವ ವಿಧವಾದ ಹಕ್ಕೂ ಇರಲಿಲ್ಲ; ಯುದ್ಧಾರಂಭದ ನಂತರ ಎಲ್ಲ ದೇಶಗಳಲ್ಲಿಯೂ ಸ್ತ್ರೀಯರ ಚಳವಳಿಯು ಕಣ್ಣಿಗಾಯಿತು., ಏಕೆಂದರೆ ಎಲ್ಲರೂ ಒಂದಾಗಿ ಶತ್ರುವನ್ನೆದುರಿಸಬೇಕಾದ ಆವಶ್ಯಕತೆಯು ಅಲ್ಲಿಯವರಿಗೆ ಹೆಚ್ಚಾಗಿದ್ದುದರಿಂದ ಇತರ ವಿಷಯಗಳ ಕಡೆಗೆ ಅವರ ಲಕ್ಷ್ಯವು ಹೋಗಲಿಲ್ಲ. ಯುದ್ಧವು ಪೂರ್ತಿಸಿದ ನಂತರ ಪೂರ್ವಸ್ಥಿತಿಯು ಬದಲಾಯಿಸಿತು. ಸ್ತ್ರೀಯರ ಜನಸಂಖ್ಯೆಯು ಹೆಚ್ಚಿದ್ದರಿಂದಲೂ ಯುದ್ಧಕಾಲದ ವ್ಯತಿಯೊಂದು ದೇಶದಲ್ಲಿಯೂ ಅಪೂರ್ವವಾದ ಸೇವೆ ಮಾಡಿದ್ದರಿಂದಲೂ ಸ್ತ್ರೀಯರ ಗೌರವವು ಹೆಚ್ಚಿತು. ಯುರೋಪ್ ಖಂಡದ ಎಲ್ಲಾ ಭಾಗಗಳಲ್ಲಿಯೂ ಅವರಿಗೆ ಎಲ್ಲಾ ಹಕ್ಕುಗಳೂ ತಾವೇ ತಾವಾಗಿ ದೊರೆತವು. ಈ ಸ್ಥಿತಿಯಲ್ಲಿ ರಶ್ಯಾ ದೇಶದಲ್ಲಿ ಏನು ನಡೆಯಿತೆಂಬ ವಿಷಯವನ್ನಿಲ್ಲಿ ಯೋಚಿಸಬೇಕಾಗಿದೆ.

ಉತ್ತಮ ವರ್ಗದವರ ಸ್ಥಿತಿ.

ಯುರೋಪ್ ಖಂಡದ ಯುದ್ಧವು ಸಲ್ಲುವ ಮೊದಲೇ ರಶ್ಯಾ ದೇಶದ ಸ್ತ್ರೀಯರೂ ಯುದ್ಧವಿದ್ಯೆಯಲ್ಲಿ ಪ್ರವೀಣರಾಗಿ ಚಳುವಳಿಗೆ ಬೆಂಬಲಿಸಿತ್ತರು. ಮೊದಲನೆಯ ಸಲ ಚಳುವಳಿ ಎದ್ದಾಗ ಹೊಸದಾಗಿ ಸ್ಥಾಪಿತವಾದ ಸೈನ್ಯದಲ್ಲಿ ಅನೇಕ ಮಂದಿ ನವತೆಯರು ಇದ್ದರು. ಎರಡನೆಯ ಸಲದ "ಬೋಲಾಷೆವಿಕ್" ಚಳುವಳಿ ಎದ್ದಾಗ ರಶ್ಯಾ ದೇಶದಲ್ಲಿದ್ದ ಉತ್ತಮ ವರ್ಗದ ಕುಟುಂಬಸ್ಥರೆಲ್ಲರೂ ತಮಗುಂಟಾದ ವಿಪತ್ತನ್ನೆದುರಿಸಲು ಅಸಮರ್ಥರಾಗಿ ಇತರ ದೇಶಗಳಿಗೆ ಓಡಿದರು. ಈ ರೀತಿಯಾಗಿ ಮನೆಮಠಗಳನ್ನೂ, ಆಸ್ತಿಪಾಸ್ತಿಗಳನ್ನೂ, ಉದ್ಯೋಗ ಪದವಿಗಳನ್ನೂ, ಬಿಟ್ಟು ಪರದೇಶಕ್ಕೆ ಹೋಗಿ ಹೊಸ್ತಿಯ ಪಾಡಿಗಾಗಿ ಪಟ್ಟ ಪಾಡನ್ನು ಇಲ್ಲಿ ವಿವರಿಸುವುದು ದುಸ್ತರವು. ಈ ಕಷ್ಟ ಸಮಯದಲ್ಲಿ ಇವರ ಸ್ತ್ರೀಯರು ನಾನಾ ವಿಧವಾದ ಕೈಕಸಬುಗಳನ್ನಾಶ್ರಯಿಸಿ ತಮ್ಮ ತಮ್ಮ ಕುಟುಂಬಗಳನ್ನು ರಕ್ಷಿಸಲು ಮುಂದಾದರು. ಅನೇಕ ಅಳುಕಾಳುಗಳ ಸಹಾಯದಿಂದೆ ಸುಖಜೀವನ ನಡೆಸುತ್ತಿದ್ದ ಸುಖಜೀವಿಗಳಾದೀ ಶ್ರೀಮಂತ ಮಹಿಳೆಯರು ತಮ್ಮ ಕುಟುಂಬ ರಕ್ಷಣೆಯ ಸಲುವಾಗಿ ವರದೇಶಗಳಲ್ಲಿ ಹೀನ ಕೆಲಸಗಳನ್ನೂ, ಕಷ್ಟ ಕೆಲಸಗಳನ್ನೂ ಮಾಡಬೇಕಾಗಿ ಬಂತು. ಸಂಗೀತ—ನರ್ತನ ಮೊದಲಾದ ವಿದ್ಯೆಗಳನ್ನಭ್ಯಾಸಿಸಿದ್ದ ಪ್ರಭುಸ್ತ್ರೀಯರು ರಂಗಮಂಚವನ್ನೇರಿ ತಮ್ಮ ಸಂಗೀತದಿಂದಲೂ ನರ್ತನದಿಂದಲೂ ಹಣಗಳಿಸ ತೊಡಗಿದರು. ಅನೇಕರು ಇಂಗ್ಲೆಂಡ್—ಫ್ರಾನ್ಸ್—ಅಮೇರಿಕಾ ಮೊದಲಾದ ದೇಶಗಳಿಗೆ ಹೋಗಿ ಅಲ್ಲಿನ ಶ್ರೀಮಂತ ಕುಟುಂಬಗಳಲ್ಲಿ ದಾಸಿಯರಾಗಿ ಜೀವಿಸ ತೊಡಗಿದರು. ಕೆಲವರು ಫಲಹಾರ ಮಂದಿರಗಳನ್ನಿಟ್ಟು ತನ್ಮೂಲಕ ಜೀವನ ಸಾಗಿಸ ತೊಡಗಿದರು. ಕೆಲವರು ಬಟ್ಟೆ ಹೊಲಿಯುವ ಅಂಗಡಿಗಳನ್ನಿಟ್ಟರು. ಕೆಲವರು ತಮ್ಮಲ್ಲಿದ್ದ ಆಭರಣಗಳನ್ನೂ ಪಾತ್ರೆಪದಾರ್ಥಗಳನ್ನೂ ನೂರಾ ಆ ಹಣದಿಂದ ಸ್ವಲ್ಪ ಕಾಲಕಳೆ ನಂತರ ಹೊಟ್ಟೆಗಿಲ್ಲದೆ ಉಪವಾಸದಿಂದ ಮರಣ ಹೊಂದಿದರು. ಮೇಲೆ ಹೇಳಿದುದಲ್ಲವೂ ರಶ್ಯಾ



ಶ್ರೀಮತಿ ಸರೋಜಿನಿ ದೇವಿಯವರ ಧುರೀಣತೆ.



ಸತ್ಯಾಗ್ರಹ ಸಮರದ ಮಹಿಳಾ ದಂಡು.

ನಾಟಕದಲ್ಲಿನ ಒಂದು ಧೃಶ್ಯ ಮಾತ್ರ. ರಕ್ಷದ ಸ್ತ್ರೀಯರ ಏನಾಯತೆಂಬುದನ್ನು ಈಗ ನಾವು ನೋಡೋಣ.

ಚಳುವಳಿಗಾರರ ಧ್ಯೇಯ.

ಚಳುವಳಿಯು ಪ್ರಾರಂಭವಾದೊಡನೆಯೇ ಸ್ತ್ರೀಪುರುಷ ಸಮಾನರೆಂಬ ಭಾವನೆಯು ಸಂಪೂರ್ಣವಾಗಿ ಅಂಗೀಕಾರವಾಯಿತು. ಪ್ರಭುತ್ವದವರು, "ನೂತನ ಪ್ರಭುತ್ವವು ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದೆ, ಈ ಪ್ರಭುತ್ವವನ್ನು ಸ್ವಾತಂತ್ರ್ಯ ರಕ್ಷಣೆಗಾಗಿ ಸದಾ ಸಿದ್ಧವಾಗಿರುವುದು. ಈಗ ಪ್ರಚಾರಕ್ಕೆ ತರುವ ನೂತನ ಶಿಕ್ಷಣಕ್ರಮವು ಸ್ವಾತಂತ್ರ್ಯ ರಕ್ಷಣೆಯ ವಿಷಯದಲ್ಲಿ ಮಹಿಳೆಯರಿಗೆ ಪೂರ್ಣ ಜ್ಞಾನವನ್ನುಂಟುಮಾಡಿ ಕೊಡುವುದು" ಎಂದು ಜಾಹೀರು ನುಡಿದರು. ಈ ನೂತನ ಪ್ರಭುತ್ವದ ಧ್ಯೇಯವನ್ನು ಕುರಿತು "ಲೆನಿನ್" ಎಂಬ ಮಹಾಪುರುಷನು, "ದೇಶದಲ್ಲಿರುವ ಪ್ರತಿಯೊಂದು ಸ್ತ್ರೀವ್ಯಕ್ತಿಯೂ ಅಂದರೆ ಅಡಿಗೆಯವಳೋ—ಕೆಲಸದವಳೋ—ಯಾರೇ ಆಗಲಿ ಎಲ್ಲರೂ ರಾಜ್ಯಸೂತ್ರವನ್ನು ನಡೆಸುವ ಶಕ್ತಿಯನ್ನು ಹೊಂದಿರಬೇಕು" ಎಂದು ಹೇಳಿದನು—ಹದಿನೇಂಟು ವರ್ಷಗಳ ನಂತರ ಪ್ರತಿಯೊಬ್ಬ ಮಹಿಳೆಗೂ ಮತಕೊಡುವ ಅಧಿಕಾರವುಂಟಾಗುತ್ತದೆ. ಅಂದಿನಿಂದ ಸರಕಾರದಲ್ಲಿ ಯಾವ ಉದ್ಯೋಗವನ್ನು ವಹಿಸಲೂ ಅವಳು ಅರ್ಹಳಾಗುತ್ತಾಳೆ.

ಸ್ತ್ರೀಯರೂ ಪ್ರಭುತ್ವವೂ.

೧೯೧೩ನೆಯ ವರ್ಷದಲ್ಲಿ ರಷ್ಯದಲ್ಲಿ ಸ್ತ್ರೀಯರ ಸಂಘವು ಮೊಟ್ಟಮೊದಲು ಸ್ಥಾಪಿಸಲ್ಪಟ್ಟಿತು. ಈ ಸಂಘದ ಶಾಖೆಗಳು ದೇಶಗಳೆಲ್ಲೆಲ್ಲಾ ಹಬ್ಬಿ ಸ್ತ್ರೀಯರಿಗೆ ರಾಜಕೀಯ ವ್ಯವಹಾರವನ್ನು ತಿಳಿಸಲಾರಂಭಿಸಿತು. ನಿರಕ್ಷರಿಗಳಲ್ಲಿ ಕೂಲಿ ಕೆಲಸ ಮಾಡತಕ್ಕ ಮಹಿಳೆಯರು ಕೂಲಿ ಕೆಲಸಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಕಲಿತರು. ಹಳ್ಳಿಗಳಲ್ಲಿ ವ್ಯವಸಾಯ ಕ್ಷೇತ್ರಗಳಲ್ಲಿರತಕ್ಕವರು ವ್ಯವಸಾಯ ಸಂಬಂಧವಾದ ಎಲ್ಲ ವಿಷಯಗಳನ್ನೂ ಅರತರು. ಕ್ರಮೇಣ ಇವರೆಲ್ಲರೂ ರಾಜಕೀಯ ವಿಷಯಗಳಲ್ಲಿ ಸಂಪೂರ್ಣ ನಿಪುಣತೆಯನ್ನು ಪಡೆದು ಹೆಚ್ಚು ಶ್ರದ್ಧೆ ವಹಿಸಲಾರಂಭಿಸಿದರು. ೧೯೧೭ನೆಯ ಇಸವಿಯಲ್ಲಿ ನೆರೆದ ಅನೇಕ ಸಮ್ಮೇಳನಗಳಲ್ಲಿ ಸುಮಾರು ೫ ಲಕ್ಷ ಸ್ತ್ರೀಯರಿಗಿಂತ ಹೆಚ್ಚಾಗಿ ಪ್ರತಿನಿಧಿಗಳಾಗಿ

ಆರಿಸಲ್ಪಟ್ಟರು. ಅವರಲ್ಲಿ ತೀರದ ಅರವತ್ತ ನಾಲ್ಕು ಭಾಗ ಸೈನಾಯ ಮಾಡತಕ್ಕ ಸ್ತ್ರೀಯರು—ತೀರದ ಇಪ್ಪತ್ತ ರಷ್ಟು ಭಾಗ ಕೂಲಿ ಕೆಲಸ ಮಾಡತಕ್ಕ ಸ್ತ್ರೀಯರು. ಉಳಿದವರು ಮನೆ ಕೆಲಸ ಮಾಡುವವರು ಮತ್ತು ಅಂಗಡಿ ಮಂಗಿಗಳಲ್ಲಿ ಗುಮಾಸ್ತೆ ಕೆಲಸ ಮಾಡತಕ್ಕವರಾಗಿದ್ದರು. ಇವರಲ್ಲಿ ಬಾಲ್ಯ ವಯಸ್ಸಿನವರೇ ಹೆಚ್ಚುಮಂದಿ ಇದ್ದರು

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು

ಇವರು ಮಂಗಳೂರಿನ ಸಾರಸ್ವತ ಮಹಿಳೆಯರು. ಶ್ರೀ ಸರೋಜಿನಿಯ ಸಹೋದರರಾದ ಹರೀಂದ್ರನಾಥ ಚಟ್ಟೋಪಾಧ್ಯಾಯರ ಪತ್ನಿ. ಸತ್ಯಾಗ್ರಹದಲ್ಲಿ ಇವರು ತೋರಿಬಿದ ಚಟುವಟಿಕೆಯು ಎಲ್ಲರನ್ನೂ ಬೆರಗುಗೊಳಿಸಿದೆ ಮೇಲಿನ ಚಿತ್ರವು ಅವರು ಸಾರ್ವಜನಿಕ ಭಾಷಣ ಕೊಡುವುದನ್ನು ತೋರಿಸುತ್ತಿದೆ

ಸ್ತ್ರೀಯರೂ ಕೈಗಾರಿಕೆಯೂ.

ಸ್ತ್ರೀಯರು ಒಲೆಯ ಮುಂದಿರುವುದಕ್ಕೂ ಪುರುಷನಿಗೆ ತಗ್ಗಿ ಬಗ್ಗಿ ನಡೆಯುವುದಕ್ಕೂ, ಮನೆಗೆಲಸ ಮಾಡುವುದಕ್ಕೂ, ಮಕ್ಕಳನ್ನು ಹೆರುವುದಕ್ಕೂ, ಜೀವಾವಧಿ ದಾಸ್ಯವೃತ್ತಿಯಲ್ಲಿರುವುದಕ್ಕೂ, ಅರ್ಹರಾದರೆಂಬ ಭಾವನೆಯನ್ನು ಸೋವಿಯಟ್ ಪ್ರಭುತ್ವದವರು ಸಂಪೂರ್ಣವಾಗಿ ಹೋಗಲಾಡಿಸಿರುವರು ಅಡಿಗೆ ಕೋಣೆಯಿಂದ ಅವರನ್ನು ಹೊರಗೆಳೆದು ಇತರ ಎಲ್ಲ ಕಾರ್ಯಗಳಲ್ಲಿಯೂ ಅವರು ಪರಿಚಯವನ್ನು ಪಡೆಯುವಂತೆ ಮಾಡಬೇಕೆಂಬುದೇ ಅವರ ಅಭಿಪ್ರಾಯ. ಆದರೆ ಸ್ತ್ರೀಯರ ಪ್ರಕೃತಿಗೂ, ಅವರ ಆರೋಗ್ಯಕ್ಕೂ ಅನುಮಾಡತಕ್ಕ ಕೆಲಸಗಳು ಸರಿ ಹೋಗುವುದೇ ಎಂಬ ವಿಷಯದ ಕಡೆಗೆ ಅವರು ಸಂಪೂರ್ಣ ಲಕ್ಷ್ಯ ಕೊಡುವರು ಭಾರವನ್ನೆತ್ತುವುದು, ಸುರಂಗಗಳಲ್ಲಿ ಕೆಲಸ ಮಾಡುವುದು, ಗಿರಣಿಗಳಲ್ಲಿ ಹೆಚ್ಚು ಹೊತ್ತು ಕೆಲಸ ಮಾಡುವುದು, ಇತರ ಕಷ್ಟ ಕೆಲಸಗಳನ್ನು ಮಾಡುವುದು ಇವುಗಳಿಂದ ಸ್ತ್ರೀಯರ ದೇಹ ಸ್ಥಿತಿಯು ಕೆಡುವುದೇ—ಅವರು ಗರ್ಭವನ್ನು ಧರಿಸಿ ಸುಖಪ್ರಸವಿಗಳಾಗಲು ಬಾಧೆಯಾಗುವುದೇ ಎಂಬ ವಿಷಯದ ಕಡೆಗೆ ಹೆಚ್ಚು ಶ್ರದ್ಧೆಯಿಂದ ನೋಡುವರು ಕಾರ್ಖಾನೆ ರಂಗಕ್ಕಳಿಯುವ ಪ್ರತಿಯೊಬ್ಬ ಸ್ತ್ರೀಯೂ, ಆ ಕಾರ್ಖಾನೆಕ್ಕೆ ಅರ್ಹಳೆಂಬುದಕ್ಕೂ, ಅವಳ ದೇಹಸ್ಥಿತಿಯು ಅನುಕೂಲಿಸುವುದೆಂಬುದಕ್ಕೂ ನಿಪುಣರಾದ ವೈದ್ಯರಿಂದ ಪರಿಶೋಧಿಸಲ್ಪಟ್ಟು ಯೋಗ್ಯತಾ ಪತ್ರವನ್ನು ಪಡೆದ ನಂತರವೇ ಸೇರಿಸಿಕೊಳ್ಳಲ್ಪಡುವಳು ದೇಶದ ಸ್ತ್ರೀಯರು ಎಲ್ಲಾ ವಿಷಯಗಳಲ್ಲಿಯೂ ಪೂರ್ಣಜ್ಞಾನವನ್ನು ಪಡೆದು ದೇಶದುನ್ನತಿಗೆ ಸಹಕಾರಿಗಳಾಗಿರಬೇಕೆಂಬ ಭಾವನೆಯನ್ನು ನಡೆದ ಸೋವಿಯಟ್ ಪ್ರಭುತ್ವದವರು ಅವರಿಂದ ದೇಶದ ಆರೋಗ್ಯವಂತ ಪ್ರಜಾಭಿವೃದ್ಧಿಯಾಗಬೇಕೆಂಬ ಏಯನುವನ್ನೂ ಪಾಲಿಸುವರು

ವಿವಾಹದ ಉದ್ದೇಶ.

ಸೋವಿಯಟ್ ಪ್ರಭುತ್ವದವರು ಜಾರಿಗೆ ತಂದಿರುವ ಇತರ ಎಲ್ಲಾ ವಿಷಯಗಳಿಗಿಂತಲೂ ವಿವಾಹದ ಉದ್ದೇಶವು ಬಹು ಗಣನೀಯವಾದುದು ಸ್ತ್ರೀಪುರುಷರಿಬ್ಬರಲ್ಲೂ ಉಂಟಾಗುವ ಪರಸ್ಪರ ಪ್ರೇಮಕ್ಕೆ ಇವರು ಬಹಳ ಬೆಲೆಕಟ್ಟುವರು ಆದರೆ "ಪ್ರೇಮ" ವೆಂಬುದು ಎಲ್ಲಕ್ಕಿಂತಲೂ ಶ್ರೇಷ್ಠವಾದುದೆಂದೂ, ಇದೇ ಜೀವನದ ತಳಹದಿಯೆಂದೂ ಇದೇ ವಿವಾಹದ ಮುಖ್ಯ ಉದ್ದೇಶವೆಂದೂ, ಎಲ್ಲಕ್ಕೂ, ಮುಖ್ಯವಾದ ಆಧಾರವು ಪ್ರೇಮವೇ ಎಂದೂ, ಪದೇ ಪದೇ ಹೇಳುವುದನ್ನು ಇವರು ಸಂಪೂರ್ಣವಾಗಿ ಖಂಡಿಸುವರಲ್ಲದೆ ಬಹಳ ತುಚ್ಛವಾದುದೆಂದೂ ಭಾವಿಸುವರು. ವಿವಾಹದ ಉದ್ದೇಶವು ಪ್ರಜೋತ್ಪತ್ತಿ ಮಾಡುವುದು. ಪ್ರತಿಯೊಬ್ಬ ಸ್ತ್ರೀಪುರುಷರೂ ವಿವಾಹದ ಸಮಯದಲ್ಲಿ ದೇಶೋನ್ನತಿಗಾಗಿ, ದೇಶದ ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ದೃಢಗಾತ್ರರಾದ ಮಕ್ಕಳನ್ನು ಪಡೆಯುವುದೇ ವಿವಾಹದ ಧ್ಯೇಯವೆಂದು ಪ್ರಭುತ್ವದವರು ಬೋಧಿಸಿರುವರು. ಈ ವಿಷಯವು ಅಲ್ಲಿನ ಶಾಲೆಗಳಲ್ಲಿಯೂ ಬೋಧಿಸಲ್ಪಡುವುದು.

ವಿವಾಹದ ಪದ್ಧತಿ.

ಪ್ರಭುತ್ವದ ರಿಜಿಸ್ತರ ಕಚೇರಿಯಲ್ಲಿಯೇ ವಿವಾಹವು ನಡೆಸಲ್ಪಡುವುದು. ವುರುಷನಿಗೆ ೧೮ ವರ್ಷ ವಯಸ್ಸು ಸ್ತ್ರೀಗೆ ೧೬ ವರ್ಷ ವಯಸ್ಸು ಆಗಿರಬೇಕು. ತಾವಿರ್ವರೂ ವಿವಾಹವಾಗಲು ಸಮ್ಮತಿಸುವುದಾಗಿ ಬರೆದು ಕೊಡಬೇಕು. ಇದಕ್ಕೆ ಒಂದು ರೂಪಾಯಿ ಕೂಡ ಬೇಕು ಮದುವೆ ಮುಗಿಯುತನಮತಸಂಬಂಧವಾದ ಕ್ರಿಯೆಗಳೊಂದೂ ಅವಶ್ಯಕವಿಲ್ಲ ಅವರವರಿಗಿಷ್ಟವಾದ ಹೆಸರುಗಳನ್ನಿಟ್ಟುಕೊಳ್ಳಬಹುದು ಗಂಡನು ಮನೆಯ ಹೆಸರನ್ನೂ ಅಥವಾ ಚಿಕ್ಕಂದಿನ ಹೆಸರನ್ನೂ ಇಟ್ಟುಕೊಳ್ಳಬಹುದು ಒಬ್ಬರನ್ನೊಬ್ಬರು ಜೀವಾವಧಿ ರಕ್ಷಿಸತಕ್ಕದ್ದು ಅವರ ಕರ್ತವ್ಯ. ಈ ನಿಬಂಧನೆಯು ವಿವಾಹವು ರದ್ದಾದ ಮೇಲೆಯೂ ಕೂಡ ಇಬ್ಬರಲ್ಲೊಬ್ಬರು ಪುನರ್ವಿವಾಹವಾಗುವವರೆಗೂ ಜಾರಿಯಲ್ಲಿರುವುದು—ಗಂಡು ಮಗುವು ಹುಟ್ಟಿದರೆ ಆ ಮಗುವಿನೆಂಟು ವರ್ಷಗಳಾಗುವ ವರೆಗೂ ಪೋಷಿಸುವ ಭಾರವು ತಂದೆಯನ್ನೇ ಸೇರಿದ್ದು. ನನ್ಮಂತೆ ಹೆಂಡತಿ ಬೇಡವಾಗಿ, ಜೀವನಕ್ಕೇನೂ ವಾರ್ಗವಿಲ್ಲದೆ ಬಿಡುವ ಹಕ್ಕು ಅವರಿಗಿಲ್ಲ ಹೆಂಡತಿಯನ್ನು ಬಿಟ್ಟರೂ ಮಗನ ರಕ್ಷಣೆಗೆ ದ್ರವ್ಯಸಹಾಯ ಮಾಡಿಯೇ ತೀರಬೇಕು.

ವಿವಾಹ ವಿಚ್ಛೇದನ.

ಇವರಲ್ಲಿ ವಿವಾಹ ವಿಚ್ಛೇದನವು ಅತಿ ಸುಲಭವಾದ ಕೆಲಸ—ಇದಕ್ಕೆ ಒಂದು ರೂಪಾಯಿ ಕೂಡ ಖರ್ಚಿಲ್ಲ ಇದರಲ್ಲಿ ಮೂರರಲ್ಲೊಂದು ಪಾಲು ಖರ್ಚು ಮಾಡಿದರೆ ಸಾಕಾಗಿದೆ. ಇಬ್ಬರಲ್ಲೊಬ್ಬರು ತಮಗೆ ವಿವಾಹ ವಿಚ್ಛೇದನದಲ್ಲಿಚ್ಛೆಯಿದೆಯೆಂದರಾಯಿತು ಇಬ್ಬರೂ ಪ್ರತ್ಯೇಕ್ಷೆ ಹಾಜರಾಗಬೇಕಾದ್ದಿಲ್ಲ ಕೋರ್ಟಿಗೆ ಹಾಜರಾಗದೆ ಪತ್ರಮುಖಾಂತರ ತಿಳಿಸಬಹುದು.

ಗರ್ಭಿಣಿ ಸ್ತ್ರೀಯರು.

ಗರ್ಭಿಣಿಯರ ವಿಷಯದಲ್ಲಿ ಪ್ರಭುತ್ವದನೆರವು

ಟೆನ್ನಿಸ್ "ನಕ್ಷತ್ರಗಳು" (Tennis Stars)

ಶ್ರೀಮತಿ ಲೀಲಾ ರಾವ್ (ಡಾ ಆರ್ ರಾವ್, M. D. ಇವರ ಪುತ್ರಿ) ಮತ್ತು ಅವರ ತಾಯಿ
ಶ್ರೀಮತಿ ಕ್ಲಮಾ ರಾವ್, ಸಾರಸ್ವತ ಮಹಿಳೆಯರು ಇವರು ಒಂದು ಫ್ರೆಂಚ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಭಾಗ ತಕ್ಕಿಸಿದ್ದಾಕೆ

ಶ್ರದ್ಧೆಯನ್ನು ವಹಿಸುವರು. ಗರ್ಭಿಣಿ ಸ್ತ್ರೀಯರಿಗೆ ೫ನೆಯ ತಿಂಗಳ ನಂತರ ಪೂರ್ತಿ ಸಂಬಳದೊಡನೆ ನಾಲ್ಕು ತಿಂಗಳ ವಿರಾಮವು ಕೊಡಲ್ಪಡುವುದು. ಪ್ರಸವದಾದ ನಂತರ ತಾಯಿಗೂ ಹುಟ್ಟಿದ ಮಗುವಿಗೂ ಅವಶ್ಯಕವಾದ ಬಟ್ಟೆ ಬರೆಗಳೊ ಮೊದಲಾದ ವಸ್ತುಗಳಿಗಾಗಿ ಸರಕಾರದಿಂದ ನಲವತ್ತು ರೂಪಾಯಿಗಳು ಕೊಡಲ್ಪಡುವುದು. ಚಿಕ್ಕ ಮಗುವಿನ ತಾಯಿಗೆ ಕೆಲಸಮಾಡುವಾಗ ತಿಂಗಳೊಂದಕ್ಕೆ ಹನ್ನೆರಡು ರೂಪಾಯಿಗಳು ಹೆಚ್ಚು ಸಂಬಳವೂ ದಿನವೊಂದಕ್ಕೆ ಎರಡು ಘಂಟೆಗಳ ವಿರಾಮವೂ ಕೊಡಲ್ಪಡುವುದು. ನಮ್ಮ ದೇಶದ ಕೂಲಿ ಹೆಂಗಸರ ವಿಷಯದಲ್ಲಿ ನಿರಂತರ ಮಾಲೀಕರೂ ಪ್ರಜೆಗಳೂ ಪ್ರಭುತ್ವದವರೂ ತೋರಿಸುತ್ತಿರುವ ಧರ್ಮ—ನಿಷ್ಠುರತೆ—ಕಾರ್ಪಣ್ಯ—ನಿರ್ದಾಕ್ಷಿಣ್ಯತೆ—ಇವುಗಳನ್ನೂ ಆ ಪ್ರಭುತ್ವದವರ ವಿನಯ—ಸೌಜನ್ಯ—ಧಾರಾಳತೆ—ದಯೆ ಇವುಗಳನ್ನೂ ಹೋಲಿಸಿ ನಾವು ಮೊದಲು ನೋಡಿಕೊಳ್ಳಬೇಕು. ಶಿಕ್ಷಿತ ಸ್ತ್ರೀಪ್ರಪಂಚವು ಈ ಮಹಿಳೆಯರುನ್ನತಿಕೆಯ ಸಲುವಾಗಿ ಪಾಡುವಡಲು ಮುಂದಾಗಬೇಕು

ಅಕ್ರಮ ಪ್ರಜೆಗಳು.

ರಶ್ಯಾ ದೇಶದಲ್ಲಿ ಅಕ್ರಮ ಪ್ರಜೆಗಳೂ (ವಿವಾಹವಿಲ್ಲದ

ದಕ್ಷಿಣ ಹಿಂದೂಸ್ಥಾನದ ಒಂದು ಗೃಹಚಿತ್ರ

ರಂಗವಲ್ಲಿ ಹಾಕುವುದು.

ಜನಿಸತಕ್ಕ ಮಕ್ಕಳು) ಇರುವರು ಪ್ರಭುತ್ವದವರು ಇವರನ್ನು ಬೇರೆಯೆಂದೂ, ನ್ಯಾಯವಾಗಿ ಹುಟ್ಟಿದವರನ್ನು ಬೇರೆಯೆಂದೂ ಭಾವಿಸದೆ ಎಲ್ಲರಿಗೂ ಸಮನಾದ ಹಕ್ಕನ್ನು ದಯಪಾಲಿಸಿದೆ ವಿವಾಹವಿಲ್ಲದೆ ಮಗು ಹುಟ್ಟಿದರೆ ತಾಯಿಯು ಮಗುವಿನ ತಂದೆ ಇಂಥವನೆಂಬುದನ್ನು ಸರಕಾರಕ್ಕೆ ತಿಳಿಯಪಡಿಸಿ ಮಗುವಿನ ಪೋಷಣೆಗೆ ಬೇಕಾಗುವ ಧನವನ್ನು ಪಡೆಯಬಹುದು. ಒಂದು ವೇಳೆ ಮಗುವಿನ ತಂದೆಯು ತಾನು ತಂದೆಯಲ್ಲವೆಂಬುದನ್ನು ರುಜುಪಡಿಸಿದೆ ಹೋದ್ದಲ್ಲಿ ಮಗುವು ವರ್ಷಗಳ ವರೆಗಾದರೂ ಜೀವನಾಂಶವನ್ನು ಕೊಟ್ಟೇ ತೀರಬೇಕು ನಮ್ಮಲ್ಲಿ ಈ ರೀತಿಯಾದರೆ ಸ್ತ್ರೀಯರನ್ನು ಸಮಾಜದ ನಿಷ್ಕರುಣೆಗೆ ತೆಗೆದುಕೊಟ್ಟಂತಾವು ಸಭ್ಯರಿಂದು ಜಾರಿಕೊಳ್ಳುವರು ಆ ಸ್ತ್ರೀಯ ಗತಿಯನ್ನು ಕಲ್ಪಿಸುವುದು ಅಸಾಧ್ಯ ಸಮಾನ ಹಕ್ಕನ್ನು ಪಡೆದಿರುವ ದೇಶದಲ್ಲಿ ಪುರುಷರು ಸ್ತ್ರೀಯರನ್ನು ವಂಚಿಸಲಾಗದಂತೆ ತಡೆಯುವ ಇದೊಂದಿಸ್ತ್ರವು.

ಉಪಸಂಹಾರ.

ಇಷ್ಟೊಂದು ಕಾಯಿದೆ ಕಟ್ಟಳೆಗಳು ಪ್ರಚಾರದಲ್ಲಿದ್ದರೂ ಸ್ತ್ರೀ ಪುರುಷನ ಸಂಬಂಧವಾದ ನಡವಳಿಕೆಗಳನ್ನೂ ಒಂದು ಸ್ವಿಮಿತಕ್ಕೆ ಬಂದಿಲ್ಲ ಹಳೆಯ ಪದ್ಧತಿಗಳೂ ಕಾಯಿದೆಗಳೂ ಸಂಪೂರ್ಣವಾಗಿ ನಿರ್ಮೂಲವಾದವು ಹೊಸ ಪದ್ಧತಿಗಳನ್ನೂ ಜನರ ಮನಸ್ಸಿಗೆ ಅಂಟಿಲ್ಲ. ಅನೇಕವಾಗಿ ಸ್ತ್ರೀಪುರುಷರಿಬ್ಬರೂ ತಮ್ಮ ತಮ್ಮ ಇಷ್ಟ ಪ್ರಕಾರ ನಡೆಯುವರು. ಇದರ ಪರಿಣಾಮವೆ ಹೀಗೆಯೇ ಆಗುವುದೆಂದು ಹೇಳಲಾಗುವುದಿಲ್ಲ. ಇದೇ ಪದ್ಧತಿಯು ಕೆಲಕಾಲ ನೆಲಸಬಹುದು. ಅಥವಾ ಮತ್ತಾವುದಾದರೊಂದು ಪ್ರಭುತ್ವವು ನೆಲಸಬಹುದು,— ಈ ವಿಷಯವು ಹೇಗೇ ಇರಲಿ—ಏನೇ ಆಗಲಿ; ಸ್ತ್ರೀಯರು ದೇಶದ ಏಳಿಗೆಗೂ ಸ್ತ್ರೀವರ್ಗದುನ್ನತಿಗೂ ಜನಾಂಗದ ಮೇಲ್ಮೆಗಾಗಿ ಮಾಡುತ್ತಿರುವ ಮಹತ್ಕಾರ್ಯಗಳನ್ನು ನಮ್ಮ ದೇಶದ ಮಹಿಳಾಸಂಘಗಳೂ ಮಾನ್ಯ ನೇತಾರಿಯರೂ ಅನುಕರಿಸಬೇಕಾಗಿದೆ ಅತ್ಯವಶ್ಯಕವು.

ಸತ್ಯಾಗ್ರಹ ಸಮರಾಂಗಣದಲ್ಲಿ ಹಿಂದೀ ವೀರಾಂಗನೆಯರು

ಬರೆದವರು: ಸತ್ಯಾಗ್ರಹಿ

ಸ್ವಾತಂತ್ರ್ಯ ಸಂಗ್ರಾಮದ ಚಳವಳಿಯ ಇತಿಹಾಸವನ್ನು ಬರೆಯುವುದಾದರೆ, ದೇಶದಲ್ಲಿ ಸ್ತ್ರೀಯರು ಆ 1930ನೇ ಇಸವಿಯ ಚಳವಳಿಯಲ್ಲಿ ತಳೆದಿಕೊಂಡ ಭಾಗವು ಅತಿ ಮಹತ್ವದ ಪ್ರಕರಣಂ ತೇಜಸ್ಸಿನ ಸಂಚಿಕೆಯಾಗಿ ಕಂಡು ಬರಲಿರುವುದು. ಜನಾಂಗವು ಇನ್ನು ಸ್ವಲ್ಪ ಉಚ್ಚಿಷ್ಟವನ್ನು ಹೊಂದಿಲ್ಲ; ಮತ್ತು ಸ್ವರಾಜ್ಯವನ್ನು ಹೊಂದುವ ದೊಡಲು ಕಳೆದ ಬಾರಿಯದ ಕ್ಕಿಂತಲೂ ಕಠಿಣವಾದ ಕಷ್ಟ ಸಹನೆಗಳನ್ನು ಅನುಭವಿಸುವ ಅವಶ್ಯಕತೆಯು ಉಂಟಾಗಬಹುದು. ಆದರೆ, ಹಿಂದೀ ಜನಾಂಗದ ಅಂತಹ ಪರೀಕ್ಷಾ ಕಾಲವು ಇನ್ನಿಂದಿಗೂ ಬಾರಿ ಒದಗುವುದಾದರೆ, ಅದರಲ್ಲಿ ಹಿಂದೀ ಸ್ತ್ರೀಯರು ಮತ್ತು ದೆಹಲಿಯ ಯಜ್ಞೋಪಾರ್ಜಿತವಾದ ಭಾಗವನ್ನು ನಹಿಸುವ ದೆಂಬಲ್ಲಿ ಸಂದೇಹವಿಲ್ಲ.

ಕಳೆದ ವರ್ಷ ಹಿಂದೀ ಸ್ತ್ರೀ ವರ್ಗವು ತೋರಿಸಿದ ಶಕ್ತಿ, ಸಹನಾಶೀಲತೆ, ದೇಶ ಭಕ್ತಿ ಇವುಗಳು ಹಿಂದೀಯ ಪುರುಷರ ಕಣ್ಣನ್ನು ತೆರೆದುದು ದಿಟವಲ್ಲದೆ, ಇದೀ ಲೋಕಕ್ಕೆಲ್ಲಾ ಹಿಂದೀ ಸ್ತ್ರೀಯರ ಮಹತ್ವಕೆಯನ್ನು ಸಾರಿದೆ.

ಹಿಂದೀ ಸ್ತ್ರೀಯರೆಂದರೆ ತಮ್ಮ ಮನೆಯ ಹೊರಗಿನ ಪ್ರಪಂಚದಲ್ಲಿ ನಡೆಯುತ್ತಿರುವ ಚಳವಳಿಗಳ ಕಡೆಗೆ ಅಲಕ್ಷ್ಯ ದಿಂದಿರುವ, ಮೂಢ ಭಕ್ತಿಯಲ್ಲಿಯೂ ಅಜ್ಞಾನದಲ್ಲಿಯೂ ಅಲಿತಿರುವ, ನಿರಂತರ ಮನೆಗೆಲಸದ ನಿರುತ್ಸಾಹದಲ್ಲಿಯೇ



ಉಪ್ಪಿನ ಕಾಯಿದೆಭಂಗ - ಮಳ್ಳಕ ಇನ್ಸಾಪೆ

ಬೆಳೆಯುತ್ತಿರುವ ಗೃಹದಾಸಿಯೆಂದು ಹೊರಗಿನ ಇದೀ ಲೋಕಕ್ಕೆ ಒಂದು ಕುರುಹಾಗಿದ್ದಳು. ಆದರೆ ಈ ತಿರಸ್ಕಾರ ಪೂರ್ಣವಾದ ತಪ್ಪು ಗ್ರಹಿಕೆಯನ್ನು ಹಿಂದೀ ಸ್ತ್ರೀಯರು ತಾವಾಗಿಯೇ ನಿರ್ಮೂಲಿಸಿ, ಈಗ ಇದೀ ಲೋಕವು, ಸಾಮ್ರಾಜ್ಯದರ್ಪಪೂರ್ಣವಾದ ಬ್ರಿಟಿಷ ಜನಾಂಗವು ಕೂಡ, ಹಿಂದೀ ಸ್ತ್ರೀಯರೆಂದರೆ, ಇನ್ನು ಮುಂದೆ ಲೋಕವು ಅಲಕ್ಷಿಸಲಾಗದ ಒಂದು ಮಹಾನ್ ಶಕ್ತಿಯೇ ಆಗಿರುತ್ತದೆ ಎಂದು ತಿಳಿದಿರುವರು. ದರ್ಪೋನ್ಮತ್ತ ಬ್ರಿಟಿಷಸಾಮ್ರಾಜ್ಯದ ಪ್ರಧಾನ ಮಂತ್ರಿಯೇ ಈ ತರ್ಪದ ಅಧಿಪತ್ಯಲ್ಲಿ, ಹಿಂದೀ ಸ್ತ್ರೀತ್ವದ ಮತ್ತು ಯುವಕರ ಅತ್ಯ ಶಕ್ತಿಯ ಮುಂದೆ ಇಂಡಿಯದಲ್ಲಿ ಬ್ರಿಟಿಷ ಸರಕಾರದ ಕೈಯೆಳಗಿದ್ದ ಪ್ರಬಲ ದಬ್ಬಾಳಿಕೆಯ ಕಸ್ತ್ರಗಳೆಲ್ಲವೂ ಪರಿಣಾಮಕಾರಿಯಾಗದೆ ಹೋಗಿವೆ ಎಂದು ಇದೀ ಲೋಕದ ಎದುರಿಗೇನೇ ಸಾರಿರುತ್ತಾರೆ.

ಹಿಂದೀ ಸರಕಾರದ ದಬ್ಬಾಳಿಕೆಯ ಕಟ್ಟಳೆಯ ಅನಹಾರುತೆಗೆ ಕಾರಣವಾದುದು 60,000 ವೀರ ತರುಣರನ್ನು ಜೈಲಿನೊಳಗೆ ದುಷ್ಟಿಟ್ಟ ಕೃತ್ಯದ ಜೇಯರೂಪದ ಅನುಭವವಲ್ಲದೆಂದೂ, ಯುದ್ಧರಂಗದಲ್ಲಿ ಶತ್ರುವಿನ ಆಂಕ್ಷೆಪವಾಗಿ ಬಂದ ಹಿಂದೀ ಜನಾಂಗದ ಅತ್ಯದೊಳಗಿನ ಅತ್ಯಂತ ದವಿತ್ರವು, ಉದಾತ್ತವು, ಶಕ್ತಿಮಾನವು ಆದ ಆ ಸ್ತ್ರೀತ್ವವೇ ಹಿಂಸೆಯನ್ನು ಅಹಿಂಸೆಯಿಂದ ಪರಾಜಯಪಡಿಸಿಕೊಂಡೂ ಸೃಷ್ಟವಾಗಿ ಒಡಮೂಡಿ ಕಾಣುವುದು. ಮಾತೆಯ ಯಜ್ಞಶಕ್ತಿಯಲ್ಲಿ ಸಾವಿರಗಟ್ಟಲೆಯಲ್ಲಿ ಅತ್ಯ ಬಲಿಯನ್ನೆಯಿಟ್ಟಿದ್ದ ಭಾರತ ತತ್ತರ ಕೃಷ್ಣವು ಅಳರಸರನ್ನು ವಿಚಲಿಸಲಿಲ್ಲ; ಆದರೆ ತಮ್ಮ ಪ್ರಿಯತಮ ಮಕ್ಕಳನ್ನು ಸಹಿತವಾಗಿ ತಮ್ಮ ಸರ್ವಸ್ವವನ್ನು ತಮ್ಮ ದೇಶ ಕ್ಕಾಗಿ ಬಲಿಯೀಯಲು ದೇಶದಲ್ಲಿ ಲ್ಲಿಯೂ ಸಾವಿರಗಟ್ಟಲೆಯಲ್ಲಿ ತಯಾರಾಗಿ ಮುಂದೆ ಬಂದ ನಿರಸ್ತ್ರಹಿಂಗ ಸರು ಮಕ್ಕಳ ಮೇಲೆ ಹಿಂಸಾತ್ಮಕ ತೈಗಳನ್ನಿಕ್ಕುವ ಅವಶ್ಯಕತೆಯು ಸರಿಯಾಗಿ ಉಂಟಾದುದೇ-ಮನಸ್ಸಿನಲ್ಲಿ ವಶ್ಚಾತ್ತಾಪವನ್ನೂ ಭಯವನ್ನು ಉಂಟುಮಾಡುವ ಈ ಕೃತ್ಯದ ಅವಶ್ಯಕತೆಯೇ-ಬ್ರಿಟಿಷ ಅಳರಸರಲ್ಲಿ ಗಲಿಬಲಿಯನ್ನುಂಟುಮಾಡಿ ರಾಜೀ ಪ್ರಸ್ತಾವಕ್ಕೆ ಅವರನ್ನು ನತ್ತಾಯ ಪಡಿಸಿತು.

ದೇಶಸೇವಕಿಯರ ಮೇಲೆ ಪೋಲೀಸ ಬಲಾತ್ಕಾರ

"ಹಿಂದೀ ಮಹಿಳೆಯರು ಸತ್ಯಾಗ್ರಹದಲ್ಲಿ ಮಾಡಿದ ಸಾಹಸಗಳ ಚರಿತ್ರೆಯು, ಇದೀ ಭೂಲೋಕದ ತಳುವಳಿಕೆಯಲ್ಲಿ ಇದೆ. ಅವರು ಹಲವು ಯತ್ನೀ ಕೆಲಸಗಳನ್ನು ಮಾಡಿರುವರು. ಒಂದೇ ತಿಂಗಳ ಉತ್ಸಾಹದಲ್ಲಿ ಅವರು ತಮ್ಮ ಧರ್ದಯನ್ನಿಗೆದು ಬಿಟ್ಟರು; ತಮ್ಮ ಮಕ್ಕಳನ್ನು ಬಲಿಯಿತ್ತರು; ತಮ್ಮ ಪತಿಗಳನ್ನು ಬಲಿ ಕೊಟ್ಟರು; ನಿಜವಾಗಿ ನೋಡಿದರೆ ಅವರು ಮಾಡದ ದುದೇನೂ ಇಲ್ಲ. ಅವರು ಗುಂಡುಗಳನ್ನೂ ಎದುರಿಸಿರುವರು. ಅವರು ಅತ್ಯಂತ ಧೈರ್ಯವನ್ನು ತೋರಿಸಿರುವರು. ಅವರು ಹಿಂದೂಸ್ಥಾನದ ಎತ್ತರವನ್ನು ಮೂರು ನಾಲ್ಕು ಅಂಗುಲದಷ್ಟಾದರೂ ಏರಿಸಿರುವರು. ಮತ್ತಿನ್ನೂ ಏರಿಸಲು ಮಾತುಕೊಟ್ಟಿರುವರು" ಎಂದು ಮಹಾತ್ಮಾಜೀಯವರು ತಮ್ಮ ಬಿಡುಗಡೆಯ ನಂತರ ಹೇಳಿದರು.

ನಿಜವಾಗಿಯೂ ಮಹಾತ್ಮಾಜಿಯವರು ಅಂದಂತೆ ಕಳೆದ ವರ್ಷದ ಅವರ ಅತಿತಯದಾದ ಧೈರ್ಯ ದಿಂದಲೂ ಆತ್ಮಯಜ್ಞದಿಂದಲೂ ಹಿಂದೀ ಮಹಿಳೆಯರು ತಮಗೇನೇ ಯತಸ್ಸನ್ನು ತಂದುಕೊಂಡುದಲ್ಲದೆ ಇದೀ ಜನಾಂಗಕ್ಕೇನೇ ನಾಗರಿಕ ಲೋಕದ ಅಭಿಪ್ರಾಯದಲ್ಲಿ ಗೌರವವನ್ನು ತಂದಿರುವರು.

ಈಗ, ಮನೆಸ್ಸಿಗೆ ಆನಂದವನ್ನುಂಟುಮಾಡುವ ಅವರ ಯುವರ ಮುಂದಾಳುತನದಲ್ಲಿಯೂ ಮುಂಬಾಯಿ ಪಲುವ ಯುವತಿಯರು ಸತ್ಯಾಗ್ರಹರಂಗದಲ್ಲಿ ಇಳಿದುದು ಕಂಡು ಬಂದಿತು. ಕಮಲಾದೇವಿಯವರು ತನ್ನ ಅನುಯಾಯಿಗಳನ್ನೂ ಅಳರಸರ ಉಲ್ಲಂಘನೆಯಲ್ಲಿ ತಯಾರಿಸಿದ ಉಪ್ಪನ್ನೂ ಪೋಲೀಸರ ಕ್ರೂರವಾದ ಕೈಗಳಿಂದ ರಕ್ಷಿಸಲಿಕ್ಕೆ ಸಿಂಹಿಣಿಯು ತನ್ನ ಮರಿಗಾಗಿ ಕಾದಾಡುವಂತೆ ಕಾದಾಡಿದರು. ಪೋಲೀಸರ ರಕ್ತತೃಷಿತ ಲಾಠಿಗಳು ಸ್ವಯಂ ಸೇವಕರ ತಲೆಯೊಡೆಯುತ್ತಿದ್ದಾಗ, ಅವರು ಆ ಹೊಡೆತಗಳ ಮಧ್ಯದಲ್ಲಿಯೇ ಇದ್ದರು. ಅವರ ಮತ್ತು ಅವಂತಿಕಾಬಾಯಿಯವರ ವೀರತೆಯು ಕೆಲವೇ ಸಮಯದಲ್ಲಿ ಪ್ರತಿಫಲವನ್ನು ಹೊಂದಿತು; ಇಬ್ಬರು ತಮ್ಮ ಚಟುವಟಿಕೆಗಳಿಂದ ಕಠಿಣೂ ಯ್ಕಲ್ಪಟ್ಟು ಜೈಲಿನಲ್ಲಿ ಮುಚ್ಚಲ್ಪಟ್ಟರು. ಆ ಮೇಲೆ ಒಬ್ಬರ ಮೇಲೊಬ್ಬರಾಗಿ ಬೇಗ ಬೇಗನೆ ಅದೇ ಉತ್ಸಾಹೀ ವೀರ ಮಹಿಳೆಯರು ಸತ್ಯಾಗ್ರಹ ರಂಗದಲ್ಲಿಳಿದು ಸರಕಾರದ ಉಲ್ಲಂಘನೆಯನ್ನು ತೋರಿಸಿ ದೇಶದೊಳಗಿನ ಅನ್ಯಾಯದ ಕಾಯಿದೆಗಳ ಸಾಮುದಾಯಿಕ ಅವಿಧೇಯತೆಯನ್ನು ನ್ಯವಸ್ಥೆಗೊಳಿಸಿದರು.

ಹಾಗೆಯೇ ಧಾರಸನದ ಉಪ್ಪಿನ ಕೋಟೆಯ ಮೇಲಿನ ಧಾಳಿಯಲ್ಲಿ ಮಹಾತ್ಮಾಜೀಯವರ ನಂತರ ಹಣ್ಣು ವೃದ್ಧಾವ್ಯ ದಲ್ಲಿದ್ದ ಅಬ್ಬಾಸ್ ತ್ಯಾಬ್ಜಿಯವರು ಮುಂದಾಳುತನವನ್ನು ವಹಿಸಿ ಕೈದು ನೂರಾಲ್ವತ್ತು ಮೇಲೆ ಅವರನ್ನನುಸರಿಸಿ ಮುಂದೆ ಬಂದವರು ಶ್ರೀಮತಿ ಸರೋಜಿನಿಯವರೇ.

ಈ ಸಂದರ್ಭದಲ್ಲಿ ಸರಕಾರವು ಅತ್ಯಂತ ಹೇಯ ಕೃತ್ಯ ಗಳನ್ನು ನಡೆಸಿತು. ಇದರಿಂದ ಹಿಂದೀಯ ಸ್ತ್ರೀಬಲವು ಎದೆ ಗುಂದಲಿಲ್ಲ. ಗುಜರಾತಿನ ಮಹಿಳೆಯರೆಲ್ಲರೂ ಒಂದಾಗಿ ಈ ಪ್ರಚಂಡ ಚಳವಳದ ಕಷ್ಟ ಸಹನೆಗಳನ್ನೆದುರಿಸಿದರು.



ಮುಂಬಾಯಿಲ್ಲಿ ಕಳೆದ ಜೂನ್‌ನಲ್ಲಿ ಸೇರಿದ ಕ್ಷತ್ರಿಯ (ಉತ್ತರ ಮತ್ತು ಪಶ್ಚಿಮ ಕ್ಷತ್ರಿಯ) ಮಹಿಳೆಯರ ಸಭೆ. ಒಳಗಿನ ಚಿತ್ರದಲ್ಲಿ ಶ್ರೀಮತಿ ಉಮಾಬಾ ಕುಂದಾಪುರ ಮತ್ತು ಶ್ರೀಮತಿ ಕಮಲಾದೇವಿಯವರು ಕಾಣುತ್ತಾರೆ.

ಹೆಂಗಸರು ಮುಂದೆ ಬಂದಾಗ ಮಕ್ಕಳಾದರೂ ಹಿಂದೆ ನಿಲ್ಲಲಿಲ್ಲ, ಆ ಮೇಲೆ ಮುಂಬಾಯಿ ಪ್ರಾಂತ್ಯದಲ್ಲೆಲ್ಲಿಯೂ ಈ ಮಕ್ಕಳ ದಳವು ವಾನರ ಸೇನೆಯ ಹೆಸರಿನಿಂದ ಮುಂದೆ ಬಂದಿತು. ಮುಂಬಾಯಿಯಲ್ಲಿ ಮಾತ್ರವಲ್ಲ; ಸಂಜಾಲ, ಬಂಗಾಳ, ಕರ್ನಾಟಕ, ಆಂಧ್ರ, ಪ್ರಾಂತ್ಯಗಳಲ್ಲಿಯೂ ಹೆಂಗಸರು ಹಿಂದೆ ನಿಲ್ಲಲಿಲ್ಲ. ನಿಜವಾಗಿಯೂ ಹಿಂದೀ ಮಹಿಳೆಯರು ಮಧ್ಯದಂಗಡಿಗಳ ಪಹರೆ, ವಿದೇಶಿ ವಸ್ತ್ರದಂಗಡಿಗಳ ಪಹರೆ, ಇತ್ಯಾದಿ ಕಾರ್ಯಕ್ರಮಗಳಲ್ಲಿ ಧೈರ್ಯದಿಂದ ಅಡಿಯಿಟ್ಟಿದ್ದಲ್ಲವಾದರೆ, ಸತ್ಯಾಗ್ರಹವು ಈ ಚಳವಳದಲ್ಲಿ ಸರೋಜಿನಿದೇವಿ, ಕಮಲಾದೇವಿ, ಹಂಸ ಮೇಥಾ, ಕೃಷ್ಣಾಬಾಯಿ ನಿಕರೆ, ಕೃಷ್ಣಾಬಾಯಿ ನಿಕರೆ, ಜಾಯ್ಸ್ ಸೋಕರಿಯರು ನೆಹರೂ ಎಂದಾದಿ ವಿದ್ಯಾವಂತೆಯರು ಮಾತ್ರವೇ ಅಲ್ಲ; ಅವಿದ್ಯಾವಂತೆಯರನ್ನೆಳೆಯುವುದರಲ್ಲಿ ಈ ಚಳವಳದಲ್ಲಿ ಅಂತರಾಷ್ಟ್ರೀಯ

ಪುಟ್ಟ ಗಾಂಧಿ

ಲೇಖಕಿ:—ಶ್ರೀ ಟಿ. ಎಸ್. ಸಾವಿತ್ರಿ.

ಒಂಟಹ ಉಲ್ಲಾಸಕ ಸೊಬಗು! ಶಾಂತಿಪುರವು ಚಿಕ್ಕ ಹಳ್ಳಿಯಾದರೂ ಅಲ್ಲಿ ಪ್ರಕೃತಿಯು ವಿಸ್ತರಿಸಿರುವ ಸೌಂದರ್ಯವನ್ನು ನೋಡಿದರೆ ಅದರ ರಚಯಿತನ ನೆನಪಾಗದೆ ಇರುತ್ತಿರಲಿಲ್ಲ. ಮರ ಮಂಸುದ ಸುಂದರವಾದೊಂದು ಹಳ್ಳವು ಕಲ್ಲುಗಳ ಮಧ್ಯದಲ್ಲಿ ತನ್ನ ಕಲರವದ ಗೀತವನ್ನೆಬ್ಬಿಸುತ್ತ ಹರಿಯುತ್ತಿದ್ದಿತು ಬದಿಯಲ್ಲಿ ಗುಲಾಬಿ ಗಿಡಗಳೂ ಬಳ್ಳಿಗಳೂ ಸಾಲುಗಟ್ಟಿದ್ದುವು, ಎಲ್ಲೆಲ್ಲಿಯೂ ನಿಶ್ಶಬ್ಧತೆಯು ನೆಲೆಗೊಂಡಿದ್ದುದು ಆ ಹಳ್ಳಿಗೆ ಶಾಂತಿಪುರವೆಂಬ ಹೆಸರು ಅನ್ವರ್ಥಕವಾಗಿಯೇ ಬಂದಿದ್ದಿತು ಸಕಾಲದ ಮಳೆ, ದೃಢಕಾಯವಾದ ದನಕರುಗಳು, ಉತ್ತಮ ಆರೋಗ್ಯ, ಇವುಗಳೊಡನೆ ಹಳ್ಳಿಗರು ತೃಪ್ತ ಮನಸ್ಸಿನವರಾಗಿದ್ದರು ಊರಿನ ಮುನಸೀಫ್—ಅವನೇ ಊರಿನ ದೊಡ್ಡ ಮನುಷ್ಯನಾಗಿದ್ದನು—ಅನ್ತಃಪುರ ಕಡೆಯ ಆ ಗೋಪಾಲನ ವರೆಗೆ ಎಲ್ಲರೂ ಗೇದು ಸುಖಿಸುತ್ತಿದ್ದರು ಮೈಗಳ್ಳರು ಅಲ್ಲಿರಲಿಲ್ಲ

ಆದರೆ ದೇಶವನ್ನೇ ಜಾಗರಿಸಿಬಿಟ್ಟಿದ್ದ ಆ ರಾಷ್ಟ್ರೀಯ ಚಳವಳಿಯ ಈ ಶಾಂತತೆಯಲ್ಲಿಯೂ, ಈ ತೃಪ್ತಿಯಲ್ಲಿಯೂ ಪ್ರವೇಶಿಸದೆ ಬಿಡಲಿಲ್ಲ ಹಳ್ಳಿಯು ಚಿಕ್ಕದಾಗಿದ್ದರೂ, ಉತ್ಸಾಹವು ಚಿಕ್ಕುದಾಗಿರಲಿಲ್ಲ, ಇದೀ ಹಿಂದೂಸ್ತಾನವೇ ಸ್ವಾತಂತ್ರ್ಯ ಸಾಧನೆಗಾಗಿ ಸೊಂಟಗಟ್ಟಿದಾಗ ನಮ್ಮೂ ಚಿಕ್ಕ ಶಾಂತಿಪುರವೂ ತನ್ನ ಚಿಕ್ಕ ಭಾಗವನ್ನು ವಹಿಸಿಕೊಂಡಿತು ಅದರೆ ಇದೀ ದೇಶದ ಕಿವಿಗೆ ಮಾತೃಕರೆಯು ಮಹಾತ್ಮಾ ಗಾಂಧಿಯವರಿಂದ ಉಸುರಲ್ಪಟ್ಟಿದ್ದಾದರೆ, ಈ ಚಿಕ್ಕ ಹಳ್ಳಿಗೊಬ್ಬ ಚಿಕ್ಕ ಗಾಂಧಿಯೇ ಈ ಕರೆಯನ್ನುಸುರಿದನು

ಆ ಹಳ್ಳಿಯಲ್ಲಿತ್ತೊಂದು ಸಣ್ಣದಾದ ಗ್ರಾಮಮುನಸೀಫ ಕೋರ್ಟು, ಆಫೀಸೆಂಬ ಗೌರವದ ಹೆಸರಿನದು ಬೇರೆ ಏನೂ ಅಲ್ಲಿರಲಿಲ್ಲ ಹಳ್ಳಿಯ ಮುನಸೀಫನೇ ಅಲ್ಲಿಯ ಮುಖ್ಯಾಧಿಕಾರಿ, ಸಮ್ರಾಟನ ಏಕ ಮಾತ್ರ ಪ್ರತಿನಿಧಿ ರಾಮುವು ಅಲ್ಲಿಯ ಒಬ್ಬ ಗುಮಾಸ್ತ ಗುಮಾಸ್ತನ ತಲೆಬರೇ ಹದಿನೈದೇ ರೂಪ್ಯಾಯಾದರೂ, ತನ್ನ ಹೆ-ಡತಿ ರುಕ್ಮಿಣಿಯನ್ನು ತನ್ನದೊಬ್ಬ ಚಿಕ್ಕ ಮಗು ಕೃಷ್ಣಕುಮಾರ ಇವರೊಡನೆ ಅವನು ಸಂಸಾರವನ್ನು ಸುಖವಾಗಿಯೇ ಸಾಗಿಸುತ್ತಿದ್ದನು

ರಾಮೂವು ನಿತ್ಯದ ಪತ್ರಿಕೆಗಳನ್ನೋದಿ ದೇಶದ ಸಮಾಚಾರಗಳನ್ನು ತಿಳಕೊಳ್ಳುತ್ತಿದ್ದನು ಪತ್ರಿಕೆಗಳಿದರೆ ಹಲವೆಲ್ಲ, ಬರುತ್ತಿತ್ತು ಆ ಕೋರ್ಟಿಗೆ ಒಂದೇ ಒಂದು ದೇಶದಲ್ಲಿ ಏಳಿದು ಏಳಗುತ್ತಿದ್ದ ರಾಷ್ಟ್ರೀಯಶಕ್ತಿಯ ತೇಜಸ್ಸು ಅವನಲ್ಲಿ ಪ್ರತಿಫಲಿಸಲಾರಂಭಿಸಿತು ತಮ್ಮ ಸಮಸ್ತವನ್ನೂ ಬಲಿಕೊಟ್ಟು, ಕಷ್ಟಗಳನ್ನು ಸಹಿಸುತ್ತಿದ್ದ ಸತ್ಯಾಗ್ರಹಿಗಳ ಕಥೆಗಳನ್ನೋದಿದಂತೆ ಅವನಿಗೆ ಆಗಾಗ ಒಂದೆರಡು ಕಂಬನಿಗಳುದುರುವುದೂ ಇತ್ತು ರಾಮುವಿನೊಳಗಿದ್ದ ಆ ಚಿಕ್ಕ ದೀಪ್ತಿಕೆಯೂ ಪ್ರಜ್ವಲಿಸಲಾರಂಭಿಸಿತು ಆದರೆ ಆ ತನ್ನ ಪ್ರೇಮದ ರುಕ್ಮಿಣಿಯನ್ನೂ, ಆ ಚಿಕ್ಕ ಕಿಟ್ಟುವನ್ನೂ ಎಲ್ಲಿ ಬಿಡಲಿ? ರಾಮೂವಿಗೆ ತ ದೆತಾಯಿಗಳಿರಲಿಲ್ಲ, ರುಕ್ಮಿಣಿಗೂ ಹಾಗೆಯೇ ರುಕ್ಮಿಣಿಯು ತನ್ನ ಸೋದರತ್ತೆಯ ಮಗಳು, ಅವಳ ತಾಯಿಯು ಮೃತಿಯನ್ನೈದುವ ಸಮಯದಲ್ಲಿ ರಾಮೂವಿನ ತಂದೆಯು ರುಕ್ಮಿಣಿಯನ್ನು ಸ್ವ ಜ್ಞಾಕೆಯಲ್ಲಿ ಪಡೆದು, ತನ್ನ ಸೊಸೆಯಾಗಿ ಮಾಡುವುದಾಗಿ ಮಾತು ಕೊಟ್ಟಿದ್ದನು ಮದುವೆಯಾದ ಕೆಲಕಾಲದಲ್ಲಿ ರಾಮೂವಿನ ತಂದೆಯೂ ತೀರಿಹೋದನು ಈಗಿರುವುದು ಲೋಕದಲ್ಲಿ, ಅವರಿಬ್ಬರೇ, ಮತ್ತು ಕಿಟ್ಟು ಕಿಟ್ಟುವಿಗೆ ಈಗ ಏಳು ವರ್ಷ, ಮುಂಗುರುಳಿಂದಲೂ, ಸ್ಫುರಿಸುವ ಕಣ್ಣುಗಳಿಂದಲೂ ಅವನ ಮುಖವು ಸುಂದರವಾಗಿದ್ದಿತು ಅವನೊಬ್ಬನೇ ರಾಮೂ ಮತ್ತು ರುಕ್ಮಿಣಿಯ ಸಮಸ್ತವಾಗಿದ್ದನು, ಅವರ ಅಭಿನೂನದ ಏಕಮಾತ್ರ ವಿಷಯ. ತಾನು ಇವರನ್ನು ಬಿಟ್ಟು ಹೋದದೆ ಇವರಿಗೆ ಗತಿಯೇನು? ಅದನ್ನಿನೆಸುವುದು ಕೂಡ ಅವನಿಗೆ ಕಷ್ಟವಾಯಿತು.

ದಿನಗಳು ವಾರಗಳಾದುವು, ವಾರೆಗಳು ತಿಂಗಳುಗಳಾದುವು, ಸತ್ಯಾಗ್ರಹವು ಎಂದಿನಂತೆಯೇ ನಡೆಯುತ್ತಲಿತ್ತು; ಕೈದುಗಳು ಹೆಚ್ಚುತ್ತಲೇ ಇದ್ದುವು, ಹೆಂಗಸರು ಕೂಡ;—ಒಬ್ಬಿಬ್ಬರಲ್ಲ—ನೂರಾರು- ಧುರೀಣರೆಲ್ಲರೂ ವೀರ್ಯಕಾರಾವಾಸದ ಮೂಲಕ ಜನ್ಮವೇ ತೀರಿಸಲ್ಪಟ್ಟರು ರಾಮೂವಿಗೆ ಸಹಿಸಲಾಗಲಿಲ್ಲ ದೇಶದ ಕರೆಯನ್ನು ಲಕ್ಷಿಸುತ್ತ, ಬಂಧನದ ಅವಮಾನವನ್ನು ಚಿಂತಿಸುತ್ತ ರಾಮೂವಿಗೆ ರಾತ್ರಿ ನಿದ್ದೆಯೇ ಬೇಳಲಾರದು. ರುಕ್ಮಿಣಿಗೆ ಗಂದನಲ್ಲೇನೊ ಬದಲಾವನೆ ತೋರಿತು; ಹಿಂದಿನ ಆ ಸುಖವು ಅವನಲ್ಲಿ ಈಗ ಇರಲಿಲ್ಲ. 'ದೇಹಾಲಸ್ಯವೇನು?' ಎಂದು ರುಕ್ಮಿಣಿಯು ಚಿಂತೆ ನಟ್ಟು ಕೇಳಿದರೆ—"ಅದೇನಿಲ್ಲ; ದೇವರಿದ್ದಾನೆ" ಎಂದುತ್ತರವನ್ನೇ ಒಗಟಿನ ರೂಪದಲ್ಲಿ ಅವನು ಹೇಳುತ್ತಿದ್ದನು ಆದರೆ ಅವನು ದಿನೇ ದಿನೇ ಕೃಶವಾಗುವುದನ್ನೂ, ಚಿಂತಾಕ್ರಾಂತನಾಗುತ್ತಿದ್ದುದನ್ನೂ ನೋಡಿ ರುಕ್ಮಿಣಿಯು ಏನೋ ಮನಸ್ಸಿನಲ್ಲಿ ಭಾರವೊಂದಿರಬೇಕೆಂದು ಊಹಿಸುತ್ತಿದ್ದಳು

ಜೈಲಿನಿಂದ ಬಿಡುಗಡೆಯಾದ ಮುಂದಾಳುಗಳನ್ನು ಪುನಃ ಕೈದು ಮಾಡಿದ ವರ್ತಮಾನವು ಪತ್ರಿಕೆಗಳಲ್ಲಿ ಬಂದವು ರಾಮೂವಿಗೆ ಇನ್ನು ಸಹಿಸಲಾಗಲಿಲ್ಲ ರಾತ್ರಿಯು ನೀರವ, ಪ್ರಶಾಂತ, ಆ ಜೆಂದುಟಿಗಳ ಮಧ್ಯದಲ್ಲಿನ ಮಧುರವಾದ ದೈವೀನಗುವಿನೊಡನೆ ಕಿಟ್ಟುವು ನಿದ್ರಾಧೀನ, ದಿನ ನಿತ್ಯದ ಕೆಲಸಗಳ ಪರಿಶ್ರಮದ ಆಯಾಸದಲ್ಲಿ ರುಕ್ಮಿಣಿಯು ನಿದ್ರಾವಶಳು ರಾಮೂವು ಧೈರ್ಯ ಮಾಡಿದನು ಈ ದಿನ ಹೋಗುವುದು ನಿಶ್ಚಯ ಹೆಂಡತಿ ಮಕ್ಕಳನ್ನು ತೊರೆದ ಪಾಪವು ತನ್ನನ್ನಂಟಿಸದೇ? ಆದರೆ ಮಾತೆಯ ಕರೆಯು ದೊಡ್ಡದು ಈ ದಿನ ಅದು ಮತ್ತೂ ಗಂಭೀರವಾಗಿದೆ ಆದರೆ—ಹಾ—ಈ ತನ್ನ ಪ್ರೇಮೌಧಿಕಾಂಗಳಿಗೆ ಹೇಗೆ ವಿದಾಯವನ್ನುಸಿಯಲಿ ಇಲ್ಲ, ಕಾನೂ ಪುಕ್ಕಿಯಾಗೆನು- ಈ ಅಗಲುವಿಕೆಯು ಸಹಿಸಲಸಾಧ್ಯವಿದೆ, ಆದರೆ ತಾನು ಹೋದರೆ ದೇವರು ಅವರನ್ನು ಆಶೀರ್ವದಿಸುವನು ರಾಮೂವು ಹಾಸಿಗೆಯ ಮೇಲೆದ್ದು ಕುಳಿತನು ಪಾರ್ಶ್ವದಲ್ಲಿ ಮಲಗಿದ್ದ ಸ್ಥಿತಿಯನ್ನು ನೋಡಿದನು, ಪುನಃ ಅವನ ಧೈರ್ಯವು ಕುಂದಿತು ಅವನು ಕಣ್ಣುಗಳನ್ನು ಮುಚ್ಚಿದನು—' ದೇವ, ನನ್ನಲ್ಲಿ ಕರುಣೆಸು, ನನಗೀ ಪರೀಕ್ಷೆಯ ಸಮಯದಲ್ಲಿ ಶಕ್ತಿಯನ್ನೂ ಧೈರ್ಯವನ್ನೂ ನೀಡು,'' ಎಂದನು ಕಣ್ಣನ್ನು ತೆರೆದನು ಕಿಟ್ಟುವಿನ ಆ ನಿರ್ಮಲ ನಗು ಅವನು ಮೆಲ್ಲನೆ ಬಗ್ಗಿ ಆ ಚಾಲನ ತಲೆಯನ್ನು ಮುತ್ತಿಟ್ಟನು

* * * * * *

ಅವನು ತನ್ನೆದೆಯನ್ನು ಕಲ್ಲು ಮಾಡಿದನು ಮನಸ್ಸನ್ನು ಸ್ಥಿರಗೊಳಿಸಿದನು ಮೆಲ್ಲನೆ ಮನೆ ಬಿಟ್ಟು ಹೊರಗಿನ ಬೆಳದಿಂಗಳಲ್ಲಿ ಸೇರಿದನು ಭಗವದ್ಗೀತೆಯ ಶ್ಲೋಕಗಳನ್ನು ಹೇಳುತ್ತ, ದೇವರೊಡನೆ ಶಕ್ತಿಯನ್ನೂ, ಆಶೀರ್ವಾದವನ್ನೂ ಬೇಡುತ್ತ ಅವನು ನುಂದಿ ನಡೆದನು ನಳನು ದಮಯಂತಿಯನ್ನು ತೊರೆದಂತೆ, ಎದೆಯ ವೇದನೆಯು ಬಹಳವಾಗಿತ್ತು ಆದರೆ ಮಾತೆಯ ಕರೆಯು ಇದಕ್ಕಿಂತ ಬಲವಾಗಿತ್ತು.

* * * * * *

ರುಕ್ಮಿಣಿಗೆ ತನ್ನ ಎದೆಯೊಳಗಿನ ವೇದನೆಯನ್ನೂ, ನುನಸಿನ ನಿರ್ಧಾರವನ್ನೂ ವಿವರಿಸಿ, ತನ್ನ ಆಶೀರ್ವಾದವನ್ನಿತ್ತು, ಅವರ ಸಂರಕ್ಷಣೆಗೆ ದೇವರನ್ನು ಪ್ರಾರ್ಥಿಸಿ ರಾಮುವು ಬರೆದೊಂದು ಕಾಗದವು ನಿಶ್ಕಿತು ಅವಳಿಗೆ ಪತಿಯ ಮೇಲೆ ಯಾನ ಚೇಸರವೂ ಉಂಟಾಗಲಿಲ್ಲ ಬೀಗ್ಗೆಯೂ, ರಾತ್ರಿಯೂ ದೇವರನ್ನು ಪ್ರಾರ್ಥಿಸುತ್ತ, ಅವಳು ಶಾ-ತವಾಗಿದ್ದಳು ಆದರೆ ಕಿಟ್ಟುವು ಮಾತ್ರ ಸುಮ್ಮನಿರಲಾರದು ಅವನು ಇದೀ ದಿನವೂ ಏಳುತ್ತ-ಅಪ್ಪನೆಲ್ಲಿ?' ಎಂದು ಕೇಳುವನು

ಹೀಗೆಯೇ ದಿನಗಳೆದುವು ರಾಮೂವು ಸ್ವಯಂ ಸೇವಕದಳವನ್ನು ಸೇರಿರುವನಾಗಿ ರುಕ್ಮಿಣಿಯು ಕೇಳಿದಳು ರಾಮೂವು ರುಕ್ಮಿಣಿಗೆ ದೇವರ ಮೇಲೆ ವಿಶ್ವಾಸವಿದಬೇಕಾಗಿ ಹೇಳಿದ್ದನು ರುಕ್ಮಿಣಿಯು ಹಾಗೆಯೇ ನಡಕೊಳ್ಳುತ್ತಿದ್ದಳು ಆದರೆ ರಾಮೂವು ಶ್ರೀಮಂತನಾಗಿರಲಿಲ್ಲ ಕಷ್ಟದಿಂದ ಒಂದು ಏವತ್ತು ರೂಪಾಯಿಗಳನ್ನು ಕೂಡಿ ಹಾಕಿದ್ದನು ಅವನ್ನು ಹೋಗುವ ಸಮಯದಲ್ಲಿ ರುಕ್ಮಿಣಿಯ ಖರ್ಚಿಗೆ ಬಿಟ್ಟು ಹೋಗಿದ್ದನು ಆ ರೂಪಾಯಿಗಳೆಲ್ಲವೂ ತೀರಿ ಹೋಗುವಂತಿದ್ದಿತು ಆ ಮೇಲೆ ಈ ನುಗುವಿನೊಡನೆ ಹೇಗೆ ಸಂಸಾರ ನಡೆಸಲಿ? ಕೆಲವು ಕೈ ಕಸಬುಗಳೇನೊ ಅವಳಿಗೆ ಬರುತ್ತಿದ್ದುವು, ಆದರೆ ಆ ಹಳ್ಳಿಯಲ್ಲಿ ಅವುಗಳಿಗೆ ಗಿರಾಕಿಯೆಲ್ಲಿ? ''ವ್ಯಾರ್ಥನೆಯಿಂದ ಎಮ್ಮೋ ಜನರಿಗೆ ದೇವರು ಸಹಾಯವಿತ್ತಿರುವನು '' ಅದೇ ಅವಳ ಆಶೆ

ಮದ್ಯಪಾನ ನಿಷೇಧದ ಪ್ರಚಾರಕಾರ್ಯದಲ್ಲಿ ರಾಮೂವನ್ನು ಇತರ ಸ್ವಯಂ ಸೇವಕರೊಡನೆ ಕೈದು ಮಾಡಿರುವರಾಗಿಯೂ ವರ್ತಮಾನ ಬಂದಿತು

ಕಿಟ್ಟುವು ದಿನ ನಿತ್ಯವೂ 'ಅಪ್ಪನೆಲ್ಲಿ?' ಎಂದು ತಾಯಿಯನ್ನು ನೀಡಿಸುವನು ಒಂದು ದಿನ ರುಕ್ಮಿಣಿಯು ಧೈರ್ಯ ಮಾಡಿ ಇದ್ದುದೆಲ್ಲವನ್ನೂ ಹೇಳಿ ಬಿಟ್ಟಳು ದೇಶದ ಮಹತ್ಕಾರ್ಯ ಸಂಗ್ರಾಮ, ತಾಯಿಯ ಆ ಉಚ್ಚ ಕರೆ, ರಾಮೂವಿನ ಆ ಶ್ರೇಷ್ಠ ಆತ್ಮತ್ಯಾಗ, ಇದೆಲ್ಲವನ್ನೂ ರುಕ್ಮಿಣಿಯು ಮಗುವಿಗೆ ಸಾಧ್ಯವಿದ್ದ ಮಟ್ಟಿಗೆ ವಿವರಿಸಿ ತಿಳಿಸಿದಳು 'ಯಾರಮ್ಮ ಅಪ್ಪನನ್ನು ಕೈದು ಮಾಡಿದ್ದುದು?' ಎಂದು ಕಿಟ್ಟುವು ಕೇಳಿದನು. 'ಹೊಸೂರಿನಲ್ಲಿ ಮೆಜಸ್ಟೇಟನೆಂದೊಬ್ಬನಿದ್ದಾನೆ, ಅವನು' ಎಂದು ತಾಯಿಯು ಹೇಳಿದಳು 'ನನ್ನನ್ನು ಅವನಲ್ಲಿ ಕೊಂಡು ಹೋಗುವಿಯಾ?' ಎಂದು ಮಗುವು ಕೇಳಿತು ತಾಯಿಯ ಕಂಠವು ಬಿಗಿಯಿತು ಆ ಪ್ರೇಮಲ ಮುಖವನ್ನು ಮುತ್ತಿಟ್ಟು ಅವನನ್ನು ಅವಳು ಮಲಗಿಸಿದಳು

ಕಿಟ್ಟುವಿಗೆ ಹೆಚ್ಚು ಹೊತ್ತು ನಿದ್ದೆ ಬೀಳಲಿಲ್ಲ ಎಚ್ಚೆತ್ತು ಆಲೋಚಿಸಿದನು. ಹೊಸೂರಿನ ಮೆಜಸ್ಟೇಟರ ಸೋದರ ಅಳಿಯನು ಬಾವು, ಬಾವುವು ಎಂಟು ವರ್ಷದ ಬಾಲಕನು ಕಿಟ್ಟುವಿನ ಜೊತೆ ಹುಡುಗನು, ಹೊಸೂರು ಶಾಂತಿಪುರದಿಂದ ಎಂಟೇ ಮೈಲು ದೂರ, ಬಾವುವಿನ ಸಂಗಡ ತಾನೇಕ ಹೊಸೂರಿಗೆ ಹೋಗಬಾರದು? ಇತ್ಯಾದಿ ವಿಚಾರಗಳೇ ಆ ಚಿಕ್ಕ ತಲೆಯಲ್ಲಿ ಬಿರುಗಾಳಿಯನ್ನೆಬ್ಬಿಸಿದುವು

ಪ್ರಾತಃಕಾಲವಾಯಿತು ರುಕ್ಮಿಣಿಗೆ ಇದೀಊಟ ವಿಲ್ಲದೆ ನಾಲ್ಕು ದಿನಗಳಾಗಿದ್ದವು ಇದ್ದುದನ್ನು ತಾನೂ ಸರಿಯಾಗಿ ತಿಂದರೆ ಹೆಚ್ಚುಕಾಲ ಉಳಿಯದೆಂದು ಕಿಟ್ಟುವಿಗಾಗಿಯೇ ಊಟವನ್ನು ತಯಾರಿಸುತ್ತಿದ್ದಳು ಬೆಳಿಗ್ಗೆ, ಹತ್ತು ಘಂಟೆಯ ಸಮಯ ಆಟಕ್ಕೆ ಹೋದ ಕಿಟ್ಟುವು ಇನ್ನೂ ಬಂದಿರಲಿಲ್ಲ 'ಕಿಟ್ಟೂ, ಕಿಟ್ಟೂ,' ಎಂದು ತಾಯಿಯು ಕರೆದಳು ಕಿಟ್ಟು ಇಲ್ಲ ತಾಯಿಗೆ ಹೆದರಿಕೆಯಾಯಿತು ಅಲ್ಲಲ್ಲಿ ಓಡಿದಳು ಕಣ್ಣಿಂದ ನೀರು ಹರಿದು ಕೆನ್ನೆಗಳು ತೋಯ್ದವು ಇದೀ ಹಳ್ಳಿಯೇ ಎಚ್ಚರಿಸಿತು ಆದರೆ ಕಿಟ್ಟುವು ಕಾಣೆ

ಸಾಯಂಕಾಲವಾಯಿತು ಇನ್ನೂ ಕಿಟ್ಟುವು ಬಂದಿಲ್ಲ ಜನರು ಆ ಮಾತೆಯ ಹೃದಯವನ್ನು ಸಂತವಿಸಲೆತ್ನಿಸಿದರು ಆದರೆ ತನ್ನ ಮಗುವಿಲ್ಲದಿದ್ದರೆ ಮಾತೆಯ ಎದೆಯು ಸುಮ್ಮುಗಾದೀತೆ? 'ಭಕ್ತ ಹೃದಯವಾಸ'ನೆಂದು ಆ ಶೋಕಸಂತಪ್ತರು ದ್ರೌಪದಿಯಂತೆ ದೇವರೊಡನೆ ಮೊರೆಯಿಟ್ಟರು

* * * * * *

ಎರಡು ದಿನಗಳೂ ಎರಡು ರಾತ್ರಿಗಳೂ ಕಳೆದುವು ಆದರೆ ಮಗುವು ಇನ್ನೂ ಕಾಣೆ ಶುಕ್ರವಾರ ದಿವಸ ತಾಯಿಯು ಎರಡು ದಿನಗಳಿಂದಲೂ ಒ ದಿಷ್ಟು ನೀರನ್ನೂ ಕೂಡ ಕುಡಿದಿಲ್ಲ ದಯಾಳು ನೆರೆಹೊಗಸೊಬ್ಬಳು ಅವಳ ಹತ್ತಿರ ಅವಳ ಉಪಚಾರದಲ್ಲಿದ್ದಳು ಆ ಸಮಯದಲ್ಲಿ ಕೃಶವಾಗಿ ಬಡವಾದ ಒಬ್ಬನು ಮಗುವೊ ದನ್ನು ಕೆಳಗಿಳಿಸಿ ಒಳಗೆ ಬಂದು—''ರುಕ್ಮಿಣಿ '' ಎ ದನು ಅದೇ ಹೊತ್ತಿಗೆ 'ಅಮ್ಮಾ ಎಂಬ ಮಧುರ ಎಾಲಧ್ವನಿಯೊ ದೂ ರ ಕ್ಷಿಣಿಯ ಆ ನಿಶ್ಚೇತನವನ್ನೆಯಲ್ಲಿಯೂ ಅವಳ ಕಿವಿಯನ್ನು ಸೇರಿತು ''ಏಳಮ್ಮಾ, ಅಪ್ಪನನ್ನು ತಂದಿದ್ದೇನೆ'' ಎಂದು ಕಿಟ್ಟುವು ಹೇಳಿದನು ರುಕ್ಮಿಣಿಯು ತನ್ನ ಕಣ್ಣುಗಳನ್ನು ತೆರೆದಳು ಮತ್ತು ಪುನಃ ನಿಶ್ಚೇತನಳಾದಳು, ಆಯಾಸದಿ ದ ಕಿಟ್ಟುವೂ ಅಮ್ಮನನ್ನು ಕರೆಯುತ್ತ ಕರೆಯುತ್ತ ನಿಶ್ಚೇತನನಾಗಿ ಬಿದ್ದ ಬಿಟ್ಟನು

ರುಕ್ಮಿಣಿಯು ಸಾಯಬಿಲ್ಲದೇನೇ ಸಾಯಲಾಗಿದ್ದಾಳೆ ಎಂದು ರಾಮೂವಿಗೆ ತಿಳಿಯಿತು ಅವನ ಆಪರಿಬ್ಬರಿಗೂ ಹಾಲನ್ನುಣ್ಣಿಸಿ ಚೇತರಿಸಿದನು.

* * * * * *

ಇದೀ ಶಾಂತಿಪುರ ಮಾತ್ರವಲ್ಲ, ಹೊಸೂರು ಪಟ್ಟಣವೂ ಈ ಚಿಕ್ಕ ವೀರನ ಕತೆಯಿಂದ ಉತ್ತೇಜಿತವಾಯಿತು ಕಿಟ್ಟುವು ಬಾವುವಿನೊಡನೆ ಮೆಜಸ್ಟೇಟರಲ್ಲಿ ಹೋದುದೂ ''ನೀನೆಯೇ ನನ್ನಪ್ಪನನ್ನು ಇತ್ತಂಗೆ ಕುದಿಯಬೇಡವೆಂದು ದಕ್ಕೆ ಕೈದು ಮಾಡಿದುದು? ಇದು ಸರಿಯೇ? ನೀನೂ ನಮ್ಮ ದೇಶದವನಲ್ಲವೇ? ನಿನಗೂ ನನ್ನಪ್ಪನ ತೆ ಒಂದು ಹೆಂಡತಿ, ಮಗುವಿಲ್ಲವೇ? ನಮ್ಮಿಂದ ನನ್ನಪ್ಪನನ್ನು ನೀನೇಕೆ ಸೆರೆ ಕೊಯ್ಯುತ್ತಿ? ಅವನೇನು ಮಾಡಿದ್ದಾನೆ? ಕುದಿಯ ಬೇಡವೆನ್ನುವುದೂ ಪಾಪವೇ?' ಇತ್ಯಾದಿ ಮಗುವಿನ ಸುಂದರವೂ ವೀರವೂ ಆದ ಮಾತುಗಳೂ ಎಲ್ಲೆಲ್ಲಿಯೂ ಕೇಳ ಬಂದುವು

ಮರುದಿನ ಮೆಜಿಸ್ಟೇಟನೂ ಸಂಪೂರ್ಣ ಬೆದಲಾಗಿ ಹೋಗಿದ್ದನು ಅವನು ಮುಂದೆ ಮೆಜಿಸ್ಟೇಟನಾಗಿರದೆ ಮದ್ಯಪಾನ ನಿಷೇಧದ ಮುಖಂಡನಾದನು ಶಾಂತಿ ಪುರದ ಹಳ್ಳಿಯು ಇದೀ ಒಂದಾಗಿ ಈ ಚಳವಳಿಯನ್ನು ಸೇರಿತು. ಅವರಿಗೆ ಕಿಟ್ಟುವು ಗಾಂಧಿಯಂತೆಯೇ ಒಂದು ಅವತಾರ ಪುರುಷನಾಗಿ, ಅವರ ಮುಖಂಡನಾದನು.

THE MODERN
Official Correspondence,
AN IDEAL BOOK OF REFERENCE
Rs. 3-12-0; POSTAGE EXTRA.
The Modern Commercial House,
Street, Bangalore.

(ಎಂಬ ಪುಟದ ಮುಂದುವರಿಕೆ)

ಕೊಂಕಣಿ-(ಹೊಂ ಪದವು, ಕೊಂ ಬಾರು, ಕೊಂಬಾರ ಬಾಡುಳ, ದೆಸೈ, ಕೊಂ ಕೆಷತಿಲು, ಕೆಷಕಾರಿ, ಕೊಳ್ಳ, ಕೆಷಕ್ಕರ) ಕೊಂ-ತೆಂಕಿರುವ ಕಣ್ಣ-ಕಳ್ಳ.

ತುಳು-(ಮುಮಣ್ಣ, ಕೆಷರಾಣಿ), ದುಡಿ-ಮೊರಡಿ; ಕೆಷ-ಕೇಂಯಲ್ಲ, ಕೆಷಿ.

ತೆಲುಗು-(ಸವಾಲು, ಸವೂರು, ಸವ್ವೂರು ಸವ ಅಥವಾ ಕವ ಎಂದರೆ ಕಣ್ಣಾಗಿರು ಎಂದರ್ಥ)

ತಕ್ಕೇಡಿ-ಕಾವಲ್, ಕಾರ್, ಕವಲ್, ಕವ ಎಂದರೆ ಕಣ್ಣು ಎಂದರ್ಥ. ತಮಿಳ್ ಎಂಬದನ್ನು ತೆಲುಗು ಎಂದು ಪ್ರಮಾಣಿಸಿದ್ದರಿಂದ ತುಳು ತಮಿಳಿನ ಹುಟ್ಟೇ?

ತುಳುವರು ಭೂಮಿಯನ್ನು ಸ್ತ್ರೀಯೆಂದು ಕಲ್ಪಿಸಿ ತಿಂದಿದ್ದರೂ ಇರಬಹುದು. ಉದಾಹರಣೆ- ತಂಪಾಡಿ, ಪೆತ್ತಕಲ್ಲು, ಮುಂಡಕುರ್, ಮೂಗೂರ್, ಕಣ್ಣೂರ್, ಕೈಯೂರ್, ಕಾಲ್ತೋಡು ಇತ್ಯಾದಿ.

ನಮ್ಮ ತುಳುನಾಡಿನಸ್ಥಳಗಳೆಗ ಹೆಸರುಗಳಿಗೂ ಇಲ್ಲಿಯ ಜಾತಿಮನೆತನಗಳ ಹೆಸರುಗಳಿಗೂ ಪರಸ್ಪರ ಸಂಬಂಧ ವಿದೆಯೋ ಇಲ್ಲವೋ ನೋಡಿರಿ! ಕೆಳಗಿನ ಧೃಷ್ಟಾಂತಗಳಲ್ಲಿ ನೋಡಲು ಮೂಲರೂಪ, ಮತ್ತೆ ಸ್ಥಳದ ಹೆಸರು, ಆ ಮೇಲೆ ಜಾತಿಯ ಹೆಸರುಗಳನ್ನು ಕೊಟ್ಟಿದೆ.

ಒಡ್-ಒಡಪು, (ಉಡುಪು)-ಒಡಾರಿ. ಒಕ್-ಒಕ್ಕಾಡಿ, ಒಕ್ಕೂರ್-ಒಕ್ಕಲ್ಲ. ಕೂಡ್-ಕೊಡವೂರ-ಕೊಡವ. ಕೊರ್-ಕೊರ್ಕಿ-ಕೊರವ (ಕೊರಗ). ಗುಡ್-ಗುಡ್ಡೆಕೋಡಿ-ಗೊರ್ಡ. ತೊಮ್-ತೊಮ್ಮಾರು, ಕೊಳ್ತೂರ-ಕೊಮಿನ್ಯಾ. ನಾಡ್-ನಾಡ್ಯರು, ನಾಡ್ಕೇಲ-ನಾಡವ. ಬನ್ (ಬಣ್)-ಬನ್ನಾರು, ಬಣ್ಣಕ್ಕಿ-ಬಣ್ಣ. ಬಯ್-ಬಯ್ಲೂಡಿ-ಬಯ್ಯ. ಬಾಕ್ (ಬಾಗ್)-ಬಾಗಿಲ್ತೀಡಿ, ಸಿಬ್ಬಾಗ್ಲು-ಬಾಕುಡ. ಬೆರ್-ಬಿರ್ಕೆ-ಬಿರ್ಕ. ಬಾಣ್(ಬಾಣ್)-ಬಾಣ್ಕೆಟ್ಟು, ಬಾಣಾವರ, ಬಾಣಾರ್, (ಬ್ರಾಹ್ಮಣರ್). ಮಡ್-ಮಡಿಮುಕ್, ಮಡ್ಮಾರ್-ಮಡ್ಕಲ. ಮುಂಡ್-ಮುಂಡಾಜೆ-ಮುಂಡಾಲ. ಮುಲ್-ಮುಲ್ಕಿ, ಮುಲ್ಕ್-ಮೂಲ್ಕ್ಯ (ಮೂಲಿ) ಮೊಗರ್-ಮೊಗರ್ನಾಡು, ಮೊಗಾರ್-ಮೊಗೇರ.

ಕೆಳಗಿನವುಗಳಲ್ಲಿ ತುಳುವರ ಮನೆತನಗಳ ಬಿರುದು ಗಳ ಮೂಲವು ಕಣ್ಣಿಗೆ ಹೊಡೆಯುತ್ತದೆ.

ಆಡ್-ಆಡೂರು-ಅಡವ, ಆಡ್ಯ-ಆಡ್ಯಾರ್, ಆಡ್ಯನ್ಯ-ಆಡ್ಯನ್ತಾಯೆ (ಆಡ್ಯದವ ಎಂದರ್ಥ). ಆಲ್-ಆಜ್ಜಾಡಿ, ಆಳಾದರ-ಅಜಲ. ಆರ್-ಆರೂರ್,ತಂಜಾರ-ಆರಿಗ. ಉಲ್-ಉಲೂರ್, ಕುಡಾಲ್-ಉಲ್ಯ. ಉಳ್-ಉಳ್ಳ, ಉಳ್ಳಾಲ್-ಕುಳ್ಳತ್ತಾಯೆ, ಉಳ್ಳುರಾಯ. ಉಡ್-ಉಡ್ಡು-ಉಡುನ. ಕಜ್-ಕಜಕಾರ್, ಮಯ್ಯೆಕಜ-ಕಜಯ. ಕಜೆ-ಕಳ್ಳಕಜೆ, ಕಜೆಯೂರು-ಕಜೆಯ. ಕಲ್-ಕಳ್ಳ-ಕಲ್ಲುದಾಯ (ಕಳ್ಳದವನೆಂದರ್ಥ), ಕಲ್ಯರಾಯ. ಕರ್-ಕಕ್ಕ, ಕಳ್ಳಂಗಳ-ಕಕ್ಕ. ಕಮ್-ಕಮ್ಮ, ಕಿನ್ನಿಕಮ್ಮ-ಕಮ್ಮುಳಿ, (ಕಡಮ್ಮುಳಿತ್ತಾಯ, ಕಕ್ಕಿಲ್ಲಾಯ, ಕೇಕುನ್ನಾಯ ಇತ್ಯಾದಿ). ಕಿಲ್-ಕಿಲ್ಲೂರ್, ಉಕ್ಕಿಲ-ಕಿಲ್ಯ. ಕುದುರು-ಕುದುರ್ತಾಡಿ, ಹಟ್ಟ ಕುದುರ್-ಕುದರ. ಕಾರ್-ಕಾರ್ಲ, ಸುದಿಕಾರ-ಕಾರನ್ತ (ಕಾರದವ). ಕೊಣ್-ಕೊಣಜೆ, ಕೊಣಪೂರ್-ಕೊಣ್ಣ. ನನ್ನ-ನನ್ನಾರ್, ನಚ್ಚಿಕ್ಕಿ-ನೊನ್ನ. ನಾ-ನಾವೂರ್,-ನಾನ್ನ. ಪಕ್-ಪಕ್ಕ, ಪಕ್ಕಾಡಿ-ಪಕ್ಕ. ಪುಂಜ-ಪುಂಜಾಲ್, ಉಪ್ಪುನ್ನೆ-ಪುಂಜ. ಪೆರ್-ಪೆರ್ಲ, ಪೆರ್ಗ-ಪೆರ್ಗಡೆ. ಮುಣ್-ಮಣ್ಣಗ್ಗೆ, ಕೆಮ್ಮಣ್ಣೆ-ಮಣಿಯ್ಯ. ಮಯ್-ಅಮಯ್ಮು, ಮಯ್ಯೂರ್-ಮಯ್ಯೆ. ಮಾಡ್-ಪೂಮಾಡೂರ್, ಹೆಮ್ಮಾಡು-ಮಾಡ. ಮೂರ್-ಮಜಕೂರ್, ಎಣ್ಮೂರ್-ಮೂಳಿಬ್ಬ. ಮಾರ್-ಮಾರೂರ್, ಬರ್ಮಾರ್-ಮಾರ್ಲ. ಮುಡ್-ಮುಡ್ಡಜೆ-ಮುಡ್ಡ. ಸೂಡ್-ಮೂಡೂರ್-ಮೂಡಿತ್ತಾಯ. ರೆ-ಕರೆ, ಕಿರೆ, ರಂಡಾಲ-ರೈ. ಸೂಳ್-ಸೂಳೂರ್, ಸೂಳ್ಯ-ಸೂಳಿಯ (ಸೂಲಿಯ). ಸೆಕ್-ಸೆಕ್ಕಕ, ಸೆಳ್ಳ-ಸೇಳ.

ಚಟ್ಟು, ಬಂಗ್ರ ಎಂಬೀ ಪ್ರಸಿದ್ಧವಾದ ಹೆಸರುಗಳು ಈ ಪಟ್ಟಿಯಲ್ಲಿ ಬಾರದಿರುವುದಕ್ಕೆ ಕಾರಣವಿದೆ; ಅವು ತುಳುನಾಡಿನಲ್ಲಿ ಹುಟ್ಟಿದುವುಗಳೂ ಅಲ್ಲ, ಇಲ್ಲಿಯ ಸ್ಥಳ ಗಳವ್ವು ಅಲ್ಲವ್ವುಗಳೂ ಅಲ್ಲ. ಅವ ಅಧಿಕಾರ ಸೂಚಕ ವಾದ ಹೆಸರುಗಳು, ಹೊರಗೆ ಹುಟ್ಟಿ ಇಲ್ಲಿ ಬಂದು ನೆಲಸಿ ದಂಥವುಗಳು. ಅರಸನ ಕಾಂತಾಯಜ ಮಹಾಲಿಗಾನ ಸೀಮೆ ಯಲ್ಲಿ ಚಾಕ್ರಿ ಎಂಬವನೊಬ್ಬ ಅಧಿಕಾರಿಯು ಮೊಗಲಾಯ ರಾಜ್ಯಕ್ಕಿಂತ ಮೊದಲೇ ಇದ್ದನೆಂದು ಗೊತ್ತಾಗಿದೆ. ಅಂತೆ ಚಾಕ್ರಿಯು ವಿಜಯನಗರದ ಕಾಲದಲ್ಲಿ ಇಲ್ಲಿದ್ದನು. ಈ ಚಾಕ್ರಿ (ಚಟ್ಟಿ) ಎಂಬದು ತುಳುವಿನಲ್ಲಿ ಚಟ್ಟು ಎಂದು ಮನುಷ್ಯನು ಜಡಿಸಿಕೊಳ್ಳಲು ಮೊದಲೇ ಇದ್ದ ಪದವಾದ್ದ ತುಳು ದಿಲ್ಲಿ ಬಾದಶಹರುಗಳ ಸೂಚಕವಾಗಿ ಬಹುದಿನಗಳ ತನಕ ಉಪಯೋಗಿಸಿದ ಪದವಾಗಿ ಅವರು ಕೊಟ್ಟ ಬಿರುದು ಗಳಿಗೆ ಚಟ್ಟು ಅಂದರೆ ಬಾದಶಹ ಎಂಬ ಅರ್ಥವು ಬಂದಿತು. ಬಂಗರ ಎಂಬದು ತುಳುವರಲ್ಲಿಯ ಬಂಗ ಎಂಬದರ ಬಹುವಚನ. ಈ ಬಂಗ ಶಬ್ದವು ಬೇಲ, ಬೇಲಾರಿ, ಬೇಕಲ ಮೊದಲಾದುವುಗಳ ಬೀಜವಾದ ಭೇ ಎಂಬದರಿಂದ ಹುಟ್ಟಿತೋ; ಬಯ್ಲು, ಬಯ್ಲುಂಪಾಡಿ, ಇತ್ಯಾದಿಗಳಲ್ಲಿಯ ಬಯ್ಯಿಂದ ಬಗುರುತಿಸಿ ಗೊತ್ತಾಗುವುದಿಲ್ಲ. ಬಂಗವಾಡಿ, ಬಂಗರಮಂಜೇಶ್ವರ ಎಂಬೀ ಹೆಸರುಗಳು ಬಂಗನಿಗೆ ಮೊದಲಿನ ಸ್ಥಾನವನ್ನು ಕೊಡುತ್ತವೆ. ಆದರೆ ಬಂಗರ ಕೂಳೂರಿನಲ್ಲಿದ್ದು ಬಂಗರು ಮಾತ್ರ ಬೆಂಗರೆ (ಬೆಂಗ್ರೆ) ಎಂಬ ನುಡಿಯ ವಿರೂಪ. ಈ ಬೆಂಗರೆ, ಬೆಂಗನಾಡು, ಬೆಂಗಟ್ಟು ಮೊದಲಾದುವುಗಳ ಮೂಲವು ಬೆನ್ ಇಲ್ಲದಿದ್ದರೆ ಬಚ್ಚನೆ ಎಂಬುದಿರಬೇಕು.

ತುಳುವರಲ್ಲಿಯ **ಕಾಜೆ, ಕೊಟ್ಟಾರಿ, ಗುರ್ಕಾರಿ, ಗುತ್ತಿನಾಯಿ,** ಎಂಬೀ ಅಧಿಕಾರಿಗಳ ಮೂಲ ರೂಪ ಗಳನ್ನು ಕ್ರಮವಾಗಿ ಕಾವು, ಕೊಟ್ಟಾರ, ಕುರಿಯ, ಗುತ್ತು, ಎಂಬೀ ಸ್ಥಳಗಳ ಹೆಸರುಗಳಲ್ಲಿ ಕಾಣಬಹುದು.

ತುಳುವರಲ್ಲಿ ಬಹುಕಾಲದ ಹಿಂದೆ ಬಡುಕಬಾಳಿ ಮೆರೆದು ಮಾಯಕವಾದ ಹಿರಿಯರು ರಾಜಭೂತಗಳಲ್ಲಿ ಗೆಣಸಲ್ಪಟ್ಟು ಕೊಯೆಂದು ಕಡಾಡರೆ ಓಯಿಂದು ಓಡಿ ಬರುವುದರಿಂದ ಅವರನ್ನು ಹೆಸರೆತ್ತದೆ ಸ್ಥಳನಾಮೋಕ್ತಿ ದಿಂದ ಕರೆಯಬೇಕಾಗುವಷ್ಟು ಕಾರಣಿಕ ಪುರುಷರಾಗಿ ಹೋಗಿರುತ್ತಾರೆ. ಪಡುಮಲೆಯ ಕೋಟಿಚೆನ್ನಯರೂ ಮೂರ್ನಾಡಿನ ಕಲ್ಕುಡ ಕಲ್ಲುರ್ಟಿಯರೂ ಯಾರೆಂಬುದು ನನಗೆ ಭೂತದ ಸಂಧಿಯಿಂದ ಗೊತ್ತಾಗುತ್ತದೆ. ಆದರೆ **ಮಲೆರಾಯನ** (ಮಲ್ಲೆರಾಯನೆಂದಲ್ಲ, ಮಲೆಯವನು ಎಂದರ್ಥ) ಆದಿ ಸ್ಥಳ ಮಲೆ, ಮುಂಡಿತ್ತಾಯನದು ಮುಂಡ, **ಜಾರ ನ್ತಾಯ**ನದು ಜಾರ, **ಕೊಡಿಕನ್ತಾಯ**ನದು ತೊಡಿಕಾನ; ಇವುಗಳಿಗಿಂತ ನಮ್ಮೆಲ್ಲಿ ಕೊಡಮಣಿ ಹಳ್ಳಿಯೇ **ಕೊಡ ಮಣಿತ್ತಾಯ** ದೈವದ ಆದಿಸ್ಥಾನವಾಗಿದ್ದು ಪ್ರಸಿದ್ಧ ವಾಗಿದೆ.

ಹಳ್ಳಿಯಲ್ಲಿ ಯಾವ ಯಾವ ಮೃಗಾದಿಗಳ ಬಾಳ್ ಯಿತ್ತೆಂದು ಹೇಳುವ ಹೆಸರುಗಳೂ ಉಂಟು. ಏಲಿಯು ರಲ್ಲಿ ಹುಲಿ, ಆನೆಕಲ್ಲಿನಲ್ಲಿ ಆನೆ, ಮಂಜಕಲ್ಲಿನಲ್ಲಿ ಕಾಡು ಹಂದಿ, ಪುಳ್ಳೆ ಮೊಗರಲ್ಲಿ ಕಾಡುಬೆಕ್ಕು, ಪೂಜೆ ಕಾಡಿನಲ್ಲಿ ಹುಳುಗಳು ಇತ್ಯಾದಿ. ಇಗೆಂದು ತಿಳಿದು ನರಿಮೊಗರಲ್ಲಿ ನರಿಗಳ ಕಾಟವಿತ್ತೆಂದು ಹೇಳಿದರೆ ಸರಿಯಾಗದು; ಕನ್ನಡ ದಲ್ಲಿ ನಾಯಿಗೆ ಕುರುಳ್ಳ ಎನ್ನುವುದಾದರೆ, ತುಳುವಿನಲ್ಲಿ ನರಿಗೆ ಕುದುಕ ಎಂದು ಏತಕ್ಕೆ ಹೆಸರಿಂಬುದು ಗೊತ್ತಾಗುವುದಿಲ್ಲ; ಅದರ ಹಾವಳಿ ಏನೋ ಕುದ್ರುಕಬಿತ್ತಿಲಲ್ಲಿ ಇದ್ದಿರಬೇಕು.

ಎಣೆಲ, ಸುಗ್ಗಿ, ಕೊಳಕೆ-ಈ ಮೂತುಗಳು ಹೇಗೆ ಬಂದುವೊ ನನಗೆ ತಿಳಿಯದು. ಒಂದು ಕಳದಲ್ಲಿ ಬಿತ್ತು ವಷ್ಟು ಬೀಜವನ್ನು ಒಂದು ಕಳಸ (೧೪ ಸೇರು), ಅಜಿಯಲ್ಲಿ ಹಿಡಿಯುವುದನ್ನು ಅಜಲೆ (೪೨ ಸೇರು) ಎಂದು ಕರೆದರೆ, ಒಂದು ಕೊಳಗ ಎಂದರೆ ಕುಲ (ಕೊಳ) ತೆಗೆದುಕೊಳ್ಳುವಷ್ಟು ಬತ್ತವೇ? ಇತರ ಭಾಷೆಗಳು ಅವಲ್, ಅನಲಕ್ಕಿ ಎನ್ನುವಾಗ ತುಳುಭಾಷೆಯು ಅದನ್ನು ಬಜಿಲ್ ಎಂದು ಕರೆಯುವುದು ಬಜೆಯಲ್ಲಿ ಬೆಳೆದ ಬತ್ತದಿಂದ ಅದನ್ನು ಮೊತ್ತ ಮೊದಲು ಮಾಡುತ್ತಿದ್ದುದರಿಂದಲೇ?

ನನ್ನ ಜಿಲ್ಲೆಯಲ್ಲಿಯ ಹಳ್ಳಿವಳ್ಳಿಗಳ ಹೆಸರುಗಳನ್ನು ಕುರಿತು ನನ್ನ ಮನಸ್ಸಿಗೆ ಬಂದ ಒಂದೆರೆಡು ವಿಷಯಾಂಶಗಳನ್ನು ನಾನು ಹೇಳಿದ್ದಾಯಿತು. ಈ ಅಂಶಗಳು ಸತ್ಯವೆಂದೂ ಸಸೂತ್ರವೆಂದೂ ನನ್ನ ಹೇಳಿಕೆಯಿಲ್ಲ. ನಾನು ಹೋದ ಸರಣಿ ಯಲ್ಲಿ ಯೇ ನನಗಿಂತ ಸಮರ್ಥರಾದ ವಾಚಕರು ತಮ್ಮ ತಮ್ಮ ಸೀಮೆಯ ಹಳ್ಳಿಗಳ ಹೆಸರುಗಳನ್ನು ವಿಮರ್ಶಿಸುತ್ತ ಹೋದರೆ, ಇಲ್ಲಿ ನನ್ನಿಂದ ತಪ್ಪಾಗಿ ಗ್ರಹಿಸಲ್ಪಟ್ಟ ಇಲ್ಲವೆ ನನಗೆ ಗೊತ್ತಾಗ ದಿದ್ದ ಅನೇಕ ಅಮೂಲ್ಯಾಂಶಗಳನ್ನು ಅವರು ಕಂಡು ಹಿಡಿ ಯುವರೆಂಬ ಭರವಸೆ ನನಗಿದೆ; ಮತ್ತು ನಮ್ಮ ಕನ್ನಡ ವಿದ್ಯಾ ರ್ಥಿಗಳು ಈ ನಾಡಿನ ಸಂಸ್ಕೃತಿಯ ಅಧ್ಯಾಯಗಳಲ್ಲಿ ಇದು ವರೆಗೆ ಓದದೆ ಬಿಟ್ಟುಬಿಡುತ್ತಿದ್ದ ಒಂದು ಮೂಲೆಯ ಅಧ್ಯಾ ಯದ ಅರ್ಥ ವಿಸ್ತರಣೆಯನ್ನು ಅವರು ಸುಲಭವಾಗಿ ಮಾಡು ವರೆಂಬ ನಂಬುಗೆಯೂ ನನಗಿ ಇದೆ; ಈ ಅಧ್ಯಾಯದ ಮೇಲೆ ಸಾಮಾನ್ಯವಾಗಿರುವ ಶ್ರೀ ಗುರುಭ್ಯೋ ನಮಃ ಎಂಬದನ್ನು ವಾಚಿಸಿ, ಸಂಧಿಸೂಚನೆಯನ್ನು ಮಾತ್ರ ಈ ಲೇಖನದಲ್ಲಿ ನಾನು ಓದಿರುತ್ತೇನೆಂದು ತಿಳಿಯುವುದು.

ಅನುಕ್ರಮಣಿಕೆ.

ಲೇಖನಗಳು.	ಲೇಖಕರು.	
ಇಪ್ಪತ್ತೈದು ವರ್ಷಗಳ ವಿಹಂಗಮ ನೋಟ (ಅಗ್ರಲೇಖ)		೧
ರಜತ ಸಂಚಿಕೆ (ಅಗ್ರಲೇಖ)		೧
ವಂದೇ ಭಾರತಮ್ (ಕವಿತೆ)		೧
ಸ್ವದೇಶಾಭಿಮಾನಿಯ ಮೊದಲಿನ ಸಂಚಿಕೆಯ ಮೊದಲಿನ ಪುಸ (ಅಗ್ರಲೇಖ)		೨
ನಮ್ಮ ಇಪ್ಪತ್ತೈದು ವರ್ಷಗಳು		೩
ಇವತ್ತೋದದೇಡಿ, ಸ್ನಾನಿ	ಶ್ರೀ॥ ಮುರುಳಿ ಭೀಮಜಾವ.	೬
ಕಾಡಾನನ ಕಾಲದಲ್ಲಿ-	ಶ್ರೀ॥ ಎಸ್. ರಾಜಗೋಪಾಲ ಕೃಷ್ಣರಾಯರು.	೭
ಶಿಕ್ಷಣದ ಮೇಲಿನ ಅಮೇರಿಕದ ವಿಶ್ವಾಸ	ಶ್ರೀ॥ ಕೆ. ಎಸ್. ಕೆಸಿ, M. A. (ಮೈಸೂರಿನಿಂದ)	೯
ತಾರಾಪತನ (ಕವಿತೆ)	ಶ್ರೀ॥ ಎಮ್. ಗೋವಿಂದ ಪೈ	೧೦
ಕರ್ನಾಟಕ ಏಕೀಕರಣ ಮತ್ತು ಮೈಸೂರು ಮಹಿಷಿಯ ಪರಿಷತ್ತು	ಶ್ರೀ॥ ರಂಗನಾಥ ರಾಮಚಂದ್ರ ದಿವಾಕರ.	೧೧
ರಾಮೋತ್ಸವ (ಸಣ್ಣ ಕತೆ)	ಶ್ರೀ॥ ಆ. ನ. ಕೃಷ್ಣರಾಯರು.	೧೫
ಸಾಮ್ರಾಜ್ಯದ ಸತ್ಕಪರೀಕ್ಷೆ (ಸತ್ಯಾಗ್ರಹ ಚಳವಳದ ಸಿಂಹಾವಲೋಕನ)	ಇತಿಹಾಸಗಾರ.	೧೫
ಸ್ಥಳನಾಮ	ಶ್ರೀ॥ ಪಂಜೆ ಮಂಗೇಶರಾವ್, B. A. L. T.	೧೯
ಪಹರೆ (ಸಣ್ಣ ಕತೆ)	ಶ್ರೀ॥ ಕುಡ್ರಿ ವಾಸುದೇವ ಶೆಣೈ	೨೦
ಜಮೂಲಾಬಾಮು ಕೈಫಿಯತ್ತು	ಶ್ರೀ॥ ಬೆಸಗರ್ ರಾಮನಾವ್, M. A. LL. B.	೨೪
ಶಿಶುಮಾಯಣ ಕವಿಯ ಕಾಲ ವಿಚಾರ	ಶ್ರೀ॥ ಪಿಮ್. ಗೋವಿಂದ ಪೈ	೨೫
ಹಿಂದಿಯ ಚಲಚ್ಚಿತ್ರಗಳಲ್ಲಿರುವ ದೋಷಗಳು	ಶ್ರೀ॥ ಎಚ್. ನರಸಪ್ಪಾ, B. A.	೨೭
ಸಿನೇಮಾ ನೋಟುಗಳು.		೩೯
	ಕೌಶಿಕ.	೩೯
ಶ್ರೀ॥ ರಾಗಿಣಿ ದೇವಿಯೆಂಬರ ಪರಿಚಯ	ಶ್ರೀ॥ ಪೇಜಾವರ ಸದಾಶಿವರಾವ್.	೪೦
ಸೂಜಕಲ್ಲು (ಸಣ್ಣ ಕತೆ)	ಶ್ರೀ॥ ಎಮ್. ಆರ್ಯಾರ್, ಬರ್ಲಿನ್.	೪೧
ಪೈಠಾಣಿಕ ಸೌಂದರ್ಯ	ಶ್ರೀ॥ ಬಿ ಶಿವರಾಮಯ್ಯ	೪೪
ಇಂಡಿಯದ ನಾಗರಿಕತೆಯ ಪ್ರಾಚೀನತೆಯು	ಶ್ರೀ॥ ಎಮ್. ಎನ್. ಕಾಮತ್.	೪೫
ಕೆಪ್ಪೆಟೆ-ರಾಯ	ಅಂಬಿಕಾತನಯದತ್ತ	೪೬
ನಿರಾತೆ (ಕವಿತೆ)	ಶ್ರೀ॥ ಆರ್. ಕೆ. ಪ್ರಭು	೪೮
ನಾಯಾನಾದದ ಪೃಥೋಭೂಮಿಯು ಉತ್ತರ ಧ್ರುವವು	ಶ್ರೀ॥ ಎಮ್. ಗೋಪಕರಾವ್ ಏಗಲ್.	೪೯
ಲಿಂಗಾಯತರ ಗತನೆಲೆಯ	ಶ್ರೀ॥ ಜಿ ರಾಘವೇಂದ್ರ ಶೆಣೈ, M. A.	೫೪
ಬೋಳದ ಮಜಬೂರಿ ಕ್ರಾಂತಿ	ಜಗನ್ನಾಥ	೫೭
ಆಸ್ಪತ್ರೆಯೋ ನಾಸ್ತಿಕನೋ?	ಜಗನ್ನಾಥ	೫೯
ಪ್ರತಿಜ್ಞೆಯ ವಿಷಜ್ಞನೆ	ಶ್ರೀ॥ ಅಳ್ವಾಲ ಮಂಗೇಶರಾವ್.	೫೧
ಪಳ್ಳಿಗಳ ಜೀರ್ಣೋದ್ಧಾರ	ಹಿಂದಿಕಾರಮ್ಮ	೫೫
ಹಿಂದೂ ಮುಸಲ್ಮಾನ ಭೇದಗಳು	ಶ್ರೀ॥ ಕೋ. ಶಿವರಾಮಕಾರಂತರು.	೫೫
ಸ್ವೀ ಜೀವನ ಸೊಗಸುಗಳು		೫೮
ಬಂಧಿಸು ನೀನು		೬೦
ಕೆಡಿಯೂ ಅಳವಾ ಆಳಾ ಇಲ್ಲೆ	ಶ್ರೀ॥ ಹೊಸಮ್ಮು ರಾಮಚಾವ್, M. A. L. T.	೬೧
ಸೊಡಿಯಳಿಸಮ್	ಶ್ರೀ॥ ಆ. ವಿ. ರಾಮಣಾರ್ಯ, B. A.	೬೩
ಸಂಸ್ಕೃತದ ಬಾಲು ಹೊಸ ಗದ್ಯಕಾವ್ಯ	ಶ್ರೀ॥ ಎಸ್. ಎಸ್. ಭೈರ	೬೫
ನಾವು ಯೋಗ್ಯರೇನೆ?	ಹಂಚಿಕೆ ಶಾರದಾಮ್ಮ	೬೫
ಸೊಡಿಯಳ್ ಕುಳುತ್ತಳಲ್ಲಿ ಸ್ವೀ ಸ್ವಾತಂತ್ರ್ಯ	ಶ್ರೀ॥ ಆರ್. ಅಣ್ಣಾಮ್ಮ.	೬೮
ಸ್ವಾತಂತ್ರ್ಯ ಸಾಧನೆಯಲ್ಲಿ ಹಿಂದಿ ಪ್ರಚಾರಸಭೆಯರು	ಸಂಸ್ಕಾರಿಣಿ	೬೯
ಕೆಟ್ಟ ಗಾಂಧಿ	ಶ್ರೀ॥ ಟಿ. ಎಸ್. ಸಾಮ್ರಾ.	೭೨

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ

ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳು 1½2ನ್ನು ತಾಂಬೂಲಾದೊಡನೆ ನಿತ್ಯವೂ ಉಪಯೋಗಿಸುತ್ತಿದ್ದರೆ—ಬಾಯಿ ಸುವಾಸನೆಯಾಗಿರುತ್ತಾ, ಆಹಾರವನ್ನು ಜೀರ್ಣೀಕರಿಸಿ ಅಂಟು ವ್ಯಾಧಿಗಳನ್ನು ಸೇರಲೀಸದೆ- ದೇಹವನ್ನು ಕಾಪಾಡುತ್ತವೆ ಮಕ್ಕಳ ಅಜೀರ್ಣ, ಮಂದ, ಚಳಿಜ್ವರ, ಜ್ವರ, ನೆಗಡಿ, ಕೆಮ್ಮಲು, ಅಜೀರ್ಣದ ಭೇದಿ, ಇನ್ನು ಅನೇಕ ರೋಗಗಳನ್ನು ಗುಣಪಡಿಸುತ್ತವೆ

ದೊಡ್ಡವರ ನೆಗಡಿ, ಕೆಮ್ಮಲು, ಗೂರಲು, ಚಳಿಜ್ವರ, ಜ್ವರ, ಅಜೀರ್ಣ, ಅಗ್ನಿಮಾಂದ್ಯ, ಮಲಬದ್ಧ, ಮೈಭಾರ, ಶೀತವಾತ, ಕಾಲಕಿ, ಇನ್‌ಫ್ಲುಯೆಂಜಾ, ಪ್ಲೇಗು ಮೊದಲಾದವಕ್ಕೆ ಸಿದ್ಧೌಷಧಿ

ಕಸ್ತೂರಿಗೆ ಬದಲಾಗಿ ಸ್ತ್ರೀಯರು ಹೆತ್ತರಿನ—ನೀರಿನ ದಿನ ಸಹ ಉಪಯೋಗಿಸುವುದಕ್ಕೂ, ದೇಹಶ್ರಮಪಡಲವಕಾಶವಿಲ್ಲದ ವ್ಯಾಪಾರಿಗಳಿಗೂ, ಸ್ತ್ರೀಯರಿಗೂ ಸರ್ವೋತ್ತಮ ಪ್ರಯೋಜನಕಾರಿ

300 ಮಾತ್ರೆಗಳ ಸೀಸೆಗೆ 4 ಆಣೆ.

ಟಪ್ಪಾಲು ಮೂಲಕ—1 ಸೀಸೆಗೆ 9ಆಣೆ, 6ಕ್ಕೆ 1-8-0, 12ಕ್ಕೆ 2-13-0, 25ಕ್ಕೆ 5-3-0.

ಗೋರೋಜನ ಮಾತ್ರೆಗಳು.

ಭೇದಿಯಾಗಬೇಕಾದಾಗಲೆಲ್ಲಾ ಮಕ್ಕಳಿಗೂ ದೊಡ್ಡವರಿಗೂ ಉಪಯೋಗವಾದುದು

ಜ್ವರ, ಚಳಿಜ್ವರ, ಸನ್ನಿಪಾತ ಜ್ವರ, ಅಜೀರ್ಣ, ಹೊಟ್ಟೆಯಲ್ಲಿ ಕಿಲುಬುಹುಳು ಹೆಚ್ಚಿದಾಗ ಸಹಾ ಸೀಸೆಯೊಡನಿರುವ ಅನುಪಾನಪತ್ರದಲ್ಲಿ ಹೇಳಿರುವಂತೆ ಉಪಯೋಗಿಸಿದರೆ ಗುಣವಾಗುತ್ತದೆ ವಾಯುಗಳಲ್ಲಿಯೂ ಗುಣಕಾರಿ

ಸೀಸೆ 1ಕ್ಕೆ 6 ಆಣೆ.

ಕೌಟಜ.

ಸ್ತ್ರೀಯರ ಋತುಶೂಲೆ, ರಕ್ತಪ್ರದರ, ಶ್ವೇತಪ್ರದರ ಮೊದಲಾದ ಗರ್ಭಾಶಯ ರೋಗಗಳಿಗೆ ಅಮೃತ

ಸೀಸೆ 1ಕ್ಕೆ 1—8—0.

ಸಾರಸ್ವತಾಸವ.

ಮೆದುಳಿಗೂ, ದೇಹಕ್ಕೂ ಬಲಕಾರಿ.

ಸುರವೆ, ಸೋಮಾವತಿನ, ಕಣ್ಣು ನುಬ್ಬು, ತೂಕಡಿಕೆ, ಮೈಭಾರ, ಅಗ್ನಿಮಾಂದ್ಯ, ಎದೆ ನೋವು, ಹೊಟ್ಟೆನೋವು, ನಿಶ್ಯಕ್ತಿಗಳನ್ನು ಹೋಗಲಾಡಿಸಿ, ರಕ್ತವನ್ನೂ ಜ್ಞಾವಕಶಕ್ತಿಯನ್ನೂ ಚಟುವಟಿಕೆಯನ್ನೂ ಹೆಚ್ಚಿಸುತ್ತದೆ

ಸಂಗೀತಗಾರರಿಗೆ ಗಟ್ಟುಗಾ ರಾಗದಂತೆ ಕಂಠ ಸ್ವರಕ್ಕೆ ಮೈದುನ ಧೃಢತ್ವವು ಉಂಟಾಗುವಂತೆ ಸಹಾ ಮಾಡುತದೆ

ಸ್ತ್ರೀಯರು ಹೆತ್ತ ಬಲಹೀನತೆಗೂ, ಗರ್ಭಕಾಲದ ಅಲಸಿಕೆ ಮೊದಲಾದವಕ್ಕೂ ಸಿದ್ಧೌಷಧಿ

25 ದಿನಗಳ ಔಷಧಿ ಸೀಸೆಗೆ 1 ರೂಪ್ಯಾ.

ಭಾವನಾಜೀರಕ ಲೇಹ.

ಪಿತ್ತಕ್ಕೂ ಪಿತ್ತದ ನಿಕಾರಕ್ಕೂ, ಹುಳಿ ತೇಗು, ಎದೆವುರಿ, ನಿಶ್ಯಕ್ತಿ, ಕುಣ್ಣುಗಳು, ಮಲಮೂತ್ರಗಳು, ಉಗುರುಗಳ ಹಳದೀ ವರ್ಣಕ್ಕೂ ಸರ್ವೋತ್ತಮ ಗುಣಕಾರಿ.

12 ತೊಲಾ ಟಿನ್—8 ಆಣೆ. **24 ತೊಲಾ ಟಿನ್—1 ರೂಪಾಯಿ.**

ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,

ಮೈಸೂರು.

ನವಜೀವಾಮೃತ ಎಂಬ ಸೂತಿಕಾ ರಸಾಯನ.

ಇದು ಬಾಣಂತಿಯರಿಗಾಗಿಯೇ ವೈದ್ಯಶಾಸ್ತ್ರಗಳ ಧೀರ್ಘ ವಿಚಾರದಿಂದ ತಯಾರಿಸಲ್ಪಟ್ಟ ಶ್ರೇಷ್ಠ ರಸಾಯನವಾಗಿದೆ.

ತಲೆಯಿಂದ ಕಾಲುವರೆಗೆ ಬೇಕಾದ ಬಾಣಂತಿಗೆ ಬೇಕಾದ ವಿಶೇಷ ಫಲಗಳು ಬೇಕಾ - ಇತರ ಸಾಮಾನ್ಯ ಫಲ, ವಿಶೇಷ ಫಲ, ಗೃಹ್ಯಸೂಕ್ಷ್ಮವನ್ನು ಅರಿಯೋಣ ಬಿರ್ಯಾರಿಸಿ.

ಬಾಣಂತಿಗೆ ಬೇಕಾದ ಸಾಮಾನ್ಯ ಫಲ.

ಮಗುವು ಮತ್ತು ತಾಯಿ ಗರ್ಭಕೋಶದಿಂದ ಹೊರಗೆ ಬಂದ ಮೇಲೆ ಕವಚವಾತುವನ್ನು ಅದರಲ್ಲಿ ತೀರುವ ಕ್ರಮದಂತೆ ಪಾಲಿಸಿರಿ. ಇದರಿಂದ ಗರ್ಭಕೋಶವು ಸ್ವಸ್ಥಾನದಲ್ಲಿ ನಿಲ್ಲುವುದು. ಮತ್ತು ರಕ್ತವು ಗರ್ಭಕೋಶದಲ್ಲಿ ಜಮೆಯಾಗದೆ ಹೊರಗೆ ಸುರಿದುಹೋಗುವುದು. ಕೊಡವಿಳಿಸಿನ ನೈರಾಗಳು ಶೀಘ್ರವೇ ಒಣಗುವವು. ಗರ್ಭಕೋಶವು ಸುಖಪಡೆಯಾಗಿ ಸ್ವಸ್ಥಾನದಲ್ಲಿ ನಿಲ್ಲುವುದು. ಗರ್ಭಕಾಲದಲ್ಲಿ ತಲೆಯಿಂದ ಕೀಲಿರುವ ಸರ್ವ ಧಾತುಗಳು ಹೊಸದಾಗಿ ಕೂಡುವವು. ಪ್ರಸವವೇದನೆ, ಗರ್ಭಕೋಶದ ಪ್ರಸ್ಥದನೆ, ರಕ್ತಸ್ರಾವ ಮತ್ತು ಸರ್ವ ಧಾತುಗಳ ಶಿಥಿಲಗಳಿಂದ ಉಂಟಾಗುವ ಧಾತು ದೌರ್ಬಲ್ಯ, ಕಾಮದೌರ್ಬಲ್ಯಗಳು ದೂರವಾಗುವವು. ಶೀಘ್ರವೇ ಸಂತಾನಕ್ಕೆ ಸಮರ್ಥಿಯಾಗುವಳು. ಮೊಲೆಯಲ್ಲಿ ಹಾಲು ಉಂಟಾಗುವುದು.



ಬಾಣಂತಿಗೆ ಬೇಕಾದ ವಿಶೇಷ ಫಲ.

ಗರ್ಭಕೋಶ ಮುಕ್ತ ಶಿರಹೊಟ್ಟೆಗೂ ಸಂಬಂಧಿಸಿರುವ ಮೂಳೆ ಪೇರಿಗಳು ಮುಂದಕ್ಕೆ ಶಿಥಿಲವಾಗದೆ ದೃಢಗಳಾಗಿ ಬಲಿತವುಗಳಾಗುವವು. ಶಿರಹೊಟ್ಟೆ ನಾಭಿಯಿಂದ ಕೆಳಗಿನ ಚರ್ಮವು ಜೋಲುಜೋಲಾಗಿ ಭೂದು ಬಣ್ಣದಿಂದ ಅವಿತು ಕೆಚ್ಚಿನ ನೆರಿಗೆಯಿಂದ ಚರ್ಮವು ಮುದುರಿಕೊಂಡಿರದೆ ನೂತನವಾಗಿರುವ ಅಂಗನೆಯರ ಜಘನಗಳ ಸೊಬಗನ್ನು ಸರ್ವದಾ ಕಾಪಾಡುವುದು. ಮುಖಕಾಂತಿಯು ಸುಕುಮಾರ ಸೌಂದರ್ಯದಿಂದ ಮಿಂಚಿಸುವದು.

ಬಾಣಂತಿಗೆ ಬೇಕಾದ ಗೃಹ್ಯಸೂಕ್ಷ್ಮ.

ಸೂಕ್ಷ್ಮವಿಚಾರದಲ್ಲಿ ನವಜೀವಾಮೃತವು ಉತ್ಕೃಷ್ಟವಾಗಿದ್ದರೇ ಎರಡೇ ಬಾಟ್ಲಿಗಳು ಆಂದರೆ ನಾಲ್ಕೇ ರೂಪಾಯಿಗಳಿಂದ ಬಾಣಂತಿಗೆ ತನ್ನ ಬಾಣಂತನವನ್ನು ಸುಧಾರಿಸಿಕೊಳ್ಳಬಹುದು. ಕೊಟ್ಟಾಕಂಗೆ ಬಾಕರದು ತಿಳಿದಿರುವ ಈ ಸಮಯದಲ್ಲಿ ನವ ಜೀವಾಮೃತವು ಬಹಳ ಅನುಕೂಲ

ಒಬ್ಬಳು ಬಾಣಂತಿಗೆ ಕಡಿಮೆ ಪಕ್ಷ 2 ಬಾಟ್ಲಿಗಳು ಬೇಕಾಗುವವು.

TRADE MARK
JEAVATU
REGISTERED

2 ಬಾಟ್ಲಿಗಳಿಗೆ ರೂ. ೩-೦-೦ ಕ್ರಯ

ಅಂಚೆ ಮೊದಲಾದವುಗಳ ಖರ್ಚು ಪ್ರತ್ಯೇಕ.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ಪೋಸ್ಟು ಕೊಡಿಯಾಲಬೈಲು, ದ. ಕ.

Tel. "HANUMANTHAPPA" *Estd.* 1892.

Bankers:—The Bank of Mysore Ltd.

B. N. Hanumanthappa & Sons,

Merchants & Commission Agents,

CHIKMAGALORE.

Dealers In:—

Peaberry Coffee	Seekoy
All kinds of Native flat Coffee	Soap-Nut (Reeta)
Parchment Coffee	Pepper
Cardamom	Honey
	Bee-Wax and

All other kinds of Household requisites.

We are in the line for the last 39 years we are equipped with the best of Merchants requisites and hence we are in position to execute any order entrusted to us. We can also supply to our constituents any articles very carefully packed and sealed either by post or by some other quick conveyance.

We are supplying Estate tools, Chck-rolls and Manures.

For Wholesale & retail rates please write to:-

Messrs.

B. N. Hanumanthappa & Sons,

Merchants & Commission Agents,

CHIKMAGALUR.

(Mysore State.)

ಟೆಲಿಗ್ರಾಂ ವಿಳಾಸ: "ಹನುಮಂತಪ್ಪ" ಸ್ಥಾಪಿತ ವರ್ಷ: 1892.

ಬ್ಯಾಂಕರ್ಸ್:—ದಿ ಬ್ಯಾಂಕ್ ಆಫ್ ಮೈಸೂರು ಲಿಮಿಟೆಡ್.

ಬಿ. ಎನ್. ಹನುಮಂತಪ್ಪ ಎಂಡ್ ಸನ್ಸ್,

ಮರ್ಚೆಂಟ್ಸ್ ಮತ್ತು ಕಮಿಶನ್ ಏಜಂಟ್ಸ್,

ಚಿಕ್ಕಮಗಳೂರು.

ಪೀಬೇರಿ ಕಾಫಿ	ಶೀಗೆಕಾಯಿ
ಎಲ್ಲಾ ತರಹದ ನೇಟಿವ್ ಕಾಫಿ	ಅಂಟ್ವಾಳದ ಕಾಯಿ (ರೀಟ)
ಪಾರ್ಚ್‌ಮೆಂಟ್ ಕಾಫಿ	ಮೆಣಸು
ಯಾಲಕ್ಕಿ	ಜೇನುತುಪ್ಪ
	ಜೇನುಮೇಣ

ವ್ಯಾಪಾರಿಕರಿಗೆ ಬೇಕಾಗುವ ಇತರ ಎಲ್ಲಾ ಸರಕುಗಳು:—

ನಮ್ಮ ಅಂಗಡಿಯು ಈಗ್ಗೆ 89 ವರ್ಷಗಳಿಂದ ಈ ಊರಲ್ಲಿ ಸ್ಥಾಪಿತವಾಗಿದ್ದು, ವರಸ್ಥಳಗಳಿಂದ ಬರತಕ್ಕ ಆರ್ಡರುಗಳು ದೊಡ್ಡದು, ಚಿಕ್ಕದು, ಎಂಬ ಭೇದ ಭಾವನೆಯಿಲ್ಲದೆ ಮೇಲ್ಕಂಡ ಸರಕುಗಳನ್ನು ಜೋಕೆಯಿಂದ ಪರೀಕ್ಷಿಸಿ ಮಾಡಿ ಹೆಚ್ಚು ನಿಗಾಕೊಟ್ಟು ಭದ್ರವಾದ ಪ್ಯಾಕಿಂಗಿನಿಂದ ಪೋಸ್ಟು, ರೈಲ್ವೆ ಅಥವಾ ಗಾಡಿಗಳ ಮೂಲಕ ಅಯಾ ಕಾಲಕ್ಕೆ ಅನುಕೂಲವಿದ್ದಂತೆ ನ್ಯಾಯವಾದ ಕಮಿಶನಿಂದ ರವಾನಿಸುತ್ತಿರುತ್ತೇವೆ. ಸರ್ವರೂ ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ಪ್ಲಾಂಟರುಗಳಿಗೆ ಬೇಕಾಗುವ ಕೆಲಸದ ಸಾಮಾನುಗಳು ಮತ್ತು ಚೆಕ್ ರೋಲ್‌ಗಳು ಮತ್ತು ಗೊಬ್ಬರ ಸಹ ಸಪ್ಲೈ ಮಾಡುತ್ತೇವೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು:—

ಬಿ. ಎನ್. ಹನುಮಂತಪ್ಪ ಎಂಡ್ ಸನ್ಸ್,

ಮರ್ಚೆಂಟ್ಸ್ ಎಂಡ್ ಕಮಿಶನ್ ಏಜಂಟ್ಸ್,

ಚಿಕ್ಕಮಗಳೂರು.

(ಮೈಸೂರು ಸ್ಟೇಟ್.)

1. Good Riding.
2. GrippingTread.
3. Economical wear.
4. Maximum Resistance to shock.

These are a few points in the construction of Tires.

But they are the only points which earn you money & save you money.

THESE ARE

Seiberling's Exclusive Quality.



Tried and Proved.

Use A Seiberling Tube

IN

A Seiberling Tire.

You cannot find a better combination.

The Canara Public Conveyance Company, Ltd.,

KODIALBAIL

ctory,

RE CITY.

ಕಾಸಿಗೆ ತಕ್ಕ ಕಜ್ಜಾಯ

ನಾವು ಸರ್ವಗ್ರಾಹ್ಯವಾದ ಅತ್ಯುತ್ತಮವಾದ ಯಾವ ವಿಧವಾದ ಬೆರಕೆಯೂ ಇಲ್ಲದಿರುವ ಶುದ್ಧವಾದ ಸಾಬೂನುಗಳನ್ನೇ ತಯಾರು ಮಾಡುತ್ತೇವೆ. ಸುಲಭ ಬೆಲೆಯುಳ್ಳ ಸಾಬೂನುಗಳು ಅಂಗಡಿಗಳಲ್ಲಿ ಮಾರಾಟಕ್ಕೆ ಬರುತ್ತವೆ. ಅವುಗಳು ಒಳ್ಳೆ ಸಾಬೂನುಗಳಲ್ಲ. ಅರ್ಥ ಸಾಬೂನುಗಳು ಬಟ್ಟೆಗಳನ್ನು ಧ್ವಂಸ ಮಾಡುತ್ತವೆ ಮತ್ತು ಮೈಗೆ ಹಚ್ಚಿಕೊಂಡರೆ ತುಂಬಾ ಕೆಡುಕು ಮಾಡುತ್ತವೆ. ಸುಲಭ ಖರೀದಿಯೊಂದನ್ನೇ ನೋಡಿದರೆ ಪೂರ್ವದ ಗಾದೆಯಂತೆ "ಕಾಸಿಗೆ ತಕ್ಕ ಕಜ್ಜಾಯ" ಬರುತ್ತೆ. ನಮ್ಮ ದೇಶದಲ್ಲಿರುವ ಎಲ್ಲಾ ಅಂಗಡಿಗಳಲ್ಲೂ ನಮ್ಮ ಸಾಬೂನುಗಳು ದೊರೆಯುತ್ತವೆ.

ಪರಿಮಳಭರಿತಗಳಾದ ಮೈಗೆ ಉಜ್ಜಿಕೊಳ್ಳಬಹುದಾದ ಸಾಬೂನುಗಳು ~~ಸ್ಯಾಂಡಲ್~~ (ಶ್ರೀಗಂಧ), ಜ್ಯಾಸ್ಮಿನ್ (ಜಾಜಿ), ಗುಲಾಬ್ ಮತ್ತು ಲ್ಯಾವೆಂಡರ್ ಎಂಬ ~~ವುಗಳು, "ಮೈಸೂರು ಸೋಪ್"~~ ಎಂಬ ಹೆಸರುಳ್ಳ ಬಟ್ಟೆ ಸಾಬೂನು ಬಹಳ ಗುಣ ~~ಪುಳ್ಳದ್ದು.~~

ಸ್ವದೇಶೀ ಪದಾರ್ಥಗಳನ್ನು ಕೊಂಡರೆ ನಮ್ಮ ಹಣವು ನಮ್ಮ ದೇಶದಲ್ಲೇ ಚಲಾವಣೆಯಲ್ಲಿದ್ದು ನಮ್ಮದೇಶದ ಸಂಪದಭ್ಯುದಯಕ್ಕೇ ಕಾರಣವಾಗುತ್ತೆ. ಪರ ದೇಶದ ಮಾಲನ್ನು ಕೊಂಡರೆ ಹಣವು ನಮ್ಮ ಕೈಬಿಟ್ಟು ಪರದೇಶಕ್ಕೆ ಹೋಗುತ್ತೆ. ಸ್ವದೇಶದ ಮಾಲನ್ನೇ ಎಲ್ಲರೂ ಕೊಳ್ಳಬೇಕು.

SWADESHA BHIMANI

1931

SUPPLIMENTARY ISSUE

(SILVER JUBLEE ISSUE)

MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI